ಮಾನವಿಕ ಕರ್ಣಾಟಕ

ಸಂಪುಟ ೧೬ ಸಂಚಿಕೆ ೨, ೩, ೪

ಮೈಸೂರು
ಮೈಸೂರು ವಿಶ್ವವಿದ್ಯಾನಿಲಯ
೧೯೮೬

ಲೇಖಕರಿಗೆ ಸೂಚನೆಗಳು

೧ ಮಾನವಿಕ ವಿಷಯಗಳಿಗೆ ಸಂಬಂಧಿಸಿದ ಸ್ವತಂತ್ರ ಅಥವಾ ಅನುವಾದಿತ ಲೇಖನಗಳನ್ನು 'ಮಾನವಿಕ ಕರ್ಣಾಟಕ'ದಲ್ಲಿ ಪ್ರಕಟಿಸಲಾಗುವುದು. ಲೇಖನ ಅನುವಾದವಾಗಿದ್ದರೆ ಮೂಲ ಲೇಖಕರ ಮತ್ತು ಲೇಖನದ ಹೆಸರುಗಳನ್ನೂ ಲೇಖನದ ಆಕರವನ್ನೂ ಸೂಚಿಸಬೇಕಲ್ಲದೆ ಮೂಲ ಲೇಖಕರ ಅಥವಾ ಪ್ರಕಾಶಕರ ಸಮ್ಮತಿಯನ್ನೂ ಲೇಖನದೊಂದಿಗೆ ಕಳುಹಿಸಬೇಕು.

೨ ಲೇಖನವನ್ನು ಕಾಗದದ ಒಂದೇ ಬದಿಯಲ್ಲಿ ಸ್ಪಷ್ಟವಾಗಿ ಬರೆದಿರಬೇಕು; ಅಥವಾ ಟೈಪು ಮಾಡಿರಬೇಕು ಲೇಖಕರು ತಮ್ಮ ಲೇಖನದೊಂದಿಗೆ ತಮ್ಮ ಸಂಕ್ಷಿಪ್ತ ಪರಿಚಯವನ್ನು ಕಳುಹಿಸಿಕೊಡಬೇಕು.

೩ ಲೇಖನಕ್ಕೆ ಅವಶ್ಯಕವಾದ ಚಿತ್ರಗಳಿದ್ದರೆ ಅದನ್ನು ಚಿತ್ರಕಾರರಿಂದ ಇಂಡಿಯನ್ ಇಂಕಿನಲ್ಲಿ ಬರೆಸಿ ಕಳುಹಿಸಿಕೊಡಬೇಕು. ಇದು ಸಾಧ್ಯವಾಗದಿದ್ದರೆ ಯಾವುದಾದರೂ ಪ್ರಕಟಿತ ಪುಸ್ತಕದಲ್ಲಿರುವ ಚಿತ್ರಗಳನ್ನು ಸೂಚಿಸಬಹುದು; ಅವುಗಳಲ್ಲಿ ಬದಲಾವಣೆಗಳೇನಾದರೂ ಅವಶ್ಯವಿದ್ದರೆ ಅವನನ್ನೂ ಸೂಚಿಸಬೇಕು.

೪ ಸ್ವೀಕೃತವಾಗದ ಲೇಖನವನ್ನು ಹಿಂದಕ್ಕೆ ಪಡೆಯಬಯಸುವವರು ಈ ಬಗ್ಗೆ ತಿಳಿಸಬೇಕಲ್ಲದೆ ಇದಕ್ಕೆ ಸಾಕಷ್ಟು ಅಂಚೆ ಚೀಟಿ ಕಳುಹಿಸಿಕೊಡಬೇಕು.

೫ ಅಚ್ಚಾದ ಲೇಖನದ ೨೫ ಪ್ರತಿಗಳನ್ನು ಅದರ ಲೇಖಕರಿಗೆ ಒದಗಿಸಲಾಗುವುದು. ಹೆಚ್ಚು ಪ್ರತಿಗಳು ಬೇಕಾಗಿದ್ದರೆ ಮೊದಲೇ ತಿಳಿಸಬೇಕು. ಅದಕ್ಕೆ ತಗಲುವ ವೆಚ್ಚವನ್ನು ಲೇಖಕರೇ ವಹಿಸಿಕೊಳ್ಳಬೇಕು.

೬ ಪತ್ರಿಕೆಯಲ್ಲಿ ಪ್ರಕಟವಾಗುವ ಲೇಖನಗಳಿಗೆ ಸಂಬಂಧಿಸಿದಂತೆ ವಾಚಕರಿಂದ ಬರುವ ವಿಚಾರಪ್ರಚೋದಕವಾದ ಪತ್ರಗಳಿಗೆ ಸ್ವಾಗತವುಂಟು. ಇವುಗಳನ್ನು ಪ್ರಕಟಿಸುವ, ಬಿಡುವ ಅಥವಾ ಸೂಕ್ತ ಬದಲಾವಣೆಯೊಂದಿಗೆ ಪ್ರಕಟಿಸುವ ಸ್ವಾತಂತ್ರ್ಯ ಸಂಪಾದಕರಿಗೆ ಸೇರಿದೆ.

೭ ಮಾನವಿಕ ವಿಷಯಗಳಿಗೆ ಸಂಬಂಧಿಸಿದ ಕನ್ನಡ ಅಥವಾ ಇಂಗ್ಲಿಷ್ ಪುಸ್ತಕಗಳನ್ನು ವಿಮರ್ಶೆಗಾಗಿ ಕಳುಹಿಸಬಯಸುವವರು ಅವುಗಳ ಎರಡೆರಡು ಪ್ರತಿ ಕಳುಹಿಸಿ ಕೊಡಬೇಕು.

೮ ಲೇಖನಗಳನ್ನೂ ವಿಮರ್ಶೆಗಾಗಿ ಪುಸ್ತಕಗಳನ್ನೂ ಕಳುಹಿಸುವವರು ಸಂಪಾದಕರು, ಮಾನವಿಕ ಕರ್ಣಾಟಕ, ಪ್ರಸಾರಾಂಗ, ಮಾನಸಗಂಗೋತ್ರಿ, ಮೈಸೂರು-೫೭೦ ೦೦೬ ಎಂಬ ವಿಳಾಸಕ್ಕೆ ಕಳುಹಿಸಬೇಕು.

ಮಾನ್ಯರೆ,

ಈ ಸಂಚಿಕೆಯೊಂದಿಗೆ ಮಾನವಿಕ ಕರ್ಣಾಟಕದ ೧೬ನೆಯ ಸಂಪುಟ ಮುಗಿಯುತ್ತದೆ. ೧೭ನೆಯ ಸಂಪುಟಕ್ಕೆ ತಮ್ಮ ಚಂದಾಹಣವನ್ನು ದಯವಿಟ್ಟು ತಕ್ಷಣವೇ ಕಳುಹಿಸಿಕೊಡಿರಿ. ಹಾಗೆ ಕಳುಹಿಸುವಾಗ ಈ ಹಾಳೆಯ ಮಗ್ಗುಲಿಗಿರುವ ಹಾಳೆಯಲ್ಲಿ ವಿವರಗಳನ್ನು ತುಂಬಿ ಕಳುಹಿಸಿಕೊಡಿರಿ.

ಇಂತೀ ನಮಸ್ಕಾರಗಳು
ಕೆ. ಟಿ. ವೀರಪ್ಪ
ನಿರ್ದೇಶಕರು

ಮಾನ್ಯರೆ,

ದಯವಿಟ್ಟು ನನ್ನನ್ನು/ಈ ಸಂಸ್ಥೆಯನ್ನು **ಮಾನವಿಕ ಕರ್ಣಾಟಕದ** ೧೭ನೆಯ ಸಂಪುಟಕ್ಕೆ ಚಂದಾದಾರನನ್ನಾಗಿ ದಾಖಲು ಮಾಡಿಕೊಳ್ಳಬೇಕೆಂದು ಪ್ರಾರ್ಥಿಸುತ್ತೇನೆ. ವಾರ್ಷಿಕ ಚಂದಾಹಣ ಐದು/ಹತ್ತು/ಹದಿನೈದು ರೂಪಾಯಿಗಳನ್ನು ಮನಿಯಾರ್ಡರ್/ಚೆಕ್/ಡ್ರಾಫ್ಟ್ ಮೂಲಕ ಇಂದು ಕಳುಹಿಸಿದ್ದೇನೆ. ವಿವರಗಳನ್ನು ಕೆಳಗೆ ನಮೂದಿಸಿದ್ದೇನೆ.

ಇಂತೀ

(ರುಜು)

1. ಹೆಸರು —

   [ಸ್ಪಷ್ಟವಾಗಿ ತಿಳಿಯುವಂತೆ ಬರೆಯಿರಿ]

2. ವಿಳಾಸ —

   [ವಿದ್ಯಾರ್ಥಿಯಾಗಿದ್ದರೆ ಶಾಲೆ ಅಥವಾ ಕಾಲೇಜಿನ ಹಾಗೂ ಮನೆಯ ವಿಳಾಸಗಳೆರಡನ್ನೂ ನಮೂದಿಸಿರಿ]

3. ಶಿಫಾರಸು —

   [ವಿದ್ಯಾರ್ಥಿಗಳು ತಮ್ಮ ಶಾಲಾ ಕಾಲೇಜುಗಳ ಮುಖ್ಯಸ್ಥರಿಂದ ತಾವು ಅಲ್ಲಿ ವ್ಯಾಸಂಗ ಮಾಡುತ್ತಿರುವ ಬಗೆಗೆ ಇಲ್ಲಿ ಶಿಫಾರಸು ಬರೆಸಬೇಕು.]

4. ಪತ್ರಿಕೆಯನ್ನು ರಿಜಿಸ್ಟ್ರೇಷನ್ ಮೂಲಕ ಕಳುಹಿಸಬೇಕೆ ? —

5. ಕಳೆದ ವರ್ಷ ನನ್ನ ಚಂದಾಸಂಖ್ಯೆ —

[ತಿರುಗಿಸಿ

‘ಮಾನವಿಕ ಕರ್ನಾಟಕ’ದಲ್ಲಿ ಆಸಕ್ತಿ ತೋರಿಸಬಹುದಾದ ನನ್ನ ಕೆಲವು ಮಿತ್ರರ ವಿಳಾಸಗಳು :

1.

2.

3.

4.

5.

ಮಾನವಿಕ ಕರ್ನಾಟಕದ ಚಂದಾವಿವರ

ಆಜೀವ ಸದಸ್ಯತ್ವ		: ರೂ.	100–00
ಪ್ರತಿ ಸಂಪುಟಕ್ಕೆ	ವಿದ್ಯಾರ್ಥಿಗಳಿಗೆ	: ರೂ.	5–00
	ಇತರರಿಗೆ	: ರೂ.	10–00
	ಸಂಸ್ಥೆಗಳಿಗೆ	: ರೂ.	15–00

ವಿಳಾಸ :

ನಿರ್ದೇಶಕರು
ಪ್ರಸಾರಾಂಗ
ಮೈಸೂರು–570 006

ಮಾನವಿಕ ಕರ್ಣಾಟಕ

ಸಂಪುಟ ೧೬ ; ಸಂಚಿಕೆ ೨, ೩, ೪

೬೨-೬೩-೬೪

ಫೆಬ್ರುವರಿ-ಮೇ-ಆಗಸ್ಟ್ ಸಂಚಿಕೆ

ಮೈಸೂರು

ಮೈಸೂರು ವಿಶ್ವವಿದ್ಯಾನಿಲಯ

೧೯೮೬

MANAVIKA KARNATAKA, Kannada Quarterly of the *University of Mysore*, Volume 16, Numbers 2, 3 and 4, February, May and August 1986, Edited by Dr. B. K. Gururaja Rao.

ಪ್ರಧಾನ ಸಂಪಾದಕರು

ಡಾ|| ಎಚ್. ತಿಪ್ಪೇರುದ್ರಸ್ವಾಮಿ

ಸಂಪಾದಕರು

ಡಾ|| ಬಿ. ಕೆ. ಗುರುರಾಜ ರಾವ್

೧೬. ೧೨. ೮೭

ಪ್ರಕಾಶಕರು

ಕೆ. ಟಿ. ವೀರಪ್ಪ

ನಿರ್ದೇಶಕರು, ಪ್ರಸಾರಾಂಗ, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು–೬

ಮುದ್ರಕರು

ನಿರ್ದೇಶಕರು, ಮೈಸೂರು ವಿಶ್ವವಿದ್ಯಾನಿಲಯ ಮುದ್ರಣಾಲಯ

ಮೈಸೂರು–೫೭೦ ೦೦೬

ವಿಷಯ ಸೂಚಿಕೆ

ಈ ಸಂಚಿಕೆಯ ಲೇಖಕರು

೧ ಎ. ಎಂ. ಅಣ್ಣಿಗೇರಿ	ನಿವೃತ್ತ ಸಹಾಯಕ ಸಂಶೋಧಕರು, ಪ್ರಾಚ್ಯ ವಸ್ತು ಇಲಾಖೆ, ಕರ್ನಾಟಕ ಸರ್ಕಾರ, ಹೊಸ ಪತ್ರಾವಳಿ ಚಾಳ, ಧಾರವಾಡ-೫೮೦೦೦೭.
೨ ಬಿ. ಕೃಷ್ಣ	ತತ್ವಶಾಸ್ತ್ರ ಅಧ್ಯಾಪಕರು, ಮಹಾರಾಜ ಕಾಲೇಜು, ಮೈಸೂರು-೫
೩ ಕೆ. ಮ. ವಿಶಾಲಾಕ್ಷಿ	ಸಂಶೋಧನಾ ವಿದ್ಯಾರ್ಥಿ, ದಕ್ಷಿಣ ಭಾಷಾ ಅಧ್ಯಯನ, ಕನ್ನಡ ಅಧ್ಯಯನ ಸಂಸ್ಥೆ, ಮಾನಸಗಂಗೋತ್ರಿ, ಮೈಸೂರು-೬
೪ ಎನ್. ಸರಸ್ವತಿ	ಸಂಶೋಧನಾ ವಿದ್ಯಾರ್ಥಿ ಇತಿಹಾಸ ವಿಭಾಗ ಮಾನಸಗಂಗೋತ್ರಿ, ಮೈಸೂರು-೬
೫ ಎಂ. ಪ್ರಭಾಕರ ಜೋಶಿ	ಅಧ್ಯಾಪಕ, ಬೆಸೆಂಟ್ ಜ್ಯೂನಿಯರ್ ಕಾಲೇಜು ಮಂಗಳೂರು-೩
೬ ಟಿ. ಬಿ. ಬಸವರಾಜು	ಸಂಶೋಧನಾ ವಿದ್ಯಾರ್ಥಿ, ತತ್ವಶಾಸ್ತ್ರ ವಿಭಾಗ ಮಾನಸಗಂಗೋತ್ರಿ, ಮೈಸೂರು-೬
೭ ಕೆ. ಕೆಂಪೇಗೌಡ	ಪ್ರವಾಚಕರು, ಭಾಷಾಶಾಸ್ತ್ರ ವಿಭಾಗ, ಕನ್ನಡ ಅಧ್ಯಯನ ಸಂಸ್ಥೆ, ಮೈಸೂರು-೬
೮ ಕೆ. ಬಿ. ಶಿವತಾರಕ	ಇತಿಹಾಸ ಅಧ್ಯಾಪಕ, ಪದವಿ ಕಾಲೇಜು, ಬ್ರಹ್ಮಾವರ, ದಕ್ಷಿಣ ಕನ್ನಡಜಿಲ್ಲೆ
೯ ಬಿ. ಎನ್. ಸುಜಾತ	ಪ್ರವಾಚಕರು, ಶಿಕ್ಷಣಶಾಸ್ತ್ರ ವಿಭಾಗ, ಮಾನಸ ಗಂಗೋತ್ರಿ, ಮೈಸೂರು-೬
೧೦ ಆರ್. ಇಂದಿರಾ	ಪ್ರವಾಚಕರು, ಸಮಾಜಶಾಸ್ತ್ರ ವಿಭಾಗ, ಮಾನಸಗಂಗೋತ್ರಿ, ಮೈಸೂರು-೬
೧೧ ನಗುವನಹಳ್ಳಿ ಪಿ. ರತ್ನ	ಸಂಶೋಧನ ಸಹಾಯಕಿ, ಹಸ್ತಪ್ರತಿ ವಿಭಾಗ, ಕನ್ನಡ ಅಧ್ಯಯನ ಸಂಸ್ಥೆ, ಮೈಸೂರು-೬
೧೨ ಎಂ. ಪಿ. ಮಹಾದೇವಯ್ಯ	ಸಂಶೋಧನಾ ಸಹಾಯಕ, ಪ್ರಾಚೀನ ಇತಿಹಾಸ ಮತ್ತು ಪುರಾತತ್ವ ವಿಭಾಗ, ಮಾನಸಗಂಗೋತ್ರಿ, ಮೈಸೂರು-೬
೧೩ ಆರ್. ರಾಮಕೃಷ್ಣ	ಸಹಾಯಕ ಸಂಪಾದಕ, ಕನ್ನಡ ವಿಶ್ವಕೋಶ ಕನ್ನಡ ಅಧ್ಯಯನ ಸಂಸ್ಥೆ, ಮಾನಸಗಂಗೋತ್ರಿ ಮೈಸೂರು-೬

೧೪ ಜಿ. ವರದರಾಜರಾವ್	ನಿವೃತ್ತ ಕನ್ನಡ ಪ್ರಾಧ್ಯಾಪಕರು 'ಸುದರ್ಶನ', ೧೨ನೆಯ ಅಡ್ಡರಸ್ತೆ, ಎರಡನೆಯ ಮುಖ್ಯರಸ್ತೆ ಜಯನಗರ, ಮೈಸೂರು–೧೪
೧೫ ಬಿ. ಆರ್. ತುಬಾಕಿ	ಉಪಾಧ್ಯಾಯ, ಸರ್ಕಾರಿ ಕಿರಿಯ ಪ್ರಾಥಮಿಕ ಶಾಲೆ, ಹಂಪಸದುರ್ಗ, ಗಂಗಾವತಿ ತಾಲ್ಲೂಕು, ರಾಯಚೂರು ಜಿಲ್ಲೆ
೧೬ ಸೀತಾರಾಮ ಜಾಗೀರ್‌ದಾರ್	ಸಹಾಯಕ ಶಾಸನಶಾಸ್ತ್ರಜ್ಞ, ಎಪಿಗ್ರಾಫಿಯ ಕರ್ನಾಟಕ, ಕನ್ನಡ ಅಧ್ಯಯನ ಸಂಸ್ಥೆ, ಮಾನಸಗಂಗೋತ್ರಿ, ಮೈಸೂರು–೬
೧೭ ಕೆ. ಕೇಶವಮೂರ್ತಿ	ಬಿ–೩/೧೧೯, ಎ. ರಾಮಣ್ಣ ಬೀದಿ, ಶ್ರೀರಂಗ ಪಟ್ಟಣ
೧೮ ಪಿ. ಆರ್. ತಿಪ್ಪೇಸ್ವಾಮಿ	ಕಲಾವಿದರು, ೧೭೩, ರಮಾವಿಲಾಸ ರಸ್ತೆ ಮೈಸೂರು–೨೪
೧೯ ಶಿವಸ್ವಾಮಿ	ಸಂಶೋಧನ ವಿದ್ಯಾರ್ಥಿ, ಪ್ರಾಚೀನ ಇತಿಹಾಸ ಮತ್ತು ಪುರಾತತ್ವ ವಿಭಾಗ, ಮಾನಸ ಗಂಗೋತ್ರಿ, ಮೈಸೂರು–೬
೨೦ ಬಾ. ರಾ. ಗೋಪಾಲ	ಪ್ರಾಧ್ಯಾಪಕರು, ಇತಿಹಾಸ ವಿಭಾಗ, ಶ್ರೀಕೃಷ್ಣ ದೇವರಾಯ ವಿಶ್ವವಿದ್ಯಾಲಯ ಅನಂತಪುರ, ಆಂಧ್ರಪ್ರದೇಶ
೨೧ ಸಿ. ಎಂ. ಮುನಿರಾಮಪ್ಪ	ಪ್ರಾಧ್ಯಾಪಕರು, ವಾಣಿಜ್ಯವಿಭಾಗ, ಮಾನಸ ಗಂಗೋತ್ರಿ, ಮೈಸೂರು–೬
೨೨ ಬಿ. ಎಚ್. ಸುರೇಶ್	ಅಧ್ಯಾಪಕ, ವಾಣಿಜ್ಯವಿಭಾಗ, ಮಾನಸ ಗಂಗೋತ್ರಿ, ಮೈಸೂರು–೬
೨೩ ಪುರುಷೋತ್ತಮ ಬಿಳಿಮಲೆ	ಕನ್ನಡ ಅಧ್ಯಾಪಕ, ಮಂಗಳೂರು ವಿಶ್ವ ವಿದ್ಯಾಲಯ, ಮಂಗಳೂರು-೫೭೪೫೩೯
೨೪ ಎಚ್. ಎಂ. ನಾಗರಾಜರಾವ್	ಸಹಾಯಕ ಶಾಸನಶಾಸ್ತ್ರಜ್ಞ, ಎಪಿಗ್ರಾಫಿಯ ಕರ್ನಾಟಕ, ಕನ್ನಡ ಅಧ್ಯಯನ ಸಂಸ್ಥೆ, ಮಾನಸಗಂಗೋತ್ರಿ, ಮೈಸೂರು–೬
೨೫ ಯಮುನಾಬಾಯಿ ಆರ್. ರಾವ್	'ಶ್ರೀ' ೪೧೯, ೧೨ನೇ ಮುಖ್ಯರಸ್ತೆ, ಸರಸ್ವತಿ ಪುರಂ, ಮೈಸೂರು–೯

ಎ. ಎಂ. ಅಣ್ಣಿಗೇರಿ

ಮ. ಮ. ಡಾ|| ವ್ಹಿ. ವ್ಹಿ. ಮಿರಾಶಿ

ಡಾ|| ಮಿರಾಶಿಯವರ ಹೆಸರು ಪೌರ್ವಾತ್ಯ ಅಭ್ಯಾಸದಲ್ಲಿ ಉನ್ನತ ಸ್ಥಾನದಲ್ಲಿ ನಿಲ್ಲಲು ವಿಶೇಷ ಅರ್ಹವಾಗಿದೆ. ಅವರು ಅಮಿತೋತ್ಸಾಹದಿಂದ ಸಂಶೋಧನ ಕೆಲಸಮಾಡಿದ್ದಾರೆ ಮತ್ತು ನಿಜವಾದ ಸಂಶೋಧನೆಗಳನ್ನು ಮಾಡಬಲ್ಲ ವಿದ್ವಾಂಸರನ್ನು ತಮ್ಮ ಸುತ್ತಲೂ ತಯಾರುಮಾಡಿದ್ದಾರೆ. ಡಾ|| ಮಿರಾಶಿಯವರ ವಿದ್ಯಾರ್ಥಿಗಳೆಂದು ಹೇಳಿಕೊಳ್ಳುವುದೇ ಆ ವಿದ್ಯಾರ್ಥಿಗಳಿಗೆ ಹೆಮ್ಮೆಯ ಮಾತಾಗಿದೆ.

ಡಾ|| ವಾಸುದೇವ ವಿಷ್ಣು ಮಿರಾಶಿ ಅವರು ರತ್ನಗಿರಿ ಜಿಲ್ಲೆಯ ಕುವಲೆ ಎಂಬ ಗ್ರಾಮದಲ್ಲಿ, ಒಂದು ಬ್ರಾಹ್ಮಣ ಮನೆತನದಲ್ಲಿ, ೧೮೯೩ನೆಯ ಮಾರ್ಚ ೧೩ರಂದು ಹುಟ್ಟಿದರು. ಅವರು ಮಹಾಮೇಧಾವಿ ಆಗಿದ್ದರು. ಅವರ ಪ್ರಾಥಮಿಕ ಮತ್ತು ಪ್ರೌಢ ವಿದ್ಯಾಭ್ಯಾಸವು ಕೊಲ್ಹಾಪುರದಲ್ಲಿ, ಮುಖ್ಯವಾಗಿ ರಾಜಾರಾಮ್ ಪ್ರೌಢ ಶಾಲೆಯಲ್ಲಿ ಆಯಿತು. ಅವರು ಎಲ್ಲ ಪರೀಕ್ಷೆಗಳಲ್ಲಿಯೂ ಮೊದಲನೇ ಸ್ಥಾನ ಪಡೆಯುತ್ತಿದ್ದರು. ಆ ಕಾರಣದಿಂದ ಅವರಿಗೆ ಕೊಲ್ಹಾಪುರ ಸಂಸ್ಥಾನದ ಶಿಷ್ಯವೇತನ ದೊರಕಿತ್ತು. ೧೯೧೧ರಲ್ಲಿ ರಾಜಾರಾಮ ಪ್ರೌಢಶಾಲೆಯಿಂದ ಅವರು ಮ್ಯಾಟ್ರಿಕ್ ಪರೀಕ್ಷೆಯಲ್ಲಿ ಹೆಚ್ಚು ಗುಣಗಳನ್ನು ಪಡೆದು ಪಾಸಾದರು. ಅವರು ಮುಂಬೈ ವಿಶ್ವವಿದ್ಯಾಲಯಕ್ಕೆ ಎಂಟನೆಯ ರ್‍ಯಾಂಕ್ ಬಂದದ್ದರಿಂದ ಅವರಿಗೆ ಅಲ್ಫ್ರೆಡ್ ಅರ್ಧ ಶಿಷ್ಯವೇತನ ಮತ್ತು ಇತರ ಶಿಷ್ಯವೇತನಗಳು ದೊರೆತವು. ಇಂಟರ್ ಪರೀಕ್ಷೆಯಲ್ಲಿ ಅವರು ಸಂಸ್ಕೃತ ವಿಷಯದಲ್ಲಿ ಎಲ್ಲರಿಗಿಂತಲೂ ಹೆಚ್ಚಿನ ಗುಣಗಳನ್ನು ಸಂಪಾದಿಸಿದ್ದರಿಂದ ಅವರಿಗೆ ವರ್ಜೀವನದಾಸ ಮಾಧವದಾಸ ಸಂಸ್ಕೃತ ಶಿಷ್ಯವೇತನವು ಲಭಿಸಿತು. ಅನಂತರ ಅವರು ಶ್ರೀಮಂತರು ಮತ್ತು ಮೇಧಾವಿ ವಿದ್ಯಾರ್ಥಿಗಳು ಕಲಿಯುತ್ತಿದ್ದ ಡೆಕ್ಕನ್ ಕಾಲೇಜು ಸೇರಿದರು. ತರುಣ ಮತ್ತು ಬುದ್ಧಿವಂತರಾದ ಮಿರಾಶಿಯವರು ಅಲ್ಲಿ ರಾ| ಬ| ಕೆ. ಎನ್. ದೀಕ್ಷಿತ ಮತ್ತು ಡಾ|| ಆರ್.ಡಿ. ರಾನಡೆಯವರಂತೆ ಗಣಿತ ತೆಗೆದುಕೊಂಡು ಹೆಚ್ಚಿನ ಗುಣಗಳನ್ನು ಪಡೆಯಬೇಕೆಂದು ಇಚ್ಛಿಸಿದರು, ಆದರೆ ಶಿಷ್ಯವೇತನ ಮತ್ತು ನಿಯಮಗಳ ಪ್ರಕಾರ ಅವರು ಸಂಸ್ಕೃತ ತಗೆದುಕೊಳ್ಳಲೇ ಬೇಕಾಯಿತು. ಆ ನಿಮಿತ್ತ ಅವರು ಸಂಸ್ಕೃತ ತೆಗೆದುಕೊಂಡರು. ಅವರು ಹಾಗೆ

ಮಾಡಿದ್ದರಿಂದ ಭಾರತೀಯ ಅಭ್ಯಾಸಕ್ಕೆ ಒಂದು ರೀತಿಯಿಂದ ಲಾಭವೇ ಆಯಿತು. ೧೯೧೪ರಲ್ಲಿ ಬಿ.ಎ. (ಆನರ್ಸ್) ಪರೀಕ್ಷೆಯಲ್ಲಿ ಅವರು ಪ್ರಥಮ ವರ್ಗದಲ್ಲಿ ತೇರ್ಗಡೆ ಹೊಂದಿದರು. ದಕ್ಷಿಣಾ ಫೆಲೊ ಆಗಿ ೧೯೧೭ರಲ್ಲಿ ಭಾಷೆಗಳನ್ನು ಅಭ್ಯಾಸಮಾಡಿ ಎಂ.ಎ. ಪರೀಕ್ಷೆಯಲ್ಲಿ ಮೊದಲಿಗರಾಗಿ ಪಾಸಾದದ್ದರಿಂದ ಅವರಿಗೆ ಭಗವಾನ್ದಾಸ ಪುರುಷೋತ್ತಮದಾಸ ಸಂಸ್ಕೃತ ಶಿಷ್ಯವೇತನ, ಝಾಲಾ ವೇದಾಂತ ಪಾರಿತೋಷಕ ಮತ್ತು ಲಾರೆನ್ಸ ಜೆಂಕಿನ್ಸ ಶಿಷ್ಯವೇತನ ಸಿಕ್ಕವು. ಕೊನೆಯ ಶಿಷ್ಯವೇತನದ ಪ್ರಕಾರ ಅವರು ಕಾಯಿದೆ ಓದಲೇ ಬೇಕಾಗಿತ್ತು.

ಪ್ರೊ|| ಎಚ್. ಡಿ. ವೆಲಂಕರ, ಎಸ್. ಜಿ. ದಾಮಲೆ, ಆರ್. ಡಿ. ಕರ್ಮಾರಕರ, ವಿ. ಬಿ. ಗಜೇಂದ್ರಗಡಕರ ಮೊದಲಾದ ಜಾಣ ವಿದ್ಯಾರ್ಥಿಗಳು ಅವರ ಜೊತೆಗೆ ಅಭ್ಯಾಸಮಾಡುತ್ತಿದ್ದರು. ಈ ವಿದ್ವಾಂಸರು ತಮ್ಮ ತಮ್ಮ ಕ್ಷೇತ್ರಗಳಲ್ಲಿ ಹೆಸರು ಗಳಿಸಿದ್ದಾರೆ.

ಎಂ.ಎ. ಆದ ಮೇಲೆ ಮಿರಾಶಿಯವರು ಮುಂಬೈಯ ಎಲ್ಫಿನ್‌ಸ್ಟನ್ ಕಾಲೇಜ್‌ನಲ್ಲಿ ಸಂಸ್ಕೃತದ ಸಹಾಯಕ ಪ್ರೊಫೆಸರ್ ಆದರು. ಅದೇ ವೇಳೆಗೆ ಅವರು ಕಾಯಿದೆ ಅಭ್ಯಾಸ ಮಾಡುತ್ತ ೧೯೧೯ರಲ್ಲಿ ಎಲ್.ಎಲ್.ಬಿ. ಪಾಸಾದರು. ಅದೇ ವರ್ಷ ಅವರು ನಾಗಪುರದ ಮೊರಿಸ್ ಕಾಲೇಜಿನಲ್ಲಿ ಸಂಸ್ಕೃತ ಲಕ್ಚರರ ಆಗಿ ೧೯೪೩ರಲ್ಲಿ ಆ ಕಾಲೇಜಿನ ಪ್ರಿನ್ಸಿಪಾಲ ಆದರು. ಅವರು ೧೯೪೭ ರವರೆಗೆ ಆ ಸ್ಥಾನದಲ್ಲಿದ್ದು ಮುಂದೆ ಅಮರಾವತಿಯಲ್ಲಿ ಕಾಲೇಜಿನ ಪ್ರಿನ್ಸಿಪಾಲರಾದರು. ಸರಕಾರಿ ನವಕರಿಯಿಂದ ಅವರು ೧೯೫೦ರಲ್ಲಿ ನಿವೃತ್ತರಾದರು.

ನಾಗಪುರ ವಿಶ್ವವಿದ್ಯಾಲಯದೊಡನೆ ಪ್ರೊ|| ಮಿರಾಶಿ ಅವರ ಸಂಬಂಧ ೧೯೨೩ರಿಂದ ಇತ್ತು. ಅನೇಕ ವರ್ಷಗಳವರೆಗೆ ಅವರು ಅಲ್ಲಿ ಸಂಸ್ಕೃತ, ಪಾಲಿ ಮತ್ತು ಪ್ರಾಕೃತ ವಿಭಾಗದ ಮುಖ್ಯಸ್ಥರಾಗಿದ್ದರು. ಅಲ್ಲಿಯ ಭಾರತೀಯ ಅಭ್ಯಾಸಕ್ಕೆ ಸಂಬಂಧಿಸಿದ ವಾಚನಾಲಯವನ್ನು ಅವರು ಕಟ್ಟಿ ಬೆಳಸಿದರು. ೧೯೫೭ರಲ್ಲಿ ನಾಗಪುರ ವಿಶ್ವವಿದ್ಯಾಲಯದಲ್ಲಿ ಪ್ರಾಚೀನ ಭಾರತದ ಇತಿಹಾಸ ಮತ್ತು ಸಂಸ್ಕೃತಿ ವಿಭಾಗವು ಪ್ರಾರಂಭವಾಯಿತು. ಅಂದಿನಿಂದಲೂ ಮಿರಾಶಿಯವರು ಆ ವಿಭಾಗದ ನಿಕಟ ಸಂಪರ್ಕವನ್ನು ಇಟ್ಟುಕೊಂಡಿದ್ದರು. ಅವರು ೧೯೫೮ರಲ್ಲಿ ಸಂಸ್ಕೃತಿಗೆ ಸಂಬಂಧಿಸಿದ ಕೆಲವು ವಿಷಯಗಳನ್ನು ಸ್ನಾತಕೋತ್ತರ ವಿದ್ಯಾರ್ಥಿಗಳಿಗೆ ಕಲಿಸುತ್ತಿದ್ದರು.

ಮೊದಲಿನಿಂದಲೂ ಡಾ|| ಮಿರಾಶಿಯವರಿಗೆ ವಿಧಾಯಕ ಸಂಶೋಧನೆಗಳನ್ನು ಮಾಡುವ ಲವಲವಿಕೆಯಿತ್ತು. ಅವರು ೧೯೧೮ರಷ್ಟು ಹಿಂದೆಯೆ ಎಲ್ಫಿನ್‌ಸ್ಟನ್ ಕಾಲೇಜಿನಲ್ಲಿ ಕೆಲಸಮಾಡುತ್ತಿದ್ದಾಗ ಸದಾನಂದಯತಿ ವಿರಚಿತ 'ಅದ್ವೈತ ಬ್ರಹ್ಮಸಿದ್ಧಿ' ಎಂಬ ಗ್ರಂಥವನ್ನು ಇಂಗ್ಲೀಷಿನಲ್ಲಿ ಭಾಷಾಂತರಿಸಿದ್ದರು. ಆ ಕೆಲಸಕ್ಕೆ ಅವರಿಗೆ ಝಾಲಾ ವೇದಾಂತ ಪಾರಿತೋಷಕವು ಎರಡನೆಯ ಸಲ ದೊರಕಿತು.

೧೯೩೦ರಲ್ಲಿ 'ಧರ್ಮಸೂತ್ರಗಳು ಮತ್ತು ಛಂದಸ್ಸಿನಲ್ಲಿದ್ದ ಸ್ಮೃತಿಗಳು ಮತ್ತು ಅವುಗಳಲ್ಲಿ ಕಂಡು ಬಂದಂತೆ ಹಿಂದೂ ಕಾಯಿದೆಗಳು' ಎಂಬ ಪ್ರಬಂಧ ಬರೆದದ್ದಕ್ಕೆ ಅವರಿಗೆ ವಿಶ್ವನಾಥ ಮಾಂಡಲಿಕ ಬಂಗಾರದ ಪದಕ ಮತ್ತು ಇನಾಮು ಸಿಕ್ಕವು. ಕಾಳಿದಾಸನ ಮೇಲೆ ೧೯೩೪ರಲ್ಲಿ ಅವರು ಒಂದು ಗ್ರಂಥ ಪ್ರಕಟಿಸಿದರು. ಕಾಳಿದಾಸನ ಬಗೆಗೆ ಅನೇಕ ಗ್ರಂಥಗಳಿದ್ದರೂ ಅವರ ಗ್ರಂಥವು ವಿಶಿಷ್ಟ ಕೊಡುಗೆಗಳಿಂದ ಕೂಡಿತ್ತು. ಅದು ಮೂಲತಃ ಮರಾಠಿ ಭಾಷೆಯಲ್ಲಿದ್ದರೂ ಅದರ ಭಾಷಾಂತರಗಳು ಹಿಂದಿ ಮತ್ತು ಓರಿಯಾ ಭಾಷೆಗಳಲ್ಲಿ ಆದವು. ಅದು ಇಂಗ್ಲೀಷಿನಲ್ಲಿಯೂ ಭಾಷಾಂತರವಾಗಿರಬಹುದು. ಇದರಿಂದ ಡಾ॥ ಮಿರಾಶಿಯವರ ಮುಖ್ಯ ಒಲವು ಸಂಸ್ಕೃತದ ಕಡೆಗಿತ್ತೆಂದು ಸಿದ್ಧವಾಗುವುದು. ಹಾಗೆ ಇರುವುದು ಸ್ವಾಭಾವಿಕವೇ ಆಗಿತ್ತು.

ಆದರೂ ಇದಕ್ಕಿಂತ ಹೆಚ್ಚಿನ ಶ್ರೇಯಸ್ಸು ಶಾಸನಶಾಸ್ತ್ರ, ನಾಣ್ಯಶಾಸ್ತ್ರ ಮತ್ತು ಐತಿಹಾಸಿಕ ಅಭ್ಯಾಸಗಳಿಂದ ಅವರಿಗೆ ಲಭ್ಯವಾಗಿದೆ. ಡಾ. ಹಿರಾಲಾಲ ಮತ್ತು ರಾ|ಬ| ಕೆ. ಎನ್. ದೀಕ್ಷಿತ್ ಅವರು ಈ ಸಂಸ್ಕೃತ ವಿದ್ವಾಂಸರಿಂದ ಶಾಸನಶಾಸ್ತ್ರಕ್ಕೆ ಬಹಳ ಪ್ರಯೋಜನವಾಗುವುದೆಂದು ಕಂಡು ಹಿಡಿದಿದ್ದರು. ರಾ|ಬ| ದೀಕ್ಷಿತರು ಆಗ ಭಾರತ ಪ್ರಾಚ್ಯವಸ್ತು ಅನ್ವೇಷಣ ಇಲಾಖೆಯ ಉಪನಿರ್ದೇಶಕರಾಗಿದ್ದರು. ಅವರ ತರ್ಕವು ಸರಿಯಾಗಿಯೆ ಇತ್ತು. ಮಿರಾಶಿಯವರು ೧೯೩೭ರಲ್ಲಿ 'ಬೆರಾರದ ಎರಡು ಶಾಸನಗಳು' ಎಂಬ ಲೇಖನವನ್ನು ಮೊಟ್ಟಮೊದಲಿಗೆ ಎಪಿಗ್ರ್ಯಾಫಿಯಾ ಇಂಡಿಕಾದ ೨೧ನೆಯ ಸಂಪುಟದಲ್ಲಿ ಪ್ರಕಟಿಸಿದರು. ಮುಂದೆ ಅವರ ಹಲವು ಲೇಖನಗಳು ಆ ನಿಯತ ಕಾಲಿಕದಲ್ಲಿ ಬಂದವು. ಅವರು ನಿಷ್ಣಾತ ಶಾಸನ ತಜ್ಞರಿದ್ದದ್ದನ್ನು ಮನಗಂಡು ಭಾರತ ಪ್ರಾಚ್ಯವಸ್ತು ಅನ್ವೇಷಣ ಇಲಾಖೆಯು ೧೯೩೯ರಲ್ಲಿ ಕಲಚುರಿ-ಚೇದಿ ಕಾಲದ ಶಾಸನಗಳನ್ನು ಕಾರ್ಪಸ್ ಇನ್ಸ್ಕ್ರಿಪ್ಷನಮ್ ಇಂಡಿಕೇರಮ್‌ದ ಮಾಲಿಕೆಯಲ್ಲಿ ಸಂಪಾದಿಸಲು ಅವರನ್ನು ಕೇಳಿಕೊಂಡಿತು. ಮಿರಾಶಿಯವರು ಆ ಗ್ರಂಥವನ್ನು ೧೯೪೩ರಲ್ಲಿ ಸಿದ್ಧಪಡಿಸಿದ್ದರೂ ಅದು ಆ ಮಾಲಿಕೆಯ ನಾಲ್ಕನೆಯ ಸಂಪುಟವಾಗಿ ೧೯೫೫ರಲ್ಲಿ ಪ್ರಕಟವಾಯಿತು. ಆ ಮಾಲಿಕೆಯಲ್ಲಿ ಭಾರತೀಯನಿಂದ ಬರೆಯಲ್ಪಟ್ಟ ಮೊದಲನೆಯ ಗ್ರಂಥವು ಅದಾಗಿತ್ತು. ಮೊದಲನೆಯ ಮೂರು ಸಂಪುಟಗಳನ್ನು ಪರದೇಶದ ಶಾಸನತಜ್ಞರು ಸಿದ್ಧಮಾಡಿದ್ದರು. ಮಿರಾಶಿಯವರಿಗೆ 'ವಾಕಾಟಕರ ಶಾಸನಗಳು' ಎಂಬ ಸಂಪುಟವನ್ನು ಸಿದ್ಧಪಡಿಸಲು ೧೯೫೫ರಲ್ಲಿ ಕೇಳಿಕೊಳ್ಳಲಾಯಿತು. ಅದು ಆ ಮಾಲಿಕೆಯಲ್ಲಿ ೫ನೆಯ ಸಂಪುಟವಾಗಿ ಹೊರಬಿದ್ದಿದೆ. ಈ ಎರಡೂ ಸಂಪುಟಗಳಿಗೆ ಮಿರಾಶಿಯವರು ಬರೆದ ಮುನ್ನುಡಿಗಳು ಸದ್ಯಕ್ಕಂತೂ ಆ ವಿಷಯಗಳಿಗೆ ಸಂಬಂಧಿಸಿದ ಕೊನೆಯ ಮಾತೆಂದು ಹೇಳಬಹುದು. ಈ ಎರಡೂ ಸಂಪುಟಗಳು ಹಿಂದಿನ ಸಂಪಾದಕರ ಬುದ್ಧಿಮತ್ತೆ ಮತ್ತು ಉಚ್ಚಮಟ್ಟದ ಸಂಶೋಧನೆಗಳನ್ನು ಮುಂದುವರಿಸಿಕೊಂಡು ಬಂದಿವೆ ಮತ್ತು ಮುಂದಿನ ಸಂಶೋಧಕರಿಗೆ ಮಾರ್ಗದರ್ಶಕವಾಗಿವೆ.

ಮಿರಾಶಿಯವರು ನಾಣ್ಯಗಳನ್ನು ಕುರಿತು ತಯಾರಿಸಿದ ಮೊದಲನೆಯ ಲೇಖನವು ಭಾರತೀಯ ನಾಣ್ಯಶಾಸ್ತ್ರ ಸಂಸ್ಥೆಯ ಪ್ರಥಮ ಸಂಪುಟದಲ್ಲಿ ಪ್ರಕಟವಾಯಿತು. ಅನಂತರ ಅವರು ಸುಮಾರು ೪೦ ಲೇಖನಗಳನ್ನು ಆ ನಿಯತಕಾಲಿಕದಲ್ಲಿ ಪ್ರಕಟಿಸಿರುವರು. ಅವರು ತರ್ಹಾಲಾದಲ್ಲಿಯ ಭೂಗತ ಸಾತವಾಹನ ನಾಣ್ಯಗಳ ಸಂಗ್ರಹವನ್ನು ಅಭ್ಯಸಿಸಿ ಪುರಾಣಗಳಲ್ಲಿ ಉಕ್ತವಾದ ಆಂಧ್ರರಾಜರ ಪಟ್ಟಿಗೆ ಮೂರು ಹೊಸ ರಾಜರ ಹೆಸರುಗಳನ್ನು ಸೇರಿಸಿದ್ದಾರೆ. ಆದರಿಂದ ಸಾತವಾಹನರ ಇತಿಹಾಸಕ್ಕೆ ಸಂಬಂಧಿಸಿದ ಕೆಲವು ಪ್ರಶ್ನೆಗಳನ್ನು ಬಿಡಿಸಲು ಸಾಧ್ಯವಾಗಿದೆ. ಹಿಂದಿನ ಹೈದರಾಬಾದ ಸಂಸ್ಥಾನಕ್ಕೆ ಸೇರಿದ ಮಹಿಷಮಂಡಲದಲ್ಲಿ ಆಳುತ್ತಿದ್ದ ಒಂದು ಅಪ್ರಕಾಶಿತ ಶಕಮನೆತನವನ್ನು ಅವರು ಕಂಡುಹಿಡಿದಿರುವರು. ಕಲಚುರಿ ನಾಣ್ಯಗಳ ಬಗೆಗೆ ಮಾಡಿದ ಸಂಶೋಧನಗಳಿಗೆ ನೆಲ್ಸನ್ ರಾಯಿಟ್ ಪಾರಿತೋಷಕವು ಅವರಿಗೆ ೧೯೪೨ರಲ್ಲಿ ದೊರಕಿದೆ.

ಪ್ರೊ॥ ಮಿರಾಶಿಯವರು ಮಾಡಿದ ಸಂಶೋಧನೆಗಳು ವ್ಯಾಪಕವಾದ ಕ್ಷೇತ್ರವನ್ನು ಆವರಿಸಿವೆ. ಸಂಸ್ಕೃತ, ಪ್ರಾಕೃತ, ಶಾಸನಶಾಸ್ತ್ರ, ನಾಣ್ಯಶಾಸ್ತ್ರ ಮತ್ತು ಇತರ ವಿಷಯಗಳ ಮೇಲೆ ಅವರು ೨೦೦ಕ್ಕೂ ಮೇಲ್ಪಟ್ಟು ಲೇಖಗಳನ್ನು ಇಂಗ್ಲೀಷಿನಲ್ಲಿ ಬರೆದಿರುವರು. ಅವರು ಮರಾಠಿ ಮತ್ತು ಹಿಂದೀ ಭಾಷೆಗಳಲ್ಲಿಯೂ ಲೇಖಗಳನ್ನು ತಯಾರಿಸಿ ಆಯಾ ಭಾಷೆಗಳನ್ನು ಓದಬಲ್ಲವರಿಗೆ ಜ್ಞಾನವಿತರಣೆ ಮಾಡಿದ್ದಾರೆ. ಅವರು ರಚಿಸಿದ ವಾಕಾಟಕರು ಮತ್ತು ಕಲಚುರಿಗಳ ಇತಿಹಾಸ ಗ್ರಂಥಗಳು ಮರಾಠಿ ಮತ್ತು ಹಿಂದಿಯಲ್ಲಿ ಪ್ರಕಟವಾಗಿವೆ.

ಮಿರಾಶಿಯವರು ಅನೇಕ ವಿದ್ಯಾಸಂಸ್ಥೆ ಮತ್ತು ವ್ಯಕ್ತಿಗಳ ಸಂಗಡ ಸಂಪರ್ಕವನ್ನಿಟ್ಟುಕೊಂಡಿದ್ದರು. ಅಖಿಲಭಾರತ ಪ್ರಾಚ್ಯವಿದ್ಯಾ ಪರಿಷತ್ತು (Oriental Conference), ಭಾರತೀಯ ಇತಿಹಾಸ ಸಭೆ, ಭಾರತೀಯ ನಾಣ್ಯಶಾಸ್ತ್ರ ಮಂಡಲ ಇವುಗಳ ಅಧಿವೇಶನಗಳಿಗೆ ಹೋಗಿ ತಮ್ಮ ಹೊಸ ಸಂಶೋಧನೆಗಳನ್ನು ಅವರು ಮಂಡಿಸುತ್ತಿದ್ದರು. ಪುಣೆಯ ಭಾಂಡಾರಕರ ಓರಿಯಂಟಲ್ ರಿಸರ್ಚ್ ಇನ್ಸ್ಟಿಟ್ಯೂಟ್ ಮತ್ತು ನಾಗಪುರದ ವಿದರ್ಭ ಸಂಶೋಧನ ಮಂಡಲ ಇವುಗಳೊಡನೆಯೂ ಅವರ ಸಂಬಂಧವಿತ್ತು. ಅವರ ನಿಸ್ವಾರ್ಥ ಸೇವೆಯಿಂದ ವಿದರ್ಭ ಸಂಶೋಧನ ಮಂಡಲವು ಭಾರತದ ಸಂಶೋಧನ ಕ್ಷೇತ್ರದಲ್ಲಿ ಗಣ್ಯ ಸ್ಥಾನವನ್ನು ಪಡೆಯಿತು.

ಮಿರಾಶಿಯವರ ಸಂಸ್ಕೃತ ಪಾಂಡಿತ್ಯವನ್ನು ಕಂಡು ಭಾರತ ಸರಕಾರವು ಅವರಿಗೆ ಮಹಾಮಹೋಪಾಧ್ಯಾಯ ಎಂಬ ಬಿರುದನ್ನು ಕೊಟ್ಟಿತು. ಮೇಲೆ ಉಲ್ಲೇಖಿಸಿದಂತೆ ತನ್ನ ನಿಯತಕಾಲಿಕದ ಮೂರನೆಯ ಸಂಪುಟದಲ್ಲಿ ಕಲಚುರ್ಯರ ನಾಣ್ಯಗಳು ಎಂಬ ಲೇಖ ಬರೆದದ್ದಕ್ಕೆ ಭಾರತೀಯ ನಾಣ್ಯಶಾಸ್ತ್ರ ಮಂಡಲವು ಮಿರಾಶಿಯವರಿಗೆ ನೆಲ್ಸನ್ ರಾಯಿಟ್ ಪ್ರಶಸ್ತಿ ಪದಕವನ್ನು ದಯಪಾಲಿಸಿತು. ಅವರು ೧೯೫೧ರಲ್ಲಿ ಭಾರತೀಯ ನಾಣ್ಯಶಾಸ್ತ್ರ ಸಮ್ಮೇಲನದ ಅಧ್ಯಕ್ಷರು, ೧೯೫೬ರಲ್ಲಿ ಭುವನೇಶ್ವರದಲ್ಲಿ ಜರುಗಿದ ಅಖಿಲಭಾರತ ಪ್ರಾಚ್ಯವಿದ್ಯಾ ಅಧಿವೇಶನದ ಅಧ್ಯಕ್ಷರು ಮತ್ತು ೧೯೬೧ರಲ್ಲಿ ದಿಲ್ಲಿಯಲ್ಲಿ

ಕೂಡಿದ ಭಾರತೀಯ ಇತಿಹಾಸ ಸಮ್ಮೇಲನದ ಅಧ್ಯಕ್ಷರೂ ಆಗಿದ್ದರು. ಮಿರಾಶಿಯವರು ಭಾರತೀಯ ಪ್ರಾಚೀನ ಇತಿಹಾಸ, ಅದರಲ್ಲಿಯೂ ಮುಖ್ಯವಾಗಿ ಕಲಚುರಿಗಳ ಇತಿಹಾಸದಲ್ಲಿ ಮಾಡಿದ ಸಂಶೋಧನೆಗಳಿಗೆ ಭಾರತದ ಪ್ರಥಮ ಅಧ್ಯಕ್ಷರ ಹಸ್ತದಿಂದ ೧೯೫೬ರಲ್ಲಿ ಮಧ್ಯಪ್ರದೇಶ ಶಾಸನ ಸಾಹಿತ್ಯ ಪರಿಷತ್ತು ಅವರಿಗೆ ಒಂದು ತಾಮ್ರಪಟವನ್ನು ಅರ್ಪಿಸಿತು. ಅದೇ ಪ್ರಕಾರ ಭಾರತೀಯ ನಾಣ್ಯಶಾಸ್ತ್ರ ಮಂಡಲವು ಅಧ್ಯಕ್ಷ ಡಾ|| ಎಸ್. ರಾಧಾಕೃಷ್ಣರ ಕೈಯಿಂದ ಅವರಿಗೆ ೧೯೬೧ರಲ್ಲಿ ಬನಾರಸದ ಅಧಿವೇಶನದಲ್ಲಿ ಒಂದು ತಾಮ್ರಪತ್ರವನ್ನು ಕೊಡಿಸಿತು. ಸಾಗರ ಮತ್ತು ನಾಗಪುರ ವಿಶ್ವವಿದ್ಯಾಲಯಗಳು ಅವರಿಗೆ ಡಾಕ್ಟರ ಆಫ್ ಲೆಟರ್ಸ್ ಎಂಬ ಗೌರವ ಪದವಿಯನ್ನು ಕೊಟ್ಟು ಗೌರವಿಸಿವೆ. ಅದೇ ರೀತಿಯಿಂದ ಮುಂಬೈ ವಿಶ್ವವಿದ್ಯಾಲಯವು ಅವರು ಕಲಚುರಿ-ಚೇದಿ ಕಾಲದ ಶಾಸನಗಳ ಸಂಪುಟವನ್ನು ಸಿದ್ಧಪಡಿಸಿದ್ದಕ್ಕೆ ಅಂಥದೇ ಪದವಿಯನ್ನು ನೀಡಿತು. ವೃದ್ಧಾಪ್ಯದಲ್ಲಿ ಅವರ ದೇಹ ಕುಸಿದಿದ್ದರೂ ಅವರು ಉತ್ಸಾಹದಲ್ಲಿ ಮಾತ್ರ ತರುಣರಿಗಿಂತ ತರುಣರಾಗಿದ್ದರು.

ಮಿರಾಶಿಯವರು ‘ಸಂಶೋಧನ ಮುಕ್ತಾವಲಿ’ ಎಂಬ ನಾಲ್ಕು ಸಂಪುಟಗಳನ್ನು ಮರಾಠಿಯಲ್ಲಿ ಮತ್ತು ‘ಸ್ಟಡೀಸ್ ಇನ್ ಇಂಡೊಲಾಜಿ’ ಎಂಬ ಮೂರು ಸಂಪುಟಗಳನ್ನು ಇಂಗ್ಲೀಷಿನಲ್ಲಿ ಪ್ರಕಟಿಸಿದ್ದರು. ಅವರು ಒಂದು ಸಂಸ್ಥೆಯೇ ಆಗಿದ್ದರೆಂದು ಹೇಳಬಹುದು. ತಮ್ಮ ಸಂಶೋಧನಾ ಕಾರ್ಯದಲ್ಲಿ ಅವರು ರಾಮಟೇಕ, ನಾಗಾರ್ಧನ್, ದೇವಟೇಕ, ಪ್ರಾಯೊನಿ ಮೊದಲಾದ ಸ್ಥಳಗಳಿಗೆ ಸ್ವತಃ ಹೋಗಿದ್ದರು. ಕಲಚುರಿ ಮತ್ತು ಗಂಗರ ಕಾಲಗಳನ್ನು ನಿರ್ಣಯಿಸುವ ಶ್ರೇಯಸ್ಸು ಅವರಿಗೆ ಸಲ್ಲುತ್ತವೆ. ಡಾ|| ಕೀಥ, ಎಲ್. ಡಿ. ಬಾರ್ನೆಟ್, ರ್‍ಯಾಂಡಲ್, ವಿಂಟರ್ನಿಝು, ಬರ್ನ್ ಮುಂತಾದ ವಿದ್ವಾಂಸರು ಮಿರಾಶಿಯವರ ಸಂಶೋಧನಗಳನ್ನು ಪ್ರಶಂಸಿಸಿದ್ದಾರೆ. ಅವರು ಸಿಲಾಹಾರರ ಶಾಸನಗಳು ಎಂಬ ಗ್ರಂಥವನ್ನೂ ಕಾರ್ಪಸ್ ಇನ್ಸ್ಕ್ರಿಪ್ಷನಮ್ ಇಂಡಿಕೇರಮ್ ಮಾಲೆಯಲ್ಲಿ ೧೯೭೭ರಲ್ಲಿ ಪ್ರಕಟಿಸಿದ್ದಾರೆ. ಮಿರಾಶಿಯಂಥ ಒಬ್ಬ ವಿದ್ವಾಂಸರೇ ಈ ಮಾಲಿಕೆಯಲ್ಲಿ ಮೂರು ಸಂಪುಟಗಳನ್ನು ಸಿದ್ಧಪಡಿಸಿರುವುದು ಅವರ ಪಾಂಡಿತ್ಯ ಮತ್ತು ಉಚ್ಚ ಸಂಶೋಧನ ಪ್ರವೃತ್ತಿಯ ದ್ಯೋತಕವಾಗಿದೆ.

ಡಾ. ಮಿರಾಶಿಯವರು ಸುಮಾರು ಮೂರು ವರ್ಷದ ಹಿಂದೆ ನಿಧನರಾದರು.

ಆಧಾರ: ಡಾ. ಮಿರಾಶಿ ಫೆಲಿಸಿಟೇಶನ್ ವ್ಹಾಲ್ಯೂಮ್ (೧೯೬೫)

ಸಂಸ್ಕೃತಿ ಎಂಬ ಮಾತು ಬಹು ಇತ್ತೀಚಿನದು; ಬಹುಶಃ ಇಂಗ್ಲೀಷಿನ 'Culture' ಎಂಬ ಪದಕ್ಕೆ ಸಮಾನಾರ್ಥವಾಗಿ ಹುಟ್ಟಿಕೊಂಡಿದೆ. ಸಂಸ್ಕೃತಿ ಎಂಬುದು 'Culture' ಎಂಬ ಅರ್ಥದಲ್ಲಿ ಹೆಚ್ಚಾಗಿ ಪ್ರಯೋಗವಾಗುತ್ತಿರುವುದು ಸುಮಾರು ನೂರು ವರ್ಷಗಳಿಂದೀಚೆಗೆ (ಡಿ. ವಿ. ಗುಂಡಪ್ಪ: ಸಂಸ್ಕೃತಿ, ಪು. ೫). Culture ಎಂಬ ಪದವು ಇಂಗ್ಲೀಷಿನಲ್ಲಿ ಎಷ್ಟರಮಟ್ಟಿಗೆ ಬಳಕೆಯನ್ನು ಪಡೆದಿದೆಯೆಂದರೆ ಅದನ್ನು ತಪ್ಪಾಗಿ ಭಿನ್ನಾರ್ಥಗಳಲ್ಲಿ ಬಳಸಲಾಗುತ್ತಿದೆ. (T. S. Eliot :Notes Towards the Definition of Culture, p. 13). ಕನ್ನಡದಲ್ಲೂ ಅಷ್ಟೇ. ಭಾಷಣಗಳಲ್ಲೂ, ಗ್ರಂಥಗಳಲ್ಲೂ ಈ ಪದವನ್ನು ಅದರ ಅರ್ಥವ್ಯಾಪ್ತಿಯ ಅರಿವಿಲ್ಲದೆ ಬಳಸಲಾಗುತ್ತಿದೆ. ಸಂಸ್ಕೃತಿಯೆಂದರೆ ಏನು ಎಂಬುದನ್ನು ಕುರಿತು ವಿದ್ವಾಂಸರ ಹಲವಾರು ಅಭಿಪ್ರಾಯಗಳನ್ನು ಪರಿಶೀಲಿಸಿದಾಗ ಅದರ ನಿಜವಾದ ಅರ್ಥವ್ಯಾಪ್ತಿ ಶ್ರುತಪಡುತ್ತದೆ: (ಅ) ಒಂದು ಪ್ರದೇಶದಲ್ಲಿ ವಾಸಿಸುತ್ತಿರುವ ಒಂದು ಜನಾಂಗದ ಜೀವನ ವಿಧಾನವೇ ಸಂಸ್ಕೃತಿ. ಈ ಸಂಸ್ಕೃತಿಯು ಅವರ ಕಲೆಗಳಲ್ಲಿ, ಸಾಮಾಜಿಕ ವ್ಯವಸ್ಥೆಯಲ್ಲಿ, ಅವರ ಆಚಾರ–ವ್ಯವಹಾರಗಳಲ್ಲಿ, ಧರ್ಮದಲ್ಲಿ ವ್ಯಕ್ತವಾಗುತ್ತದೆ. (ಇ) ಹುಟ್ಟಿನಿಂದ ಬಾರದೆ ಮನುಷ್ಯ ತನ್ನ ಪರಿಸರದಿಂದ ಕಲಿತುಕೊಳ್ಳುವ ಭಾಷೆ, ಉಪಕರಣಗಳ ತಯಾರಿಕೆ, ಕಲೆ, ವಿಜ್ಞಾನ, ಕಾನೂನು, ಆಡಳಿತ, ನೀತಿ ಮತ್ತು ಧರ್ಮ ಇತ್ಯಾದಿಗಳೆಲ್ಲವನ್ನೂ ಒಳಗೊಳ್ಳುತ್ತದೆ ಸಂಸ್ಕೃತಿ.

ಬಿ. ಕೃಷ್ಣ

ಗೀತೆಯ ದರ್ಶನ

೧

(a) ಅನಂತವಾದ ಬ್ರಹ್ಮಾಂಡವಲ್ಲಿ ಮಾನವನಿಗೆ ಇರುವ ಸ್ಥಾನ ಅರ್ಥಪೂರ್ಣ. ಏಕೆಂದರೆ, ಇವನು ತನ್ನನ್ನೂ ಒಳಗೊಂಡ ಬ್ರಹ್ಮಾಂಡದ ರಹಸ್ಯಗಳನ್ನು ತಿಳಿದುಕೊಳ್ಳಬಹುದಾದ ಸಾಮರ್ಥ್ಯ ಹೊಂದಿರುವನು. ಇಂತಹ ಅದ್ಭುತ ಬುದ್ಧಿಶಕ್ತಿ ಹೊಂದಿರುವ ಮಾನವನ ಚರಿತ್ರೆಯ ಪುಟಗಳನ್ನು ಒಂದು ಕಡೆಯಿಂದ ತಿರುವಿ ಹಾಕುತ್ತಾ ಬಂದರೆ ಇವನು ನೆಮ್ಮದಿಯಾಗಿರುವ ದಿನಗಳು ಬಹಳ ಕಡಿಮೆ ಎಂಬುವುದು ಸ್ಪಷ್ಟವಾಗುವುದು. ಬದುಕಿನಲ್ಲಿ ನಲಿವಿಗಿಂತ ನೋವನ್ನೇ ಸತತವಾಗಿ ಅನುಭವಿಸುತ್ತ ಬಂದಿದ್ದಾನೆ. ಈ ನೋವಿಗೆ ಕಾರಣಗಳನ್ನು ವೇದ, ಉಪನಿಷತ್ತು, ಪುರಾಣಗಳು, ಕ್ರಿಸ್ತ, ಬುದ್ಧ, ಗಾಂಧಿ ಮೊದಲಾದ ಮಹಾತ್ಮರು ಹುಡುಕಿದುದೇ ಅಲ್ಲದೆ ಸೂಕ್ತ ಪರಿಹಾರ ಮಾರ್ಗಗಳನ್ನು ತಿಳಿಸಿದ್ದಾರೆ. ಆದರೂ ಮನುಕುಲದ 'ನೋವು–ನಿರಾಶೆ' ಮುಂದುವರಿದೇ ಇದೆ. ಇದಕ್ಕೆ ಶಾಶ್ವತವಾದ ಕೊನೆ ಇಲ್ಲವೆ ? ಎಂಬ ಪ್ರಶ್ನೆ 'ಲೋಕಹಿತ' ಚಿಂತಕರಾದ ಮಾನವೀಯ ಹೃದಯವುಳ್ಳ ವಿಶ್ವಪ್ರೇಮಿಗಳೆಲ್ಲರಲ್ಲಿಯೂ ನಿರಂತರವಾಗಿ ಪ್ರತಿಧ್ವನಿಸುತ್ತಿದೆ.

ಈ ಸಂದರ್ಭದಲ್ಲಿ ಹಿಂದೂ ಧರ್ಮದ ತಿರುಳಿನಂತಿರುವ "ಭಗವದ್ಗೀತೆಯು" ಮಾನವನ ದುಃಖಕ್ಕೆ ಕಾರಣಗಳನ್ನು, ಸೂಕ್ತ ಸುಲಭ ಪರಿಹಾರ ಮಾರ್ಗಗಳನ್ನು ವೈಜ್ಞಾನಿಕವಾಗಿ ಸೂಚಿಸುತ್ತದೆ.

ಲೋಕ ಹಿತಚಿಂತಕರಾದ ಮಹಾನ್‌ಕವಿ ವ್ಯಾಸರು ಮನುಕುಲದ ಸಮಗ್ರ ಜೀವನವನ್ನು ಮಹಾಭಾರತ ಮಹಾಕಾವ್ಯದಲ್ಲಿ ಮನೋಜ್ಞವಾಗಿ ಅಭಿವ್ಯಕ್ತಗೊಳಿಸಿದ್ದಾರೆ. ಜೀವನದ ವಿಶಾಲ ಅನುಭವ ಮತ್ತು ಪಾರಮಾರ್ಥಿಕ ಅನುಭಾವದ ಆಧಾರದ ಮೇಲೆ ನಿಂತು, ಭವಿಷ್ಯದ ಮಾನವರಿಗೆ ಸರ್ವದುಃಖನಾಶಕ್ಕೆ ನಾಂದಿಯಾಗುವ ಸೂಕ್ತ ಮಾರ್ಗವನ್ನು ಭಗವದ್ಗೀತೆಯ ಮೂಲಕ ತಿಳಿಸಿದ್ದಾರೆ.

ಜ್ಞಾನಿ, ಧೀರ, ವೀರನಾದ ಅರ್ಜುನನೂ ಕೂಡ ಮಾನವನ ಮಹಾನ್ ದೌರ್ಬಲ್ಯಗಳಾದ ಅಹಂಕಾರ–ಮಮಕಾರ–ಪಾಪ ಪ್ರಜ್ಞೆಗಳ ಮಾಯಾಜಾಲ

ದೊಳಗೆ ಸಿಕ್ಕಿಕೊಂಡು ತನ್ನ ಕರ್ತವ್ಯದಿಂದ ಹಿಂದೆ ಸರಿಯುತ್ತಾನೆ, ವಿಷಾದದ ಮಡುವಿನಲ್ಲಿ ಮುಳುಗಿ ಬಳಲುತ್ತಾನೆ. ಇಂತಹ ಸರ್ವಸಾಮಾನ್ಯ ಸನ್ನಿವೇಶದಲ್ಲಿ ಲೋಕಗುರುವಿನಂತೆ ಕಾಣಿಸಿಕೊಳ್ಳುವ ಶ್ರೀಕೃಷ್ಣನು "ಯೋಗೀಭವಾರ್ಜುನ" ಎಂಬ ದಿವ್ಯ ಮಂತ್ರೋಪದೇಶವನ್ನು ಮನುಕುಲ ಪ್ರತಿನಿಧಿಯುಂತಿರುವ ಅರ್ಜುನನಿಗೆ ಮಾಡುತ್ತಾನೆ.

(b) ಸೃಷ್ಟಿಯಲ್ಲಿ ಮಣ್ಣು, ಮರ, ಪ್ರಾಣಿ, ಪಕ್ಷಿ, ಮನುಷ್ಯರು ಇದ್ದಾರೆ. ಈ ಎಲ್ಲರಲ್ಲಿಯು ಪ್ರಜ್ಞೆ ವಿವಿಧ ಪ್ರಮಾಣದಲ್ಲಿದೆ. ಮನುಷ್ಯನಲ್ಲಿ ಇರುವ ಪ್ರಜ್ಞೆಯು ವಿಶ್ವವನ್ನೇ ವ್ಯಾಪಿಸುವ ಹಾಗೆ ಕಾಣಿಸುವುದು. ಸಹಜವಾಗಿ ಚಂಚಲವಾಗಿರುವ ಮಾನವ ಪ್ರಜ್ಞೆಯು ಪ್ರಯತ್ನಪೂರ್ವಕ ಸ್ಥಿರವಾದಾಗ ಅಹಂಕಾರ–ಮಮಕಾರ–ಪಾಪಪ್ರಜ್ಞೆಗಳ ಸೆಳೆತದಿಂದ ಮುಕ್ತವಾಗಿ ಮಾನವನು ಯೋಗಿಯಾಗುವನು. ಈ ಯೋಗದ ಸ್ಥಿತಿಯಲ್ಲಿ ಮಾನವ ಹಾಗೂ ವಿಶ್ವ, ಅನುಭವದಲ್ಲಿ ಬೇರೆ ಬೇರೆಯಾಗಿ ಕಂಡರೂ, ಅನುಭಾವದಲ್ಲಿ ಒಂದೇ ಆಗಿರುತ್ತಾರೆ. 'ಅದ್ವೈತ' (ರೂಪ) ವಾದ ಈ ಯೋಗದಲ್ಲಿ ನಿಷ್ಕಾಮ ಕರ್ಮ ಮಾತ್ರ ಜೀವನದ ಸ್ಥಿತಿ-ಗತಿ ಆಗಿರುತ್ತದೆ. ಇಂತಹ ಯೋಗ ಸಾಧನೆಯಿಂದ ಮಾತ್ರ ಮಾನವಜೀವಿಯ ವಿಷಾದ ಅಂತ್ಯಗೊಂಡು, ನಿರ್ಲಿಪ್ತಭಾವದಿಂದ ಇಹ ಜೀವನವನ್ನು ಆನಂದ ಮಯಿಯಾಗಿ ಪೂರ್ಣಗೊಳಿಸಲು ಸಾಧ್ಯವಾಗುತ್ತದೆ. ಆದ್ದರಿಂದ, "ಅಜ್ಞಾನಿ ಮಾನವನು ಸುಜ್ಞಾನಿ ದೇವನಾಗಬೇಕು ? ಇದಕ್ಕಾಗಿ ಅವನು ಯೋಗಿಯಾಗಬೇಕು" ಎಂಬುದು ಗೀತೆಯ ಉದ್ದೇಶ. ಇದಕ್ಕಾಗಿಯೆ ಆತ್ಮಯೋಗ ಶಿಕ್ಷಣದ ಅತ್ಯಗತ್ಯ.

(c) ಯೋಗಗಳ ಶಿಕ್ಷಣವನ್ನು ಮಾನವನು ಫಲಪ್ರದವಾಗಿ ಗಳಿಸುತ್ತಾ ಹೋದಂತೆ, ಅವನ ವ್ಯಕ್ತಿತ್ವದ ಆಯಾಮ ವಿಕಾಸವಾಗುತ್ತಾ ಹೋಗುತ್ತದೆ. ಯೋಗಗಳ ಬೆನ್ನೆಲುಬು ನಿಷ್ಕಾಮ ಜೀವನವೆ ಆಗಿರುವುದರಿಂದ, ಪುಟವಿಟ್ಟ ಚಿನ್ನದಂತೆ, ಮಾನವನ ಬದುಕು ಸುಸಂಸ್ಕಾರಗಳಿಂದ ಪರಿಷ್ಕಾರಗೊಳ್ಳುತ್ತಾ ಹೋಗುತ್ತದೆ. ಯೋಗ ಶಿಕ್ಷಣದ ಸತತ ಕ್ರಿಯೆಯಲ್ಲಿ ಕಲ್ಲಿನಂತೆ ಜಡವಾಗಿರುವ ಕಾಡುಮಾನವ ಸುಸಂಸ್ಕೃತನಾದ ನಾಡಮಾನವನಾಗುತ್ತಾನೆ ; ಮುಂದುವರಿದು ವಿಶಾಲ ಮನಸ್ಸು–ಬುದ್ಧಿ–ಹೃದಯವುಳ್ಳ ವಿಶ್ವಮಾನವನಾಗುತ್ತಾನೆ ; ಕೊನೆಗೆ ಚರಾಚರ ವಸ್ತುಗಳೆಲ್ಲದರಲ್ಲಿರುವ ತನ್ನನ್ನೇ ಕಾಣುವ ದೇವಮಾನವನಾಗುತ್ತಾನೆ.

ಹೀಗೆ ಅನಂತವಾದ ವಿಶ್ವದ ಒಳಗಿರುವ ಸಮಾಜದ ಕೇಂದ್ರವಾದ ಮಾನವನ ಸರ್ವತೋಮುಖ ವ್ಯಕ್ತಿತ್ವದ ಆಯಾಮವು ಗೀತೆಯ ಯೋಗ ಶಿಕ್ಷಣದ ನಂತರ ಸಮಾಜದ ಹಾಗೂ ವಿಶ್ವದ ಆಯಾಮಗಳೊಡನೆ ಸಮಾನವಾಗಿ ಒಂದಾಗುತ್ತದೆ.

(d) ಮಾನವನು ದುಃಖವನ್ನು ಮೆಟ್ಟಿನಿಂತು ಸುಖವನ್ನು ಸದಾ ತನ್ನದಾಗಿಸಿ ಕೊಳ್ಳಲು ವಿವಿಧ ರೀತಿಗಳಲ್ಲಿ ಪ್ರಯತ್ನಿಸುತ್ತಿರುವನು. ಇದಕ್ಕಾಗಿ ವಿವಿಧ ರೀತಿಯ ಜ್ಞಾನ ವಿಜ್ಞಾನಗಳ ಮೂಲಕ ಶಿಕ್ಷಣ ಪಡೆಯುತ್ತಿರುವನು. ಲೌಕಿಕ

ಅಥವಾ ಪ್ರಾಪಂಚಿಕ ಸುಖಭೋಗಗಳ ಸಾಧನೆಗಾಗಿ ಇರುವ ಈ ಶಿಕ್ಷಣಗಳು ತಮ್ಮದೇ ಆದ ಇತಿ-ಮಿತಿಗಳನ್ನು, ಕುಂದು-ಕೊರತೆಗಳನ್ನು, ಲೋಪ-ದೋಷಗಳನ್ನು ಒಳಗೊಂಡಿವೆ. ಇಂತಹ ಶಿಕ್ಷಣಗಳಿಂದ ಜೀವನದ ಪರಮೋನ್ನತ ಮೌಲ್ಯವಾದ ಸತ್-ಚಿತ್-ಆನಂದ ಸ್ವರೂಪಿ ಅನಂತ ಶಾಂತಿಯ ಸಿದ್ಧಿಯು ಸಾಧ್ಯವಿಲ್ಲ. ಏಕೆಂದರೆ, ಲೌಕಿಕವಾದ ಎಲ್ಲಾ ಶಿಕ್ಷಣಗಳು ಒಂದಲ್ಲ ಒಂದು ಸ್ವಾರ್ಥವನ್ನು ಗುರಿಯಾಗಿಟ್ಟುಕೊಂಡಿರುತ್ತವೆ. ಸ್ವಾರ್ಥವಿದ್ದೆಡೆ ಸಂಕುಚಿತತೆ, ಅಜ್ಞಾನ ತುಂಬಿರುತ್ತದೆ. ಇವುಗಳಿಂದ ಅರಿಷಡ್ವರ್ಗ ಪ್ರಧಾನ ಗುಣ-ಸ್ವಭಾವಗಳು ಜೀವನದ ರೀತಿ-ನೀತಿಗಳಾಗುತ್ತವೆ. ಇಂತಹ ಜೀವನವು ನಿರಾಶೆ, ಅತೃಪ್ತಿ, ಅಸಮಾಧಾನದ ಶಾಶ್ವತ ತಾಣಗಳಾಗುತ್ತವೆ. ಆದ್ದರಿಂದ, ಲೌಕಿಕವಲ್ಲದ ಆದರೆ ಆಧ್ಯಾತ್ಮಿಕವಾದ ಅಥವಾ ಪ್ರಾಪಂಚಿಕವಲ್ಲದ ಆದರೆ ದೈವಿಕವಾದ ಜೀವನಕ್ಕೆ ಮನಸ್ಸು ಮಾಡುವುದರಿಂದ ಮಾತ್ರ ಮಾನವನು ತನ್ನ ದುಃಖಗಳಿಂದ ಮುಕ್ತಿ ಪಡೆದು ಚಿರಂತನ ಆನಂದಮಯವಾದ, ಕರ್ಮಬಂಧನವಿಲ್ಲದ, ಎಲ್ಲದರೊಳಗೂ ಒಂದಾಗಿ ಬದುಕುವ ವಿಶ್ವಜೀವನವು ಸಿದ್ಧಿಸುತ್ತದೆ. ಇದಕ್ಕಾಗಿ ಮಾನವನು ಮಾಡಬೇಕಾಗಿರುವ ಮಹತ್ತಮ ಕಾರ್ಯವೆಂದರೆ:– ಅಧರ್ಮವಾದುದೆಲ್ಲವನ್ನು (ತನಗೆ ಮತ್ತು ಸಹಜೀವಿಗಳಿಗೆ ನೋವುಂಟುಮಾಡುವ) ತ್ಯಾಗಮಾಡುವುದು ಮತ್ತು ಧರ್ಮವನ್ನು ಪ್ರತಿಕ್ಷಣವೂ ಸ್ಥಿತಪ್ರಜ್ಞೆಯಿಂದ ಬದುಕುವುದೇ ಆಗಿದೆ. ಇಂತಹ ಸ್ಥಿತಪ್ರಜ್ಞೆಯನ್ನು ಸಾಧಿಸುವುದೇ ಗೀತಾಯೋಗ ಶಿಕ್ಷಣದ ಗುರಿಯಾಗಿದೆ.

ಜೀವನದ ರೀತಿಗಳಲ್ಲಿ ಹಲವು ಬಗೆ. ನಿಷ್ಕಾಮ ಭಾವದ ಯೋಗಿಯ ಜೀವನ ಒಂದು ಬಗೆಯಾದರೆ, ಇಂದ್ರಿಯ ಸುಖದಲ್ಲಿ ಮೈಮರೆಯುವ ಭೋಗಿಯ ಜೀವನ ಇನ್ನೊಂದು ಬಗೆ. ಈ ಎರಡಕ್ಕು ಪರಿಣಾಮಗಳ ದೃಷ್ಟಿಯಲ್ಲಿ ಕಪ್ಪು-ಬಿಳುಪಿನಷ್ಟು ವ್ಯತ್ಯಾಸ, ಉತ್ತರಧೃವ ಮತ್ತು ದಕ್ಷಿಣ ಧೃವಗಳ ಅಂತರ. ಭೋಗ ಜೀವನವು ಮನುಷ್ಯನನ್ನು ಪ್ರತಿಕ್ಷಣವು ದೈಹಿಕವಾಗಿ-ಮಾನಸಿಕವಾಗಿ ನಂಬಿಸುತ್ತಾ ಕುಂದಿಸುತ್ತಾ ವಿನಾಶದೆಡೆಗೆ ಧಾವಿಸಿದರೆ, ಯೋಗ ಜೀವನವು ಇದಕ್ಕೆ ವಿರುದ್ಧ ದಿಕ್ಕಿನಲ್ಲಿ ಅವನನ್ನು ದೈಹಿಕವಾಗಿ ಮಾನಸಿಕವಾಗಿ ಆರೋಗ್ಯವಂತನನ್ನಾಗಿ ಮಾಡಿ, ಸಿಹಿಕಹಿಗಳಿಂದ, ನೋವು-ನಲಿವುಗಳಿಂದ, ಸೋಲು-ಗೆಲುವುಗಳಿಂದ, ರಾಗ-ದ್ವೇಷಗಳಿಂದ ಕೂಡಿದ ಅನಂತ ಹಾಗೂ ಅಗಣಿತವಾದ ಜೀವನ ದ್ವಂದ್ವಗಳಿಂದ ಮುಕ್ತನನ್ನಾಗಿ ಮಾಡಿ, ಸತ್-ಚಿತ್-ಆನಂದ ಸ್ಥಿತಿಗೆ ಕೊಂಡೊಯ್ಯುತ್ತದೆ. ಆದ್ದರಿಂದ, ಮಾನವನನ್ನು ದೈವೀ ಜೀವನಕ್ಕೆ ಪ್ರವೇಶಮಾಡಿಸಬೇಕು ಎಂಬುದು ಗೀತೆಯ ಚರಮ ಗುರಿ. ಇದಕ್ಕಾಗಿಯೆ ಗೀತಾಯೋಗಗಳ ಶಿಕ್ಷಣದ ಅಗತ್ಯ.

೨

ಭೂಮಿಯಲ್ಲಿ ನೂರಾರು ಬಗೆಯ ಜೀವಿಗಳಿವೆ. ಇವುಗಳಲ್ಲಿ ಮಾನವನೂ ಒಂದು ಬಗೆಯ ಜೀವಿ. ನೀತಿ-ಧರ್ಮ-ತರ್ಕ-ಆಧ್ಯಾತ್ಮ ಮುಂತಾದ ಚಿಂತನೆಯು

ಈ ಮಾನವ ಜೀವಿಯನ್ನು ಕುರಿತು ಮಾತ್ರ ಇರುತ್ತದೆ. ಮಾನವನು ಅನುಭವಿಸುವ, ಅನುಭಾವಿಸುವ, ಚಿಂತನೆ ಮಾಡುವ, ತರ್ಕಿಸುವ ಜೀವಿಯಾಗಿರುವುದರಿಂದ ಪ್ರಾಪಂಚಿಕ ಹಾಗೂ ಪಾರಮಾರ್ಥಿಕ ವಿಚಾರಗಳೆಲ್ಲವು ಇವನಿಗೆ ಮಾತ್ರ ಸಂಬಂಧಿಸಿರುತ್ತದೆ. ಚಿಂತನ ಶೀಲನಾದ, ಇಂದ್ರಿಯಗಳಿಂದ ಅನುಭವಿಸುವವನಾದ, ಮನಸ್ಸು ಮತ್ತು ಬುದ್ಧಿಗಳಿಂದ ಅನುಭಾವಿಸುವವನಾದ, ಇದೆಲ್ಲಕ್ಕೂ ಮುಖ್ಯವಾಗಿ ಭೌತಿಕವಾಗಿ, ಬೌದ್ಧಿಕವಾಗಿ ನೂರಾರು ಇತಿ-ಮಿತಿಗಳಿಗೆ ಒಳಗಾಗಿರುವ ಮಾನವ ಜೀವಿಯ ನಿಜ ಸ್ವರೂಪದ ಅಧ್ಯಯನವು ಜೀವಾತ್ಮದ ವಿಶ್ಲೇಷಣೆಯಿಂದ ಅರ್ಥವತ್ತಾಗುತ್ತದೆ.

(a) ಜೀವಾತ್ಮನಾದ ಮಾನವನು ಪಂಚಭೂತಗಳಿಂದ (ಮಣ್ಣು, ನೀರು, ಗಾಳಿ, ಬೆಂಕಿ ಮತ್ತು ಆಕಾಶ) ಆಗಿದ್ದಾನೆ. ಸಾಂಖ್ಯದರ್ಶನದ ಪ್ರಕೃತಿಯ ರೂಪದಲ್ಲಿ (ಮಾನವನು) ಈ ಜೀವಾತ್ಮನು ಇಪ್ಪತ್ತನಾಲ್ಕು ತತ್ತ್ವಗಳಿಂದಾದ ಒಂದು ಸಂಕೀರ್ಣ ಅವಸ್ಥೆಯಾಗಿದ್ದಾನೆ. ತಮಸ್ಸು, ರಜಸ್ಸು ಮತ್ತು ಸಾತ್ವಿಕ ಗುಣಗಳಿಂದ ಕೂಡಿರುವ ಜೀವಾತ್ಮದ ಸ್ಥಿತಿ ಸತತವೂ ಬದಲಾವಣೆಗೊಳ್ಳುತ್ತಿರುತ್ತದೆ.

ಸತ್ವ, ರಜಸ್ಸು, ತಮಸ್ಸೆಂಬ ತ್ರಿಗುಣಗಳು; ಕಾಮ, ಕ್ರೋಧ, ಲೋಭ, ಮೋಹ, ಮದ, ಮಾತ್ಸರ್ಯವೆಂಬ ಅರಿಷಡ್ವರ್ಗಗಳು; ಸಾಂಖ್ಯದ ಇಪ್ಪತ್ತನಾಲ್ಕು ತತ್ತ್ವಗಳು—ಈ ಎಲ್ಲವುಗಳ ಪ್ರಭಾವ-ಪ್ರೇರಣೆಗಳಿಗೆ ಒಳಗಾಗಿರುವ (ಮಾನವನು) ಜೀವಾತ್ಮನು ಸುಖ-ದುಃಖಕ್ಕೆ ಸಂಬಂಧಿಸಿದ ನಶ್ವರವಾದ ನೂರಾರು ಜೀವನ ದ್ವಂದ್ವಗಳಿಗೆ ತುತ್ತಾಗಿ ಪರಿತಪಿಸುತ್ತಿರುವನು.

ಈ ಮಾನವನು ಕಾಲ-ದೇಶಗಳ ಪರಿಮಿತಿಯೊಳಗೆ ಬದುಕುತ್ತಾನೆ. ಹುಟ್ಟು-ಬದುಕು-ಸಾವಿನ ಚಕ್ರದಲ್ಲಿ ಸಿಲುಕಿದ್ದಾನೆ. ಅವಿದ್ಯೆ, ಅಜ್ಞಾನ, ಮಾಯೆ ಮುಂತಾದುವುಗಳ ಪ್ರಭಾವದೊಳಗೆ ಸಿಲುಕಿಕೊಂಡು ನರಳುತ್ತಾನೆ. ತ್ರಿಕಾಲಗಳಿಂದ, ತ್ರಿಗುಣಗಳಿಂದ, ಪಂಚಭೂತಗಳಿಂದ ರಚಿತವಾಗಿ, ಜನನ-ಮರಣ ಚಕ್ರಕ್ಕೆ ಸಿಲುಕಿರುವ ಮಾನವನಲ್ಲಿ, ಇವಾವುದಕ್ಕೂ ಅಂಟಿಕೊಳ್ಳದ ನಿತ್ಯವಾದ "ಸತ್ಯ" ಒಂದು ಇದೆ. ಇದನ್ನೇ "ಆತ್ಮ" ಎನ್ನುವರು. ಇದರ ಅರಿವು ಇಲ್ಲದಿರುವುದರಿಂದಲೇ ಮಾನವನು ಅಜ್ಞಾನಿಯಾಗಿ, ಪ್ರಾಪಂಚಿಕ ಜೀವನವೇ ಸತ್ಯವೆಂಬ ಮಾಯೆಗೆ ಒಳಗಾಗಿದ್ದಾನೆ. ಈ ಅಜ್ಞಾನದ ಅವಸ್ಥೆ ಇರುವವರೆಗೂ ಮಾನವ ಜೀವಿಯು ಜೀವಾತ್ಮನಾಗಿರುತ್ತಾನೆ. ಈ ಅಜ್ಞಾನದ ಪೊರೆ ಕಳಚಿ ಹೋದ ನಂತರ ಜೀವಾತ್ಮನು ಪರಮಾತ್ಮ ಅಥವ ವಿಶ್ವಾತ್ಮನಾಗುತ್ತಾನೆ.

(b) **ಆತ್ಮ ಅಥವ ಪರಮಾತ್ಮ** : ಆತ್ಮ ಅಥವ ಬ್ರಹ್ಮ ತತ್ತ್ವವು ಸೃಷ್ಟಿಯಲ್ಲಿರುವ ಜೀವಿಗಳಲ್ಲಿ ಸೂಕ್ಷ್ಮವಾಗಿಯೂ, ಜೀವಿಗಳ ಹೊರಗೆ ಬ್ರಹ್ಮಾಂಡದಲ್ಲಿ ಭೂಮವಾಗಿಯೂ ಇದೆ. ಈ ಆತ್ಮವು ಸರ್ವಾಂತರಯಾಮಿಯಾಗಿದ್ದು "ಚರ ಮತ್ತು ಸ್ಥಿರ"ವಾದ ಎರಡು ರೂಪಗಳಲ್ಲಿ ಕಾಣಿಸಿಕೊಳ್ಳುತ್ತದೆ. ಜೀವಿಗಳು ಮತ್ತು ಯಂತ್ರಗಳು ಚಲಿಸುವಾಗ "ಚರ ಶಕ್ತಿ" ಯಾಗಿಯೂ ಕಾಣುತ್ತದೆ. ಇಂಧನ ಮತ್ತು

ಆಹಾರಾಂಶಗಳಲ್ಲಿ "ಸ್ಥಿರ ಶಕ್ತಿ"ಯಾಗಿಯೂ ಜೀವಾತ್ಮನಾದ ಮಾನವನಲ್ಲಿ ದೈಹಿಕ ಶಕ್ತಿ, ಮಾನಸಿಕ ಶಕ್ತಿಯಾಗಿಯೂ ಇದೆ. ವಿಶ್ವದಲ್ಲಿ ಶಕ್ತಿಯು ವಿವಿಧ ರೂಪಗಳಲ್ಲಿ ಎಲ್ಲೆಡೆಯೂ ಆವರಿಸಿರುವುದೇ ಆತ್ಮ ಅಥವಾ ಬ್ರಹ್ಮ. ಇದು ಮರದೊಳಗಿನ ಅಗ್ನಿಯಂತಿದೆ; ಶಿಲೆಯೊಳಗಿನ ವಿಗ್ರಹದಂತಿದೆ; ಗಾಳಿ–ನೀರು–ಆಹಾರದೊಳಗಿನ ಪ್ರಾಣದಂತಿದೆ. ಇದರ ಪ್ರಕಾರಗಳು (ರೂಪಗಳು) ಸೃಷ್ಟಿ–ಸ್ಥಿತಿ–ಲಯಗಳಿಗೆ ನಿರಂತರ ಒಳಗಾಗುತ್ತಿದ್ದರೂ, ಇದು ಮಾತ್ರ ನಿರಂತರವಾಗಿ ಇದ್ದೇ ಇದೆ. ಅಲೆಗಳಡಿಯ ಸಮುದ್ರದಂತೆ ಇದಿಲ್ಲವಾದರೆ ಯಾವುದಕ್ಕೂ ಅಸ್ತಿತ್ವವಿಲ್ಲ. ಆದರೆ ಇದರ "ಇರುವು" ಸುಲಭಗ್ರಾಹ್ಯವಲ್ಲ.

ಆತ್ಮವು ದೇಹವಲ್ಲ, ಮನಸ್ಸಲ್ಲ, ಬುದ್ಧಿಯಲ್ಲ, ಅಹಂಕಾರವಲ್ಲ, ಅರಿಷಡ್ವರ್ಗಗಳಲ್ಲ, ತ್ರಿಗುಣಗಳಲ್ಲ, ತ್ರಿಕಾಲವಲ್ಲ, ಹುಟ್ಟು–ಸಾವಲ್ಲ. ಆದರೆ ಈ ಎಲ್ಲದರ ಹಿಂದೆ ಇರುವ ಆಧಾರ, ನಿತ್ಯಸತ್ಯ. ಜಾಗೃತ್–ಸ್ವಪ್ನ–ಸುಶುಪ್ತಿ–ತುರೀಯ ಅವಸ್ಥೆಗಳ ಹಿಂದೆ ಸಾಕ್ಷಿಯಾಗಿರುವ ನಿತ್ಯಸತ್ಯ ಇದೇ ಆತ್ಮಸಾಕ್ಷಿ.

(c) ಆತ್ಮ ಅಥವ ಬ್ರಹ್ಮವು ಜೀವಾತ್ಮ ಹಾಗೂ ವಿಶ್ವದೊಳಗೆ ನಿರಂತರವಾಗಿ ಇರುವ, ಒಂದೇ ಒಂದಾದ, ಅವಿಭಾಜ್ಯ ಸತ್ಯ. (i) ಈ ಅವಿಭಾಜ್ಯ ಏಕಸತ್ಯವು ಜೀವಶಕ್ತಿ ಅಥವ ಪ್ರಾಣಶಕ್ತಿಯಾಗಿ ಜೀವಾತ್ಮ (ಮಾನವ) ಮತ್ತು ಅವನ ಹೊರಗಿನ ವಿಶ್ವದಲ್ಲಿ ನಿರಂತರವಾಗಿ ಇದೆ. ಮನುಷ್ಯನ ಉಸಿರಾಟ ಈ ಪ್ರಾಣಶಕ್ತಿಯ ಕೈವಾಡ. ಉಸಿರೆಳೆದುಕೊಂಡಾಗ ಒಳಹೋಗುವ ಈ ಪ್ರಾಣಶಕ್ತಿಯು ಬಾಹ್ಯ ವಿಶ್ವದಲ್ಲಿಯೂ ಇರುತ್ತದೆ, (ಗಾಳಿಯು ಖಾಲಿ ಮಡಕೆಯ ಒಳಗೆ ಮತ್ತು ಹೊರಗೆ ಇರುವಂತೆ) ; ಉಚ್ಛ್ವಾಸ–ನಿಶ್ವಾಸ ಕ್ರಿಯೆಯು ಒಂದು ಅವಿರತ ಕ್ರಿಯೆಯಾಗಿದ್ದು, ಅವಿಭಾಜ್ಯವಾಗಿದೆ. ಈ ಪ್ರಾಣವಾಯು ರೂಪದ ಆತ್ಮವು ಜೀವಾತ್ಮನನ್ನು ವಿಶ್ವದ ಎಲ್ಲದರೊಡನೆ ಅವಿಭಾಜ್ಯ ರೀತಿಯ ಒಂದು ಸಂಬಂಧದಲ್ಲಿ ಇರಿಸಿದೆ. (ii) ಆತ್ಮ ಅಥವ ಬ್ರಹ್ಮವು ಪಂಚಭೂತಗಳಿಂದ ಆಹಾರ ಪದಾರ್ಥಗಳ ರೂಪದಲ್ಲಿ ಜೀವಾತ್ಮನ ಅಸ್ತಿತ್ವಕ್ಕೆ ಸಹಕಾರಿಯಾಗಿದೆ. ಈ ಆಹಾರಗಳು ವಿವಿಧ ಸಸ್ಯ, ಪ್ರಾಣಿ, ಪಕ್ಷಿ ಮೂಲದಿಂದ ದೊರಕುತ್ತವೆ. ಜೀವಾತ್ಮನ ಅಸ್ತಿತ್ವ ವಿಶ್ವದೊಳಗಿನ ಆತ್ಮದ ವಿವಿಧ ಭೌತಿಕರೂಪಗಳ ಮೇಲೆ ನಿಂತಿರುವುದು. ಇದು, ಜೀವಾತ್ಮನಿಗೂ ವಿಶ್ವಕ್ಕೂ ಇರುವ ಅವಿಭಾಜ್ಯ ಸಂಬಂಧವು ಕೇವಲ ಭೌತಿಕವಾಗಿರುವುದನ್ನು ಸ್ಪಷ್ಟಪಡಿಸುತ್ತದೆ. (iii) ಜೀವಾತ್ಮನಾದ ಮಾನವನ ಬದುಕು ಆರೋಗ್ಯವಾದ ಮನಸ್ಸು, ಸ್ಥಿರವಾದ ಬುದ್ಧಿಗಳಿಂದ ಸಂಪಾದಿಸಿದ ಪರಿಸರದ ತಿಳುವಳಿಕೆ ಮತ್ತು ವಿಶ್ವದೊಳಗೆ ಜರುಗುವ ಘಟನೆಗಳ ಸಮಗ್ರ ಅನುಭವ ಜ್ಞಾನದ ಮೇಲೆ ನಿಂತಿದೆ. ಮನಸ್ಸು ಮತ್ತು ಬುದ್ಧಿಯಿಲ್ಲದ ಮಾನವ ಹುಚ್ಚನಾಗುತ್ತಾನೆ. ಮನಸ್ಸಿದ್ದು ವಿಶ್ವಜೀವನದ ಆಗು–ಹೋಗುಗಳೊಡನೆ ಸಹಸ್ಪಂದಿಸದ ಮಾನವನ ಬಾಳು ಅರ್ಥಹೀನ. ಆದ್ದರಿಂದ, ಮಾನವನು ಮಾನಸಿಕವಾಗಿ ನಿರಂತರವೂ ವಿಶ್ವದಲ್ಲಿ ಕ್ರಿಯಾಶೀಲನಾಗಿರಬೇಕು. ವಿಶ್ವದಲ್ಲಿ "ಜೀವಾತ್ಮನ ಉಗಮ–ಉಳಿವು–

ಸಾವು" ಹೇಗೆ? ಯಾವಾಗ? ಏಕೆ? ಎಂಬ ಪ್ರಶ್ನೆಗಳ ಚಿಂತನೆಯು ಜೀವಾತ್ಮನನ್ನು ವಿಶ್ವದೊಡನೆ ಒಂದು ಅವಿಭಾಜ್ಯ ಸಂಬಂಧವಾಗಿರಲು ನೆರವಾಗುತ್ತದೆ.

(d) **ಮಾನವ ಮತ್ತು ಆಧ್ಯಾತ್ಮಿಕತೆಯ ಸಂಬಂಧ:** ಜೀವಾತ್ಮನಾದ ಮಾನವನು ದೇವನಾಗುವ ಮೊದಲು ಬದುಕಿನ ಅನೇಕ ಅವಸ್ಥೆಗಳನ್ನು ಅನುಭವಿಸುತ್ತಾ ಮೇಲೇರಬೇಕಾಗುತ್ತದೆ. ಇಂದ್ರಿಯ ಸುಖ-ಭೋಗಗಳಿಂದಾವೃತವಾದ ಪ್ರಾಪಂಚಿಕ ಜೀವನ, ಸೌಂದರ್ಯಾತ್ಮಕ ಜೀವನ, ಬೌದ್ಧಿಕ ಜೀವನ, ನೈತಿಕ ಜೀವನ, ಕಡೆಯದಾಗಿ ದೈವಿಕ ಅಥವ ಆಧ್ಯಾತ್ಮಿಕ ಜೀವನ—ಇವೇ ಆ ಅವಸ್ಥೆಗಳು.

ಜೀವಾತ್ಮನು ಪರಮಾತ್ಮನಾಗಲು ಬಯಸಿದರೆ, ಅದಕ್ಕಾಗಿ ಆ ದಿಕ್ಕಿನಲ್ಲಿ ಪ್ರಾಮಾಣಿಕ ಪ್ರಯತ್ನ ನಡೆಸಿದರೆ, ಇವನಿಗೂ ಆಧ್ಯಾತ್ಮಿಕತೆಗೂ ಇರುವ ಸಂಬಂಧದ ಅರಿವಾಗುತ್ತದೆ. ಈ ಸಂಬಂಧವು ಅನಾದಿ ಮತ್ತು ಅನಂತವಾಗಿದೆ. ಅಜ್ಞಾನ ಅಥವಾ ಮಾಯೆಯ ಪ್ರಭಾವದಿಂದಾಗಿ ಈ ಮಹತ್ತರ ಸಂಬಂಧದ ಅರಿವಾಗುವುದಿಲ್ಲ. ಜೀವಾತ್ಮನ (ಮಾನವನ) ಸಂಬಂಧವು ಅವನ ದೇಹದೊಡನೆ ಇರುವಷ್ಟೆ ಸತ್ಯವಾಗಿ ಆಧ್ಯಾತ್ಮದೊಡನೆಯೂ ಇದೆ. ಆದರೆ, "ಕಾಮನಲ್ಲಿ ಆಸಕ್ತಿಯಿರುವ ಮಾನವನಿಗೆ ರಾಮನ ದರ್ಶನವಾಗಲಾರದು" ಎಂಬ ಸತ್ಯದಂತೆ ಪ್ರಾಪಂಚಿಕ ಸುಖ-ಭೋಗಗಳಲ್ಲಿ ಮುಳುಗಿ ಹೋಗಿರುವ ಜೀವಾತ್ಮನಿಗೆ ಆಧ್ಯಾತ್ಮದ (ಪರಮಾತ್ಮದ) ಸುಖದ ಪರಿಚಯವಾಗಲಾರದು. ಶ್ರೀರಾಮಕೃಷ್ಣ ಪರಮಹಂಸರು ಹೇಳುವಂತೆ, "ಜನರು ಹೆಣ್ಣು-ಹೊನ್ನು-ಮಣ್ಣಿಗಾಗಿ ಕೊಡದಷ್ಟು ಕಣ್ಣೀರು ಸುರಿಸುವರು; ಆದರೆ, ದೇವರಿಗಾಗಿ ಒಂದು ತೊಟ್ಟು ಕಣ್ಣೀರು ಸುರಿಸಿದವರನ್ನು ನಾ ಕಾಣೆ. ಪ್ರಾಪಂಚಿಕ ವಾಸನೆಯುಳ್ಳ ಮನಸ್ಸು, ಅದನ್ನು ತ್ಯಜಿಸಿ, ದೇವರತ್ತ ತಿರುಗಿಸಿದಾಗ ಜೀವಾತ್ಮಕ್ಕೂ ಪರಮಾತ್ಮಕ್ಕೂ ಇರುವ ಅನಂತ ಸಂಬಂಧದ ಅರಿವಾಗುವುದು." ಈ ಸಹಜ ಸಂಬಂಧದ ಅರಿವಾಗುವ ಮುನ್ನ ಜೀವಾತ್ಮನು ಕಾಲ-ದೇಶಗಳಿಗೆ ಸೀಮಿತವಾದ **ನಾಮ-ರೂಪ-ವಾಸನಾತ್ಮಕ** ಭೌತಿಕ ವಿಶ್ವವನ್ನೆ ಸತ್ಯವೆಂದು ತಿಳಿದು, ಅಹಂಕಾರ-ಮಮಕಾರಗಳನ್ನು ಬೆಳೆಸಿಕೊಂಡು ದುಃಖಿಸುತ್ತಾನೆ. ಆದರೆ ಜ್ಞಾನೋದಯವಾದಾಗ ಮಾಯೆ ಕಳೆದು, ನಾಮ-ರೂಪಾತ್ಮಕ ವಿಶ್ವವು ಗೌಣವೆಂದು ತಿಳಿದು, ಇದರ ಅಂತರ್ಯದಲ್ಲಿ, ಬದಲಾವಣೆಯಿಲ್ಲದ, ಸದಾ ಏಕರೂಪವಾಗಿರುವ ಅನಂತ ವಿಶ್ವಶಕ್ತಿಯ **ಅನುಭಾವ**ವಾಗುತ್ತದೆ.

ಈ ದಿವ್ಯ ಅನುಭಾವವು ಜೀವಾತ್ಮವು ಅನಂತವಾದ ಸತ್ಯದ ಒಂದು ಅಂಶ ಎಂಬುದನ್ನು ಮನವರಿಕೆ ಮಾಡುತ್ತದೆ. ದೇಹಭಾವವಲ್ಲ, ಆದರೆ ಜೀವಭಾವವಿದ್ದಾಗ ಜೀವಾತ್ಮನು ತಾನು ಪರಮಾತ್ಮನ ಒಂದು ಅಂಶ (ವಿಶಿಷ್ಟಾದ್ವೈತ) ಎಂಬ ಸತ್ಯದ ದರ್ಶನ ಆಗುತ್ತದೆ. ಇದರಿಂದ ದೇಹ ಸಂಬಂಧಿ ಅಹಂಕಾರ-ಮಮಕಾರಗಳು ದೂರವಾಗುತ್ತವೆ.

೩

ಜೀವಾತ್ಮನು ವಾಸ್ತವವಾಗಿ ಇಂದ್ರಿಯ ವಾಸನೆಗಳ, ಅರಿಷಡ್ವರ್ಗಗಳ ಪ್ರಭಾವಕ್ಕೆ ಒಳಗಾಗಿ, ತನ್ನ ದೈಹಿಕ ಹಾಗೂ ಮಾನಸಿಕ ಶಕ್ತಿಯನ್ನು ಅವುಗಳಿಂದ ದೊರೆಯಬಹುದಾದ ಕ್ಷಣಿಕ ಸುಖ-ಭೋಗಗಳಿಗಾಗಿ ವ್ಯಯ ಮಾಡುತ್ತಿರುತ್ತಾನೆ. ಜೀವಾತ್ಮನ ವಿನಾಶಕ್ಕೆ ಕಾರಣವಾದ ಸಾಂದರ್ಭಿಕ ಸನ್ನಿವೇಶಗಳು ತಾಮಸಿಕ, ರಾಜಸಿಕ ಮತ್ತು ಸಾತ್ವಿಕ ಆಗಿರುತ್ತವೆ.

ಆಹಾರ, ನಿದ್ರೆ, ಮೈಥುನ, ಭಯ–ಇವುಗಳಿಗೆ ಸಂಬಂಧಿಸಿದ ಸಾಂದರ್ಭಿಕ ಸನ್ನಿವೇಶಗಳು ತಾಮಸಗುಣದ ತವರಾಗಿರುತ್ತವೆ. ಇಲ್ಲಿ ಜೀವಾತ್ಮನು ಜಡವಾಗಿ ಬಿದ್ದಿರುತ್ತಾನೆ; ಬದುಕಿಗೆ ಗೊತ್ತು-ಗುರಿ ಇರುವುದಿಲ್ಲ. ಸಹಜ ಪ್ರವೃತ್ತಿಗಳು ಕೆರಳಿದಾಗ ಹೇಗಾದರೂ ಮಾಡಿ ಅವುಗಳನ್ನು ತೃಪ್ತಿಪಡಿಸುವುದೊಂದನ್ನು ಬಿಟ್ಟು, ಬೇರಾವುದೇ ಆಸೆಗಳು ಇರುವುದಿಲ್ಲ. ಲೋಕದ ಕಣ್ಣಿಗೆ ಯೋಗಿಯಂತೆ ಕಂಡರೂ, ವಾಸ್ತವವಾಗಿ ಪ್ರಾಪಂಚಿಕ ವಾಸನೆಗಳ ದಾಸನಾಗಿರುವ ಭೋಗಿಯಾಗಿರುತ್ತಾನೆ. ಯೋಗಿಯಂತೆಯೇ ಈ ಭೋಗಿಯೂ ಏಕಾಂತ ಪ್ರಿಯ. ಆದರೆ ಈ ಏಕಾಂತದಲ್ಲಿ ಜರುಗುವ ಕ್ರಿಯೆ ಯೋಗವಲ್ಲ ಭೋಗ.

ಆಹಾರ, ನಿದ್ರೆ, ಮೈಥುನಗಳನ್ನು ಭಾಗಶಃ ಮೆಟ್ಟಿ ನಿಂತು, ಭಯದ ಪರಿವೇ ಇಲ್ಲದೆ, ಸಾಹಸ ಪ್ರವೃತ್ತಿ ಪ್ರಧಾನ ಜೀವನವು ರಾಜಸಿಕ ಗುಣದ ತವರಾಗುತ್ತದೆ. ರಾಜಸಿಕ ಪ್ರವೃತ್ತಿಗಳು ತಾಮಸದಷ್ಟು ಅಪಾಯಕಾರಿಯಲ್ಲವಾದರೂ ಆಧ್ಯಾತ್ಮಿಕ ಜೀವನ ಸಾಧನೆಗೆ ಅಡ್ಡಿಯಾಗುತ್ತದೆ. 'ಅಹಂ' ಪ್ರಧಾನವಾದ ಈ ರಾಜಸಿಕ ಜೀವನದಲ್ಲಿ ಅಷ್ಟಮದಗಳಾದ ರೂಪ-ಯೌವನ-ಐಶ್ವರ್ಯ-ಪಾಂಡಿತ್ಯ-ಅಧಿಕಾರ-ದೇಹಬಲ-ಸಾಹಸಪ್ರವೃತ್ತಿ-ಧೈರ್ಯ-ಗಳು ಜೀವಾತ್ಮನನ್ನು ಉನ್ನತ ಜೀವನ-ಸ್ತರವಾದ ಆಧ್ಯಾತ್ಮಿಕತೆಗೆ ಏರಲು ಬಿಡುವುದಿಲ್ಲ. ತಾಮಸಿಗಳು ನಿತ್ಯ ನರಕವನ್ನು ಅನುಭವಿಸಿದರೆ, ಈ ರಾಜಸಿಕರಿಗೆ ವಿವೇಕ ಜಾಗೃತಿಯ ಸಂದರ್ಭಗಳು ಆಗಾಗ ಎದುರಾಗುತ್ತವೆ. ಇಂತಹ ಅಮೂಲ್ಯ ಸಂದರ್ಭಗಳಲ್ಲಿ 'ಅಹಂ'ನ ವ್ಯರ್ಥತೆಯನ್ನು ಮನಗಂಡು, ಪ್ರಜ್ಞಾಪೂರ್ವಕವಾಗಿ ವರ್ತಿಸುವ ಸನ್ನಿವೇಶ ಜೀವಾತ್ಮನ (ಮಾನವನ) ಉದ್ಧಾರದ ಸಂದರ್ಭವಾಗಿರುತ್ತದೆ. ಆದರೆ ಕೋಟಿಗೊಬ್ಬರು ಈ ಸಂದರ್ಭವನ್ನು ಸದುಪಯೋಗಪಡಿಸಿಕೊಳ್ಳಲು ಬಹಳವಾಗಿ ಹೋರಾಡುತ್ತಾರೆ.

ಸಾತ್ವಿಕ ಸ್ವಭಾವಗಳ ಸಾಧನೆಯು ಸುಲಭ ಸಾಧ್ಯವಲ್ಲ. ಆದರೆ ಲೋಕ ಮೆಚ್ಚುವ ಈ ಸಾತ್ವಿಕ ಜೀವನವು ಕೂಡ, 'ಅಹಂಭಾವ' ದೌರ್ಬಲ್ಯದಿಂದ, ಅನೇಕ ವೇಳೆ ಮುಕ್ತವಾಗಿರುವುದಿಲ್ಲ. "ನಾನು ಓರ್ವ ಭಕ್ತ, ನಾನು ಓರ್ವ ಕರ್ಮಯೋಗಿ, ನಾನು ಓರ್ವ ಧ್ಯಾನಯೋಗಿ, ನಾನೊಬ್ಬ ಜ್ಞಾನಿ-ಸಜ್ಜನ-ದಾನಿ" ಎಂಬ ಭಾವನೆಗಳಲ್ಲಿಯೆ ಆ 'ನಾನು' ಎಂಬ 'ಅಹಂ' ಭಾವವು ಮುಂದಾಗಿ ಮೆರೆಯುತ್ತದೆ. ಈ 'ಅಹಂ' ನಿಂದ ಲೋಕಕ್ಕೆ ಕೆಡುಕಾಗದಿದ್ದರೂ, ಆ ಸಾತ್ವಿಕ ಜೀವಾತ್ಮನ

ಪಾರಮಾರ್ಥಿಕ ಜೀವನ ಸಾಧನೆಗೆ ಕೆಡುಕಾಗುತ್ತದೆ. ಯೋಗ ಜೀವನವೆಂದರೆ–ಯೋಗಿ ಮತ್ತು ಅವನಿರುವ ಸಮಾಜ–ಈ ಎರಡಕ್ಕೂ ಎಂದಿಗೂ ಕೆಡುಕಾಗದೆ ಒಳ್ಳೆಯದೆ ಆಗುವುದಾಗಿದೆ. ಅನ್ಯಜೀವಿಗಳಿಗೆ ಕೆಡುಕುಂಟು ಮಾಡುವುದಕ್ಕಿಂತಲೂ ಮಹಾಪಾಪ ತನಗೆ ತಾನೆ ಕೆಡುಕುಂಟುಮಾಡಿಕೊಳ್ಳುವುದು. ಹೀಗೆ ಸಾತ್ವಿಕರ 'ಅಹಂ' ನಿಂದ ಅವರಿಗೇ ಕೆಡುಕಾಗುತ್ತದೆ. ಸಂತೋಷದಿಂದ ಸಾವನ್ನು ಎದುರುಗೊಳ್ಳಲು ಸಿದ್ಧವಾಗುವುದಕ್ಕಿಂತಲೂ ಕಷ್ಟಸಾಧ್ಯ ಈ ಸಾತ್ವಿಕ 'ಅಹಂ'ನ್ನು ಗೆಲ್ಲುವುದು.

ದೈವಿಕ ಜೀವನದ ಬೆಳವಣಿಗೆಗಾಗಿ ಈ ತ್ರಿಗುಣಗಳಂತಹ ಅಸಂಗತ ಅಂಶಗಳೊಡನೆ ಹೋರಾಡುವುದರ ಪ್ರಮಾಣ ವಿವಿಧ ಹಂತದಲ್ಲಿ ಇರುತ್ತದೆ. ತಾಮಸಿಕ ಜೀವನದಲ್ಲಿ ಹೋರಾಟ ಇರುವುದೇ ಇಲ್ಲ; ರಾಜಸಿಕದಲ್ಲಿ ಸ್ವಲ್ಪ ಕಾಣುತ್ತದೆ; ಸಾತ್ವಿಕದಲ್ಲಿ ಬಹಳವಾಗಿ ಹಾಗೂ ತೀವ್ರವಾಗಿ ಇರುತ್ತದೆ.

ಜೀವಾತ್ಮನು ಪರಮಾತ್ಮನಾಗಲು, ಅವನಿಗೆ ಭೌತಿಕ, ಬೌದ್ಧಿಕ, ನೈತಿಕ ಹಾಗೂ ಆಧ್ಯಾತ್ಮಿಕ ಶಿಕ್ಷಣದ ಅಗತ್ಯ ಅನಿವಾರ್ಯ.

ಸದೃಢ ದೇಹದಲ್ಲಿ ಸ್ಥಿರ ಮನಸ್ಸಿರಲು ಸಾಧ್ಯ. ಇದಕ್ಕಾಗಿ ಜೀವಾತ್ಮನು (ಮಾನವನು) ಸೂಕ್ತವಾದ ಆಹಾರ, ಅಂಗಸಾಧನೆ ಮತ್ತು ಶ್ರಮ ಪೂರಿತ ದುಡಿಮೆಯ ಮೂಲಕ ಸದೃಢ ದೇಹ–ಮನಸ್ಸನ್ನು ಹೊಂದಬೇಕು. ಸಾತ್ವಿಕ ಆಹಾರ ಮತ್ತು ಯೋಗಾಭ್ಯಾಸ ಅನುಕೂಲಕರ.

ಸದೃಢ ದೇಹದ ಬೆಳವಣಿಗೆಯು ಸಾತ್ವಿಕ ಪರಿಸರದಲ್ಲಿ, ನಿಯಮಬದ್ಧವಾಗಿ ನಡೆಯುವುದರಿಂದ ಮನಸ್ಸು ನಿರ್ಮಲವಾಗಿ ವಿಕಾಸವಾಗುತ್ತದೆ. ಈ ನಿರ್ಮಲವಾದ ಮನಸ್ಸಿಗೆ ಆಹಾರವಾಗಿ ನ್ಯಾಯ–ನೀತಿ–ಧರ್ಮ–ಜ್ಞಾನ–ಶೀಲ–ವೈರಾಗ್ಯ–ತ್ಯಾಗ–ಪ್ರೇಮ–ಕ್ಷಮೆ ಮೊದಲಾದ ಸದ್ಗುಣಗಳನ್ನು ಸನ್ನಿವೇಶ ಸಂದರ್ಭಗಳಿಗೆ ಅನುಸಾರವಾಗಿ ಶಿಕ್ಷಣರೂಪದಲ್ಲಿ ಕೊಡಬೇಕು. ಲೌಕಿಕ ಹಾಗೂ ಪಾರಮಾರ್ಥಿಕ ಜೀವನದ ಒಳಿತು-ಕೆಡುಕುಗಳನ್ನು ಮನದಟ್ಟಾಗುವಂತೆ, ಉದಾಹರಣೆಗಳ ಮೂಲಕ ಹೇಳುವುದರಿಂದ ಆಧ್ಯಾತ್ಮಿಕ ಜೀವನ ಪ್ರವೇಶವು ಸುಲಭವಾಗುತ್ತದೆ.

ಸೃಷ್ಟಿಯ ಸಕಲ ಚರಾಚರ ವಸ್ತುಗಳು ಪ್ರತ್ಯಕ್ಷವಾಗಿಯೊ ಪರೋಕ್ಷವಾಗಿಯೊ ಪರಹಿತಾರ್ಥಕ್ಕಾಗಿ ಬದುಕುತ್ತಿರುವುದು ಕಾಣುವುದು. ಆದರೆ ಪ್ರಜ್ಞೆಯುಳ್ಳ ಜೀವಾತ್ಮನು ಪರಹಿತಾರ್ಥದ ಮೂಲಕವೇ ಪಾರಮಾರ್ಥಿಕವನ್ನು ಸಾಧಿಸಬೇಕಾಗಿರುವುದು. ಈ ಸರ್ವೋತ್ತಮ ಸಿದ್ಧಿಯನ್ನು ಸಾಧಿಸಬೇಕಾದರೆ ಕಾಯ–ವಾಚ–ಮನಸ ಶುದ್ಧಿಯ ಸಿದ್ಧಿ ಅಗತ್ಯವಿದೆ. ಇದಕ್ಕಾಗಿ, ಜೀವನಕ್ಕೆ ಸಂಬಂಧಿಸಿದ, ಮೇಲೆ ಸೂಚಿಸಿದ ನಾಲ್ಕು ವಿಧದ ಶಿಕ್ಷಣ ಜೀವಾತ್ಮನಿಗೆ ಅನಿವಾರ್ಯ ಅಗತ್ಯವಾಗಿದೆ.

೪

ಜೀವಾತ್ಮನಾದ ಮಾನವನು ತನ್ನಲ್ಲಿರಬಹುದಾದ ದಾನವ ಗುಣ-ಸ್ವಭಾವ ಗಳನ್ನು ಬಿಟ್ಟು, ಕಲ್ಯಾಣಗುಣಗಳಿಂದ ಪರಿಪೂರ್ಣವಾದ ದೇವನಾಗಲು, ಭಗವದ್ಗೀತೆ ಯಲ್ಲಿ ಸೂಚಿಸಿರುವ ಯೋಗಗಳ ಶಿಕ್ಷಣವನ್ನು ಹೊಂದಲು ಪ್ರಾಮಾಣಿಕ ಪ್ರಯತ್ನ ಮಾಡಬೇಕಾಗುತ್ತದೆ. ಈ ಯೋಗಗಳು ನಾಲ್ಕು : ಕರ್ಮಯೋಗ, ಭಕ್ತಿಯೋಗ, ಜ್ಞಾನಯೋಗ ಮತ್ತು ಧ್ಯಾನಯೋಗ.

(a) **ಜ್ಞಾನಯೋಗ :** ಇಲ್ಲಿ ಜೀವಾತ್ಮನು ಸಚ್ಚಿದಾನಂದದ (ಆತ್ಮ ಅಥವ ಬ್ರಹ್ಮದ) ಸ್ವರೂಪವನ್ನು ವೈಜ್ಞಾನಿಕ ವಿಚಾರದ ಮೂಲಕ ಅರಿತುಕೊಳ್ಳಲು ಪ್ರಯತ್ನಿಸುತ್ತಾನೆ. ಪ್ರಾತಿಭಾಸಿಕ, ವ್ಯಾವಹಾರಿಕ ಹಾಗು ಪಾರಮಾರ್ಥಿಕವೆಂಬ ಮೂರು ಮಾನಸಿಕ ನೆಲೆಗಳಿಂದ ಸಚ್ಚಿದಾನಂದದ ಸ್ವರೂಪವನ್ನು ವಿಶ್ಲೇಷಿಸಿ, ಕಡೆಗೆ ಅವ್ಯಕ್ತವೂ ಅವರ್ಣನೀಯವೂ ಅನಿರ್ವಚನೀಯವೂ ಆದ ಬ್ರಹ್ಮಸತ್ಯವನ್ನು ಅನು ಭಾವಿಸುತ್ತಾನೆ. ವಿಶ್ವರೂಪದರ್ಶನದಲ್ಲಿ ಅರ್ಜುನನು, ಮಿಥ್ಯೆಯಾದ ಸಕಲ ನಾಮ-ರೂಪಾತ್ಮಕವಾದ ಪ್ರಪಂಚವು ಅದ್ವೈತವಾದ ಬ್ರಹ್ಮ ಸತ್ಯದ ಸಹಸ್ರಮುಖಗಳಾಗಿರು ವುದನ್ನು ಕಾಣುವನು. $0-0=0$; $0+0=0$; $0\times 0=0$; $0\div 0=0$. ಈ ಸೂತ್ರದಂತೆ ಬ್ರಹ್ಮಾಂಡವು ಒಂದು ಅದ್ವೈತ ಸ್ಥಿತಿ. ಇದರಲ್ಲಿಯೇ ಸೃಷ್ಟಿ ಸ್ಥಿತಿ-ಲಯಗಳು ಸದಾ ಸಮುದ್ರದ ಅಲೆಗಳಂತೆ ಜರುಗುತ್ತವೆ. ಬ್ರಹ್ಮದಿಂದ ಮೂಡಿಬಂದ ಜೀವಾತ್ಮನು ಅದರ ಅಂಶವಾಗಿ ಬ್ರಹ್ಮದಲ್ಲಿಯೆ ಬದುಕುತ್ತಾ ಕಡೆಗೆ ಬ್ರಹ್ಮದಲ್ಲಿಯೇ ಲಯವಾಗುತ್ತಾನೆ. ಸಮುದ್ರದಿಂದ ಮೇಲೆದ್ದ ವೈವಿಧ್ಯಮಯ ಅಲೆಗಳು ಸಮುದ್ರದಲ್ಲಿಯೆ ಲಯವಾಗುವಂತೆ.

"ಅಹಂ ಬ್ರಹ್ಮಾಸ್ಮಿ"
"ಅಯಂ ಆತ್ಮ ಬ್ರಹ್ಮ"
"ತತ್ತ್ವಂ ಅಸಿ"
"ಸರ್ವಂ ಕಲ್ವಿದಂ ಬ್ರಹ್ಮ"
"ಪ್ರಜ್ಞಾನಂ ಬ್ರಹ್ಮ"— ಮೊದಲಾದ

ಉಪನಿಷತ್ ಮಹಾಕಾವ್ಯಗಳ ಅರ್ಥಾನುಭಾವವನ್ನು ಹೊಂದುವ ಜೀವಾತ್ಮನು, ಗಾಳಿಯಲ್ಲಿ ಗಾಳಿ ಸೇರಿದಂತೆ, ನೀರಿನಲ್ಲಿ ನೀರು ಸೇರಿದಂತೆ, ಬೆಳಕಿನಲ್ಲಿ ಬೆಳಕು ಸೇರಿದಂತೆ, ಮಣ್ಣಿನಲ್ಲಿ ಮಣ್ಣು ಸೇರಿದಂತೆ, ಆಕಾಶದಲ್ಲಿ ಆಕಾಶ ಸೇರಿದಂತೆ ವಿಶ್ವ ಜೀವನದಲ್ಲಿ ತಾನೂ ಸೇರಿ ಸಮರಸವೂ ಸರ್ವಸುಂದರವೂ ಆದ ದಿವ್ಯಾನಂದಮಯ ಜೀವನವನ್ನು ಲೌಕಿಕ ಪ್ರಪಂಚದಲ್ಲಿ ನಡೆಸಿ ಹೋಗುವನು.

(b) **ಧ್ಯಾನಯೋಗ :** ಈ ಯೋಗವು ಜೀವಾತ್ಮನಿಗೆ ನಾಮರೂಪ ಗಳಿಂದಾದ ಸಾಕಾರ ಪ್ರಪಂಚ ಸುಳ್ಳು, ಮಿಥ್ಯೆ ; ಅದ್ವೈತರೂಪಿ ನಿರಾಕಾರವೇ ಆತ್ಮ

-ಪರಮಾತ್ಮ-ವಿಶ್ವಾತ್ಮ-ಬ್ರಹ್ಮ ಎಂಬ ಸತ್ಯವನ್ನು ಅಷ್ಟಾಂಗಯೋಗದ ಮೂಲಕ ಅನುಭವಿಸಲು ಮತ್ತು ಅನುಭಾವಿಸಲು ನೆರವಾಗುತ್ತದೆ.

(i) ಸಾಮಾಜಿಕ ಜೀವನದ ನಡುವೆಯೇ ಬದುಕಿದ್ದರೂ, ಯಾವುದೇ ರೀತಿಯಲ್ಲಿ ಆ ಸಮಾಜಕ್ಕೆ ಹೊರೆಯಾಗದ ಜೀವನ ಸ್ಥಿತಿ ಉಂಟಾಗುತ್ತದೆ. ಹೇಗೆಂದರೆ, ಧ್ಯಾನಯೋಗದಲ್ಲಿ, ಜೀವಾತ್ಮನು ವಿಶ್ವಾತ್ಮಭಾವದಲ್ಲಿ ಬದುಕುವುದರಿಂದ, ಇವನೇ ಎಲ್ಲವೂ ಆಗಿ, ಎಲ್ಲವೂ ಇವನೇ ಆಗಿರುತ್ತಾನೆ. ಇಂತಹ ಸ್ಥಿತಿಯಲ್ಲಿ ಯಾವುದೇ ಭೇದ-ಭಾವ ಇರುವುದಿಲ್ಲ; ಭೇದವಿಲ್ಲದೆಡೆ ದ್ವಂದ್ವವಿಲ್ಲ ; ದ್ವಂದ್ವವಿಲ್ಲದೆಡೆ ಏಕತೆ ಇರುತ್ತದೆ. ಈ ಏಕತೆಯು ವೈವಿಧ್ಯಮಯ ವಿಶ್ವದ ಅಖಂಡತೆ, ಐಕ್ಯತೆ, ಅದ್ವೈತ. ಇದೇ ಸತ್-ಚಿತ್-ಆನಂದ.

ಸಚ್ಚಿದಾನಂದದ ಅನುಭಾವವನ್ನು ಈ ಧ್ಯಾನಯೋಗ ಶಿಕ್ಷಣವು ಜೀವಾತ್ಮನಿಗೆ ಉಂಟು ಮಾಡುತ್ತದೆ.

(ii) ಪ್ರಾಪಂಚಿಕ ಪರಿಸರದಲ್ಲಿ ಮಾನವನು ಸನ್ನಿವೇಶದ ಶಿಶುವಾಗಿದ್ದಾನೆ. ಇಂತಹ ಸಂದರ್ಭದಲ್ಲಿ ಅಜ್ಞಾನ ಹಾಗೂ ಇಂದ್ರಿಯಗಳ ಪ್ರಲೋಭನೆಗಳಿಗೆ ಒಳಗಾಗಿ ಅರಿಷಡ್ವರ್ಗಗಳ ದಾಸನಾಗುವ ಸಾಧ್ಯತೆ ಬಹಳವಾಗಿರುತ್ತದೆ. ವಿವೇಕ ಶೂನ್ಯತೆಯಿದ್ದಾಗ ಸುಖ ಮತ್ತು ದುಃಖಕ್ಕೆ ಸಂಬಂಧಿಸಿದ ಸಂವೇದನೆಗಳು ಆಂತರ್ಯ ಹಾಗೂ ಬಾಹ್ಯ ಪ್ರಲೋಭನೆಗಳಿಗೆ ಸಹಜವಾಗಿ ತೀವ್ರವಾಗಿ ಸ್ಪಂದಿಸುತ್ತದೆ. ಇಂದ್ರಿಯ ಸಂವೇದಗಳ ಈ ಸ್ಪಂದನಗಳಿಂದ ಉಂಟಾಗುವ ಅನಾಹುತ ಅಪಾರ. ಏಕೆಂದರೆ, ಸಾಮಾನ್ಯವಾಗಿ ಮನುಷ್ಯನು ಸಹಜ ಪ್ರವೃತ್ತಿಗಳ ಮಟ್ಟದಲ್ಲಿಯೇ ಬದುಕಿರುವುದರಿಂದ ಈ ಸ್ಪಂದನಗಳು ಆಹಾರ, ನಿದ್ರೆ, ಮೈಥುನ, ಭಯಗಳ ಪ್ರಚೋದನೆಯ ಪರಿಣಾಮಗಳಾಗಿರುತ್ತವೆ. ಈ ಪರಿಣಾಮಗಳ ಜೊತೆಗೆ ಆರ್ಥಿಕ, ರಾಜಕೀಯ, ಸಾಮಾಜಿಕವಾದ ಬಾಹ್ಯ ಒತ್ತಡಗಳಿಗೂ ದುರ್ಬಲನಾದ ಮನುಷ್ಯನು ಮಣಿಯ ಬೇಕಾಗುತ್ತದೆ. ಇದರ ಪರಿಣಾಮಗಳು ಇನ್ನು ಅಸಹನೀಯವಾಗಿರುತ್ತದೆ. ಹೀಗೆ, ಮನುಷ್ಯನು ಆಂತರಿಕ ಮತ್ತು ಬಾಹ್ಯ ಒತ್ತಡಗಳಿಗೆ ಸಿಲುಕಿ ಸಂಕಟಪಡುತ್ತಾನೆ. ಆದರೆ, ಮಾನವನು ಸಬಲನಾದರೆ, ಸಂಕಟ ತರುವ ಅಸಂಗತ ಸನ್ನಿವೇಶಗಳನ್ನು ಗೆಲ್ಲಬಹುದು. ಇದಕ್ಕಾಗಿ ಅವನ ನೋವು-ನಲಿವಿಗೆ ಕಾರಣವಾದ ಎಲ್ಲಾ ಸಂವೇದನ ಮೂಲಗಳಾದ ಇಂದ್ರಿಯಗಳನ್ನು ಸಮಗ್ರ ತರಪೇತಿಗೆ ಒಳಗಾಗಿಸಬೇಕಾಗುತ್ತದೆ. ದೀರ್ಘಕಾಲದ, ಕ್ರಮವಾದ, ಶಿಸ್ತಿನಿಂದ ಕೂಡಿದ ನಾಲ್ಕುಯೋಗಗಳ ಸಮನ್ವಯ ರೂಪದ ಶಿಕ್ಷಣದಿಂದ ಈ ಸಂವೇದನೆಗಳ ಸಮಗ್ರ ತರಪೇತಿ ಸಾಧ್ಯ.

(iii) ಯೋಗಗಳ ಸಿದ್ಧಿಯು ಪ್ರಜ್ಞೆಯನ್ನು ಸ್ಥಿರಗೊಳಿಸುತ್ತದೆ ; ಚಿತ್ತವನ್ನು ಶುದ್ಧಿಗೊಳಿಸುತ್ತದೆ; 'ಅಹಂ' ಭಾವವನ್ನು ನಾಶಮಾಡುತ್ತದೆ ; ಜೀವಾತ್ಮ ಪರಮಾತ್ಮ ಭೇದವನ್ನು ಅಳಿಸಿಹಾಕಿ ಅದ್ವೈತವಾದ ವಿಶ್ವಾತ್ಮದ ಅನುಭಾವವನ್ನುಂಟು ಮಾಡುತ್ತದೆ.

ಆತ್ಮಜ್ಞಾನವು ಧ್ಯಾನವಾಗಿಯೂ, ಧ್ಯಾನವು ಭಕ್ತಿಯಾಗಿಯೂ, ಭಕ್ತಿಯು ಕರ್ಮವಾಗಿಯೂ ಇರುತ್ತದೆ. ಈ ನಾಲ್ಕು ಯೋಗಗಳು ಅನಂತ ಹಾಗೂ ನಿತ್ಯ ಸತ್ಯವಾದ ಸಚ್ಚಿದಾನಂದದ ನಾಲ್ಕು ಮುಖಗಳಾಗಿವೆ. ಆಸಕ್ತಿ ನಿಜವಾದಾಗ ಪ್ರಯತ್ನ ಎಚ್ಚರವಾಗುತ್ತದೆ. ಪ್ರಯತ್ನ ನಿರಂತರವಾದಾಗ ಸಾಧನೆ ಸಿದ್ಧಿಸುತ್ತದೆ.

(iv) ಬದುಕಿನಲ್ಲಿ ವ್ಯಕ್ತಿಯ ಸ್ಥಾನ ಮತ್ತು ಕರ್ತವ್ಯಗಳನ್ನು ಕಂಡುಕೊಳ್ಳಲು ಯೋಗಗಳು ನೆರವಾಗುತ್ತವೆ.

ಅನುಭವಿ ಹಾಗೂ ಅನುಭಾವಿಯಾದ ಸದ್ಗುರುವಿನಲ್ಲಿ ಯೋಗಗಳ ಶಿಕ್ಷಣವನ್ನು ಹೊಂದುವ ವಿದ್ಯಾರ್ಥಿಯು, ಕಾಲಾನುಕ್ರಮದಲ್ಲಿ, ಜೀವನದ ಪರಿಸರದಲ್ಲಿ ತನ್ನ ಸ್ಥಾನ ಯಾವುದು ಮತ್ತು ಆ ಸ್ಥಾನಕ್ಕೆ ಸಂಬಂಧಿಸಿದ ಕರ್ತವ್ಯಗಳು ಯಾವುವು ಎಂಬುದನ್ನು ಸ್ವತಃ ಮನಗಾಣುತ್ತಾನೆ. ವ್ಯಕ್ತಿಯ ವೃತ್ತಿ ಮತ್ತು ಪ್ರವೃತ್ತಿಗಳನ್ನು ಈ ಯೋಗಗಳ ಶಿಕ್ಷಣವು ಪರಿಶುದ್ಧಿಗೊಳಿಸುವುದರ ಮೂಲಕ ಸುಗಮಗೊಳಿಸುತ್ತದೆ ಮತ್ತು ಸುಖ-ಶಾಂತಿಯನ್ನುಂಟುಮಾಡುತ್ತದೆ.

ವ್ಯಕ್ತಿಯ ವೃತ್ತಿ ಮತ್ತು ಪ್ರವೃತ್ತಿಗಳಲ್ಲಿ ಸಂಬಂಧಿಸಿದ ಯೋಗಗಳು ಪ್ರತಿಬಿಂಬಿತವಾಗುತ್ತವೆ. ಶ್ರೀಕೃಷ್ಣನಲ್ಲಿ ನಾಲ್ಕು ಯೋಗಗಳು ಸಮವಾಗಿದ್ದುವು. ತಿಲಕರಲ್ಲಿ ಕರ್ಮಯೋಗವು, ಅರವಿಂದರಲ್ಲಿ ಜ್ಞಾನ ಹಾಗೂ ಧ್ಯಾನಯೋಗವು, ಗಾಂಧಿಯವರಲ್ಲಿ ಭಕ್ತಿ ಹಾಗೂ ಕರ್ಮಯೋಗವು, ಹರಿದಾಸರುಗಳಲ್ಲಿ ಜ್ಞಾನ ಹಾಗೂ ಭಕ್ತಿಯೋಗವು ಪ್ರಮುಖವಾಗಿ ಪ್ರಜ್ವಲಿತವಾಗಿದ್ದವು.

ವ್ಯಕ್ತಿಯ ಜೀವನದಲ್ಲಿ ಒಂದೋ ಎರಡೋ ಯೋಗಗಳು ಕಾಣಿಸಿಕೊಂಡಾಕ್ಷಣಕ್ಕೆ ಉಳಿದ ಯೋಗಗಳು ಅದರಲ್ಲಿಲ್ಲವೆಂದಲ್ಲ. ಅವರ ವೃತ್ತಿ ಮತ್ತು ಪ್ರವೃತ್ತಿಗಳೇ ಅವರ ಜೀವನದ ಪ್ರತಿಬಿಂಬವಾಗಿರುವುದರಿಂದ, ಅವುಗಳಿಗೆ ಆಧಾರವಾದ ಯೋಗಗಳ ಛಾಯೆ ಅಲ್ಲಿ ಕಾಣುತ್ತದೆ ; ಉಳಿದವು ಸುಪ್ತವಾಗಿರುತ್ತವೆ.

(c) **ಕರ್ಮಯೋಗ :** ಪರಮಾತ್ಮಾನುಭಾವ ಹೊಂದುವುದೇ ಜೀವನದ ಗುರಿಯಾಗುಳ್ಳ ಜೀವಾತ್ಮನು ನಿಸ್ವಾರ್ಥ ಭಾವದಿಂದ, ಫಲಾಪೇಕ್ಷೆಯಿಲ್ಲದೆ, ತನ್ನ ಪಾಲಿನ ಕರ್ತವ್ಯವನ್ನು ಶ್ರದ್ಧೆ ಹಾಗೂ ನಿಷ್ಕಾಮ ಪ್ರೇಮದಿಂದ ಪೂರ್ಣವಾಗಿ ಮಾಡುವುದೇ ಕರ್ಮಯೋಗ.

ಮನಸ್ಸು ಫಲಾಪೇಕ್ಷೆಯಿಂದ ವಿಮುಖವಾಗಿದ್ದಾಗ ಮತ್ತು ಕೈಗೊಂಡ ಕಾರ್ಯದಲ್ಲಿ ಪೂರ್ಣ ತನ್ಮಯವಾಗಿದ್ದಾಗ, ಆ ಕಾರ್ಯವು ಪೂರ್ಣವಾಗಿಯೂ ಪರಿಶುದ್ಧವಾಗಿಯೂ, ಗುಣವಂತವಾಗಿಯೂ ನಡೆದು, ಸಹಜವಾಗಿ ಸಂತೃಪ್ತಿಯನ್ನುಂಟು ಮಾಡುತ್ತದೆ. ಈ ಸಂತೃಪ್ತಿಯೇ ಆ ಕಾರ್ಯದಿಂದುಂಟಾದ ಫಲ. ಕರ್ಮಯೋಗಿಗೆ ಈ ಫಲದ ನಿರೀಕ್ಷೆಯೂ ಇರುವುದಿಲ್ಲ.

ಒಂದು ಕಾರ್ಯ ನಡೆದಾದ ಮೇಲೆ ಅದಕ್ಕನುಗುಣವಾದ ಪರಿಣಾಮ ಜರುಗಿಯೇ ಜರುಗುತ್ತದೆ. ಆದ್ದರಿಂದ, ಒಳ್ಳೆಯ ಕಾರ್ಯಕ್ಕೆ ಒಳ್ಳೆಯ ಫಲವು ಕೆಟ್ಟ ಕಾರ್ಯಕ್ಕೆ ಕೆಟ್ಟ ಫಲವು ಸಹಜವಾಗಿಯೇ ಉಂಟಾಗುತ್ತದೆ. ಒಳ್ಳೆಯ ಕಾರ್ಯ ಮಾಡಿದರೂ ಅದರ ಫಲದ ಚಿಂತೆಯೂ ಬೇಡ. ಫಲಾಪೇಕ್ಷೆಯಿಲ್ಲದೆ ಕಾರ್ಯಮಾಡುವುದು ಹೇಗೆ ಎಂಬುದರ ಶಿಕ್ಷಣವು ಕರ್ಮಯೋಗಾಭ್ಯಾಸದಿಂದ ದೊರಕುತ್ತದೆ.

(d) ಭಕ್ತಿಯೋಗ: ಸೃಷ್ಟಿಯನ್ನು ಸೂಕ್ಷ್ಮವಾಗಿ ಅವಲೋಕಿಸಿದಾಗ, ಜೀವಾತ್ಮನಾದ ಮನುಷ್ಯನಿಗಿಂತಲೂ ಅಧಮವೂ–ಉತ್ತಮವೂ ಆದ ಚರಾಚರ ವಸ್ತುಗಳಿರುವುದು ಕಾಣುವುದು. ಒಂದು ಸೂಕ್ಷ್ಮಬೀಜದಲ್ಲಿ ಬೃಹದಾಕಾರ ವೃಕ್ಷವನ್ನು ಅಡಗಿಸಿರುವ; ಒಂದು ವೀರ್ಯಾಣುವಿನಲ್ಲಿ ಬ್ರಹ್ಮಾಂಡದ ಆಗು–ಹೋಗುಗಳನ್ನು ಚಿಂತಿಸುವ ಮಾನವನನ್ನು ಅಡಗಿಸಿರುವ; ಬ್ರಹ್ಮಾಂಡದಲ್ಲಿರುವ ಸೌರಮಂಡಲ, ನಕ್ಷತ್ರಲೋಕ, ಆಕಾಶಗಂಗೆ, ನೆಬುಲ ಮುಂತಾದ ಸಹಸ್ರ ನಾಮ–ರೂಪಗಳ ಸ್ಥಿತಿ–ಗತಿಯನ್ನು ಕ್ರಮವಾಗಿ, ಕರಾರುವಾಕ್ಕಾಗಿ ನಿಯಂತ್ರಿಸುತ್ತಿರುವ ಅವ್ಯಕ್ತ ಶಕ್ತಿಯು ಎಲ್ಲದಕ್ಕಿಂತಲೂ ಮಹತ್ತಾಗಿದೆ. ಅದು ಸರ್ವಜ್ಞ ಸರ್ವಶಕ್ತ ಎಂಬ ಭಾವದೊಡನೆ, ಜೀವಾತ್ಮನು, ತನ್ನನ್ನು ತಾನೇ ಆ ಅನಂತ ಸತ್ಯಕ್ಕೆ ಆ ಅವ್ಯಕ್ತ ಶಕ್ತಿಗೆ ಒಪ್ಪಿಸಿಕೊಂಡು ಸೃಷ್ಟಿಯ ಸಕಲ ನಾಮ ರೂಪಗಳಲ್ಲಿಯೂ ಆ ದೈವವನ್ನೇ ಕಾಣುವುದು ಹಾಗೂ ಅದರ ಸೇವೆ ಮಾಡುವುದು ಭಕ್ತಿಯೋಗವಾಗಿದೆ.

ನಿಜ; ಭಗವದ್ಭಕ್ತನು ಅಹಂಕಾರ–ಮಮಕಾರಗಳಿಂದ ಮುಕ್ತನಾಗಿರುತ್ತಾನೆ. "ಸೃಷ್ಟಿ–ಸ್ಥಿತಿ–ಲಯ ಎಲ್ಲದರ ಕಾರಣವು ಆ ಅವ್ಯಕ್ತ ದೈವವೆ ಎಂಬ ದೃಢ ನಂಬಿಕೆಯಿಂದ," "ಎಲ್ಲವೂ ನೀನೆ; ನಾನು ನಿನ್ನ ಆಜ್ಞಾಪಾಲಕ" ಎಂದು ಸಂಪೂರ್ಣ ಶರಣಾಗುತ್ತ ಈ ಜೀವಾತ್ಮನು ಆ ಪರಮಾತ್ಮನಲ್ಲಿ ಒಂದಾಗುವುದರ ಮೂಲಕ ತನ್ನದೆಂಬ ಅರ್ಥಹೀನ ವ್ಯಕ್ತಿತ್ವವನ್ನು ಅವ್ಯಕ್ತವಾದ ವಿಶ್ವಾತ್ಮದಲ್ಲಿ ಲೀನವಾಗಿಸುತ್ತಾನೆ. ಬೆಕ್ಕಿನಮರಿಯು ತನಗೆ ಅಪಾಯ ಹತ್ತಿರವಾದಾಗ ದೂರದಲ್ಲೆಲ್ಲೋ ಇರುವ ತನ್ನ ತಾಯಿಯನ್ನು ರಕ್ಷಣೆಗಾಗಿ ಕೂಗಿಕೊಳ್ಳುತ್ತದೆ. ರಕ್ಷಿಸಲು ಧಾವಿಸಿಬಂದ ತನ್ನ ತಾಯಿಯ ಮುಂದೆ ಸಂಪೂರ್ಣ ಶರಣಾಗಿರುತ್ತದೆ. ಆಗ ಆ ತಾಯಿಯು ಆ ತನ್ನ ಮರಿಯನ್ನು ನೋವಾಗದ ರೀತಿಯಲ್ಲಿ ಹಲ್ಲಿನಲ್ಲಿ ಕೊಂಡು ಹೋಗಿ ಸುರಕ್ಷಿತ ಜಾಗದಲ್ಲಿಡುತ್ತದೆ. ಈ ಭಕ್ತಿಯನ್ನು ವಿಶಿಷ್ಟಾದ್ವೈತದರ್ಶನದಲ್ಲಿ ಮಾರ್ಜಾಲ ಕಿಶೋರ ಭಕ್ತಿ ಎಂದು ವರ್ಣಿಸಿದ್ದಾರೆ.

ಯೇ ತು ಸರ್ವಾಣಿ ಕರ್ಮಾಣಿ ಮಯಿ ಸಂನ್ಯಸ್ಯ ಮತ್ಪರಾಃ ।
ಅನನ್ಯೇನೈವ ಯೋಗೇನ ಮಾಂ ಧ್ಯಾಯಂತ ಉಪಾಸತೇ

(ಗೀತೆ–ಅ–೧೨, ಶ್ಲೋ–೬)

ತೇಷಾಮಹಂ ಸಮುದ್ಧರ್ತಾ ಮೃತ್ಯು ಸಂಸಾರ ಸಾಗರಾತ್ ।
ಭವಾಮಿ ನ ಚಿರಾತ್ ಪಾರ್ಥ ಮಯ್ಯಾವೇಶಿತ ಚೇತಸಾಮ್

(ಗೀತೆ,ಅ–೧೨ ; ಶ್ಲೋ–೭)

"ಯಾರು ಸಮಸ್ತ ಕರ್ಮಗಳನ್ನು ನನ್ನಲ್ಲಿ ಅರ್ಪಿಸಿ ಮತ್ಪರರಾಗಿ ಅನನ್ಯವಾದ ಯೋಗದಿಂದ ನನ್ನನ್ನು ಧ್ಯಾನಿಸುತ್ತಾ ಉಪಾಸನೆ ಮಾಡುತ್ತಾರೆಯೋ ನನ್ನಲ್ಲಿ ಮನಸ್ಸುಳ್ಳ ಅಂತಹವರನ್ನು ನಾನು ಮೃತ್ಯು ಸಂಸಾರ ಸಾಗರದಿಂದ ಶೀಘ್ರವಾಗಿ ಉದ್ಧಾರ ಮಾಡುತ್ತೇನೆ" ಎನ್ನುವನು ಶ್ರೀಕೃಷ್ಣ.

ಹೀಗೆ ಭಕ್ತಿಯೋಗದಿಂದ ಭಗವದ್ಭಕ್ತನು, ಜ್ಞಾನಯೋಗದಿಂದ ಬೋಧಕನು, ಕರ್ಮಯೋಗದಿಂದ ಸಮಾಜ ಸೇವಕನು, ಧ್ಯಾನಯೋಗದಿಂದ ಸಂನ್ಯಾಸಿಯು ಉಂಟಾಗುತ್ತಾರೆ. ಈ ನಾಲ್ವರೂ ತಿಳಿದಿರುವ ಸತ್ಯ–ದೇವರು ಒಂದೇ ಒಂದು. ಅದೇ ಅದ್ವೈತವಾದ ಸತ್-ಚಿತ್-ಆನಂದ. ಆದರೆ ಅವರು ಬದುಕುತ್ತಿರುವ ರೀತಿಗಳು ಮಾತ್ರ ಬೇರೆ ಬೇರೆ.

ಸಚ್ಚಿದಾನಂದವು ಅದ್ವೈತವೆ ಆದರೂ, ಅದರ ದರ್ಶನ ಮಾತ್ರ ಅದರ ಸ್ವರೂಪಗಳಾದ ನಾಲ್ಕು ಯೋಗಗಳಲ್ಲಿ ಆಗುತ್ತದೆ. ನಿರಾಕಾರವಾದ ಅದ್ವೈತ ಬ್ರಹ್ಮವನ್ನು ಪಂಚೇಂದ್ರಿಯಗಳಿಂದ ನೋಡಲಾಗುವುದಿಲ್ಲ; ಅನುಭವಿಸಲಾಗುವುದಿಲ್ಲ. ಭಾವ ಗೋಚರವಾದ್ದರಿಂದ ಅನುಭವಿಸಬಹುದು.

೫

(a) ಗುಣ–ಕರ್ಮಕ್ಕೆ ಸಂಬಂಧಿಸಿದಂತೆ ಮಾನವರ ವರ್ಗೀಕರಣ

ಮನುಷ್ಯರ ದೈಹಿಕ ಮತ್ತು ಮಾನಸಿಕ ಸ್ಥಿತಿ-ಗತಿಗಳು ಒಂದೇ ರೀತಿ ಇರುವುದಿಲ್ಲ. ಮನುಷ್ಯರನ್ನು ಅವರಲ್ಲಿ ಪ್ರಬಲವಾಗಿರುವ ಗುಣದ ಆಧಾರದ ಮೇಲೆ ತಾಮಸಿಕ, ರಾಜಸಿಕ ಮತ್ತು ಸಾತ್ವಿಕ—ಎಂದು ವರ್ಗೀಕರಿಸುವರು. ಇದರಂತೆಯೆ ಅವನು ಮಾಡಬಹುದಾದ ಕರ್ಮ (ವೃತ್ತಿ ಅಥವ ಕೆಲಸ)ಕ್ಕೆ ಅನುಗುಣವಾಗಿ ಶೂದ್ರ–ವೈಶ್ಯ–ಕ್ಷತ್ರಿಯ–ಬ್ರಾಹ್ಮಣ ಎಂದು ವರ್ಗೀಕರಿಸುವರು.

ಕೇವಲ ಆಹಾರ, ನಿದ್ರೆ, ಮೈಥುನ, ಭಯಗಳಲ್ಲಿಯೇ ಮುಳುಗಿ ಸದಾ ಆಲಸಿಯಾಗಿರುವವನು ತಾಮಸಗುಣ ಪ್ರಧಾನನಾಗುವನು. ಈ ತಾಮಸಗುಣವನ್ನು (ಸ್ವಲ್ಪ) ಮೆಟ್ಟಿನಿಂತು ಕ್ರಿಯಾಶೀಲತೆ, ಧೈರ್ಯ, ಸಾಹಸ, ಮುಂದಾಳುತನ ಪ್ರಧಾನ ವೃತ್ತಿ–ಪ್ರವೃತ್ತಿಗಳಲ್ಲಿ ತೊಡಗಿರುವವನು ರಾಜಸಿಕ ಗುಣ ಪ್ರಧಾನನಾಗುವನು. ತಾಮಸಿಕ ಮತ್ತು ರಾಜಸಿಕ ಗುಣಗಳನ್ನು ಮೆಟ್ಟಿನಿಂತು, ಸದಾ ಹರ್ಷ ಚಿತ್ತನಾಗಿ ಜ್ಞಾನ, ಶೀಲ, ವೈರಾಗ್ಯ, ತ್ಯಾಗ, ಪ್ರೇಮ, ಕ್ಷಮೆ, ಶಾಂತಿ, ಸಮಾಧಾನ, ಸಹನೆ, ಸಮತ್ವದಿಂದಿರುವವನು ಸಾತ್ವಿಕ ಗುಣ ಪ್ರಧಾನನಾಗುವನು.

ಕೇವಲ ದೈಹಿಕ ಶಕ್ತಿಯನ್ನೇ ಅವಲಂಬಿಸಿ, ಬುದ್ಧಿಯ ಬೆಳವಣಿಗೆ ಸ್ವಲ್ಪವೂ ಇಲ್ಲದೆ ಬದುಕುವ ಮನುಷ್ಯರು ಶೂದ್ರರೆನ್ನಿಸಿಕೊಳ್ಳುವರು. ಇವರು ದೈಹಿಕ ಕಾರ್ಯಗಳಾದ ವ್ಯವಸಾಯ, ಪಶುಪಾಲನೆ ಮೊದಲಾದ ಶ್ರಮಪೂರಿತ ಜೀವನ ನಡೆಸುವರು. ಇವರ ಜೀವನ ನಿರಂತರ ಹೋರಾಟದ್ದಾದ್ದರಿಂದ ಪಾಪ-ಪುಣ್ಯವೆ ಮೊದಲಾದ ದ್ವಂದ್ವಗಳ ಕಡೆಗೆ ಮನಸ್ಸು ಕೊಡಲು ಕಾಲನೇ ಇರುವುದಿಲ್ಲ. ಸೂರ್ಯೋದಯದೊಡನೆ ದುಡಿಮೆಗಿಳಿಯುವ ಇವರು ಸೂರ್ಯಾಸ್ತದವರೆಗು '**ಹೊಟ್ಟೆಗಾಗಿ-ಗೇಣು ಬಟ್ಟೆಗಾಗಿ**' ದುಡಿದು, ಬೆವರಿಳಿದು, ಸುಸ್ತಾಗಿ ಇದ್ದಿದ್ದನ್ನು ತಿಂದು ಮಲಗುವರು. 'ನಾಳೆ' ಎಂಬುದಿಲ್ಲದ ಈ ಜನಕ್ಕೆ ನೆಮ್ಮದಿಯ ಗಾಢ ನಿದ್ರೆ ಸುಲಭವಾಗಿ ಬಂದು ಬಿಡುತ್ತದೆ. ಇವರು ಸ್ವತಂತ್ರ ಜೀವಿಗಳು.

ದೇಹ ಶ್ರಮಕ್ಕೆ ಹಿಂಜರಿದು, ಸ್ವಲ್ಪ ಬುದ್ಧಿ ಶಕ್ತಿ ಹಾಗೂ ವ್ಯವಹಾರ ಕುಶಲಿಗಳಾದ ಜನರು ವ್ಯಾಪಾರ-ವಾಣಿಜ್ಯಗಳಲ್ಲಿ ತೊಡಗುತ್ತಾರೆ.

ಉತ್ತಮ ದೇಹದಾರ್ಢ್ಯ ಹೊಂದಿದ್ದು ಸಾಹಸಕಾರ್ಯಗಳಲ್ಲಿ ಧೈರ್ಯ-ಸ್ಥೈರ್ಯದಿಂದ ಮುನ್ನುಗ್ಗುವವರು ಕ್ಷತ್ರಿಯರಾಗಿದ್ದು ಕೊಂಡು ನಾಡಿನ ಹಿತ ರಕ್ಷಣೆ ಮಾಡುವರು.

ಉತ್ತಮ ಸಂವೇದನೆಗಳು, ಸಂಸ್ಕಾರಗಳು, ನಡವಳಿಕೆಗಳು ಇರುವ ಸಹೃದಯವಂತ ಜನರು ನಾಡಿನ ಹಿತಕ್ಕಾಗಿ ಬದುಕುತ್ತಾರೆ. ನಾಮ-ರೂಪ ಪ್ರಪಂಚಕ್ಕೆ ಅತೀತವಾದ ಮತ್ತು ಆಧಾರವಾದ "ಬ್ರಹ್ಮ ಸತ್ಯದ" ಸಾಕ್ಷಾತ್ಕಾರ ಮಾಡಿಕೊಂಡ ಇವರನ್ನು "ಬ್ರಾಹ್ಮಣ"ರೆನ್ನುವರು. ಬ್ರಹ್ಮನನ್ನು ತಿಳಿಯಲು ಹೊರಡುವನು ಬ್ರಹ್ಮಚಾರಿಯಾದರೆ, ಬ್ರಹ್ಮನನ್ನು ತಿಳಿದವನು ಬ್ರಾಹ್ಮಣನಾಗುತ್ತಾನೆ. "ಬ್ರಹ್ಮ"ವು ಧರ್ಮವಾಗಿದೆ. ಧರ್ಮವು ಬ್ರಹ್ಮಾಂಡವನ್ನು ಹೊತ್ತು ರಕ್ಷಿಸುತ್ತದೆ. ಹೀಗೆಯೆ ಬ್ರಾಹ್ಮಣನು ಬ್ರಹ್ಮಾಂಡದ ಒಂದು ತುಣುಕಾದ ಭೂಮಿಯಲ್ಲಿನ ಸಕಲ ಜೀವರಾಶಿಗಳ ಹಿತ ಚಿಂತನೆ ಮಾಡುತ್ತಾನೆ; ಈ ಹಿತ ಸಾಧನೆಗಾಗಿಯೆ ಬದುಕುತ್ತಾನೆ. ಲೋಕದ ಹಿತ ಸಾಧನೆಯಲ್ಲಿ ತನ್ನ ಹಿತವನ್ನು ಕಾಣುತ್ತಾನೆ. ಲೋಕಕ್ಕೆ ಹಿತವಾದುದನ್ನು ತೋರುವ ಇವರ ಯೋಗ-ಕ್ಷೇಮವನ್ನು ಉಳಿದ ಮೂರು ವರ್ಗಗಳು ನೋಡಿಕೊಳ್ಳುತ್ತವೆ.

(b) ಕಾಡು ಪ್ರಾಣಿಯಲ್ಲ, ಆದರೆ ನಾಡು ಪ್ರಾಣಿಯಾದ ಮಾನವನು ಸಾಮಾಜಿಕ ವ್ಯಕ್ತಿಯಾಗಿ, ಮೂಲಭೂತವಾದ ಕೆಲವು ಕರ್ತವ್ಯಗಳನ್ನು ಮಾಡಲೇಬೇಕಾಗಿದೆ. ತಾನೂ ಸುಖವಾಗಿ ಬದುಕಬೇಕು. ಜೊತೆಗೆ, ತನ್ನ ಸುಖಕ್ಕೆ ಪ್ರತ್ಯಕ್ಷವಾಗಿ ಮತ್ತು ಪರೋಕ್ಷವಾಗಿ ಕಾರಣರಾದ ತನ್ನ ಸಹಜೀವಿಗಳೂ ಸುಖವಾಗಿರಬೇಕು. ಆದ್ದರಿಂದ, ತನಗಾಗಿ ಬದುಕುತ್ತಿರುವ ಇತರರಿಗಾಗಿ ತಾನು ಬದುಕುವುದು ಹೇಗೆ-ಎಂಬುದರ ಶಿಕ್ಷಣವೆ ಗೀತೆಯ ಅರ್ಥ ಹಾಗೂ ಉದ್ದೇಶವಾಗಿದೆ.

(c) ಸಾಮಾಜಿಕ ಕರ್ತವ್ಯಗಳನ್ನು ಈಡೇರಿಸುವುದರಲ್ಲಿ ಮತ್ತು ಆತ್ಮೋನ್ನತಿಯ ಸಾಧನೆಯಲ್ಲಿ ಸ್ವಪ್ರಯತ್ನವನ್ನು ಕಡೆಗಣಿಸಬಾರದು. ' ನಮ್ಮ ಹಸಿವನ್ನು ನಾವೇ ತೀರಿಸಿಕೊಳ್ಳಬೇಕು ಮತ್ತು ನಮ್ಮ ರೋಗವನ್ನು ನಾವೇ ವಾಸಿಮಾಡಿಕೊಳ್ಳಬೇಕು '– ಎಂಬ ಸತ್ಯದಷ್ಟೇ " ಸ್ವಪ್ರಯತ್ನವು " ಸಾಮಾಜಿಕ ಕರ್ತವ್ಯ ನಿರ್ವಹಣೆ ಹಾಗೂ ಆತ್ಮೋನ್ನತಿಯ ಸಾಧನೆಯಲ್ಲಿ ಅನಿವಾರ್ಯ ಅಗತ್ಯ ಎಂಬುದನ್ನು ಮರೆಯಲಾಗದು.

(d) ನೋವಿನ ಹಾಗು ಸಾವಿನ ಭಯವಿರುವವನಿಗೆ ಜನನ-ಮರಣಗಳ ನಡುವಿನ ಈ ಅಲ್ಪ ಜೀವನವಷ್ಟೇ ಸತ್ಯವಾಗಿ ಕಾಣುತ್ತದೆ. ಇಂತಹವರ ಹುಟ್ಟು-ಬದುಕು-ಸಾವಿನ ನೆನಪು ಯಾರಿಗೂ ಎಂದೂ ಆಗದ ರೀತಿಯಲ್ಲಿ ಜರುಗುತ್ತದೆ. ಇಂತಹವರು ವಿಶ್ವಮಯವಾದ ಅನಂತ ಜೀವನದ ಕಲ್ಪನೆಯನ್ನೂ ಹೊಂದಿರಲು ಸಾಧ್ಯವಿಲ್ಲ. ಸಾಂಖ್ಯ ದರ್ಶನದ ಪುರುಷನ ಅಥವ ಉಪನಿಷತ್ತಿನ ಆತ್ಮ ಅಥವ ಬ್ರಹ್ಮದ ಪರಿಚಯವುಳ್ಳವರಿಗೆ ಅನಂತ ಜೀವನ ಒಂದು ವಾಸ್ತವತೆಯಾಗಿರುತ್ತದೆ. ಸಂವೇದನೆಗಳು ಮತ್ತು ಭಾವನೆಗಳು ವಿಶ್ವದ ಅಂಚುಗಳನ್ನು ಮುಟ್ಟಿ ಪ್ರತಿಧ್ವನಿಸುವಾಗ ಜೀವನವು ಅನಂತವಾಗುತ್ತದೆ, ವಿಶ್ವಮಯವಾಗುತ್ತದೆ. ಇಂತಹ ಅನಂತ ಜೀವನ-ದರ್ಶನವು ಗೀತೆಯ " ವಿಶ್ವರೂಪದರ್ಶನದಲ್ಲಿ " ವಿರಾಜಮಾನವಾಗಿದೆ.

(e) ಮನುಷ್ಯನು ತನ್ನ ಜೀವಾತ್ಮ ಸ್ಥಿತಿಯನ್ನು ಕೊನೆಗೊಳಿಸಿ ಪರಮಾತ್ಮನಾಗುವ ಮೊದಲು ಅನೇಕ ಬಗೆಯ ಜೀವನ (ಸ್ಥರಗಳನ್ನು) ಗಳನ್ನು ಅನುಕ್ರಮವಾಗಿ ಬದುಕಿಹೋಗಬೇಕಾಗಿದೆ. ಈ ಆಧ್ಯಾತ್ಮಿಕ ಜೀವನ ಸಾಧನೆಯ ಅಂತ್ಯವು ಅನೇಕ ದಿನಗಳು ವರ್ಷಗಳು ಮತ್ತು ಜನ್ಮಗಳನ್ನು ತೆಗೆದು ಕೊಳ್ಳಬಹುದು. ಜೀವಾತ್ಮನಿಗೆ, ತನ್ನ ಮತ್ತು ತನ್ನ ಹೊರಗಿರುವ ಪ್ರಪಂಚದ ಭೌತಿಕ, ಸೌಂದರ್ಯಾತ್ಮಕ, ಸಾಮಾಜಿಕ, ರಾಜಕೀಯ, ಆರ್ಥಿಕ, ನೈತಿಕ ಮತ್ತು ಧಾರ್ಮಿಕ ಬದುಕಿನ ಅರ್ಥ ಮತ್ತು ಮೌಲ್ಯದ ಸಮಗ್ರ ಅನುಭವವಾಗಿರಬೇಕು ; ಈ ವಿಶಾಲ ಅನುಭವಕ್ಕೆ ಸಂಬಂಧಿಸಿದ ನೋವು–ನಲಿವು, ಸತ್ಯ–ಅಸತ್ಯಗಳ ಪರಿಚಯವಾಗಬೇಕು ; ಈ ಅನುಭವ ಜ್ಞಾನದ ಚಿಂತನ–ಮಂಥನದಲ್ಲಿ ಆತ್ಮದರ್ಶನವಾಗಬೇಕು ; ಇಷ್ಟೆಲ್ಲ ನಡೆಯಲು ಬೇಕಾದ ಕಾಲಾವಧಿಯು ಅನೇಕ ಬಗೆಯ ಜೀವನ ಸ್ತರಗಳನ್ನು ಒಳಗೊಂಡಿರುತ್ತದೆ.

(a) ಗೀತೆಯ ಪ್ರಕಾರ ಜೀವಾತ್ಮನಾದ ಮಾನವನ ಬದುಕು, ಕಾಲ ದೇಶಾತೀತವಾದ ಸತ್ಯವೊಂದರಿಂದ, ಅವನು ಈ ಪ್ರಪಂಚಕ್ಕೆ ಬರುವ ಮೊದಲೇ, ಹೀಗೆಯೇ ನಡೆಯಬೇಕು ಎಂದು ನಿಶ್ಚಯಿಸಲ್ಪಟ್ಟಿರುತ್ತದೆ. ಜೊತೆಗೆ, ಅವನ ಜನ್ಮ ಮರಣಗಳ ನಡುವಿನ ಜೀವನವನ್ನು ಸ್ವತಂತ್ರ ಸಂಕಲ್ಪಗಳಿಂದ ನಡೆಸುವ ಅವಕಾಶವೂ ಇದೆ.

ಜೀವಾತ್ಮನ ಲೌಕಿಕ ಜೀವನವು, ಸಾಮಾಜಿಕ ಸನ್ನಿವೇಶದಲ್ಲಿ ನಡೆಯುವ ಒಂದು ವಿಸ್ತಾರವಾದ, ಸುದೀರ್ಘವಾದ, ಕ್ಲಿಷ್ಟವಾದ ಸಮಸ್ಯೆಗಳಿಂದ ಕೂಡಿದ ಹೋರಾಟದ ಬದುಕು ಎಂದು ಪರಿಗಣಿಸೋಣ. ವಿಶ್ವನಾಟಕರಂಗಮಂಟಪದಂತಿರುವ ಈ ಪ್ರಪಂಚದಲ್ಲಿ (ಭೂಮಿಯಲ್ಲಿ), ಜೀವಾತ್ಮರು, ತಮ್ಮ ಹುಟ್ಟು-ಬದುಕು-ಸಾವಿನ ಕಾಲಾವಧಿಯಲ್ಲಿ, ನೂರಾರು ಬಗೆಯ ಪಾತ್ರಗಳನ್ನು (ಮಗು, ಬಾಲಕ, ಪುತ್ರ, ಪ್ರೌಢ, ಪತಿ, ಪಿತ, ಪುತ್ರಿ, ಸತಿ, ಮಾತೆ, ಗೆಳೆಯ, ಬಂಧು, ಸೇವಕ-ಅಧಿಕಾರಿ, ಬಡವ-ಬಲ್ಲಿದ, ಪಾಪಿ-ಪುಣ್ಯವಂತ, ಗುರು-ಶಿಷ್ಯ, ಕಾಯುವವನು-ಕೊಲ್ಲುವವನು,....) ಅಭಿನಯಿಸಬೇಕಾಗಿದೆ. ಈ ವಿಶಾಲ ಹಾಗೂ ವೈವಿಧ್ಯಮಯ ಜೀವನ ನಾಟಕದ ಸೂತ್ರಧಾರ ಆ ಅವ್ಯಕ್ತ ದೈವೀ ಶಕ್ತಿಯಾಗಿದೆ. ಜೀವಾತ್ಮರ ಪಾಲಿನ ಕರ್ತವ್ಯವೆಂದರೆ ತಮ್ಮ ತಮ್ಮ ಕಾಲಾನುಕ್ರಮದ ಪಾತ್ರಗಳನ್ನು ಉತ್ತಮವಾಗಿ ಅಭಿನಯಿಸುವುದು ಮಾತ್ರ. ಶ್ರೀ ಕುವೆಂಪು ಅವರು ತಮ್ಮ "ಸ್ಮಶಾನ ಕುರುಕ್ಷೇತ್ರ" ನಾಟಕದಲ್ಲಿ ಇಂತಹ ಜೀವನ ನಾಟಕದ ಚಿತ್ರಣವನ್ನು ಸುಂದರವಾಗಿ ಅಭಿವ್ಯಕ್ತಿಸಿದ್ದಾರೆ. ಶ್ರೀ ಕೃಷ್ಣ-ದುರ್ಯೋಧನರ ಸಂವಾದ (ಯುದ್ಧದ ಅಂತ್ಯದಲ್ಲಿ) ಈ ನಾಟಕವನ್ನು ಒಳಗೊಂಡಿದೆ.

ಗೀತೆಯಲ್ಲಿನ ಕರ್ಮವಾದದ ವಿವರಣೆಯು ವಿಧಿವಾದ ಮತ್ತು ಮಾನವ ಸ್ವಾತಂತ್ರ್ಯ-ಸಂಕಲ್ಪದ ವಿಚಾರವನ್ನು ತಿಳಿಸುತ್ತದೆ.

(b) ಗೀತೆಯಲ್ಲಿನ "ಇರುವಿಕೆಯ ತತ್ತ್ವದ ಪ್ರಕಾರ ಇಡೀ ಬ್ರಹ್ಮಾಂಡವು ಸರ್ವಾಂತರಯಾಮಿಯಾದ, ಆತ್ಮ ಅಥವ ಬ್ರಹ್ಮದಿಂದ ಆಗಿದೆ. ಈ 'ಆತ್ಮ ಅಥವ ಬ್ರಹ್ಮದ ಇರುವಿಕೆ'ಯನ್ನು ತಿಳಿದುಕೊಳ್ಳುವುದಕ್ಕಾಗಿಯೇ ಜೀವಾತ್ಮನಾದ ಮಾನವನ ಜನನ-ಬದುಕು-ಸಾವು. ಜೀವಾತ್ಮನು ತನಗಿರುವ ಸ್ವತಂತ್ರ-ಸಂಕಲ್ಪ ಶಕ್ತಿಯನ್ನು ಅನಂತ ಬ್ರಹ್ಮನ ದರ್ಶನಕ್ಕಾಗಿ ವಿನಿಯೋಗಿಸಬೇಕೆಂಬುದು ಪೂರ್ವನಿಶ್ಚಯವಾದದ ಅಂದರೆ, ವಿಧಿವಾದದ ತಿರುಳು. ಒಂದು ವೇಳೆ ಈ ಮಾನವ ಸಂಕಲ್ಪದ ಸ್ವಾತಂತ್ರ್ಯವನ್ನು ಕೇವಲ ಲೌಕಿಕ ಸುಖ-ಭೋಗಗಳ ಸಾಧನೆಗೆ ವ್ಯಯಮಾಡುವ ಜೀವಾತ್ಮನು ಅನಂತಕಾಲವು ನರಕ ರೂಪದ ಈ ಲೌಕಿಕ ಜೀವನ ಚಕ್ರದಲ್ಲಿ ಸಿಲುಕಿ, ಬಿಡುಗಡೆಯನ್ನು ಹೊಂದಲಾರ. ಇವರನ್ನೇ ದ್ವೈತ ದರ್ಶನವು "ನಿತ್ಯನಾರಕಿಗಳು" ಎಂದು ಕರೆದಿರಬಹುದು.

(c) ಗೀತೆಯಲ್ಲಿ, ವಿಧಿವಾದಕ್ಕೂ ಮಾನವ ಸಂಕಲ್ಪ-ಸ್ವಾತಂತ್ರ್ಯವಾದಕ್ಕೂ ನಡುವೆ ಸಮುದ್ದೇಶದ ಕೊಂಡಿ ಇರುವುದು ಕಾಣುತ್ತದೆ. ಜೀವಾತ್ಮನು "ತನ್ನ ಅಹಂಕಾರ-ಮಮಕಾರಗಳನ್ನು ಪೂರ್ಣ ತ್ಯಾಗ ಮಾಡಿ, ತನ್ನ ಇರುವಿಕೆಗೆ ಆಧಾರವಾದ ಪರಮಾತ್ಮನಲ್ಲಿ ಶರಣಾಗುತ್ತೇನೆ" ಎಂಬ ಸತ್‌ಸಂಕಲ್ಪಮಾಡಲು ತನ್ನ ಇಚ್ಛಾಸ್ವಾತಂತ್ರ್ಯವನ್ನು ಪೂರ್ಣವಾಗಿ ಬಳಸಿಕೊಂಡಾಗ, ಅವನ ಉದ್ಧಾರದ ಹೊಣೆ ಪೂರ್ಣ ಭಗವಂತನದಾಗುತ್ತದೆ.

ಮಾನವ ಜೀವನದ ಗುರಿ ನೋವಿಲ್ಲದ-ಸಾವಿಲ್ಲದ, ಅನಂತವಾದ, ಅದ್ವೈತವಾದ ಸಚ್ಚಿದಾನಂದವನ್ನು ಹೊಂದುವುದೆ ಆಗಿದೆ. ಮಾನವನು, ಈ ಗುರಿಸಾಧನೆಗಾಗಿ ಸಂಕಲ್ಪಿಸಿದರೆ, ಅದನ್ನು ಈಡೇರಿಸುವುದಾಗಿ ಭಗವಂತನು ಭರವಸೆಕೊಡುತ್ತಾನೆ. ಈ ಭರವಸೆಯು ಜೀವಾತ್ಮನ ಜನ್ಮಧಾರಣೆಗೂ ಮೊದಲೇ ಪೂರ್ವಭಾವಿಯಾಗಿ ಅಸ್ತಿತ್ವದಲ್ಲಿದೆ.

ಎಲ್ಲರ ಉದ್ಧಾರಕನಾದ ಭಗವಂತನೊಬ್ಬನು ಇರುವನು ಎಂಬುದನ್ನು, ನಾಲ್ಕು ಯೋಗಗಳ ಮೂಲಕ, ಶರಣಾಗತಿಭಾವದಿಂದ ಮನಗಾಣಬಹುದು. ಈ ಮೂಲಕ ವಿಧಿವಾದ ಮತ್ತು ಮಾನವ ಸತ್‌ಸಂಕಲ್ಪವಾದದ ಅನ್ಯೋನ್ಯ ಸಂಬಂಧವನ್ನು ತಿಳಿಯಬಹುದು.

(d) ಇಡೀ ಬ್ರಹ್ಮಾಂಡವನ್ನು, ಕಾಲ-ದೇಶಾತೀತವಾದ, ತ್ರಿಗುಣಾತೀತವಾದ, ಜನನ-ಮರಣಗಳಿಲ್ಲದ, ಅವ್ಯಕ್ತವಾದ, ಅನಂತವಾದ, ಅದ್ವೈತವಾದ, ಲೌಕಿಕ ಸ್ತರದಲ್ಲಿ ಸರ್ವಕಲ್ಯಾಣಗುಣಮಯವಾದ ಪರಮಾತ್ಮ ತತ್ತ್ವವು ಆವರಿಸಿದೆ.

ಮಾನವನಿಗೆ: ದೇಹಭಾವವಿದ್ದಾಗ, ಪರಮಾತ್ಮ ತತ್ತ್ವವು ಸಗುಣ-ಸಾಕಾರ ರೂಪ (ದ್ವೈತದರ್ಶನದ) ದೈವವಾಗಿಯೂ; ಜೀವಭಾವ ಇದ್ದಾಗ, ಮಾನವನು ಪರಮಾತ್ಮನ ಒಂದು ಅಂಶವಾಗಿಯೂ (ವಿಶಿಷ್ಟ ಅದ್ವೈತದರ್ಶನದಂತೆ); ಆತ್ಮಭಾವವಿದ್ದಾಗ (ಮಾನವ) 'ಜೀವಾತ್ಮ ಪರಮಾತ್ಮ' ಒಂದೇ ಆದ ಅಖಂಡ ಅದ್ವೈತ ಬ್ರಹ್ಮವೆಂತಲೂ ಅನುಭಾವವಾಗುತ್ತದೆ.

ಇಂತಹ ಬ್ರಹ್ಮಜ್ಞಾನವು ಲಭಿಸಿದನಂತರ, ಮಾನವನು, ಲೌಕಿಕ ಸ್ತರದಲ್ಲಿರುವ ತನ್ನ ಇಚ್ಛಾ ಸ್ವಾತಂತ್ರ್ಯಕ್ಕೆ ಅಲೌಕಿಕ ಜೀವನ ದರ್ಶನದ ಗುರಿ ಸಾಧನೆಯೊಂದನ್ನುಳಿದು ಇನ್ನಾವುದೂ ಅರ್ಥ ಹೀನ ಎಂಬ ಪರಮ ಸತ್ಯದ ಸಾಕ್ಷಾತ್ಕಾರವಾಗುತ್ತದೆ.

(a) ಬದುಕಿನ ಸತ್ಯದರ್ಶನ ಸುಲಭ ಸಾಧ್ಯವಲ್ಲ. ಈ ಸತ್ಯವು ಸರ್ವತಂತ್ರ ಸ್ವತಂತ್ರವಾದದ್ದಾಗಿದೆ. ಹುಟ್ಟಿದಂದಿನಿಂದ ಸಾಯುವವರೆಗೂ ಪರತಂತ್ರನಾಗಿಯೇ ಮಾನವನು ನೂರಾರು ಸಮಸ್ಯೆಗಳ ಮಧ್ಯೆ ಸಿಲುಕಿ ನರಳುತ್ತಿರುತ್ತಾನೆ. ಗೀತೆಯ 'ಧ್ಯಾನಯೋಗ'ದ ವಿವರಣೆಯಲ್ಲಿ ಕಂಡು ಬರುವ ಅಲೌಕಿಕ ಸ್ವಾತಂತ್ರ್ಯದ ಸಾಕ್ಷಾತ್ಕಾರದಿಂದ ಮಾನವನ ಸಂಕಟಗಳು ಇಲ್ಲವಾಗಿ, ಅವನು ಸಚ್ಚಿದಾನಂದವಾಗಿ ಇರುತ್ತಾನೆ.

ಈ ಅಲೌಕಿಕ ಸ್ವಾತಂತ್ರ್ಯವು ತಾವರೆ ಎಲೆ ನೀರಿನಲ್ಲಿದ್ದರೂ ನೀರಿಗಂಟದಂತೆ ಇರುವಂತಹ ಜೀವನ ಸ್ಥಿತಿಯಾಗಿದೆ. ಒಂದು ವೇಳೆ ಆ ಎಲೆಯು ನೀರಿನಲ್ಲಿ ಮುಳುಗಿತೆಂದರೆ, ಅದು ಕೊಳೆತು ಹೋಗುತ್ತದೆ. ಹೀಗೆಯೆ, ಅಹಂಕಾರ-ಮಮಕಾರಗಳ ಜಾಲವಾದ ಲೌಕಿಕ ಜೀವನದಲ್ಲಿ ಲೌಕಿಕ ಸ್ವಾತಂತ್ರ್ಯದಿಂದ ಸರ್ವನಾಶವಾಗು

ತ್ತದೆ. ಜೀವದ್ರವ್ಯವಾದ ಪ್ರಾಣವು ಸರ್ವಾಂತರಯಾಮಿಯಾಗಿದ್ದು, ಎಲ್ಲ ಜೀವಾತ್ಮರ ಇರುವಿಕೆಗೆ ಆಧಾರ ಸತ್ಯವಾಗಿದ್ದು, ಯಾವುದೇ ಜೀವಾತ್ಮದ ನೋವು, ನಲಿವುಗಳಿಗೆ ಒಳಗಾಗದೆ, ನಿರ್ಲಿಪ್ತವಾಗಿದೆ. ಎಲ್ಲದರೊಳಗೂ ಸರ್ವಸಾಮಾನ್ಯವಾಗಿ "ಇರುವ" ಈ ಪ್ರಾಣಶಕ್ತಿ ಅಥವ ಆತ್ಮ ತತ್ತ್ವದ ಸ್ಥಿತಿಯೆ "ನಿಜವಾದ ಇರುವಿಕೆಯ ಸ್ವಾತಂತ್ರ್ಯ" ಸ್ಥಿತಿ.

ಮಾನವನಿಗೆ, ಈ ಲೌಕಿಕ ಜೀವನದಲ್ಲಿ ಇದ್ದರೂ ಅದರ ಯಾವುದೇ ಪರಿಣಾಮಗಳಿಗೆ ಒಳಗಾಗದೆ ಸರ್ವತಂತ್ರ ಸ್ವತಂತ್ರವಾಗಿ ಇರುವುದನ್ನು ಗೀತೆಯು ತಿಳಿಸುತ್ತದೆ. ಗೀತೆಯು ಈ ಅಲೌಕಿಕ ಶಿಕ್ಷಣದ ಮುಂದೆ ಹೊಟ್ಟೆ-ಬಟ್ಟೆಗಾಗಿ ಇರುವ ಪ್ರಾಪಂಚಿಕ ಶಿಕ್ಷಣವು ಸಪ್ಪೆಯಾಗಿ ಕಾಣುತ್ತದೆ.

(b) ಗೀತೆಯಲ್ಲಿ ಜೀವನ್ಮುಕ್ತನ ಸ್ಥಿತಿ-ಗತಿಗಳ ವರ್ಣನೆಯಿದೆ. ಮುಕ್ತಿ ಎಂಬುದರ ಅರ್ಥ : ಬಂಧನಗಳಿಂದ ಬಿಡುಗಡೆ ಹೊಂದುವುದು, ಸರ್ವತಂತ್ರ ಸ್ವತಂತ್ರನಾಗಿ ಇರುವುದು. ಲೋಕದ ಬಹುಮಂದಿ ಹೇಳುತ್ತಾರೆ : "ಮನುಷ್ಯ ಸತ್ತಾಗಲೇ ಅವನಿಗೆ ಭವರೂಪಗಳಿಂದ, ಭವ ಬಂದನಗಳಿಂದ ಬಿಡುಗಡೆ" ಎಂದು. ಆದರೆ, ಮನುಷ್ಯ ಬದುಕಿರುವಾಗಲೆ ಭವರೋಗಗಳಿಂದ ಮುಕ್ತನಾಗಿರಬಲ್ಲ. ಜೀವನದ ಅಗಣಿತ ಅನುಭವಗಳನ್ನು ಸಂಪಾದಿಸಿ, ನೋವು-ನಲಿವುಗಳ ನಶ್ವರತೆಯನ್ನು ಮನಗಂಡಿರುವ ವ್ಯಕ್ತಿಯು ಸಾವನ್ನು ಪರಮಾಪ್ತ ಮಿತ್ರನಂತೆ ಕಾಣುತ್ತಾನೆ; ಆಂತರಿಕವಾಗಿ ಸರ್ವಸಂಗ ಪರಿತ್ಯಾಗಿಯಾಗಿರುತ್ತಾನೆ; ಮಾನಸಿಕ ಅಂತರವಿಟ್ಟುಕೊಂಡು, ಬದುಕಿನ ವಿವಿಧ ಪಾತ್ರಗಳಾದ ತಂದೆ-ತಾಯಿ-ಮಗ-ಮಗಳು-ಸಹೋದರ-ಸಹೋದರಿ-ಬಂಧು-ಮಿತ್ರ-ರಾಜ-ಪ್ರಜೆ-ಅಧಿಕಾರಿ-ಸೇವಕ-ಗುರು-ಶಿಷ್ಯ ಮುಂತಾದುವುಗಳ ಅಭಿನಯವನ್ನು ಪ್ರಾಮಾಣಿಕವಾಗಿ, ಪೂರ್ಣವಾಗಿ ಮಾಡುತ್ತಾನೆ. ಜೀವನ್ಮುಕ್ತನಿಗೆ ಪ್ರಾಪಂಚಿಕ ಬದುಕಿನ ಪಾತ್ರಗಳು ಉಡಿಗೆ-ತೊಡಿಗೆಗಳಿದ್ದಂತೆ, ಧರಿಸುತ್ತಾನೆ, ಕಳಚಿಡುತ್ತಾನೆ. ಆದರೆ, ಈ ಪಾತ್ರಗಳಿಂದುಂಟಾಗಬಹುದಾದ ಅಹಂಕಾರ-ಮಮಕಾರಗಳಿಗೆ ಅಂಟದೆ, ತಾವರೆ ಎಲೆಯಂತೆ ನಿರ್ಲಿಪ್ತನಾಗಿರುತ್ತಾನೆ.

(c) ಗೀತೆಯಿಂದ ಮನುಷ್ಯನಿಗೆ ದೊರಯುವ ಪರಮ ಲಾಭವೆಂದರೆ "ಸ್ಥಿತಪ್ರಜ್ಞತ್ವ" ಮತ್ತು "ಲೋಕ ಸಂಗ್ರಹ ಕಾರ್ಯದ" ಮಹತ್ವ. ಗೀತೆಯ ವಿಶ್ವರೂಪದರ್ಶನವು ಮಾನವನನ್ನು ವಿಶ್ವಮಾನವನನ್ನಾಗಿಸುತ್ತದೆ.

ಮಾನವ ಜನ್ಮ ಸ್ವರ್ಗಸುಖವಲ್ಲ; ಇದು ನೋವು-ನಲಿವುಗಳ ಸೋಲು-ಗೆಲುವುಗಳ, ಆಸೆ-ನಿರಾಸೆಗಳ, ರಾಗ-ದ್ವೇಷಗಳ, ಹೊಗಳಿಕೆ-ನಿಂದೆಗಳ, ಲಾಭ-ನಷ್ಟಗಳ, ಒಳಿತು-ಕೆಡುಕುಗಳ ಕ್ಲಿಷ್ಟವಾದ ದ್ವಂದ್ವಗಳ ತವರು. ಈ ದ್ವಂದ್ವಗಳಿಗೆ ಸಿಕ್ಕಿ ನರಳುವುದು ಸಮುದ್ರದ ಅಲೆಗಳ ಹೊಡೆತಕ್ಕೆ ಸಿಕ್ಕಿ ನುಚ್ಚುನೂರಾಗುವುದಕ್ಕಿಂತ ಸಂಕಟಕರ. ಈ ಜೀವನ ದ್ವಂದ್ವಗಳಿಂದ ಉಂಟಾಗುವ ಮಾನಸಿಕ ನೋವಿಗಿಂತ

ದೈಹಿಕ ನೋವು ಸಹನವಾದದ್ದು. ಚಿಂತೆಯೇ ಹೆಚ್ಚಾಗಿರುವ ಈ ಬದುಕು ಅಸಹನೀಯವಾಗಿ, ಪ್ರಯತ್ನ ಪೂರ್ವಕ ಸಾವಿಗೂ ದಾರಿಯಾಗುತ್ತದೆ. ಆದರೆ, ಚಿಂತೆಯನ್ನು ಚಿಂತನೆಯಿಂದ ನಾಶಮಾಡಿ, ಜೀವನ ದ್ವಂದ್ವಗಳ ಗೌಣತೆಯನ್ನೂ ನಶ್ವರತೆಯನ್ನೂ ಅರ್ಥಮಾಡಿಕೊಂಡು, ಸಾವಿಗಿಂತಲೂ ಭಯಂಕರವಲ್ಲದ ನೋವುಗಳನ್ನು ಮರೆತು, ಜೀವನ ದ್ವಂದ್ವಗಳಿಗೆ ಅತೀತವಾದ ಆತ್ಮಾನುಸಂಧಾನ ಕ್ರಿಯೆಯಲ್ಲಿ ಮನಸ್ಸನ್ನು ಸ್ಥಿರಗೊಳಿಸುವ ಶಿಕ್ಷಣವನ್ನು ಗೀತೆಯು ನೀಡುತ್ತದೆ. ಈ ಮನ ಸ್ಥೈರ್ಯ ಹೊಂದುವುದರಿಂದ ಅಥವ ಸ್ಥಿತಪ್ರಜ್ಞೆಯನ್ನು ಸಾಧಿಸುವುದರಿಂದ, ಜೀವಾತ್ಮನು, ಜೀವನ ಸಂಬಂಧಿ ಲೌಕಿಕ ಕಾರ್ಯಗಳ ಮಧ್ಯೆ ಚಳಿ–ಬಿಸಿಲು, ಗಾಳಿ–ಮಳೆಗೆ ಜಗ್ಗದ, ಕುಗ್ಗದ "ಬಾಹುಬಲಿ"ಯಂತೆ ಇರುತ್ತಾನೆ. ಜೀವನದ ಈ ಸ್ಥಿತಿಯನ್ನು "ಸ್ಥಿತಪ್ರಜ್ಞ" ಸ್ಥಿತಿ ಎಂದು ಗೀತೆಯು ಪರಿಣಾಮಕಾರಿಯಾಗಿ ವಿವರಿಸುತ್ತದೆ.

ಲೌಕಿಕ ಸುಖ–ಭೋಗಗಳ ವಸ್ತುಗಳ ಸಂಗ್ರಹವು ಪರಮ ಸ್ವಾರ್ಥವನ್ನು ಸೂಚಿಸುತ್ತದೆ. ಆದರೆ, ಅಲೌಕಿಕ ಜೀವನಾನಂದವನ್ನುಂಟುಮಾಡುವ "ಆತ್ಮಜ್ಞಾನವು"—ನಿಸ್ಸ್ವಾರ್ಥದ, ಮಹದರ್ಥವನ್ನು ಹೊಂದಿದೆ. "ಲೋಕವೇ ನಾನು; ನಾನೇ ಲೋಕ"– ಎಂಬ ಭಾವನೆಯಷ್ಟು ವಿಶಾಲವಾದದ್ದು ಇನ್ನೊಂದಿಲ್ಲ "ಎಲ್ಲವೂ ನನ್ನೊಳಗಿದೆ ; ನಾನು ಎಲ್ಲರೊಳಗಿದ್ದೇನೆ" ಎಂಬ ಸತ್ಯವು ಗೀತೆಯ ವಿಶ್ವರೂಪ ದರ್ಶನದಲ್ಲಿ ಆಗುತ್ತದೆ. ವಿಶ್ವಾತ್ಮದೃಷ್ಟಿಯ ಲೋಕ ಸಂಗ್ರಹ ಕಾರ್ಯವು (ಲೋಕದ ವೈವಿಧ್ಯಮಯ ಜೀವ-ಭಾವಗಳನ್ನು ಒಂದುಗೂಡಿಸಿ ಐಕ್ಯತೆಯನ್ನು ಸಾಧಿಸುವ ಮಹತ್ಕಾರ್ಯ) ದೈವಿಕ ಕೈಂಕರ್ಯ. ಈ ಸರ್ವೋತ್ತಮ ಕಾರ್ಯಕ್ಕೆ ಬೇಕು ಶುದ್ಧ, ಸಾತ್ವಿಕ, ನೈತಿಕ, ಧಾರ್ಮಿಕ ಹೃದಯ-ಮನಸ್ಸು, ಧರ್ಮಿಷ್ಟನಾದವನು ಮಾತ್ರ ದುಷ್ಟಶಿಕ್ಷಕನು ಶಿಷ್ಟರಕ್ಷಕನು ಆಗಿ, ಲೋಕ ಹಿತ ಕಾರ್ಯಕ್ಕಾಗಿ, ಲೋಕ ಸಂಗ್ರಹ ಜ್ಞಾನವನ್ನು (ಆತ್ಮಜ್ಞಾನವನ್ನು) ಲೋಕದಲ್ಲಿ ಹರಡುತ್ತಾನೆ. ಗೀತೆಯ ಉದ್ದೇಶವೇ ಲೋಕ ಸಂಕಟ ನಿವಾರಣೆ; ಲೋಕ ಸಂಗ್ರಹ ಕಾರ್ಯವೇ ಈ ನಿವಾರಣೋಪಾಯ. ಲೋಕದವರೆಲ್ಲ (ಜೀವಗಳು–ಭಾವಗಳು) ಒಂದಾದಾಗ, ಯಾರೂ ಯಾರನ್ನೂ ದ್ವೇಷಿಸುವುದಿಲ್ಲ. ಪ್ರೀತಿಸುತ್ತಾರೆ ; ಪರಸ್ಪರ ವಿಶ್ವಾಸದಿಂದ ವಿಶ್ವಜೀವಿಗಳಾಗಿ ಬದುಕುತ್ತಾರೆ. ಈ ವಿಶ್ವಾಸ ಪ್ರಧಾನವಾದ ಅಂದರೆ ಪರಸ್ಪರ ಪ್ರೇಮ–ತ್ಯಾಗ ಪ್ರಧಾನವಾದ ವಿಶ್ವಜೀವನದ ಸಾಧನೆಯೆ ಗೀತೆಯ ಗುರಿ. ಸಂಕುಚಿತವಾದುದನ್ನೆಲ್ಲ ತ್ಯಾಗಮಾಡಿ ವಿಶ್ವವಿಶಾಲವಾದ ಆತ್ಮಭಾವವನ್ನು ಅನುಭಾವಿಸುವುದೇ ಗೀತೆಯಲ್ಲಿ ಬರುವ ತ್ಯಾಗದ ಅರ್ಥ.

೮

(a) ಗೀತೆಯ ದೃಷ್ಟಿಯಲ್ಲಿ ವ್ಯಕ್ತಿ ಹಾಗೂ ಸಮಾಜ ಬೇರೆ ಬೇರೆ ಅಲ್ಲ. ದೇಹಕ್ಕೆ ಪ್ರಾಣ ಇರುವ ಹಾಗೆ ಸಮಾಜಕ್ಕೆ ವ್ಯಕ್ತಿ ಇದ್ದಾನೆ ಈ ವ್ಯಕ್ತಿಯ ಜೀವನ, ವ್ಯವಹಾರಿಕ ಪ್ರಪಂಚದಲ್ಲಿ, ಸಮಗ್ರ ದೃಷ್ಟಿಯ ಹಿನ್ನೆಲೆಯಲ್ಲಿ ನಡೆಯಬೇಕಾಗಿದೆ. ಇದರಿಂದ, ಈ ಪೂರ್ಣದೃಷ್ಟಿಯುಳ್ಳ ವ್ಯಕ್ತಿಯು ಸಮಾಜದ ನೋವು ನಲಿವಿನಲ್ಲಿ ಸಮಭಾಗಿಯಾಗುತ್ತಾನೆ. ನಾಲ್ಕು ಯೋಗಗಳಿಂದ ಉಂಟಾಗುವ "ಪೂರ್ಣ"ವಾದ ಪರಮಾತ್ಮಾನುಭಾವ ಅಥವ ವಿಶ್ವರೂಪದರ್ಶನದಿಂದ ಉಂಟಾಗುವ ಪೂರ್ಣದೃಷ್ಟಿಯ ಅನುಭಾವವು ಜೀವಾತ್ಮನಾದ ಮಾನವನನ್ನು ಸಂಪೂರ್ಣನಾದ ಪರಮಾತ್ಮನನ್ನಾಗಿಸುತ್ತದೆ. ಈ ಸಮಗ್ರ ಅನುಭಾವದೃಷ್ಟಿ ವ್ಯಕ್ತಿಯ ವ್ಯವಹಾರಿಕ ಜೀವನದ ಹಾಸುಹೊಕ್ಕಾಗಿ, ಅಜ್ಞಾನ ಮತ್ತು ದುಃಖ ನಾಶವಾಗಿ, "ಸುಜ್ಞಾನ ಮತ್ತು ಸುಖ" ಜೀವನ ಆಗುತ್ತದೆ.

ಗೀತೆಯಿಂದ ದೊರಕುವ ಈ ಪೂರ್ಣದೃಷ್ಟಿಯಿಂದ, ವ್ಯಕ್ತಿಯು, ಸಮಷ್ಟಿಯಲ್ಲಿ ಲೀನವಾಗಿ, ಸೃಷ್ಟಿ-ಸ್ಥಿತಿ-ಲಯಗಳ ಹಾಗೂ ವೈವಿಧ್ಯಮಯವಾಗಿರುವ ಜೀವನ ದ್ವಂದ್ವಗಳ ಪರಿಣಾಮಗಳಿಗೆ ಒಳಗಾಗದೆ, ನಿರ್ಲಿಪ್ತನಾಗಿರುತ್ತಾನೆ. ಪೂರ್ಣದೃಷ್ಟಿಯಿಲ್ಲದ ವ್ಯಕ್ತಿಯು, ತನ್ನ ವ್ಯಾವಹಾರಿಕ ಜೀವನದಲ್ಲಿ, ಬಿರುಗಾಳಿಗೆ ಸಿಕ್ಕಿ, ತರಗೆಲೆಯಂತೆ ತೂರಿಹೋಗುತ್ತಾನೆ. ಆದರೆ, ಪೂರ್ಣದೃಷ್ಟಿಯುಳ್ಳ ವ್ಯಕ್ತಿಯು, ಯುಗಧರ್ಮಕ್ಕನುಸಾರವಾಗಿ, ಸಾಮಾಜಿಕ ಜೀವನ ಸ್ಥಿತಿ-ಗತಿಗಳೊಡನೆ ಸಮಾನವಾಗಿ ಸ್ಪಂದಿಸುತ್ತಿದ್ದರೂ ತನ್ನ "ನಿಜ" ಸ್ಥಿತಿ-ಗತಿಗಳ ನೆಲೆಯನ್ನು ಭದ್ರವಾಗಿಸಿಕೊಂಡು ಶಾಶ್ವತವಾಗಿರುತ್ತಾನೆ, ವಿಶ್ವಮಯವಾಗಿರುತ್ತಾನೆ.

(b) ಜೀವಾತ್ಮನ "ಇರುವಿಕೆ"ಯು ನಿಜಸ್ಥಿತಿ—ಅವನು ಪರಮಾತ್ಮನಾಗಿರುವಿಕೆ. ಇದಕ್ಕಾಗಿ ಅವನು ಮಾಡಬೇಕಾಗಿರುವ ಸಾಧನೆ "ಸ್ವಧರ್ಮಪರಿಪಾಲನೆ"—ಮತ್ತು ಅದರಿಂದುಂಟಾಗುವ ಫಲವನ್ನು ಈಶ್ವರಾರ್ಪಣಮಾಡುವುದೇ ಆಗಿದೆ.

ಶ್ರೀಕೃಷ್ಣನು ಸ್ನೇಹಿತನಾದ ಅರ್ಜುನನಿಗೆ ಯುದ್ಧ ಭೂಮಿಯಲ್ಲಿ ಹೇಳುವ ಮಾತು ಇಡೀ ಮಾನವ ಕುಲಕ್ಕೇ ಕೊಡುವ "ನಿಜ ಜೀವನಧರ್ಮದ" ಉಪದೇಶವಾಗಿದೆ.

ಶ್ರೀಕೃಷ್ಣನು : "ಅರ್ಜುನ, ನೀನು ಕ್ಷತ್ರಿಯ, ಲೋಕ ಶಾಂತಿಗೆ ಆತಂಕ ಉಂಟುಮಾಡುವವರನ್ನು ನಾಶಮಾಡಿ, ಪುನಃ, ಅಮೂಲ್ಯವಾದ ಶಾಂತಿಯನ್ನು ಲೋಕದಲ್ಲಿ ನೆಲೆಗೊಳಿಸುವುದು ಕ್ಷತ್ರಿಯನ ಧರ್ಮ, ನೀನಾದರೊ ಅಹಂಕಾರ-ಮಮಕಾರ-ಪಾಪ ಪ್ರಜ್ಞೆಗಳ ಮಾಯಾಜಾಲಕ್ಕೆ ಸಿಲುಕಿ, ನನ್ನವರನ್ನು ನಾನೇ ನಾಶ ಮಾಡಬೇಕೆ? ಇದು ಪಾಪವಲ್ಲವೆ? ಎಂದು ಮುಂತಾಗಿ ವಿಷಾದಿಸುತ್ತಿರುವೆ. ಈ ವಿಷಾದ ಮನೋಭಾವ ಹೇಡಿಯದು; ಕ್ಷತ್ರಿಯನದಲ್ಲ—ಎಂದು ಹೇಳುತ್ತಾನೆ. ನಂತರ "ವಿಶ್ವರೂಪದರ್ಶನ" ಮಾಡಿಸಿ, ಸೃಷ್ಟಿ-ಸ್ಥಿತಿ-ಲಯಗಳು, ಲಾಭ-ನಷ್ಟಗಳು,

ಪಾಪ-ಪುಣ್ಯಗಳು, ಧರ್ಮ-ಅಧರ್ಮಗಳು, ಹಿಂಸೆ-ಅಹಿಂಸೆಗಳು ಕೇವಲ ಗೌಣ ಕ್ರಿಯೆಗಳು; ವಿಶ್ವನಾಟಕದಲ್ಲಿನ ವಿಭಿನ್ನ ದೃಶ್ಯಗಳು ; ಸತ್ಯಗಳಲ್ಲ, ಈ ಎಲ್ಲವು ಪರ ಬ್ರಹ್ಮನಾದ ನನ್ನಲ್ಲಿಯೇ ಜರುಗುತ್ತವೆ, ಸಮುದ್ರದಿಂದ ಮೇಲೆದ್ದು ಪುನಃ ಸಮುದ್ರ ದಲ್ಲಿಯೇ ಲೀನವಾಗುವ ವಿವಿಧರೂಪ-ಭಾವದ ಅಲೆಗಳಂತೆ, ಕ್ಷತ್ರಿಯನ ಪಾತ್ರವನ್ನು ನಿರ್ವಹಿಸುತ್ತಿರುವ ನೀನು ನಿಮಿತ್ತ ಮಾತ್ರ. ನಿನ್ನ ಕ್ಷಾತ್ರಧರ್ಮ ಪರಿಪಾಲನೆ ಯಿಂದುಂಟಾಗುವ ಫಲಾಫಲಗಳನ್ನು ನನಗರ್ಪಿಸುವ ಭಾವವನ್ನು ತಳೆದು ಕಾರ್ಯೋನ್ಮುಖನಾಗು, ಸ್ಥಿತ ಪ್ರಜ್ಞನಾಗಿ, ಲೋಕ ಸಂಗ್ರಹಕ್ಕಾಗಿ ಯುದ್ಧ ಮಾಡುತ್ತಾ, ಜೀವಾತ್ಮನಾದ ನಿನ್ನ "ಇರುವಿಕೆ"ಯ ನಿಜಸ್ಥಿತಿಯಾದ ಪರಮಾತ್ಮ ನಾದ ನನ್ನಲ್ಲಿ ಒಂದಾಗು"–ಎನ್ನುತ್ತಾನೆ.

ಗೀತೆಯ ಈ ಸಂದೇಶವನ್ನು, ಮಾನವರೆಲ್ಲರು, ಇದು ತಮ್ಮೆಲ್ಲರಿಗಾಗಿಯೇ ಮಾಡಿರುವ "ಜೀವನ್ಮುಕ್ತಿಯ" ಸಂದೇಶವೆಂದು ನಂಬಿ, ತಮ್ಮ ತಮ್ಮ ಜೀವನ ವೃತ್ತಿ ಪ್ರವೃತ್ತಿಗಳನ್ನೆ ತಮ್ಮ ಜೀವನ ಧರ್ಮ (ಸ್ವಧರ್ಮ) ವೆಂದು ತಿಳಿದು, ಈಶ್ವರಾರ್ಪಣಭಾವದಿಂದ ಅಥವ ನಿಷ್ಕಾಮಭಾವದಿಂದ ಕರ್ತವ್ಯಪಾಲನೆಗೆ ಸ್ಥಿತ ಪ್ರಜ್ಞರಾಗಿ, ಪೂರ್ಣವಾದ ಅದ್ವೈತದೃಷ್ಟಿಯಿಂದ ತೊಡಗಿದಾಗ, ಅವರು, ತಮ್ಮ "ಇರುವಿಕೆಯ" ನಿಜಸ್ಥಿತಿಯಾದ ಪರಮಾತ್ಮತ್ವವನ್ನು ಹೊಂದುವರು.

ಜೀವಾತ್ಮನಾದ ಮಾನವನು ತಂದೆಯಾಗಿ, ತಾಯಿಯಾಗಿ, ಮಕ್ಕಳಾಗಿ, ಸಹೋದರ–ಸಹೋದರಿಯರಾಗಿ, ಬಂಧುವಾಗಿ, ಗೆಳೆಯನಾಗಿ, ರಾಜ-ಪ್ರಜೆಯಾಗಿ, ಒಡೆಯ–ಸೇವಕನಾಗಿ, ಗುರು–ಶಿಷ್ಯನಾಗಿ, ರೈತ–ಕಾರ್ಮಿಕ–ವ್ಯಾಪಾರಿಯಾಗಿ, ಮುಂತಾದ ನೂರಾರು ಬಗೆಯ ಜೀವನವನ್ನು ನಡೆಸಬೇಕಾಗುತ್ತದೆ. ಇಂತಹ ಸಂದರ್ಭಗಳಲ್ಲಿ, ವ್ಯಕ್ತಿಯು, ಪ್ರಸ್ತುತ ತನ್ನ ಕೈಯಲ್ಲಿರುವ ಕೆಲಸವನ್ನು ಶ್ರದ್ಧೆ ಯಿಂದ, ಪ್ರಾಮಾಣಿಕವಾಗಿ, ಪೂರ್ಣವಾಗಿ, ಪರಿಶುದ್ಧವಾಗಿ ಮಾಡುತ್ತ, ಆಯಾಯ ಕರ್ಮಫಲಗಳನ್ನು ಈಶ್ವರನಿಗೆ ಶರಣಾಗತ ಭಾವದಿಂದ ಅರ್ಪಿಸುತ್ತ ಕರ್ಮಯೋಗಿ ಯಾಗಬೇಕು ಕ್ಷತ್ರಿಯನಾದ ಅರ್ಜುನನ ಧರ್ಮ–ಕರ್ಮ ದುಷ್ಟಶಿಕ್ಷಕ-ಶಿಷ್ಟ ರಕ್ಷಕನಾದರೆ, ವಿದ್ಯಾರ್ಥಿಯಾದ ಅಥವ ಜ್ಞಾನಾರ್ಥಿಯಾದ ನನ್ನ ಧರ್ಮ ಆತ್ಮ ವಂಚನೆಯಿಲ್ಲದೆ ಪ್ರಾಮಾಣಿಕವಾದ ಪ್ರಯತ್ನದಿಂದ ಜ್ಞಾನಾರ್ಜನೆ ಮಾಡುವುದೇ, ಆಗಿದೆ.

ಹೀಗೆ, ಸಮಾಜದ ರಕ್ತನಾಳಗಳಂತೆ ಇರುವ ವಿವಿಧ ಜೀವನ ವೃತ್ತಿಗಳನ್ನು ಅವಲಂಬಿಸಿರುವ ಪ್ರಜೆಗಳು, ಅವರವರ ಜೀವನ ವೃತ್ತಿಗಳನ್ನೇ ಅವರವರ ಜೀವನ ಧರ್ಮ (ಸ್ವಧರ್ಮ) ವೆಂದು ನಂಬಿ, ಕರ್ಮಯೋಗದ ರಹಸ್ಯವಾದ ನಿಷ್ಕಾಮಭಾವ ದಿಂದ ಸ್ವಧರ್ಮಪರಿಪಾಲನೆ ಮಾಡಬೇಕು ಮತ್ತು ಕರ್ಮಫಲಗಳನ್ನು ಈಶ್ವರನಿಗೆ ಅರ್ಪಿಸಬೇಕು. ಈ ರೀತಿಯ ಜೀವನವು ಮಾನವನಾದ ಜೀವಾತ್ಮನನ್ನು ಪರಮಾತ ನನ್ನಾಗಿಸುತ್ತದೆ. ಇದೇ ಗೀತೆಯ ಯೋಗ ಸಂದೇಶ. ಸಮದೃಷ್ಟಿ, ವಿಶ್ವಾಸ

ಪ್ರಧಾನ ವಿಶ್ವವಿಶಾಲ ದೃಷ್ಟಿಯನ್ನು ಹೊಂದುವುದೆ ಯೋಗದ ಅರ್ಥ. ಇಂತಹ ಯೋಗದೃಷ್ಟಿಯನ್ನು ಹೊಂದಿ ಯೋಗಿಯಾಗುವ ಜೀವಾತ್ಮನು, ಎಲ್ಲರೀತಿಯ ಸಂಕುಚಿತಗಳನ್ನು, ಎಲ್ಲರೀತಿಯ ನೋವುಂಟುಮಾಡುವ ಬಂಧಗಳನ್ನು, ಎಲ್ಲ ರೀತಿಯ ಜೀವನ ದ್ವಂದ್ವಗಳನ್ನು ಮೆಟ್ಟಿನಿಂತು, ಗುಣಾತೀತವಾದ, ಭಾವಾತೀತ ವಾದ, ಸರ್ವಾಂತರಯಾಮಿಯಾದ, ಸರ್ವಜ್ಞವಾದ, ಸರ್ವಶಕ್ತವಾದ, ಕಲ್ಯಾಣ ಮಯವಾದ ಪರಮಾತ್ಮನಾಗಿ, ವಿಶ್ವಾತ್ಮನಾಗಿ, ವಿಶ್ವಮಾನವನಾಗುವನು. ವಿಶ್ವ ಜೀವಿಯಾಗುವನು, ಇಡೀ ವಿಶ್ವವೇ ಆಗುವನು.

ಕ. ಮ. ವಿಶಾಲಾಕ್ಷಿ

ಧಾರ್ಮಿಕ ಹಿನ್ನೆಲೆಯಲ್ಲಿ ಕರ್ನಾಟಕದ ರಾಜಲಾಂಛನಗಳು

ಕರ್ನಾಟಕವನ್ನು ಆಳಿ ಅಳಿದ ಪ್ರಮುಖ ರಾಜಸಂತತಿಗಳೆಂದರೆ ಶಾತವಾಹನ, ಕದಂಬ, ಗಂಗ, ಚಾಲುಕ್ಯ, ರಾಷ್ಟ್ರಕೂಟ, ವಿಜಯನಗರ ರಾಜರುಗಳು. ಈ ಎಲ್ಲ ರಾಜ ಸಂತತಿಯವರು ತಮ್ಮ ಸಾರ್ವಭೌಮತ್ವವನ್ನು ದೃಢೀಕರಿಸಲು ಅಧಿಕೃತ ಲಾಂಛನ ಗಳನ್ನು ಹೊಂದಿದ್ದರು. ಶಾತವಾಹನರ ಲಾಂಛನದ ಬಗ್ಗೆ ಶಾಸನ ಮಾಹಿತಿ ದೊರೆಯುವುದಿಲ್ಲ. ಆದರೆ ಕದಂಬರು ಸಿಂಹಲಾಂಛನವನ್ನೂ, ಗಂಗರು ಗಜ ಲಾಂಛನವನ್ನೂ, ಚಾಲುಕ್ಯರು, ವಿಜಯನಗರ ಅರಸರು ವರಾಹ ಲಾಂಛನವನ್ನೂ, ರಾಷ್ಟ್ರಕೂಟರು ಗರುಡ ಲಾಂಛನವನ್ನೂ, ಹೊಯ್ಸಳರು ಶಾರ್ದೂಲ ಲಾಂಛನವನ್ನೂ ಹೊಂದಿರುವುದು ಶಾಸನಗಳಿಂದ ವಿಧಿತವಾಗುತ್ತದೆ.

ಲಾಂಛನ ಎಂದರೆ ಸಾರ್ವಭೌಮತ್ವವನ್ನು ಸೂಚಿಸುವ ಅಧಿಕೃತ ಚಿನ್ಹೆ ಅಥವಾ ಸಂಕೇತ. ಯಾವುದೇ ಒಂದು ದಾಖಲೆಯು ಅಧಿಕೃತತ್ವವನ್ನು ಪಡೆಯಲು ರಾಜನ ಲಾಂಛನವಿದ್ದೇ ಇರಬೇಕು. ಲಾಂಛನವಿರದ ದಾಖಲೆ ಅಧಿಕೃತತ್ವವನ್ನು ಪಡೆಯಲಾರದು. 'ಲಾಂಛನವನ್ನು ಹೊಂದಿರುವವನು ಮಾತ್ರ ರಾಜ, ಬರಿಯ ರಾಜ ರಾಜನೇ ಅಲ್ಲ' ಹೀಗೆಂದು ಸ್ಮೃತಿಗ್ರಂಥವೊಂದು ಹೇಳುತ್ತದೆ.[1] ಲಾಂಛನ ರಾಜತ್ವಕ್ಕೆ ಭೂಷಣಪ್ರಾಯವಾಗಿತ್ತು.

ಲಾಂಛನಗಳನ್ನು ಶಾಸನಗಳಲ್ಲಿ, ನಾಣ್ಯಗಳಲ್ಲಿ, ಕೆಲವೊಮ್ಮೆ ರಾಜಧ್ವಜದ ಮೇಲೆ ಕಾಣಬಹುದು. ಶಾಸನಗಳಲ್ಲಿ ಅಂದರೆ ಶಿಲಾಶಾಸನಗಳಿಗಿಂತ ತಾಮ್ರ ಶಾಸನಗಳಲ್ಲಿ ಲಾಂಛನಗಳು ಇದ್ದೇ ಇರಬೇಕು. ಶಿಲಾಶಾಸನಗಳು ಯಾರ ಅಪ್ಪಣೆ ಪ್ರಕಾರ ಅಥವಾ ಯಾರ ಕಾಲದಲ್ಲಿ ಹುಟ್ಟಿಕೊಂಡಿದ್ದವೋ ಆ ರಾಜನ ಸಾರ್ವ ಭೌಮತ್ವವನ್ನು ಅಥವಾ ಅಧಿಕಾರವನ್ನು ನಿಂತಿರುವ ಜಾಗದಲ್ಲೇ ಅನಿವಾರ್ಯವಾಗಿ ಪ್ರಸ್ಥಾಪಿಸುತ್ತವೆ. ಆದರೆ ತಾಮ್ರಶಾಸನದ ವಿಷಯ ಹೀಗಲ್ಲ. ಶಾಸನದಲ್ಲಿ

1 ಶಾಸನ ಮತ್ತು ಗದ್ಯ—ಪುಟ 2

ಉಕ್ತವಾಗಿರುವ ಸ್ಥಳಗಳನ್ನು ಗುರುತಿಸುವುದೇ ಕಷ್ಟ. ಶಾಸನಗಳು ಸ್ಥಳದಿಂದ ಸ್ಥಳಕ್ಕೆ ಸಾಗಿಸಬಲ್ಲವಾಗಿದ್ದವು. ಅಲ್ಲದೆ ವೈಯುಕ್ತಿಕ ದತ್ತಿಯ ವಿಷಯಗಳು ಇದ್ದುದರಿಂದ ತಾಮ್ರಶಾಸನವು ರಾಜನ ಮುದ್ರೆಯಿಂದ ಅಧಿಕೃತತ್ವವನ್ನು ಪಡೆಯ ಬೇಕಾಗಿತ್ತು. ಆದ್ದರಿಂದ ತಾಮ್ರಶಾಸನಗಳಲ್ಲಿ ಮುದ್ರೆಗಳು ಹೆಚ್ಚು.

ಸಾಮಾನ್ಯವಾಗಿ ತಾಮ್ರಶಾಸನದಲ್ಲಿ ಏಕೈಕ ಪಟವಿರುವುದು ಕಡಿಮೆ. ಏಕೈಕ ಪಟದಲ್ಲಿ ಮುದ್ರೆಯನ್ನು ಪಟಗಳಿಗೆ ಬೆಸೆಯುತ್ತಿದ್ದರು. ಶಾಸನ ಪಂಕ್ತಿಯ ಮೊದಲು, ಎಡಪಕ್ಕದಲ್ಲಿ ಮತ್ತು ಕೆಲವೊಮ್ಮೆ ಮೇಲ್ಭಾಗದಲ್ಲಿ ಮುದ್ರೆಯನ್ನು ಲಗತ್ತಿಸುವುದು ವಾಡಿಕೆಯಾಗಿತ್ತು.[1]

ಒಂದಕ್ಕಿಂತ ಹೆಚ್ಚು ಪಟಗಳಿದ್ದರೆ ಎಲ್ಲ ಪಟಗಳನ್ನು ಕೂಡಿಸುವ ಒಂದು ಉಂಗುರವಿರುತ್ತದೆ. ಆ ಉಂಗುರದ ಮೇಲೆ ದಾನ ಕೊಡುವವನ ಲಾಂಛನ ಇರುತ್ತದೆ. ಇದರೊಂದಿಗೆ ಕೆಲವೊಮ್ಮೆ ರಾಜನ ಸ್ವಹಸ್ತಾಕ್ಷರವೂ ಇರುತ್ತದೆ. "ಇದು ನನ್ನ ಸ್ವಹಸ್ತ" ಅಥವಾ "ಇದು ನನ್ನ ಸಂತೋಷ" ಎಂಬರ್ಥದ ಶಬ್ದಗಳಿಂದ ಅದು ಸಾಮಾನ್ಯವಾಗಿ ಮೊದಲಾಗುತ್ತಿತ್ತು.[2]

ರಾಜಲಾಂಛನಗಳು ಕೆಲವೊಮ್ಮೆ ರಾಜಧ್ವಜದ ಮೇಲೆ ಇರುವ ನಿದರ್ಶನ ಗಳುಂಟು. ಮಹಾಕಾವ್ಯಗಳ ಪ್ರಕಾರ ಲಾಂಛನವನ್ನು ರಾಜರು ಕಾಳಗಕ್ಕೆ ಹೊರಡುವ ರಥದ ಮೇಲೆ ಹಾಕಿಸಿಕೊಳ್ಳುತ್ತಿದ್ದರು. ಮಹಾಭಾರತದ ಭೀಷ್ಮನು ತಾಳಧ್ವಜ ಮತ್ತು 5 ಹಳದಿ ನಕ್ಷತ್ರಗಳನ್ನು ಮತ್ತು ನೀಲಿ ರೇಷ್ಮೆ ಧ್ವಜವನ್ನು ಹೊಂದಿದ್ದನು. ದ್ರೋಣನೂ ಕೂಡ ಎರಡು ಧ್ವಜವನ್ನು ಹೊಂದಿದ್ದನು : ರಾಷ್ಟ್ರ ಕೂಟರು ಪಾಳಿಧ್ವಜವನ್ನು ಹೊಂದಿದ್ದರು. ಅವರ ಲಾಂಛನವೇನೋ ಗರುಡ ಆದರೆ ಶತ್ರುವನ್ನು ಗೆದ್ದು ಪಾಳಿಧ್ವಜವನ್ನು ಗಳಿಸಿದ್ದರು. ಬಾದಾಮಿ ಚಾಲುಕ್ಯರ ಲಾಂಛನ ವರಾಹ. ಅವರೂ ಕೂಡ ಶತ್ರುಗಳನ್ನು ಜಯಿಸಿ ಪಾಳಿಧ್ವಜವನ್ನು ಸಂಪಾದಿಸಿ ಕೊಂಡಿದ್ದರೆಂದು ವಿನಯಾದಿತ್ಯನ ನೆಸರಿ ಶಾಸನ ಹೇಳುತ್ತದೆ.[3]

ಲಾಂಛನಗಳಿಗೆ ನಿಯಮಿತವಾದ ಒಂದೇ ಆಕಾರವಿದ್ದಂತೆ ತೋರುವುದಿಲ್ಲ. ಚೌಕವಾಗಿ, ಅಂಡಾಕಾರವಾಗಿ, ಅರ್ಧವೃತ್ತವಾಗಿ, ಇತ್ಯಾದಿ ಆಕಾರಗಳಲ್ಲಿ ಲಭ್ಯ ವಾಗಿವೆ.

ಲಾಂಛನಗಳು ಯಾವುದೇ ರೂಪ, ಆಕಾರಗಳಲ್ಲಿದ್ದರೂ ಕರ್ನಾಟಕದ ಐತಿಹಾಸಿಕ ಪರಂಪರೆಯಲ್ಲಿ ಮಹತ್ವದ ಸ್ಥಾನವನ್ನು ಅಲಂಕರಿಸಿವೆ. ಸಾರ್ವಭೌಮತ್ವ

---

1 ಶಾಸನಶಾಸ್ತ್ರ ಪರಿಚಯ—ಪುಟ 61

2 ಶಾಸನ ಮತ್ತು ಗದ್ಯ—ಪುಟ—8

3 Indian Epigraphy–page 154

ವನ್ನು ದೃಢೀಕರಿಸುವುದಲ್ಲದೆ ರಾಜಸಂತತಿಯ ಉಗಮದ ಬಗ್ಗೆ ಮತ್ತು ಧಾರ್ಮಿಕ ಜೀವನದ ಮೇಲೆ ಬೆಳಕನ್ನು ಚೆಲ್ಲುತ್ತವೆ.

ಕನ್ನಡ ನಾಡನ್ನು ಆಳಿದ ಪ್ರಥಮ ದೊರೆಗಳೆಂದರೆ ಕದಂಬರು. ಇವರ ವಂಶ ವೃತ್ತಾಂತವನ್ನು ತಿಳಿಸುವ ತಾಳಗುಂದ ಶಾಸನದ ಪ್ರಕಾರ "ಇವರು ಬ್ರಾಹ್ಮಣರು ಹಾಗೂ ಹಾರೀತಿ ಪುತ್ರರು, ಅವರ ಮನೆಯ ಬಳಿಯಲ್ಲಿ ಕದಂಬ ವೃಕ್ಷಗಳ ವನವಿತ್ತು. ಆ ವನದಲ್ಲಿ ವಾಸಿಸುವವಳಾದ ಲಲಿತೆಯ ಆರಾಧನೆಗೂ ಕದಂಬವೃಕ್ಷಕ್ಕೂ ಸಂಬಂಧವಿದೆ. ಅಂತೆಯೇ ಅನಂತರದಲ್ಲಿ ಕದಂಬರು ಪೂಜಿಸಿದ ಶಿವನನ್ನು ಮಧುಕೇಶ್ವರ ಅಥವಾ ಮೋಹವಾವೃಕ್ಷದ ಅಧಿದೇವತೆಯೆಂದೂ ಕರೆಯಲಾಗಿದೆ. ಆದುದರಿಂದ ಕದಂಬವೃಕ್ಷವು ಆ ವಂಶದ ಲಾಂಛನವಾಗಿದ್ದಿರಬಹುದು[1] ಎಂದಿದ್ದಾರೆ. ಆದರೆ ಕದಂಬ ವೃಕ್ಷವು ಯಾವ ಶಾಸನಗಳಲ್ಲಿಯೂ ಕದಂಬರ ಲಾಂಛನದಂತೆ ಕಂಡು ಬರುವುದಿಲ್ಲ. ಕದಂಬರ ಶಾಸನಗಳಲ್ಲಿ ನಮಗೆ ದೊರೆತ ಲಾಂಛನವೆಂದರೆ ಸಿಂಹ ಲಾಂಛನ. ಕದಂಬ ವೃಕ್ಷವು ಲಾಂಛನವಾಗಿತ್ತು ಎಂದು ಹೇಳುವುದು ಊಹೆಯೇ ಹೊರತು ವಾಸ್ತವವಲ್ಲ. ಶಾಸನಗಳಲ್ಲಿ ದೊರೆತ ಮಾಹಿತಿಯ ಪ್ರಕಾರ ಸಿಂಹವೇ ಅದರ ಲಾಂಛನವಾಗಿದೆ.

ಬ್ರಾಹ್ಮಣ ಮನೆತನದಲ್ಲಿ ಜನಿಸಿದ ಮಯೂರಶರ್ಮನು ಧರ್ಮಶಾಸ್ತ್ರಗಳಿಗೆ ಅನುಗುಣವಾಗಿ ಧರ್ಮಾಭ್ಯಾಸಮಾಡಿ ವೇದಾಧ್ಯಯನ ನಿಪುಣನಾಗಿ ತನ್ನ ಗುರು ವಿನೊಂದಿಗೆ ಪಲ್ಲವರ ಘಟಿಕಾಸ್ಥಾನಕ್ಕೆ ಹೋಗಿದ್ದಾಗ, ಪಲ್ಲವ ಅಧಿಕಾರಿಗಳ ನಡವಳಿಕೆ ಯಿಂದ ಕುಪಿತನಾಗಿ ಬ್ರಾಹ್ಮಣತ್ವವನ್ನು ತ್ಯಜಿಸಿ ಕ್ಷಾತ್ರವೃತ್ತಿಯನ್ನು ಅನುಸರಿಸು ತ್ತಾನೆ. "ದರ್ಭೆಯ ಹುಲ್ಲನ್ನೇ ಹಿಡಿದು ಅಭ್ಯಾಸವಾಗಿದ್ದ ಕೈಗಳು ಈಗ ಖಡ್ಗವನ್ನು ಹಿಡಿದು ದುರಭಿಮಾನಿ ಪಲ್ಲವರನ್ನು ಸದೆ ಬಡಿಯಲು ಪಣತೊಟ್ಟವು.[2] ಮಯೂರ ಶರ್ಮನಿಂದ ಸ್ಥಾಪಿಸಲ್ಪಟ್ಟ ರಾಜವಂಶ ಕದಂಬವಂಶವಾಯಿತು. ಕದಂಬರು ತಮ್ಮ ಮನೆತನದ ಗೌರವವನ್ನು ಹೆಚ್ಚಿಸಿಕೊಳ್ಳಲು ಶಿವ ಪಾರ್ವತಿ ವಂಶಸ್ತರೆಂದೂ ಪಾರ್ವತಿ ಪರಮೇಶ್ವರರು ಸಹ್ಯಾದ್ರಿಯಲ್ಲಿ ಕದಂಬವೃಕ್ಷದ ಕೆಳಗೆ ಕ್ರೀಡಿಸುತ್ತಿರುವಾಗ ಒಂದು ಗಂಡುಮಗು ಹುಟ್ಟಿತೆಂದೂ, ಅವನಿಂದ ಕದಂಬ ವಂಶ ಸ್ಥಾಪಿತವಾಯಿತೆಂದು ಹೇಳಿ ಕೊಳ್ಳುತ್ತಾರೆ. ಆದರೆ ಇವೆಲ್ಲ ಕಥೆಯ ರೂಪದಲ್ಲಿವೆ ಎಂಬುದಂತೂ ಸತ್ಯ. ಅಂತೂ ಕದಂಬರು ಬ್ರಾಹ್ಮಣರು ಮುಂದೆ ಕ್ಷತ್ರಿಯ ವೃತ್ತಿಯನ್ನು ಅವಲಂಬಿಸಿದರೆಂಬ ಅಂಶ ವನ್ನು ಮಾತ್ರ ನಾವು ಒಪ್ಪಿಕೊಳ್ಳಬಹುದು.[3]

---

1 ಕರ್ನಾಟಕ ಪರಂಪರೆ, ಪುಟ 133

2 ಕರ್ನಾಟಕ ಪರಂಪರೆ, ಪುಟ 133

3 ಕರ್ನಾಟಕದ ಇತಿಹಾಸ, ಪುಟ128

ಮಯೂರಶರ್ಮನಿಂದ ಸ್ಥಾಪಿಸಲ್ಪಟ್ಟ ಕದಂಬರು ಸಿಂಹ ಲಾಂಛನವನ್ನು ಹೊಂದಿದ್ದರು. "ಪ್ರಾಚೀನ ಕಾಲದಿಂದಲೂ ಕರ್ನಾಟಕ ರಾಜರು—ಮೃಗಯಾ-ಬೇಟೆಯಾಡುವುದರಲ್ಲಿ ನುರಿತವರು, ಕದಂಬರು ಸಿಂಹಲಾಂಛನರು, ಚಾಲುಕ್ಯರ ರಾಜ ಚಿಹ್ನೆ ವರಾಹ, ಗಂಗರು ಆನೆಯನ್ನು ರಾಜ್ಯ ಚಿನ್ಹೆಯಾಗಿಯೂ, ಹೊಯ್ಸಳರು ಹುಲಿಯನ್ನು ರಾಜ್ಯ ಚಿನ್ಹೆಯಾಗಿಯೂ ಮಾಡಿಕೊಂಡಿದ್ದರು. ವಿಜಯನಗರ ರಾಜರು ವರಾಹ ಲಾಂಛನರು. ಈ ಮೃಗಸಂಪತ್ತು ಕರ್ನಾಟಕಕ್ಕೆ ವಿಶೇಷವಾದ ಗೌರವವನ್ನು ತಂದುಕೊಟ್ಟಿತ್ತು. ಔತ್ತರೇಯರೂ ವಿದೇಶಿಯರೂ ಬೇಟೆಯಾಡಲಿಕ್ಕೆ ಕರ್ನಾಟಕದ ಅರಣ್ಯಗಳಿಗೆ ಬರುತ್ತಿದ್ದರೆಂದು ತಿಳಿಯುತ್ತದೆ.[1] ಈ ಹೇಳಿಕೆಯಿಂದ ಕರ್ನಾಟಕದಲ್ಲಿ ಅರಣ್ಯ ಸಂಪತ್ತು ಅಧಿಕವಾಗಿದ್ದು ಶೌರ್ಯಪ್ರವೃತ್ತಿಗೆ ಹೆಸರಾಗಿದ್ದ ಕರ್ನಾಟಕದ ರಾಜರು ಶೌರ್ಯದ ಪ್ರತೀಕವಾಗಿ ಮೃಗಗಳನ್ನೇ ತಮ್ಮ ಲಾಂಛನದಲ್ಲಿ ಬಳಸಿದ್ದಿರಬಹುದು. ಕದಂಬರು ಮೃಗಗಳ ರಾಜ ಸಿಂಹವನ್ನೇ ಲಾಂಛನವಾಗಿಟ್ಟುಕೊಂಡಿದ್ದರು. ಮೃಗೇಶವರ್ಮ ಎಂದರೆ ಮೃಗಗಳ ಅಧಿಪತಿ ಎಂದು ಅರ್ಥ. ಹಲವು ತಾಮ್ರ ಶಾಸನಗಳಲ್ಲಿ ಲಾಂಛನವಿರದೆ ಮೃಗೇಶ ಎಂದು ರಾಜನ ಹೆಸರಿರುತ್ತದೆ.[2] ಆದರೆ ಧಾರ್ಮಿಕವಾಗಿ ಹೇಳುವುದಾದರೆ ಕದಂಬರು ವೈಷ್ಣವ ಧರ್ಮದಲ್ಲಿ ಆಸಕ್ತಿ ಹೊಂದಿದ್ದ ಬಗ್ಗೆ ಮಾಹಿತಿ ದೊರೆಯುತ್ತದೆ. ಸಿಂಹವೂ ಕೂಡ ವಿಷ್ಣುವಿನ ಅವತಾರಗಳಲ್ಲಿ ಒಂದಾಗಿದೆ. ಅಲ್ಲದೆ ಕನ್ನಡದ ಪ್ರಪ್ರಥಮ ಶಾಸನವಾದ ಹಲ್ಮಿಡಿ ಶಾಸನದಲ್ಲಿ ಅಚ್ಯುತ ಮತ್ತು ಸುದರ್ಶನ ಚಕ್ರದ ಬಗ್ಗೆ ನಾಂದಿಪದ್ಯವನ್ನು ಗಮನಿಸಿದಾಗ ಕದಂಬರು ವೈಷ್ಣವ ಮತಾವಲಂಬಿಗಳೇ ಇರಬಹುದು ಅಲ್ಲದೆ ಕದಂಬ ರಾಜರುಗಳು ರಘು, ಭಗೀರಥ, ಕೃಷ್ಣವರ್ಮ, ಕಾಕುಸ್ಥವರ್ಮ, ಹರಿವರ್ಮ, ಇತ್ಯಾದಿ ಹೆಸರುಗಳನ್ನು ಹೊಂದಿದ್ದರು; ಇವು ನಾರಾಯಣನ ವಿವಿಧ ನಾಮಗಳಾಗಿವೆ. ಅಲ್ಲದೆ ಮಯೂರವರ್ಮನು ವೈದಿಕ ಪರಂಪರೆಯನ್ನು ಹೊಂದಿದ್ದು ವೇದಾಧ್ಯಯನ ನಿಪುಣನಾಗಿದ್ದನೆಂದಮೇಲೆ ಅವನೂ ಕೂಡ ಮೂಲದಲ್ಲಿ ವೈಷ್ಣವನೇ ಆಗಿದ್ದನು. ಧಾರ್ಮಿಕ ಆಸಕ್ತಿಯನ್ನು ಪ್ರತಿಬಿಂಬಿಸುವ ಉದ್ದೇಶದಿಂದ ಕದಂಬರು ಸಿಂಹವನ್ನು ತಮ್ಮ ಲಾಂಛನವಾಗಿಟ್ಟುಕೊಂಡಿದ್ದರು.

ಕದಂಬರ ನಂತರ ಕನ್ನಡನಾಡನ್ನು ದೀರ್ಘಕಾಲ ಆಳಿದ ದೊರೆಗಳೆಂದರೆ ಗಂಗರು. ಇವರು ಮದ ಗಜೇಂದ್ರನನ್ನು ಲಾಂಛನವಾಗಿ ಇಟ್ಟುಕೊಂಡಿದ್ದರು. ತಲಕಾಡು ಇವರ ರಾಜಧಾನಿ. ಗಂಗರು ಉತ್ತರ ಭಾರತದ ಇಕ್ಷ್ವಾಕು ಸಂತತಿಗೆ ಸೇರಿದವರೆಂದೂ ಅಯೋಧ್ಯೆಯಿಂದ ಬಂದವರೆಂದೂ ಹಲವು ಶಾಸನಗಳಲ್ಲಿ ವರ್ಣಿತವಾಗಿದೆ. ಮಾಧವ, ದಡಿಗರು ಉತ್ತರದಿಂದ ಬರುವಾಗ ಕಡಪ ಜಿಲ್ಲೆಯ ಪೇರೂರಿನಲ್ಲಿ ಸಿಂಹನಂದಿ ಎಂಬ ಜೈನ ಮುನಿಯನ್ನು ಕಂಡರೆಂದೂ ಅವರ ರಾಜಕಳೆಯನ್ನು ಗಮನಿಸಿದ ಯತಿ, ದೇವ

1 ಕರ್ನಾಟಕದ ಇತಿಹಾಸ, ಪುಟ 31

2 ಕನ್ನಡ ಶಾಸನಗಳ ಸಾಂಸ್ಕೃತಿಕ ಅಧ್ಯಯನ, ಪುಟ–42

ರಿಂದ ಪಡೆದ ಕರ್ಣಿಕಾರ ಪುಷ್ಪದ ಕಿರೀಟವನ್ನು ತನ್ನ ಕೈಯಿಂದಲೇ ತೊಡಿಸಿ ಖಡ್ಗವೊಂದನ್ನು ಕೋಲಾರದ ಬಳಿ ದೊರಕಿಸಿಕೊಟ್ಟರೆಂದೂ ಅವರ ರಾಜ್ಯ ಗಂಗವಾಡಿ 96,000 ಎಂದು ಹೆಸರಾಯಿತು ಎಂದು ಹೇಳಿಕೆ. ಅವರ ಆಳ್ವಿಕೆ ಪ್ರಾರಂಭದಲ್ಲಿ ಕಾವೇರಿಯ ಬಯಲಿನಲ್ಲಿ ತಲಕಾಡಿನವರೆಗೂ ವಿಸ್ತರಿಸಿತ್ತು. ತಲಕಾಡು ಮತ್ತು ಸುತ್ತಮುತ್ತಲಿನ ಪ್ರದೇಶವು ಕಾಡಿನಿಂದಾವೃತವಾಗಿದ್ದು ಗಜಾರಣ್ಯ ಎಂದು ಹೆಸರಾಗಿತ್ತು. ಸಮೃದ್ಧವಾದ ಕಾಡಿದ್ದುದರಿಂದ ಮೃಗಸಂಪತ್ತು ಅಧಿಕವಾಗಿತ್ತು. ಆದ್ದರಿಂದ ಗಂಗರು ಗಜವನ್ನೇ ತಮ್ಮ ಲಾಂಛನವಾಗಿ ಬಳಸಿದ್ದರು ಎಂಬ ಹೇಳಿಕೆ ಸತ್ಯಕ್ಕೆ ಹತ್ತಿರವಾದರೂ, ಧಾರ್ಮಿಕ ಹಿನ್ನೆಲೆಯಲ್ಲಿ ಈ ಲಾಂಛನವನ್ನು ಪರಾಮರ್ಶಿಸಿದಾಗ ಗಂಗರು ಜೈನರಾಗಿರಲಿಲ್ಲ, ವೈಷ್ಣವ ಮತದವರಾಗಿದ್ದರು ಎಂದು ಹೇಳಬಹುದು. ಗಜರಾಜನು ಪೂರ್ವಜನ್ಮದಲ್ಲಿ ಪಾಂಡ್ಯದೇಶದ ರಾಜನಾಗಿದ್ದು, ಆತನ ಹೆಸರು ಇಂದ್ರದ್ಯುಮ್ನ ಎಂದು. ಆತನು ಬಹುದೊಡ್ಡ ವಿಷ್ಣುಭಕ್ತನಾಗಿದ್ದನು. ಒಮ್ಮೆ ಆಗಸ್ತ್ಯ ಋಷಿಯ ಶಾಪಕ್ಕೆ ಗುರಿಯಾಗಿ ಗಜರೂಪವನ್ನು ಹೊಂದಬೇಕಾಯಿತು. ಈ ಗಜವು ತನ್ನ ಪರಿವಾರದೊಂದಿಗೆ ನೀರನ್ನು ಕುಡಿಯುತ್ತಿದ್ದಾಗ ಮೊಸಳೆಯೊಂದು ಗಜರಾಜನ ಕಾಲನ್ನು ಹಿಡಿದುಕೊಂಡಿತು. ಆಗ ರಕ್ಷಣೆಗಾಗಿ ಹಿಂದಿನ ಜನ್ಮದಲ್ಲಿ ಹೇಳುತ್ತಿದ್ದ ಪರಬ್ರಹ್ಮ ಸ್ತುತಿಯನ್ನು ಜಪಿಸಿದನು. ಆಗ ವೇದಸ್ವರೂಪನಾದ ಗರುಡನ ಮೇಲೆ ಶ್ರೀಹರಿಯು ಬಂದು ಗಜರಾಜನನ್ನು ಮೊಸಳೆಯ ಬಾಯಿಂದ ರಕ್ಷಿಸಿದನು. ಗಜರಾಜ ಶಾಪ ವಿಮುಕ್ತನಾಗಿ ಮಹಾಪುರುಷನಾದನು. ಬ್ರಹ್ಮನು ಅವನನ್ನು ಗರುಡನ ಮೇಲೆ ಕೂಡಿಸಿಕೊಂಡು ವೈಕುಂಠಕ್ಕೆ ಹೊರಟುಹೋದನು[1] ಎಂಬ ಪುರಾಣದ ಹೇಳಿಕೆಯಂತೆ ಗಂಗರು ಕೂಡ ವಿಷ್ಣುಭಕ್ತರಾಗಿದ್ದು ತಮ್ಮ ಧರ್ಮದ ಸಂಕೇತವಾಗಿ ವಿಷ್ಣುಭಕ್ತನಾದ ಗಜರಾಜನ ಲಾಂಛನವನ್ನು ಬಳಸಿರಬಹುದು. ಗಂಗರು ವಿಷ್ಣುಭಕ್ತರಾಗಿದ್ದರು ಎಂಬುದಕ್ಕೆ ಬಾ. ರಾ. ಗೋಪಾಲರ ಹೇಳಿಕೆಯನ್ನು ಗಮನಿಸಬಹುದು : "ಸಿಂಹನಂದಿಯಿಂದ ಗಂಗ ವಂಶ ಸ್ಥಾಪನೆಯಾಯಿತು ಎಂಬುದಕ್ಕೆ ಶಾಸನ ಮಾಹಿತಿ 1122ರಲ್ಲಿ ದೊರೆಯುತ್ತದೆ. ಆಗ ಜೈನಧರ್ಮ ಚೆನ್ನಾಗಿ ಹರಡಿತ್ತು. ಆದರೆ ಅದಕ್ಕಿಂತ ಹಿಂದೆಯೆ ಗಂಗರು ಕರ್ನಾಟಕದಲ್ಲಿ ಪ್ರಬಲರಾಗಿದ್ದರೂ ಕೂಡ ಇಂತಹ ಮಾಹಿತಿ ದೊರೆಯುವುದಿಲ್ಲ. ಗಂಗರು ಬೇರೆ ದೇವರುಗಳ ಆರಾಧಕರು ಎಂಬುದು ಅವರು ಹೊಂದಿದ್ದ ಬಿರುದುಗಳಿಂದ ತಿಳಿದುಬರುತ್ತದೆ. ವಿಷ್ಣುಗೋಪ, ದ್ವಿಜಗುರು, ಗೋಬ್ರಾಹ್ಮಣ ಪೂಜಕಪರ, ನಾರಾಯಣ ಚರಣಾನುಧ್ಯಾತ, ಪಿರಪ್ರನಷ್ಟ, ಬ್ರಹ್ಮಧೇಯ, ಬಹುಸಹಸ್ರವಿಸರ್ಗಾಗ್ರಹಣಕಾರಿ, ಅವನ ಮಗ ಅವಿನೀತನನ್ನು ಕಮಲೋದರ ಚರಣ ಕಮಲಾನುಧ್ಯಾತ ಎಂದೂ, ಪೆನ್ನಾನೂರು ಶಾಸನದಲ್ಲಿ ದುರ್ವಿನೀತನನ್ನು ಕಾತ್ಯಾಯನೀ ಚರಣ ಪಂಕೇರುಹ ಪರಿಚರ ವಿಧ್ವಾಂತರಾತ್ಮ ಎಂದು ಕರೆದಿದೆ.

1 ವಚನ ಭಾಗವತ, ಪುಟ 153, ತ. ಸು. ಶಾಮರಾಯ

ಹೀಗಿರುವಲ್ಲಿ ಗಂಗ ದೊರೆಗಳು ಜೈನಮತಾವಲಂಬಿಗಳಾಗಿದ್ದರು ಎಂಬ ಹೇಳಿಕೆ ಸಾಧಾರವಾಗಿರುವಂತೆ ತೋರುವುದಿಲ್ಲ "[1]

ದಕ್ಷಿಣದಲ್ಲಿ ಗಂಗರು ಪ್ರಬಲರಾಗಿದ್ದಾಗ ಉತ್ತರದಲ್ಲಿ ಕ್ರಿ.ಶ.6ನೆಯ ಶತಮಾನದಲ್ಲಿ ಬಾದಾಮಿ ಚಾಲುಕ್ಯರು ಪ್ರಬಲರಾಗಿದ್ದರು. ಇವರು ವರಾಹ ಲಾಂಛನರು, ಮಾನವ್ಯಗೋತ್ರರು, ಹಾರೀತಿ ಪುತ್ರರು. ಹಿರಣ್ಯಗರ್ಭ (ಬ್ರಹ್ಮ)ನಿಂದ ಹುಟ್ಟಿದ ಹಾರೀತ ಪಂಚಶಿಖಿಯು ಸಂಧ್ಯಾವಂದನೆ ಮಾಡುವಾಗ ಅರ್ಘ್ಯಕೊಡುತ್ತಿರಲು ಚುಲಕದಿಂದ ಯೋಧನೊಬ್ಬನು ಉದ್ಭವಿಸಿದನು. ಅವನ ವಂಶಜರು ಚಾಲುಕ್ಯರು. ಅಂತೂ ಯಾವುದೇ ರಾಜಮನೆತನ ಪ್ರಬಲವಾದಂತೆ ಪುರಾಣದ ಕತೆಯನ್ನು ತನ್ನ ಮೂಲಕ್ಕೆ ಅಂಟಿಸಿಕೊಂಡು ಪಾವಿತ್ರ್ಯತೆಯನ್ನು ಕಂಡುಕೊಳ್ಳಲು ಪ್ರಯತ್ನಿಸುವುದು ಅಭ್ಯಾಸಬಲದಿಂದ ಬಂದ ಕಲೆಯಾಗಿತ್ತು. ಚಾಲುಕ್ಯರೂ ಸಹ ತಮ್ಮ ಮೂಲಜರು ಬ್ರಹ್ಮನಿಂದ ಬಂದವರೆಂದು ಹೇಳಿಕೊಂಡಿದ್ದಾರೆ. ಜನ್ಮತಹ ವಿಷ್ಣುವನ್ನೇ ಆರಾಧಿಸಿಕೊಂಡು ಬಂದವರಾಗಿದ್ದರು. ಅಲ್ಲದೆ ಅವರ ದಾಖಲೆಗಳಲ್ಲಿ ಕೂಡ ವರಾಹವನ್ನೇ ಲಾಂಛನವಾಗಿ ಬಳಸಿದ್ದರು. ವರಾಹ ಎಂದರೆ ಜ್ಞಾನಕ್ಕೆ ಅಧಿಪತಿಯೆಂದೂ (ಜ್ಞಾನ ಪಿರಾನ್ ಇಲ್ಲಾರ್ ಇಲ್ಲೈ) ಭೂಮಿಯನ್ನು ಉದ್ಧರಣೆ ಮಾಡಿದವನು ಎಂದೂ ಅರ್ಥ. ಹಿರಣ್ಯಾಕ್ಷನು ಸಾಗರದಡಿಯಲ್ಲಿ ಅಡಗಿಸಿಟ್ಟಿದ್ದ ಭೂಮಿತಾಯಿಯನ್ನು ವಿಷ್ಣುವು ವರಾಹಾವತಾರವೆತ್ತಿ ರಕ್ಷಿಸಿದನು ಎಂಬುದು ಪೌರಾಣಿಕ ಹೇಳಿಕೆ.

" ಜಯತಿ ಅದಿಷ್ಕೃತ: ವಿಷ್ಣೋ ವರಾಹಃಕ್ಷೋಭಿತಾರ್ಣವಂ
ದಕ್ಷಿಣೋನ್ನತೆ ದಂಷ್ಟ್ರಾಗ್ರೇ ವಿಶ್ರಾಂತ ಭುವನಂ ವಪ್ರ :"[2]

(ಸಾಗರದ ನೀರನ್ನು ಕಲಕಿ ತನ್ನ ಬಲದ ಕೋರೆಯ ತುದಿಯ ಮೇಲೆ ಭೂಮಂಡಲವನ್ನು ನಿಲ್ಲಿಸಿದ ವಿಷ್ಣುವಿನ ಸಾಕ್ಷಾತ್ ಅವತಾರವೆನಿಸಿದ ವರಾಹನಿಗೆ ಮಂಗಳ)

ವಿಷ್ಣುವು ಭೂಮಿಯನ್ನು ರಕ್ಷಿಸಿದಂತೆ ಚಾಲುಕ್ಯರೂ ಕೂಡ ಸರ್ವಭೂಮಿಗೂ ಸಾರ್ವಭೌಮತ್ವವನ್ನು ಸಾರುವ ಅಭಿಲಾಷೆಯಿಂದ ವರಾಹವನ್ನು ಲಾಂಛನವಾಗಿಟ್ಟುಕೊಂಡರು. ಅಲ್ಲದೆ ಚಾಲುಕ್ಯರು, ಪರಮಭಾಗವತ, ಶ್ರೀವಲ್ಲಭ, ಶ್ರೀಪೃಥ್ವಿವಲ್ಲಭ, ಮೊದಲಾದ ಬಿರುದುಗಳನ್ನು ಹೊಂದಿರುವುದು, ವೈಷ್ಣವ ಮತಾವಲಂಬಿಗಳು ಎಂಬದಕ್ಕೆ ಆಧಾರವಾಗಿವೆ. ಚಾಲುಕ್ಯರು ಅಪ್ಪಟ ವಿಷ್ಣುಭಕ್ತರಾಗಿದ್ದು ವಿಷ್ಣುವಿನ ಅವತಾರವನ್ನೇ ತಮ್ಮ ಲಾಂಛನವಾಗಿಟ್ಟುಕೊಂಡಿದ್ದರು.

ಚಾಲುಕ್ಯರ ಕೊನೆಯ ದೊರೆ ಕೀರ್ತಿವರ್ಮನನ್ನು ರಾಷ್ಟ್ರಕೂಟ ದಂತಿದುರ್ಗನು ಸೋಲಿಸಿ 758ರಲ್ಲಿ ರಾಜ್ಯ ಸ್ಥಾಪಿಸಿದನು. ರಾಷ್ಟ್ರಕೂಟರು 'ಯದು ವಂಶದವರು ಎಂದು ಹೇಳಿಕೊಳ್ಳುತ್ತಾರೆ'. ಇವರ ಲಾಂಛನ ಆದಿಗರುಡ, ಗರುಡ ವಿಷ್ಣುವಿನ

1 ಕ.ಅ.ಸ, ಕ.ಸಾ.ಚ. ಪುಟ 352, ಸಂ. 1

2 ಕರ್ನಾಟಕ ಪರಂಪರೆ, ಸಂಪುಟ 1, ಪುಟ 258

ವಾಹನ–ಗರುಡ ಎಂದರೆ ವೇದಾತ್ಮ, ವಿಹಿಗೇಶ್ವರ,—ವೇದಗಳನ್ನು ಕರಗತಮಾಡಿಕೊಂಡವನೆಂದು ಅರ್ಥ. ಆದರೆ ವೇದಕಾಲದ ಯಜ್ಞ ಯಾಗಾದಿಗಳಲ್ಲಿ ರಾಷ್ಟ್ರಕೂಟರು ನಿರತರಾಗಿದ್ದಂತೆ ಯಾವ ಉಲ್ಲೇಖಗಳಿಲ್ಲ. ರಾಜರುಗಳೂ ಇಂಥದೇ ಧರ್ಮವನ್ನು ಅನುಸರಿಸಬೇಕೆಂಬ ನಿಯಮವಿಲ್ಲ. ಒಲವಿಗನುಗುಣವಾಗಿ ಶಿವ ವಿಷ್ಣು ಇಬ್ಬರನ್ನೂ ಪೂಜಿಸುತ್ತಿದ್ದರು.[1] ಇವರ ಶಾಸನಗಳಲ್ಲಿ ಗರುಡ ಮತ್ತು ಶಿವನ ಮುದ್ರೆಗಳನ್ನು ಕಾಣಬಹುದಾಗಿದೆ. ಅಲ್ಲದೆ ಶಾಸನದ ಆದಿಯಲ್ಲಿ ವಿಷ್ಣು ಮತ್ತು ಶಿವನನ್ನು ಸ್ತುತಿಸಿರುವುದನ್ನು ಕಾಣಬಹುದು.[2] ಇದರಿಂದಾಗಿ ಶಿವ ವಿಷ್ಣು ಎರಡೂ ದೇವತೆಗಳನ್ನು ಆರಾಧಿಸುತ್ತಿದ್ದರೆಂದು ತಿಳಿಯುತ್ತದೆ.

ರಾಷ್ಟ್ರಕೂಟರ ಮೂಲವಾಸದ ಬಗ್ಗೆ ಜಿಜ್ಞಾಸೆಗಳಿವೆ. ರಾಷ್ಟ್ರಕೂಟರ ಉಪಶಾಖೆಯ ಶಾಸನಗಳಲ್ಲಿ 'ಇವರ ಮೂಲವನ್ನು ಯದು ವಂಶಕ್ಕೆ ಸಂಬಂಧಿಸಿದು'ದಾಗಿ ವರ್ಣಿಸಲಾಗಿದೆ. ರಾಜಸಂತತಿಗಳಲ್ಲಿ ಇದು ಸಾಮಾನ್ಯವಾಗಿ ಕಂಡುಬರುವುದರಿಂದ ಇಂತಹ ದಂತಕತೆಯನ್ನು ನಂಬಲು ಸಾಧ್ಯವಿಲ್ಲ. ಆದರೆ ರಾಷ್ಟ್ರಕೂಟರ ಕೆಲವು ಶಾಸನಗಳಲ್ಲಿ ನೇಗಿಲ ಮುದ್ರೆ ಇರುವುದನ್ನು ಗಮನಿಸಿದಾಗ ರಾಷ್ಟ್ರಕೂಟರು ಮೂಲದಲ್ಲಿ ಒಕ್ಕಲುತನದವರಾಗಿದ್ದು ಸಮಯ ಸಾಧಿಸಿ ತಮ್ಮ ಪ್ರಭುತ್ವವನ್ನು ಸ್ಥಾಪಿಸಿರಬಹುದು. ನೇಗಿಲು ಕೂಡ ಮುದ್ರೆಯಲ್ಲಿ ಇರುವುದರಿಂದ ರಾಷ್ಟ್ರಕೂಟರು ನಾಡಗೌಡರು, ಒಕ್ಕಲ ಮಕ್ಕಳೆಂಬ ಬಗ್ಗೆ ಸಂದೇಹವೇ ಇಲ್ಲ ಎಂದು ಶಂಬಾ. ಜೋಷಿಯವರು ಹೇಳಿದ್ದಾರೆ.[3] ನೇಗಿಲು ಯಾವ ರಾಜ ಸಂತತಿಯಲ್ಲಿಯೂ ದೊರೆಯದೆ ರಾಷ್ಟ್ರಕೂಟರ ಮುದ್ರೆಯಲ್ಲಿರುವುದರಿಂದ ಇವರು ವ್ಯವಸಾಯಗಾರರೆಂಬುದಂತೂ ಸತ್ಯವಾಗಿದ್ದು ಕ್ಷೀಣಿಸುತ್ತಿದ್ದ ಚಾಲಕ್ಯ ಸಂತತಿಯನ್ನು ತುಳಿದು ತಮ್ಮ ಪ್ರಭುತ್ವವನ್ನು ಸ್ಥಾಪಿಸಿದ್ದಿರಬಹುದು.

ಕ್ರಿ.ಶ. 10ನೆಯ ಶತಮಾನದ ಕೊನೆಯಲ್ಲಿ ಕರ್ಣಾಟಕ ಇತಿಹಾಸದ ಕ್ಷಿತಿಜದಲ್ಲಿ ಕಾಣಿಸಿಕೊಂಡು 11ನೆಯ ಶತಮಾನದಲ್ಲಿ ಪ್ರಾಬಲ್ಯಕ್ಕೆಬಂದು ಕರ್ನಾಟಕ ಸಾಮ್ರಾಜ್ಯವನ್ನು ಕಟ್ಟಿ 14ನೆಯ ಶತಮಾನದ ಪೂರ್ವಾರ್ಧದ ಕೊನೆಯವರೆಗೂ ಯಶಸ್ವಿಯಾಗಿ ಆಳ್ವಿಕೆ ನಡೆಸಿದ ಹೊಯ್ಸಳರ ಲಾಂಛನ ಶಾರ್ದೂಲ. ಇವರ ಶಾಸನಗಳಲ್ಲಿ ದ್ವಾರಕಿಯಿಂದ ಬಂದವರೆಂದು ಹೇಳಿಕೊಂಡಿದ್ದಾರೆ. ಆದ್ದರಿಂದಲೇ ರಾಜಧಾನಿಗೆ ದ್ವಾರಕೆ, ದ್ವಾರಸಮುದ್ರ ಎಂದು ಹೆಸರಿಟ್ಟು ಕೊಂಡಿದ್ದರೆಂದು ಶಾಸನಗಳಲ್ಲಿ ಉಲ್ಲೇಖಗಳಿವೆ. ಇವರ ಶಾಸನಗಳಲ್ಲಿ ಯದುವಂಶದ ಉಲ್ಲೇಖವಿಲ್ಲ. ಆದುದರಿಂದ ಹೊಯ್ಸಳರು

---

1. ಕರ್ನಾಟಕ ಪರಂಪರೆ, ಸಂ. 1, ಪುಟ 290
2. EC.Vol.3 ; ನಂ.ಗೂ—278
3. ಕನ್ನಡದ ನೆಲೆ, ಪುಟ–105

ಯದುವಂಶಕ್ಕೆ ಸೇರಿದವರೆಂಬುದಾಗಲೀ ದ್ವಾರಕೆಯಿಂದ ಬಂದವರೆಂದಾಗಲೀ ನಂಬಲಾಗುವುದಿಲ್ಲ. ಇವು ಕೇವಲ ಕಾಲ್ಪನಿಕ.

ಶಾಸನಗಳಲ್ಲಿ ಸರ್ವೇಸಾಮಾನ್ಯವಾಗಿ ಕಾಣಬರುವ ಹೇಳಿಕೆಯ ಪ್ರಕಾರ ವಂಶದ ಮೂಲಪುರುಷ ಸಳ. ಸಳನು ತನ್ನ ಗುರುವಾದ ಜೈನಮುನಿ ಸುದತ್ತಾಚಾರ್ಯನೊಡನೆ ಇಂದಿನ ಮೂಡಿಗೆರೆಯಲ್ಲಿರುವ ಸೊಸೆವೂರು ಗ್ರಾಮದ ಜೈನ ಬಸದಿಯಲ್ಲಿ ವಾಸಂತಿಕ ಅಥವಾ ಪದ್ಮಾವತಿಯೆಂಬ ದೇವಿಯ ಆರಾಧನೆಯಲ್ಲಿ ತೊಡಗಿದ್ದನು. ಒಂದು ದಿನ ಅವನು ಪೂಜೆಯಲ್ಲಿ ನಿರತನಾಗಿದ್ದಾಗ ಹುಲಿಯೊಂದು ಜಿಗಿದು ಬಂದಿತು. ಆಗ ಜೈನಮುನಿಯು ದಂಡಕವನ್ನು ಸಳನಿಗೆ ಕೊಟ್ಟು "ಪೊಯ್ ಸಳ" ಎಂದು ಆಣತಿಯಿತ್ತನು. ಕೂಡಲೇ ಸಳನು ಹುಲಿಯನ್ನು ಕೊಂದನು. ಸಂಪ್ರೀತನಾದ ಮುನಿಯು ವಾಸಂತಿಕಾ ದೇವಿಯಿಂದ ವರವನ್ನು ಪಡೆದು ಸಳನಿಗೆ ರಾಜ್ಯಪ್ರಾಪ್ತಿಯಾಗುವಂತೆ ಹರಸಿದನು. ಮುನಿಯ ಬಾಯಿಂದ ಬಂದ ವಾಣಿಯೇ ಹೊಯ್ಸಳವಾಯಿತು. ಸಳನಿಂದ ಸ್ಥಾಪಿಸಲ್ಪಟ್ಟ ಸಂತತಿ ಹೊಯ್ಸಳ ಸಂತತಿಯಾಯಿತು ಎಂದು ವರ್ಣಿಸಲಾಗಿದೆ. ಅಲ್ಲದೆ ಅವರ ಲಾಂಛನದಲ್ಲಿ ಹುಲಿಯೊಡನೆ ಸೆಣಸುತ್ತಿರುವ ಸಳನ ಚಿತ್ರವನ್ನೇ ಇಟ್ಟುಕೊಂಡಿದ್ದಾರೆ. ಹುಲಿಯೊಡನೆ ಸೆಣಸುವಷ್ಟು ಚತುರ ಮತ್ತು ಧೈರ್ಯವಂತನಾಗಿದ್ದ ಸಳನು ಮೂಲದಲ್ಲೂ ಮೃಗಬೇಟೆಯಲ್ಲಿ ಪರಿಣತನಾಗಿದ್ದು, ಅನಿರೀಕ್ಷಿತವಾಗಿ ಬಂದ ಹುಲಿಯೊಂದಿಗೆ ಸೆಣಸಲು ಸಾಧ್ಯವಾಗಿದ್ದಿರಬಹುದು. ಆದರೆ ಸಳನ ಬಗ್ಗೆ ಮಾಹಿತಿ ಮತ್ತೆಲ್ಲಿಯೂ ದೊರೆಯುವುದಿಲ್ಲ. ಹುಲಿಯೊಡನೆ ಸೆಣಸಿದ ಸಳ ಬೇಡರ ಕುಲದವನಾಗಿರಬಹುದೆಂದೂ ನಂತರದಲ್ಲಿ ಜೈನಮುನಿಯನ್ನು ಗುರುವಾಗಿ ಪಡೆದು ಹುಲಿಯನ್ನು ಕೊಂದಿರಬಹುದು. ಹೀಗೆ ಹೊಯ್ಸಳಸಂತತಿ ತಲೆಎತ್ತಿರಬಹುದು. ಅಂತೂ ಹೊಯ್ಸಳ ಮೊದಲ ದೊರೆಗಳು ಜೈನಧರ್ಮದವರಾಗಿದ್ದರು. ಆದರೆ ಅನಂತರದ ದೊರೆಗಳು ವಿವಿಧ ಮತಕ್ಕೆ ಪ್ರೋತ್ಸಾಹದಾಯಕರಾಗಿದ್ದರು ಮತ್ತು ಪರಧರ್ಮ ಸಹಿಷ್ಣುಗಳಾಗಿದ್ದರು. ಶೈವ, ವೈಷ್ಣವ, ಜೈನ ಎಂಬ ಭೇದಗಳಿಲ್ಲದೆ ಪರಂಪರೆಯಾಗಿ ಬಂದ ಧರ್ಮವನ್ನು ಅನುಸರಿಸದೆ ತಮ್ಮ ಒಲವಿಗನುಗುಣವಾಗಿ ವಿವಿಧ ಧರ್ಮವನ್ನು ಅವಲಂಬಿಸಿದಂತೆ ತೋರುತ್ತದೆ. ವಿಷ್ಣುವರ್ಧನನ ತಂದೆ ಎರೆಯಂಗ ವೈಷ್ಣವ, ಶ್ರವರ ಪದ್ಮಭೃಂಗ ಎಂದೆನಿಸಿಕೊಂಡಿದ್ದನು. ಅವನ ಮಗ 1ನೆಯ ಬಲ್ಲಾಳನು ಶೈವನಾಗಿದ್ದು ಶೈವ ಶಿರೋಮಣಿ ಎನಿಸಿಕೊಂಡಿದ್ದನು. ವಿಷ್ಣುವರ್ಧನನು ವೈಷ್ಣವ ಧರ್ಮವನ್ನು ಅವಲಂಬಿಸಿದ್ದನು. ಹೊಯ್ಸಳ ರಾಜರ ಅನ್ಯಮತ ಸಹಿಷ್ಣುತೆಯಿಂದ ಬೇರೆ ಬೇರೆ ಧರ್ಮಗಳು ಶಾಂತಿಯುತವಾಗಿ ಸಹಬಾಳ್ವೆ ನಡೆಸಲು ಅವಕಾಶವಾಯಿತು. ಅಷ್ಟೇ ಅಲ್ಲ, ಇದರಿಂದ ಎಲ್ಲ ಧಾರ್ಮಿಕ ಪೂಜೆಯ ಗುರಿಯು ಕಟ್ಟಕಡೆಗೆ ಒಂದೆಯೇ ಎಂಬ ಅರಿವೂ ಹೆಚ್ಚಿತು.

ನಾಮರೂಪಗಳು ಮಾತ್ರ ಭಿನ್ನವಾಗಿರಬಹುದು.[1] ಹೊಯ್ಸಳ ರಾಜರ ಸರ್ವಧರ್ಮ ಸಮನ್ವಯಕ್ಕೆ ಕೇಶವದೇವಾಲಯದ ಶಾಸನ ಮುಖ್ಯ ಉದಾಹರಣೆಯಾಗಿದೆ.

ಯಂ ಶೈವಾ : ಸಮುಪಾಸತೇ ಶಿವ ಇತಿ ಬ್ರಹ್ಮೇತಿ ವೇದಾಂತಿನೋ।
ಬೌದ್ಧಾ ಬುದ್ಧ ಇತಿ ಪ್ರಮಾಣ ಪಟವ : ಕರ್ತೇತಿ ನೈಯಾಯಿಕಾಃ
ಅರ್ಹನ್ನಿತ್ಯಥ ಜೈನಶಾಸನ ರತಾ : ಕರ್ಮೇತಿ ಮೀಮಾಂಸಕಾಃ
ಸೋಽಯಂ ನೋ ವಿದಧಾತು ವಾಂಛಿತಫಲಂ ಶ್ರೀ ಕೇಶವೋ ಸರ್ವದಾ[2]

ಹೊಯ್ಸಳ ಅರಸರೂ ಮತ್ತು ಸಾಮಂತ ರಾಜರೂ ಚತುಸ್ಸಮಯ ಸಮುದ್ಧರಣ ಎಂಬ ಬಿರುದನ್ನು ಧರಿಸಿದ್ದರು. ಬೌದ್ಧ, ಜೈನ, ಶೈವ ಮತ್ತು ವೈಷ್ಣವ ಧರ್ಮಕ್ಕೆ ಪ್ರೋತ್ಸಾಹಕರಾಗಿದ್ದರೆಂದು ಆ ಬಿರುದುಗಳು ತಿಳಿಸುತ್ತವೆ.

13ನೆಯ ಶತಮಾನದ ಆದಿಭಾಗದಲ್ಲಿ ಮುಸಲ್ಮಾನರು ಉತ್ತರ ಭಾರತದಲ್ಲಿ ಪ್ರಬಲರಾಗಿದ್ದರು. ದಕ್ಷಿಣ ಭಾರತವನ್ನು ಆಕ್ರಮಿಸಲು ಪ್ರಯತ್ನಿಸುತ್ತಿದ್ದರು. ಅಂದಿನ ಹೊಯ್ಸಳರು, ದೇವಗಿರಿಯ ಯಾದವರು, ಕಾಕತೀಯರು, ಪಾಂಡ್ಯರು, ಮಲ್ಲಿಕಾಫರ್ ಮತ್ತು ಮಹಮದ್ ಬಿನ್ ತೊಘಲಕ್‌ನ ದಾಳಿಯನ್ನು ಎದುರಿಸುವಲ್ಲಿ ಅಸಕ್ತರಾಗಿದ್ದರು. ಇಂತಹ ಸಮಯದಲ್ಲಿ ಪ್ರಬಲ ರಾಜಕೀಯ ಶಕ್ತಿ ಎಂದರೆ ವಿಜಯನಗರದ ಅರಸರು. ಹೊಯ್ಸಳ ಚಕ್ರವರ್ತಿ ವೀರಬಲ್ಲಾಳನು ತುಂಗಭದ್ರಾ ಪ್ರದೇಶದಿಂದ ರಾಮೇಶ್ವರದವರೆಗೂ ರಾಜ್ಯವನ್ನು ವಿಸ್ತರಿಸಿ ಆಳುತ್ತಿದ್ದನು. ಹರಿಹರನು ವೀರಬಲ್ಲಾಳನ ದೂರದ ಸಂಬಂಧಿಯಾಗಿದ್ದನು. ಹೊಯ್ಸಳರ ಕೊನೆಯ ಸಾಮ್ರಾಟನಿಗೂ ವಿಜಯನಗರದ ಪ್ರಥಮ ರಾಜನಿಗೂ ನಿಕಟ ಬಾಂಧವ್ಯವಿದ್ದಿತು. ಬಹುಶಃ ಈ ಕಾರಣದಿಂದಲೇ ಸಂಗಮ ವಂಶದವರು ಯದುಕುಲದವರೆಂದೂ ಕರೆದುಕೊಂಡಿದ್ದಾರೆ.[3] ವಿಜಯನಗರ ರಾಜ್ಯಸ್ಥಾಪನೆಗೆ ಕಾರಣರಾದವರ ಬಗ್ಗೆ ವಿದ್ವಾಂಸರಲ್ಲಿ ಭಿನ್ನಾಭಿಪ್ರಾಯಗಳಿದ್ದರೂ ಒಟ್ಟಿನಲ್ಲಿ ಸಂಗಮನ ಮಕ್ಕಳೂ, ಕನ್ನಡಿಗರೂ ಆದ ಹರಿಹರ ಬುಕ್ಕರು ವಿಜಯನಗರ ಸ್ಥಾಪಕರಾದರು. ಇವರು ವರಾಹಮೂರ್ತಿಯನ್ನು ಲಾಂಛನವಾಗಿ ಸ್ವೀಕರಿಸಿದ್ದರು. ಬಹುಶಃ ಅಂದಿನ ಧಾರ್ಮಿಕ ಅವ್ಯವಸ್ಥೆ ರಾಜಕೀಯ ಅಸ್ಥಿರತೆ ಈ ಲಾಂಛನವನ್ನು ಇಟ್ಟುಕೊಳ್ಳಲು ಪ್ರೋತ್ಸಾಹಕವಾಗಿದ್ದಿರಬಹುದು. ಇದೊಂದು ಸಾಂಕೇತಿಕ ಚಿಹ್ನೆ. ವಿಷ್ಣುವು ವರಾಹಾವತಾರವನ್ನು ಎತ್ತಿ ಭೂಮಿತಾಯಿಯನ್ನು ರಕ್ಷಿಸಿದಂತೆ ಅಸ್ತವ್ಯಸ್ತವಾಗಿದ್ದ ದೇಶವನ್ನು ಒಂದುಗೂಡಿಸಲು

1 ಕರ್ನಾಟಕ ಪರಂಪರೆ, ಸಂಪುಟ 1. ಪುಟ 524

2 ಕ.ಪ. ಸಂ 1 ಪುಟ 524

3 ಕರ್ನಾಟಕ ಸಂಕ್ಷಿಪ್ತ ಚರಿತ್ರೆ, ಪುಟ 255 ಜಿ. ಆರ್ ರಂಗಸ್ವಾಮಯ್ಯ

ಮತ್ತು ಪರಕೀಯರ ದಾಳಿಯಿಂದ ಕರ್ನಾಟಕವನ್ನು ರಕ್ಷಿಸುವ ಉದ್ದೇಶದಿಂದ ವರಾಹ ವನ್ನು ಲಾಂಛನವಾಗಿ ಬಳಸಿದ್ದರು.

ವೈಷ್ಣವ ಧರ್ಮ ಪ್ರಚಲಿತವಿದ್ದರೂ ಅವರ ರಾಜ್ಯದಲ್ಲಿ ಧಾರ್ಮಿಕ ಸ್ವಾತಂತ್ರ್ಯ ವಿತ್ತು. ರಾಜರುಗಳು ಪರಮತ ಸಹಿಷ್ಣುಗಳಾಗಿದ್ದರು.

ವಿಜಯನಗರದ ಅರಸರು ಅಳಿಸಿಹೋಗುತ್ತಿದ್ದ ಸನಾತನ ಹಿಂದೂಧರ್ಮವನ್ನು ಹಿಂದೂ ಸಂಸ್ಕೃತಿಯನ್ನು ಪೋಷಿಸಿ ಕರ್ನಾಟಕ ಭವ್ಯವಾದ ಐತಿಹಾಸಿಕ ಪರಂಪರೆಯಲ್ಲಿ ಕೀರ್ತಿವೆತ್ತ ದೊರೆಗಳಾಗಿದ್ದಾರೆ.

ಕ್ರಿ. ಶ. 15ನೆಯ ಶತಮಾನದ ಪ್ರಾರಂಭದಲ್ಲಿ ಮೈಸೂರಿನ ಒಡೆಯರ್ ಸಂತತಿ ವಿಜಯನಗರ ಸಾಮ್ರಾಜ್ಯದ ಅಧೀನದಲ್ಲಿ ಮೈಸೂರು ಜಿಲ್ಲೆಯಲ್ಲಿ ಒಂದು ಚಿಕ್ಕ ಪಾಳೆ ಪಟ್ಟನ್ನು ಸ್ಥಾಪಿಸಿದರು. ಇವರ ಮೂಲ ಮತ್ತು ಪ್ರಾರಂಭದ ಇತಿಹಾಸವು ಅಸ್ಪಷ್ಟ ವಾಗಿದೆ. ಶ್ರೀಕೃಷ್ಣನಿಂದ ಪುನೀತವಾದ ಯದುವಂಶಕ್ಕೆ ಸೇರಿದವರೆಂಬ ಐತಿಹ್ಯವು ಪ್ರಾರಂಭವಾಗಿದೆ. ಆದರೆ ಇದು ಪ್ರಾರಂಭದ ಶಾಸನಗಳಲ್ಲಾಗಲೀ, ಮತ್ತಾವ ಆಧಾರಗಳಲ್ಲಾಗಲೀ ಕಂಡುಬರುವುದಿಲ್ಲ. ಆದ್ದರಿಂದ ಇವರು ಯದುವಂಶದವರೆಂದು ಹೇಳಲು ಸಾಧ್ಯವಿಲ್ಲ. ಈ ಮನೆತನದ ಮೂಲಪುರುಷರು ಸ್ಥಳೀಯ ನಿವಾಸಿಗಳಾಗಿದ್ದ ರೆಂಬುದರಲ್ಲಿ ಸಂಶಯವಿಲ್ಲ. ಇವರು ಗಂಡಭೇರುಂಡವನ್ನು ಲಾಂಛನವಾಗಿ ಹೊಂದಿ ದ್ದರು. ವಿಷ್ಣು ವಾಹನನಾದ ಗರುಡ ಋಗ್ವೇದದಲ್ಲಿ ಬರುವ ಎರಡು ಹಕ್ಕಿಗಳು— ಇವುಗಳಿಂದ ಎರಡು ತಲೆಗಳುಳ್ಳ ಗಂಡಭೇರುಂಡ ಪಕ್ಷಿ ವಿಕಾಸಗೊಂಡಿರಬಹುದೆಂದೂ ಊಹಿಸಲಾಗಿದೆ.[1] ವಿಷ್ಣು ನರಸಿಂಹಾವತಾರವನ್ನು ಎತ್ತಿ ಹಿರಣ್ಯಕಶಿಪುವನ್ನು ಸಂಹಾರಮಾಡಿದ ಮೇಲೂ ಅವನ ಕೋಪ ಅಡಗದಿರಲು ಶಿವನು ಶರಭನ ಅವತಾರ ವನ್ನು ಎತ್ತಿ ನರಸಿಂಹನನ್ನು ಎದುರಿಸಬೇಕಾಯಿತು. ಶರಭನನ್ನು ಅಡಗಿಸಲು ವಿಷ್ಣುವು ಗಂಡಭೇರುಂಡನಾದ. ಗಂಡಭೇರುಂಡಕ್ಕೆ ಆಹಾರ ಶರಭವೇ ಎಂದು ಪುರಾಣಗಳ ಹೇಳಿಕೆ. ಶರಭಕ್ಕಿಂತ ಗಂಡಭೇರುಂಡ ಹೆಚ್ಚು ಶಕ್ತಿಯುತವಾದುದು ಎಂಬ ಪ್ರತೀತಿ. ಆದ್ದರಿಂದ ಕರ್ನಾಟಕದ ಒಡೆಯರೂ ಕೂಡ ಸಾರ್ವಭೌಮತ್ವದ ಪರಾಕಾಷ್ಠೆಯ ಸಂಕೇತವಾಗಿ ಗಂಡಭೇರುಂಡವನ್ನು ರಾಜಲಾಂಛನವಾಗಿ ಬಳಸಿದರು. ಇವರೂ ಕೂಡ ವೈಷ್ಣವ ಧರ್ಮಾವಲಂಬಿಗಳೇ ಆಗಿದ್ದರು. ಇವರ ಮನೆದೇವರು ಮೇಲುಕೋಟೆ ಚೆಲುವನಾರಾಯಣ. ಹೀಗೆ ಕರ್ನಾಟಕ ರಾಜರ ಶೌರ್ಯ, ತ್ಯಾಗವನ್ನು ಪ್ರತಿನಿಧಿಸು ತ್ತವೆ ಕರ್ನಾಟಕದ ಸಂಸ್ಕೃತಿ ಮತ್ತ ಧರ್ಮವನ್ನು ಪ್ರತಿಬಿಂಬಿಸುವ ಸಾಂಕೇತಿಕ ಚಿಹ್ನೆಗಳಾಗಿವೆ.

---

1 ಕರ್ನಾಟಕ, ಕನ್ನಡ ವಿಷಯ ವಿಶ್ವಕೋಶ, ಪುಟ 451–52
ಕನ್ನಡ ಅಧ್ಯಯನ ಸಂಸ್ಥೆ

ಇಂದು ಹೊಯ್ಸಳರ ಲಾಂಛನ ಕರ್ನಾಟಕದ ರಾಜಲಾಂಛನವಾಗಿದ್ದು ಕರ್ನಾಟಕದ ಸಂಸ್ಕೃತಿ ಮತ್ತು ಐತಿಹಾಸಿಕ ಪರಂಪರೆಯನ್ನು ಪ್ರತಿನಿಧಿಸುವ ಸ್ಫೂರ್ತಿ ದಾಯಕ ಚಿಹ್ನೆಯಾಗಿ ಉಳಿದಿದೆ. ಅಂತೆಯೇ ಭಾರತೀಯ ಸಂಸ್ಕೃತಿ ಮತ್ತು ಆದರ್ಶ ಧರ್ಮದ ಚಿಹ್ನೆಯಾಗಿ ಅಶೋಕನ ಧರ್ಮಚಕ್ರವು ಭಾರತದ ಲಾಂಛನವಾಗಿ ಶೋಭಿತ ವಾಗಿದೆ.

ಗ್ರಂಥಋಣ

1. D.C. Sircar : Indian Epigraphy, 1965
2. ಪಿ.ಪಿ.ಕೆ. (ಅನು) : ಭಾರತೀಯ ಶಾಸನಶಾಸ್ತ್ರ ಪರಿಚಯ, 1970
3. ಹು.ಕಾ. ಜಯದೇವ್ : ಶಾಸನ ಮತ್ತು ಗದ್ಯ ಸಂಪುಟ 2, ಸಾಮಾನ್ಯನಿಗೆ ಸಾಹಿತ್ಯ ಚರಿತ್ರೆ, 1975
4. ಜಿ.ಆರ್. ರಂಗಸ್ವಾಮಯ್ಯ : ಕರ್ನಾಟಕದ ಇತಿಹಾಸ, 1986
5. ಆರ್.ಎಸ್. ಪಂಚಮುಖಿ : ಕರ್ನಾಟಕದ ಇತಿಹಾಸ, 1967
6. ತ.ಸು. ಶಾಮರಾಯ : ವಚನ ಭಾಗವತ, 1971
7. ಎಂ. ಚಿದಾನಂದಮೂರ್ತಿ : ಕನ್ನಡ ಶಾಸನಗಳ ಸಾಂಸ್ಕೃತಿಕ ಅಧ್ಯಯನ, 1966
8. ಶಂ.ಬಾ. ಜೋಶಿ : ಕನ್ನಡದ ನೆಲೆ, 1962
9. ಕನ್ನಡ ಅಧ್ಯಯನ ಸಂಸ್ಥೆಯ ಕನ್ನಡ ಸಾಹಿತ್ಯ ಚರಿತ್ರೆ, ಸಂ : 2, 1975
10. ಕರ್ನಾಟಕ ಪರಂಪರೆ, ಸಂ : 1, 1970
11. ಕರ್ನಾಟಕ, ಕನ್ನಡ ವಿಷಯ ವಿಶ್ವಕೋಶ, 1979
12. ಎ.ಕ. ಸಂ : 3

ಗಂಡಭೇರುಂಡ ಶಕ್ತಿಯ ಪರಾಕಾಷ್ಠೆಯ ಚಿಹ್ನೆಯೆನಿಸಿದೆ. ಬಹುಶಃ ಇದೇ ಕಾರಣದಿಂದ ತಮ್ಮ ಪ್ರಭುತ್ವದ ಪರಮಶಕ್ತಿಯ ಸಂಕೇತವಾಗಿರುವಂತೆ ರಾಜರು ಗಂಡಭೇರುಂಡವನ್ನು ರಾಜಚಿಹ್ನೆಯಾಗಿ ಬಳಸಿಕೊಂಡಿರಬಹುದು.

ಗಂಡಭೇರುಂಡವನ್ನು ಲಾಂಛನವಾಗಿ ಬಳಸಲು ಕರ್ನಾಟಕದಲ್ಲಿ ಆರಂಭವಾದದ್ದು ಬಹುಶಃ 13ನೆಯ ಶತಮಾನದ ಅಂತ್ಯದಲ್ಲಿ, ಹೊಯ್ಸಳ 3ನೆಯ ನರಸಿಂಹ (1253–92) ಮತ್ತು 3ನೆಯ ಬಲ್ಲಾಳ (1292–1342), ಇವರ ಕಾಲದ ಕೆಲವು ಶಿಲಾಶಾಸನಗಳ ಮೇಲೆ ಗಂಡಭೇರುಂಡವನ್ನು ಬಿಡಿಸಲಾಗಿದೆ. ವಿಜಯನಗರದ ಸಾಮ್ರಾಟನಾಗಿದ್ದ ಅಚ್ಯುತರಾಯನ (1530–42) ಚಿನ್ನದ ಮತ್ತು ತಾಮ್ರದ ನಾಣ್ಯಗಳ ಮೇಲೆ ಗಂಡಭೇರುಂಡದ ಮುದ್ರೆಯಿದೆ.

ಮೈಸೂರು ಅರಸರು ವಿಜಯನಗರದ ಪರಂಪರೆಯನ್ನು ಮುಂದುವರಿಸಿಕೊಂಡು ಬಂದಾಗ ತಮ್ಮ ಧ್ವಜದ ಮೇಲೆ ಗಂಡಭೇರುಂಡವನ್ನು ಪ್ರತಿಷ್ಠಾಪಿಸಿಕೊಂಡರು. ಅವರ ಲಾಂಛನದಲ್ಲಿ ಮಧ್ಯದಲ್ಲಿ ಗಂಡಭೇರುಂಡವೂ ಮೂರು ಪಂಜಗಳನ್ನೂರಿ ಮುಂದಿನ ಬಲಪಂಜವನ್ನೆತ್ತಿ ಬಲಕ್ಕೆ ನೋಡುತ್ತ ನಡೆಯುವಂತಿರುವ ಸಿಂಹವೂ ಯಾಳಿಗಳೂ ಇದ್ದವು. ಮೈಸೂರು ರಾಜ್ಯ ನಿರ್ಮಾಣದೊಡನೆ ಆ ಲಾಂಛನವೂ ಉಳಿದು ಬಂದು ಇಂದಿನ ಕರ್ನಾಟಕ ಸರ್ಕಾರದ ಲಾಂಛನದಲ್ಲಿ, ಭಾರತ ಲಾಂಛನದ ಕೆಳಗಡೆ ಎರಡು ಸಿಂಹಗಳ ಮಧ್ಯದಲ್ಲಿರುವ ಫಲಕದಲ್ಲಿ ವಿರಾಜಿತವಾಗಿದೆ.

ಎನ್. ಸರಸ್ವತಿ

ವಿಜಯನಗರ ಕಾಲದ ಮಹಾಸತಿಯರ ಪಾತ್ರ

ಸಹಗಮನವೆಂದರೆ ತನ್ನ ಪತಿಗಾಗಿ ಮಾಡಿದ ಆತ್ಮಬಲಿದಾನವೆಂದೂ ಇಂಥಹ ಪತ್ನಿಯರನ್ನು "ಮಹಾಸತಿ" ಎನ್ನುತ್ತಾರೆ. ವಿಜಯನಗರ ಕಾಲದಲ್ಲಿ ಸತಿಪದ್ಧತಿಯು ಬಹು ಪ್ರಚಲಿತವಾಗಿತ್ತು.

ಸತಿ ಅಥವಾ ಸಹಗಮನವು ಒಂದು ಸಾಮಾಜಿಕ ಅಂಗ. ಹಿಂದೂ ವಿಧವೆಯರು ತಮ್ಮನ್ನು ಪತಿಯರ ಜೊತೆಯಲ್ಲಿ ದಹಿಸಲು ಅನುಮತಿ ಕೊಡುತ್ತಿದ್ದರು. ಇಂತಹ ತ್ಯಾಗಮಯ ಸ್ತ್ರೀಯನ್ನು 'ಸತಿ' ಎನ್ನುತ್ತಾರೆ. ಪತಿಯ ಆಳವಾದ ಪ್ರೀತಿ ಹಾಗೂ ಅನುರಾಗದ ಕಾರಣ ಸ್ತ್ರೀಯು ಈ ಪದ್ಧತಿಯನ್ನು ಅನುಸರಿಸುತ್ತಿದ್ದಳು. ಈ ಸಂಪ್ರದಾಯವು ಹಿಂದೂ ಸಮಾಜದಲ್ಲಿ ಉತ್ತಮ ಕುಲದವರಿಗೆ ಮಾತ್ರ ಸೀಮಿತವಾಗಿರುತ್ತಿತ್ತು. ಸಾಮಾನ್ಯವಾಗಿ ಕೆಳವರ್ಗದ ಸ್ತ್ರೀಯರು ಈ ಪದ್ಧತಿಯನ್ನು ಪಾಲಿಸುತ್ತಿರಲಿಲ್ಲ. ಪತ್ನಿ ಪತಿಯ ಸಮ್ಮುಖದಲ್ಲೇ ಸತ್ತಾಗ ಪತ್ನಿಯರಿಗೆ ಸಹಗಮನ ಪದ್ಧತಿ ನಿರ್ಬಂಧವಾಗಿರಲಿಲ್ಲ.

ಭಾರತಕ್ಕೆ ಬೇಟಿಯಿತ್ತಿದ್ದ ವಿದೇಶಿ ಪ್ರವಾಸಿಗರೆಲ್ಲರೂ ತಾವು ಕಂಡ ಈ ಪ್ರಚಲಿತ ಪದ್ಧತಿಯ ಬಗ್ಗೆ ಪುರಾವೆಗಳನ್ನು ಕೊಟ್ಟಿದ್ದಾರೆ. ನಿಕೊಲೋ ಕಾಂಟಿ, ಬಾರಬೋಸ್, ನ್ಯೂನಿಜ್, ಸೀಸರ್ ಫ್ರೆಡ್ರಿಕ್, ನಿಕೆಟಿನ್ ಮತ್ತಿತರರು ಈ (ಸತಿ) ಪದ್ಧತಿಯ ಆಚರಣೆಯ ಬಗ್ಗೆ ಒಂದು ನೈಜವಾದ ಹಾಗೂ ಸತ್ಯವಾದ ಮಾಹಿತಿಗಳನ್ನು ಕೊಟ್ಟಿದ್ದಾರೆ. ಆದರೆ ಇವುಗಳ ಆಚರಣಾ ವಿಧಾನಗಳಲ್ಲಿ ಮೂರು ವಿಧಗಳು ವಿವರಗಳೊಂದಿಗೆ ದೊರಕಿವೆ.

ಮೊದಲನೆಯದಾಗಿ, ಒಂದು ವರ್ಗದವರು ಪಾಲಿಸುವ ಪದ್ಧತಿ ಮತ್ತೊಂದು ವರ್ಗದವರ ಪದ್ಧತಿಗಳಿಂದ ಭಿನ್ನವಾಗಿದ್ದು, ದಕ್ಷಿಣ ಭಾರತದಲ್ಲಿ ಎಲ್ಲಾ ವಿಷಯಗಳಲ್ಲಿಯೂ ಪ್ರತ್ಯೇಕ ಸಂಪ್ರದಾಯಗಳಿದ್ದಂತೆ ಎಲ್ಲಾ ಪಂಗಡಗಳ ಸಾಂಪ್ರದಾಯಿಕ ಪದ್ಧತಿಗಳ ಕಾರಣ ಭಿನ್ನವಾಗಿರುತ್ತವೆ.

ಎರಡನೆಯದಾಗಿ ಕಾಲ ಹೋದಂತೆ ಸಂಪ್ರದಾಯದಲ್ಲಿ ಬದಲಾವಣೆಗಳಾದ ಕಾರಣ, ಹಾಗೂ ಮೂರನೆಯದಾಗಿ ಆಯಾ ಪ್ರಾಂತ್ಯಕ್ಕನುಗುಣವಾಗಿ ಸಂಪ್ರದಾಯಗಳ ಭಿನ್ನತೆ ಇರುತ್ತದೆ.

ಕ್ಯಾಂಬೆ ಸಂಪ್ರದಾಯಗಳ ಬಗ್ಗೆ ನಿಕಲೋಕಾಂಟಿಯ ವಿವರಣೆಯಂತೆ ಒಬ್ಬ ಹಿಂದುವಿಗೆ ಬಹುಪತ್ನಿಯರಿರುತ್ತಿದ್ದರು. ಅವರೆಲ್ಲರನ್ನು ಅವನೊಂದಿಗೆ ಸುಡುತ್ತಿದ್ದರು. ಇಲ್ಲಿ ಸತಿಯನ್ನು ಪೂರ್ಣ ನಿಕೃಷ್ಟವಾಗಿ ವಿವರಿಸಲಾಗಿದೆ. ಕ್ಯಾಂಬೆಯಲ್ಲಿ ವಿವರಿಸಿದಂತೆ, ಪತಿಯು ಸತ್ತಾಗ ಮೃತ ಶರೀರವನ್ನು ಇಟ್ಟು ಸುಡುವ ಸ್ಥಳದಲ್ಲೇ ಪತ್ನಿಯೂ ತನ್ನ ಸ್ವೇಚ್ಛೆಯಿಂದ ಬೆಂಕಿಯಲ್ಲಿ ಹಾರಿ ಪ್ರಾಣ ಬಿಡುವಳು. ಎರಡು ದೇಹಗಳು ಸುಟ್ಟು ಬೂದಿಯಾಗುವುವು. ಒಂದು ಉನ್ನತವರ್ಗದ ಸ್ತ್ರೀ ತಕ್ಷಣ ತನ್ನನ್ನು ಬಲಿಯಾಗಿಸುತ್ತಿರಲಿಲ್ಲ. ಇದಕ್ಕೆ ಮೊದಲು ವ್ರತಾಚರಣೆಗಳನ್ನು ಪಾಲಿಸಿ ಕೆಲಕಾಲ ಸಂತೋಷ ಕೂಟದಲ್ಲಿ ಸಂಗೀತ, ಗಾನ, ನೃತ್ಯ ಹಾಗೂ ಭೋಜನ ಕೂಟಗಳನ್ನು ಏರ್ಪಡಿಸಿ ಬೆಲೆಬಾಳುವ ವಸ್ತ್ರ ಧರಿಸಿ ಎಲ್ಲಾ ಆಭರಣಗಳನ್ನು ತೊಟ್ಟು ತನ್ನ ಮಕ್ಕಳು ಸಂಬಂಧಿಕರು ಮತ್ತು ಮಿತ್ರರಲ್ಲಿ ತನ್ನ ಆಸ್ತಿಯನ್ನು ಹಂಚುತ್ತಿದ್ದಳು. ಅನಂತರ ಒಂದು ಶ್ವೇತ ಕುದುರೆಯನ್ನೇರಿ ಪ್ರಮುಖ ಬೀದಿಗಳಿಂದ ದಹನಘಟ್ಟದವರೆಗೆ ಹೋಗುವಳು. ತನ್ನ ಎಲ್ಲಾ ವಸ್ತ್ರಗಳನ್ನು ಕಳಚಿ ಸೊಂಟವನ್ನು ಮುಚ್ಚುವಂತೆ ಒಂದು ಬಟ್ಟೆಯನ್ನುಟ್ಟು ಅಲ್ಲಿ ಉಪಸ್ಥಿತರನ್ನು ಉದ್ದೇಶಿಸಿ ತನ್ನ ಪತಿಯ ಅನುರಾಗದ ಕಾರಣ ಆತ್ಮ ಬಲಿದಾನ ಮಾಡುತ್ತಿರುವುದಾಗಿ, ಆದರೆ ಹೀಗೆ ಪಾಲಿಸಲು ಅವಳು ಬದ್ಧಳೇನಲ್ಲವೆಂದು ಭಾಷಣ ಮಾಡುವಳು. ಅನಂತರ ತನ್ನ ತಲೆಯ ಮೇಲೆ ಎಣ್ಣೆ ಸುರಿದುಕೊಂಡು ಅವಳಿಗಾಗಿ ಹಾಕಲಾದ ಬೆಂಕಿಯಲ್ಲಿ ಹಾರಿ ಪ್ರಾಣ ಬಿಡುವಳು.

ವಾಸ್ತವವಾಗಿ ಧರ್ಮವು ನಂಬಿಕೆ ಆಧಾರದ ಮೇಲೆ ಆಚರಿಸಿದ ಆತ್ಮಬಲಿದಾನವನ್ನು ಸಮರ್ಥಿಸುತ್ತದೆ. ಇಂಥ ಕ್ರಮಗಳ ಆಚರಣೆ ಮಾಡುವವನಿಗೆ ಸ್ವರ್ಗವು ತನ್ನ ದ್ವಾರಗಳನ್ನು ಬಲಪೂರ್ವಕವಾಗಿ ತೆರೆಯುತ್ತದೆ.

ಪತಿಯ ಮರಣದ ನಂತರ ಪತ್ನಿಯರು ಪತಿಯರೊಂದಿಗೆ ಜೀವಸಹಿತ ದಹನವಾಗಲೇಬೇಕು. ಒಬ್ಬರಿಗಿಂತ ಹೆಚ್ಚಿನ ಪತ್ನಿಯರು ಇದ್ದಲ್ಲಿ, ಮೃತನ ಅಂತಸ್ತಿಗಾಧಾರವಾಗಿ, ಆತನ ಪ್ರೀತಿಪಾತ್ರಳಾದವಳು ಮತ್ತು ಮೃತನ ಮಗನ ತಾಯಿಯಾದವಳು ಪತಿಯ ಕೊರಳಲ್ಲಿ ತನ್ನ ಕೈಯನ್ನು ಹಾಕಿ ಆತನೊಂದಿಗೆ ಚಿತೆಯನ್ನು ಏರುವಳು. ನಂತರ ಮತ್ತೊಬ್ಬಳು ತನ್ನನ್ನು ಜ್ವಾಲೆಗೆ ಅರ್ಪಿಸಿಕೊಳ್ಳುವಳು.[1]

ಸಹಗಮನ ಪದ್ಧತಿಯ ವಿಷಯವಾಗಿ ಕೆಲವು ವಿದ್ವಾಂಸರು ತಮ್ಮದೇ ಆದ ವ್ಯಾಖ್ಯೆಗಳನ್ನು ಕೊಟ್ಟಿದ್ದಾರೆ. ಅವರಲ್ಲಿ ಮೊದಲನೆಯದಾಗಿ,

1. ನ್ಯೂನಿಜ್‌ರವರ ಪ್ರಕಾರ, "ಬೆಂಕಿ ಇಟ್ಟ ತರುವಾಯ ಧರ್ಮಶಾಸ್ತ್ರಕ್ಕನುಗುಣವಾಗಿ ಒಬ್ಬ ಬ್ರಾಹ್ಮಣನು ಪತ್ನಿಯ ಮೇಲೆ ಕೆಲವು ಕರ್ಮಗಳನ್ನು ಆಚರಿಸುವುದು. ಅನಂತರ ಅವಳು ತನ್ನ ಆಭರಣಗಳನ್ನೆಲ್ಲಾ ಸಂಬಂಧಿಕರಲ್ಲಿ ಹಂಚಿ ಪೀತವಸ್ತ್ರ

ಗಳನ್ನುಟ್ಟು ಹಾಡುತ್ತಾ ಅಗ್ನಿಕುಂಡದ ಕಡೆಗೆ ಹೋಗಿ ಮೂರು ಸಲ ಪ್ರದಕ್ಷಿಣೆ ಮಾಡಿ ಅಗ್ನಿಕುಂಡದ ಪಕ್ಕದಲ್ಲಿರುವ ಎತ್ತರ ಸ್ಥಳವನ್ನೇರಿ ತನಗೆ ಜ್ವಾಲೆ ಕಾಣದಿರುವಂತೆ ಕೈಯಲ್ಲಿ ಒಂದು ಚಾಪೆಯನ್ನು ಹಿಡಿಯುವಳು. ಅಲ್ಲಿ ಸೇರಿದವರೆಲ್ಲರೂ ತನ್ನೊಂದಿಗೆ ಕೊಂಡು ಬಂದ ಅಕ್ಕಿಗಂಟು, ವೀಳ್ಯ, ಅವಳು ಸಿಂಗರಿಸಿಕೊಳ್ಳಲು ಉಪಯೋಗಿಸುತ್ತಿದ್ದ ಬಾಚಣಿಗೆ ಹಾಗೂ ಕನ್ನಡಿಯನ್ನು ಸಹಾ ಅಗ್ನಿಗೆ ಎಸೆಯುತ್ತಿದ್ದರು. ಪತಿಯೊಂದಿಗೆ ಸಿಂಗರಿಸಿಕೊಳ್ಳಲು ಇದು ನೆರವಾಗುತ್ತದೆ ಎಂದು ಹೇಳುವರು. ಕಡೆಯದಾಗಿ ಗಡಿಗೆಯಿಂದ ತನ್ನ ಮೇಲೆ ಎಣ್ಣೆ ಸುರಿದುಕೊಂಡು ಬೆಂಕಿಗೆ ಹಾರಿ ಎಲ್ಲರಿಂದ ದೂರವಾಗುವಳು.[2]

2. ಸೀಜರ್ ಪ್ರೆಡ್ರಿಕ್ ಪ್ರಕಾರ, "ಪತಿಯರ ಸಾವಿನ ಎರಡು–ಮೂರು ತಿಂಗಳ ಅನಂತರ ಪತ್ನಿಯರು ಆತ್ಮಬಲಿದಾನ ಮಾಡುವರು. ತನ್ನನ್ನು ದಹಿಸುವ ಆ ದಿನದಂದು ವಧುವಿನ ಹಾಗೆ ಅಲಂಕರಿಸಿಕೊಂಡು ಆನೆ ಅಥವಾ ಕುದುರೆಯನ್ನೇರಿ ನಗರದಲ್ಲಿ ಮೆರವಣಿಗೆ ಹೋಗುವುದು. ಅಥವಾ ಶವದಹನ ಸ್ಥಳಕ್ಕೆ ಎಂಟು ಜನರು ಒಂದು ಪಲ್ಲಕ್ಕಿಯಲ್ಲಿ ಹೊತ್ತುಕೊಂಡು ಹೋಗುವರು. ಹಲವು ವ್ರತಗಳನ್ನು ಆಚರಿಸಿ ತನ್ನ ಪಾಪಗಳನ್ನು ತೊಳೆಯಲು ನದಿಯಲ್ಲಿ ಮಿಂದು ಪೀತವಸ್ತ್ರವನ್ನುಟ್ಟು, ಇದಕ್ಕಾಗಿಯೇ ಮಾಡಿದ ಕುಂಡವನ್ನೇರಿ ತಲೆಯ ಮೇಲೆ ಎಣ್ಣೆ ಸುರಿದುಕೊಂಡು ತನ್ನನ್ನು ಅಗ್ನಿಗೆ ಅರ್ಪಿಸುವಳು.[3]

ಸಹಗಮನ ಪದ್ಧತಿಯನ್ನು ಪಾಲಿಸದವರನ್ನು ಅನಾದರಿಸುತ್ತಿದ್ದರು. ಅವರ ಮಕ್ಕಳ ತಲೆಗೂದಲನ್ನು ತೆಗೆದು ಅಪಮಾನದ ರೂಪದಲ್ಲಿ ಕುಟುಂಬಕ್ಕೆ ಕಲಂಕಿತರೆಂದು ಭಾವಿಸುತ್ತಿದ್ದರು.[4] ತಲೆಯ ಕೂದಲು ತೆಗೆಯುವ ಉದ್ದೇಶವೇನೆಂದರೆ ಸತಿ ಪದ್ಧತಿ ಪಾಲಿಸದೆ ಸಾಂಪ್ರದಾಯಿಕ ಪದ್ಧತಿಯನ್ನು ಉಲ್ಲಂಘಿಸುವವರಿಗೆ ಶಿಕ್ಷೆ ಎಂದು ಸೂಚನೆ.

ಸತಿಯ ಬಗ್ಗೆ ವಿವರಿಸಿದ ಯತಾರ್ಥವಾದ ಚಿತ್ರ ಕೆಲವು ಪಂಗಡಗಳಲ್ಲಿ ಭಿನ್ನವಾಗಿರುತ್ತಿದ್ದವು. ಸ್ತ್ರೀಯರು ಸತಿಪದ್ಧತಿಯಂತೆ ತಮ್ಮ ಪತಿಯರೊಂದಿಗೆ ಚಿತೆಯಲ್ಲಿ ಭಸ್ಮವಾಗುತ್ತಿದ್ದರು ಅಥವಾ ಕೆಲಕಾಲ ಅನಂತರ ಇದಕ್ಕಾಗಿಯೇ ಬೆಂಕಿ ಇಟ್ಟು ದಹಿಸುತ್ತಿದ್ದರು. ವಿಶೇಷವಾಗಿ ಲಿಂಗಾಯಿತರಲ್ಲಿ ಪತಿಯೊಂದಿಗೆ ಹೂಳುತ್ತಿದ್ದರು.

ನ್ಯೂನಿಜ್‌ರವರ ಪ್ರಕಾರ, ಪೃಥ್ವಿಯ ಎರಡು ಸ್ಥಾನಗಳು ಆನಂದಮಯವಾಗಿ ಪತಿ–ಪತ್ನಿಯರಿಗೆ ಪ್ರತ್ಯೇಕವಾಗಿ ಒಂದೊಂದು ಸ್ಥಳದಲ್ಲಿಟ್ಟು ಸ್ವಲ್ಪ, ಸ್ವಲ್ಪವಾಗಿ ಮಣ್ಣು ಮುಚ್ಚಲಾಗುತ್ತಿತ್ತು. ಹೀಗೆ ಪತ್ನಿಯು ಪತಿಯೊಂದಿಗೆ ಸಾಯುತ್ತಿದ್ದಳು.[5]

ಬರಬೋಸರ ಪ್ರಕಾರ, "ರಾಜನ ಮೃತ್ಯು ಕೇವಲ ನಾಲ್ಕು–ಐದು ನೂರು ಸ್ತ್ರೀಯರಿಗೆ ಅಲ್ಲ, ಅವನ ನಿಕಟವರ್ತಿಯರೆಲ್ಲರಿಗೂ ಸಹಾ ಈ ಪದ್ಧತಿ ಅನ್ವಯಿಸುತ್ತಿತ್ತು. ಅವರೂ ರಾಜನೊಂದಿಗೆ ದಹನವಾಗುತ್ತಿದ್ದರು.[6]

ಮಾಸ್ತಿಕಲ್ಲು ಎಂಬುದು, ಸ್ತ್ರೀಯರ ಧೈರ್ಯ ಹಾಗೂ ಸ್ಥಿರ ಸಂಕಲ್ಪದಿಂದ ಈ ಭಯಾನಕ ಕೃತ್ಯವನ್ನು ಪಾಲಿಸುವವರ ಜ್ಞಾಪಕಾರ್ಥವಾಗಿ ಅಥವಾ ಹೆಸರಾರ್ಥಕ ವಾಗಿ ನಿರ್ಮಿಸಿದ ಶಿಲೆ, ಸಾಧಾರಣವಾಗಿ ಮಾಸ್ತಿಕಲ್ಲುಗಳ ಮೇಲೆ ಕೈಯನ್ನೆತ್ತಿದ ಸ್ತ್ರೀಯರ ಚಿತ್ರ ಮತ್ತು ಅವಳ ತಲೆಯ ಹಿಂದೆ ಉರಿಯುವ ಪಂಜಿನ ಚಿತ್ರ ಅಂಕಿತ ವಾಗಿರುತ್ತದೆ. ಕೆಲವು ಶಿಲೆಗಳ ಮೇಲೆ ಕೇವಲ ಕೈಯನ್ನೆತ್ತಿದ ಚಿತ್ರವಿರುತ್ತದೆ. ಪತಿಯನ್ನು ಅನುಸರಿಸುವ ಸ್ತ್ರೀಯರು ಚಿತೆಯನ್ನೇರುವ ಮುನ್ನ ಸಿಂಧೂರದಲ್ಲಿ ತಮ್ಮ ಬೆರಳಚ್ಚನ್ನು ಮೂಡಿಸುತ್ತಿದ್ದರು. ಬಹುಶಃ ಶಿಲ್ಪಿಯು ಚಿತ್ರವನ್ನು ಕೆತ್ತಿ ಅವಕ್ಕೆ ಕೈಯನ್ನು ಜೋಡಿಸಿರಬಹುದು. ಮಾಸ್ತಿಕಲ್ಲುಗಳ ಮೇಲೆ ಪತಿ–ಪತ್ನಿಯರ ಅಥವಾ ಕೇವಲ ಪತ್ನಿಯ ಚಿತ್ರಗಳು ಕಂಡುಬರುತ್ತದೆ. ಮಹಾಸತಿಯರ ಕೈ ಹೆಬ್ಬೆರಳ ಹಾಗೂ ಕಾಲ್ಬೆರಳ ಮಧ್ಯ ಒಂದು ರೇಖೆಯನ್ನು ಕಾಣಬಹುದು. ಜನರು ಅವರನ್ನು ಪೂಜಿಸುತ್ತಾರೆ. ಕೆಲವು ಮಾಸ್ತಿಕಲ್ಲುಗಳ ಮೇಲೆ ಗೋಚರಿಸುವ ಬೆರಳಚ್ಚುಗಳು ಪ್ರಾಯಶಃ ಮಹಾಸತಿಯರವೇ ಎಂದು ಹೇಳಬಹುದು. ಸ್ತ್ರೀಯರು ಉದಾತ್ತ ಸ್ಥೈರ್ಯವುಳ್ಳ ಹಾಗೂ ಆತ್ಮಬಲವುಳ್ಳವರೆಂದು ಸೂಚಿಸಲಾಗಿದೆ. ಸ್ತ್ರೀಯರೆಲ್ಲರೂ ಆತ್ಯಾನಂದದಿಂದ ತಮ್ಮ ಪತಿಯರ ಮೃತದೇಹದೊಂದಿಗೆ ತಮ್ಮ ದೇಹವನ್ನು ಜ್ವಾಲೆಗಳಿಗೆ ಅರ್ಪಿಸಿದ್ದಾರೆ.

ಕ್ರಿ. ಶ. 1345ರಲ್ಲಿ ಮಹಾಮಂಡಲೇಶ್ವರ ಹರಿಯ ಒಡೆಯರನ ಕಾಲದಲ್ಲಿ ಬರೆಸಿದ ಶಾಸನದಲ್ಲಿ ಮಲ್ಲೀಗೌಡ ಸಾವನ್ನಪ್ಪಿದಾಗ ಅವನ ಪತ್ನಿ ಚಿನ್ನಕ್ಕ ಸಹಗಮನ ಪದ್ಧತಿಯನ್ನು ನಿರ್ವಹಿಸಿದಳು.[9]

ಕ್ರಿ.ಶ 1369ರಲ್ಲಿ ಕೀರ್ತಿ ಅರಸನ ಮಗನಾದ ಅರುಹಣಹಳ್ಳಿ ಒಡೆಯ ನಾಗರಸನ ಪತ್ನಿಯರಾದ ಬೈಚಕ್ಕ ಬೈದೇವಿ ಮತ್ತು ಮಾವರಗೌಡಿ ಮೂವರು ಅವನೊಂದಿಗೆ ಸತ್ತಾಗ ನಾಗರಸನ ಹೆಸರಾರ್ಥಕವಾಗಿ ವೀರಗಲ್ಲನ್ನು ಸ್ಥಾಪಿಸಿದರು.[10]

ಕ್ರಿ. ಶ. 1383ರಲ್ಲಿ ಸಂಕರಗೌಡನ ಪತ್ನಿಯಾದ ದೇಮಾಯಿ ಸಂಕರಗೌಡ ನೊಂದಿಗೆ ಸಹಗಮನ ಮಾಡಿ ಮಹಾಸತಿಯಾದಳು.[11]

ಕ್ರಿ. ಶ. 1393ರಲ್ಲಿ ಬೈಚಿನಾಯಕರ ಮಗನು ಸತ್ತಾಗ ಅವನ ಪತ್ನಿಯು ಅವನ ಚಿತೆಯ ಉರಿವ ಬೆಂಕಿಯ ಜ್ವಾಲೆಯಲ್ಲಿ ತನ್ನನ್ನು ದಹಿಸಿಕೊಂಡಳು.[12]

ಕ್ರಿ. ಶ. 1384ರಲ್ಲಿ ಮಲ್ಲಪ್ಪನ ಪತ್ನಿಯು ಸತಿಯನ್ನು ಆಚರಿಸಿದಳು.[13]

ಕ್ರಿ.ಶ. 1384ರಲ್ಲಿ ಹರಿಹರನ ರಾಜ್ಯಕಾಲದಲ್ಲಿ ಮಲೆಯಾದೂರಿನ ಜಾದವ ರಾಚಲ್ಲಿ ಬೈಚಿ ಸತ್ತಾಗ ಅವನ ಪತ್ನಿ ಬೊಮ್ಮಕ್ಕ ಮಹಾಸತಿಯಾದಳು.[14]

ಕ್ರಿ. ಶ. 1384ರಲ್ಲಿ ಹರನುಗೌಡ ಕೇಶವನ ಸಮ್ಮುಖದಲ್ಲಿ ಹರಿಹರ ದೇವಾಲ ಯದ ದಕ್ಷಿಣಾದ್ವಾರ ಲೋಷದಲ್ಲಿ ಸೂರ್ಯಾಸ್ತದ ಅನಂತರ ದೈವಾಧೀನನಾದನು. ಅವನಪತ್ನಿ ಲಕ್ಮಗಾವಿ ಪತಿಯನ್ನು ಅನುಸರಿಸಿ ಸತಿಯನ್ನಾಚರಿಸಿ ದೇವಲೋಕಕ್ಕೆ

ತಿಳಿಸಿದಳು. ಹನ್ನೊಂದನೆ ದಿನದಂದು ಹರಿಯುಗೌಡನ ತಮ್ಮ ಓಸಾ ಹರಿಯಗೌಡ ಮತ್ತು ಮಗನಿಂದ ಈ ಕಲ್ಲು ಸ್ಥಾಪಿತವಾಯಿತು.[15]

ಕ್ರಿ. ಶ. 1399ರಲ್ಲಿ ಕೊಂಗ್ವ ಚೀಲಾದೇರ ಜೊಮ್ಮಯ್ಯ (ಗೋವುದಾಳಿಯೊಂದಿಗೆ) ಕಲಿಯೂರು ಗ್ರಾಮದಲ್ಲಿ ಹೋರಾಡಿ ಮಡಿದನು. ಅವನ ಪತ್ನಿ ಚಿಯ್ಯಕ್ಕನೂ ಅವನೊಂದಿಗೆ ಮಡಿದಳು.[16]

ಕ್ರಿ. ಶ. 1401ರಲ್ಲಿ ಚಿಕ್ಕೆಗೌಡನ ಮಗ ನಾಗಪ್ಪನು ಸ್ವರ್ಗವಾಸಿಯಾದನು. ಆತನ ಪತ್ನಿ ತೆಗಿಗೌಡಿ ಸಹಗಮನ ಮಾಡಿದಳು.[17]

ಕ್ರಿ. ಶ. 1403ರಲ್ಲಿ ಮಾಂಡಿಗಮುಂಡ ಸೋಮನ ಮಗ ವೀರವಕ ಹಾಗೂ ಉರಿವಣ್ಣ ಬೊಮ್ಮನಾಯಕನ ಕಂದೇವಿ ಇವರಿಬ್ಬರು ಸಹಗಮನ ಮಾಡಿದರು.[18]

ಕ್ರಿ. ಶ. 1403ರಲ್ಲಿ ಕುರಾಣಿವಾಕನ ಮಗ ಸಾಕಣ್ಣ ಹಾಗೂ ಅವನ ಪತ್ನಿ ದೇವಕಿಟ್ಟಿ ಸ್ವರ್ಗವಾಸಿಯಾದರು.[19]

ಕೆಳದಿಯ ಹರಿಯಗೌಡನ ಪತ್ನಿ ವೇಚಿಗೌಡಿ ಕುಂದಂಡಿ ಹಲ್ಲೆಯ ಗುಟ್ಟೆಯಲ್ಲಿ ತನ್ನ ಪತಿಯೊಂದಿಗೆ ಕ್ರಿ. ಶ. 1404ರಲ್ಲಿ ಮಹಾಸತಿಯಾದಳು.[20]

ಕ್ರಿ. ಶ. 1405ರಲ್ಲಿ ಜೈರಶೆಟ್ಟಿ ಮಗಳು ಗಂಗಾಸಾಣಿ ರಾಮದೇವ ನಾಯಕನ ಪಮಿದಿ ಪೆನಗೊಂಡದಲ್ಲಿ ಖೇಮಿದೇವ ನಾಯಕನ ಮಗನಾದ ರಾಮದೇವ ನಾಯಕರ ಪತ್ನಿ ಪೆಮಿದಿ ಪೆನುಗೊಂಡದಲ್ಲಿ ತನ್ನ ಪತಿ ಮಡಿದ ಸ್ಥಳದಲ್ಲಿ ಅಗ್ನಿಯನ್ನು ಪ್ರವೇಶಿಸಿದಳೆಂದು ತಿಳಿಸಲಾಗಿದೆ.[21]

ಹಡನೆಳ್ಳಿಯ ಹೈವಭೂಪ ಹಾಗೂ ಭೈರದೇವಿಯ ಮಗನಾದ ಮಹಾಮಂಡಲೇಶ್ವರ ಸಂಗಿರಾಮನು ಭೈರದೇವಿಯ ಮೃತ್ಯುವಿನ ಸ್ಮಾರಕಾರ್ಥವಾಗಿ ಕ್ರಿ.ಶ. 1408ರಲ್ಲಿ ನಿಧಿಯನ್ನು ಸ್ಥಾಪಿಸಲಾಯಿತು.[22]

ಶಿವಮೊಗ್ಗ ಜಿಲ್ಲೆಯ ಜಂಬಾನಿ ಗ್ರಾಮದ ಮಾರಿಗುಡಿಯ ಎದುರಿನಲ್ಲಿರುವ ಮಾಸ್ತಿಗಲ್ಲಿನ ಮೇಲೆ ಕ್ರಿ.ಶ. 1401ರಲ್ಲಿ ಬಲಿದಾನ ಮಾಡಿದ ಸ್ತ್ರೀಯ ಸಂಪೂರ್ಣ ಚಿತ್ರವಿದೆ. ಬೈಕುಂಡನ ಚಿಲಿಯ ಜೈಗುರಜೈಚಯ್ಯನ ಪತ್ನಿ ಸಾಯಕ್ಕನ ವಿವರಣೆ ಅಂಕಿತವಾಗಿದೆ.[23]

ಕ್ರಿ. ಶ. 1411ರಲ್ಲಿ ಮಾನವನೆ ವಿಥರಕನ ಪತ್ನಿ ಅಮಿಗೌಡಿ ಪತಿಯೊಂದಿಗೆ ಸತಿಯಾಗಿ ಸತ್ತಳು.[24]

ದೇವರಾಯನ ಶಾಸನ ಕಾಲದಲ್ಲಿ ಮೇಗರಹಳ್ಳಿ ಗ್ರಾಮದ ಸ್ತ್ರೀ ನಾಗಕ್ಕ ಕ್ರಿ. ಶ. 1417ರ ಆಗಸ್ಟ್ 17ರಂದು ಸತಿಯಾದಳು.[25]

ಕ್ರಿ. ಶ. 1417ರಲ್ಲಿ ದೇವರಾಯನ ಒಡೆಯನ ಆದೇಶದಂತೆ ಗೊವೆಗುಟ್ಟಿ ಸಾಮ್ರಾಜ್ಯವು ಚಂದ್ರಗುಟ್ಟಿಯ ವಿರೂಪದಂಡನಾಯಕನ ಅಧೀನದಲ್ಲಿತ್ತು. ರಾಮಗೌಡನು ದೇವರಾಯ ಒಡೆಯನನ್ನು ಸಂದರ್ಶಿಸಲು ಹೋಗಿ ದೈವಾಧೀನನಾದನು. ಗುರುಗಸ ಒಡೆಯ ಅವನ ಸಂದೇಶವನ್ನು ಗುಟ್ಟೆಯಿಂದ ಹರಿಕೆಗೆ ಕಳುಹಿಸಲಾಯಿತು.

ಇದನ್ನು ತಿಳಿದ ರಾಮಗೌಡನ ಪತ್ನಿ ಬೊಮ್ಮಗೌಡಿ ಪತಿಯನ್ನು ಸೇರಲು ಸಹಗಮನ ಮಾಡಿದಳು.

ಹೀಗೆ ರಾಮಗೌಡ ಹಾಗೂ ಬೊಮ್ಮಕ್ಕ ಸ್ವರ್ಗ ಸೇರಿದರು. ಇದಕ್ಕಾಗಿ ಅವನ ಶಿಲಾಶಾಸನವನ್ನು ಬರೆಯಲಾಯಿತು.[26]

ಕ್ರಿ.ಶ. 1419ರಲ್ಲಿ ಕೆಳದಿ ಕರಿಯ ತಿಮ್ಮಗೌಡನು ಸಾವನ್ನಪ್ಪಿದಾಗ ರಾಮಕ್ಕ ಮಹಾಸತಿಯಾದಳು.[27]

ಕ್ರಿ.ಶ. 1426ರಲ್ಲಿ ಕಪ್ಪಾರ ಹಳ್ಳಿಯ ಯುದ್ಧದಲ್ಲಿ ನಾಚಯ್ಯನು ಸತ್ತಾಗ ಅವನ ಪತ್ನಿ ಬೀರಟ್ಟಿ ಪತಿಯ ಚಿತೆಯನ್ನೇರಿದಳು. ಇದಕ್ಕಾಗಿ ಜಕ್ಕುಜ್ಜನಿಂದ ಮಹಾ ಸತಿ ಕಲ್ಲನ್ನು ನೆಡಲಾಯಿತು.[28]

ಕ್ರಿ.ಶ. 1427ರಲ್ಲಿ ತಿರಕಿಗೌಡನು ಯುದ್ಧದಲ್ಲಿ ಸತ್ತಾಗ ಆತನ ಪತ್ನಿ ಅವನೊಂದಿಗೆ ಸತಿಯನ್ನು ಅನುಸರಿಸಿದಳು.[29]

ಕ್ರಿ.ಶ. 1429ರಲ್ಲಿ ಮಾನವನ ಮಾದಿಗ ಸ್ವರ್ಗವಾಸಿಯಾದಾಗ ಆತನ ಪತ್ನಿ ಸತಿ ರೂಪದಲ್ಲಿ ಅವನ ಚಿತೆಯನ್ನೇರಿದಳು.[30]

ಕ್ರಿ.ಶ. 1432ರಲ್ಲಿ ಕುಮ್ಚಾತಿ ರಾಣಯನಾಯಕ ಸತ್ತಾಗ ಅವನ ಪತ್ನಿ ಚಂದ ನಾಯಕಿ ಸಹಗಮನ ಮಾಡಿದಳು.[31]

ಕ್ರಿ.ಶ. 1432ರಲ್ಲಿ ಹೇಮದಲ್ಲಿ ವಿದರಿಕಾರಿ ಬೊಮ್ಮನಾಯಕ ಸತ್ತಾಗ ಅವನ ಪತ್ನಿ ಕಾಮಯ ನಾಯಕಿಟ್ಟಿ ಮಹಾಸತಿಯಾದಳು.[32]

ಕ್ರಿ.ಶ. 1447ರಲ್ಲಿ ಶಿಕಾರಿಪುರದಲ್ಲಿ ಸತಿ ಚರಿತಾರ್ಥವಾಯಿತು.[33]

ಕ್ರಿ.ಶ. 1451ರಲ್ಲಿ ಚಂದ್ರಗುತ್ತಿ ಪ್ರಾಂತ್ಯದ ಸೊರಟನಲ್ಲಿ ಸತಿ ಚರಿತಾರ್ಥವಾಗಿದೆ.[34]

ಕ್ರಿ.ಶ. 1468ರಲ್ಲಿ ಹಡುವಳ್ಳಿಯ ಹೊನ್ನದೇವಿ ಅಮ್ಮನ ಸತಿಯನ್ನು ಅನುಸರಿಸಿದಳು.[35]

ಶಕ 1373ರಲ್ಲಿ ಕರಿಯ ನಾಯಕನ ಮಗನಾದ ಚೌಡನಾಯಕ ಗೋವು ಆಕ್ರಮಣಕಾರರ ಗುಂಪಿಗೆ ಎದುರಾಗಿ ಅವರನ್ನು ಸದೆ ಬಡಿಯುವಾಗ ಸತ್ತು ಸ್ವರ್ಗ ಸೇರಿದ ಆತನ ಪತ್ನಿ ಕೆಂಬಾಯಮ್ಮ ಅವನೊಂದಿಗೆ ಸ್ವರ್ಗ ಸೇರಿದಳು.[36]

ವೆಂಕಟನ ಸಾವಿನಿಂದಾಗಿ ಅವನ ರಾಣಿ ಸತಿಯನ್ನು ಪಾಲಿಸಿದಳು. ಓಬಾಂಬಿಕ ಪುಷ್ಪಳೊಂದಿಗೆ ಚಿತೆಯನ್ನೇರಿದಳು.[37]

ಎರಡನೆಯ ದೇವರಾಯನು ಸತ್ತಾಗ ಚಂದ್ರಗುತ್ತಿಯ ಶೆಟ್ಟಿಯರ ಆತ್ಮಬಲಿ ದಾನವನ್ನು ಕೇಳಬಹುದು.[38]

ಕ್ರಿ.ಶ. 1534ರಲ್ಲಿ ಆಗಸ್ಟ್ 14 ರಂದು ದೇವಣ ಹಾಗೂ ಆತನ ಪತ್ನಿ ಮಾಕವಿಯ ಸ್ಮರಣೆಯಲ್ಲಿ ಆರಿಕುಧರ ಮಾಗಿಡ್ಡ ಗೌಡರಾಯನು ಸ್ಥಾಪಿಸಿದ ವೀರಗಲ್ಲು ವಿಷಯವಾಗಿ ಚಾಮರಾಜನಗರ ತಾಲ್ಲೂಕಿನಲ್ಲಿ ಲಿಖಿತವಾಗಿದೆ.[39]

ಹೀಗೆ ನಾಯಕನ ಮಗನಾದ ಓಂಬೆನಾಯಕನು ಕಾದಾಟದಲ್ಲಿ ಸತ್ತಾಗ ಅವನ ಇಬ್ಬರು ಪತ್ನಿಯರಾದ ಕಾಮವ್ವ ನಾಮಕಿಟ್ಟಿ ಮತ್ತು ಲಕ್ಕವ್ವನಾಮಕಿಟ್ಟಿ ಅವನಿಗಾಗಿ ಸತ್ತರು.[40]

ಹೀಗೆ ಮೇಲಿನ ಶಿಲಾಲೇಖಗಳು ನಮಗೆ ಸತಿಯ ವಿಷಯವಾಗಿ ವಿವರಣಾತ್ಮಕ ಚಿತ್ರವನ್ನು ಒದಗಿಸುತ್ತವೆ. ಈ ಮೇಲ್ಕಂಡ ಆಧಾರಗಳಿಂದ ವಿಜಯನಗರ ಕಾಲದಲ್ಲಿ ಸತಿಪದ್ಧತಿ ಕೆಲವೊಮ್ಮೆ ಬಲವಂತವಾಗಿಯೂ ಮತ್ತೊಮ್ಮೆ ಸ್ತ್ರೀಯರು ಸ್ವಇಚ್ಛೆಯಿಂದಲೂ ಅನುಸರಿಸುತ್ತಿದ್ದರು ಎಂದು ತಿಳಿದುಬರುತ್ತದೆ. ಹೀಗೆ ವಿಜಯನಗರದ ಕಾಲದಲ್ಲಿ ಅಸ್ತಿತ್ವದಲ್ಲಿದ್ದ ಸತಿಪದ್ಧತಿಯು ದೈವಿಕಭಾವನೆಯಿಂದಲೂ ಹಾಗೂ ಪಾವಿತ್ರ್ಯತೆಯಿಂದಲೂ ಕೂಡಿತ್ತು.

ಅಡಿಟಿಪ್ಪಣಿಗಳು

1. ಮೇಜರ್—ಇಂಡಿಯಾ ಇನ್ ದಿ ಫಿಫ್ಟೀನ್ ಸೆಂಚುರಿ, ಪು. 23–24
2. ಎಫ್. ಇ. ಸೀವೆಲ್—ಪು. 372–73
3. ಪರ್ಚಸ್, ವಾ. 10, ಪು. 94–96
4. ಬಾರ್ಬೋಸ್ 1, ಪು. 216
5. ಎಫ್. ಇ. ಸೀವೆಲ್, ಪು. 392–93
6. ಹಿಸ್ಟರಿ ಆಫ್ ಇಂಡಿಯ ಬೈ ಸತ್ಯನಾಥೈಯ್ಯರ್, ಪು. 354
7. ಇ. ಸಿ. ವಾ. 9, ಎಸ್‌ಬಿ. 104, ಪು. 15
8. ಎಂ. ಎ. ಆರ್. 1947–56, ಪು. 87
9. ಅದೇ, ಪು. 86
10. ಇ. ಸಿ. ವಾ. 2, ಡಿಜಿ 117, ಪು. 73
11. ಇ. ಸಿ. ವಾ. 8, ಎಸ್‌ಬಿ. 134, ಪು. 17
12. ಎಸ್. ಎ. ಐ. ವಾ. 15, ಪು. 165
13. ಎಂ. ಎ. ಆರ್. 1941, ಪು. 195
14. ಇ. ಸಿ. ವಾ. 2, ಪು. 73
15. ಎಂ. ಎ. ಆರ್. 1923, ಪು. 85
16. ಇ. ಸಿ. ವಾ. 7 ಪಾರ್ಟ್ 1, ಪು. 152
17. ಅದೇ, ಪು. 95
18. ಅದೇ, ಪು. 92
19. ಎಂ. ಎ. ಆರ್. 1933, ಪು. 211–12
20. ಎಎನ್‌ಎಸ್‌ಪಿ ಆಫ್ ಎ. ಪಿ. ಪು 21

21. ಎಂ. ಎ. ಆರ್. 1939–40 ಪು. 90
22. ಎಂ. ಎ. ಆರ್. 1933, ಪು. 210–11
23. ಇ. ಸಿ. ವಾ. 7, ಎಸ್‌ಬಿ 26, ಪು 5
24. ಎಂ. ಎ ಆರ್. 1934, ಪು. 188
25. ಇ. ಸಿ. ವಾ. 7, ಪಾರ್ಟ್, 1, ಪು. 46
26. ಇ. ಸಿ. ವಾ. 8 ಎಸ್‌ಎ. 35, ಪು 97
27. ಎಂ. ಎ. ಆರ್. 1927, ನಂ. 126, ಪು. 119
28. ಇ. ಸಿ. ವಾ. 8, ನಗರ್ 29
29. ಇ. ಸಿ. ವಾ. 7, ಎಸ್‌ಬಿ 24
30. ಅದೇ, ಎಸ್‌ಬಿ 497
31. ಅದೇ,
32. ಅದೇ, ನಂ. 1
33. ಇ. ಸಿ. ವಾ. 8, ನಂ. 16
34. ಎ. ಆರ್. ಆಫ್ ಎಸ್. ಎ. ಇಪಿ. 1930–31, ಪು 32
35. ಎಂ. ಎ. ಆರ್. 1931, ಪು. 156
36. ಎಂ. ಎ. ಆರ್. 1923 ಪು 86
37. ಇ. ಸಿ. ವಾ. 8 ಪಾರ್ಟ್ 2, ಎಸ್‌ಬಿ 18
38. ಎಂ. ಎ. ಆರ್. ನಂ. 88, ಆಫ್ 1950–51
39. ಅದೇ.
40. ಅದೇ.

ಎಂ. ಪ್ರಭಾಕರ ಜೋಶಿ

ದಕ್ಷಿಣ ಕನ್ನಡದ ಚಿತ್ಪಾವನರು

೧

ಭಾಷಿಕ ಮತ್ತು ಜನಾಂಗೀಯ ಅಧ್ಯಯನದ ದೃಷ್ಟಿಯಿಂದ ಕರ್ನಾಟಕದ ಕರಾವಳಿ ಅದರಲ್ಲೂ ದಕ್ಷಿಣ ಕನ್ನಡ (ಕಾಸರಗೋಡು ಸಹಿತ) ತುಂಬ ವಿಶಿಷ್ಟವಾಗಿದ್ದು ಹಲವಾರು ಮಹತ್ವದ ವಿದ್ಯಮಾನಗಳಿಂದ ಕೂಡಿದೆ. ಬಹುಭಾಷಾಪ್ರಾಚುರ್ಯದ ದೃಷ್ಟಿಯಲ್ಲಿ–ಆಧುನಿಕ ಮಹಾನಗರಗಳನ್ನು ಬಿಟ್ಟರೆ-ದೇಶದಲ್ಲೇ ಇದೊಂದು ಸಮೃದ್ಧ ಪ್ರದೇಶ, ಒಂದು ಮಾದರಿ ಪ್ರದೇಶವೂ ಹೌದು. ದಕ್ಷಿಣ ಕನ್ನಡವೆಂಬ ಹೆಸರನ್ನೂ, ಕನ್ನಡ ಸಾಹಿತ್ಯ ಪರಂಪರೆ, ಕನ್ನಡದ ಕೆಲಸಗಳಲ್ಲಿ ಹಿರಿದಾದ ಸ್ಥಾನವನ್ನೂ ಹೊಂದಿದ್ದರೂ. ಈ ಪ್ರದೇಶದ ಬಹುಸಂಖ್ಯಾತ ಭಾಷೆ ಕನ್ನಡವಲ್ಲ ಎಂಬುದು ಕೌತುಕದ ಸಂಗತಿ. ಈ ನೆಲೆಯಲ್ಲಿ ಗಣಿಸಿದಾಗ, ಕನ್ನಡ ಸಾಹಿತ್ಯ ಸಂಸ್ಕೃತಿಗಳಿಗೆ ಈ ಪ್ರದೇಶದ ಕೊಡುಗೆ ಒಂದು ಅದ್ಭುತವಾಗಿಯೇ ಕಾಣುತ್ತದೆ. ದೇಶದ ಹಲವೆಡೆ ಇಲ್ಲದ 'ಜಾತಿಗೊಂದು ಭಾಷೆ' ಎಂಬ ನಿಯಮ (ಎಲ್ಲ ಅಲ್ಲವಾದರೂ) ಬಹಳ ಸಂದರ್ಭಗಳಿಗೆ ಇಲ್ಲಿ ಅನ್ವಯವಾಗುತ್ತದೆ. ಬಹು ಜನಾಂಗೀಯತೆ, ಬಹುಭಾಷಿಕತೆಗಳು ನಮ್ಮೀ ಪ್ರದೇಶಕ್ಕೆ ಸಮಸ್ಯೆಗಳಾಗಲೇ ಇಲ್ಲ. ಅವು ಜೀವನದ ಅತ್ಯಂತ ಸಹಜವಾದ ಅಂಶಗಳು ಎಂಬಂತೆ ಅಂಗೀಕೃತವಾಗಿವೆ. ನಾಲ್ಕಾರು ಭಾಷೆಗಳು ಮುಖ್ಯವಾಗಿ ವ್ಯವಹಾರದಲ್ಲಿದ್ದರೂ ಭಾಷಾವೈಷಮ್ಯ, ಘರ್ಷಣೆಗಳ ದಾಖಲೆಯೇ ಈ ಪ್ರದೇಶಕ್ಕಿಲ್ಲ ಎಂಬುದು ಮಹತ್ವದ ಸಂಗತಿ. ಬಹುಭಾಷಾ ಪದ್ಧತಿಯನ್ನು ಇಲ್ಲಿಯ ಜನ ಸಹಜವಾಗಿ, ಸರಳವಾಗಿ ಅಂಗೀಕರಿಸಿ ಆಚರಿಸಿರುವ ಒಂದು ಕ್ರಮ, ಮಾದರಿಯಾಗಬಲ್ಲ ಸಂಗತಿ. ಈ ಪ್ರದೇಶದ ಭಾಷಾ ಸಾಮರಸ್ಯ, ಭಾಷಿಕ-ರಾಜಕೀಯ ವೈಷಮ್ಯ, ವಿರೋಧಗಳ ಒಟ್ಟು ರಾಷ್ಟ್ರೀಯ ಸಂದರ್ಭಕ್ಕೆ, ಒಂದು ಪರಿಹಾರವನ್ನು ದಿಗ್ದರ್ಶನ ಮಾಡುವಂತಿದೆ.

ವಿಭಿನ್ನ ಭಾಷೆಗಳನ್ನಾಡುವ ಜನ, ಕನ್ನಡವನ್ನು ಮುಖ್ಯ ಭಾಷೆಯಾಗಿ ಅಂಗೀಕರಿಸಿ, ತಮ್ಮ ಭಾಷೆ, ಸಂಸ್ಕೃತಿಗಳನ್ನು ಕಾಪಾಡಿಕೊಂಡು, ಈ ಪ್ರದೇಶದ

ಜೀವನ, ಸಂಸ್ಕೃತಿಗಳನ್ನು ಶತಮಾನಗಳ ಕಾಲ ರೂಪಿಸುತ್ತ ಬಂದಿದ್ದಾರೆ. ಇದರಿಂದ ಇಲ್ಲಿಯ ಬದುಕು, ಸಾಹಿತ್ಯ, ಸಾಮಾಜಿಕ ಜೀವನ, ರೀತಿ ನೀತಿಗಳು, ಚಾರಿತ್ರಿಕ ಘಟನಾವಳಿ, ಉಡುಪು ತೊಡುಪು, ಪಾಕ ಪದ್ಧತಿ, ಕಲಾಪ್ರಕಾರಗಳು ಮುಂತಾದ ಎಲ್ಲ ಸಂಗತಿಗಳಿಗೆ ಅನ್ಯತ್ರದುರ್ಲಭವಾದ ಸಂಕೀರ್ಣತೆ, ಸೊಬಗು, ಆಳ, ಹರಹುಗಳು ಒದಗಿಬಂದಿವೆ; ಹಾಗೆಯೇ ಇಲ್ಲಿಯ ಜನಜೀವನದಲ್ಲಿ ಕಂಡುಬರುವ ಪರಿಶ್ರಮ, ಸಾಹಸ ಪ್ರವೃತ್ತಿ, ಚುರುಕು ವಿದ್ಯಾಪ್ರೇಮಗಳಿಗೂ ಕಾರಣವಾಗಿದೆ. ಬಹುಭಾಷಾ ಸಮುದಾಯದ ಜೀವನ ವ್ಯಕ್ತಿಯ ಬೆಳವಣಿಗೆಗೆ ಎಷ್ಟೊಂದು ಪೋಷಕವೆಂಬ ವಿಚಾರಕ್ಕೆ ಇಲ್ಲಿಯ ಜನಜೀವನ ವಿಪುಲ ದೃಷ್ಟಾಂತಗಳನ್ನು ಒದಗಿಸುತ್ತದೆ. ಬಹು ಭಾಷಿಕ ಜೀವನ ವ್ಯಕ್ತಿಯ ಅನುಭವ ಪ್ರಪಂಚವನ್ನು ಹಿಗ್ಗಿಸಿ ಅವನ ಗ್ರಹಣ ಶಕ್ತಿ, ಚಾತುರ್ಯ ಸಾಮರ್ಥ್ಯಗಳನ್ನೂ ಪೋಷಿಸುವುದಲ್ಲದೆ, ಹೊಂದಾಣಿಕೆ, ಸಹನೆಗಳನ್ನೂ ಕಲಿಸುತ್ತದೆ. ಈ ನಿಟ್ಟಿನಲ್ಲಿ ಈ ಪ್ರದೇಶದ ಜನ ತುಂಬ ಭಾಗ್ಯಶಾಲಿಗಳು.

ಇಂತಹ ಒಂದು ಸ್ಥಿತಿಗೆ ಕೆಲವು ಐತಿಹಾಸಿಕ ಕಾರಣಗಳಿವೆ. ಇವುಗಳಲ್ಲಿ ಮುಖ್ಯವಾದುದು, ಈ ಪ್ರದೇಶಕ್ಕೆ ೧೫-೧೬ನೆಯ ಶತಮಾನಗಳ ನಡುವೆ ನಡೆದ ಬೃಹತ್ಪ್ರಮಾಣದ, ವಿವಿಧ ಜನಾಂಗಗಳ ವಲಸೆ. ಜತೆಗೆ ಇಲ್ಲಿಯ ಬಹುಸಂಖ್ಯಾತರ ಆಡುನುಡಿಯಾದ ತುಳು ಭಾಷೆಯ ಅಸ್ತಿತ್ವದ ವಿಶಿಷ್ಟಸಂದರ್ಭ ಇನ್ನೊಂದು. ಬ್ರಿಟಿಷ್ ಆಳ್ವಿಕೆಯಿಂದ ಬಹುಕಾಲ ಮದ್ರಾಸು ಪ್ರಾಂತ್ಯದ ಅಂಗವಾಗಿದ್ದುದರಿಂದಲೂ, ಸಂಗೀತ ನೃತ್ಯಕಲೆಗಳ ಸಂಪರ್ಕ ಮತ್ತು ಹೋಟೆಲ್ ಉದ್ಯಮ ಸಂಪರ್ಕದಿಂದಲೂ ಇಲ್ಲಿ ತಮಿಳು ಬಲ್ಲವರೂ ಸಾಕಷ್ಟಿರುವರು. ನೆರೆ ಪ್ರಾಂತ್ಯವಾದ ಕೇರಳದ ಸಂಪರ್ಕ, ಜಿಲ್ಲೆಯಾದ್ಯಂತ ಹರಡಿರುವ ಮಲಯಾಳಿ ಮುಸ್ಲಿಂ ಜನಾಂಗದ ವಸತಿಗಳು, ಮಲಯಾಳ ಮನೆಮಾತಿನ ಗಾಣಿಗ, ಬಿಲ್ಲವ, ನೇಕಾರ, ಬೋವಿ ಮುಂತಾದ ಜನ ವರ್ಗಗಳು ಇಲ್ಲಿ ನೆಲೆಯಾದುದು—ಈ ಕಾರಣಗಳಿಂದ 'ಮಲಯಾಳಿ-ಕನ್ನಡಿಗ'ರೆನ್ನ ಬಹುದಾದವರ ಸಂಖ್ಯೆಯೂ ಗಣನೀಯವಾಗಿದೆ. ಈ ಪ್ರದೇಶಕ್ಕೆ ಪೂರ್ವದಿಂದ ಬಂದ ವಲಸೆಗಳು ತೀರ ಕಡಿಮೆ ಎಂಬುದು ಗಮನಾರ್ಹ.

ಇಲ್ಲಿಗೆ ವಲಸೆ ಬಂದ ಜನವರ್ಗಗಳಲ್ಲಿ ಬಲು ದೊಡ್ಡಪಾಲು ಉತ್ತರ ಕೊಂಕಣ ದಿಂದ ಬಂದ ಜನರದು. ಗೋವಾ ಮತ್ತು ಅದರ ಉತ್ತರದ ಕರಾವಳಿಯಿಂದ ವಲಸೆ ಬಂದ ಸಾರಸ್ವತ, ಕುಡುಬಿ, ಗೌಡ (ಗಾವಡೇ), ರಾಜಾಪುರ ಸಾರಸ್ವತ, ಪೆಡ್ನೇಕರ, ಕುಡಾಲ ದೇಶಕರ, ರಾಣೆ, ದೈವಜ್ಞ, ವಾರಾವಲೀಕರ, ಖಾರ್ವಿ, ಮರಾಠಿನಾಯಕ ಚಿತ್ಪಾವನ, ಕರ್ಹಾಡೆ, ಪದ್ಯೆ, ರೋಮನ್ ಕಥೋಲಿಕ್, ವೈಶ್ಯವಾಣಿ ಮುಂತಾದ ಸಮುದಾಯಗಳು ಇಲ್ಲಿ ಗಣನೀಯ ಪ್ರಮಾಣದಲ್ಲಿದ್ದು, ಇಂದಿಗೂ ತಮ್ಮ ಹಲವು ಜನಾಂಗೀಯ-ಸಾಂಸ್ಕೃತಿಕ ವೈಶಿಷ್ಟ್ಯಗಳನ್ನು ಉಳಿಸಿಕೊಂಡಿದ್ದಾರೆ. ಕೆಲವೆಡೆ, ತುಳು ಭಾಷೆಯನ್ನು ಅಂಗೀಕರಿಸುವ ಮರಾಠಿ ನಾಯಕರಂತಹ ಒಂದೆರಡು ವರ್ಗ ಗಳನ್ನು ಬಿಟ್ಟು, ಮೇಲೆ ಹೇಳಿದ ಎಲ್ಲ ಸಮುದಾಯಗಳವರೂ ಮರಾಠಿ ಮತ್ತು

ಕೊಂಕಣಿ ಭಾಷೆಗಳ ವಿವಿಧ ರೂಪಗಳನ್ನು ಮನೆಮಾತಾಗಿ ಉಳಿಸಿಕೊಂಡು ಬಂದಿದ್ದಾರೆ. ಇಂತಹ ವರ್ಗಗಳ ಪೈಕಿ ಚಿತ್ಪಾವನ ಬ್ರಾಹ್ಮಣವರ್ಗವೂ ಒಂದು.

೨

ಚಿತ್ಪಾವನ ಶಬ್ದದ ವ್ಯುತ್ಪತ್ತಿ ಮತ್ತು ಈ ಜನಾಂಗದ ಜನಾಂಗೀಯ ಮೂಲ ಇವು ತುಂಬ ವಿವಾದಾಸ್ಪದ ಸಂಗತಿಗಳು. 'ಚಿತ್ಪಾವನ' ಶಬ್ದಕ್ಕೆ ಹಲವು ಬಗೆಯ ವ್ಯಾಖ್ಯೆಗಳನ್ನು ಊಹಿಸಲಾಗಿದ್ದು,[1] ಅವು ಚಿತ್ಪಾವನರ ಮೂಲವನ್ನು ಇಸ್ರೇಲಿನಿಂದ ಚಿತ್ತಗಾಂಗ್‌ವರೆಗೆ ಒಯ್ಯುತ್ತವೆ.[2] ಈ ಶಬ್ದದ ವ್ಯುತ್ಪತ್ತಿ ಊಹೆಗಳಲ್ಲಿ ಇವು ಕೆಲವು

(ಅ) ಚಿತಾಸ್ಥಾನದಲ್ಲಿದ್ದ ಮೃತದೇಹಗಳಿಗೆ ಪರಶುರಾಮನು ಜೀವವಿತ್ತು, ಬ್ರಾಹ್ಮಣರನ್ನಾಗಿಸಿದ ಜನಾಂಗ. ಚಿತಾ + ಪಾವನ—ಚಿತ್ಪಾವನ (ಇದು "ಸಹ್ಯಾದ್ರಿ ಖಂಡ"ದ ಹೇಳಿಕೆ)

(ಆ) ಯಜ್ಞ ಚಿತಿಗಳಿಗೆ ಸಂಬಂಧಿಸಿದ ಪಾವನ ಕರ್ಮಗಳಿಂದ ಚಿತಿ + ಪಾವನ —ಚಿತ್ಪಾವನ.

(ಇ) ಇಜಿಪ್ತ ದೇಶದಿಂದ ಬಂದವರು - ಇಜಿಪ್ತವಾನ್ - ಜಿಪ್ತವಾನ್ - ಚಿಪ್ತವಾನ್-ಚಿತ್ಪಾವನ.

(ಈ) 'ಕ್ಷಿತಿ'ಯನ್ನು 'ಪೋಳಣೆ' ಮಾಡಿ (ಮರಾಠಿ 'ಸುಡು' ಎಂಬ ಅರ್ಥದ ಪದ) ಕ್ಷಿತಿ ಪೋಳಣೆ–ಚಿಪ್ಪೊಳಣೆ–ಚಿತ್ಪಾವನ.

(ಉ) ಚಿತ್ತಪಾವನ ಪಾವನ ಚಿತ್ತರು ಎಂಬರ್ಥದಲ್ಲಿ ಚಿತ್ಪಾವನ.[3]

(ಊ) ಅನ್, ಮನ್, ವನ್ ಎಂಬ ಕೊನೆಯುಳ್ಳ ಹೆಸರುಗಳು ಇರಾನಿ (ಪರ್ಷಿಯನ್) ಸ್ವಭಾವವನ್ನು ಸೂಚಿಸುವಂತಹವು. ಚಿತ್ಪಾವನ್ ಎಂಬುದೂ ಮೂಲತಃ ಆ ಕಡೆಯಿಂದ ಬಂದ ನಾಮಧೇಯ ಇರಬಹುದೆ ಎಂಬ ಒಂದು ತರ್ಕ.[4]

ಈ ಎಲ್ಲಾ ಊಹೆಗಳನ್ನು, ಭಾಷಾಶಾಸ್ತ್ರೀಯವಾದ ಪುರಾವೆಗಳಾಗಲಿ, ಪರಂಪರೆಯಿಂದ ಬಂದ ಕಥಾನಕಗಳಾಗಲಿ, ಇತರ ಆಧಾರಗಳಾಗಲಿ ಇಲ್ಲದಿರುವಾಗ, ಸ್ವೀಕರಿಸುವುದು ಕಷ್ಟ. 'ಸಹ್ಯಾದ್ರಿ ಖಂಡ' ತುಂಬ ಗೊಂದಲಗಳ ಕಂತೆ. ಅದರಲ್ಲಿ ಐತಿಹಾಸಿಕ ಅಂಶ ತೀರ ಕಡಿಮೆ. 'ಚಿತ್ಪಾವನ' ಈ ಶಬ್ದವು ಸ್ಥಳ ನಾಮ ಸಂಬಂಧಿಯಾಗಿರುವ ಸಾಧ್ಯತೆಯೇ ಹೆಚ್ಚು. ಹೆಚ್ಚಿನ ಬ್ರಾಹ್ಮಣವರ್ಗಗಳ ಹೆಸರು ದೇಶವಾಚಿಃ ಉದಾ : ಶಿವಳ್ಳಿ, ಕೋಟ್ಟ, ಹವೀಕ (ಹೈಗ–ಹೈವೆಸೀಮೆ–ಹೈಗನಾಡು) ಕರ್ಹಾಡೆ, ಕಾಶ್ಮೀರಿ, ಗೌಡ, ಕರ್ನಾಟಕ, ಆಂಧ್ರ ಮುಂತಾದ ಬ್ರಾಹ್ಮಣವರ್ಗಗಳ ಹೆಸರುಗಳನ್ನು ನೋಡಬಹುದು (ನಂಬೂದರಿ, ಅಯ್ಯಂಗಾರ ಮುಂತಾದ ಅಪವಾದಗಳೂ ಇವೆ.) 'ಚಿತ್ಪಾವನ' ಎಂಬುದೂ ದೇಶವಾಚಿ ಇರಬಹುದೆ? ಹಾಗಾದರೆ ಚಿತ್ಪಾವನಕ್ಕೆ ಸಂಬಂಧಿಸಿದ ಸ್ಥಳನಾಮ ಯಾವುದು?

ಕೊಂಕಣದಲ್ಲಿ ಚಿತ್ಪಾವನರ ಮೂಲ ಸ್ಥಾನ ರತ್ನಾಗಿರಿ ಜಿಲ್ಲೆಯ ಚಿಪಳೂಣ ತಾಲ್ಲೂಕು. ಚಿತ್ಪಾವನರ ಬಹ್ವಂಶ ಕುಲದೇವಾಲಯಗಳು ಚಿಪಳೂಣ ಹಾಗೂ ಬಳಿಯ ಗುಹಾಗರಗಳಲ್ಲಿವೆ. ಚಿಪಳೂಣದ ಹಿಂದಿನ ಹೆಸರು ಚಿತಪೋಳಣ.[5] ಚಿತ್ಪಾವನರು ತಮ್ಮನ್ನು, ತಮ್ಮೊಳಗೆ 'ಚಿಪ್ಪೊಳ್ಣಿ', 'ಚಿಪ್ಪಣ್ಣಿ' 'ಚಿಪ್ತೆ'-ಎಂಬು ದಾಗಿ ಕರೆದುಕೊಳ್ಳುವುದಿದೆ. ಇದು 'ಚಿತಪೋಳಣೇ' ಚಿತಪೋಳಣದವರು— ಎಂಬುದರ ಪರಿವರ್ತಿತ ರೂಪ. 'ಚಿಪಳೂಣಕರ' ಎಂಬುದು ಚಿತ್ಪಾವನರ ಅಡ್ಡ ಹೆಸರುಗಳಲ್ಲಿ (ಕುಲನಾಮ) ಒಂದು. ಇದು ದಕ್ಷಿಣ ಕನ್ನಡದಲ್ಲಿ 'ಚಿಪ್ಪಣ್‌ಕಾರ್' ಎಂಬ ಪ್ರಾಕೃತರೂಪದಲ್ಲಿ ರೂಢಿಯಲ್ಲಿದೆ. ಆದುದರಿಂದ ಚಿತಪೋಳಣ ಎಂಬ ಸ್ಥಳನಾಮದ ಪಾಕೃತರೂಪ ಚಿಪ್ಪಣ್ ಎಂದು ಇರುವುದೂ ಸಾಧ್ಯ. 'ಚಿತಪಾವನಸ್ಥ' ಎಂಬ ಒಂದು ಉಲ್ಲೇಖ ಚಿತ್ಪಾವನ ಶಬ್ದವು ದೇಶವಾಚಿ ಎಂಬುದಕ್ಕೆ ಸ್ಪಷ್ಟಸಾಕ್ಷಿ.[6] 'ಹರಿಹರೇಶ್ವರ ಮಹಾತ್ಮ್ಯ'ದ ಒಂದು ಶ್ಲೋಕದಲ್ಲಿ ಹೀಗಿದೆ.

> ಅಧುನಾಮ ಚಿತ್ತಸ್ಯ ಪಾವನಂಕ್ಷೇತ್ರಮಸ್ತು ತತ್...
> ತಚ್ಚಿತ್ತಪಾವನಂ ಕ್ಷೇತ್ರಂ ಲೋಕೇ ಖ್ಯಾತಿಮಗಾತ್ ತದಾ ॥

ಗುಹಾಗರಮಹಾತ್ಮ್ಯದಲ್ಲಿ ಚಿತ್ಪಾವನರಿಗೆ ಚಿತ್ತಪೂರ್ಣರೆಂಬ ಹೆಸರಿದೆ.[7] 'ಅತ್ಯಲ್ಪದಾನ ಸಂತುಷ್ಟಾಃ ಚಿತ್ತಪೂರ್ಣ ಇತಿ ಸ್ಮೃತಾಃ' (ಅತ್ಯಲ್ಪದಾನಸಂತುಷ್ಟರಾಗಿದ್ದು ಚಿತ್ತ ಪೂರ್ಣರೆಂಬ ಹೆಸರುಳ್ಳವರು) ಚಿಪಳೂಣ್ ಬಳಿ ಚಿತ್ಪೂಲ ಎಂಬ ಒಂದು ಊರು ಇದೆ.

ಇದರಿಂದ ಚಿತ್ಪಾವನ ಎಂಬ ಪದವು ಮೌಲಿಕ ಅಥವಾ ಸಂಸ್ಕೃತೀಕೃತ ಸ್ಥಳನಾಮಕ್ಕೆ ಸಂಬಂಧಿಸಿ ರಬೇಕೆಂದು ತೋರುತ್ತದೆ. 'ಚಿತ್ಪಾವನ' ಗ್ರಂಥಕರ್ತ ಡಿ॥ ನಾ.ಗೋ. ಚಾಫೇಕರರೂ ಇದೇ ನಿಷ್ಕರ್ಷಕ್ಕೆ ಬಂದಿದ್ದಾರೆ.

ಚಿತ್ಪಾವನರಿಗೆ ಮಹಾರಾಷ್ಟ್ರದಲ್ಲಿ ಕೋಕಣಸ್ಥ ಎಂಬ ಇನ್ನೊಂದು ಹೆಸರೂ ಇದೆ. ಇದು ಪೇಶ್ವೆ ರಾಜ್ಯದಲ್ಲಿ ಚಿತ್ಪಾವನರು ಕೊಂಕಣದಿಂದ ಪುಣೆಗೆ ಹೋಗಿ ನೆಲೆಯಾದಾಗ ಬಂದ ಹೆಸರು, ಕೊಂಕಣದವರು ಎಂಬ ಅರ್ಥದಲ್ಲಿ ಮಹಾರಾಷ್ಟ್ರದಲ್ಲಿ ಘಟ್ಟದ ಮೇಲೆ, ಘಟ್ಟದ ಕೆಳಗೆ ಎಂಬುದಕ್ಕೆ 'ದೇಶ' ಮತ್ತು 'ಕೋಕಣ' ಎಂಬ ಪದಗಳ ಬಳಕೆ ಇದೆ. ದೇಶ ಎಂದರೆ ಕರ್ಹಾಡದ ಬಳಿಯ ಒಂದು ಪ್ರದೇಶ. ವ್ಯಾಪಕ ವಾದ ಅರ್ಥದಲ್ಲಿ 'ದೇಶ' ಎಂದರೆ ಘಟ್ಟದ ಮೇಲಣ ಪ್ರಸ್ಥಭೂಮಿ ಎಂದರ್ಥ. ಕೊಂಕಣದಿಂದ, ದೇಶಕ್ಕೆ ಜೀವನೋಪಾಯಕ್ಕಾಗಿ ಜನ ಹೋದಾಗ 'ದೇಶಾವರ ಜಾಣೇ' (ದೇಶಕ್ಕೆ ಹೋಗುವುದು) ಎಂಬುದು ಬಂದಿರಬಹುದು. (ಕನ್ನಡ 'ದೇಶಾವರಿ'ಯೂ ಇದರಿಂದ ವ್ಯುತ್ಪನ್ನವಾಗಿರಬೇಕು.) 'ದೇಶ'ದಲ್ಲಿದ್ದ ಬ್ರಾಹ್ಮಣರು ದೇಶಸ್ಥರು. ಕೊಂಕಣದಿಂದ ಬಂದವರು ಕೋಕಣಸ್ಥರು. ಈ ಹೆಸರು ದಕ್ಷಿಣ

ಕನ್ನಡದ ಚಿತ್ಪಾವನರಿಗೆ ಬಳಕೆ ಇಲ್ಲ. ಕಾರಣ, ಮಹಾರಾಷ್ಟ್ರದಲ್ಲಿ ಈ ಪದಪ್ರಯೋಗ ಬರುವ ಮೊದಲೇ ಚಿತ್ಪಾವನರು ಈ ಕಡೆ ವಲಸೆ ಬಂದಿದ್ದರು.

೩

ಚಿತ್ಪಾವನರ ಜನಾಂಗೀಯ ಮೂಲದ ಬಗೆಗೆ ಹಲವು ಊಹೆಗಳನ್ನು ಮುಂದಿಡಲಾಗಿದೆ. ಚಿತ್ಪಾವನರಲ್ಲಿ ಎದ್ದುತೋರುವ ಕೆಲವು ಶಾರೀರಿಕ ವೈಲಕ್ಷಣ್ಯಗಳಿವೆ. ವಿಶಿಷ್ಟವೆನ್ನಬಹುದಾದ ಹಳದಿಮಿಶ್ರಿತ ಬಿಳಿಬಣ್ಣ, ಕೆಂಚುಕೂದಲು, ಕಾಚು–ಕೆಂಚು ಕಣ್ಣುಗಳು ಇವುಗಳಿಂದಾಗಿ ಪರ್ಶಿಯನ್ ನಾರ್ಡಿಕ್ ಸಂಬಂಧವನ್ನು ಊಹಿಸಿದ್ದಾರೆ.[8] ದಕ್ಷಿಣ ಕನ್ನಡದ ಚಿತ್ಪಾವನರಲ್ಲೂ, ಮಹಾರಾಷ್ಟ್ರದ ಚಿತ್ಪಾವನರಲ್ಲೂ ಈ ಲಕ್ಷಣಗಳು ಒಂದೇತೆರನಾಗಿ ಇವೆ. ನಾರ್ಡಿಕ್ ಸಂಬಂಧವನ್ನು ಹೊಂದಿಸಲು ಇರುವ ತೊಡಕೆಂದರೆ, ಚಿತ್ಪಾವನರ ಆಳುತನ ಎತ್ತರವಲ್ಲದಿರುವುದು. ಐದೂಮುಕ್ಕಾಲು ಅಡಿಗಿಂತ ಎತ್ತರದ ಶರೀರವುಳ್ಳ ಚಿತ್ಪಾವನರು ಬಹಳ ಕಡಿಮೆ. ಆದರೆ ಈ ಅಂಶ, ಬಹುಕಾಲದನಂತರ, ಆಹಾರ, ಪ್ರಾದೇಶಿಕ ಕಾರಣಗಳಿಂದ ಬಂದುದೆಂದೂ ಊಹಿಸಬಹುದು. ಮೂಗಿನ ರಚನೆಯಲ್ಲಿ ಪರ್ಶಿಯನ್, ಯಹೂದಿ ಸಾಮ್ಯವನ್ನು ಹೇಳಲಾಗುತ್ತದೆ.[9]

ಚಿತ್ಪಾವನ ಜನಾಂಗಕ್ಕೂ ಪರಶುರಾಮನೆಂಬ ಪೌರಾಣಿಕ ವ್ಯಕ್ತಿಗೂ ವಿಶೇಷ ಸಂಬಂಧವಿದ್ದಂತೆ ಕಾಣುತ್ತದೆ. ಪಶ್ಚಿಮ ಕರಾವಳಿಯ ಉದ್ದಕ್ಕೂ ಹಲವು ಜನಾಂಗಗಳು, ವಿಶೇಷತಃ ಬ್ರಾಹ್ಮಣವರ್ಗಗಳು ಪರಶುರಾಮನು ತಮ್ಮನ್ನು ಇಲ್ಲಿಗೆ ತಂದುದಾಗಿ ಹೇಳುತ್ತವೆ ನಿಜ. ಆದರೆ ಪರಶುರಾಮ ಚಿತ್ಪಾವನ ಜಾತಿಗೆ ಆ ಪ್ರಮುಖ ಆರಾಧ್ಯ ದೇವರಾಗಿರುವಂತೆ ಉಳಿದವರಿಗಿಲ್ಲ. ಚಿತ್ಪಾವನರ ಪ್ರಮುಖ ತಾಣಗಳಲ್ಲೆಲ್ಲ ಪರಶುರಾಮ ದೇವಸ್ಥಾನಗಳಿವೆ. ಪರಶುರಾಮ ಸೃಷ್ಟಿಯಕಥೆ, ಕರಾವಳಿಯಲ್ಲಿ ಇರುವ ಪರಂಪರಾಗತ ಜನಶ್ರುತಿಗಳೆಲ್ಲ, ಪರಶುರಾಮನೆಂಬವನು ಕರಾವಳಿಗೆ ಬಂದ ಆದ್ಯ ವಲಸೆಗಾರರ ನಾಯಕನಾಗಿರಬೇಕೆಂಬ ಅಂಶಗಳನ್ನು ಸೂಚಿಸುತ್ತವೆ. ಈ ಪರಶುರಾಮನಿಗೂ, ಪರ್ಶಿಯಾದಲ್ಲಿ ಇತ್ತೆನ್ನಲಾದ ಪರ್ಶು ಎಂಬ ಜನಾಂಗಕ್ಕೂ ಸಂಬಂಧ ಸೂಚಿಸುವ ಊಹೆಗಳಿವೆ.[10] ಚಿತ್ಪಾವನರ ಜನಶ್ರುತಿಗಳಲ್ಲಿ, ಪರಶುರಾಮನು, ತಾವು ಕೊಂಕಣಕ್ಕೆ ಬರುವಾಗ ಇಲ್ಲಿ ಮೊದಲೇ ಇದ್ದಾನೆ, ಹೊರತು ತಮ್ಮೊಂದಿಗೇ ಬಂದುದಾಗಿ ಕಥೆಯಿಲ್ಲ.

ಇದಕ್ಕೆ ಸಂವಾದಿಯಾಗಿರುವ, ಐತಿಹಾಸಿಕ ದೃಷ್ಟಿಯಿಂದ ಮಹತ್ವದ, ಒಂದು ಆಖ್ಯಾಯಿಕೆ "ಬ್ರಾಹ್ಮಣೋತ್ಪತ್ತಿ ಮಾರ್ತಾಂಡ"—ವಿವಿಧ ಬ್ರಾಹ್ಮಣ ವರ್ಗಗಳ ಉತ್ಪತ್ತಿಯನ್ನು ತಿಳಿಸುವ ಗ್ರಂಥದಲ್ಲಿದೆ.[11] ಅದರಂತೆ ಸಹ್ಯಾದ್ರಿಯ ಪಶ್ಚಿಮಕ್ಕೆ ವಾಸಿಸುತ್ತಿದ್ದ ಹದಿನಾಲ್ಕು ಮಂದಿ ಬ್ರಾಹ್ಮಣರನ್ನು ಬರ್ಬರಾದಿ ಮ್ಲೇಚ್ಛರು ಕೊಂಡೊಯ್ದರು. (ಚಿತ್ಪಾವನರಲ್ಲಿ ಹದಿನಾಲ್ಕು ಗೋತ್ರಗಳಿವೆ) ಬಹುಕಾಲ ಅಲ್ಲಿದ್ದು, ಅನಂತರ ಹಿಂದಿರುಗಿದ ಇವರನ್ನು ಪರಶುರಾಮನು ಶುದ್ಧೀಕರಿಸಿ ಆಶ್ರಯ

ನೀಡಿದನು. (ಎವಂನಿವಾಸಂ ಕುರ್ವತ್ಸು ಅಕಸ್ಮಾತ್ ದೈವಯೋಗತಃ। ನೀತ್ವಾ ಸಾಗರ ಮಧ್ಯಸ್ಥೈಃ ಮ್ಲೇಚ್ಛೈಃ ಬರ್ಬರ್‌ಕಾದಿಭಿಃ॥) ಇಲ್ಲಿ ಚಿತ್ಪಾವನರ ಸಂಬಂಧ ಬರ್ಬರದೇಶದೊಂದಿಗೆ ಬರುತ್ತದೆ. ಈ ಬರ್ಬರಕ ಜನರೂ, ನಾರ್ಡಿಕ್ ಜನಾಂಗ ಶಾಖೆಯವರೆನ್ನಲಾಗಿದೆ.[12]

ಉಳಿದ ಬ್ರಾಹ್ಮಣವರ್ಗಗಳಿಗಿಂತ ಭಿನ್ನವಾಗಿರುವ ಚಿತ್ಪಾವನರ ದೈಹಿಕ ಲಕ್ಷಣಗಳಿಗೆ—ಕೂದಲ ಬಣ್ಣ, ಕಣ್ಣು, ಮೈಬಣ್ಣ—ಕಾರಣ, ಅವರು ಉಳಿದ ಆರ್ಯವರ್ಗಗಳು, ಈ ಕಡೆಗೆ ಬಂದ ನೂರಾರುವರ್ಷಗಳ ಬಳಿಕ ಇರಾಣದ ಕಡೆಯಿಂದ ಬಂದುದು ಕಾರಣವಿರಬೇಕೆಂದು ಶ್ರೀ. ಬಸ್ತಿ ಪುಂಡಲೀಕ ಶೆಣೈ ವಾದಿಸುತ್ತಾರೆ.[13]

ಕೊಂಕಣದ ಚಿಪಳೂಣಕ್ಕೆ ಬರುವ ಮೊದಲು ಚಿತ್ಪಾವನರ ತಾಣ ಯಾವುದು ಎಂಬುದನ್ನು ಊಹಿಸಲು ಸಹಾಯಕವಾಗುವ ಇನ್ನೊಂದು ಅಂಶವನ್ನೂ ದಿ॥ ನಾ. ಗೋ. ಚಾಫೇಕರರು ಸೂಚಿಸಿದ್ದಾರೆ. ಸಹ್ಯಾದ್ರಿಖಂಡದಲ್ಲಿರುವ ಒಂದು ಶ್ಲೋಕ ಹೀಗಿದೆ.[14]

> ಅಲ್ಪದಾನೇನ ಸಂತುಷ್ಟಾಃ ಚಿತ್ರಪೂತ ಇತಿಶ್ರುತಾಃ ॥
> ಆರ್ಯಾವರ್ತಾ ಇತಿಖ್ಯಾತಾಃ ಆರ್ಯಾವರ್ತಾದುಪಾಗತಾಃ

ಇದರಲ್ಲಿ 'ಚಿತ್ಪಾವನ' (ಚಿತ್ತಪೂತ) ಎಂಬ ಹೆಸರಲ್ಲದೆ, ಆರ್ಯಾವರ್ತರೆಂಬ ಇನ್ನೊಂದು ಹೆಸರು ಈ ವರ್ಗಕ್ಕೆ ಇದ್ದುದು ಗಮನಾರ್ಹವಾಗಿದೆ. ಚಿತ್ಪಾವನರಿಗೆ ಸಂಬಂಧಿಸಿರುವ ಆಖ್ಯಾಯಿಕ, ದಂತಕತೆಗಳಲ್ಲೆಲ್ಲ ಸಮುದ್ರದ, ಹಡಗಿನ ಉಲ್ಲೇಖ ಇದ್ದೇ ಇದೆ. ಸಮುದ್ರಮಾರ್ಗವಾಗಿ ಇವರು ಬಂದರೆಂದರೂ, ಮೊದಲು ಎಲ್ಲಿಗೆ ಬಂದರು? ಕೊಂಕಣಕ್ಕೊ ಅಥವಾ, ಉತ್ತರಕ್ಕೆ ಗುಜರಾತ್ ಕಡೆಗೋ ಎಂಬ ಪ್ರಶ್ನೆ ಮುಖ್ಯವಾದುದು. ಏಕೆಂದರೆ ಮೇಲಿನ ಶ್ಲೋಕದಲ್ಲಿ 'ಆರ್ಯಾವರ್ತ'ರೆನಿಸಿದ ಇವರು ಆರ್ಯಾವರ್ತದಿಂದ ಬಂದರೆಂದಿದೆ. ಆರ್ಯಾವರ್ತವೆಂದರೆ ವಿಂಧ್ಯ, ಹಿಮಾಲಯಗಳ ನಡುವಿನ ಪ್ರದೇಶ. ಕೊಂಕಣವು ಅದರ ಭಾಗವಲ್ಲ. ಹಾಗಾದರೆ ಆರ್ಯಾವರ್ತದ ಕರಾವಳಿ—ಅಂದರೆ ಗುಜರಾತ, ಕಚ್ಛ ಭಾಗಕ್ಕೆ ಬಂದಿರಬಹುದೆ? ಅಲ್ಲಿಂದ ಎರಡನೆಯ ವಲಸೆಯಾಗಿ ಕೊಂಕಣಕ್ಕೆ ಬಂದರೆ? ಎಂಬೊಂದು ಊಹೆಗೆ ಅವಕಾಶ ಇದೆ. ಚಿತ್ಪಾವನರಿಗೂ ಗುಜರಾತದ ಉದೀಚ್ಯ ಬ್ರಾಹ್ಮಣರು, ನಾಗರ ಬ್ರಾಹ್ಮಣರಿಗೂ ದೇಹಲಕ್ಷಣ ಸಾಮ್ಯವಿದೆ ಎನ್ನಲಾಗಿದೆ.[15] ಸೌರಾಷ್ಟ್ರದ ಸೋಮನಾಥದಲ್ಲಿರುವ ತುರ್ಕಿ ಬ್ರಾಹ್ಮಣರಿಗೂ ಹಾಗೆಯೇ.[16] ಗುಜರಾತದ ಭಾರ್ಗವ (ಪರಶುರಾಮ?) ನಾಗರ, ಉದೀಚ್ಯ, ತುರ್ಕಿಬ್ರಾಹ್ಮಣರು ಚಿತ್ಪಾವನರ ಜ್ಞಾತಿ ಜಾತಿಗಳಿರಲು ಸಾಧ್ಯ.

ಇದಕ್ಕೆಲ್ಲ ಪೂರಕವಾಗಿ, ಅಪೂರ್ಣವಾಗಿದ್ದರೂ, ಅಮುಖ್ಯವಲ್ಲದ ಒಂದು ಪುರಾವೆ ಚಿತ್ಪಾವನಿ ಭಾಷೆಯಲ್ಲಿದೆ. ಚಿತ್ಪಾವನೀ ಭಾಷೆ ಒಂದು ಬಗೆಯ ಹಳೆ ಮರಾಠಿ ಅಥವಾ ಮಹಾರಾಷ್ಟ್ರೀ ಪ್ರಾಕೃತ ಪ್ರಭೇದ. ಇದು ಚಿತ್ಪಾವನರು ಕೊಂಕಣಕ್ಕೆ ಬಂದ ಕಾಲಕ್ಕೆ ಇದ್ದ ಭಾಷೆಯನ್ನು ಸ್ವೀಕರಿಸಿದ ಮೇಲಿನ ಸಂಗತಿಯಷ್ಟೆ. ಆ ಮೊದಲು ಅವರ ಭಾಷೆ ಗುಜರಾತಿಯ ಒಂದು ಪ್ರಭೇದವಾಗಿರಲು ಸಾಧ್ಯವಿದೆ ಎಂಬುದಕ್ಕೆ ಒಂದೆರಡು ಸೂಚನೆಗಳಿವೆ. ಚಿತ್ಪಾವನಿ ಒಂದು ಕ್ರಿಯಾಪದ 'ತ್ಸೆ' (ಆಗಿದೆ, ಇದೆ) ಎಂಬುದು ಗುಜರಾತಿಯ 'ಛ' ಎಂಬುದರ ಸ್ಪಷ್ಟ ಸಮಾನ ಪದ. ಹಾಗೆಯೇ ಚಿತ್ಪಾವನಿ ಕೇಂ (ಎಲ್ಲಿ?) ಗುಜರಾತಿಯ 'ಕೇಂ' (ಎಲ್ಲಿ?) ಚಿತ್ಪಾವನಿಯ ತ್ಯಾಹಾಂ (ಅಲ್ಲಿ) ಗುಜರಾತಿಯ 'ತ್ಯಾಂ' (ಅಲ್ಲಿ) ಕೂಡ. ಇವು ಚಿತ್ಪಾವನಿ ಭಾಷೆಯಲ್ಲಿ ಉಳಿದುಕೊಂಡಿರುವ, ಗುಜರಾತಿಯ ತುಣುಕುಗಳಿರಬಹುದೆ ? ಎಂಬುದು ನನ್ನ ಊಹೆ. ಈ ಊಹೆಯನ್ನು ತಾನು ಕೂಡ ಕಲ್ಪಿಸಿದ್ದಾಗಿ ಹಿರಿಯ ಮರಾಠಿ ವಿದ್ವಾಂಸ, ಮರಾಠಿ "ಸಂಸ್ಕೃತಿಕೋಶ"ದ ಸಂಪಾದಕ, ಪುಣೆಯ ಪಂಡಿತ ಮಹಾದೇವಶಾಸ್ತ್ರಿ ಜೋಶಿಯವರು ತಿಳಿಸಿದ್ದಾರೆ.[17]

ಮೇಲಿನ ಅಂಶಗಳನ್ನೆಲ್ಲಾ, ದಂತಕತೆಗಳನ್ನೂ ಒಟ್ಟಾಗಿ ಪರಿಶೀಲಿಸಿ ಹೀಗೊಂದು ಮಬ್ಬಾದ ಚಿತ್ರವನ್ನು ಕಲ್ಪಿಸಬಹುದು. ಪರ್ಷಿಯಾದಿಂದಲೋ, ಬರ್ಬರದಿಂದಲೋ ಗುಜರಾತದ ಆಸುಪಾಸಿನ ಕರಾವಳಿಗೆ ಬಂದು ಅಲ್ಲಿ ನೆಲೆಯಾದರು. ಇವರ ಒಳ ಪಂಗಡಗಳು ನಾಗರ, ತುರ್ಕಿ, ಉದೀಚ್ಯ ಬ್ರಾಹ್ಮಣರು. ಅಲ್ಲಿಂದ ಒಂದು ಗುಂಪು ಕೊಂಕಣಕ್ಕೆ ಸಮುದ್ರಮಾರ್ಗವಾಗಿ ಬಂದು ಗುಹಾಗರ ಚಿಪಳೂಣಗಳಿಗೆ ಬಂದು 'ಆರ್ಯಾವರ್ತ'ರೆನಿಸಿದರು. (ಆರ್ಯಾವರ್ತಾ ಇತಿಖ್ಯಾತಾಃ | ಆರ್ಯಾವರ್ತಾದು ಪಾಗತಾಃ). ಚಿಪಳೂಣದಲ್ಲಿ ನೆಲೆಸಿ—ಚಿಪಳೋಣೆ—ಚಿತ್ಪಾವನರೆನಿಸಿದರು. ಪ್ರಾಕೃತ ಮಹಾರಾಷ್ಟ್ರಿ ಭಾಷೆಯನ್ನು ಅಂಗೀಕರಿಸಿ, ಚಿತ್ಪಾವನಿಭಾಷೆ ರೂಪುಗೊಂಡಿತು. ಈ ಒಂದು ತಾತ್ಕಾಲಿಕ ಪೂರ್ವಪಕ್ಷವನ್ನು ಹಿಡಿದು, ಗುಜರಾತಿ–ಚಿತ್ಪಾವನಿ ಭಾಷೆಗಳನ್ನೂ ಗುಜರಾತಿನ ಬ್ರಾಹ್ಮಣ ಮತ್ತು ಚಿತ್ಪಾವನರ ಶಾರೀರಿಕ ಲಕ್ಷಣ, ಪದ್ಧತಿಗಳು, ಆಚಾರಕ್ರಮಗಳು, ಪಾರಂಪರಿಕ ದಂತಕತೆಗಳನ್ನೂ ಹೋಲಿಸಿ, ಸಿದ್ಧಾಂತಕ್ಕೆ ಬರಲು ಸಾಧ್ಯವಿದೆ. ಇಲ್ಲಿ ಮಾಡಿರುವುದು ತೀರ ಮಿತವಾದ ಒಂದು ಊಹಾಪ್ರಪಂಚ ಮಾತ್ರ.

ಕೊಂಕಣದಲ್ಲಿ ನೆಲೆಯಾಗಿ ಬಹುಕಾಲ, ಬಡತನದ ಜೀವನ, ಮಾಮೂಲು ಬ್ರಾಹ್ಮಣವರ್ಗದ ಜೀವನಮಾರ್ಗಗಳಲ್ಲಿ ವ್ಯಕ್ತವಾಗಿದ್ದ ಈ ಜನಾಂಗ 17ನೆಯ ಶತಮಾನದ ಅನಂತರ ಥಕ್ಕನೆ ಮಿಂಚಿ, ಆಸ್ಫೋಟಿಸಿ ರಾಜಕೀಯ, ಸಾಹಿತ್ಯ, ಕಲೆ, ಸಾಮಾಜಿಕ ರಂಗಗಳಲ್ಲಿ ನೀಡಿದ ಕೊಡುಗೆ ಅದ್ಭುತವೆನ್ನಬಹುದಾದದ್ದು. ಪುಣೆಯಲ್ಲಿ ಪೇಶ್ವೆರಾಜ್ಯ ಸ್ಥಾಪನೆಯಾದುದು ಚಿತ್ಪಾವನರ ಉತ್ಕರ್ಷಕ್ಕೆ ಮುಖ್ಯ ಕಾರಣ. ಆದರೆ ಶತಮಾನಗಳ ಕಾಲ ಈ ಜನಾಂಗದ ಪ್ರತಿಭೆ ಸಾಮರ್ಥ್ಯ ಹೇಗೆ ಸುಪ್ತವಾಗಿ ಇತ್ತು

ಎಂಬುದು ಸಂಶೋಧನೆಗೆ ವಸ್ತುವಾಗಬಲ್ಲ ವಿಷಯ. ಅವರು ನೆಲಸಿದ ಉತ್ತರ ಕೊಂಕಣದಲ್ಲಿ ಸಮೃದ್ಧಿಯಾಗಲಿ, ಅವಕಾಶಗಳಾಗಲಿ ಇರಲಿಲ್ಲ. ಮಹತ್ವದ್ದೆನಿಸುವ ರಾಜಸತ್ತೆಯೂ ಇರಲಿಲ್ಲ. ಜೀವನ ಕಷ್ಟಕರವಾಗಿತ್ತು. ಇಂದಿಗೂ ರತ್ನಾಗಿರಿ ಪ್ರದೇಶ ಸಮೃದ್ಧವಾದುದಲ್ಲ ಈ ಕಾರಣದಿಂದ ಚಿತ್ಪಾವನರ ಸಾಮರ್ಥ್ಯ ಪ್ರಕಟವಾಗಲಿಲ್ಲ ಎನ್ನಬಹುದಾದರೂ, 17ನೆಯ ಶತಮಾನದ ಬಳಿಕ ಇಂದಿನವರೆಗೂ ಬೆಳಗಿದಚಿತ್ಪಾವನರ ಪ್ರಚಂಡ ಬಹುಮುಖ ಮುನ್ನಡೆಯ ನೆಲೆಯಿಂದ, ಈ ಸಮಾಧಾನ ಅಪೂರ್ಣವೆನಿಸದಿರದು.

ಉತ್ತರ ಕೊಂಕಣದಿಂದ ಈ ಜನಾಂಗ, ದಕ್ಷಿಣ ಕನ್ನಡಕ್ಕೆ ಯಾವಾಗ ಮತ್ತು ಯಾಕಾಗಿ ಬಂದಿರಬಹುದು ಎಂಬುದನ್ನು ಈಗ ಪರಿಶೀಲಿಸೋಣ.

೪

ದಕ್ಷಿಣಕನ್ನಡಕ್ಕೆ ಚಿತ್ಪಾವನರ ಕಾರಣ ಮತ್ತು ಕಾಲಗಳ ಬಗೆಗಿನ ಹೇಳಿಕೆ, ಆಖ್ಯಾಯಿಕ, ಊಹೆಗಳಲ್ಲಿ ಗೊಂದಲವಿದ್ದು, ಖಚಿತವಾದ ನಿರ್ಣಯಕ್ಕೆ ಬರಲು ಸಾಕಷ್ಟು ಪ್ರಮಾಣಗಳು ಸಾಲವು. ಊಹೆ, ಪ್ರತೀತಿಗಳನ್ನು ಆಧರಿಸಿ ಕಾರಣಗಳನ್ನು ಹೀಗೆ ಸಂಗ್ರಹಿಸಬಹುದು :

1. ಗೋವಾದಲ್ಲಿ ಪೋರ್ಚುಗೀಸರು ನಡೆಸಿದ ಮತಾಂತರ.
2. ಉತ್ತರ ಕೊಂಕಣದಲ್ಲಿ ಮುಸಲ್ಮಾನರಿಂದಾದ ಕಿರುಕುಳ.
3. ಬರಗಾಲ, ಮಿಡತೆ ಹಾವಳಿಯಂಥ ಪ್ರಾಕೃತಿಕ.
4. ಗೋವಾ ಪ್ರದೇಶದಲ್ಲಿ ರಾಣೇ ಜನಾಂಗದಿಂದಾದ ತೊಂದರೆಗಳು.
5. ಜೀವನೋಪಾಯಕ್ಕಾಗಿ—ಅಂದರೆ ಅನ್ಯವಿಶಿಷ್ಟ ಕಾರಣಗಳಿಲ್ಲದೆ—ಬಡತನದಿಂದಾಗಿ

ಇವುಗಳಲ್ಲಿ, ಪೋರ್ಚುಗೀಸ್ ಮತಾಂತರದ ಕಾರಣವನ್ನು ಇಲ್ಲಿಗೆ ಬಂದಿರುವ ಸಾರಸ್ವತ, ರಾಜಾಪುರ, ಪದ್ಯೆ, ಗೌಡ ಮುಂತಾದ ಹಲವು ಜನಾಂಗಗಳ ವಲಸೆ ಬಗೆಗೆ ಹೇಳಲಾಗಿದ್ದು, ರೋಮನ್ ಕಥೋಲಿಕರ ಒಂದು ಗುಂಪಿನ ವಲಸೆಗೂ, ತಮ್ಮ ಪ್ರಾಚೀನಾಚಾರಗಳನ್ನು ಮತಾಂತರದ ಅನಂತರವೂ ಅವರು ಬಿಡದಿದ್ದುರಿಂದ ಒಂದು ಘರ್ಷಣೆಗೂ ಅದೇ ಕಾರಣ ಅನ್ವಯಮಾಡಲಾಗಿದೆ. ಈ ಪ್ರಸಿದ್ಧ ಕಾರಣವನ್ನು ಗತಾನುಗತಿತ ನ್ಯಾಯದಿಂದ ಚಿತ್ಪಾವನರ ಬಗೆಗೆ ಅನ್ವಯಿಸಲಾಯಿತೆ ಎಂಬ ಸಂದೇಹ ಬರುತ್ತದೆ. ಏಕೆಂದರೆ ಚಿತ್ಪಾವನರಲ್ಲಿ ಪ್ರಚಲಿತವಿರುವ ಹೇಳಿಕೆಗಳಲ್ಲಿ ಪೋರ್ಚುಗೀಸ್ ಕಾರಣ ಪ್ರಚಲಿತವಿಲ್ಲ. ಹದಿನಾಲ್ಕನೆಯ ಶತಮಾನದ ಭಾರೀ ಬರಗಾಲ—'ದುರ್ಗಾದೇವೀಚಾ ದುಷ್ಕಾಳ' ಎನ್ನಲಾದ ಕ್ಷಾಮದ ಕಾರಣಕ್ಕೆ ಪೂರಕ ಪುರಾವೆ ಇಲ್ಲ. ಜಿಲ್ಲೆಯ ಚಿತ್ಪಾವನರಲ್ಲಿ 12-14 ತಲೆಮಾರುಗಳಿಗಿಂತ ಹಿಂದಿನ ವಂಶಾವಳಿ ಸಿಗುವುದಿಲ್ಲವಾಗಿ, ವಲಸೆಯ ಕಾಲ ಹದಿನಾಲ್ಕನೆಯ ಶತಮಾನದಷ್ಟು ಹಿಂದಕ್ಕೆ

ಹೋಗುವುದಿಲ್ಲ. ರೋಗ, ಬರಗಾಲ, ಸ್ಥಳೀಯ ಗಲಭೆಗಳು, ಮಿಡತೆ ಹಾವಳಿಯಂಥ ಕಾರಣಗಳಿಂದ ವಲಸೆಗಳಾದುದು, ಇಡಿಯ ಊರುಗಳೇ ಖಾಲಿಯಾದುದು ಹಲವೆಡೆ ಕೇಳಿಬರುವ ಸಂಗತಿ. ಗೋವಾದ ಸತ್ತರಿ ತಾಲೂಕಿನ ಬ್ರಹ್ಮಾತರಮಳಿ ಎಂಬೊಂದು ಊರು ಹೀಗೆ ನಿರ್ಜನವಾಗಿರುವ ಉದಾಹರಣೆ ಇಲ್ಲಿ ಪ್ರಸ್ತುತ. ಬರಗಾಲದಿಂದಾಗಿ ಚಿತ್ಪಾವನರು ಈ ಕಡೆ ಬಂದರು ಎಂಬುದು ಹಿರಿಯರ ಹೇಳಿಕೆಗಳ ಪೈಕಿ ಒಂದು.

ಚಿತ್ಪಾವನೀ ಭಾಷೆಯಲ್ಲಿ ಕೆಲವು ವಸ್ತುಗಳಿಗೆ ' ಗೋವೆ ' ಎಂಬ ವಿಶೇಷಣ ವಿದೆ. ಉದಾ : ' ಗೋವೆ ಆಂಬೆ ' (ಗೋವೆ ಮಾವು) ಗೋವೆ ದುಧ್ಯೋ (ಗೋವೆ ಚೀನಿಕಾಯಿ) ಗೋವೆ ಗಾಯಿ (ಗೋವೆ ದನ). ಇದನ್ನಾಧರಿಸಿ ಗೋವೆಯಿಂದ ಬಂದಿರಬಹುದು ಎಂದು ಒರ್ವರು ತರ್ಕಿಸಿದ್ದಾರೆ.[18] ಆದರೆ ಇವೇ ಉದಾಹರಣೆ ಗಳಿಂದ, ನಾವು ಗೋವಾದಿಂದ ಒಂದಿಷ್ಟು ದೂರದಿಂದ ಬಂದಿರಬಹುದೆಂದೂ ಸಾಧಿಸ ಬಹುದು. ವಸ್ತುಗಳಿಗೆ ವಿಶೇಷಣ ಬರುವುದು ಅವು ಒಂದಿಷ್ಟು ದೂರದ, ಅಪರೂಪದ ವಸ್ತುಗಳಾದಾಗಲೇ. ಒಳ್ಳೆಯ ವಸ್ತುಗಳಿಗೆ ಜರ್ಮನ್, ವಿಲಾಯತಿ, ಫೋರೈನ್, ಬೊಂಬೈ—ಈ ವಿಶೇಷಣಹಚ್ಚಿ ಹೇಳುವ ರೂಢಿ ಇದೆ. ಹೀಗೆ ನೋಡಿದರೆ, ' ಗೋವೆ ' ವಿಶೇಷಣವು ಚಿತ್ಪಾವನರು ಗೋವಾದಿಂದ ಒಂದಿಷ್ಟು ದೂರದ ಪ್ರದೇಶ ದಿಂದ ಬಂದಿರಬೇಕೆಂದು ಸೂಚಿಸುತ್ತದೆ. ಗೋವೆಯ ಚಿತ್ಪಾವನೀ ಭಾಷೆಯಲ್ಲಿ ಮಕ್ಕಳು ಎಂಬುದಕ್ಕೆ ' ಬುರ್ಗಿಂ ' ಎಂಬ ಪದವಿದ್ದು ಇದು ಗೋವಾನಿ ಕೊಂಕಣಿ ಯದು. ದಕ್ಷಿಣ ಕನ್ನಡ ಚಿತ್ಪಾವನಿಯಲ್ಲಿ ಮಕ್ಕಳಿಗೆ ' ಧಾಕ್ಕುಟಿಂ ' ಎಂಬ ಪದವಿದೆ.

ಬೆಳ್ತಂಗಡಿಯ ಮುಂಡಾಜೆ ಎಂಬ ಊರಲ್ಲಿ ' ಜಾಣೀಜೆ ಗೋಖಲೇ ' (ಜಾಣೀಯ ಗೋಖಲೆ) ಎಂಬೊಂದು ಮನೆತನವಿದೆ. ಅಲ್ಲಿ ಗೋಖಲೆ ಮನೆತನಕ್ಕೆ ಸಂಬಂಧಿಸಿ ಯಾವುದೇ 'ಜಾಣೇ' ಇಲ್ಲ. ರತ್ನಾಗಿರಿಯ ಚಿಪಳೂಣದ ಬಳಿ 'ಜಾಣೇ' ಎಂಬ ಊರಿದ್ದು, ಚಿತ್ಪಾವನರ ವಸತಿಯೂ ಇದೆ. ಈ ಒಂದು ಅಂಶ ತುಂಬ ಸೂಚಕವಾಗಿದೆ.

೫

ದಕ್ಷಿಣ ಕನ್ನಡದಲ್ಲಿ ಚಿತ್ಪಾವನರ ಅಸ್ತಿತ್ವದ ಬಗೆಗಿನ ಸ್ಪಷ್ಟವೆನ್ನಬಹುದಾದ ಕಾಲ ಸೂಚಕ ಪುರಾವೆಗಳಲ್ಲಿ ಮುಖ್ಯವಾದುವು ಇವು :

1. ಕಾರ್ಕಳ ತಾಲೂಕಿನ ದುರ್ಗಗ್ರಾಮದ ಮಲೆಬೆಟ್ಟು ಎಂಬಲ್ಲಿಯ ಗೋರೆ ಮನೆತನದಲ್ಲಿ ಸಿಗುವ ಹನ್ನೆರಡು ತಲೆಮಾರುಗಳ ವಂಶಾವಳಿ.[19] ಆ ಮನೆತನಕ್ಕೆ ಊರಿನ ಪಟೇಲಿಕೆ ಇತ್ತು. ಹೊರಗಿಂದ ಬಂದ ಜನಕ್ಕೆ ಇಲ್ಲಿ ಪಟೇಲ ಹುದ್ದೆ ಸಿಗಬೇಕಾದರೆ ಎರಡು ತಲೆಮಾರುಗಳಾದರೂ ಸಂದಿರಬೇಕು. ಇದು ವಲಸೆಯ ಕಾಲವನ್ನು ಸು.420 ವರ್ಷ ಹಿಂದೆ ಕೊಂಡುಹೋಗುತ್ತದೆ $(12+2=14\times 30=420)$.

2. ಕಾರ್ಕಳ ತಾಲೂಕಿನ ಮಾಳಗ್ರಾಮದ ಹಳೆಯ ಪರಶುರಾಮಮೂರ್ತಿ. ಇದು ಹದಿನೇಳನೆಯ ಶತಮಾನದ್ದೆಂದು ಓ|| ಡಾ. ಪಿ. ಗುರುರಾಜಭಟ್ಟರ ಮತ.[20]

3. ಮಾಳಗ್ರಾಮದ ಚಿತ್ಪಾವನರು ಪರಶುರಾಮ ದೇವಳದ ಸ್ಥಾಪನೆಗಿಂತ ಮೊದಲು, ಸುಮಾರು ಎಂಟು ಮೈಲು ದೂರದ ದುರ್ಗದಲ್ಲಿಯ ಹರಿಹರೇಶ್ವರ ದೇವಾಲಯದ ಭಜಿತವರ್ಗವಾಗಿದ್ದು, ಒಂದು ಬಾರಿ ಮಾಳದಿಂದ ದುರ್ಗಕ್ಕೆ ದೇವಾಲಯದ ಸಮಾರಂಭಕ್ಕೆ ಹೋದಾಗ ತಡವಾದುದರಿಂದ, ಮಾತು ಬೆಳೆದು ಮನಸ್ತಾಪ ಬಂದು, ಮಾಳದಲ್ಲಿ ಪರಶುರಾಮ ದೇವಸ್ಥಾನದ ಸ್ಥಾಪನೆಗೆ ಕಾರಣ ವಾಯಿತೆಂಬ ಪರಂಪರೆಯ ಹೇಳಿಕೆ.[21] ಅಂದರೆ ಮಾಳದ ಪರಶುರಾಮ ದೇವಾಲಯ ಕ್ಕಿಂತ ದುರ್ಗದ ಹರಿಹರೇಶ್ವರ ದೇವಾಲಯ ಪ್ರಾಚೀನವೆಂದಾಯಿತು.

4. ಬೆಳ್ತಂಗಡಿ ತಾಲೂಕಿನ ಸೂಳಬೆಟ್ಟು ಎಂಬಲ್ಲಿರುವ ಗೋಪಾಲಕೃಷ್ಣ ದೇವಸ್ಥಾನದ ಸ್ಥಾಪಕರಾದ ಕೃಷ್ಣಭಟ್ಟರಿಗೆ ವೇಣೂರು ಅಜಿಲರಾಜನು ಉಂಬಳಿ ನೀಡಿದ ದತ್ತಿಶಾಸನಗಳು.[22] ಇವುಗಳ ಕಾಲ 1714 ಮತ್ತು 1720.

5. ಮಾಳ ಪರಶುರಾಮ ದೇವಾಲಯಕ್ಕೆ ಅಂದಿನ ಶೃಂಗೇರಿ ಮಠದ ಸ್ವಾಮಿ ಗಳು ನೀಡಿದ್ದ ಭೇಟಿ ಬಗೆಗೆ ಮಠದಲ್ಲಿರುವ ದಾಖಲೆ.[23]

ತಲೆಮಾರುಗಳ ಲೆಕ್ಕಾಚಾರ, ದುರ್ಗದ ದೇವಾಲಯವು ಅಂದಾಜು ಮುನ್ನೂರ ಐವತ್ತು ವರ್ಷ ಹಳೆಯದೆಂಬ ಹಿರಿಯರ ಹೇಳಿಕೆಗಳು.—ಇವಕ್ಕೆ, ಐವತ್ತು ವರ್ಷಗಳ ಹಿಂದೆ ಚಿತ್ಪಾವನರು ಈ ಕಡೆ ಬಂದಿರಬಹುದೆಂದು ಊಹಿಸಿದರೆ 400–450 ವರ್ಷಗಳ ಹಿಂದಕ್ಕೆ ಹೋಗುತ್ತೇವೆ.

೬

ದಕ್ಷಿಣ ಕನ್ನಡದಲ್ಲಿ ಚಿತ್ಪಾವನರ ವಸತಿಗಳಿರುವ ಪ್ರದೇಶಗಳು ಇವು :

1. ಕಾರ್ಕಳ ತಾಲೂಕಿನ ಮಾಳ, ಕರವಾಸೆ ಗ್ರಾಮಗಳು

2. ಕಾರ್ಕಳ ತಾಲೂಕಿನ ದುರ್ಗ, ತೆಳ್ಳಾರು

3. ಬೆಳ್ತಂಗಡಿ ತಾಲೂಕಿನ ಮುಂಡಾಜೆ

4. ಅದೇ ತಾಲೂಕಿನ ಬಂಗಾಡಿ, ನಿಡ್ಲೆ

5. ಅದೇ ತಾಲೂಕಿನ ಶಿಶಿಲ, ಶಿಬಾಜೆ, ಹತ್ಯಡ್ಕ ಗ್ರಾಮಗಳು (ಒಟ್ಟಾಗಿ ಶಿಶಿಲ ವಸತಿ ಎಂದೇ ವಾಡಿಕೆ.)

6. ಬೆಳ್ತಂಗಡಿ ತಾಲೂಕಿನ ಈದು, ಸೂಳಬೆಟ್ಟು ಫಂಡಿಜೆ, ಅಳಂಬು, ಕುದ್ಯಾಡಿ, ಪ್ಯಾಲ, ಗಂಗೆ ನೀರು-ಎಂಬ ಚಿಕ್ಕ ಹಳ್ಳಿಗಳು.

7. ಪುತ್ತೂರು ತಾಲೂಕಿನ ಕಡಬದ ಬಳಿಯ ಹೊಸಮಠ.

8. ಕಾರ್ಕಳ ತಾಲೂಕಿನ ಹೆಬ್ರಿ

9. ಕುಂದಾಪುರ ತಾಲೂಕಿನ ಹಾವಾಡಿ
10. ಕಾಸರಗೋಡು ತಾಲೂಕಿನ ಕಾಟುಕುಕ್ಕೆ.

ಇವುಗಳ ಒಟ್ಟು ಚಿತ್ಪಾವನ ಜನಸಂಖ್ಯೆ ಸುಮಾರು ಆರು ಸಾವಿರ. ಈ ವಸತಿಗಳಿಗೆ 'ಚಿತ್ಪಾವನರ ವಾಳ್ಯಗಳು' ಎಂದು ಸ್ಥಳೀಯ ರೂಢಿ. ಈ ವಸತಿಗಳಲ್ಲಿ ಮಾಳ, ದುರ್ಗ, ಶಿಶಿಲ, ಮುಂಡಾಜೆ ಇವು ದೊಡ್ಡ ವಸತಿಗಳು, ಅಂದರೆ ನೂರು ಅಥವಾ ಹೆಚ್ಚು ಮನೆಗಳು ಇರುವಂತಹವು. ಕಾಸರಗೋಡು ತಾಲೂಕಿನ ಬಾಯಾರು ಎಂಬಲ್ಲಿ, ಹಿಂದಿನ ದಾಖಲೆಗಳಲ್ಲಿ "ಚಿತ್ಪಾವನ ಬ್ರಾಹ್ಮಣ....ಇಂತವರ ಮಗ" ಇತ್ಯಾದಿ ಉಲ್ಲೇಖಗಳಿವೆ ಎಂದು ಜಾರ್ವ ಗ್ರಾಮಲೆಕ್ಕಿಗರು ತಿಳಿಸಿದುದಾಗಿ ಶ್ರೀ ನರಹರಿ ಮೇಹೆಂದಳೆ ಸೂಳಬೆಟ್ಟು, ಇವರು ತಿಳಿಸುತ್ತಾರೆ. ಈಗ ಬಾಯಾರಿನಲ್ಲಿ ಚಿತ್ಪಾವನ ಮನೆಗಳಿಲ್ಲ. ಅವು ಅಲ್ಲಿ ಬಹುಸಂಖ್ಯೆಯಲ್ಲಿರುವ ಇನ್ನೊಂದು ಮಹಾರಾಷ್ಟ್ರೀಯ ಜನಾಂಗವಾದ ಪದ್ಯೆ-ಕರ್ಹಾಡೇ ಬ್ರಾಹ್ಮಣ ವರ್ಗದಲ್ಲಿ ವಿಲೀನವಾಗಿರಬೇಕು. ಕಾಟುಕುಕ್ಕೆಯಲ್ಲಿಯ ಚಿತ್ಪಾವನರ ಮೂರು ಮನೆಗಳಿದ್ದು ಜಿಲ್ಲೆಯ ಉಳಿದ ಚಿತ್ಪಾವನರ ಜತೆ ಸಂಪರ್ಕ ಇಲ್ಲ. ಅಲ್ಲಿಯೂ ಪದ್ಯೆ ಬ್ರಾಹ್ಮಣರಿದ್ದು, ಅಲ್ಲಿ ಚಿತ್ಪಾವನರ ಹೊಕ್ಕು ಬಳಕೆ ಇವರೊಂದಿಗೇ ಇದೆ. ಭಾಷೆಯೂ ಚಿತ್ಪಾವನಿ-ಪದ್ಯೆ ಭಾಷೆಯು ಮಿಶ್ರಣವಾಗಿದೆ.

ಚಿತ್ಪಾವನರು ಈ ಜಿಲ್ಲೆಗೆ ಬಂದ ಬಗೆಗೆ ಸ್ವಾರಸ್ಯಕರ ಐತಿಹ್ಯಗಳಿವೆ. ಉತ್ತರ ಕೊಂಕಣದಿಂದ ಎರಡುಗುಂಪುಗಳಲ್ಲಿ ಸಮುದ್ರ ಮಾರ್ಗವಾಗಿ ಬಂದು, ಒಂದು ಗುಂಪು ಮಲ್ಪೆ ಬಂದರಿನಲ್ಲೂ, ಇನ್ನೊಂದು ಮಂಗಳೂರಲ್ಲೂ ಇಳಿದುವಂತೆ. ಉಡುಪಿಯ ಮಲ್ಪೆಗೆ ಬಂದ ತಂಡ, ಅಲ್ಲಿಂದ ಹಿರಿಯಡ್ಕಕ್ಕೆ ಹೋಗಿ ನೆಲೆಸಿ ಕೆಲಕಾಲದನಂತರ, ಎರಡು ಗುಂಪುಗಳಾದುವು. ಒಂದು ಗುಂಪು ಕುಂದಾಪುರ ತಾಲೂಕಿನ ಹಾವಾಡಿಗೂ, ಇನ್ನೊಂದು ಗುಂಪು ಮಾಳ ದುರ್ಗಗಳಿಗೂ ಹೋದುವು. ಹಾಲಾಡಿಯಲ್ಲಿ ಒಂದೆರಡು ತಲೆಮಾರುಗಳ ಹಿಂದಿನವರೆಗೆ ಚಿತ್ಪಾವನರ ವಸತಿ ದೊಡ್ಡದಾಗಿತ್ತು. ಅನಂತರ ಅದು ಬೇರೆ ಊರುಗಳಿಗೆ ವಲಸೆಯಾಗಿ ಕರಗಿ ಹೋಗಿ ಈಗ ಮೂರು ನಾಲ್ಕು ಮನೆಗಳು ಉಳಿದಿವೆ.

ಮಂಗಳೂರಿನಲ್ಲಿ ಇಳಿದ ತಂಡ ಬಂಟ್ವಾಳದಿಂದ ಪೂರ್ವಕ್ಕಿರುವ ಪೂಜಾಲಕಟ್ಟೆಯಲ್ಲಿ ಠಾಣ್ಯ ಹೂಡಿತು. ಕೆಲಕಾಲ ಅಲ್ಲಿ ತಂಗಿದಾಗ ಇನ್ನೊಂದು ವಿಪತ್ತು ಕಾದಿತ್ತು-ರಣಹದ್ದುಗಳ ಬಾಧೆ. ಈ ಭೀಕರ ದಾಳಿಗೆ ಕಂಗಾಲಾಗಿ, ಕೆಲವು ಜಾನುವಾರುಗಳನ್ನು, ಮಕ್ಕಳನ್ನು ಕಳೆದುಕೊಂಡ ಈ ಜನ ಅಲ್ಲಿಂದ ಹೊರಟು ಶಿಶಿಲ, ಹೊಸಮಠಗಳಿಗೆ ಹೋದರು ಅನ್ನುವರು.

ಬೆಳ್ತಂಗಡಿಯ ಮುಂಡಾಜೆ ಊರಿನ ಚಿತ್ಪಾವನರ 'ವಾಳ್ಯ' ಉಳಿದವುಗಳಿಗಿಂತ ಅರ್ವಾಚೀನ ಎನ್ನಲು ಆಧಾರಗಳಿವೆ. ಅಲ್ಲಿಯ ಹೆಚ್ಚಿನ ಮನೆತನಗಳು ಮಾಳ, ಶಿಶಿಲ,

ಹಾಲಾಡಿ, ಹೊಸ ಮಠದ ತಾಣಗಳಿಂದ ಬಂದು ನೆಲೆಸಿದವೆಂಬ ಹೇಳಿಕೆಗಳಿದ್ದು ಈಗ ಬದುಕಿರುವ ಅನೇಕರಿಗೆ ಈ ಬಗೆಗೆ ಸ್ಪಷ್ಟ ಮಾಹಿತಿಗಳಿವೆ. ಮುಂಡಾಜೆಯ ತೆಂಕಣ ಭಾಗದ ಕಡಂಬಳ್ಳಿ ವಾಳ್ಯದ ಮನೆತನಗಳ ಬಗ್ಗೆ ಇಂತಹ ಮಾಹಿತಿಗಳಿಲ್ಲವಾಗಿ, ಅವು ಮೂಲವಲಸೆಯಕಾಲಕ್ಕೆ ಬಂದವುಗಳಾಗಿರಬೇಕು. ಈ ಕಡಂಬಳ್ಳಿ ಅಥವಾ ಕಡಾಂಬಳ್ಳಿ ಎಂಬುದು, 'ಕಡಂಬ ಹಳ್ಳಿ' ಆಗಿರಬೇಕೆಂದೂ, ಕಡಂಬರೆಂಬ ಜೈನರು ಚಿತ್ಪಾವನರಿಗೆ ಆಶ್ರಯಕ್ಕೆ ನೀಡಿದ ಹಳ್ಳಿ ಆಗಿರಬೇಕೆಂದೂ ಡಾ। ವಾಸುದೇವರಾವ್ ಕಾಕತ್ಕರರು ತರ್ಕಿಸಿದ್ದಾರೆ.[24] ಇದು ಸಂಭಾವ್ಯವಿದೆ.

ವಲಸೆಯ ಮುಖ್ಯ ಪ್ರವಾಹದಲ್ಲಿ ಬಾರದೆ, ಪ್ರತ್ಯೇಕವಾಗಿ ಬಂದು ನೆಲೆಯಾದ ಕುಟುಂಬಗಳೂ ಇವೆ. ಇವೆಲ್ಲ ಒಂಟಿ ಕುಟುಂಬಗಳ ವಲಸೆಗಳು. ಶಿಶಿಲದಲ್ಲಿ 'ಪುಣೇಕರವಾಡಿ' ಎಂಬುದನ್ನು ಗಮನಿಸಿ. ಈ ಪುಣೇಕರರು ಅನಂತರ ಬಂದು ಸೇರಿಕೊಂಡವರು. ಹಾಗೆಯೇ ಶಿಶಿಲದ ದಾಮ್ಲೆ ಮನೆತನ ಈ ಕಡೆಗೆ ಸುಮಾರು ನೂರಐವತ್ತು ವರ್ಷಗಳ ಹಿಂದೆ ಬಂದ ಐವರು ದಾಮಲೆ ಸೋದರರ ಸಂತತಿ ಎನ್ನುವರು. ಈ ಐವರು ಇಲ್ಲಿಗೆ ರತ್ನಾಗಿರಿಯಿಂದ ಬಂದಾಗ, ಚಿತ್ಪಾವನರ ವಸತಿಯನ್ನು ಕಂಡು ಇಲ್ಲಿ ನೆಲೆಯಾದರಂತೆ. (ಪವಾಡ ಪುರುಷರೆನ್ನಲಾದ ಅಪ್ಪಾಭಟ್ ದಾಮ್ಲೆ ಈ ಐವರ ಪೈಕಿ ಒಬ್ಬರು)

ಮುಂಡಾಜೆಯ ಫಡ್ಕೆ ಮನೆತನಗಳಲ್ಲಿ ಒಂದು (ಫಡ್ಕೆ ಎಂಬುದು ಕುಲನಾಮ) 1811ರಲ್ಲಿ 'ದೇಶ' ದಿಂದ (ಘಟ್ಟದ ಮೇಲಿಂದ) ಬಂದುದಾಗಿ ಆ ಮನೆತನದ ಭೂಸಂಬಂಧ ದಾಖಲೆಗಳಲ್ಲಿದೆ. ಹಾಗೇ ಮುಂಡಾಜೆಯ ಭಿಡೆ ಮನೆತನಗಳ ಪೈಕಿ ಒಂದು ಸತಾರಾ ಸಂಸ್ಥಾನದಲ್ಲಿ ದಿವಾನರಾಗಿದ್ದು ಸಂಸ್ಥಾನವು ಬಿದ್ದು ಹೋದ ಮೇಲೆ ಈ ಕಡೆಗೆ ಬಂದು ನೆಲೆಯಾದವರ ಸಂತತಿ. ಶಿಶಿಲದ ಕಂಬ್ಳಿ ಅಥವಾ ಕಾಂಬೋಳಿ ಎಂಬ ಸ್ಥಳದ ಖಾಡಿಲ್ಕರ್ ಮನೆತನವು ಕಾಶಿಯಿಂದ ಗೋಕರ್ಣಕ್ಕೆ ಬಂದು ಶಿಶಿಲಕ್ಕೆ ಬಂದುದಾಗಿ ಐತಿಹ್ಯ. (ಈ ಕಾಂಬೋಳಿ ಅಥವಾ 'ಕಂಬ್ಳಿ' ಎಂಬುದು ಜೈನರ ಕುಲನಾಮ. ಅವರಿಂದ ಪಡೆದ ಆಸ್ತಿ ಆಗಿರಬೇಕು.) ಮಾಳದಲ್ಲಿರುವ ಜೋಶಿ ಮನೆತನಗಳ ಪೈಕಿ ಒಂದು, ಶೃಂಗೇರಿಯಿಂದ ಬಂದುದು.

ದಕ್ಷಿಣ ಕನ್ನಡದ ಚಿತ್ಪಾವನರ ವಸತಿಗಳ ಬಗೆಗಿನ ಒಂದು ವಿಶಿಷ್ಟತೆಯ ಬಗೆಗೆ ಡಾ॥ ಕಾಕತ್ಕರರು ಗಮನ ಸೆಳೆದಿದ್ದಾರೆ. ವಸತಿಗಳಲ್ಲಿ ಒಂದಕ್ಕೊಂದು ತಾಗಿದ ಜಮೀನುಗಳು ಚಿತ್ಪಾವನರ ಸ್ವಾಮಿತ್ವದಲ್ಲಿವೆ. ಆದರೆ ವಸತಿಗಳು ಒಂದೇ ಕಡೆ ಇಲ್ಲದೆ, ಜಿಲ್ಲೆಯ ಹಲವೆಡೆ ಹರಡಿಕೊಂಡಿವೆ.[25] ಈ ವಿದ್ಯಮಾನವು ಚಿತ್ಪಾವನರ ಇಲ್ಲಿಯ ಪೂರ್ವೇತಿಹಾಸದ ಬಗೆಗೆ ಬೆಳಕು ಚೆಲ್ಲಬಹುದು. ಏಕಕಾಲದಲ್ಲಿ ಬಂದು, ಈ ವಸತಿಗಳನ್ನು ಮಾಡಿದ್ದಾಗಿದ್ದರೆ, ಸಾಕಷ್ಟು ಸಂಖ್ಯೆಯಲ್ಲಿ ಬಂದಿರಬೇಕು ಮತ್ತು ಆಸ್ತಿಗಳನ್ನು ಕೊಳ್ಳುವ ಆರ್ಥಿಕ ಬಲವನ್ನು ಪಡೆದಿರಬೇಕೆಂಬುದು ಸ್ಪಷ್ಟ. ಚಿತ್ಪಾವನರ ಎಲ್ಲ ವಸತಿಗಳೂ ಪಶ್ಚಿಮ ಘಟ್ಟಕ್ಕೆ ತಗಲಿದ ಒಳ ಪ್ರದೇಶಗಳಲ್ಲಿ ಇರುವುದು ಏನನ್ನು

ಸೂಚಿಸುತ್ತಿರಬಹುದು ? ಹೆಚ್ಚು ಪ್ರಶಸ್ತವಾಗಿದ್ದ, ಹೊರ ಪ್ರದೇಶಗಳಲ್ಲಿ ಜನವಸತಿ ಆಗಲೇ ಇದ್ದು, ಸಾಕಷ್ಟು ಸ್ಥಳ ಅಲಭ್ಯವಾಗಿದ್ದುದರಿಂದ, ಪರ್ವತ ಪ್ರದೇಶದತ್ತ ಹೋಗಿರಬಹುದೆಂದು ಊಹಿಸಲು ಸಾಧ್ಯ. ಇದು ವಲಸೆಯ ಕಾಲದ ನಿರ್ಣಯಕ್ಕೂ ಉಪಯುಕ್ತವಾಗಬಹುದು. ಮುಖ್ಯವಸತಿಗಳು ಕಾರ್ಕಳ, ಬೆಳ್ತಂಗಡಿ ತಾಲೂಕುಗಳಲ್ಲಿರುವುದು, ಎರಡು ಗುಂಪುಗಳಾಗಿ ಬಂದು ಬೇರೆ ಬೇರೆ ಕಡೆ ನೆಲೆಯಾದರೆಂಬ ಐತಿಹ್ಯಕ್ಕೆ ಪುಷ್ಟಿಯನ್ನೀಯುತ್ತದೆ.

೭

ದಕ್ಷಿಣ ಕನ್ನಡದ ಚಿತ್ಪಾವನರ ಭಾಷೆ ಚಿತ್ಪಾವನಿ ಎಂಬ ಒಂದು ಮರಾಠಿ ಪ್ರಾಕೃತ ಪ್ರಭೇದ. ಇಲ್ಲಿ ಇದು ಎಲ್ಲ ಚಿತ್ಪಾವನರ ಮನೆಮಾತು. ಗೋವಾದಲ್ಲಿ ಮತ್ತು ಅಲ್ಲಿಂದ ಉತ್ತರಕ್ಕೆ ಸಾವಂತವಾದಿ ರಾಜಾಪುರವರೆಗೆ ಈ ಭಾಷೆ ಇದೆ. ಅಲ್ಲಿಂದ ಉತ್ತರಕ್ಕೆ ಹಾಗೂ ಪುಣೆಯಲ್ಲಿ ಈ ಭಾಷೆ ಎಂದೋ ಮಾಯವಾಗಿ, ಚಿತ್ಪಾವನರು ಆಧುನಿಕ ಮರಾಠಿಯನ್ನೆ ಆಡುತ್ತಾರೆ. ಉತ್ತರ ಕೊಂಕಣದಲ್ಲೂ, ಕೆಲವು ಹಳ್ಳಿಗಳನ್ನು ಬಿಟ್ಟರೆ ಹೊಸತಲೆಮಾರಿಗೆ ಚಿತ್ಪಾವನಿ ಬಾರದು. ಗೋವಾದ ಸತ್ತರೀ ಪ್ರದೇಶದಲ್ಲಿ ಈ ಭಾಷೆ ಜೀವಂತವಾಗಿದೆ. ಅಲ್ಲೂ ಸತತವಾದ ಮರಾಠಿ ಕೊಂಕಣಿ ಪ್ರಭಾವಗಳಿಂದ ಹೆಚ್ಚು ಅರ್ವಾಚೀನವಾಗಿದೆ. ಆ ಕಡೆ ಅದು 'ನಿಧಾನವಾಗಿ ಮಾಯವಾಗುತ್ತಿರುವ ಭಾಷೆ' ಯಾದರೆ ದಕ್ಷಿಣ ಕನ್ನಡದಲ್ಲಿ ಅದಿನ್ನೂ ಜೀವಂತ ಭಾಷೆ. ಉತ್ತರ ಕೊಂಕಣದಕ್ಕಿಂದ, ಇಲ್ಲಿಯ ಚಿತ್ಪಾವನಿಯು ಹೆಚ್ಚು ಪ್ರಾಚೀನ ರೂಪದ್ದು. ಚಿತ್ಪಾವನಿ ಭಾಷೆಯು ಹನ್ನೆರಡನೆಯ ಶತಕದ ಯಾದವಕಾಲೀನ ಮಹಾರಾಷ್ಟ್ರೀ ಪ್ರಾಕೃತದ ಒಂದು ಕವಲೆಂದೂ, ವಿಕಾಸದಲ್ಲಿ ಅದು ಅಲ್ಲಿಂದ ಹೆಚ್ಚು ಮುಂದೆ ಹೋಗಿಲ್ಲವೆಂದೂ, ಡಾ॥ ವಾಸುದೇವರಾವ್ ಕಾಕತ್ಕರ್ ತಿಳಿಸುತ್ತಾರೆ.[26]

ಚಿತ್ಪಾವನರ ಜನಪದ ಗೀತೆಗಳು (ಗಿತ್ತ್ಂಽ) ಒಗಟುಗಳು (ಉಖ್ಖಾಣೀ) ವಾಗ್ರೂಢಿಗಳು ಗಾದೆಗಳು (ಮಣ್ಹೀ) ಇವುಗಳ ಸಂಗ್ರಹ, ಸವಿವರ ಅಭ್ಯಾಸ ಆಗಬೇಕಿದೆ. ಇವುಗಳಲ್ಲಿ ಒಂದು ದೊಡ್ಡ ಅಂಶ ನಷ್ಟವಾಗಿದ್ದರೂ, ಉಳಿದಿರುವ ಅಂಶ ಗಣನೀಯ ಪ್ರಮಾಣದ್ದು. ನೂರಕ್ಕೂ ಮಿಕ್ಕಿ ಗೀತಗಳನ್ನು ಈ ಲೇಖಕನು ಸಂಗ್ರಹಿಸಿದ್ದಾನೆ.

ಚಿತ್ಪಾವನರ ಭಾಷೆ, ಆಚಾರಗಳು, ಮನೆವಾರ್ತೆ, ಕೃಷಿ, ಕುಲನಾಮಗಳು ಮೊದಲಾದ ಸಂಗತಿಗಳ ಅಧ್ಯಯನ ಪ್ರತ್ಯೇಕ ಲೇಖನಗಳ ವಿಷಯ.

ಸಂದರ್ಭ ಆಧಾರ ಸೂಚಿ

1. ಚಿತ್ತಪಾವನ ಶಾಂಡಿಲ್ಯ ಗೋತ್ರ ಜೋಶಿ ಕುಲವೃತ್ತಾಂತ ಪ್ರ: ಜೋಶಿಕುಲ ವೃತ್ತಾಂತ ಸಮಿತಿ, ನೃಸಿಂಹಭವನ, ಕುಂಟೆ ಚೌಕ ಪುಣೆ. 1982. ಮ.ನ. ಜೋಶಿ ಅವರ ಮುನ್ನುಡಿ

2. 'ಚಿತ್ಪಾವನ'. ದಿ।ನಾರಾಯಣ ಗೋವಿಂದ ಚಾಫೇಕರರ ಗ್ರಂಥ. ಆರ್ಯಸಂಸ್ಕೃತಿ ಮುದ್ರಣಾಲಯ ಪುಣೆ. 2. 1938. ಪುಟ 1 ರಿಂದ 7

3. ಪಾರಂಪರಿಕ ಹೇಳಿಕೆ

4. ಮೇಲೆ ಹೇಳಿದ ಚಾಫೇಕರರ ಗ್ರಂಥ. ಪುಟ. 293.

5. ಅದೇ. ಪುಟ. 4.

6. ಅದೇ ಪುಟ 6ರಲ್ಲಿ ಉಲ್ಲೇಖಿಗೊಂಡ. ಇತಿಹಾಸಜ್ಞ ಪ್ರೊ॥ ರಾಜವಾಡೆ ಅವರ ಸಂಶೋಧನ ಲೇಖನ.

7. ಅದೇ ಪುಟ 6. (8). ಅದೇ ಪುಟ 281. (9). ಅದೇ ಪುಟ 291.

10. ಅದೇಪುಟ. 18. (11). ಅದೇ. 287. (12). ಅದೇ 289.

13. ಕೊಂಕಣಿ ಮತ್ತು ಮರಾಠಿ ಇವುಗಳ ತುಲನಾತ್ಮಕ ವಿಮರ್ಶೆ ಮತ್ತು ಸಾರಸ್ವತ ಬ್ರಾಹ್ಮಣರ ಪ್ರಾಚೀನ ಇತಿಹಾಸ–ಬಸ್ತಿಪುಂಡಲೀಕ ಶೆಣೈ. ಶ್ರೀ ಲಲಿತಾ ಪ್ರಾಚ್ಯ ಸಂಶೋಧನಾಲಯ. ಅಶೋಕನಗರ, ಮಂಗಳೂರು. 6. 1968

14. ಚಿತ್ಪಾವನ. ಚಾಫೇಕರ. ಮೇಲೆ ಹೇಳಿದ್ದೇ. ಪುಟ. 6.

15. ಅದೇ. ಪುಟ. 290.

16. ಅದೇ. ಪುಟ. 292. (17). ಖಾಸಗಿ ಭೇಟಿಯಲ್ಲಿ ಚರ್ಚಿಸಿದಾಗ ತಿಳಿಸಿದುದು.

18. ಶ್ರೀ. ಗಣೇಶ ಶಿಂಡ್ಯ ಅವರ ಲೇಖನ. 'ಚಿತ್ಪಾವನ' ಸ್ಮರಣ ಸಂಚಿಕೆ. ಚಿತ್ಪಾವನ ಸಮ್ಮೇಳನ, ದುರ್ಗ. ಕಾರ್ಕಳ ತಾ॥ 1975.

19. ಶ್ರೀ. ಲಕ್ಷ್ಮಣ ಹರಿಹರ ಜೋಶಿ. ಮಾಳ ಕಾರ್ಕಳತಾ॥ ಇವರು ನೀಡಿದ ಮಾಹಿತಿ

20. ಸ್ಟಡೀಸ್ ಇನ್ ತುಳುವ ಹಿಸ್ಟರಿ ಅಂಡ್ ಕಲ್ಚರ್. ಡಾ। ಪಿ. ಗುರುರಾಜ ಭಟ್ಟ ಪ್ರಕಾಶಕರೂ ಅವರೇ. 1975. ಪುಟ. 336. ಚಿತ್ರ 376 (d)

21. ಈ ಲೇಖಕನ ಊರಾದ ಮಾಳದಲ್ಲಿ ಇರುವ ಪ್ರತೀತಿ.

22. ಬೆಳ್ತಂಗಡಿ ತಾ॥ ಸೂಳಬೆಟ್ಟು ಶ್ರೀ ನರಹರಿ ಮಹೆಂದಳೆ ಅವರು ನೀಡಿದ ಶಾಸನದ ಪ್ರತಿಗಳು. ಈ ಲೇಖಕನ ವಶ ಇವೆ.

23. ಶ್ರೀ. ಲಕ್ಷ್ಮಣ ಹರಿಹರ ಜೋಶಿ, ಚಿತ್ಪಾವನರ ದೇವಾಲಯಗಳು. ಚಿತ್ಪಾವನ ಸ್ಮರಣ ಸಂಚಿಕೆ. ದುರ್ಗ 1975.

24. ಡಾ। ವಾಸುದೇವರಾವ್ ಕಾಕತ್ಕರರು ಪತ್ರಮೂಲಕ ನೀಡಿದ ಮಾಹಿತಿ.

25. ಅದೇ.

26. ಅದೇ.

ಕೆಲವು ಮುಖ್ಯಮಾಹಿತಿಗಳನ್ನು ನೀಡಿದವರು :

ಎಚ್. ಶಿವರಾಮ ಖಾಡಿಲ್ಕರ್, ಮುಂಡಾಜೆ. ದಕ್ಷಿಣ ಕನ್ನಡ

ಸುಬ್ರಾಯ ಅನಂತ ಗೋಖಲೆ, ಮುಂಡಾಜೆ. ದಕ್ಷಿಣ ಕನ್ನಡ

ಡಾ। ವಾಸುದೇವರಾವ್ ಕಾಕತ್ಕರ್ ವಿ.ವಿ. ಪ್ರಾಧ್ಯಾಪಕರು, ದೆಹಲಿ.

ಟಿ. ಬಿ. ಬಸವರಾಜು

ಶ್ರೀ ರಾಮಕೃಷ್ಣ ದರ್ಶನದಲ್ಲಿ ಸ್ತ್ರೀ ಒಂದು ಪಕ್ಷಿನೋಟ

ಶ್ರೀ ರಾಮಕೃಷ್ಣರು ಸರ್ವಧರ್ಮಗಳ ಸಮನ್ವಯಾಚಾರ್ಯರಾದಂತೆಯೇ ಸ್ತ್ರೀ ಸ್ವಾತಂತ್ರ್ಯ ಹಾಗೂ ವ್ಯಕ್ತಿ ಸ್ವಾತಂತ್ರ್ಯಗಳನ್ನೂ ತಮ್ಮ ತತ್ವಗಳಲ್ಲಿ ಒಡಮೂಡಿಸಿದ್ದಾರೆ. ಜಗತ್ತಿನಲ್ಲಿ ಯಾವುದೂ ಮೇಲಲ್ಲ, ಯಾವುದೂ ಕೀಳಲ್ಲ, ಮಾಡುವ ಕೆಲಸದಲ್ಲಿ ಅಚಲ ನಿಷ್ಠೆ ಹಾಗೂ ನಿಸ್ವಾರ್ಥ ಮನೋಭಾವ ಮುಖ್ಯ ಎಂದು ಅವರು ಹೇಳುತ್ತಿದ್ದರು. ಸ್ತ್ರೀಯರ ಬಗ್ಗೆ ವಿಶೇಷ ಗೌರವಾದರಗಳು ಅವರ ದರ್ಶನದಲ್ಲಿ ಎದ್ದು ಕಾಣುವ ಅಂಶವಾಗಿದೆ. ಸ್ತ್ರೀಯನ್ನು ಜಗನ್ಮಾತೆಯ ಸ್ವರೂಪವಾಗಿ ಕಾಣಬೇಕೆಂದು ಹೇಳುತ್ತಿದ್ದ ಅವರು ಅದನ್ನು ತಾವೂ ಸಾಧಿಸಿ ತೋರಿಸಿದರು! ರಾಗ–ದ್ವೇಷಗಳಿಂದ ತುಂಬಿರುವ ಮಾನವ ಈ ಮಟ್ಟವನ್ನು ಮುಟ್ಟಬೇಕಾದರೆ ಅದಕ್ಕೆ ಮಾನಸಿಕ ಸಿದ್ಧತೆ ಬೇಕು, ವೈರಾಗ್ಯಭಾವ ನೆಲೆಸಿರಬೇಕು. ಪ್ರಪಂಚದಲ್ಲಿ ಏರ್ಪಟ್ಟಿರುವ ತಾಯಿ–ಮಕ್ಕಳ ಪ್ರೀತಿ, ಸಹೋದರ–ಸಹೋದರಿಯರ ಪ್ರೀತಿ, ಇಂಥಃ ಪ್ರೀತಿಯನ್ನು ಪರಮಪ್ರೇಮದಲ್ಲಿ (ಬ್ರಹ್ಮ) ಐಕ್ಯಗೊಳಿಸಿದರೆ ಅಂದರೆ ಬ್ರಹ್ಮನಲ್ಲಿ ನಮ್ಮ ಪ್ರೇಮದ ಭಾವಗಳನ್ನು ತಿರುಗಿಸಿದ್ದೇ ಆದರೆ ಬ್ರಹ್ಮ ಸಾಕ್ಷಾತ್ಕಾರ ಖಂಡಿತ! ಇದು ರಾಮಕೃಷ್ಣರ ಖಚಿತ ನಿಲುವು–ದೃಷ್ಟಿ. ಜಗತ್ತಿನಲ್ಲಿ ಇರುವ ಮೇಲು ಕೀಳುಗಳ ಬಗ್ಗೆ ಜಿಗುಪ್ಸೆಗೊಂಡ ಅವರು ತಮ್ಮಲ್ಲಿ ಆ ಭಾವ ಕಳೆದುಕೊಂಡ ಪ್ರಾಥಮಿಕ ಯತ್ನವಾಗಿ, ಜಾಡಮಾಲಿಯ ಕೆಲಸ ಕೂಡ ನಿರ್ವಹಿಸಿದರು! ಸ್ತ್ರೀಗೆ ತಾವು ಕೊಡುತ್ತಿರುವ ಸ್ಥಾನದ ಬಗ್ಗೆ ಅವರಿಗೆ ಸಂತೋಷವಿತ್ತು, ಸಾರ್ಥಕತೆಯ ತೃಪ್ತಿಯಿತ್ತು.

ಸ್ತ್ರೀಯರ ಮುಗ್ಧತೆ, ಸೂಕ್ಷ್ಮತೆ ಅವರಿಗೆ ತುಂಬಾ ಇಷ್ಟವಾಗಿದ್ದವು. ಅವರು ಸ್ತ್ರೀಭಾವವನ್ನೂ ಮೈಗೂಡಿಸಿಕೊಂಡಿದ್ದರು. ಅವರಲ್ಲಿಗೆ ಬರುತ್ತಿದ್ದ ಸ್ತ್ರೀಯರಿಗೆ ತಾವು ಸ್ತ್ರೀಯರೊಡನೆಯೇ ವ್ಯವಹರಿಸುತ್ತಿದ್ದೇವೆಂಬ ಭಾವನೆಯೇ ಇರುತ್ತಿತ್ತಲ್ಲದೆ, ಅವರಲ್ಲಿ (ರಾಮಕೃಷ್ಣರು) ಸಂಕೋಚವಿರಲಿಲ್ಲ. ಸ್ತ್ರೀಪುರುಷರೆಂಬ ಲಿಂಗಭೇದ

ಗಳಿಂದ ಅತೀತರಾಗಿದ್ದ ರಾಮಕೃಷ್ಣರ ಬಗ್ಗೆ ಅವರಲ್ಲಿ ಬರುತ್ತಿದ್ದ ಸ್ತ್ರೀಯರ ಮಾತು ಗಳನ್ನೇ ನೋಡಿ[1] ಶ್ರೀ ರಾಮಕೃಷ್ಣರನ್ನು ನಾವು ಪುರುಷರೆಂದು ಭಾವಿಸಿಯೇ ಇರಲಿಲ್ಲ. ನಮ್ಮಲ್ಲಿಯೇ ಒಬ್ಬರೆಂದು ತಿಳಿದಿದ್ದೆವು. ಆದ್ದರಿಂದಲೇ ನಮಗೆ ಸ್ವಲ್ಪವೂ ಸಂಕೋಚವಾಗುತ್ತಿರಲಿಲ್ಲ. ನಮಗವರು ಅಂತರಂಗದ ಸಖಿಯಾಗಿದ್ದರು.

ರಾಮಕೃಷ್ಣರ ತತ್ವಗಳಲ್ಲಿ ಕಾಮಿನಿಕಾಂಚನತ್ಯಾಗ ಮಹತ್ವಪಡೆದಿದೆ. ಕಾಮಿನಿ ತ್ಯಾಗವೆಂದರೆ ಸ್ತ್ರೀದ್ವೇಷವಲ್ಲ ಅಥವಾ ಸ್ತ್ರೀಯನ್ನು ನಿರಾಕರಿಸುವುದೂ ಅಲ್ಲ. ಆದರೆ ಸ್ತ್ರೀಯರೊಡನೆ ವ್ಯವಹರಿಸುವಲ್ಲಿ ಕೆಟ್ಟಭಾವನೆಗಳಿಂದ ಅಧೋಗತಿಗೆ ಇಳಿಯದಂತೆ ನೋಡಿಕೊಳ್ಳಲು ಆಕೆಯನ್ನು ಜಗನ್ಮಾತೆಯ ಸ್ವರೂಪವಾಗೇ ಕಾಣಬೇಕೆಂಬುದು ರಾಮಕೃಷ್ಣರ ನಿಲುವು.

ಅನೇಕ ಸ್ತ್ರೀಪುರುಷರು ದಕ್ಷಿಣೇಶ್ವರಕ್ಕೆ ರಾಮಕೃಷ್ಣರನ್ನು ಕಾಣಲು ಬಂದಂತೆಯೇ ಮನಮೋಹನ[2] ಮಿತ್ರನೆಂಬುವನೊಬ್ಬನ ತಾಯಿಯೂ ದಕ್ಷಿಣೇಶ್ವರಕ್ಕೆ ಬಂದಳು. ಆಕೆ ತನ್ನ ಪತಿ ನಿಧನಾನಂತರ ಪೂಜೆ ಜಪತಪಗಳಲ್ಲಿ ಕಾಲ ಕಳೆಯು ತ್ತಿದ್ದಳು. ಆದರೆ ಆಕೆಯ ಆಚರಣೆಯಲ್ಲಿ ಒಂದು ವಿಶೇಷವಿತ್ತು. ವಿಧವೆಯಾದರೂ ಆಕೆ ಕೆಂಪು ಅಂಚಿನ ಸೀರೆ ಉಟ್ಟುಕೊಂಡು, ಕೈಯಲ್ಲಿ ಚಿನ್ನದ ಬಳೆಗಳನ್ನು ತೊಟ್ಟು ಕೊಂಡು ಸಧವೆಯಂತೆ ಇರುತ್ತಿದ್ದಳು. ಸಹಜವಾಗಿಯೇ ಇದು ಜನಗಳ ಕುತೂ ಹಲಕ್ಕೆ ಕಾರಣವಾಗಿ ಆಕೆ ಜನರ ದೋಷಾರೋಪಣೆಗೆ ಗುರಿಯಾಗಿದ್ದಳು. ಆದರೆ ಆಕೆ ಇದನ್ನು ನಿರ್ಲಕ್ಷಿಸಿ ತನ್ನ ಜಪತಪ ಮುಂದುವರಿಸಿದ್ದಳು! ಒಮ್ಮೆ ರಾಮಕೃಷ್ಣ ರಲ್ಲಿ ಈ ವಿಷಯ ಪ್ರಸ್ತಾಪನೆ ಬಂದಾಗ ಅವರು ಹೇಳಿದರು "ಸತಿ ಪತಿಯನ್ನು ಭಕ್ತಿ ಪ್ರೇಮಗಳಿಂದ ಸೇವಿಸಬೇಕು. ಪತಿವ್ರತೆಯಾದವಳು ಪತಿಯೇ ದೇವರೆಂದು ತಿಳಿಯು ತ್ತಾಳೆ. ಪತಿ ತೀರಿಹೋದಮೇಲೆ ಆತನನ್ನು ಶ್ರೀಕೃಷ್ಣಪರಮಾತ್ಮನೆಂದು ಭಾವಿಸಿ ಆರಾಧಿಸಿದ ಸ್ತ್ರೀಯರೂ ಇದ್ದಾರೆ. ರಾಣಿಯೊಬ್ಬಳು ತನ್ನ ಗಂಡನು ಜೀವಂತ ನಾಗಿದ್ದಾಗ ಚಿನ್ನದ ಆಭರಣಗಳನ್ನೇ ತೊಟ್ಟುಕೊಳ್ಳುತ್ತಿರಲಿಲ್ಲ. ಆಗಿನ ಪದ್ಧತಿ ಯಂತೆ ಒಂದು ಜೊತೆ ಕಬ್ಬಿಣದ ಬಳೆಗಳನ್ನು ಮಾತ್ರ ಹಾಕಿಕೊಂಡಿದ್ದಳು. ಬಂಧುಗಳು ಚಿನ್ನದ ಒಡವೆಗಳನ್ನು ಹಾಕಿಕೋ ಎಂದು ಎಷ್ಟು ಪೀಡಿಸಿದರೂ ಸಮ್ಮತಿಸಲಿಲ್ಲ. ಕಾಲಾನಂತರ ದೊರೆ ಸತ್ತುಹೋದನು. ಆಗ ರಾಣಿ ಕಬ್ಬಿಣದ ಬಳೆಗಳನ್ನು ಮುರಿದು ಬಿಸಾಡಿ, ಅವುಗಳಿಗೆ ಬದಲಾಗಿ ಅಂದವಾದ ಚಿನ್ನದ ಬಳೆ ಗಳನ್ನು ಹಾಕಿಕೊಂಡಳು. ಅದನ್ನು ಕಂಡು ಜನಗಳಿಗೆ ಆಶ್ಚರ್ಯವಾಯಿತು. ಕಾರಣವೇನೆಂದು ಕೇಳಿದರು. ಅದಕ್ಕೆ ರಾಣಿ ಹೇಳಿದಳು ಇದುವರೆವಿಗೆ ತನ್ನ ಪತಿ ನಶ್ವರಮಾನವದೇಹಧಾರಿಯಾಗಿ ನನ್ನ ಮುಂದೆ ಇದ್ದನು. ಈಗ ಆತನು ಅವಿನಶ್ವರವೂ

---

1 ಶ್ರೀರಾಮಕೃಷ್ಣ, ಕುವೆಂಪು, ಪುಟಸಂಖ್ಯೆ 146

2 ಅದೇ ಪುಟಸಂಖ್ಯೆ 147

ನಿತ್ಯವೂ ಆದ ಪರಮಾತ್ಮನಲ್ಲಿ ಐಕ್ಯವಾಗಿದ್ದಾನೆ. ಹಾಗೆಯೇ ಈಕೆಯ ಆಚರಣೆಯೂ ಅರ್ಥಪೂರ್ಣವಾಗಿದೆ. ತನ್ನ ಪತಿಯ ವಿಚಾರವಾಗಿ ಈಕೆಗೆ ಮಹೋನ್ನತ ಭಾವವಿದೆ." ಹೀಗೆಂದು ರಾಮಕೃಷ್ಣರು ಆಕೆಯ ಅರ್ಥಪೂರ್ಣ ಆಚರಣೆಯ ಬಗ್ಗೆ ಹೇಳಿ ಜನರ ದೂಷಣೆಗೆ ಮುಕ್ತಾಯ ಹಾಡುತ್ತಾರೆ.

ಶ್ರೀ ರಾಮಕೃಷ್ಣ ಪರಮಹಂಸರ ಶಿಷ್ಯೆಯಾಗಿದ್ದ ಅಘೋರಮಣಿದೇವಿ ಎಂಬಾಕೆಯನ್ನು ಕುರಿತ ವಿಚಿತ್ರ, ವಿಸ್ಮಯಕಾರಿ ಕಥೆಯೊಂದು ಪ್ರಚಲಿತದಲ್ಲಿದೆ. ಅಘೋರಮಣಿ ಬಾಲಿಕೆಯಲ್ಲೇ ವಿಧವೆಯಾದವಳು. ಜಪ, ತಪಗಳಲ್ಲಿ ನಿರತಳಾಗಿದ್ದ ಈಕೆ ಕೃಷ್ಣನನ್ನು ತನ್ನ ಮಗುವೆಂದು ಭಾವಿಸಿ ಆರಾಧಿಸುತ್ತಿದ್ದಳು. ಈಕೆ ರಾಮ ಕೃಷ್ಣರನ್ನು ಪ್ರಥಮತಃ ಕಂಡಾಗಲೇ ಅವರಲ್ಲಿ ತನ್ನ ಇಷ್ಟದೇವ ಶಿಶು ಗೋಪಾಲ ನನ್ನು ಕಂಡುಕೊಂಡಿದ್ದಳು. ಎರಡನೆಯಬಾರಿ ಆಕೆ ರಾಮಕೃಷ್ಣರನ್ನು ಕಂಡಾಗ ಅವರು ಆಕೆಯ ಬಳಿ ಎಳೆಯ ಮಗುವಿನಂತೆ ಮುಗ್ಧಭಾವದಿಂದ 'ಬಂದೆಯಾ? ಅಮ್ಮಾ ನನಗೇನು ತಿಂಡಿ ತಂದಿರುವೆ? ಇತ್ತ ಕೊಡು ಎಂದು ಹೇಳಿದಾಗ ಅಘೋರ ಮಣಿದೇವಿ ತಾನು ತಂದಿದ್ದ ಮಿಠಾಯಿವೊಂದನ್ನು ಕೊಡಲು ಅವರು ಅದಕ್ಕುತ್ತರ ವಾಗಿ "ಅಂಗಡಿಯಿಂದ ಇವುಗಳನ್ನು ಕೊಂಡುಕೊಳ್ಳಲು ದುಡ್ಡನ್ನೇಕೆ ಖರ್ಚು ಮಾಡುತ್ತೀಯೆ? ನೀನೆ ಕಾಯುಂಡೆಗಳನ್ನು ತಯಾರುಮಾಡಿ ತರಬಾರದೆ? ಅಥವಾ ನೀನು ಊಟಮಾಡುವ ಪದಾರ್ಥಗಳಲ್ಲಿಯೇ ನನಗೂ ಸ್ವಲ್ಪ ತಂದರೆ ಸಾಕು. ನೀನೇ ಅಡುಗೆಮಾಡಿದ ಪದಾರ್ಥಗಳನ್ನು ತಿನ್ನಲು ನನಗೆ ತುಂಬ ಇಷ್ಟವೆಂದರು. ಹೀಗೆ ಪ್ರತಿಸಲವೂ ಈಕೆ ರಾಮಕೃಷ್ಣರಲ್ಲಿ ಬಂದಾಗ ತಿಂಡಿಗಾಗಿ ಪೀಡಿಸತೊಡಗುತ್ತಾರೆ. ಕೊನೆಗೊಮ್ಮೆ ಈಕೆಯೇ ಮನದಲ್ಲಿ " ಈತನೆಂತಹ ತಿಂಡಿಪೋತ ಸಾಧು! ದೇವರು ಧರ್ಮಗಳನ್ನು ಕುರಿತು ಮಾತನಾಡುವುದನ್ನು ಬಿಟ್ಟು ಮೂರುಹೊತ್ತು ತಿಂಡಿ ತಿಂಡಿ ಎಂದು ಪೀಡಿಸುತ್ತಿದ್ದಾನೆ, ನಾನೋ ಬಡವಿಧವೆ! ದಿನಾ ಎಲ್ಲಿಂದತರಲಿ ತಿಂಡಿ ಯನ್ನು? ಸಾಕಪ್ಪಾ ಈತನ ಸಹವಾಸ, ಇನ್ನು ಇಲ್ಲಿಗೆ ನಾನು ಬರಲಾರೆ ಎಂದು ಕೊಳ್ಳತೊಡಗುತ್ತಾಳೆ. ಆದರೆ ರಾಮಕೃಷ್ಣರ ಆಧ್ಯಾತ್ಮಿಕ ಆಕರ್ಷಣೆ ಆಕೆಯನ್ನು ಅಷ್ಟು ಸುಲಭವಾಗಿ ಬಿಡುವುದಿಲ್ಲ. ದಕ್ಷಿಣೇಶ್ವರಕ್ಕೆ ಬರುವುದನ್ನು ತಿಂಡಿ ತರುವುದನ್ನು ಆಕೆ ನಿಲ್ಲಿಸಲೇ ಇಲ್ಲ!

ಒಂದು ರಾತ್ರಿ ಅಘೋರಮಣಿ ತನ್ನ ಪೂಜಾಮಂದಿರದಲ್ಲಿ ಧ್ಯಾನಮಾಡುತ್ತಿರು ವಾಗ ಶ್ರೀ ರಾಮಕೃಷ್ಣರನ್ನು ಅಲ್ಲಿ ಇದ್ದಕ್ಕಿದ್ದಂತೆಯೇ ಕಂಡು ಆಶ್ಚರ್ಯಪಡುತ್ತಿರು ವಾಗ ರಾಮಕೃಷ್ಣರು ಅದೃಶ್ಯರಾಗಿ ಶಿಶುಗೋಪಾಲನ ವಿಗ್ರಹದಲ್ಲಿ ಲೀನವಾಗಿ ಆ ವಿಗ್ರಹ ಕೋಮಲ ಸಜೀವ ವಿಗ್ರಹವಾಗಿ ಹೊರಹೊಮ್ಮಿ ಅಂಬೆಗಾಲನ್ನಿಡುತ್ತಾ ಬಳಿಗೆ ಬಂದು "ಅಮ್ಮಾ ನನಗೆ ಬೆಣ್ಣೆ ಬೇಕು! ಎಂದು ತೊದಲು ನುಡಿಯಿಂದ ಮಾತಾಡಿದಾಗ ಅಘೋರಮಣಿ ಬೆರಗಾದಳು. ಮುದ್ದು ಕಂದನನ್ನು ಸಂತೋಷದಿಂದ ಎತ್ತಿಕೊಂಡು ದಕ್ಷಿಣೇಶ್ವರಕ್ಕೆ ಆಕೆ ಧಾವಿಸಿದಾಗ, ಶಿಶುಗೋಪಾಲ ಆಕೆಯ ಕೈಯಿಂದ

ನುಣುಚಿಕೊಂಡುಹೋಗಿ ಭಾವದಲ್ಲಿದ್ದ ಪರಮಹಂಸರಲ್ಲಿ ಲೀನವಾದನು! ಅಂದಿನಿಂದಲೇ ಅಘೋರಮಣಿದೇವಿಗೆ ತನ್ನ ಇಷ್ಟದೇವ ಬೇರೆಯಲ್ಲ ಎಂದು ಗೊತ್ತಾಗಿ ಸಂತೋಷಗೊಂಡಳು! ಪರಮಭಕ್ತೆಯಾದಳು!

ಶ್ರೀರಾಮಕೃಷ್ಣರ ಶಿಷ್ಯೆಯರಲ್ಲಿ ಪರಮಶಿಷ್ಯೆಯಾಗಿದ್ದವರು ಅವರ ಸತಿ ಶಾರದಾದೇವಿ. ಪರಸ್ಪರ ಅರ್ಥವಂತಿಕೆಯಿಂದ ಕಟ್ಟುನಿಟ್ಟಾದ ಬ್ರಹ್ಮಚರ್ಯವನ್ನು ಪಾಲಿಸುತ್ತಿದ್ದ ಇವರು, ಶಾರದಾದೇವಿಯವರು ಸ್ತ್ರೀಸಹಜವಾದ ವಸ್ತ್ರಭೂಷಣದ ಆಸೆ ಇತ್ಯಾದಿಗಳು ಕಂಡುಬಂದಾಗ ಬಹು ಸೂಕ್ಷ್ಮವಾಗಿ ಮನಸ್ಸಿಗೆ ಘಾಸಿಯಾಗದ ರೀತಿ ತಿಳಿಹೇಳುತ್ತಿದ್ದರು. ಒಮ್ಮೆ ಕುಮಾರಿಯಾಗಿದ್ದ ಶಾರದಾದೇವಿಯವರು ಎಂದಿಗಿಂತಲೂ ವಿಶೇಷವಾದ ವೇಷಭೂಷಣಗಳಿಂದ ಅಲಂಕಾರಮಾಡಿಕೊಂಡು ಹಣ್ಣು ಹಂಪಲುಗಳಿದ್ದ ತಟ್ಟೆಯನ್ನು ಶ್ರೀ ರಾಮಕೃಷ್ಣರ ಬಳಿಗೆ ತಂದಾಗ[1] ಅವರು ತನ್ನ ಸತಿಯನ್ನು ಕುರಿತು "ಎಲ್ಲಾ ಸರಿ! ಆದರೆ ಇಷ್ಟೊಂದು ವೈಯಾರ ಏತಕ್ಕೆ? ಎಂದರಂತೆ. ಶಾರದಾದೇವಿಯರು ಅಳುತ್ತಾ ಹೊರಟು ಹೋದಾಗ ಸತಿಯಲ್ಲಿ ಅಕ್ಕರೆಯುನ್ನಿಟ್ಟಿದ್ದ ರಾಮಕೃಷ್ಣರು "ಯಾರಾದರೂ ಹೋಗಿಯಪ್ಪಾ ಆಕೆಯನ್ನು ಕರೆದು ತನ್ನಿ! ಆಕೆ ಅಳುವುದನ್ನು ನೋಡಿದರೆ ನನ್ನ ಈಶ್ವರ ಭಕ್ತಿಯೆಲ್ಲಾ ಹಾರಿ ಹೋಗುತ್ತದೆ!

ಸೋದರಿ ನಿವೇದಿತಾ[2]ರವರು ಶ್ರೀ ರಾಮಕೃಷ್ಣರ ಸ್ತ್ರೀ ಬಗೆಗಿನ ವಿಷಯ ಕುರಿತು ಹೇಳಿದ ಮಾತು ಗಮನಾರ್ಹ. ಅವರ ಮಾತುಗಳಲ್ಲೇ ಹೇಳುವುದಾದರೆ— "ಶ್ರೀರಾಮಕೃಷ್ಣರಿಗೆ ಭರತಖಂಡದ ಆದರ್ಶ ಸ್ತ್ರೀತ್ವದ ವಿಚಾರವಾಗಿದ್ದ ಮಹೋನ್ನತವಾದ ಅಭಿಪ್ರಾಯವು ಶಾರದಾದೇವಿಯವರಲ್ಲಿ ಮೂರ್ತಿವೆತ್ತಂತಾಗಿದೆ. ಆದರೆ ಆಕೆ ಪುರಾತನ ಸಂಪ್ರದಾಯದ ಭರತವಾಕ್ಯವೊ ಅಥವಾ ನೂತನ ಯುಗಧರ್ಮದ ನಾಂದಿಯೊ? ಆಕೆಯಲ್ಲಿ ಸರ್ವಸಾಮಾನ್ಯವಾದ ಮಹಿಳೆಯರಿಗೂ ಸುಲಭಸಾಧ್ಯವಾಗಬಹುದಾದ ಜಾಣ್ಮೆಯೂ ಮಾಧುರ್ಯವೂ ಒಂದುಗೂಡಿ ಮೂಡಿವೆ. ಆದರೂ ನನಗಂತೂ ಆಕೆಯ ರಾಜ್ಞೀ ಸ್ವಭಾವದ ಔದಾರ್ಯವೂ ಹೃದಯಮನೋವೈಶಾಲ್ಯವೂ ಆಕೆಯಲ್ಲಿ ಕಂಡುಬರುವ ದಿವ್ಯ ಭಾವದಂತೆಯೇ ಮಹದಾಶ್ಚರ್ಯಕರವಾಗಿದೆ. ಎಂತಹ ಬಿಕ್ಕಟ್ಟಾದ ಸಮಸ್ಯೆಯಾಗಲೀ ಎಂತಹ ತೊಡಕಾದ ಪ್ರಶ್ನೆಯಾಗಲೀ ಆಕೆ ಒಂದಿನಿತೂ ತಡವರಿಸದೆ ಉದಾರವಾಣಿಯಿಂದ ಸಮರ್ಪಕವಾಗಿ ಉತ್ತರ ಹೇಳುವುದನ್ನು ನಾನೆನಿತೊ ಸಾರಿ ನೋಡಿದ್ದೇನೆ. ಆಕೆಯ ಜೀವನವೆಲ್ಲಾ ಒಂದು ಮಹಾ ನೀರವ ಧ್ಯಾನವಾಗಿದೆ."

ಶಾರದಾದೇವಿಯವರಿಗೆ ಮೊದಮೊದಲು ನಾನಾ ಭಾವಗಳಲ್ಲಿ ಮೈಮರೆಯುತ್ತಿದ್ದ, ಸಮಾಧಿಸ್ಥರಾಗುತ್ತಿದ್ದ ಶ್ರೀ ರಾಮಕೃಷ್ಣರನ್ನು ಕಂಡಾಗ ಹೆದರಿ ಕಂಗಾಲಾಗು

---

1 ಶ್ರೀರಾಮಕೃಷ್ಣ, ಕುವೆಂಪು, ಪುಟಸಂಖ್ಯೆ—152

2 ಅದೇ, ಪುಟ, 152

ತ್ತಿದ್ದರು! ಒಮ್ಮೆ ಹೃದಯರಾಮನನ್ನೂ ಕರೆತಂದು ಸಮಾಧಿಯಲ್ಲಿ ಮುಳುಗಿದ್ದ ರಾಮಕೃಷ್ಣರನ್ನು ತೋರಿಸಿ ಆತಂಕ ವ್ಯಕ್ತಪಡಿಸಿದ್ದರು. ಕೊನೆಗೆ ತನ್ನ ಸತಿಯ ಅವಸ್ಥೆಯನ್ನು ತಿಳಿದುಕೊಂಡ ಶ್ರೀರಾಮಕೃಷ್ಣರು ತಾವು ಮುಳುಗುತ್ತಿದ್ದ ಭಾವಗಳ ಸಂದರ್ಭದಲ್ಲಿ ದೈಹಿಕ ಚಿಹ್ನೆಗನುಸಾರ ಕಿವಿಯಲ್ಲಿ ಮಂತ್ರೋಚ್ಚಾರ ಪಠಿಸಬೇಕೆಂದು ಆಯಾ ಸಂದರ್ಭಗಳ ಭಾವಗಳ ಮಂತ್ರಗಳನ್ನು ಬೋಧಿಸಿದ್ದರು. ತರುವಾಯ ಶ್ರೀಮಾತೆ (ಶಾರದಾದೇವಿಯವರನ್ನು ಕರೆಯುವ ಲೋಕರೂಢಿ)ಯವರು ಭಯ ಪಡದೆ ಪತಿಯನ್ನು ಸಮಾಧಿಯಿಂದ ಕೆಳಗಿಳಿಸಲು ಸಮರ್ಥರಾದರು.

ಒಂದುಸಾರಿ ಶ್ರೀಮಾತೆಯವರು ಶ್ರೀರಾಮಕೃಷ್ಣರಲ್ಲಿ[1] "ನೀವು ನನ್ನನ್ನು ಯಾವ ದೃಷ್ಟಿಯಿಂದ ಕಾಣುತ್ತೀರಿ!" ಎಂದು ಪ್ರಶ್ನೆ ಹಾಕಿದಾಗ ಶ್ರೀರಾಮಕೃಷ್ಣರು "ಯಾವ ಮಾತೆಯನ್ನು ನಾನು ನಿತ್ಯವೂ ದೇವಾಲಯದಲ್ಲಿ ಪೂಜಿಸುತ್ತೇನೆಯೋ ಆ ಮಾತೆಯೇ ಈ ಶರೀರವನ್ನು ಹೆತ್ತಳು. ಆ ಮಾತೆಯೇ ನೌಬತ್ತುಖಾನೆಯಲ್ಲಿ ವಾಸಿಸುತ್ತಿದ್ದಾಳೆ. ಅದೇ ಮಾತೆಯೇ ಈಗ ಈ ಕ್ಷಣದಲ್ಲಿ ನನ್ನ ಚರಣ ಶುಶ್ರೂಷೆ ಯನ್ನು ಮಾಡುತ್ತಿದ್ದಾಳೆ. ನಾನು ನಿನ್ನನ್ನು ಆನಂದಮಯವಾದ ಜಗನ್ಮಾತೆಯ ಪ್ರತ್ಯಕ್ಷ ಪ್ರತಿನಿಧಿಯೆಂದು ಸರ್ವದಾ ಭಾವಿಸುತ್ತೇನೆ".

ಶ್ರೀ ರಾಮಕೃಷ್ಣರಂತೆಯೇ ಶಾರದಾದೇವಿಯವರೂ ಕೂಡ ಮೇಲು ಕೀಳೆಂಬ ಯಾವುದೇ ಕೀಳುಭಾವನೆಗಳಿಂದ ದೂರವಾಗಿದ್ದರು. ಆಂತರಿಕ ಜ್ಞಾನ, ಶುಭ್ರತೆಗೆ ಮಹತ್ವಕೊಡುತ್ತಿದ್ದವರು. ಅಷ್ಟೇ ಧೈರ್ಯಶಾಲಿ ಹೆಣ್ಣಾಗಿದ್ದರು, ದಿಟ್ಟೆ ಯಾಗಿದ್ದರು.

ಒಂದುಸಾರಿ ಕಾಮಾರಪುಕುರದಿಂದ ದಕ್ಷಿಣೇಶ್ವರಕ್ಕೆ ಶಾರದಾದೇವಿಯವರು ಹೊರಟರು. ಕಾಮಾರಪುಕುರದಿಂದ ದಕ್ಷಿಣೇಶ್ವರಕ್ಕೆ ಹೋಗಬೇಕಾದರೆ ನಡುವೆ ಹಬ್ಬಿದ್ದ ಕಾಡುಬಯಲುಗಳನ್ನು ದಾಟಿ ಹೋಗಬೇಕು. ಶಾರದಾದೇವಿಯವರು ಇತರ ಸ್ತ್ರೀ–ಪುರುಷ ಬಂಧುಗಳ ಜೊತೆ ದಕ್ಷಿಣೇಶ್ವರಕ್ಕೆ ನಡೆದು ಹೋಗುತ್ತಿರುವಾಗ ಇತರರ ಸಮ ಹೆಜ್ಜೆ ಹಾಕಲಾಗದೆ ಸೋತು, ಅವರೆಲ್ಲರೂ ಸ್ವಲ್ಪದೂರಹೋಗಿ ನಿಂತಾಗ ಮತ್ತೆ ಅವರನ್ನು ಹೋಗಿ ಸೇರಿಕೊಳ್ಳುತ್ತಿದ್ದರು. ಹೀಗೆ ಮಾಡುತ್ತಾ ನಡೆಯುತ್ತಿರುವಾಗ ಕತ್ತಲೆ ದಟ್ಟವಾಗಿ ಕವಿಯತೊಡಗಿತು. ಅದನ್ನು ಕಂಡು ಶ್ರೀಮಾತೆಯವರು "ನೀವು ನನಗಾಗಿ ನಿಲ್ಲಬೇಡಿರಿ, ಮೆಲ್ಲಗೆ ಕಾಲುಹಾಕಿ, ನಾನು ಆದಷ್ಟು ಬೇಗ ಬೇಗನೆ ಬರುತ್ತೇನೆ. ನೀವು ನಿಂತು ನಿಂತು ಹೋಗುವಿರಾದರೆ ಎಲ್ಲರೂ ಢಕಾಯಿತರ ಪಾಲಾಗುತ್ತೇವೆ ಎಂದು ಹೇಳಿ ಅವರನ್ನು ಮುಂದೆ ಕಳುಹಿಸಿದರು. ಆದರೆ ಭಯಂಕರ ಕತ್ತಲೆಯಲ್ಲಿ ಕಾಲು ಸೋತು ಬೇಗ ನಡೆಯ ಲಾರದೆ ಶಾರದಾದೇವಿ (ಶ್ರೀಮಾತೆ) ಒಬ್ಬರೇ ಆಗಿ, ಅವರ ಆಲೋಚನೆ ನಿಜವಾಗಿ

---

1 ಶ್ರೀರಾಮಕೃಷ್ಣ, ಕುವೆಂಪು, ಪುಟಸಂಖ್ಯೆ, 153

ಥಕಾಯಿತರ ಕೈಯಲ್ಲಿ ಶಾರದಾದೇವಿಯವರು ಸಿಕ್ಕಿಹೋದರು! ಆದರೆ ದಿಟ್ಟೆ ಸಾತ್ವಿಕ ಸ್ತ್ರೀ ಶಾರದಾದೇವಿಯವರು ಹೆದರದೆ "ಬಾಬಾ....ನನ್ನ ಜೊತೆಯವರು ನನ್ನನ್ನು ಬಿಟ್ಟು ಹೋದರು. ನಿನ್ನ ಅಳಿಯ ದಕ್ಷಿಣೇಶ್ವರದ ಕಾಳೀ ಗುಡಿಯಲ್ಲಿದ್ದಾರೆ. ಅವರ ಹತ್ತಿರ ಕರೆದುಕೊಂಡು ಹೋಗಿಬಿಟ್ಟರೆ ಬಹಳ ಉಪಕಾರ. ನೀನು ನನ್ನನ್ನು ಕರೆದೊಯ್ದರೆ ನಿನ್ನಅಳಿಯ (ರಾಮಕೃಷ್ಣರು) ನಿನಗೆ ಬೇಕಾದ ಉಪಚಾರಮಾಡುತ್ತಾರೆ". ಎಂದು ಪ್ರಾರ್ಥಿಸಿದರು. ಆ ಥಕಾಯಿತ ಕೀಳು ಜಾತಿಯವನು ಎಂದು ಅವರು ಭಾವಿಸಲಿಲ್ಲ. ಆತನ ಪತ್ನಿಯನ್ನೂ ಸಹ ನೋಡಿ ತನ್ನ ತಾಯಿಯನ್ನು ಆಕೆಯಲ್ಲಿ ಕಂಡು "ಅಮ್ಮಾ, ನಾನು ನಿನ್ನ ಮಗಳು ಶಾರದೆ, ಜೊತೆಯವರು ತಪ್ಪಿ ನಡೆದು ಹೋದರು. ಕಷ್ಟದ ಸ್ಥಿತಿಯಲ್ಲಿ ಸಿಲುಕಿರುವೆ. ನನ್ನ ಅದೃಷ್ಟ ನೀವು ಸಿಕ್ಕಿದ್ದೀರಾ! ಇಲ್ಲದಿದ್ದರೆ ನನ್ನ ಗತಿ ಏನಾಗುತ್ತಿತ್ತೊ! ಎಂದು ಮುಗ್ಧ ಭಾವದಿಂದ ಹೇಳಿದಾಗ ಶಾರದಾದೇವಿಯವರ ಮಾತಿಗೆ ಆ ಮನುಷ್ಯನೂ, ಸ್ತ್ರೀಯೂ ತುಂಬಿಹೋದರು. ಶಾರದಾದೇವಿಯವರನ್ನು ನಿಜವಾಗಿಯೂ ತಮ್ಮ ಕನ್ಯೆ ಎಂದೇ ಭಾವಿಸಿದ ಅವರು ವಿಶ್ರಾಂತಿಗಾಗಿ ತಮ್ಮ ನಿವಾಸಕ್ಕೆ ಕರೆದುಕೊಂಡು ಹೋಗಿ, ಮರುದಿನ ಬೆಳಗ್ಗೆ ದಕ್ಷಿಣೇಶ್ವರಕ್ಕೆ ಆಕೆಯನ್ನು ಕರೆದೊಯ್ದು ರಾಮಕೃಷ್ಣರಲ್ಲಿ ತಲಪಿಸುತ್ತಾರೆ. ರಾಮಕೃಷ್ಣರೂ ಸಹ ಆ ಥಕಾಯಿತ ದಂಪತಿಗಳನ್ನು ಗೌರವಿಸುತ್ತಾರೆ ಆದರಿಸುತ್ತಾರೆ.

ಹೀಗೆ ಶ್ರೀರಾಮಕೃಷ್ಣರು ತಮ್ಮ ದೃಷ್ಟಿಯಲ್ಲಿಯ ಸಾತ್ವಿಕ ಪ್ರವೃತ್ತಿಯಿಂದ ಸ್ತ್ರೀಗೆ ವಿಶೇಷವಾದ ಸ್ಥಾನವನ್ನು ಕಂಡುಕೊಂಡರಲ್ಲದೆ, ತಮ್ಮ ಸಹಚರರೂ ಅತ್ಯುನ್ನತ ಸ್ಥಿತಿಮುಟ್ಟಲು ಕಾರಣರಾಗಿದ್ದಾರೆ. ಅವರ ಸಹವಾಸ ಒಡನಾಟದಿಂದ ಅವರ ಸತಿ ಶ್ರೀ ಶಾರದಾದೇವಿಯವರೂ ಅತ್ಯುನ್ನತ ಜ್ಞಾನದ ಅನ್ವೇಷಣೆಗಾಗಿ ತಮ್ಮ ಬಾಳನ್ನು ಮುಡುಪಾಗಿ ಇಟ್ಟಿದ್ದು ಸ್ಪಷ್ಟ.

ಗ್ರಂಥಋಣ

1. ಶ್ರೀರಾಮಕೃಷ್ಣವಚನವೇದ— 'ಮ'
2. ಶ್ರೀರಾಮಕೃಷ್ಣಲೀಲಾ ಪ್ರಸಂಗ — ಅನು॥ ಸ್ವಾಮಿ ಪ್ರಣವೇಶಾನಂದ
3. ನನ್ನಗುರುದೇವ— ಸ್ವಾಮಿವಿವೇಕಾನಂದ
4. ರಾಮಕೃಷ್ಣ ಜೀವನಚರಿತೆ— ಅನು : ಶಿವರಾಮಕಾರಂತ
5. ಗುರುದೇವ ಶ್ರೀರಾಮಕೃಷ್ಣ— ಸೋಮನಾಥನಂದಜಿ
6. ಶ್ರೀರಾಮಕೃಷ್ಣ — ಕುವೆಂಪು
7. ಸಮಕಾಲೀನ ಭಾರತೀಯ ತತ್ವಶಾಸ್ತ್ರ — ಡಾ॥ ವಿ. ಎನ್. ಶೇಷಗಿರಿರಾವ್

ಡಾ. ಕೆ. ಕೆಂಪೇಗೌಡ

ದ್ರಾವಿಡ ಸಂಖ್ಯಾವಾಚಕಗಳು

(ಮುಂದುವರೆದುದು)

1 : 2 ಎರಡು;

ತ; ಇರಂಟು, ಇರಣ್ಟು, ರೆಂಟು, ರೆಣ್ಟು (ಎರಡು)
ಇರಣ್ಟಾವತ್ (ಎರಡನೇ)
ಇರಣ್ಟಾವುದು (ಎರಡನೇ)
ಇರುವುದು (ಎರಡನೆಯದು)
ಇರಟ್ಟೈ (ಜೊತೆ, ಜೋಡಿ)
ಇರಣ್ಡೈ (ಜೊತೆ, ಜೋಡಿ)
ಇರಟ್ಟೈಯರ್ (ಅವಳಿ ಜವಳಿ)
ಇರಟ್ಟಿ (ಎರಡರಷ್ಟು)
ಇರಟ್ಟು (ಎರಡರಷ್ಟು)
ಇರಟ್ಟಿಪ್ಪು (ಎರಡರಷ್ಟು)
ಇರುವರು (ಇಬ್ಬರು), (ಬಹು)
ಇರುವೆಂತರ್ (ಇಬ್ಬರು ದೊರೆಗಳು)
ಇರುಮರುಂತು (ಎರಡು ಔಷಧಿಗಳು)
ಇರುಮ್ಮೈ (ಎರಡು ಸಲ)
ಈರ್ ಆರಿವು (ಎರಡು ಬಗೆ)
ಇನ್ವ್ ಇರಂಟು (ಎರಡೆರಡು)
ಇರುಪತ್ತು (ಇಪ್ಪತ್ತು)
ಇರುನೂಱು (ಇನ್ನೂರು)
ಈರೇಮು (ಹದಿನಾಲ್ಕು, ಎರಡು ಏಳು)
ಇರುವಗೈ (ಎರಡು ಬಗೆ)

(ಇರಂಟು (ಇರಣ್ಟು) ರೆಂಟು (ರೆಣ್ಟು) ಇರು-, ಇರ್-, ಇ- ಈರ್-) ಇರು-ಎಂಬುದು ವ್ಯಂಜನಗಳ ಮುಂದೆ ಬಂದರೆ, ಈರ್-ಎಂಬುದು ಸ್ವರಗಳ ಮುಂದೆ ಬರುವುದು, ಇ-ಇನ್ನೆಲ್ಲಿಯೋ ಬರುವುದು,

ಮ; ಇರಂಟು (ಎರಡು) ಇರಣ್ಟು, ಇರಣ್ಡು, ರಣ್ಟು,
ಇರಟ್ಟಿ (ಎರಡರಷ್ಟು)
ಇರಟ್ಟಿ (ಎರಡಷ್ಟು)
ಈರಂಟು (ಎರಡೆರಡು)
ಇರಟ್ಟಿಕ (ಎರಡು ಭಾಗ)
ರಣ್ಟಿಕ (ಎರಡು ಭಾಗ)
ರಣ್ಟಾವನ್ (ಎರಡನೇ)
ರಣ್ಡಾವನ್ (ಎರಡನೇ)
ರಂಟಾಕ (ಎರಡು ಎರಡರಂತೆ)
ರಣ್ಣಾಕ (ಎರಡು ಎರಡರಂತೆ)
ರಣ್ಡಾಕ (ಎರಡು ಎರಡರಂತೆ)
ರಣ್ಡೆಕ್ಕ (ಎರಡು ಎರಡರಂತೆ)
ಇರಟಿಕ (ಎರಡು ಸಂಖ್ಯೆ)
ಇರುವಗೆ (ಎರಡು ಬಗೆ)
ಇರುವರ್ (ಇಬ್ಬರು)
ಇರುಪತ್ತು (ಇಪ್ಪತ್ತು)
ಇರುನೂಱು (ಇನ್ನೂರು)

(ಇರಂಟು, ಇರಣ್ಟು, ಇರಣ್ಟು, ರಣ್ಟು, ರಣ್ಡು, ರಂಟ್-, (ರಣ್ಟ್-) ಇರು-, ಇರ್-, ಈರ್-)

ಕೋ; ಎಯ್ದ್ (ಎರಡು)
ಇರ್ವ್ದ್ (ಇಪ್ಪತ್ತು)
ಇರ್ವಾದ್ (ಇಪ್ಪತ್ತು)
ಇವತ್ ಒದ್ (ಇಪ್ಪತ್ತೊಂದು)
ಇರ್ ಪಾಣ್ಯ (ಎರಡು ಪಾವು)
ಇರ್ಪಾಣ್ಯ (ಎರಡು ಪಾವು)
ಇರ್ವಾದ್ (ಇಪ್ಪತ್ತರ)
ಇನೂಱು (ಇನ್ನೂರು)
ಈರ್ ಆಡ್ (ಎರಡು ವರ್ಷ)

ಈರ್ ಓಕ್ (ಎರಡು ಕೊಳಗ)

ಎಡ್ ಚಲ್ಗ (ಎರಡು ಸೊಲಿಗೆ)

(ಎಯನ್ದ ಇರ್–, ಇ–, ಈರ್–, ಎಡ್–)

(ಇರ್– > ಎಡ್–)

ತೊ; ಏಡ್ (ಎರಡು)

ಇಫೊತ್ (ಇಪ್ಪತ್ತು)

ಈಫೋತ್ (ಇಪ್ಪತ್ತು)

ಇನೂೞ್ (ಇನ್ನೂರು)

ಈನೂಟ್ (ಇನ್ನೂರು)

ಈರ್ ಓಡ್ (ಎರಡುವರ್ಷ)

ಈರ್ ಆಕ್ (ಎರಡು ಅಚೋಕ್ ಸೇರು)

ಈವ್ (ಜೋಡಿ)

ಈವಉ (ಅವಳಿ ಜವಳಿ)

ಇಕ್ವ್ (ಎರಡು ಕ್ವಾಕ್ ಅಳತೆ)

ಇಟ್ಯ (ಜೊತೆ,)

ಈವಉ ಆವ್ (ಎರಡೆರಡು ಸಲ)

(ಏಡ್, ಇ–, ಈರ್– ಈ–)

ಕ; ಎರಡು (ಎರಡು)

ಇರ್ಪತ್ತು (ಇಪ್ಪತ್ತು)

ಇಪ್ಪತ್ತು (ಇಪ್ಪತ್ತು)

ಇರ್ನೂಱು (ಇನ್ನೂರು)

ಇನ್ನೂರು, (ಇನ್ನೂಱು)

ಇರ್ಬರ್ (ಇಬ್ಬರು)

ಇರ್ವರ್ (ಇಬ್ಬರು)

ಇಬ್ಬರು (ಇಬ್ಬರು)

ಈರ್ವರ್ (ಇಬ್ಬರು)

ಇರ್ಮೆ (ಎರಡು ಸಾರಿ)

ಇಮ್ಮೆ (ಎರಡು ಸಾರಿ)

ಎರಡನೇ (ಎರಡನೇ)

ಇಮ್ಮಡಿ (ಎರಡನೇ)

ಈರೇೞು (ಎರಡು ಏಳು, ಹದಿನಾಲ್ಕು)

ಇರ್ಬಗೆ (ಎರಡು ಬಗೆ)

ಇಬ್ಬಗೆ (ಎರಡು ಬಗೆ)
ಇರ್ಕುಳ (ಎರಡು ಕುಳ)
ಎರಡು ವರ್ಷ (ಎರಡು ವರ್ಷ)
(ಎರಡು, ಎರಡ್–, ಇರ್–, ಇ–, ಈರ್–)
ಕೊಡ್ ; ದಂಡು (ಎರಡು)
ದಂಡನೇ (ಎರಡನೇ)
ದಣ್ಡನೆ (ಎರಡನೇ)
ಇರುವದು (ಇಪ್ಪತ್ತು)
ಇನ್ನೂರು (ಇನ್ನೂರು)
ಇನ್ನೂಱು (ಇನ್ನೂರು)
ಈರ್ ಅಂಡು (ಎರಡುವರ್ಷ)
ಈರಕ್ ಎತ್ತು (ಎರಡು ಜೊತೆ ಎತ್ತು)
ಈರಂಡು (ಎರಡೆರಡು)
ಈರಡು (ಇಬ್ಬರು ಮಕ್ಕಳು)
ಇಬ್ಬ (ಇಬ್ಬರು)
ಈರ್ಬ (ಇಬ್ಬರು)
ಇಮ್ಮೆ (ಎರಡು ಸಾರಿ)
ಇರ್ಮೆ (ಎರಡುಬಗೆ)
(ದಂಡು, ದಂಡ್–, ಇರು–, ಇರ್–, ಇ–, ಈರ್–)
ತು ; ರಡ್ಡ (ಎರಡು)
ರಡ್ಡನೆ (ಎರಡನೇ)
ಇರುವೆರು (ಇಬ್ಬರು)
ಇರ್ವೆರು (ಇಬ್ಬರು)
ಇರ್ವ, ಇರ್ವೊ (ಇಪ್ಪತ್ತು)
ಇರ್ವೊಳು (ಎರಡು ಸಾರಿ)
ಇರ್ಬಡಿ (ಜೊತೆ)
ಇರ್ಪೊತ್ತು (ಎರಡು ಹೊತ್ತು)
ಇನ್ನೂದು (ಇನ್ನೂರು)
(ರಡ್ಡ, ರಡ್ಡ್–, ಇರ್–, ಇರು–, ಇ–)
ತೆ; ರೆಂಡು (ಎರಡು) ರೆಣ್ಡು
ರೆಂಡವ (ಎರಡನೇ)
ರೆಂಚ (ಎರಡರ)

ರೆಂಟ (ಎರಡುಬಗೆ)
ರೆಟ್ಟ (ಎರಡರಷ್ಟು)
ರೆಟ್ಟ (ಎರಡುಸಾರಿ)
ರೆಟ್ಟಿಂಚ (ಜೊತೆಮಾಡು)
ರೆಟ್ಟಿಂಪು (ಜೊತೆಮಾಡು)
ಇರುವದಿ (ಇಪ್ಪತ್ತು)
ಇರುವೈ (ಇಪ್ಪತ್ತು)
ಇನ್ನೂಱು (ಇನ್ನೂರು)
ಇರುವಟ್ಟಿ (ಎರಡು ಕೊಳಗ)
ಇರುವುಟ್ಟಿ (ಎರಡರಷ್ಟು)
ಈರ್ ಏನು (ಎರಡುಐದು, ಹತ್ತು)
ಈರೇನ್ರು (ಎರಡು ಏಳು)
ಇದ್ದರು (ಇಬ್ಬರು)
ಇರುಗುರು (ಇಬ್ಬರು)
ಇರುವುದು (ಇಬ್ಬರು)
(ರೆಂಡು, ರೆಂಡ್–, ರೆಂಚ್–, ರೆಂಟ್–, ರೆಟ್ಟ್–, ಇರು–, ಇ– ಈರ್)
ಕೊಲಾ; ಇಂದಿಜ್ (ಎರಡು), (ನಪುಂ)
ಇಂದಿಜ್ (ಎರಡು ವಸ್ತುಗಳು)
ಇರ್ವೆ (ಇಪ್ಪತ್ತು)
ಇದ್ದರ್ (ಇಬ್ಬರು) (ಬಹು), (ಪು.)
ಇತ್ತರೆಲ್ (ಇಬ್ಬರು ಗಂಡಸರು), (ಪು.)
ಈರಲ್ (ಇಬ್ಬರು ಹೆಂಗಸರು) (ಸ್ತ್ರೀ.)
ಇನ್ನಲ್ (ಎರಡು ದಿನಗಳು)
(ಇಂದಿಜ್, ಇರ್–, ಇ–, ಈರ್)
ನಾ; ಇಂದಿಗ್ಗ್ (ಎರಡು), (ನಪುಂ.)
ಇಂದಿಗ್ಗ್ (ಎರಡುವಸ್ತುಗಳು)
ಇದ್ದರ್ (ಇಬ್ಬರು ಗಂಡಸರು), (ಪು.)
ಇರಳ್ (ಇಬ್ಬರು ಹೆಂಗಸರು), (ಸ್ತ್ರೀ.)
ಎರಂಡಿ (ಎರಡು), (ಚಾಂದಾನಾಯ್ಕಿ)
(ಇಂದಿನ್ಗ್, ಎರಂಡಿ, ಇರ್–, ಇ–,)
ಪ; ಇರ್ಡುf (ಎರಡು)
ಇಡ್ಡು?(ಎರಡುವಸ್ತುಗಳು), (ನಪುಂ.)

ಇರುಲ್ (ಇಬ್ಬರು ಗಂಡಸರು), (ಪು.)
ಇರಲ್ (ಇಬ್ಬರು ಹೆಂಗಸರು) (ಸ್ತ್ರೀ.)
ಇರೋಟ್ (ಎರಡರಷ್ಟು)
ಇರ್‌ವೊಕಲ್ (ಎರಡು ವರ್ಷ)
ಇರನೇ (ಎರಡು ದಿವಸಗಳು)
(ಇಡ್ಃ, ಇರ್ಡ್ದ, ಇರು,—, ಇರ್—,)

ಗ; ಇಂಡಿ, ಇನ್ಡಿ, (ಎರಡು) (ನಪು.)
ಇನ್ಡಿ (ಎರಡು ವಸ್ತುಗಳು)
ಇರುಲ್ (ಇಬ್ಬರು ಗಂಡಸರು), (ಪು.)
ಇರಲ್ (ಇಬ್ಬರು ಹೆಂಗಸರು), (ಸ್ತ್ರೀ)
ಇಡ್ಡಿಗ್ (ಎರಡು), (ಸಾಲೂರ್ ಗದಬ)
(ಇಂಡಿ, ಇನ್ಡಿ, ಇರು–, ಇರ್–, ಇ–,)

ಗೋಂ; ರಣ್ಣು, ರಂಡು, ರೆಂಡು, (ಎರಡು) (ನಪು.)
ರಂಜೆ (ಎರಡು)
ರೆಣ್ಣೆ—('')
ರೆಂಡ್ ('')
ರಹ್ಕ್ (ಎರಡೆರಡು)
ಇರುಡ್ (ಜೋಡಿ, ಜೊತೆ)
ಈ ರೂ (ರ್) (ಇಬ್ಬರು ಗಂಡಸರು) (ಪು.)
ರಂಡ್, ರೆಣ್ಡ್ (ಇಬ್ಬರು ಹೆಂಗಸರು) (ಸ್ತ್ರೀ) (ನಪುಂ.)
ಇವೀರ್ (ಇಬ್ಬರು)

(ರಂಡು (ರಣ್ಡು) ರೆಂಡು (ರೆಣ್ಡು) ರೆಂಚ್, ರೆಂಟ್, ಇರು–, ಇರ್–, ಈರ್–, ಇ–)

ಕೊಂಡ್; ರುಂಡಿ (ಎರಡು), (ನಪುಂ.)
ರುಂಡಿ, ರುಣ್ಡಿ, (ಎರಡು ವಸ್ತುಗಳು) (ಇಬ್ಬರು ಹೆಂಗಸರು) (ಸ್ತ್ರೀ. ನಪುಂ)
ರಿಎರ್ (ಇಬ್ಬರು ಗಂಡಸರು), (ಪು.)
(ರುಂಡಿ, ರುಂಡ್, ರಿ–)

ಪೆಂ; ರಿ (ಎರಡು)
ರಿಕಂಕು (ಎರಡು ಕಣ್ಣುಗಳು), (ನಪುಂ.)
ರಿಹತರಿಕ್ (ಇಬ್ಬರು ಮುದುಕಿಯರು) (ಸ್ತ್ರೀ.)
(ರಿ, ರಿ–)

ಮಂ; ರಿ (ಎರಡು), (ನಪುಂ.)
(ರಿ, ರಿ–)
ಕು; ರೀ (ಎರಡು) ರೀಂಡೆ, (ನಪುಂ.)
ರೀಂಡೆ (ನಪುಂ. ಸ್ತ್ರೀ.) (ಇಬ್ಬರು ಹೆಂಗಸರು)
ರೀಆರು (ಇಬ್ಬರು ಗಂಡಸರು), (ಪು.)
ರೀನ್ಡೆ, ರೀಂಡೆ (ಇಬ್ಬರು, ಎರಡು ವಸ್ತುಗಳು)
ರೀಹೆ (ಎರಡು ಸಾರಿ)
ರಿನೆಸೆ (ಎರಡು ದಿನಗಳು)
ರಿಕೊ (ಎರಡು ಕಡೆ)
(ರೀಂಡೆ, ರೀ, ರೀ–, ರಿ–,)
ಕುವಿ; ರೀ (ಎರಡು) ರಿಂದಿ,
ರಿಆರಿ (ಇಬ್ಬರು ಗಂಡಸರು), (ಪು.)
ರೀಆರಿ (" " ")
ರಿಂದಿ (ಇಬ್ಬರು ಹೆಂಗಸರು), (ಸ್ತ್ರೀ.) (ಎರಡು ವಸ್ತುಗಳು), (ನಪುಂ.)
ರಿಂಡಿ " " " "
ರಿಂದಿ, ರೀ, ರೀ–, ರಿ–)
ಕುರುಖ್; ಏಡ್, ಏರ್, ಏಣ್ಡ್, (ಏಂಡ್), (ಎರಡು),
ಏಣ್ಡ್ (ಎರಡು ವಸ್ತುಗಳು) (ನಪುಂ.)
ಇರ್ಬ್ (ಇಬ್ಬರು), (ಪು. ಸ್ತ್ರೀ.)
(ಏಡ್, ಏರ್, ಏಣ್ಡ್, ಇ–, ಏ–)
ಮಲ್ತೊ; ಇರ್ವ್ (ಎರಡು)
ಇರ್ವ್ (ಇಬ್ಬರು), (ಪು. ಸ್ತ್ರೀ.)
—ಇಸ್ (ಎರಡು ವಸ್ತುಗಳು), (ನಪುಂ.)
ಇರ್ವೆಸ್ತಿ (ಎರಡೆರಡು) (ಜನರು)
—ಇಸ್ತಿ (ಎರಡೆರಡು ವಸ್ತುಗಳು)
(ಇರ್ವ್, ಇರ್–, ಇ–)
ಬ್ರಾ; ಇರಟ್ (ಎಠಡು)
ಇರಾಮೂರ್ (ಇಬ್ಬರು ಮಕ್ಕಳು), (ಪು. ಸ್ತ್ರೀ)
(ಇರಟ್, ಇರಾ–)

1 : 2 : 1 ಒಂದನೆಯ ವರ್ಗ;

ತ; ಇರಂಟು, (ಇರಣ್ಟು) ರೆಂಟು, (ರೆಣ್ಟು)
ಮ; ಇರಂಟು, ರಂಟು (ರಣ್ಟು) ಇರಣ್ಡ್, (ರಣ್ಡ್)

ಕೋ ; ಎಯ್ಡ್, ಎಡ್–,
ತೊ ; ಏಡ್,
ಕೊಡ್ ; ದಂಡು, ದಂಡ್–,
ಕ ; ಎರಡು, ಎರಡ್–,
ತು ; ರಡ್ಡ್, ರಡ್ಡ್–,
ತೆ ; ರೆಂಡು, (ರೆಣ್ಣ್) ರೆಂಡ್–, ರೆಂಟ್–, ರೆಂಚ್–,
ಕೊಲ ; ಇಂದಿಜ್, ಇಂದಿಗ್, (ನಪುಂ.)
ನಾ ; ಎರಂಡಿ, ಇಂದಿಜ್, ಇಂದಿಗ್, ಇಂದಿನ್ಗ್,
ಪ ; ಇರ್ಡ್, ಇಡ್ಃ,
ಗ ; ಇಂಡಿ, ಇಡ್ಡಿಗ್,
ಗೋಂ ; ರಂಡ್ (ರಣ್ಡ್) ರಂಡು (ರಣ್ಡ್) ರಂಚ್, ರಂಟ್–,
ಕೊಂ ; ರುಂಡಿ, (ರುಣ್ಡಿ)
ಪೆಂ ; ರಿ
ಮಂ ; ರಿ
ಕು ; ರೀಂಡೆ, (ರೀಣ್ಡೆ), (ನಪುಂ.)
ಕುವಿ ; ರಿಂದಿ, ರೀ,
ಕುರುಖ್ ; ಏರ್, ಏಡ್, ಏಂಡ್, (ಏಣ್ಡ್) (ನಪುಂ.)
ಮಲ್ತೊ ; ಇರ್ವ್ಃ, —ಇಸ್,
ಬ್ರಾ ; ಇರಟ್,
ಮೂಲ.ದ್ರಾ ; * ಇರಂಟು (ಇರಣ್ಟು)
ಮೂಲ.ದ.ದ್ರಾ ; * ಇರಂತು (ಇರನ್ತು)

1 : 2 : 2 ಎರಡನೆಯ ವರ್ಗ ;

ತ ; ಇರು–, ಇರ್–, ಇ–, ಈರ್–,
ಮ ; ಇರು–, ಇರ್–, ಇ–, ಈರ್–,
ಕೋ ; ಇರ್–, ಇ–, ಈರ್–,
ತೊ ; ಇ–, ಈ–, ಈರ್–,
ಕ ; ಇರು–, ಇರ್–, ಇ–, ಈರ್–,
ಕೊಡ್ ; ಇರು–, ಇರ್–, ಇ–, ಈರ್–,
ತು ; ಇರು–, ಇರ್–, ಇ–,
ತೆ ; ಇರು–, ಇರ್–, ಇ–, ಈರ್–,
ಕೊಲಾ ; ಇರ್–, ಇ–, ಈರ್–,
ನಾ ; ಇರ್–, ಇ–,

ಪ; ಇರ್-,
ಗ; ಇರ್-,
ಗೋಂ; ಇರ್-, ಇ-, ಈರ್-,
ಕೊಂ; ರಿ-
ಪೆಂ; ರಿ-
ಮಂ: ರಿ-
ಕು; ರಿ-, ರೀ-
ಕುವಿ; ರಿ-, ರೀ-.
ಕುರುಖ್; ಇರ್-
ಮಲ್ತೊ; ಇರ್-, ಇ-,
ಬ್ರಾ; ಇರಾ-,
ಮೂಲದ್ರಾ; * ಇರು-, * ಇರ್-, *ಇ-, * ಇರುವರ್ (ಇಬ್ಬರು) (ಬಹು.), (ಪುಂ. ಸ್ತ್ರೀ)

ಎರಡು ಎಂಬುದಕ್ಕೆ ಬೇರೆ ಬೇರೆ ದ್ರಾವಿಡ ಭಾಷೆಗಳಲ್ಲಿ ಬೇರೆ ಬೇರೆ ಸ್ವತಂತ್ರ ರೂಪಗಳು ಮತ್ತು ವಿಶೇಷಣ ರೂಪಗಳು ಬಳಕೆಯಲ್ಲಿರುವುದು ಕಂಡು ಬರುತ್ತವೆ. ಇವುಗಳಲ್ಲಿ ತಮಿಳಿನ ಇರಂಟು (ಇರಣ್ಟು) ಮಲಯಾಳಂನ ಇರಂಟ, ರಂಟು, ರಣ್ಟು, ಕೋತದ ಎಯ್ಡ್, ತೊದದ ಏಡ್, ಕೊಡಗಿನ ದಂಡು, ಕನ್ನಡದ ಎರಡು, ತುಳುವಿನ ರಡ್ಡ, ತೆಲುಗಿನ ರಂಟು, (ರಣ್ಡು,) ಗೋಂಡಿಯ ರಂಡು, ರಂಡ್, ಕೊಂಡದ ರುಂದಿ, ಕುಯಿಯ ರೀಂಡೆ, ರಿಂಡೆ, ಕುವಿಯ ರಿಂದಿ, ಕೊಲಾಮಿಯ ಇಂದಿಜ್, ನಾಯ್ಕಿಯ ಇಂದಿನ್ಗ್, ಎರಂಡಿ, ಪರ್ಜಿಯ ಇರ್ಡು, ಗದಬದ ಇಂಡಿ, ಇಂದಿ, ಇಡ್ಡಿಗ್, ಕುರುಖ್‌ನ, ಏರ್, ಏಂಡ್, ಬ್ರಾಹುಈಯ ಇರಟ್ ಮುಂತಾದ ಸಂಖ್ಯಾವಾಚಕಗಳು ಸ್ವತಂತ್ರ ಸಂಖ್ಯಾವಾಚಕಗಳಾಗಿವೆ. ಇವುಗಳಲ್ಲಿ ಇರು, ಇರ್-, ಇ- ಈರ್- ಎಂಬುವು ವಿಶೇಷಣ ರೂಪಗಳಾಗಿವೆ. ಈ ಎಲ್ಲಾ ದ್ರಾವಿಡ ಸಂಖ್ಯಾವಾಚಕಗಳನ್ನು ಪರಸ್ಪರ ಹೋಲಿಸಿದಾಗ ಅವುಗಳಲ್ಲಿ ಹೆಚ್ಚಿನ ಸಾಮ್ಯವು ಕಂಡು ಬರುವುದು ಮಾತ್ರವಲ್ಲದೆ ಇವು ಪರಸ್ಪರ ಒಂದೇ ಮೂಲದಿಂದ ಹುಟ್ಟಿ ಬೆಳೆದು ಬಂದ ರೂಪಗಳಾಗಿ ಗೋಚರಿಸುತ್ತವೆ. ಇವುಗಳಲ್ಲೆಲ್ಲಾ ತಮಿಳಿನ ಇರಂಟು ಎಂಬ ರೂಪವೇ ಹೆಚ್ಚು ಪ್ರಾಚೀನವಾದುದ್ದು. ಇದು ಮೂಲ ದ್ರಾವಿಡರೂಪಕ್ಕೆ ಬಹು ಹತ್ತಿರವಾದ ರೂಪವಾಗಿ ಕಾಣಿಸಿ ಕೊಳ್ಳುವುದು. ಆದುದರಿಂದಲೇ ಕೆಲವರು ಇರಂಟು ಎಂಬುದನ್ನೇ ಮೂಲ ದ್ರಾವಿಡಕ್ಕೆ ಪುನರ್ರಚಿಸಿಕೊಳ್ಳಲು ಪ್ರಯತ್ನಿಸಿದ್ದಾರೆ. ಆ ಮೇಲಿನ ಸಂಖ್ಯಾವಾಚಕ ರೂಪಗಳ ನಡುವೆ ಅನುನಾಸಿಕ ವ್ಯಂಜನವು ಬಳಕೆಯಲ್ಲಿದೆ. ಇರು ಅಥವಾ ಇರ್ ಎಂಬುದರ ನಡುವೆ ಅನುನಾಸಿಕ ವ್ಯಂಜನವು ಉಚ್ಚಾರದಲ್ಲಿ ಕಾಣಿಸಿಕೊಂಡು ಆ ಬೇರೆ ಬೇರೆ ಸಂಖ್ಯಾವಾಚಕಗಳು ರೂಪುಗೊಂಡಿರಬಹುದು.

ಈ ರೂಪಗಳ ನಡುವೆ ಕಂಡುಬರುವ ಅನುನಾಸಿಕ ವ್ಯಂಜನವು ಉಚ್ಚಾರದಲ್ಲಿ ಕಣ್ಮರೆಯಾದಾಗ ಅವುಗಳ ಮೂಲದಲ್ಲಿ ಇರು ಅಥವಾ ಇರ್–ಎಂಬರೂಪ ಕಾಣಿಸಿಕೊಳ್ಳುತ್ತದೆ. ಇರು, ಇರ್–, ಇ–, ಈರ್,– ಎಂಬ ವಿಶೇಷಣ ಸಂಖ್ಯಾವಾಚಕರೂಪಗಳು ಸಾಮಾನ್ಯವಾಗಿ ಎಲ್ಲಾ ದ್ರಾವಿಡಭಾಷೆಗಳಲ್ಲಿಯೂ ಇರುವುದು ಕಂಡುಬರುತ್ತವೆ. ಈ ಬೇರೆ ಬೇರೆ ರೂಪಗಳ ನಡುವೆ ಅನುನಾಸಿಕವು ಕಾಣಿಸಿಕೊಂಡಿದ್ದು ಇತ್ತೀಚಿಗೆ ಎಂದು ಕಾಲ್ಡ್‌ವೆಲ್ ಮಹಾಶಯನು ಅಭಿಪ್ರಾಯ ವ್ಯಕ್ತ ಪಡಿಸಿದ್ದಾನೆ.

ದ್ರಾವಿಡ ಭಾಷೆಗಳಲ್ಲಿ ಎರಡು ಎಂಬುದಕ್ಕೆ ಬಳಕೆಯಲ್ಲಿರುವ ಇರು, ಇರ್–, ಈರ್–, ಎಂಬಿತ್ಯಾದಿ ವಿಶೇಷಣ ರೂಪಗಳಿಗೆ ಬೇರೆ ಬೇರೆ ಸಾಧಿತ ಪ್ರತ್ಯಯಗಳನ್ನು ಹಚ್ಚಿದಾಗ ಅವುಗಳ ಮೂಲದಲ್ಲಿ ಬೇರೆ ಬೇರೆ ಸಾಧಿತ ಸಂಖ್ಯಾವಾಚಕ ರೂಪಗಳು ಕಾಣಿಸಿಕೊಳ್ಳುತ್ತವೆ. ಇರ್ + ಕಟ್ಟು = ಇರ್ಕಟ್ಟು, ಇರ್ + ನೂಱು = ಇನ್ನೂರು, ಇರ್ + ಅರ್ = ಇರುವರ್ > ಇರ್ವರ್ > ಈರ್ವರು > ಇಬ್ಬರು, ಇರ್ + ಅರು = ಇದ್ದರು, (ತೆ) ಇರುವುದು, ಇರುವೈ ಇರ್ಪತ್ತು > ಇಪ್ಪತ್ತು. ಇತ್ಯಾದಿ ರೂಪಗಳೂ, ಈರ್ + ಆಱು = ಈರಾಱು, ಈರ್ + ಏೞು, ಈರೇೞು, ಇತ್ಯಾದಿರೂಪಗಳು ಬೇರೆ ಬೇರೆದ್ರಾವಿಡ ಭಾಷೆಗಳಲ್ಲಿ ರೂಪುಗೊಳ್ಳುತ್ತವೆ. ಈ ಬೇರೆ ಬೇರೆ ವಿಶೇಷಣರೂಪಗಳು ಬೇರೆ ಬೇರೆ ಸಾಧಿತ ಪ್ರತ್ಯಯಗಳನ್ನು ತೆಗೆದುಕೊಂಡಾಗ, ಅವುಗಳ ಮೂಲ ರೂಪಗಳು ಅವು ತೆಗೆದುಕೊಳ್ಳುವ ವ್ಯಂಜನಧ್ವನಿಗಳಿಗೆ ಅನುಗುಣವಾಗಿ ಪರಿವರ್ತನೆಗೊಳ್ಳುತ್ತವೆ ಎಂಬುದನ್ನು ಆ ಎಲ್ಲಾ ದ್ರಾವಿಡಭಾಷೆಗಳಲ್ಲಿಯೂ ಕಾಣಬಹುದು. ಇವ್–, ಇವ್ವ–, ಇಪ್ಪ–, ಇಪ್–, ಇಬ್ಬ–, ಇಬ್–, ಇಮ್–, ಇಮ್ಮ–, ಇನ್ನ– ಇನ್–, ಇಡ್ಡ–, ಇದ್–, ಇತ್ತ–, ಇತ್–, ಎಂಬಿತ್ಯಾದಿ ಪರ್ಯಾಯ ರೂಪಗಳು ಮೂಲತಃ ಇರು ಅಥವಾ ಇರ್–ಎಂಬುದರಿಂದಲೇ ವಿಕಾಸಗೊಂಡ ರೂಪಗಳಂತೆ ಗೋಚರಿಸುತ್ತವೆ. ಇರು ಅಥವಾ ಇರ್ ಎಂಬುದರ ಆದಿಯಲ್ಲಿ ಕಂಡುಬರುವ ಹ್ರಸ್ವಸ್ವರವು ದೀರ್ಘಸ್ವರವಾಗಿ ಪರಿವರ್ತನೆಗೊಂಡು ಈರ್–, ಈ–, ಎಂಬ ರೂಪಗಳು ಸಿದ್ಧಿಸುತ್ತವೆ. ಈ ಎಲ್ಲಾ ಮೂಲರೂಪಗಳಿಗೆ ಇರು ಅಥವಾ ಇರ್ ಎಂಬ ರೂಪವೇ ಮೂಲಕಾರಣವಾಗಿರುವುದರಿಂದ * ಇರು ಅಥವಾ * ಇರ್ ಎಂಬುದನ್ನು ಮೂಲದ್ರಾವಿಡಕ್ಕೆ ಪುನರ್ರಚಿಸಿಕೊಳ್ಳಬಹುದಾಗಿದೆ. ದ್ರಾವಿಡ ಒರು, ಒರ್–, ಎಂಬರೂಪಗಳು ಒರ್ ಆಗಿ ಪರಿವರ್ತನೆಗೊಂಡಂತೆಯೇ ಎರಡು ಎಂಬುದರ ಇರು, ಇರ್–, ಎಂಬರೂಪಗಳು ಈರ್–ಆಗಿ ಪರಿವರ್ತನೆಗೊಂಡಿದೆ ಎಂದು ಎಂ.ಬಿ. ಎಮೆನೊ ಅಭಿಪ್ರಾಯವ್ಯಕ್ತಪಡಿಸಿದ್ದಾರೆ. ಇರು ಅಥವಾ ಇರ್–ಎಂಬ ವಿಶೇಷಣ ರೂಪವು ವ್ಯಂಜನಗಳ ಮುಂದೆ ಬಂದರೆ, ಈರ್–ಎಂಬ ರೂಪವು ಸ್ವರಗಳ ಮುಂದೆ ಬರುವುದು. ಈ ಪರಿಸರದಲ್ಲಿ ಹ್ರಸ್ವಸ್ವರವು ದೀರ್ಘಸ್ವರವಾಗಿ ಪರಿವರ್ತನೆಗೊಳ್ಳುತ್ತದೆಯಾದರೂ ಕೆಲವು ಭಾಷೆಗಳಲ್ಲಿ ಈಬಗೆಯ ಪರಿವರ್ತನೆಯು ಸ್ಪಷ್ಟವಾಗಿಲ್ಲ ಆದುದರಿಂದ ಈ ದಿಕ್ಕಿನಲ್ಲಿ ಯಾವುದನ್ನು ಖಚಿತವಾಗಿಹೇಳಲು ಬರುವುದಿಲ್ಲ. ಕೆಲವು

ಮಧ್ಯ ದ್ರಾವಿಡಭಾಷೆಗಳಲ್ಲಿ ಇರು ಅಥವಾ ಇರ್–ಎಂಬರೂಪಕ್ಕೆ ಲಿಂಗ ಮತ್ತು ವಚನ ಸೂಚಕ ಪ್ರತ್ಯಯಗಳನ್ನು ಹಚ್ಚಿದಾಗ ಬೇರೆ ಬೇರೆ ಲಿಂಗ ಮತ್ತು ವಚನ ಸೂಚಕ ಸಾಧಿತ ಸಂಖ್ಯಾವಾಚಕ ರೂಪಗಳು ರೂಪುಗೊಳ್ಳುತ್ತವೆ. ಇವುಗಳನ್ನು ಆ ಮೇಲಿನ ಉದಾಹರಣೆಗಳಲ್ಲಿ ಸ್ಪಷ್ಟವಾಗಿ ಗುರುತಿಸಿಕೊಳ್ಳಬಹುದಾಗಿದೆ. ದಕ್ಷಿಣ ದ್ರಾವಿಡಭಾಷೆಗಳಲ್ಲಿ ಈ ಬಗೆಯ ಲಿಂಗಸೂಚಕ ರೂಪಗಳು ಬಳಕೆಯಲ್ಲಿಲ್ಲ. ಇದ್ದರೂ ಅವು ಪುಲ್ಲಿಂಗ ಮತ್ತು ಸ್ತ್ರೀಲಿಂಗ ಎರಡಕ್ಕೂ ಅನ್ವಯವಾಗುತ್ತವೆ. ಮಧ್ಯ ದ್ರಾವಿಡಭಾಷೆಗಳಲ್ಲಿ ಇವು ಪ್ರತ್ಯೇಕ ಪ್ರತ್ಯೇಕವಾಗಿ ಬಳಕೆಯಲ್ಲಿವೆ. ಇರುವರ್, ಇರ್ವರ್ > ಇಬ್ಬರು ಎಂಬ ರೂಪದಲ್ಲಿ ಬಹುವಚನ ರೂಪ ಮಾತ್ರ ಕಾಣಿಸಿಕೊಳ್ಳುವುದು. ಕುಯಿ, ಕುವಿ, ಗೋಂಡಿ ಕೊಂಡ, ಪೆಂಗೊ, ಮಂಡ, ಮುಂತಾದ ಭಾಷೆಗಳಲ್ಲಿ ಪುಲ್ಲಿಂಗ, ಸ್ತ್ರೀಲಿಂಗ, ಮತ್ತು ನಪುಂಸಕಲಿಂಗ ಸೂಚಕ ರೂಪಗಳು ಪ್ರತ್ಯೇಕವಾಗಿ ಬಳಕೆಯಲ್ಲಿವೆ. ಇಂತಹ ಲಿಂಗ ಮತ್ತು ವಚನ ಸೂಚಕ ಸಾಧಿತ ಸಂಖ್ಯಾವಾಚಕಗಳು ಮೂಲದ್ರಾವಿಡದಲ್ಲಿ ಬಳಕೆಯಲ್ಲಿದ್ದುವೆ ಅಥವಾ ಇಲ್ಲವೆ ಎಂಬುದರ ಬಗ್ಗೆ ಯಾವುದನ್ನು ಖಚಿತವಾಗಿ ಹೇಳಲು ಬರುವುದಿಲ್ಲ. ಇಷ್ಟಾದರೂ ಕೆಲವು ವಿದ್ವಾಂಸರು * ಇರುವರ್ ಎಂಬ ರೂಪವನ್ನು (ಪು. ಸ್ತ್ರೀ.) ಪುನರ್ರಚಿಸಿ ಕೊಳ್ಳಲು ಪ್ರಯತ್ನಿಸಿದ್ದಾರೆ. ತಮಿಳು ಮತ್ತು ಮಲೆಯಾಳಂನ ಇರಂಟು, ಕೊಲಾಮಿಯ ಇಂದಿಜ್, ನಾಯ್ಕಿಯ ಇಂದಿನ್ಗ್, ಪರ್ಜಿಯ ಇರ್ಡುf, ಗದಬದ ಇಂಡಿ, ಮಲ್ತೊದ ಇರ್ವ್f ಎಂಬ ಸಂಖ್ಯಾವಾಚಕ ರೂಪಗಳ ಆದಿಯಲ್ಲಿ ಕಂಡು ಬರುವ ಇಕಾರವು ಕನ್ನಡ, ಕೋತ, ಕುರುಖ್ ಮುಂತಾದ ಭಾಷೆಗಳಲ್ಲಿ ಎ ಅಥವಾ ಏ ಕಾರವಾಗಿ ಪರಿವರ್ತನೆಗೊಳ್ಳುವುದು. ಕೋತಭಾಷೆಯಲ್ಲಿ ಮೂಲದಲ್ಲಿದ್ದ ಅನುನಾಸಿಕ ಹಾಗೂ ವ್ಯರ್ತ್ಯ ಧ್ವನಿಗಳು ಲೋಪಗೊಂಡು ಅವುಗಳಿಗೆ ಬದಲಾಗಿ ಯ್ ಮತ್ತು ದ್ ಎಂಬ ಧ್ವನಿಗಳು ಪರಿವರ್ತನೆಗೊಂಡಿವೆ. ತೆಲುಗು, ಗೋಂಡಿ, ಕೊಂಡ, ಪೆಂಗೊ, ಮಂಡ, ಕುಯಿ, ಕುವಿ ಮುಂತಾದ ಭಾಷೆಗಳಲ್ಲಿ ಇರು ಅಥವಾ ಇರ್ ಎಂಬುದರ ಆದಿಯಲ್ಲಿ ಇರಬೇಕಾಗಿದ್ದ ಇಕಾರವು ವರ್ಣವ್ಯತ್ಯಯ ತತ್ವದ ಪರಿಣಾಮದಿಂದಾಗಿ ಅದು ಸ್ಥಾನ ಪಲ್ಲಟಗೊಂಡು, ರಿ > ರಿಂದ್, > ರಿಂಡ್ ಎಂದಾದರೆ, ಮತ್ತೆ ಕೆಲವುಕಡೆ ರಿ – ಯು > ರ- > ರೆ-ಯಾಗಿಯೂ ಪರಿವರ್ತನೆ ಗೊಂಡಿದೆ. ಮತ್ತೆ ಕೆಲವು ಕಡೆ ಅದು ಕಣ್ಮರೆಯಾಗಿ ಹೋಗಿದೆ. ಈ ಭಾಷೆಗಳಲ್ಲಿ ಕಂಡುಬರುವ ರಿ–ಯು ದೀರ್ಘಗೊಂಡು ರೀ–ಆಗಿ ಪರಿವರ್ತನೆಗೊಳ್ಳುವುದು. ಈ ಉದಾಹರಣೆಗಳನ್ನು ಮಧ್ಯದ್ರಾವಿಡಭಾಷೆಗಳಲ್ಲಿ ಸ್ಪಷ್ಟವಾಗಿ ಕಾಣಬಹುದಾಗಿದೆ.

1:3 ಮೂರು ;

ತ ; ಮೂನ್ಱು, ಮೂಣ್ಣು (ಮೂರು)
ಮೂನ್ ಱಾವ್ (ಮೂರನೇ)
ಮೂಱ್ಱೆ (ತ್ರಿವಳಿ)

ಮೂವರ್ (ಮೂವರು),
ಮುಪತ್ತು (ಮೂವತ್ತು)
ಮುನೂಱು (ಮುನ್ನೂರು)
ಮೂವ್ ಆಯಿರವ್ (ಮೂರು ಸಾವಿರ)
ಮುಮ್ಮೈ (ಮೂರು ಸಾರಿ)
ಮೂವಕೈ (ಮೂರು ಬಗೆ)
ಮೂವೇಂತೆರ್ (ಮೂವರು ದೊರೆಗಳು)
ಮುಕ್ಕಣ್ (ಮೂರು ಕಣ್ಣು)
(ಮೂನ್ಱು, ಮೂಣ್ಣು, ಮೂನ್ಱ್–, ಮೂರ್–, ಮೂ–, ಮು–)
ಮ ; ಮೂನ್ಱು (ಹಳೆ ಮಲೆಯಾಳಂ), ಮೂನ್ನು (ಮೂರು)
ಮೂನ್ನಾವ್ (ಮೂರನೇ)
ಮುನ್ನಾನ್ (ಮೂರನೆಯವನು)
ಮೂವರ್ (ಮೂವರು)
ಮುಪ್ಪತ್ತು (ಮೂವತ್ತು)
ಮುಪ್ಪತ್ತ್ (ಮೂವತ್ತು)
ಮುನ್ನೂಱು (ಮುನ್ನೂರು)
ಮುಮ್ಮಾನ್ನು (ತ್ರಿವಳಿ)
ಮೂವಾಣ್ಟು (ಮೂರು ವರ್ಷ)
ಮುಪಾಜ್ (ಮೂರು ಪಾವು)
(ಮೂನ್ಱು, ಮೂನ್ನು, ಮೂನ್ನ್–, ಮು–, ಮೂ–, ನುಪ್–)
ಕೋ; ಮೂನ್ದ್ (ಮೂರು)
ಮೂನೂಱು (ಮುನ್ನೂರು)
ಮುನೂಱು (ಮುನ್ನೂರು)
ಮೂಪಾಣ್ಯ (ಮೂರು ಪಾವು)
ಮೂನಾಳ್ (ಮೂರು ದಿವಸಗಳು)
ಮುಚಲ್ಗ (ಮೂರು ಸೊಲಿಗೆ)
ಮುಅತ್ (ಮೂವತ್ತು)
ಮುಪಾದ್ (ಮೂವತ್ತು ದಿವಸಗಳು)
(ಮೂನ್ದ್, ಮೂ–, ಮು–,)
ತೊ ; ಮೂದ್ (ಮೂರು)
ಮೂಫೊಥ್ (ಮೂವತ್ತು)
ಮುನೂಱ್ (ಮುನ್ನೂರು)

ಮುಮ.ರ್ಕ್ಯ (ಮೂರು ಮರಗಳು)
ಮುಮುಮೊಖ್ (ಮೂರು ಮಕ್ಕಳು)
ಮೂಕ್ವಾಕ್ (ಮೂರು ಕ್ವಾಕ್ ಅಳತೆ)
ಮುಮಿನ್ (ಮೂರು ಕಲ್ಲುಗಳು)
(ಮೂದ್, ಮೂ–, ಮು–,)
ಕ; ಮೂಱು (ಮೂರು)
ಮೂವತ್ತು (ಮೂವತ್ತು)
ಮೂರನೇ (ಮೂರನೇ)
ಮೂರ್ಮೆ (ಮೂರನೇ)
ಮೂಮೆ (ಮೂರನೇ)
ಮೂವರು (ಮೂವರು)
ಮುನ್ನೂಱು (ಮುನ್ನೂರು)
ಮುಕ್ಕೋಟಿ (ಮೂರು ಕೋಟಿ)
ಮುಕ್ಕಾಲು (ಮುಕ್ಕಾಲು)
(ಮೂಱು, ಮೂರು, ಮೂರ್–, ಮೂ–, ಮು–,)
ಕೊಡ್; ಮೂನ್ದ್ (ಮೂರು), (ಮೂಣ್ಡ್)
ಮೂವೇ (ಮೂವರು)
ಮೂಂದನೆ (ಮೂರನೇ)
ನುಪ್ಪದು (ಮೂವತ್ತು)
ಮುನ್ನೂಱು (ಮುನ್ನೂರು)
ಮೂವು (ಮೂರು ಸಾರಿ)
ಮುಮ್ಮೂನ್ದ್ (ಮೂರರಂತೆ)
ಮುಯ್ಯಕ್ ಎತ್ತು (ಮೂರು ಜೊತೆ ಎತ್ತು)
ಮೂಆಣ್ಡ್ (ಮೂರು ವರ್ಷಗಳು)
(ಮೂನ್ದ್, ಮೂಣ್ಡ್, ಮೂ–, ಮು–, ನುಪ್–,)
ತು; ಮೂಜಿ (ಮೂರು)
ಮೂಜನೆ (ಮೂರನೇ)
ಮುಪ್ಪ (ಮೂವತ್ತು)
ಮುನ್ನೂದು (ಮುನ್ನೂರು)
ಮುತ್ತಾರ (ಮೂರು ಸಾರಿ)
ಮುಕ್ಕೋಳು (ಮೂರು ಸಾರಿ)
ಮುವ್ವೆರು (ಮೂವರು)

(ಮೂಜಿ, ಮೂಜ್–, ಮು–)
ತೆ; ಮೂಡು (ಮೂರು)
ಮೂಗುರು (ಮೂವರು)
ಮುಗ್ಗುರು (ಮೂವರು)
ಮುಪ್ಪದಿ (ಮೂವತ್ತು)
ಮುಪ್ಪೈ (ಮೂವತ್ತು)
ಮೂನೂಱು (ಮುನ್ನೂರು)
ಮುನ್ನೂಱು (ಮುನ್ನೂರು)
ಮುಕ್ಕಾರು (ಮುಕ್ಕಾಲು)
ಮುಯ್ಯೇಡು (ಮೂರುವರ್ಷ)
(ಮೂಡು, ಮೂ–, ಮು–,)
ಕೊಲಾ; ಮೂನ್ಡಿಚ್ (ಮೂರು ವಸ್ತುಗಳು) (ನಪುಂ.)
ಮುಯಲ್ (ಮೂವರು ಹೆಂಗಸರು) (ಸ್ತ್ರೀ.)
ಮೂನ್ದುಉಲ್ (ಮೂರು ದಿನಗಳು)
ಮುಗ್ಗುರ್ (ಮೂವರು) (ಪು.)
(ಮೂನ್ಡಿಚ್, ಮೂ–, ಮು–)
ನಾ; ಮೂನ್ಡಿಚ್ (ಮೂರು) (ನಪುಂ.)
ಮುಗ್ಗುರ್ (ಮೂವರು) (ಪು.)
ಮುಯಲ್ (ಮೂವರು ಹೆಂಗಸರು) (ಸ್ತ್ರೀ.)
(ಮೂನ್ಡಿಚ್, ಮು–)
ಪ; ಮೂದುಕ್ (ಮೂರು) (ನಪುಂ.)
ಮೂವಿರ್ (ಮೂವರು) (ಪು.)
ಮುಯಲ್ (ಮೂವರು ಹೆಂಗಸರು) (ಸ್ತ್ರೀ.)
ಮುಕ್‌ಪೋಕಲ್ (ಮೂರು ವರ್ಷ)
ಮೂಬಿಚ್ (ಮೂರು ದಿನಗಳು)
(ಮೂದುಕ್, ಮೂ–, ಮು–)
ಗ; ಮೂನ್ಡ್ (ಮೂರು) (ನಪುಂ.)
ಗೋಂ; ಮೂನ್ದ್ (ಮೂರು) (ನಪುಂ.)
ಮೂಣ್ಡ್ (ಮೂರು) (ನಪುಂ.)
ಮುಣ್ಡ್ (ಮೂರು) (ನಪುಂ.)
ಮುಡು (ಮೂರು) (ನಪುಂ.)
ಮು'ಬರ್ (ಮೂವರು) (ಪು.)

ಮುದ್ರೋರ್ (ಮೂವರು)
ಮುದನೆ (ಮೂವರು ಹೆಂಗಸರು) (ಸ್ತ್ರೀ),
(ಮೂನ್ಡ್, ಮೂಣ್ಡ್, ಮುಣ್ಡ್, ಮುಡು, ಮು–)
ಕೊಂ; ಮುಂಡಲಿ (ಮೂರು) (ನಪುಂ.)
ಮೂಯೆರ್ (ಮೂವರು) (ಪು.)
ಮುನ್ದ್ರಿ (ಮೂವರು ಹೆಂಗಸರು) (ಸ್ತ್ರೀ)
(ಮುಂಡಲಿ, ಮುನ್ದ್ರಿ, ಮೂ–)
ಕು; ಮುಂಜಿ (ಮೂರು) (ನಪುಂ.)
ಮೂಂಜಿ " "
ಮೂದಿನ (ಮೂರು ದಿನ)
ಮುಪ್ಪತ್ತು (ಮೂರು ಸಾರಿ)
(ಮುಂಜಿ, ಮೂಂಜಿ, ಮೂ–, ಮು–,)
ಕುರುಖ್; ಮೂನ್ದ್ (ಮೂರು) (ನಪುಂ.)
ನುಬ್ಬ್ ('')
(ಮೂನ್ದ್, ನುಬ್ಬ್)
ಬ್ರಾ; ಮುಸಿಟ್ (ಮೂರು), (ನಪುಂ),
ಮುಸೀಕ್ (ಮೂರು ಸಾರಿ)
ಮುಸಿ (ವಿಶೇಷಣ)
(ಮುಸಿಟ್, ಮು–)

1:3:1 ಒಂದನೇ ವರ್ಗ;

ತ;	ಮೂನ್ಱು,	ಮೂಣ್ಣು,	ಮೂನ್ಱ್–,	
ಮ;	ಮೂನ್ನು,	ಮೂನ್ನು,	ಮೂನ್ನ್–,	ಮುನ್ನ್–
ಕೋ;	ಮೂನ್ದ್,			
ತೊ;	ಮೂದ್,			
ಕ;	ಮೂಱು,	ಮೂರ್–,	(ಮೂ > ಮು–)	
ಕೊಡ್;	ಮೂನ್ದ್,	ಮೂಣ್ಡು,		
ತು;	ಮೂಜಿ,	ಮೂಜ್–,		
ತೆ;	ಮೂನ್ಟ್,	ಮೂಡು,		
ಗೋಂ;	ಮೂನ್ದ್,	ಮೂಣ್ಡ್,	ಮುಣ್ಡ್,	ಮುಡು
ಕೊಂ;	ಮುಂಡಲಿ,	ಮುನ್ದ್ರಿ,	ಮುಂದಲಿ,	
ಕೊಲಾ;	ಮೂನ್ದಿಜ್,	ಮೂನ್ದ್–,		
ನಾ;	ಮೂನ್ದಿಜ್,	ಮೂನ್ದಿ,	ಮೂನ್ದಿಗ್	
ಪ;	ಮೂದುಕ್			

ಗ; ಮೂನ್ಡ್ ಮೂನ್ಡ್,
ಕು; ಮುಂಜಿ, ಮೂಂಜಿ,
ಕುರುಖ್; ಮೂನ್ಡ್ ನುಬ್ಬ್–,
ಬ್ರಾ; ಮುಸಿಟ್,
ಮೂಲ ದ್ರಾ; *ಮೂನ್ಱು, (*mu : nru)
ಮೂಲ ದ.ದ್ರಾ. *ಮೂನ್ತು (*mu : ntu)
ಮೂದ್ರಾ; *ಮುಪ್ಪತ್ತು, (ಮೂವತ್ತು)
*ಮುನ್ನೂಱು (ಮೂನ್ನೂರು)
ಮೂಲ ದ. ದ್ರಾ; *ಮುನ್ನೂತು (")

1 : 3 : 2 ಎರಡನೇ ವರ್ಗ;

ತ; ಮೂ–, ಮು–,
ಮ; ಮೂ–, ಮು–, ನುಪ್–,
ಕೋ; ಮೂ–, ಮು–,
ತೊ; ಮೂ–, ಮು–,
ಕ; ಮೂ–, ಮು–,
ಕೊಡ್; ಮೂ–, ಮು–, ನುಪ್–,
ತು; ಮು–,
ತೆ; ಮೂ–, ಮು–,
ಕೊಲಾ; ಮು–,
ನಾ; ಮು–,
ಪ; ಮೂ–, ಮು–,
ಗೋಂ; ಮು–
ಕೊಂ; ಮೂ–, ಮು–,
ಕು; ಮೂ–, ಮು–,
ಕುರುಖ್; ನುಬ್ಬ್–
ಬ್ರಾ; ಮು
ಮೂಲ ದ್ರಾ; *ಮೂ– (*mu :)–*ಮು–(*mu–)
*ಮೂನ್
ಮೂ–ಸ್ವರಗಳ ಮುಂದೆ ಬಂದರೆ,
ಮು–ವ್ಯಂಜನಗಳ ಮುಂದೆ ಬರುವುದು.
ಮೂ.ದ್ರಾ *ಮೂವರ್ (ಮೂವರು) (ಪು.ಸ್ತ್ರೀ.)

(ಮಲೆಯಾಳಂ, ಕೊಡಗು, ಮತ್ತು ಕುರುಖ್ ಭಾಷೆಗಳಲ್ಲಿ ಅವುಗಳ ಮೂ ರೂಪ ಮು–ದ ಸ್ಥಾನದಲ್ಲಿ ನುಪ್ಪ್–, ಮತ್ತು ನುಬ್ಬ್–ಎಂಬ ರೂಪಗಳಿವೆ. (ನುಪ್ಪ್→ನುಬ್ಬ್–)

ಕೆ. ಬಿ. ಶಿವತಾರಕ್

ತುಮಕೂರು ಜಿಲ್ಲೆಯ ಶಾಸನಗಳು : ಒಂದು ಅಧ್ಯಯನ

ಕರ್ನಾಟಕದ ಹಳೆ ಮೈಸೂರು ಪ್ರಾಂತ್ಯದಲ್ಲಿ ತುಮಕೂರು ಜಿಲ್ಲೆ ಐತಿಹಾಸಿಕ ಪ್ರಾಮುಖ್ಯತೆಯನ್ನು ಹೊಂದಿದೆ. ಇಲ್ಲಿ ಪೂರ್ವೇತಿಹಾಸದ (ಪ್ರಾಗಿತಿಹಾಸ) ನೆಲೆಗಳು ಕಿಬ್ಬನ ಹಳ್ಳಿಬಿಳಿಗೆರೆ, ಜಕ್ಕನಹಳ್ಳಿ, ಹಿರೀಗುಂಡಗಲ್ಲು ಹಾಗೂ ಮತ್ತಿತರ ಸ್ಥಳಗಳಲ್ಲಿ ದೊರೆತಿವೆ. ಈ ಸ್ಥಳಗಳಲ್ಲಿ ಪ್ರಾಚೀನ ಶಿಲಾಯುಗ, ನೂತನ ಶಿಲಾಯುಗ ಹಾಗೂ ಬೃಹತ್‌ಶಿಲಾಯುಗಕ್ಕೆ ಸೇರಿದ ಆಯುಧಗಳು ಮತ್ತು ಅವಶೇಷಗಳು ದೊರೆತಿವೆ.

ತುಮಕೂರು ಜಿಲ್ಲೆಯಲ್ಲಿ ಒಟ್ಟು ಇಪ್ಪತ್ತೆರಡು ಅರಸು ಮನೆತನಗಳು ರಾಜ್ಯವಾಳಿದ್ದು ಈ ಎಲ್ಲಾ ರಾಜಮನೆತನಗಳ ಪ್ರಾಮುಖ್ಯತೆಯನ್ನು ಅರಿಯಲು ಮುಖ್ಯವಾಗಿ ಈ ಜಿಲ್ಲೆಯಲ್ಲಿ ದೊರೆತಿರುವ ಶಾಸನಗಳೇ ಮುಖ್ಯಸಾಕ್ಷಿ. ಈ ಎಲ್ಲಾ ಶಾಸನಗಳು ದತ್ತಿ, ಧಾನ, ಧರ್ಮ ಮತ್ತು ವೀರತ್ವದ ಬಗ್ಗೆ ಹೇಳುತ್ತದಾದರೂ ಜೊತೆಯಲ್ಲಿ ರಾಜಕೀಯ, ಆಡಳಿತ, ಸಾಮಾಜಿಕ ಸ್ಥಿತಿ, ಧಾರ್ಮಿಕ ನೀತಿ ಆರ್ಥಿಕ ವ್ಯವಸ್ಥೆಗಳ ಮೇಲೆ ಬೆಳಕನ್ನು ಬೀರುತ್ತವೆ.

ಕುವಳಾಲಪುರ (ಕೋಲಾರ) ತಲಕಾಡು, ಮಾನ್ಯಪುರಗಳನ್ನು (ಮಣ್ಣೆ) ರಾಜಧಾನಿಯನ್ನಾಗಿ ಮಾಡಿಕೊಂಡು ಸುಮಾರು ಒಂದು ಸಾವಿರ ವರುಷಗಳತನಕ ಆಳಿದಂತಹ ಗಂಗರು ಈ ಜಿಲ್ಲೆಯ ಮೊದಲ ಅರಸು ಮನೆತನದವರಾಗಿದ್ದಾರೆ. ಈ ವರೆಗೆ ಗಂಗರ ಶಾಸನಗಳು ಈ ಜಿಲ್ಲೆಯಲ್ಲಿ ಒಟ್ಟು ನಲವತ್ತೇಳು (47) ಪ್ರಕಟಿತವಾಗಿವೆ. ಇವರ ಇಲ್ಲಿಯ ಪ್ರಥಮ ಶಾಸನವು ತಾಮ್ರಪಟದಲ್ಲಿದ್ದು ಅದು ತುಮಕೂರು ನಗರದ ಹೊರ ವಲಯದಲ್ಲಿರುವ ಮೆಳೆಕೋಟೆ ಎಂಬಲ್ಲಿ ದೊರೆತಿದ್ದು ಅದರ ಕಾಲ ಕ್ರಿ.ಶ. ಸುಮಾರು 400 ಎಂದು ನಿರ್ಧರಿಸಿದ್ದು ಇದು ಈ ಮನೆತನದ ದೊರೆಯಾದ ಮುಮ್ಮಡಿ ಮಾಧವವರ್ಮನದ್ದಾಗಿದೆ. ಈ ಮನೆತನದ ಒಟ್ಟು ಶಾಸನಗಳನ್ನು ಹೀಗೆ ವರ್ಗೀಕರಿಸಬಹುದು : ನಾಲ್ಕು ಗುಂಡಿನ ಮೇಲಿರುವ ಶಾಸನಗಳಾದರೆ ಏಳು

ಶಿಲಾಶಾಸನಗಳಾಗಿರುವುವು. ಇಪ್ಪತ್ತೊಂಬತ್ತು ವೀರಗಲ್ಲುಗಳಾದರೆ ಉಳಿದ ಏಳು ತಾಮ್ರಪಟಗಳಾಗಿವೆ.

ಇವರ ಜೊತೆಗೆ ಆಳಿದಂತಹ ಇನ್ನೊಂದು ಮನೆತನವೆಂದರೆ ರಾಷ್ಟ್ರಕೂಟರು. ಇವರು ಮಾನ್ಯಖೇಟವನ್ನು ರಾಜಧಾನಿಯನ್ನಾಗಿ ಹೊಂದಿದ್ದರೂ ತುಮಕೂರು ಪ್ರಾಂತ್ಯವು ಇವರ ವಶದಲ್ಲಿದ್ದಿತೆಂಬುದಕ್ಕೆ ದೊರೆತಿರುವ 3 ಶಾಸನಗಳೇ ಸಾಕ್ಷಿ. ಇವುಗಳ ಪೈಕಿ ಒಂದು ತಾಮ್ರಪಟವಾದರೆ ಇನ್ನೆರಡು ಶಿಲಾಶಾಸನಗಳಾಗಿವೆ. ಈ ಶಾಸನಗಳ ಕಾಲ ಕ್ರಿ.ಶ. 812, 903 ಮತ್ತು 982 ಆಗಿವೆ.

ಇದೇ ತಲೆಮಾರಿನಲ್ಲಿ ಆಳಿದ ಮತ್ತೊಂದು ಪ್ರಮುಖ ಮನೆತನವೆಂದರೆ ನೊಳಂಬರು. ಇದೇ ಜಿಲ್ಲೆಗೆ ಹತ್ತಿರವಾಗಿರುವ ಹೇಮಾವತಿ ಅಥವಾ ಹೆಂಜೇರು–ಈಗ ಅನಂತಪುರ ಜಿಲ್ಲೆಯ ಮಡಕಶಿರಾ ಬಳಿ ಇದೆ. ಇದನ್ನು ರಾಜಧಾನಿಯನ್ನಾಗಿ ಮಾಡಿಕೊಂಡು ಸುಮಾರು 500 ವರ್ಷಗಳತನಕ ಆಳಿದ ಕೀರ್ತಿ ಈ ಮನೆತನಕ್ಕೆ ಸಲ್ಲುತ್ತದೆ. ಈ ಮನೆತನದ ಶಾಸನಗಳು ಹೆಚ್ಚು ಶಿರಾ, ಮಧುಗಿರಿ, ಪಾವಗಡ ಮತ್ತು ತುಮಕೂರು ತಾಲೂಕುಗಳಲ್ಲದೆ ಬೆಂಗಳೂರು, ಚಿತ್ರದುರ್ಗ, ಜಿಲ್ಲೆಗಳಲ್ಲೂ ಮತ್ತು ಆಂಧ್ರ ಮತ್ತು ತಮಿಳುನಾಡಿನಲ್ಲೂ ಇವೆ. ತುಮಕೂರು ಜಿಲ್ಲೆಯಲ್ಲಿ ಒಟ್ಟು 23 ಶಾಸನಗಳು ಲಭ್ಯವಿವೆ.

ಬನವಾಸಿಯ ಕದಂಬರಿಗೆ ಸೇರಿದ ಒಂದೇ ಒಂದು ತಾಮ್ರ ಶಾಸನವು ಕೋರಾಗ್ರಾಮದಲ್ಲಿ ದೊರೆತಿದೆ. ಇದು ಈ ಮನೆತನದ ವಿಷ್ಣುವರ್ಮನದ್ದಾಗಿದೆ.

ತಮಿಳುನಾಡಿನಲ್ಲಿ ಪ್ರಮುಖವಾಗಿ ಆಳಿದ ಚೋಳಮನೆತನದ ಒಂದು ಶಾಖೆ ಈ ಜಿಲ್ಲೆಯ ನಿಡಗಲ್ಲನ್ನು (ಪಾವಗಡ ತಾಲ್ಲೂಕು) ರಾಜಧಾನಿಯನ್ನಾಗಿ ಮಾಡಿಕೊಂಡು ಆಳಿತು. ಇವರನ್ನು "ನಿಡುಗಲ್ಲಿನ ಚೋಳ"ರೆಂದೇ ಕರೆಯುತ್ತಾರೆ. ಈ ಮನೆತನಕ್ಕೆ ಸೇರಿದ ಶಾಸನಗಳು ಕ್ರಿ.ಶ. 750 ರಿಂದ ಪ್ರಾರಂಭವಾಗಿ ಕ್ರಿ.ಶ. 1481ಕ್ಕೆ ಕೊನೆಗೊಳ್ಳುತ್ತವೆ. ಇವರ ಒಟ್ಟು ಶಾಸನಗಳು ಮೂವತ್ತಾರು (36).

ಹೊಯ್ಸಳರು ಕಲ್ಯಾಣದ ಚಾಲುಕ್ಯರ ಸಾಮಂತರಾಗಿದ್ದ ಕಾಲದ ಈ ಮನೆತನದ ಒಟ್ಟು ಶಾಸನಗಳು ಇಪ್ಪತ್ತೈದು ಇದ್ದು ಅವು ಕ್ರಿ.ಶ. 1040ರಿಂದ ಪ್ರಾರಂಭವಾಗಿ ಕ್ರಿ.ಶ. 1200ಕ್ಕೆ ಅಂತ್ಯಗೊಳ್ಳುತ್ತವೆ.

ಅರಂಭದಲ್ಲಿ ಚಾಲುಕ್ಯರ ಅಧೀನರಾಗಿ ಹೊಯ್ಸಳರು, ಹಲವಾರು ಬಿರುದುಗಳಿಗೆ ಪಾತ್ರರಾಗಿ ಅಂತ್ಯದಲ್ಲಿ ಸಾರ್ವಭೌಮತ್ವವನ್ನು ಮೆರಗಿಸಿ ಅತ್ಯಂತ ಉನ್ನತಿಗೆ ಬಂದರು. ಈ ಜಿಲ್ಲೆಗೆ ಅತಿಹೆಚ್ಚು ಶಾಸನಗಳನ್ನು ಕೊಟ್ಟವರು ಇವರು. ಒಟ್ಟು 157 ಶಾಸನಗಳು ಇವರ ಕಾಣಿಕೆಯಾಗಿವೆ. ಈ ಜಿಲ್ಲೆಯಲ್ಲಿ ಇವರ ಉನ್ನತ ಶೈಲಿಯ ದೇವಾಲಯಗಳನ್ನು ಹರಳಗುಪ್ಪೆ, ಶೆಟ್ಟಿಕೆರೆ, ತಂಡಗ, ವಿಷ್ಣುಸಂತೆ, ನೊಣವಿನಕೆರೆ, ಕೈದಾಳ, ನಿಟ್ಟೂರು, ತುರುವೇಕೆರೆ ಮತ್ತು ನಾಗಲಾಪುರಗಳಲ್ಲಿ

ಕಾಣಬಹುದು. ಇವರ ಅತಿಪ್ರಾಚೀನ ಶಾಸನ ತಿಪಟೂರು ತಾಲ್ಲೂಕಿನ ಹಟ್ಣದ್ದಾಗಿದ್ದು (ಕ್ರಿ.ಶ. 1078) ಇವರ ಶಾಸನಗಳು ಸುಮಾರು 12ನೆಯ ಶತಮಾನಗಳತನಕ ಲಭ್ಯವಿವೆ. ಈ ಒಟ್ಟು ಶಾಸನಗಳ ಪೈಕಿ ಎರಡು ಮಾತ್ರ ತಾಮ್ರ ಪಟದ್ದಾಗಿವೆ.

ಹೊಯ್ಸಳರ ಅನಂತರ ಹೆಚ್ಚು ಶಾಸನಗಳನ್ನು ಹೊರಡಿಸುವಲ್ಲಿ ಎರಡನೆಯ ಸ್ಥಾನವು ವಿಜಯನಗರದರಸರಿಗೆ ಸಲ್ಲುತ್ತದೆ. ತಾವು ರಾಜಧಾನಿಯನ್ನಾಗಿ ಮಾಡಿಕೊಂಡ ವಿಜಯನಗರವಲ್ಲದೆ ಉಳಿದ ರಾಜಧಾನಿಗಳಿಂದಲೂ ಹೊರಡಿಸಿದ ಶಾಸನಗಳನ್ನು ನಾವು ಇಲ್ಲಿ ಕಾಣಬಹುದಾಗಿದೆ. ಈ ಜಿಲ್ಲೆಯ ಭಾಗಗಳು ಪೆನುಗೊಂಡ ಹೊನ್ನವಳ್ಳಿ ಮತ್ತು ಆನೆಬಿದ್ದಸರಿ ರಾಜ್ಯಗಳಿಗೆ ಸೇರಿದ್ದವು. ಈ ಮನೆತನದ ಮೊದಲನೆ ಶಾಸನವು 1354ರ ಬುಕ್ಕರಾಯನದ್ದಾದರೆ ಕೊನೆಯ ಶಾಸನವು ಕ್ರಿ.ಶ. 1745ರ ಪೆನುಗೊಂಡೆಯ ರಾಮರಾಯನದ್ದಾಗಿದೆ. ಈ ಮನೆತನದ ಹೆಚ್ಚಿನ ಎಲ್ಲಾ ರಾಜರ ಶಾಸನಗಳನ್ನೂ ಈ ಜಿಲ್ಲೆಯಲ್ಲಿ ಕಾಣಬಹುದಾಗಿದೆ. ಒಟ್ಟು ಶಾಸನಗಳ ಸಂಖ್ಯೆ 146.

ಒರಂಗಲ್ಲಿನ ಕಾಕತೀಯರ ಒಂದು ಶಾಸನ, ನಿಡುಗಲ್ಲಿನ ನಾಯಕರ ಏಳು ಶಾಸನಗಳು, ಹರತಿ ಪ್ರಭುಗಳ ಹದಿಮೂರು ಶಾಸನಗಳು, ಯಲಹಂಕನಾಯಕರ ಒಂದು ಶಾಸನ, ಸಂತೆ ಬೆನ್ನೂರು ಪ್ರಭುಗಳ ಒಂದು ಶಾಸನ, ಹೊಳವನಹಳ್ಳಿ ಪ್ರಮುಖರ ಐದು ಶಾಸನಗಳು, ಹಾಗಲವಾಡಿ ಪಾಳೇಗಾರರ ಐದು ಶಾಸನಗಳು, ಕುಂದರ್ಪಿ ಮನೆತನದ ಒಂದು ಶಾಸನ, ಗುಬ್ಬಿ ಹೊಸಳ್ಳಿಯವರ ಒಂದು ಶಾಸನ, ಬಿಜ್ಜಾವರದೊಡೆಯರ ಎರಡು ಶಾಸನಗಳು ದೊರೆತಿವೆ. ಈ ಪಾಳೇಗಾರರ ವಂಶದವರ ಪೈಕಿ ಹೆಚ್ಚಿನವರು ಇದೇ ಜಿಲ್ಲೆಯ ಮೂಲ ಮನೆತನದವರಾಗಿದ್ದರು.

ಹದಿನೇಳನೆಯ ಶತಮಾನದಲ್ಲಿ ಮುಸ್ಲಿಮರು ಶಿರಾವನ್ನು ಇವರ ಆಧಿಪತ್ಯದಲ್ಲಿರಿಸಿಕೊಂಡಿದ್ದರು. ಇದನ್ನು ಒಂದು ಪ್ರಮುಖ ಆಡಳಿತ ಕೇಂದ್ರವನ್ನಾಗಿ ಮಾಡಿಕೊಂಡಿದ್ದರು. ಮೊಗಲ್ ಸಾಮ್ರಾಜ್ಯದ ಎಂಟು ಶಾಸನಗಳು ಮತ್ತು ಬಿಜಾಪುರ ಸುಲ್ತಾನರ ಆರು ಶಾಸನಗಳು ದೊರೆತಿವೆ.

ಹದಿನೇಳನೆಯ ಶತಮಾನದ ಅವಧಿಯಲ್ಲಿ ಆಳಿದ ಮರಾಠರ ಶಾಸನಗಳು ಕೇವಲ ಮೂರಾದರೆ, ಹದಿನಾಲ್ಕನೆಯ ಶತಮಾನದಿಂದ ಇಪ್ಪತ್ತನೆಯ ಶತಮಾನದತನಕ ಆಳಿದ ಮೈಸೂರಿನೊಡೆಯರ ಶಾಸನಗಳ ಸಂಖ್ಯೆ ಮೂವತ್ತೆಂಟು. ಒಡೆಯರ ಮೊದಲ ಶಾಸನವು ದೇವರಾಜ ಒಡೆಯರ 1662 ರದ್ದಾದರೆ ಕೊನೆಯ ಶಾಸನವು 1881ರ ಹತ್ತನೆಯ ಚಾಮರಾಜ ಒಡೆಯರದ್ದಾಗಿದೆ.

ಹೀಗೆ ತುಮಕೂರು ಜಿಲ್ಲೆಯು ಹಲವು ಅರಸು ಮನೆತನಗಳ ಆಳ್ವಿಕೆಯಿಂದಲೂ ಮತ್ತು ರಾಜ್ಯಕ್ಕೆ ಹಲವು ಅರಸು ಮನೆತನಗಳನ್ನು ನೀಡಿ ಐತಿಹಾಸಿಕವಾಗಿ ಪ್ರಮುಖ ಸ್ಥಾನವನ್ನುಗಳಿಸಿದೆ.

ಕರ್ನಾಟಕದಲ್ಲಿ ಶಾಸನಗಳು ಸಮೃದ್ಧವಾಗಿವೆ. ಭಾರತದಲ್ಲಿ ಬಹುಶಃ ತಮಿಳು ನಾಡನ್ನು ಬಿಟ್ಟರೆ ಕರ್ನಾಟಕವೇ ಅತಿ ಹೆಚ್ಚಿನ ಶಾಸನ ಸಂಪತ್ತನ್ನು ಹೊಂದಿರುವ ರಾಜ್ಯ. ಇಲ್ಲಿಯ ಶಾಸನಗಳಲ್ಲಿ ಬಹು ಹೆಚ್ಚಿನ ಸಂಖ್ಯೆಯ ಶಾಸನಗಳು ಕನ್ನಡ ಭಾಷೆಯಲ್ಲಿವೆ.

ಕರ್ನಾಟಕದ ಶಾಸನಗಳಲ್ಲಿರುವ ವಿಷಯ ವೈವಿಧ್ಯ ವಿಪುಲವಾದುದು. ಸಾಮಾನ್ಯವಾಗಿ ರಾಜರೋ ಅವರ ಅಧಿಕಾರಿಗಳೋ ಶಾಸನಗಳನ್ನು ಹಾಕಿಸುತ್ತಿದ್ದುದರಿಂದ ಅವುಗಳಲ್ಲಿ ಆಯಾ ರಾಜರ ಬಗೆಗೆ ಅವರ ಪೀಳಿಗೆಯ ಬಗೆಗೆ ವಿವರಗಳಿರುತ್ತವೆ. ಇತರರು ಶಾಸನಗಳನ್ನು ಹಾಕಿಸಿದಾಗಲೂ ಆಗ ಆಳುತ್ತಿದ್ದ ತಮ್ಮ ರಾಜರ ಹೆಸರು ಮತ್ತಿತರ ವಿವರಗಳಿರುವುದುಂಟು. ಆದ್ದರಿಂದ ರಾಜಮನೆತನಗಳ ರಾಜರ, ಅವರ ಸಾಮಂತರ, ಅಧಿಕಾರಿಗಳ ಇತಿಹಾಸವನ್ನರಿಯಲು ಈ ಶಾಸನಗಳು ಮೂಲಾಧಾರವಾಗುತ್ತವೆ. ಹಾಗೆಯೇ ಆಡಳಿತ ಪದ್ಧತಿ, ಆಡಳಿತ ಸೂತ್ರಗಳನ್ನು ಹಿಡಿದ ಅಧಿಕಾರಿಗಳ, ಅಧಿಕಾರಸ್ಥಾನಗಳ ಹೆಸರುಗಳು, ಅವರ ಅಧಿಕಾರವ್ಯಾಪ್ತಿ, ಒಬ್ಬೊಬ್ಬ ಅಧಿಕಾರಿಗೂ ಗೊತ್ತುಪಡಿಸಿದ್ದ ಕೆಲಸ, ಇದರಂತೆಯೇ ವ್ಯಾಪಾರ, ವ್ಯವಹಾರ, ಸುಂಕ ಸಾರಿಗೆಗಳು, ಭೂಸ್ವಾಮ್ಯ, ವೃತ್ತಿಪದ್ಧತಿಗಳು, ಆರ್ಥಿಕ ಸ್ಥಿತಿಗತಿ, ಮತ, ದೇವಾಲಯ, ಬಸದಿ, ಮಠಗಳು ಅವುಗಳಿಗೆ ನಡೆಯುತ್ತಿದ್ದ ದಾನ ಧರ್ಮದತ್ತಿಗಳು, ಪೂಜೆಪುರಸ್ಕಾರಗಳು, ಮೇಲ್ವಿಚಾರಣೆ, ವಿದ್ಯಾಕೇಂದ್ರಗಳು ಸಾಮಾಜಿಕ ರೀತಿನೀತಿ, ನಾಡಿನ ಜನಜೀವನ, ಊರುಗ್ರಾಮಗಳ ವಿವರ, ಕುಲಕಸುಬು, ಧಾರ್ಮಿಕ ವಿಧಿಗಳು, ಸಂಸ್ಕೃತಿ—ಹೀಗೆ ನಾಡಿನ ಯಾವ ಬಗೆಯ ಇತಿಹಾಸವೇ ಆಗಲಿ ಅವಕ್ಕೆ ಶಾಸನಗಳಲ್ಲಿ ವಿವರಗಳು ದೊರೆಯುತ್ತವೆ.

ಬಿ. ಎನ್. ಸುಜಾತ, ಆರ್. ಇಂದಿರಾ

ಶೈಕ್ಷಣಿಕ ಯೋಜನೆಯಲ್ಲಿ ಅಂಕಿ ಅಂಶಗಳ ಪ್ರಾಮುಖ್ಯ

ಶಿಕ್ಷಣ ವ್ಯವಸ್ಥೆ ಮತ್ತು ಅದಕ್ಕೆ ಸಂಬಂಧಿಸಿದ ಸಾಮಾಜಿಕ ಮತ್ತು ಆರ್ಥಿಕ ಅಂಶಗಳ ಬಗ್ಗೆ ಅಂಕಿ ಅಂಶಗಳನ್ನು ಸಂಗ್ರಹಿಸುವುದು ಮತ್ತು ಅವುಗಳನ್ನು ವಿಶ್ಲೇಷಿಸುವುದು ಶೈಕ್ಷಣಿಕ ಯೋಜನೆಯ (Educational planning) ಪ್ರಮುಖ ಹಂತಗಳಲ್ಲಿ ಒಂದಾಗಿವೆ. ಶಿಕ್ಷಣ ವ್ಯವಸ್ಥೆಯಲ್ಲಿ ಭವಿಷ್ಯದಲ್ಲಿ ಮಾಡಬೇಕಾಗಿರುವ ಪ್ರಕ್ಷೇಪಣೆಗಳಿಗೆ ಶಿಕ್ಷಣ ವ್ಯವಸ್ಥೆಗೆ ಸಂಬಂಧಿಸಿದ ವಿವಿಧ ಅಂಕಿ ಅಂಶಗಳ ಅಧ್ಯಯನ ಬುನಾದಿಯನ್ನೊದಗಿಸುತ್ತದೆ.

ಶೈಕ್ಷಣಿಕ ಯೋಜನೆಯಲ್ಲಿ ಪರಿಮಾಣಾತ್ಮಕ ಸಂಖ್ಯಾಶಾಸ್ತ್ರೀಯ ಪ್ರಸ್ತಾವನೆಗೆ ಬಹಳ ಮುಖ್ಯವಾದ ಸ್ಥಾನವಿದೆ. ಪ್ರಸಕ್ತ ಶಿಕ್ಷಣ ವ್ಯವಸ್ಥೆಯಲ್ಲಿ ಬದಲಾವಣೆಗಳನ್ನು ತರುವುದಕ್ಕಾಗಲೀ, ಮುಂಬರಲಿರುವ ದಶಕಗಳಲ್ಲಿ ಶಿಕ್ಷಣ ಕ್ಷೇತ್ರದ ಮೇಲೆ ವ್ಯಯ ಮಾಡಲ್ಪಡುವ ಹಣದ ಅಂದಾಜನ್ನು ಮಾಡಲಾಗಲೀ ಶಿಕ್ಷಣ ಕ್ಷೇತ್ರದ ವಿವಿಧ ವಿಷಯಗಳ ಬಗ್ಗೆ ಅಂಕಿ ಅಂಶಗಳನ್ನು ಯೋಜನಾಕಾರ ಸಂಗ್ರಹಿಸಬೇಕಾಗುತ್ತದೆ. ಪ್ರಸಕ್ತ ಶಿಕ್ಷಣ ವ್ಯವಸ್ಥೆಯಲ್ಲಿರುವ ನ್ಯೂನತೆಗಳನ್ನು ಸರಿಪಡಿಸಲೂ ಭವಿಷ್ಯಕ್ಕಾಗಿ ಶೈಕ್ಷಣಿಕ ಯೋಜನೆಗಳನ್ನು ರೂಪಿಸಲೂ ಶಿಕ್ಷಣ ಕ್ಷೇತ್ರಕ್ಕೆ ಸಂಬಂಧಿಸಿದ ಅಂಕಿ ಅಂಶಗಳ ಸಂಗ್ರಹಣೆ ಅತ್ಯಗತ್ಯ.

ಶೈಕ್ಷಣಿಕ ಯೋಜನೆಯನ್ನು ತಯಾರಿಸುವಾಗ ಯಾವ ಯಾವ ರೀತಿಯ ಅಂಕಿ ಅಂಶಗಳನ್ನು ಸಂಗ್ರಹಿಸಬೇಕು ಎಂಬುದನ್ನು ನಿರ್ಧರಿಸುವಾಗ, ಯೋಜನಾಕಾರನು ಆ ಯೋಜನೆಯ ಗುರಿ ಮತ್ತು ವ್ಯಾಪ್ತಿಗಳನ್ನು ಗಮನದಲ್ಲಿಟ್ಟುಕೊಳ್ಳಬೇಕಾಗುತ್ತದೆ.

ಅಲ್ಪಾವಧಿಗಾಗಿ (short term) ರೂಪಿಸುವ ಶೈಕ್ಷಣಿಕ ಯೋಜನೆಗಳಿಗೆ ವಿಶದವೂ ವಿವರಣಾತ್ಮಕವೂ ಆದ ಮಾಹಿತಿಯನ್ನು ಸಂಗ್ರಹಿಸಬೇಕು. ಆದರೆ ದೀರ್ಘಾವಧಿಗಾಗಿ (long term) ಯೋಜನೆಗಳನ್ನು ತಯಾರು ಮಾಡುವಾಗ ಬಹಳ

ವಿಶದವೂ, ಕ್ಲಿಷ್ಟವೂ ಆದಂಥ ಅಂಕಿ ಅಂಶಗಳ ಸಂಗ್ರಹಣೆ ಅನವಶ್ಯಕ. ಏಕೆಂದರೆ ಸುಮಾರು ಹತ್ತು ಅಥವಾ ಇಪ್ಪತ್ತು ವರ್ಷಗಳ ಅನಂತರ ತಲೆದೋರಲಿರುವ ಸಮಸ್ಯೆಗಳನ್ನೂ, ಮಾಡಬೇಕಾಗಿರುವ ಬದಲಾವಣೆಗಳನ್ನೂ ಬಹಳಷ್ಟು ಮೊದಲೇ ಸಂಪೂರ್ಣವಾಗಿ ಅಂದಾಜು ಮಾಡುವುದು ಕಷ್ಟಕರ.

ಶೈಕ್ಷಣಿಕ ಯೋಜನೆಯ ವ್ಯಾಪ್ತಿಯ ದೃಷ್ಟಿಯಿಂದ ಯೋಜನೆಗಳನ್ನು ವಿಶಿಷ್ಟ ಮತ್ತು ಸಮಗ್ರ ಯೋಜನೆಗಳೆಂದೂ ವಿಂಗಡಿಸಬಹುದು. ಯಾವುದಾದರೂ ಒಂದು ಶೈಕ್ಷಣಿಕ ಮಟ್ಟ, ಶೈಕ್ಷಣಿಕ ವಿಧ ಅಥವಾ ಒಂದು ಪ್ರಾಂತಕ್ಕೆ ಮಾತ್ರ ಸಂಬಂಧಿಸಿದ ಯೋಜನೆಯನ್ನು ವಿಶಿಷ್ಟ (specialised) ಯೋಜನೆ ಎಂದೂ, ಶಿಕ್ಷಣದ ವಿವಿಧ ಕ್ಷೇತ್ರಗಳು, ಮಟ್ಟಗಳು ಅಥವಾ ದೇಶದ ನಾನಾ ಭಾಗಗಳಿಗೆ ಅನ್ವಯಿಸುವಂಥ ಯೋಜನೆಯನ್ನು ಸಮಗ್ರ (comprehensive)ಯೋಜನೆ ಎಂದೂ ಕರೆಯಬಹುದು.

ಈ ಮೇಲೆ ಹೇಳಿರುವಂತೆ ವಿವಿಧ ಶೈಕ್ಷಣಿಕ ಯೋಜನೆಗಳ ಗುರಿ ಮತ್ತು ವ್ಯಾಪ್ತಿಗಳು ಭಿನ್ನ ಭಿನ್ನವಾಗಿರುವುದರಿಂದ ಪ್ರತಿಯೊಂದು ಶೈಕ್ಷಣಿಕ ಯೋಜನೆಗೂ ಏಕ ಪ್ರಕಾರವಾಗಿ ಅನ್ವಯಿಸುವಂಥ ಸಂಖ್ಯಾಶಾಸ್ತ್ರೀಯ ಮಾದರಿಯನ್ನು ರೂಪಿಸುವುದು ಸಾಧ್ಯವಿಲ್ಲ.

ಶೈಕ್ಷಣಿಕ ಯೋಜನೆಗೆ ಅವಶ್ಯಕವಾಗಿರುವ ವಿವಿಧ ರೀತಿಯ ಅಂಕಿ ಅಂಶಗಳು.

ಶೈಕ್ಷಣಿಕ ಯೋಜನೆಯನ್ನು ಒಂದು ‘ಶೈಕ್ಷಣಿಕ ಶೂನ್ಯದಲ್ಲಿ (educational vaccum) ರೂಪಿಸಲಾಗುವುದಿಲ್ಲ. ಒಂದು ಶೈಕ್ಷಣಿಕ ಯೋಜನೆಗಾಗಿ ಯಾವ ಯಾವ ರೀತಿಯ ಅಂಕಿ ಅಂಶಗಳನ್ನು ಸಂಗ್ರಹಿಸಬೇಕು ಎಂದು ನಿರ್ಧರಿಸುವ ಮೊದಲು ಒಬ್ಬ ಶೈಕ್ಷಣಿಕ ಯೋಜನಾಕಾರನು ಆ ಯೋಜನೆಗೆ ಸಂಬಂಧಿಸಿದ ವಿವಿಧ ಅಂಶಗಳನ್ನು ಗಣನೆಗೆ ತೆಗೆದುಕೊಳ್ಳಬೇಕೆಂದು ಈ ಹಿಂದೆಯೇ ತಿಳಿಸಿದೆಯಷ್ಟೆ.

ಶೈಕ್ಷಣಿಕ ಯೋಜನೆಗೆ ಉಪಯುಕ್ತವಾದಂಥ ಅಂಕಿ ಅಂಶಗಳನ್ನು ಮುಖ್ಯವಾಗಿ ಎರಡು ಗುಂಪುಗಳಾಗಿ ವರ್ಗೀಕರಿಸಬಹುದು. ಅವು (೧) ಶೈಕ್ಷಣಿಕ ಅಂಕಿ ಅಂಶಗಳು (educational statistics) ಮತ್ತು (೨) ಶಿಕ್ಷಣಕ್ಕೆ ಸಂಬಂಧಿಸಿದ ಇತರ ಅಂಕಿ ಅಂಶಗಳು. (other statistics related to education) ಮೊದಲನೆಯ ಗುಂಪಿನಲ್ಲಿ ಶೈಕ್ಷಣಿಕ ಸಂಸ್ಥೆಗಳು, ಅಧ್ಯಾಪಕರು, ವಿದ್ಯಾರ್ಥಿಗಳು, ತರಗತಿಗಳು, ಶಿಕ್ಷಣ ಸಂಸ್ಥೆಗಳ ಕಟ್ಟಡಗಳು, ಶಿಕ್ಷಣಕ್ಕೆ ತಗಲುವ ವೆಚ್ಚ ಇವೇ ಮುಂತಾದ ವಿಷಯಗಳಿಗೆ ಸಂಬಂಧಿಸಿದ ಅಂಕಿ ಅಂಶಗಳು ಸೇರ್ಪಡೆಯಾಗುತ್ತವೆ. ಇತರ ಅಂಕಿ ಅಂಶಗಳ ಗುಂಪಿನಲ್ಲಿ ದೇಶದ ಜನಸಂಖ್ಯೆ, ಕಾರ್ಮಿಕ ವರ್ಗ, ಆರ್ಥಿಕ ಹಾಗೂ ಹಣಕಾಸು ವ್ಯವಸ್ಥೆಗೆ ಸಂಬಂಧಿಸಿದ ಅಂಕಿ ಅಂಶಗಳನ್ನು ಸೇರಿಸಬಹುದು.

೧. ಶೈಕ್ಷಣಿಕ ಅಂಕಿ ಅಂಶಗಳು

(ಅ) ಶಿಕ್ಷಣ ಸಂಸ್ಥೆಗಳಿಗೆ ಸಂಬಂಧಿಸಿದ ಅಂಕಿ ಅಂಶಗಳು : ಶೈಕ್ಷಣಿಕ ಯೋಜನೆಯು ಪ್ರತಿಯೊಂದು ಹಂತದಲ್ಲೂ ವಿವಿಧ ರೀತಿಯ ಶಿಕ್ಷಣ ಸಂಸ್ಥೆಗಳ ಬಗ್ಗೆ ನಿಖರವಾದ ಅಂಕಿ ಅಂಶಗಳ ಆವಶ್ಯಕತೆ ಕಂಡು ಬರುತ್ತದೆ. ವಿವಿಧ ರೀತಿಯ ಶಿಕ್ಷಣ ಸಂಸ್ಥೆಗಳಾದ ಪ್ರಾಥಮಿಕ, ಮಾಧ್ಯಮಿಕ ಮತ್ತು ಪ್ರೌಢ ಶಿಕ್ಷಣ ಸಂಸ್ಥೆಗಳು, ವಿಶಿಷ್ಟ ಶಿಕ್ಷಣವನ್ನು (ದೈಹಿಕವಾಗಿ, ಮಾನಸಿಕವಾಗಿ, ಭಾವಾತ್ಮಕವಾಗಿ ಅಥವಾ ಸಾಮಾಜಿಕವಾಗಿ ವಿಕಲ ಹೊಂದಿರುವವರಿಗಾಗಿ ಇರುವ) ಒದಗಿಸುವ ಸಂಸ್ಥೆಗಳ ಬಗ್ಗೆ ವಿವರವಾದ ಅಂಕಿ ಅಂಶಗಳ ಸಂಗ್ರಹಣೆ ಯಾವುದೇ ಶೈಕ್ಷಣಿಕ ಯೋಜನೆಯ ಪ್ರಥಮ ಹಂತಗಳಲ್ಲಿ ಒಂದಾಗಿರುತ್ತದೆ. ಅಂತೆಯೇ ಸರ್ಕಾರಿ ಹಾಗೂ ಖಾಸಗಿ ಶಿಕ್ಷಣ ಸಂಸ್ಥೆಗಳು, ಬಾಲಕರ, ಬಾಲಕಿಯರ ಮತ್ತು ಸಹಶಿಕ್ಷಣವನ್ನು ಒದಗಿಸುತ್ತಿರುವ ಶಿಕ್ಷಣ ಸಂಸ್ಥೆಗಳ ಬಗ್ಗೆಯೂ ಅಂಕಿ ಅಂಶಗಳನ್ನು ಸಂಗ್ರಹಿಸುವುದರಿಂದ ಮುಂಬರಲಿರುವ ಶಿಕ್ಷಣ ನೀತಿ ಮತ್ತು ಶೈಕ್ಷಣಿಕ ಯೋಜನೆಗಳ ರೂಪುರೇಷೆಗಳನ್ನು ತಯಾರಿಸಲು ಸುಲಭ ವಾಗುತ್ತದೆ.

(ಆ) ಅಧ್ಯಾಪಕರು : ಯಾವುದೇ ಬಗೆಯ ಶೈಕ್ಷಣಿಕ ಯೋಜನಾಕಾರನಿಗಾದರೂ ಅಧ್ಯಾಪಕರ ಬಗ್ಗೆ ವಿವರವಾದ ಮಾಹಿತಿಯು ಅಗತ್ಯವಿದೆ. ಅಧ್ಯಾಪಕರಿಗೆ ಸಂಬಂಧಿಸಿದ ವಿವಿಧ ರೀತಿಯ ಅಂಕಿ ಅಂಶಗಳು ಯೋಜನಾಕಾರನ ಕೆಲಸವನ್ನು ಬಲು ಸರಳವನ್ನಾಗಿಸುತ್ತವೆ. ಶಿಕ್ಷಣದ ವಿವಿಧ ಮಟ್ಟಗಳಲ್ಲಿ ಸೇವೆ ಸಲ್ಲಿಸುತ್ತಿರುವ ಅಧ್ಯಾಪಕರನ್ನು ವಿವಿಧ ವಯೋಗುಂಪುಗಳಿಗನುಗುಣವಾಗಿ ವಿಂಗಡಿಸಿ ಪ್ರತಿಯೊಂದು ವಯೋ ಗುಂಪಿನಲ್ಲೂ ಎಷ್ಟೆಷ್ಟು ಮಂದಿ ಅಧ್ಯಾಪಕರಿದ್ದಾರೆ ಎಂದು ತಿಳಿಯುವುದರಿಂದ, ಎಷ್ಟು ಜನ ಅಧ್ಯಾಪಕರು ಶೀಘ್ರದಲ್ಲೇ ನಿವೃತ್ತಿಯನ್ನು ಹೊಂದಲಿದ್ದಾರೆ? ಈ ರೀತಿ ಖಾಲಿಯಾದ ಸ್ಥಳಗಳನ್ನು ತುಂಬಲು ಎಷ್ಟು ಜನರನ್ನು ನೇಮಕಾತಿ ಮಾಡಬೇಕಾಗುತ್ತದೆ ಎಂಬೆಲ್ಲ ವಿಷಯಗಳ ಬಗ್ಗೆ ಒಂದು ಸ್ಪಷ್ಟವಾದ ನಿಲುವನ್ನು ತಳೆಯಲು ಸಹಕಾರಿಯಾಗುತ್ತದೆ.

ಒಂದು ದೇಶದಲ್ಲಿಯ ಅಧ್ಯಾಪಕ ವರ್ಗದಲ್ಲಿ ಪುರುಷರು ಮತ್ತು ಮಹಿಳೆಯರ ಸಂಖ್ಯೆ ಎಷ್ಟೆಷ್ಟಿದೆ ಎಂದು ಯೋಜನಾಕಾರನು ತಿಳಿಯಬೇಕು. ಸಾಮಾನ್ಯವಾಗಿ ಮಹಿಳಾ ಅಧ್ಯಾಪಕರ ಸಂಖ್ಯೆ ಪುರುಷರಿಗಿಂತ ಕಡಿಮೆಯಿರುತ್ತದೆಯಷ್ಟೆ? ಇದಕ್ಕೆ ಕಾರಣಗಳನ್ನು ತಿಳಿಯಬೇಕಾದರೆ ಮಹಿಳಾ ಅಧ್ಯಾಪಕರು ಸಾಮಾನ್ಯವಾಗಿ ಯಾವ ರೀತಿಯ ಶಾಲೆಗಳಲ್ಲಿ ಕೆಲಸವನ್ನು ಮಾಡುತ್ತಿದ್ದಾರೆ? ಆ ಶಾಲೆಗಳಲ್ಲೆಲ್ಲ ಬಾಲಕರು ಹೆಚ್ಚಿನ ಸಂಖ್ಯೆಯಲ್ಲಿದ್ದಾರೋ ಅಥವಾ ಬಾಲಕಿಯರು ಹೆಚ್ಚಿನ ಸಂಖ್ಯೆಯಲ್ಲಿದ್ದಾರೋ? ಈ ಶಾಲೆಗಳು ನಗರ ಪ್ರದೇಶಗಳಲ್ಲಿ ಕೇಂದ್ರೀಕೃತವಾಗಿವೆಯೋ ಅಥವಾ ಗ್ರಾಮಾಂತರ ಪ್ರದೇಶಗಳಲ್ಲಿ ಹಂಚಿ ಹೋಗಿವೆಯೋ? ಎಂಬೆಲ್ಲಾ ವಿಷಯಗಳ

ಬಗ್ಗೆ ಅಂಕಿ ಅಂಶಗಳನ್ನು ಸಂಗ್ರಹಿಸುವುದರಿಂದ ಶಾಲೆಗಳಲ್ಲಿಯ ದಾಖಲಾತಿಯ ಸ್ವರೂಪಕ್ಕೂ (Enrollment pattern) ಶಾಲೆಗಳ ನೆಲೆಗೂ (Location) ಮತ್ತು ಮಹಿಳಾ ಅಧ್ಯಾಪಕರ ಸಂಖ್ಯೆಗೂ ಯಾವುದಾದರೂ ರೀತಿಯ ಸಂಬಂಧವಿದೆಯೇ ಎಂದು ತಿಳಿಯಬಹುದು. ಅನೇಕ ಅಭಿವೃದ್ಧಿ ಹೊಂದುತ್ತಿರುವ ದೇಶಗಳಲ್ಲಿ ಮಹಿಳಾ ಶಿಕ್ಷಕರ ಕೊರತೆಯೇ ಬಾಲಕಿಯರ ಶಿಕ್ಷಣ ಸ್ಥಗಿತಗೊಳ್ಳುತ್ತಿರುವುದಕ್ಕೆ ಮುಖ್ಯ ಕಾರಣಗಳಲ್ಲಿ ಒಂದಾಗಿದೆ. ಮುಂಬರಲಿರುವ ಶೈಕ್ಷಣಿಕ ಯೋಜನೆಗಳಲ್ಲಿ ಶಿಕ್ಷಕಿಯರ ನೇಮಕಾತಿಯನ್ನು ಹೆಚ್ಚಿಸುವುದರ ಜೊತೆಗೆ, ಅವರಿಗಾಗಿ ಕಲ್ಪಿಸಿಕೊಡಬೇಕಾಗಿರುವ ಹಲವಾರು ವಿಶೇಷ ಸೌಲಭ್ಯಗಳ ಬಗ್ಗೆಯೂ ಎಚ್ಚರಿಕೆಗಳನ್ನು ವಹಿಸಲು ಈ ಮೇಲೆ ವಿವರಿಸಿರುವ ಮಾಹಿತಿಯ ಉಪಯುಕ್ತತೆ ಬಹಳಷ್ಟಿರುತ್ತದೆ.

ಅಧ್ಯಾಪಕರ ವಿದ್ಯಾರ್ಹತೆ ಮತ್ತು ಅವರ ಸೇವಾವಧಿಗಳ ಬಗ್ಗೆಯೂ ಹೆಚ್ಚಿನ ಅಂಕಿ ಅಂಶಗಳ ಅವಶ್ಯಕತೆಯಿದೆ. ಅನೇಕ ದೇಶಗಳಲ್ಲಿ ಶೈಕ್ಷಣಿಕ ಪ್ರಗತಿ ಹಾಗೂ ವಿಸ್ತರಣಾ ಕಾರ್ಯಕ್ರಮಗಳಿಗೆ ತಡೆಯನ್ನೊಡ್ಡುವ ಪ್ರಮುಖ ಅಂಶಗಳ ಪೈಕಿ ಅರ್ಹತೆಯುಳ್ಳ ಅಧ್ಯಾಪಕರ ಕೊರತೆಯೂ ಒಂದಾಗಿದೆ. ಈ ಸಮಸ್ಯೆಯನ್ನು ಬಗೆಹರಿಸಬೇಕಾದರೆ ಶಿಕ್ಷಣದ ವಿವಿಧ ಹಂತಗಳಲ್ಲಿ ಸೇವೆಯನ್ನು ಸಲ್ಲಿಸುತ್ತಿರುವ ಅಧ್ಯಾಪಕರ ವಿದ್ಯಾರ್ಹತೆ, ಅವರ ಸೇವಾವಧಿ, ಅವರಲ್ಲಿ ಎಷ್ಟುಮಂದಿ ಅರೆಕಾಲಿಕ (Part time) ಅಧ್ಯಾಪಕರು ಮತ್ತು ಎಷ್ಟುಮಂದಿ ಪೂರ್ಣಕಾಲಿಕ (Full time) ಅಧ್ಯಾಪಕರು ಎಂಬ ವಿಷಯಗಳ ಬಗ್ಗೆ ಮಾಹಿತಿಯನ್ನು ಸಂಗ್ರಹಿಸಬೇಕು. ಈ ರೀತಿಯ ಅಂಕಿ ಅಂಶಗಳ ಅಧ್ಯಯನದಿಂದ ಹೊಸದಾಗಿ ನೇಮಕಗೊಳ್ಳಲಿರುವ ಅಧ್ಯಾಪಕರಿಂದ ಹೆಚ್ಚಿನ ಮಟ್ಟದ ವಿದ್ಯಾರ್ಹತೆಯನ್ನು ಅಪೇಕ್ಷಿಸುವುದರ ಬಗ್ಗೆಯೂ, ಈಗಾಗಲೇ ಸೇವೆಯಲ್ಲಿದ್ದು ಹೆಚ್ಚಿನ ವಿದ್ಯಾಮಟ್ಟವನ್ನು ಪಡೆದುಕೊಳ್ಳದ ಶಿಕ್ಷಕರನ್ನು ಉನ್ನತವ್ಯಾಸಂಗಕ್ಕಾಗಿ ನಿಯೋಜಿಸಲೂ, ಹಂಗಾಮಿ ಮತ್ತು ಅರೆಕಾಲಿಕ ಅಧ್ಯಾಪಕರನ್ನು ಕಾಯಂ ಅಥವಾ ಪೂರ್ಣಾವಧಿ ಶಿಕ್ಷಕರನ್ನಾಗಿ ಪರಿವರ್ತಿಸುವುದರ ಬಗ್ಗೆ ಎಲ್ಲಾ ಸ್ಪಷ್ಟವಾದ ನೀತಿಗಳನ್ನು ರೂಪಿಸಲು ಸಹಕಾರಿಯಾಗುತ್ತದೆ.

ಈ ಮೇಲೆ ವಿಶ್ಲೇಷಿಸಿರುವ ಅಂಕಿ ಅಂಶಗಳಲ್ಲದೆ ಅಧ್ಯಾಪಕ ವೃತ್ತಿಯನ್ನು ವಿವಿಧ ಕಾರಣಗಳಿಗಾಗಿ ಬಿಟ್ಟುಹೋಗುತ್ತಿರುವ ಶಿಕ್ಷಕರ ಬಗ್ಗೆಯೂ, ಅವರ ಬಿಟ್ಟುಬಿಡುವಿಕೆಯಿಂದ ತೆರವಾಗುತ್ತಿರುವ ಹುದ್ದೆಗಳ ಬಗ್ಗೆಯೂ ಮಾಹಿತಿಯನ್ನು ಶೈಕ್ಷಣಿಕ ಯೋಜನಾಕಾರರು ಸಂಗ್ರಹಿಸಬೇಕು. ಈ ಬಗೆಯ ಮಾಹಿತಿಯಿಂದ ಭವಿಷ್ಯಕ್ಕಾಗಿ ರೂಪುಗೊಳ್ಳಲಿರುವ ಶೈಕ್ಷಣಿಕ ಯೋಜನೆಗಳಲ್ಲಿ ಶಿಕ್ಷಕರ ನೇಮಕಾತಿಯ ಬಗ್ಗೆ ವಹಿಸಬೇಕಾದ ನಾನಾ ರೀತಿಯ ಎಚ್ಚರಿಕೆಗಳ ಮತ್ತು ಅನುಸರಿಸಬೇಕಾದ ಕ್ರಮಗಳ ಬಗ್ಗೆ ಯುಕ್ತವಾದ ಸುಳಿವು ದೊರೆಯುತ್ತದೆ.

(೩) ತರಗತಿಗಳು : ಶಿಕ್ಷಣದ ವಿವಿಧ ಮಟ್ಟಗಳಲ್ಲಿಯ ತರಗತಿಗಳ ಸಂಖ್ಯೆ, ಅವುಗಳಲ್ಲಿ ಹಾಜರಾತಿ ಮತ್ತು ಗೈರುಹಾಜರಿ ಕ್ರಮಗಳು, ತರಗತಿಗಳಲ್ಲಿರುವ ಶಿಕ್ಷಣ

ಸೌಲಭ್ಯಗಳ ಬಗ್ಗೆ ವಿವರವೂ ವಿಶಿಷ್ಟವೂ ಆದ ಮಾಹಿತಿಯ ಸಂಗ್ರಹಣೆ ಶೈಕ್ಷಣಿಕ ಯೋಜನೆಯ ಪ್ರಮುಖ ಅಂಗವಾಗಿದೆ. ಇನ್ನೂ ವಿಶದವಾಗಿ ಹೇಳಬೇಕೆಂದರೆ ಒಂದು ಪ್ರಸಕ್ತ ಸಾಲಿನಲ್ಲಿ ಪ್ರಾಥಮಿಕ, ಮಾಧ್ಯಮಿಕ ಮತ್ತು ಪ್ರೌಢಶಿಕ್ಷಣಗಳಲ್ಲಿಯ ದಾಖಲಾತಿ ಎಷ್ಟೆಷ್ಟಿದೆ? ಹೀಗೆ ದಾಖಲಾತಿ ಹೊಂದಿರುವ ವಿದ್ಯಾರ್ಥಿಗಳ ಶೈಕ್ಷಣಿಕ ಅವಶ್ಯಕತೆಗಳನ್ನು ಪೂರೈಸಲು ಬೇಕಾದ ಸಲಕರಣೆಗಳು ಆಯಾ ತರಗತಿಗಳಲ್ಲಿ ಇವೆಯೇ? ವಿವಿಧ ರೀತಿಯ ಶಾಲೆಗಳಲ್ಲಿ ತರಗತಿಗಳ ಸರಾಸರಿ ದಾಖಲಾತಿ ಎಷ್ಟಿದೆ? ಖಾಸಗಿ ಮತ್ತು ಸರ್ಕಾರಿ ಶಾಲೆಗಳಲ್ಲಿಯ ತರಗತಿಗಳಲ್ಲಿ ಇರತಕ್ಕಂಥ ವ್ಯತ್ಯಾಸಗಳು ಶಾಲೆಗಳಲ್ಲಿಯ ತರಗತಿಗಳ ಸಂಖ್ಯೆ ಮತ್ತು ಅಲ್ಲಿಯ ಅಧ್ಯಾಪಕರ ಸಂಖ್ಯೆಗೂ ನಡುವೆ ಇರುವ ಹೊಂದಾಣಿಕೆ ಇವೇ ಮೊದಲಾದ ವಿಷಯಗಳಿಗೆ ಸಂಬಂಧಿಸಿದ ಅಂಕಿ ಅಂಶಗಳ ಸಂಗ್ರಹಣೆ ಶೈಕ್ಷಣಿಕ ಯೋಜನಾಕಾರನಿಗೆ ಹೆಚ್ಚು ಉಪಯುಕ್ತವಾಗಿದೆ. ಯೋಜನಾರಹಿತ ಶೈಕ್ಷಣಿಕ ವಿಸ್ತರಣೆಯಿಂದ ಅನೇಕ ಶೈಕ್ಷಣಿಕ ಸಂಸ್ಥೆಗಳಲ್ಲಿ ತರಗತಿಗಳ ಕೊರತೆಯಿರುವುದು, ಒಂದೇ ತರಗತಿಯಲ್ಲಿ ಏಕಕಾಲದಲ್ಲಿ ಒಂದಕ್ಕಿಂತ ಹೆಚ್ಚು ವರ್ಗದ ವಿದ್ಯಾರ್ಥಿಗಳಿಗೆ ಪಾಠದ ಬೋಧನೆಯನ್ನು ಮಾಡುವುದು. ಇವೇ ಮುಂತಾದ ಶೈಕ್ಷಣಿಕ ಪಿಡುಗುಗಳ ಇರುವಿಕೆ ಸರ್ಕಾರದ ಗಮನವನ್ನು ಸೆಳೆದಿದೆಯಾದರೂ ಇನ್ನೂ ಹೆಚ್ಚು ಹೆಚ್ಚಿನ ಸಂಖ್ಯೆಯಲ್ಲಿ ವಿದ್ಯಾಸಂಸ್ಥೆಗಳು ಹುಟ್ಟಿಕೊಳ್ಳುತ್ತಲೇ ಇವೆ. ಇವನ್ನು ತಡೆಗಟ್ಟುವುದೂ, ತರಗತಿಗಳ ಪ್ರಸಕ್ತ ಪರಿಸ್ಥಿತಿಯನ್ನು ಉತ್ತಮಗೊಳಿಸುವುದೂ, ವಿದ್ಯಾರ್ಥಿಗಳಿಗೆ ತರಗತಿಗಳಲ್ಲಿ ಮೂಲಭೂತವಾದ ಅವಶ್ಯಕತೆಗಳನ್ನೊದಗಿಸುವುದೂ, ಇನ್ನು ಮುಂದೆ ಶಿಕ್ಷಣಸಂಸ್ಥೆಗಳನ್ನು ಸ್ಥಾಪಿಸಬೇಕಾದರೆ ತರಗತಿಗಳಿಗೆ ಸಂಬಂಧಿಸಿದ ವಿವಿಧ ಅಂಶಗಳಿಗೆ ಯುಕ್ತಗಮನವನ್ನು ನೀಡುವುದು– ಯೋಜನಾಕಾರನ ಮುಖ್ಯ ಗುರಿಗಳಲ್ಲಿ ಸೇರಿರುವುದರಿಂದ ತರಗತಿಗಳ ಬಗ್ಗೆ ವಿವರವಾದ ಅಂಕಿ ಅಂಶಗಳನ್ನು ಸಂಗ್ರಹಿಸುವುದು ಯೋಜನಾಕಾರನಿಗೆ ಅತ್ಯವಶ್ಯಕವಷ್ಟೇ ಅಲ್ಲ, ಅನಿವಾರ್ಯವೂ ಆಗಿದೆ.

(ಈ) ವಿದ್ಯಾರ್ಥಿಗಳು : ವಿದ್ಯಾರ್ಥಿಗಳು ಯಾವುದೇ ಶಿಕ್ಷಣ ವ್ಯವಸ್ಥೆಯ ಕೇಂದ್ರಬಿಂದುವಾಗಿದ್ದಾರೆ. ಈ ವಿದ್ಯಾರ್ಥಿಸಮುದಾಯಕ್ಕೆ ಸಂಬಂಧಿಸಿದ ವಿವಿದ ಅಂಶಗಳ ಬಗ್ಗೆ ಮಾಹಿತಿಯನ್ನು ಸಂಗ್ರಹಿಸದೇ ಹೋದಲ್ಲಿ ಶೈಕ್ಷಣಿಕ ಯೋಜನಾ ಕಾರ್ಯಕ್ರಮ ಅಪೂರ್ಣವಾಗುವುದು.

ಒಂದು ದೇಶದಲ್ಲಿ ಯಾವ ಯಾವ ಶಿಕ್ಷಣ ಮಟ್ಟದಲ್ಲಿ ಎಷ್ಟೆಷ್ಟು ಮಂದಿ ವಿದ್ಯಾರ್ಥಿಗಳಿದ್ದಾರೆ? ಅವರಲ್ಲಿ ಬಾಲಕರು ಮತ್ತು ಬಾಲಕಿಯರ ಸಂಖ್ಯೆ ಎಷ್ಟೆಷ್ಟಿದೆ? ಎಂಬುದರ ಬಗ್ಗೆ ಮೊದಲು ಅಂಕಿ ಅಂಶಗಳನ್ನು ಸಂಗ್ರಹಿಸಬೇಕು. ಅನಂತರ ಶಿಕ್ಷಣದ ವಿವಿಧ ಕ್ಷೇತ್ರಗಳಾದ ಕಲೆ, ವಿಜ್ಞಾನ, ವಾಣಿಜ್ಯ, ವೈದ್ಯಕೀಯ, ತಾಂತ್ರಿಕ, ಕಾನೂನು ಇವೇ ಮೊದಲಾದ ವಿವಿಧ ವಿಭಾಗಗಳಿಗೆ ಪ್ರತಿ ಸಾಲಿನಲ್ಲೂ ದಾಖಲಾಗುತ್ತಿರುವ ವಿದ್ಯಾರ್ಥಿಗಳ ಸಂಖ್ಯೆಯ ಬಗ್ಗೆ ಮಾಹಿತಿಯನ್ನು ಸಂಗ್ರಹಿಸಬೇಕು.

ಸರ್ಕಾರ ಪ್ರತಿಯೊಂದು ಸಾಲಿನಲ್ಲೂ ಶಿಕ್ಷಣದ ಅಭಿವೃದ್ಧಿಗೆಂದು ಕೋಟ್ಯಂತರ ರೂಪಾಯಿಗಳನ್ನು ಮಂಜೂರು ಮಾಡುತ್ತಿರುವುದು ಎಲ್ಲರಿಗೂ ತಿಳಿದಂಥ ವಿಷಯವೇ ಆಗಿದೆ. ಈ ರೀತಿ ಶಿಕ್ಷಣದ ಮೇಲೆ ವ್ಯಯಿಸಲ್ಪಡುತ್ತಿರುವ ಹಣದ ಪ್ರಯೋಜನವನ್ನು ಆಯಾ ದೇಶದ ವಿದ್ಯಾರ್ಥಿಗಳು ಎಷ್ಟರಮಟ್ಟಿಗೆ ಪಡೆಯುತ್ತಿದ್ದಾರೆ ಎಂದು ತಿಳಿಯ ಬೇಕಷ್ಟೆ? ಶೈಕ್ಷಣಿಕ ಅವಕಾಶಗಳನ್ನು ಎಷ್ಟು ಮಂದಿ ಉಪಯೋಗಿಸುತ್ತಿದ್ದಾರೆ? ಶಾಲೆಗಳಿಗೆ ದಾಖಲಾದ ಪ್ರತಿಯೊಬ್ಬ ವಿದ್ಯಾರ್ಥಿಯೂ ಶಿಕ್ಷಣವನ್ನು ಎಲ್ಲಿಯತನಕ ಮುಂದುವರಿಸುತ್ತಾನೆ? ಎಂಬೆಲ್ಲ ವಿಷಯಗಳ ಬಗ್ಗೆ ತಿಳಿವಳಿಕೆ ಶೈಕ್ಷಣಿಕ ಯೋಜನಾ ಕಾರನಿಗೆ ಅಗತ್ಯ. ಪ್ರಾಥಮಿಕ ಶಿಕ್ಷಣದ ಹಂತದಲ್ಲಿ ಶಿಕ್ಷಣವನ್ನು ಬಿಟ್ಟುಬಿಡುವವರ ಸಂಖ್ಯೆ, ನಮ್ಮ ದೇಶದಲ್ಲಿ ಅಧಿಕವಾಗಿದೆ. ಇದಲ್ಲದೆ ಶಿಕ್ಷಣದ ವಿವಿಧ ಕ್ಷೇತ್ರಗಳಲ್ಲಿ, ಮಟ್ಟಗಳಲ್ಲೂ ಸ್ಥಗಿತತೆಯ (stagnation) ಸಮಸ್ಯೆಯೂ ಗುರುತರವಾಗಿದೆ. ಈ ಕಾರಣಗಳಿಂದಾಗಿ ಶಿಕ್ಷಣಕ್ಕೆಂದು ಮೀಸಲಾಗಿಟ್ಟಿರುವ ಹಣದ ಅಪವ್ಯಯವಾಗುತ್ತಿದೆ. ಶಿಕ್ಷಣದ ಬಿಡುವಿಕೆ (drop out) ಮತ್ತು ಸ್ಥಗಿತತೆಗಳಂಥ ಸಮಸ್ಯೆಗಳನ್ನು ಬಗೆಹರಿಸ ಬೇಕಾದರೆ ಈ ವಿಷಯಗಳಿಗೆ ಸಂಬಂಧಿಸಿದಂಥ ಅಂಕಿ ಅಂಶಗಳನ್ನು ಸಂಗ್ರಹಿಸಬೇಕು. ಮುಂಬರಲಿರುವ ಶೈಕ್ಷಣಿಕ ಯೋಜನೆಗಳ ಮೂಲಕವಾದರೂ ಈ ಸಮಸ್ಯೆಗಳನ್ನು ಯಶಸ್ವಿಯಾಗಿ ತಡೆಗಟ್ಟಲು, ಮಾರ್ಗಗಳನ್ನು ಹುಡುಕಲು ಅಂಕಿ ಅಂಶಗಳ ನೆರವು ಅಗತ್ಯ.

ಶಿಕ್ಷಣದ ವಿಸ್ತರಣೆ ಮತ್ತು ಉದ್ಯೋಗಾವಕಾಶಗಳ ನಡುವೆ ನಿಕಟವಾದ ಸಂಬಂಧವಿರಬೇಕಾದ್ದು ಅವಶ್ಯ. ಎಂದರೆ ಶೈಕ್ಷಣಿಕ ಯೋಜನಾಕಾರನು ಒಂದು ದೇಶದಲ್ಲಿ ಆಯಾ ಕಾಲದಲ್ಲಿ ಉದ್ಯೋಗ ಕ್ಷೇತ್ರದಲ್ಲಿರುವ ಅವಕಾಶಗಳನ್ನು ಗಮನ ದಲ್ಲಿಟ್ಟುಕೊಂಡು ಆ ದೇಶದ ಶೈಕ್ಷಣಿಕ ವಿಸ್ತರಣೆಗಾಗಿ ಕಾರ್ಯಕ್ರಮಗಳನ್ನು ನಿಯೋಜಿಸಬೇಕಾಗುತ್ತದೆ. ಉದ್ಯೋಗದ ಯಾವ ಯಾವ ಕ್ಷೇತ್ರಗಳಲ್ಲಿ ಹೆಚ್ಚಿನ ಬೇಡಿಕೆ ಇದೆಯೋ, ಆಯಾ ಕ್ಷೇತ್ರಗಳಿಗೆ ಹೆಚ್ಚಿನ ಸಂಖ್ಯೆಯಲ್ಲಿ ಪರಿಣಿತರೂ, ಅರ್ಹರೂ ಆದವರನ್ನು ಒದಗಿಸುವುದು ಶಿಕ್ಷಣದ ಪ್ರಮುಖ ಗುರಿಗಳಲ್ಲಿ ಒಂದಾಗಿದೆ. ಭವಿಷ್ಯಕ್ಕಾಗಿ ಶೈಕ್ಷಣಿಕ ಯೋಜನೆಗಳನ್ನು ತಯಾರಿಸುವ ಮೊದಲು ಶಿಕ್ಷಣದ ಯಾವ ಯಾವ ಕ್ಷೇತ್ರದಲ್ಲಿ ಎಷ್ಟೆಷ್ಟು ಮಂದಿ ವಿದ್ಯಾರ್ಥಿಗಳಿದ್ದಾರೆ? ಆಯಾ ಕ್ಷೇತ್ರಗಳಲ್ಲಿ ರುವ ಉದ್ಯೋಗಾವಕಾಶಗಳಿಗೂ, ತರಬೇತಿ ಪಡೆಯುತ್ತಿರುವ ವಿದ್ಯಾರ್ಥಿಗಳ ಸಂಖ್ಯೆಗೂ ಹೊಂದಾಣಿಕೆ ಇದೆಯೇ? ಯಾವ ಯಾವ ಹೊಸ ಕ್ಷೇತ್ರಗಳಿಗೆ ಬೇಡಿಕೆ ಇದೆ ಅಥವಾ ಇಲ್ಲ? ಎಂಬೆಲ್ಲ ವಿಷಯಗಳಿಗೆ ಸಂಬಂಧಿಸಿದ ಮಾಹಿತಿಯ ಸಂಗ್ರಹಣೆ ಅಗತ್ಯ. ಶಿಕ್ಷಣದ ಹಲವಾರು ಕ್ಷೇತ್ರಗಳ ಅನಧಿಕೃತ ಬೆಳವಣಿಗೆಯಿಂದ ನಿರುದ್ಯೋಗದ ಸಮಸ್ಯೆ ತೀವ್ರವಾಗಿ ಅನೇಕ ತಜ್ಞರು ಹೊರದೇಶಗಳಿಗೆ ಹೋಗುತ್ತಿದ್ದಾರೆ. ತಾಂತ್ರಿಕ ಹಾಗೂ ವೈದ್ಯಕೀಯ ಕ್ಷೇತ್ರಗಳಲ್ಲಿ ಈ ಪ್ರತಿಭಾ ಪಲಾಯನದ ಸಮಸ್ಯೆ ಬಹಳ ಗಂಭೀರವಾಗಿದೆ. ರಾಷ್ಟ್ರೀಯ ಬೊಕ್ಕಸದಿಂದ ತೆಗೆದ ಹಣವು ಈ ತಜ್ಞರಿಗೆ ತರಬೇತಿ

ನೀಡಲು ವ್ಯಯವಾಗುತ್ತಿದೆ. ಆದರೆ ಅವರ ಪ್ರತಿಭೆಯ ಪ್ರಯೋಜನವನ್ನು ಅವರ ಪ್ರತಿಭೆಯ ಪೋಷಣೆಗೆ ಯಾವ ವೆಚ್ಚವನ್ನೂ ಭರಿಸದ ದೇಶವೊಂದು ಪಡೆಯುತ್ತದೆ. ಈ ಪಿಡುಗನ್ನು ಯಶಸ್ವಿಯಾಗಿ ತಡೆಗಟ್ಟಬೇಕಾದರೆ ಪ್ರತಿಯೊಂದು ಕ್ಷೇತ್ರದಲ್ಲೂ ಆಗುತ್ತಿರುವ ಪ್ರತಿಭಾ ಪಲಾಯನದ ಬಗ್ಗೆ ವಿವರವಾದ ಮಾಹಿತಿಯನ್ನು ಸಂಗ್ರಹಿಸಬೇಕು. ಇದರಿಂದ ಪರಿಣಿತರನ್ನು ಸ್ವದೇಶದಲ್ಲೇ ಉಳಿಸಿಕೊಳ್ಳುವಂಥ ಕಾರ್ಯಕ್ರಮಗಳನ್ನು ಯೋಜಿಸಲೂ, ಶಿಕ್ಷಣದ ಯೋಜನಾರಹಿತ ಬೆಳವಣಿಗೆಗೆ ತಡೆಯನ್ನು ಒಡ್ಡಲೂ ಸಾಧ್ಯವಾಗುತ್ತದೆ.

(ಉ) ಶಿಕ್ಷಣ ಸಂಸ್ಥೆಗಳ ಕಟ್ಟಡಗಳು : ಶೈಕ್ಷಣಿಕ ವಿಸ್ತರಣಾ ಕಾರ್ಯಕ್ರಮದಲ್ಲಿ ಶಾಲಾ ಕಾಲೇಜುಗಳ ಕಟ್ಟಡಗಳ ನಿರ್ಮಾಣ, ಸಜ್ಜುಗೊಳಿಸುವಿಕೆ ಮುಂತಾದ ಅಂಶಗಳಿಗೆ ವಿಶೇಷವಾದ ಗಮನವನ್ನು ನೀಡಬೇಕಾಗುತ್ತದೆ. ಅಂತೆಯೇ ಈಗಾಗಲೇ ಕೆಲಸವನ್ನು ನಿರ್ವಹಿಸುತ್ತಿರುವ ಶಿಕ್ಷಣ ಸಂಸ್ಥೆಗಳ ಕಟ್ಟಡಗಳಲ್ಲಿರುವ ಸೌಲಭ್ಯಗಳು, ಅವುಗಳಲ್ಲಿರುವ ಕೊಠಡಿಗಳ, ಪ್ರಯೋಗ ಶಾಲೆಗಳ ಮತ್ತು ಒಳಾಂಗಣ ಕ್ರೀಡಾಗಾರಗಳ ಸಂಖ್ಯೆ, ಆಟದ ಮೈದಾನಗಳು ಮತ್ತು ಮನರಂಜನಾ ಕಾರ್ಯಕ್ರಮಗಳನ್ನು ನಡೆಸಲು ಇರುವ ವ್ಯವಸ್ಥೆ, ಕಟ್ಟಡಗಳು ನಿರ್ಮಿತವಾದ ಸಮಯ, ಅವುಗಳ ಪ್ರಸಕ್ತ ಸ್ಥಿತಿ-ಗತಿ, ಅವುಗಳ ದುರಸ್ತಿಗಾಗಿ ಭರಿಸಬೇಕಾದ ಅಥವಾ ಭರಿಸಲಾಗಿರುವ ವೆಚ್ಚದ ಪಟ್ಟಿ, ಇವೇ ಮುಂತಾದ ವಿಷಯಗಳಿಗೆ ಸಂಬಂಧಿಸಿದಂತೆ ಮಾಹಿತಿಯನ್ನು ಸಂಗ್ರಹಿಸಬೇಕಾಗುತ್ತದೆ. ಆಯಾ ಶೈಕ್ಷಣಿಕ ಸಂಸ್ಥೆಗಳಲ್ಲಿ ಓದುತ್ತಿರುವ ವಿದ್ಯಾರ್ಥಿಗಳಿಗೂ ಅಲ್ಲಿ ಸೇವೆ ಸಲ್ಲಿಸುತ್ತಿರುವ ಅಧ್ಯಾಪಕರಿಗೂ ಯುಕ್ತವಾದ ಸ್ಥಳಾವಕಾಶಗಳಿವೆಯೇ? ಇಲ್ಲವಾದರೆ ಅವರಿಗಾಗಿ ಯಾವ ಯಾವ ಸೌಕರ್ಯಗಳನ್ನು ಒದಗಿಸಬೇಕು ಎಂಬ ಅಂದಾಜಿಲ್ಲದೆಯೇ ಶೈಕ್ಷಣಿಕ ಯೋಜನಾಕಾರ್ಯಕ್ರಮವನ್ನು ರೂಪಿಸುವುದು ಸಮಂಜಸವಲ್ಲ.

ಭಾರತದಲ್ಲಿ ಅನೇಕ ಶಾಲಾ ಕಾಲೇಜುಗಳಿಗೆ ಸರಿಯಾದ ಕಟ್ಟಡಗಳಿಲ್ಲದೆ ಅವು ತಮ್ಮ ಕೆಲಸವನ್ನು ಸಮರ್ಥವಾಗಿ ನಿರ್ವಹಿಸಲಾಗುತ್ತಿಲ್ಲ. ಆದ್ದರಿಂದ ಹೊಸ ಹೊಸ ಶಿಕ್ಷಣ ಸಂಸ್ಥೆಗಳ ಸ್ಥಾಪನೆಗೆ ಅನುಮತಿಯನ್ನು ನೀಡುವ ಮೊದಲು ಸರಿಯಾದ ಕಟ್ಟಡಗಳಿಲ್ಲದೆ ತೊಂದರೆಗೀಡಾಗಿರುವ ಶಿಕ್ಷಣ ಸಂಸ್ಥೆಗಳ ಸಮಸ್ಯೆಯನ್ನು ಬಗೆಹರಿಸಬೇಕು. ಈ ಕಾರ್ಯಕ್ರಮವನ್ನು ಅನುಷ್ಠಾನಕ್ಕೆ ತರಲು ಕಟ್ಟಡಗಳ ಬಗ್ಗೆ ವಿವರವಾದ ಮಾಹಿತಿಯ ಅಗತ್ಯವಿದೆ.

(ಊ) ಶಿಕ್ಷಣದ ಮೇಲಿನ ವೆಚ್ಚ-ಆದಾಯಗಳಿಗೆ ಸಂಬಂಧಿಸಿದ ಅಂಕಿ ಅಂಶಗಳು : ಶಿಕ್ಷಣ ಕ್ಷೇತ್ರಕ್ಕೆ ಒಂದು ದೇಶದಲ್ಲಿ ಈಗಾಗಲೇ ಎಷ್ಟು ಹಣವನ್ನು ವ್ಯಯ ಮಾಡಲಾಗುತ್ತಿದೆ ಮತ್ತು ಭವಿಷ್ಯದಲ್ಲಿ ಎಷ್ಟು ಹಣವನ್ನು ಮಂಜೂರುಮಾಡಬೇಕು ಎಂಬುದರ ಅಂದಾಜು ಇಲ್ಲದೆಯೇ ಶೈಕ್ಷಣಿಕ ಯೋಜನೆಯನ್ನು ಕೈಗೊಳ್ಳುವುದು ಅರ್ಥಹೀನ, ಆದ್ದರಿಂದ ಶಿಕ್ಷಣದ ವಿವಿಧ ಅಂಶಗಳ ಮೇಲೆ ತಗಲುತ್ತಿರುವ ಆವೃತ್ತಿ

ವೆಚ್ಚ(recurring expenditure)ಮತ್ತು ಸ್ಥಿರವೆಚ್ಚಗಳ (Capital expenditure) ಬಗ್ಗೆ ವಿವರವಾದ ಅಂಕಿ ಅಂಶಗಳನ್ನು ಮೊದಲು ಸಂಗ್ರಹಿಸಬೇಕು. ಶಿಕ್ಷಣದ ಯಾವ ಯಾವ ಮಟ್ಟದಲ್ಲಿ ಎಷ್ಟೆಷ್ಟು ಹಣವನ್ನು ವ್ಯಯಮಾಡಲಾಗುತ್ತಿದೆ? ಇದರಲ್ಲಿ ಕೇಂದ್ರ ಮತ್ತು ರಾಜ್ಯ ಸರ್ಕಾರಗಳ ಪಾಲು ಎಷ್ಟೆಷ್ಟು? ಎಂಬುದನ್ನು ತಿಳಿದ ತರುವಾಯ ಶಿಕ್ಷಣಕ್ಕಾಗಿ ಮೀಸಲಾಗಿಟ್ಟಿರುವ ಹಣದಲ್ಲಿ ಶೇಕಡ ಎಷ್ಟೆಷ್ಟು ಭಾಗವನ್ನು ಆಡಳಿತ, ಶೋಧನೆ, ಕಟ್ಟಡಗಳ ನಿರ್ಮಾಣ ಹಾಗೂ ದುರಸ್ತಿ 'ವಿದ್ಯಾರ್ಥಿ ಕ್ಷೇಮ ಪಾಲನೆ, ಅಧ್ಯಾಪಕರ ವೇತನ, ಆಟ-ಪಾಠಗಳು, ರಂಗಮಂದಿರಗಳು, ಆಟದ ಮೈದಾನಗಳು, ವಿಜ್ಞಾನ ಪ್ರಯೋಗಾಲಯಗಳು ಇವೇ ಮುಂತಾದ ಶಿಕ್ಷಣ ಸಂಬಂಧಿ ಅಂಶಗಳ ಮೇಲೆ ವ್ಯಯಮಾಡಲಾಗುತ್ತಿದೆ ಎಂಬುದರ ಬಗ್ಗೆ ವಿವರಗಳನ್ನು ಸಂಗ್ರಹಿಸ ಬೇಕಾದ್ದು ಅವಶ್ಯಕ. ಇದಲ್ಲದೆ ಶಿಕ್ಷಣದ ವಿವಿಧ ಕ್ಷೇತ್ರಗಳಿಗಾಗಿ ಮೀಸಲಾಗಿಟ್ಟಿರುವ ಹಣದ ಬಗ್ಗೆಯೂ ಮಾಹಿತಿಯನ್ನು ಸಂಗ್ರಹಿಸುವುದರಿಂದ ಮುಂದಿನ ಯೋಜನೆಗಳಲ್ಲಿ ಯಾವ ಯಾವ ಕ್ಷೇತ್ರಗಳಿಗೆ ಹೆಚ್ಚು ಹೆಚ್ಚು ಹಣವನ್ನು ಮೀಸಲಾಗಿಡಬೇಕು ಎಂಬು ದರ ಬಗ್ಗೆ ಸುಳಿವು ದೊರೆಯುತ್ತದೆ.

ಕೇವಲ ಶೈಕ್ಷಣಿಕ ವೆಚ್ಚದ ಬಗ್ಗೆ ಅಂಕಿ ಅಂಶಗಳನ್ನು ಸಂಗ್ರಹಿಸುವುದರಿಂದ ಯೋಜನಾಕಾರನಿಗೆ ಶಿಕ್ಷಣಕ್ಕೆ ಸಂಬಂಧಿಸಿದ ಆರ್ಥಿಕ ವ್ಯವಸ್ಥೆಯ ಸಂಪೂರ್ಣ ಚಿತ್ರಣ ದೊರೆಯುವುದಿಲ್ಲ. ಆದ್ದರಿಂದ ಶೈಕ್ಷಣಿಕ ವೆಚ್ಚವನ್ನು ಭರಿಸಲು ಯಾವ ಯಾವ ಮೂಲಗಳಿಂದ ಆದಾಯ ಬರುತ್ತಿದೆ ಎಂಬುದನ್ನೂ ಯೋಜನಾಕಾರ ತಿಳಿಯ ಬೇಕು. ಕೇಂದ್ರ ಮತ್ತು ರಾಜ್ಯ ಸರ್ಕಾರಗಳು, ವಿಶ್ವವಿದ್ಯಾನಿಲಯ ಆಯೋಗ ಇತರ ಸಂಶೋಧನಾ ಸಂಸ್ಥೆಗಳು, ಖಾಸಗಿ ಸಂಸ್ಥೆಗಳು-ಪ್ರಸಕ್ತ ಶಿಕ್ಷಣ ವ್ಯವಸ್ಥೆಯಲ್ಲಿ ಎಷ್ಟೆಷ್ಟು ಹಣವನ್ನು ತೊಡಗಿಸಿವೆ ಎಂಬುದರ ಅರಿವು ಯೋಜನಾಕಾರನಿಗೆ ಇರಬೇಕು. ಶೈಕ್ಷಣಿಕ ವೆಚ್ಚಗಳನ್ನು ಭರಿಸಲು ಒಂದು ದೇಶದ ಸರ್ಕಾರ ಯಾವು ದಾದರೂ ಮೂಲಗಳಿಂದ ಸಾಲವನ್ನು ಪಡೆದಿದ್ದರೆ, ಆ ಮೂಲಗಳು ಮತ್ತು ಸಾಲದ ಸ್ವರೂಪದ ಬಗ್ಗೆ ವಿವರಗಳನ್ನು ಸಂಗ್ರಹಿಸುವುದಲ್ಲದೆ, ಪಡೆದಿರುವ ಸಾಲವನ್ನು ಹಿಂದಿರುಗಿಸಲು ಮಾಡಿಕೊಂಡಿರುವ ವ್ಯವಸ್ಥೆಯ ಬಗ್ಗೆಯೂ ಮಾಹಿತಿಯನ್ನು ಯೋಜನಾಕಾರ ಸಂಗ್ರಹಿಸಬೇಕಾಗುತ್ತದೆ. ಈ ಬಗೆಯ ಅಂಕಿ ಅಂಶಗಳು ಮುಂಬರಲಿರುವ ಯೋಜನೆಗಳಲ್ಲಿ ಶೈಕ್ಷಣಿಕ ವೆಚ್ಚ ಮತ್ತು ಆದಾಯಗಳಿಗೆ ಸಂಬಂಧಿಸಿದಂತೆ ವಹಿಸಬೇಕಾದ ಮುನ್ನೆಚ್ಚರಿಕೆಗಳನ್ನೂ ತೆಗೆದುಕೊಳ್ಳಬೇಕಾದ ಕ್ರಮಗಳನ್ನೂ ಸರಿಯಾಗಿ ಆಯೋಜಿಸಲು ಯೋಜನಾಕಾರನಿಗೆ ನೆರವಾಗುತ್ತವೆ.

೨. ಶಿಕ್ಷಣಕ್ಕೆ ಸಂಬಂಧಿಸಿದ ಇತರ ಅಂಕಿ ಅಂಶಗಳು

(ಕ) ಜನಸಂಖ್ಯಾ ಅಂಕಿ ಅಂಶಗಳು : ಶೈಕ್ಷಣಿಕ ಯೋಜನಾಕಾರನಿಗೆ ತನ್ನ ದೇಶದ ಒಟ್ಟು ಜನಸಂಖ್ಯೆಯ ಬಗ್ಗೆ ವಿವರವಾದ ಮಾಹಿತಿಯ ಅಗತ್ಯವಿದೆ. ಒಂದು

ದೇಶದ ಜನಸಂಖ್ಯೆಯ ಬೆಳವಣಿಗೆ, ವಯಸ್ಸು, ಲಿಂಗಭೇದ ಗ್ರಾಮ ಮತ್ತು ನಗರ ಪ್ರದೇಶಗಳಿಗನುಣವಾಗಿ ಆ ಜನಸಂಖ್ಯೆಯ ವಿಭಜನೆ ಮುಂತಾದ ಪ್ರಮುಖ ಅಂಶಗಳನ್ನು ಗಣನೆಗೆ ತೆಗೆದುಕೊಳ್ಳದೆ ಶೈಕ್ಷಣಿಕ ಯೋಜನೆಯನ್ನು ಕೈಗೊಳ್ಳಲಾಗುವುದಿಲ್ಲ. ಒಂದು ದೇಶದ ಶಿಕ್ಷಣ ನೀತಿ ಮತ್ತು ಶೈಕ್ಷಣಿಕ ವಿಸ್ತರಣಾ ಕಾರ್ಯಕ್ರಮಗಳು ರೂಪಗೊಳ್ಳುವುದು ಆ ದೇಶದ ಜನಸಂಖ್ಯೆಯ ಬೆಳವಣಿಗೆಯನ್ನು ಗಮನದಲ್ಲಿಟ್ಟುಕೊಂಡು ತಾನೇ? ದೇಶದ ಜನಸಂಖ್ಯೆಯಲ್ಲಿ ಅಕ್ಷರಸ್ಥರೆಷ್ಟು ಮತ್ತು ಅನಕ್ಷರಸ್ಥರೆಷ್ಟು? ಅಕ್ಷರಸ್ಥರಲ್ಲಿ ಎಷ್ಟೆಷ್ಟು ಮಂದಿ ಯಾವ ಯಾವ ಶಿಕ್ಷಣ ಮಟ್ಟವನ್ನು ತಲಪಿದ್ದಾರೆ ಎಂದು ತಿಳಿಯುವುದೂ ಶೈಕ್ಷಣಿಕ ಯೋಜನಾಕಾರನಿಗೆ ಅತ್ಯವಶ್ಯಕ.

ಜನಸಂಖ್ಯಾ ತಜ್ಞರು ತಮ್ಮ ದೇಶದಲ್ಲಿ ಮುಂದಿನ ಹಲವು ದಶಕಗಳಲ್ಲಿ ಜನಸಂಖ್ಯೆಯು ಬೆಳೆಯಬಹುದಾದ ಧಾಟಿಯ ಬಗ್ಗೆ ಮಾಡಿರುವ ಪ್ರಕ್ಷೇಪಣೆಗಳನ್ನು ಶೈಕ್ಷಣಿಕ ಯೋಜನಾಕಾರ ಅಧ್ಯಯನ ಮಾಡಬೇಕು. ಒಂದು ದೇಶದಲ್ಲಿ ಶಿಕ್ಷಣದ ವಿಸ್ತರಣಾ ಕಾರ್ಯಕ್ರಮಗಳು ಆ ದೇಶದಲ್ಲಿ ಜನಸಂಖ್ಯೆಯು ಬೆಳೆಯುತ್ತಿರುವ ಅಥವಾ ಇಳಿಮುಖವಾಗುತ್ತಿರುವ ಧಾಟಿಯನ್ನು ಗಮನದಲ್ಲಿಟ್ಟುಕೊಂಡೇ ರೂಪಿತವಾಗಬೇಕು. ಆದ್ದರಿಂದಲೇ ಶೈಕ್ಷಣಿಕ ಯೋಜನಾಕಾರನಿಗೆ ಜನಸಂಖ್ಯಾ ನಿಯಂತ್ರಣ ಅಥವಾ ಬೆಳವಣಿಗೆಗಾಗಿ ಕೈಗೊಂಡಿರುವ ಕಾರ್ಯಕ್ರಮಗಳ ಬಗ್ಗೆಯೂ ಸ್ಪಷ್ಟ ತಿಳಿವಳಿಕೆಯ ಅಗತ್ಯವಿದೆ.

(ಖ) ಒಂದು ದೇಶದಲ್ಲಿ ವಿವಿಧ ಕ್ಷೇತ್ರಗಳಲ್ಲಿ ಕಾರ್ಯನಿರತವಾಗಿರುವ ಜನರ ಬಗ್ಗೆ ಅಂಕಿ ಅಂಶಗಳು : ಶೈಕ್ಷಣಿಕ ಯೋಜನೆಯ ಪ್ರಮುಖ ಗುರಿಗಳಲ್ಲಿ ದೇಶಕ್ಕೆ ಅವಶ್ಯಕವಾದ ಮಾನವ ಬಲವನ್ನು (man power) ಒದಗಿಸುವುದೂ ಒಂದಾಗಿದೆ. ಆದ್ದರಿಂದ ಒಂದು ದೇಶಕ್ಕಾಗಿ ಶೈಕ್ಷಣಿಕ ನೀತಿಯನ್ನು ರೂಪಿಸುವಾಗ ಆ ದೇಶದ ಪ್ರಸಕ್ತ ಉದ್ಯೋಗ ಪರಿಸ್ಥಿತಿಯನ್ನು ಅರಿಯಬೇಕಾಗಿದೆ. ಹೊಸ ಶಿಕ್ಷಣ ನೀತಿಯನ್ನು ಯೋಜಿಸುವ ಮೊದಲೇ ವಿವಿಧ ಕ್ಷೇತ್ರಗಳಲ್ಲಿಯ ಉದ್ಯೋಗಿಗಳ ಸಂಖ್ಯೆ, ಅವರ ಉದ್ಯೋಗಾರ್ಹತೆ, ಸೇವಾವಧಿ, ಸಂಬಳ ಭತ್ಯ, ಸಮಸ್ಯೆಗಳು, ಬೇಡಿಕೆಗಳು ಮತ್ತು ಅವರ ಕಲ್ಯಾಣಕ್ಕಾಗಿ ಕೈಗೊಳ್ಳಲಾಗಿರುವ ಕಾರ್ಯಕ್ರಮಗಳ ಬಗ್ಗೆ ವಿವರಗಳನ್ನು ಸಂಗ್ರಹಿಸಬೇಕು. ಇದಲ್ಲದೆ ಪ್ರತಿಯೊಂದು ಕ್ಷೇತ್ರದಲ್ಲೂ ಇರುವ ಉದ್ಯೋಗಾಕಾಂಕ್ಷಿಗಳು, ತಮ್ಮ ಅರ್ಹತೆಗಿಂತ ಕಡಿಮೆ ಅರ್ಹತೆಗೆ ತಕ್ಕ ಉದ್ಯೋಗಗಳಲ್ಲಿ ನೇಮಕವಾಗಿರುವವರು ಮತ್ತು ತಮ್ಮ ವಿದ್ಯಾರ್ಹತೆಗೆ ಯಾವ ರೀತಿಯ ಸಂಬಂಧವೂ ಇಲ್ಲದ ಉದ್ಯೋಗಗಳಲ್ಲಿ ತೊಡಗಿರುವವರ ಬಗ್ಗೆ ಮಾಹಿತಿಯನ್ನು ಶೈಕ್ಷಣಿಕ ಯೋಜನಾಕಾರ ಸಂಗ್ರಹಿಸಬೇಕು.

ಉದ್ಯೋಗಾವಕಾಶಗಳನ್ನು ಗಣನೆಗೆ ತೆಗೆದುಕೊಳ್ಳದೆ ಶೈಕ್ಷಣಿಕ ಅವಕಾಶಗಳನ್ನು ದ್ವಿಗುಣಗೊಳಿಸುವುದು ಎಷ್ಟು ಹಾನಿಕಾರಕ ಎಂಬುದು ಭಾರತದ ಉದಾಹರಣೆಯಿಂದಲೇ ತಿಳಿದು ಬಂದಿದೆ. ಆದ್ದರಿಂದ ವಿವಿಧ ತಜ್ಞರು ಒಂದು

ದೇಶದ ಮಾನವ ಬಲದ ಆವಶ್ಯಕತೆಗಳ ಬಗ್ಗೆ ಮಾಡಿರುವಂಥ ಪ್ರಕ್ಷೇಪಣೆಗಳನ್ನು ಶೈಕ್ಷಣಿಕ ಯೋಜನಾಕಾರ ಕೂಲಂಕಷವಾಗಿ ಪರಿಶೀಲಿಸಬೇಕು. ಹೀಗೆ ಮಾಡುವುದರಿಂದ ದೇಶದ ಅಭಿವೃದ್ಧಿಗೆ ಪೂರಕವಾಗುವ ಮಾನವಬಲವನ್ನು ಸೃಷ್ಟಿಸಲೂ ಈಗಾಗಲೇ ಅರ್ಹತೆಯನ್ನು ಪಡೆದು ಯುಕ್ತವಾದ ಉದ್ಯೋಗವನ್ನು ಪಡೆಯದೇ ಇರುವವರಿಗೆ ಉದ್ಯೋಗಾವಕಾಶಗಳನ್ನು ಕಲ್ಪಿಸಿಕೊಡಲೂ ಸಾಧ್ಯವಾಗುತ್ತದೆ.

(ಗ) ಆರ್ಥಿಕ ಮತ್ತು ಹಣಕಾಸು ವ್ಯವಸ್ಥೆಗೆ ಸಂಬಂಧಿಸಿದ ಅಂಕಿ ಅಂಶಗಳು: ಒಂದು ದೇಶದ ಆರ್ಥಿಕ ಮತ್ತು ಹಣಕಾಸು ವ್ಯವಸ್ಥೆಗಳ ಬಗ್ಗೆ ಸ್ಪಷ್ಟವಾದ ಮಾಹಿತಿಯನ್ನು ಸಂಗ್ರಹಿಸದೆ ಯಾವುದೇ ತೆರನಾದ ಶೈಕ್ಷಣಿಕ ಯೋಜನೆಯನ್ನು ಕೈಗೊಳ್ಳಲಾಗುವುದಿಲ್ಲ. ಒಂದು ದೇಶದ ಪ್ರಸಕ್ತ ಆರ್ಥಿಕ ಪರಿಸ್ಥಿತಿಯನ್ನು ಗಮನದಲ್ಲಿಟ್ಟುಕೊಂಡು ಆ ದೇಶಕ್ಕಾಗಿ ಶೈಕ್ಷಣಿಕ ಅಭಿವೃದ್ಧಿ ಮತ್ತು ವಿಸ್ತರಣಾ ಕಾರ್ಯಕ್ರಮಗಳನ್ನು ರೂಪಿಸಬೇಕು. ಆದ್ದರಿಂದ ಶೈಕ್ಷಣಿಕ ಯೋಜನಾಕಾರ ಆ ದೇಶದ ಒಟ್ಟು ರಾಷ್ಟ್ರೀಯ ಉತ್ಪನ್ನ (GNP), ತಲಾ ಆದಾಯ ಮತ್ತು ರಾಷ್ಟ್ರೀಯ ಆದಾಯ ಹಾಗೂ ಆ ದೇಶದ ಆರ್ಥಿಕ ವ್ಯವಸ್ಥೆಯನ್ನು ಸುಗಮವಾಗಿ ನಡೆಸಿಕೊಂಡು ಹೋಗಲು ಯಾವ ಯಾವ ಮೂಲಗಳಿಂದ ಹಣವನ್ನು ತರಲಾಗುತ್ತಿದೆ ಎಂಬೆಲ್ಲ ವಿಷಯಗಳ ಬಗ್ಗೆ ಮಾಹಿತಿಯನ್ನು ಮೊದಲು ಸಂಗ್ರಹಿಸಬೇಕು. ಇಷ್ಟೇ ಅಲ್ಲದೆ ಆ ದೇಶದ ಸರ್ಕಾರವು ಸಾರ್ವಜನಿಕ ವೆಚ್ಚವನ್ನು ಹೇಗೆ ಭರಿಸುತ್ತಿದೆ? ಸಾರ್ವಜನಿಕ ಜೀವನಕ್ಕೆ ಸಂಬಂಧಿಸಿದ ಯಾವ ಯಾವ ಅಂಶಗಳ ಮೇಲೆ ಶೇಕಡ ಎಷ್ಟೆಷ್ಟು ಹಣವನ್ನು ವ್ಯಯಮಾಡಲಾಗುತ್ತಿದೆ ಎಂಬ ಎರಡು ಪ್ರಮುಖ ಅಂಶಗಳಿಗೆ ಸಂಬಂಧಿಸಿದ ವಿವರಗಳನ್ನೆಲ್ಲ ಸಂಗ್ರಹಿಸಬೇಕಾದ್ದು ಅಗತ್ಯ. ದೇಶದ ಪ್ರಸಕ್ತ ಆರ್ಥಿಕ ಪರಿಸ್ಥಿತಿ, ಹಾಗೂ ಹಣಕಾಸಿನ ಸಮಸ್ಯೆಗಳನ್ನು ಗಮನದಲ್ಲಿಟ್ಟುಕೊಂಡೇ ಶೈಕ್ಷಣಿಕ ಯೋಜನೆಯನ್ನು ರೂಪಿಸಬೇಕು.

ವಿವಿಧ ಅಂಕಿ ಅಂಶಗಳ ಅಧ್ಯಯನ ಮತ್ತು ವಿಶ್ಲೇಷಣೆಗಳು ಶೈಕ್ಷಣಿಕ ಯೋಜನಾಕಾರನಿಗೆ ಎಷ್ಟು ಉಪಯುಕ್ತವಾಗಿವೆ ಎಂಬುದು ಈ ಮೇಲಿನ ಚರ್ಚೆಯಿಂದ ವ್ಯಕ್ತವಾಗುತ್ತದೆ. ಪ್ರಸಕ್ತ ಶಿಕ್ಷಣ ವ್ಯವಸ್ಥೆಯಲ್ಲಿಯ ಲೋಪ ದೋಷಗಳಿಗೆ ಕನ್ನಡಿ ಹಿಡಿಯುವುದಷ್ಟೇ ಅಲ್ಲದೆ ಮುಂಬರಲಿರುವ ಶೈಕ್ಷಣಿಕ ನೀತಿಯಲ್ಲೂ ಶಿಕ್ಷಣದ ಅಭಿವೃದ್ಧಿಗಾಗಿ ರೂಪುಗೊಳ್ಳಲಿರುವ ಯೋಜನೆಯಲ್ಲೂ ವಹಿಸಬೇಕಾದ ಮುನ್ನೆಚ್ಚರಿಕೆ ಕ್ರಮಗಳ ಬಗ್ಗೆಯೂ ಶಿಕ್ಷಣಕ್ಕೆ ಸಂಬಂಧಿಸಿದ ವಿವಿಧ ಅಂಕಿ ಅಂಶಗಳ ಪರಿಶೀಲನೆ ನೆರವಾಗುತ್ತದೆ.

ಗ್ರಂಥಋಣ

1. Naik, J. P : Educational Planning in India, 1965
2. Premi, M.K. : Educational Planning in India, 1972
3. UNESCO : Economic and Social Aspects of Educational Planning, 1970.

ನಗುವನಹಳ್ಳಿ ಪಿ. ರತ್ನ

ಕಮ್ಮಾರ ಜನಾಂಗ: ಒಂದು ಅಧ್ಯಯನ

ಈ ಜನಾಂಗದವರು ಕರ್ನಾಟಕದಾದ್ಯಂತ ನೆಲಸಿದ್ದಾರೆ. ಇವರು ಆಯಾ ಪ್ರಾಂತಕ್ಕೆ ತಕ್ಕಂತೆ ಭಾಷೆ ಆಡುತ್ತಾರೆ. ಕಮ್ಮಾರರನ್ನು ಪಂಚಬ್ರಹ್ಮ ಜಾತಿಯವರು ಎಂದು ಕರೆಯುತ್ತಾರೆ. ಇವರಲ್ಲಿ ಕುಲಾಚಾರ ಮತ್ತು ಮತಾಚಾರ ಎಂದು ಎರಡು ವಿಧವುಂಟು. ಕುಲಾಚಾರದವರು ಕುಲುಮೆ ಕುಟ್ಟುವುದು, ಕಬ್ಬಿಣ ಮತ್ತು ಮರಗೆಲಸ ಮಾಡುತ್ತಾರೆ. ಮತಾಚಾರದವರು ಚಿನ್ನಬೆಳ್ಳಿ ಕೆಲಸಮಾಡುತ್ತಾರೆ. ಇವರ ಕೆಲಸ ಬೇರೆ ಬೇರೆ ಆದರೂ ಆಚಾರವಿಚಾರ ಒಂದೇ ಆಗಿರುತ್ತದೆ.

ಈ ಜನಾಂಗದವರು ಹೆಚ್ಚು ಮುಂದುವರಿದ ಸಂಸ್ಕೃತಿಗೆ ಸೇರಿದವರಾಗಿಲ್ಲ. ಇವರಲ್ಲಿ ಹಿಂದಿನ ಜನಪದ ನಂಬಿಕೆ ಮತ್ತು ಸಂಪ್ರದಾಯಗಳ ಬಳಕೆ ಹೆಚ್ಚು. ಇವರು ಪ್ರಸವದ ಸಮಯದಲ್ಲಿ ತಮ್ಮದೇ ಆದ ಪದ್ಧತಿಯನ್ನು ಅನುಸರಿಸುತ್ತಾರೆ.

ಹೆಣ್ಣುಮಕ್ಕಳು ಮೈನೆರೆದಾಗ ಕೆಲವು ಸಂಪ್ರದಾಯವನ್ನು ಅನುಸರಿಸುತ್ತಾರೆ. ಹುಡುಗಿ ಮೈನೆರೆದು ಮೂರು ಅಥವಾ ಐದು ದಿವಸಕ್ಕೆ "ಗುಡ್ಲು ಹಾಕುವ" ಶಾಸ್ತ್ರ ಮಾಡುತ್ತಾರೆ. ತೆಂಗಿನಗರಿ ಗುಡ್ಲಿನಂತೆ ಮಾಡಿ ಅದರ ಮೇಲೆ ಹತ್ತಿಎಲೆ, ಬಸರಿಎಲೆ, ಹಲಸಿನಎಲೆ, ಲಕ್ಕಿಸೊಪ್ಪು, ಬೇವಿನಸೊಪ್ಪು ಈ ಐದು ತರದ ಸೊಪ್ಪನ್ನು ಗುಡ್ಲಿನಮೇಲೆ ಹಾಕಿ ಹುಡುಗಿಯನ್ನು ಹಸೆಮಣೆ ಮೇಲೆ ಕೂರಿಸಿ ಐದು ತಟ್ಟೆ ತುಂಬುತ್ತಾರೆ. ಆ ತಟ್ಟೆಗಳಲ್ಲಿ ಚಿಗಳಿ (ಎಳ್ಳಿನಿಂದ ಮಾಡಿದ ತಿಂಡಿ), ತೊಂಬಿಟ್ಟು, ತೆಂಗಿನಕಾಯಿ, ಕೊಬ್ಬರಿ, ಬೆಲ್ಲ; ಬಾಳೆಹಣ್ಣು ವಿಳ್ಯೇದೆಲೆ ಬಟ್ಟಲಡಿಕೆ ಇಡುತ್ತಾರೆ. ಮುತ್ತೈದೆಯರು ಮತ್ತು ಮಕ್ಕಳನ್ನೆಲ್ಲಾ ಕರೆದು ಅವರಿಗೆ ಅರಿಶಿನ ಕುಂಕುಮ ಬಾಳೆಹಣ್ಣು ಕೊಟ್ಟು ಜೊತೆಗೆ "ಎಳ್ಳುಂಡೆ" (ಎಳ್ಳು ಮತ್ತು ಬೆಲ್ಲದಿಂದ ಮಾಡಿದ ತಿಂಡಿ) ಯನ್ನು ಕೊಡುತ್ತಾರೆ. ಹುಡುಗಿಗೆ ಐದು ಜನ ಮುತ್ತೈದೆಯರು ಸೋಬಲು ಹುಯ್ಯುತ್ತಾರೆ. ಗುಡ್ಲು ಹಾಕಿದ ದಿವಸ ಜಾಗರಣೆ ಇರುತ್ತಾರೆ. ಅಂದು ಮೈನೆರೆದ ಹುಡುಗಿ ಮಲಗಬಾರದು ಎಂದು ಒಂದು ನಿಷೇಧವಿದೆ. ಮೂರು ತಿಂಗಳು ಅಥವಾ ಐದು ತಿಂಗಳತನಕ ಹುಡುಗಿಗೆ ಆರೈಕೆ ಮಾಡುತ್ತಾರೆ.

ಹುಡುಗಿ ಅಥವಾ ಹುಡುಗನಿಗೆ ಮದುವೆ ವಯಸ್ಸು ಬಂದಾಗ ಮದುವೆ ಏರ್ಪಾಡು ಮಾಡುತ್ತಾರೆ. ಹುಡುಗಿಯನ್ನು ಹುಡುಕಲು ಗಂಡಿನವರೇ ಹೆಣ್ಣಿನ ಮನೆಗೆ ಹೋಗುತ್ತಾರೆ. ತಮಗೆ ಒಪ್ಪಿಗೆ ಆದರೆ ಮದುವೆ ನಿಶ್ಚಯ ಮಾಡುತ್ತಾರೆ. ಒಪ್ಪುಮಾತು, ವೀಳ್ಯಶಾಸ್ತ್ರವನ್ನು ಹೆಣ್ಣಿನ ಮನೆಯಲ್ಲಿ ಮಾಡುತ್ತಾರೆ. ಗೊತ್ತಾದ ದಿವಸ ಮದುವೆ ನಿಶ್ಚಯ ಮಾಡಿ ಮದುವೆ ಮಾಡುತ್ತಾರೆ.

ಒಪ್ಪುಮಾತು ಎಂದರೆ ಗಂಡಿನ ಕಡೆಯವರಿಗೆ ಹುಡುಗಿ ಮನಸೊಪ್ಪಿತು ಎಂಬ ಅರ್ಥವನ್ನು ಸೂಚಿಸಿರುವ ಮಾತು. ಅಂದು ಗಂಡಿನ ಕಡೆಯವರು ಐದು ಜನ ಮುತ್ತೈದೆಯರು ಹಾಗೂ ಐದು ಜನ ಗಂಡಸರು ಹೆಣ್ಣಿನ ಮನೆಗೆ ಬರುತ್ತಾರೆ. ಜೊತೆಗೆ ಅರಿಶಿನ, ಕುಂಕುಮ, ಹೂ, ವೀಳ್ಯದೆಲೆ, ಅಡಿಕೆ ಹಣ್ಣುಗಳನ್ನು ತೆಗೆದು ಕೊಂಡು ಹೋಗಿರುತ್ತಾರೆ. ಮದುವೆ ಆಗುವ ಹುಡುಗಿಯನ್ನು ಕರೆದು ಕುಳ್ಳಿರಿಸಿ ಕೊಂಡು ಅವಳಿಗೆ ಹೂ ಮುಡಿಸುತ್ತಾರೆ. ಹೂ ಮುಡಿಸುವಾಗಲೇ ತಲೆಯಲ್ಲಿ ಸುಳಿಗಳಿವೆಯೇ ಎಂದು ಪರೀಕ್ಷಿಸಿ ಹೂ ಮುಡಿಸುತ್ತಾರೆ. ಸುಳಿ ನೋಡುವುದಕ್ಕೆ ಎಲ್ಲರಿಗೂ ಬರುವುದಿಲ್ಲ. ಕೆಲವರಿಗೆ ಅನುಭವ ಆಗಿರುವವರಿಗೆ ಮಾತ್ರ ಸುಳಿ ಇರುವುದು ಇಲ್ಲದಿರುವುದು ಗೊತ್ತಾಗುತ್ತದೆ. ಹೂ ಮುಡಿಸಿ, ಆ ಹುಡುಗಿಗೆ ಅರಿಶಿನ ಕುಂಕುಮ ಹಣೆಗೆ ಹಚ್ಚಿ, ಎಲೆ ಅಡಿಕೆಯನ್ನು ಕೊಡುತ್ತಾರೆ. ಅಂದು ಹೆಣ್ಣಿನ ಮನೆಯಲ್ಲಿಯೇ ಊಟಮಾಡಿಕೊಂಡು ಬರುತ್ತಾರೆ. ಅಲ್ಲಿಗೆ ಹೆಣ್ಣು ಆಯ್ಕೆಯ ಮೊದಲನೆಯ ಹೆಜ್ಜೆ ಮುಗಿದಂತೆ

ವೀಳ್ಯಶಾಸ್ತ್ರನೆಂದು ಹೆಣ್ಣಿನ ಮನೆಯಲ್ಲಿ ಮಾಡುತ್ತಾರೆ. ಹೆಣ್ಣಿನ ಕಡೆ ನೆಂಟರಿಷ್ಟರೂ, ಹಾಗೂ ಗಂಡಿನಕಡೆ ನೆಂಟರಿಷ್ಟರೂ ಎಲ್ಲರೂ ಸೇರುತ್ತಾರೆ. ಹೆಣ್ಣನ್ನು ಹಸೆಮಣೆ ಮೇಲೆ ಕೂರಿಸಿ ಗಂಡಿನ ಕಡೆಯವರು ತಂದಿರುವಂತಹ ತಟ್ಟೆ ಸಾಮಾನುಗಳನ್ನು ತುಂಬಿಟ್ಟು, ಮುತ್ತೈದೆಯರು ಶಾಸ್ತ್ರ ಮಾಡುತ್ತಾರೆ. ಎರಡು ಕಡೆಯವರೂ ಊಟ ಮಾಡುತ್ತಾರೆ. ಅಂದು ಮದುವೆ ಯಾವ ದಿವಸ ಇಟ್ಟು ಕೊಳ್ಳಬೇಕೆಂದು ನಿಷ್ಕರ್ಷೆಮಾಡಿಕೊಂಡು ಲಗ್ನಕಟ್ಟಿಸುತ್ತಾರೆ. ಅಂದರೆ ಲಗ್ನ ಪತ್ರಿಕೆ ಬರೆಸುತ್ತಾರೆ. ಲಗ್ನಪತ್ರಿಕೆ ಮಾಡಿಸಿದ ಬಳಿಕ ಮದುವೆ ಆಗುವವರೆವಿಗೂ ಗಂಡಿನ ಮನೆಯವರು ಹಾಗೂ ಹೆಣ್ಣಿನ ಮನೆಯವರು ಮಾಂಸವನ್ನು ತಿನ್ನುವ ಹಾಗಿಲ್ಲ.

ಮದುವೆ ದಿವಸ ಗಂಡು, ಹೆಣ್ಣುಗಳಿಗೆ ವಿಶೇಷ ಅಲಂಕಾರ ಮಾಡುತ್ತಾರೆ. ಹೆಣ್ಣಿಗೆ ಅಲಂಕಾರ ಮಾಡಿ ವಿವಿಧ (ಒಡವೆ) ಆಭರಣಗಳನ್ನು ಹಾಕುತ್ತಾರೆ. ದೊಡ್ಡಗುಂಡು, ಸಣ್ಣಗುಂಡು, ಕಾಸಿನಸರ, ಚಲುವೆಕುಪ್ಪಿ ಕಾಲುಂಗರ, ಕಾಲಿನ ಚೈನು, ನಡಿಗೆ ಗೆಜ್ಜೆಡಾಬು, ಕಿವಿಗೆ ನೇಟಕೊಳವೆ, ಗೊಗ್ಗೆತಟ್ಟು, ವಾಲೆ ಜುಮುಕಿ ಕೆನ್ನೆಸರ ಮಾಟಿ, ಅಟ್ಟಿಗೆ ಬಂದಿತಾಲಿ, ದೇವರತಾಲಿ ಮುಂತಾದ ಆಭರಣಗಳನ್ನೆಲ್ಲಾ ಹಾಕುತ್ತಾರೆ.

ಗಂಡಿಗೆ ಬಲಗೈಗೆ ಕಪ್ಪ, ಎಡಗೈಗೆ ಚಿನ್ನದಚೈನು ಕತ್ತಿನಸರ, ಉಂಗುರ ಹಾಕುತ್ತಾರೆ. ಈ ಜನಾಂಗದವರಲ್ಲಿ ಒಂದು ವಿಶೇಷವೇನೆಂದರೆ ಧಾರೆಯಾಗುವ ಸಮಯದಲ್ಲಿ ಗಂಡಿಗೆ ವಾಲೆ ಜುಮುಕಿಯನ್ನು ಕಡ್ಡಾಯವಾಗಿ ಹಾಕಲೇಬೇಕು. ಅಲ್ಲದೆ ಕಚ್ಚೆಯೊಂದನ್ನು ಬಿಟ್ಟು ಬೇರೆ ಬಟ್ಟೆಯನ್ನು ಹಾಕಬಾರದು. (ಬೇಕಿದ್ದರೆ ಒಂದು ಶಲ್ಯವನ್ನು ಹೊದ್ದಿಕೊಳ್ಳಬಹುದು) ಧಾರೆಯಾದ ಅನಂತರ ಅಂಗಿಯನ್ನು ಹಾಕಿಕೊಳ್ಳುತ್ತಾರೆ. ಕಮ್ಮಾರ ಜಾತಿಯ ಮದುವೆಯಲ್ಲಿ ಒಂದು ವಿಶೇಷ ಏನೆಂದರೆ ಗಂಡಿನ ಕಡೆಯವರು ಎರಡು ತಾಲಿಗಳನ್ನು ಮಾಡಿಸಿರಬೇಕು. ಧಾರೆಮುಹೂರ್ತ ಸಮಯದಲ್ಲಿ ಒಂದು ತಾಲಿಯನ್ನು ಗಂಡು ಕಟ್ಟುತ್ತಾನೆ. ಅನಂತರ ಅವರ ಜಾತಿಯಲ್ಲಿ " ನಾಗೋಲೆ ಶಾಸ್ತ್ರ " ಎಂದು ಮಾಡುತ್ತಾರೆ. ಈ ಶಾಸ್ತ್ರಕ್ಕೂ ಒಂದು ತಾಲಿ ಇರಬೇಕು. ಗಂಡು ಹೆಣ್ಣನ್ನು ಒಂದು ಕಡೆ ಒಟ್ಟಾಗಿ ಕುಳ್ಳಿಸಿರುತ್ತಾರೆ. ಅವರ ಮುಂದೆ ಒಂದು ಗಡಿಗೆಯನ್ನು ಇಟ್ಟು ಅದರಲ್ಲಿ ಅಕ್ಕಿಯನ್ನು ತುಂಬಿ ಅದರ ಸುತ್ತ ಸಣ್ಣ ಸಣ್ಣ 15 ಗಡಿಗೆಯಲ್ಲಿ ನವಧಾನ್ಯದ ಕಾಳುಗಳನ್ನು ತುಂಬಿಟ್ಟು ಪುರೋಹಿತರಿಂದ ಪೂಜೆ ಮಾಡಿಸಿ, ಮಂತ್ರಹೇಳಿಸುತ್ತಾರೆ. ಆ ಸಮಯದಲ್ಲಿ ಗಂಡು ಹೆಣ್ಣಿಗೆ ಮತ್ತೆ ನಾಗೋಲೆತಾಳಿಯನ್ನು ಕಟ್ಟುತ್ತಾನೆ. ಇದು ಕಮ್ಮಾರ ಜಾತಿಯಲ್ಲಿ ವಿಶೇಷವಾಗಿ ನಡೆಯುವಂಥದ್ದು. ಮದುವೆ ಆದ ತರುವಾಯ ಗಂಡುಹೆಣ್ಣಿನ ಕಡೆಯುವರಿಗೆಲ್ಲಾ ವೀಳ್ಯಕೊಡಬೇಕು. ವೀಳ್ಯ ಎಂದರೆ ಒಳ್ಳೆ ಎಲೆ ಅಡಿಕೆ, ಒಂದು ಖರ್ಜೂರ ಹತ್ತುಪೈಸೆ ಅಥವಾ ಚಿಕ್ಕವರಿಗೆ ಐದುಪೈಸೆ ಕೊಡಬೇಕು. ಗಂಡಸರಿಗೆ ಅದರ ಜೊತೆಗೆ ಜನಿವಾರವನ್ನೂ ಇಟ್ಟುಕೊಡಬೇಕು. ಈ ವೀಳ್ಯ ತೆಗೆದುಕೊಳ್ಳುವುದು ಅವರಿಗೆ ಒಂದು ಪದ್ಧತಿಯಾಗಿಬಿಟ್ಟದೆ. ಕೇಳಿದವರಿಗೆ ಇಲ್ಲಾ ಎನ್ನುವಹಾಗಿಲ್ಲ. ಆದ್ದರಿಂದ ಒಂದು ತಿಂಗಳ ಮಗುವಿನ ಹೆಸರ್ಹೇಳಿದರೂ ಸಹ " ವೀಳ್ಯ "ವನ್ನು ಕೊಡಲೇಬೇಕು. ಕೆಲವರು ವಿಳ್ಯ ತೆಗೆದುಕೊಂಡಬಳಿಕ ಊಟದವರೆಗೂ ಕಾಯುವುದೇ ಇಲ್ಲ. ತಮ್ಮ ತಮ್ಮ ಮನೆಗೆ ಹೊರಟು ಹೋಗುತ್ತಾರೆ.

ಮದುವೆಗೆ ಬಂದಿರತಕ್ಕಂತಹ ಪ್ರತಿಯೊಬ್ಬರಿಗೂ ಎಲೆ ಅಡಿಕೆ, ಹೂ, ದಕ್ಷಿಣೆ, ಖರ್ಜೂರದಕಾಯಿ ಕೊಡಲೇ ಬೇಕು. ಅಲ್ಲದೆ ಗಂಡಸರಿಗೆ ಜನಿವಾರದ ದಾರದ ಎಳೆಗಳನ್ನು ಸಹ ಕೊಡುತ್ತಾರೆ. ಎಷ್ಟೇ ಬಡವರಾಗಿದ್ದರೂ ಸಹ ಖರ್ಜೂರದ ಕಾಯಿ, ಜನಿವಾರದ ಎಳೆಯನ್ನು ಕೊಡಲೇಬೇಕು. ಅನಂತರ ತಮ್ಮ ಶಕ್ತಿಗೆ ತಕ್ಕಹಾಗೆ ಅಡಿಗೆ ಮಾಡಿಸಿ ಬಂದಿರುವಂಥ ಅತಿಥಿಗಳಿಗೆ ಊಟ ಹಾಕಿಸುತ್ತಾರೆ.

ಮದುವೆಯಾದ ಬಳಿಕ ಹೆಣ್ಣನ್ನು ಗಂಡಿನ ಮನೆಗೆ ಕರೆದುಕೊಂಡು ಬರುತ್ತಾರೆ. ಮದುವೆ ಆದ ಐದು ದಿವಸಕ್ಕೆ ಅಥವಾ ಏಳು ದಿವಸಕ್ಕೆ ಗಂಡಿನ ಮನೆಯಲ್ಲಿ " ಬೀಗರೂಟ " ಅಥವಾ ' ನೆರವಿ' ಎಂದು ಮಾಂಸದ ಅಡಿಗೆ ಮಾಡಿಸುವ ಪದ್ಧತಿ ಇದೆ.

ಜನಿವಾರದ ಪೂಜೆ: ಉಪಾಕರ್ಮದ ಪೂರ್ಣಿಮಾ ದಿವಸ ಜನಿವಾರದ ಪೂಜೆಯನ್ನು ಆಚರಿಸುತ್ತಾರೆ. ಅಂದು ಮನೆಯನ್ನೆಲ್ಲಾ ಸ್ವಚ್ಛಗೊಳಿಸಿ ಮಡಿಯಿಂದ ದೇವರ ಪೂಜೆ ಮಾಡುತ್ತಾರೆ. ಅವರವರ ಮನೆಯಲ್ಲಿ ಎಷ್ಟು ಜನ ಗಂಡುಮಕ್ಕಳು ಇರುತ್ತಾರೋ ಅಷ್ಟು ಜನಿವಾರದ ಎಳೆಗಳನ್ನು ಒಂದೊಂದನ್ನು ಬೇರೆ ಬೇರೆಯಾಗಿ ಎಲೆ ಅಡಿಕೆಯ ಮೇಲಿಟ್ಟು ಪೂಜೆ ಮಾಡಿ ಅಂದು ಗಂಡು ಮಕ್ಕಳೆಲ್ಲಾ ಧರಿಸಿದ್ದ ಜನಿವಾರ ಬದಲಾಯಿಸಿ, ಆ ದಿವಸ ಅವರ ಮನೆಗಳಲ್ಲಿ ಸಿಹಿ ಅಡಿಗೆ ಮಾಡಿ ಊಟ ಮಾಡುತ್ತಾರೆ.

ಹೆಣ್ಣು ಮಗಳು ಗರ್ಭಿಣಿ ಆದರೆ ಅವಳನ್ನು ಗಂಡನ ಮನೆಯಿಂದ 7 ತಿಂಗಳು ಅಥವಾ 9 ತಿಂಗಳಿಗೆ ತಾಯಿಮನೆಗೆ ಕರೆದುಕೊಂಡು ಬರುತ್ತಾರೆ. ಹೆರಿಗೆಯನ್ನು ತಮ್ಮ ಮನೆಗಳಲ್ಲಿ ತಮ್ಮದೇ ಆದ ರೀತಿಯಿಂದ ಮಾಡುತ್ತಾರೆ. ಹೆರಿಗೆ ನೋವು ಪ್ರಾರಂಭವಾದಾಗ ಬೇಗ ಹೆರಿಗೆ ಆಗಲೆಂದು ಜೀರಿಗೆ ಕಷಾಯವನ್ನು ಕಾಯಿಸಿ ಕುಡಿಸುತ್ತಾರೆ. ಹೊಕ್ಕಳಿಗೆ ಕೈಯೆಣ್ಣೆ (ಹರಳೆಣ್ಣೆ) ಸವರಿ, ತಮ್ಮ ಪದ್ಧತಿಯಂತೆ ಹೆರಿಗೆ ಮಾಡುತ್ತಾರೆ. ಹುಟ್ಟಿದ ಮಗುವನ್ನು ಬಿಸಿನೀರಿನಲ್ಲಿ ಸ್ನಾನ ಮಾಡಿಸಿ ಮಗುವಿಗೆ ಹರಳೆಣ್ಣೆ ಕುಡಿಸುತ್ತಾರೆ. ಮಗು ತಂಪಾಗಿರಲಿ ಎಂದು ಅವರ ನಂಬಿಕೆ. ಹುಟ್ಟಿದ ಮಕ್ಕಳು ಸಾಯುತ್ತಿದ್ದರೆ ಅನಂತರ ಹುಟ್ಟಿದ ಮಗುವಿಗೆ ತಕ್ಷಣ ಮೂಗನ್ನು ಚುಚ್ಚಿ ಬಿಡುತ್ತಾರೆ. ಅಷ್ಟೇ ಅಲ್ಲ ಕತ್ತೆಹಾಲನ್ನು ಕುಡಿಸುತ್ತಾರೆ. ಹೆಬ್ಬುಲಿ, ಕಿಬ್ಬುಲಿ, ಗಣಕೆ, ಗುಪ್ಪಟಿ ಸೊಪ್ಪಿನ ರಸವನ್ನು ಕುಡಿಸುತ್ತಾರೆ.

ಬಾಣಂತಿಗೆ ಐದು ದಿವಸದತನಕ "ಉಡುಗೂಳು" ಎಂದು ಒರೇ "ಕುಸುಬದ ಅನ್ನ" ಜೊತೆಗೆ ಸ್ವಲ್ಪ ಬೆಲ್ಲ ಕೊಡುತ್ತಾರೆ. ಮಧ್ಯಾಹ್ನ ಮತ್ತು ರಾತ್ರಿ ಎರಡು ಹೊತ್ತು ಅದೇ ಆಹಾರವನ್ನು ಐದು ದಿವಸದವರೆಗೂ ತಿನ್ನಿಸುತ್ತಾರೆ. ಅಲ್ಲದೆ ಅವರು ಕೇಳಿದಷ್ಟು ಕಾಫಿಯನ್ನು ಯಥೇಚ್ಛವಾಗಿ ಕೊಡುತ್ತಾರೆ. ಹನ್ನೊಂದು ದಿವಸಕ್ಕೆ ಸೂತಕ ತೆಗೆಯುತ್ತಾರೆ. ಸೂತಕ ತೆಗೆಯುವ ಮುನ್ನ ಸುಣ್ಣವನ್ನು ತುಂಬುತ್ತಾರೆ. ಅದುವರೆಗೂ ಉಪಯೋಗಿಸುತ್ತಿದ್ದ ಮಡಕೆಗಳನ್ನು ತೆಗೆದುಹಾಕಿ ಹೊಸ ಮಡಕೆ ಉಪಯೋಗಿಸುತ್ತಾರೆ.

ಹನ್ನೊಂದನೆಯ ದಿವಸ ಮನೆಯನ್ನೆಲ್ಲಾ ಸ್ವಚ್ಛಗೊಳಿಸಿ ಸ್ನಾನ ಮಾಡಿಕೊಂಡು ಮಗು ಬಾಣಂತಿಗೆ ಸ್ನಾನ ಮಾಡಿಸುತ್ತಾರೆ. ದೇವರಿಗೆ ತುಪ್ಪದ ದೀಪ ಹಚ್ಚುತ್ತಾರೆ. ಕಾಲುವೆ ಹತ್ತಿರ ಹೋಗಿ ಗಂಗೆ ಪೂಜೆ ಮಾಡಿ ಆ ನೀರನ್ನು ತಂದು ಮನೆಯ ಸಾಮಾನುಗಳಿಗೆಲ್ಲಾ ಸಿಂಪಡಿಸಿ ಅನಂತರ ಅಡಿಗೆ ಮಾಡುತ್ತಾರೆ. ಅಷ್ಟೇ ಅಲ್ಲ ಮಡಿ ನೀರು ತಂದನಂತರವೇ ಅಡಿಗೆ ಮಾಡಲು ಪ್ರಾರಂಭಿಸುತ್ತಾರೆ. ಅಂದು ಹೆಸರುಬೇಳೆಯ "ಕಿಚ್ಚಡಿಅನ್ನ" ಮತ್ತು ಅವರೆಕಾಳು ಬದನೆಕಾಯಿನ ಸಾರು (ಇದಕ್ಕೆ ಕೂಟುಗರಿ ಸಾರು ಎಂದು ಕರೆಯುತ್ತಾರೆ) ಮಾಡಿ, ಹೆರಿಗೆ ಆದಂತಹ ಸ್ಥಳವನ್ನು ಸ್ವಚ್ಛಗಳಿಸಿ ಕೊಂಡು ಆ ಜಾಗದಲ್ಲಿ ಒಂದು ಎಲೆಹಾಕಿ ಮಾಡಿರುವ ಅಡಿಗೆಯನ್ನೆಲ್ಲಾ ಬಡಿಸುತ್ತಾರೆ.

ಆ ಊಟದ ಮುಂದೆ ಬಾಣಂತಿ ಮತ್ತು ಚಿಕ್ಕ ಚಿಕ್ಕ ಗಂಡುಮಕ್ಕಳನ್ನು ಕೂರಿಸುತ್ತಾರೆ. ಊಟವನ್ನು ಮಕ್ಕಳಿಗೆ ತಿನ್ನಿಸಿ ಒಂದು ತುತ್ತು ಅನ್ನವನ್ನುಮಾತ್ರ ಬಾಣಂತಿಗೆ ಕೊಡುತ್ತಾರೆ. ಅನಂತರ ಬಾಣಂತಿಗೆ ಕೊಡಬೇಕಾದ ಆಹಾರವನ್ನು ಬಡಿಸುತ್ತಾರೆ. ಮೂರು ದಿವಸಕ್ಕೆ ಒಂದು ಸಾರಿ ಮಾಂಸದ ಅಡಿಗೆ ಮಾಡಿ ಬಡಿಸುತ್ತಾರೆ. ಈ ರೀತಿ ಮೂರು ತಿಂಗಳು ಅಥವಾ ಐದು ತಿಂಗಳು ಆರೈಕೆ ಮಾಡುತ್ತಾರೆ. ಹನ್ನೊಂದನೆಯ ದಿವಸವೇ ತಮಗೆ ಇಷ್ಟವಾದ ಹೆಸರನ್ನು ಮಗುವಿಗೆ ಇಡುತ್ತಾರೆ.

ಆರಾಧಿಸುವ ದೈವಗಳು: ಕಪ್ಪಡಿಯ ಸಿದ್ದಪ್ಪಾಜಿಯನ್ನು ಮನದೇವರಾಗಿ ಪೂಜಿಸುತ್ತಾರೆ. ಬಪ್ಪಣ್ಣಪುರದ ದೇವರನ್ನು ಆರಾಧಿಸುತ್ತಾರೆ. ಅಲ್ಲದೆ ದೊಡ್ಡ ಅರಸೀಕೆರೆಯ ಏಳೂರು ಅಮ್ಮ, ಗುಡಿಲ ಅಮ್ಮ, ಚೌಡೇಶ್ವರಿಯನ್ನು ಪೂಜಿಸುತ್ತಾರೆ.

ಕೆಲವು ಸಾರಿ ಊರಿನಲ್ಲಿ ವಾಂತಿಭೇದಿ ಪ್ರಾರಂಭವಾದರೆ ಅದು "ದೇವರ ಕುಸುಲು" ಎಂದು ಕಮ್ಮಾರರ ಮನೆದೇವತೆಯಾದ ಸಿದ್ದಪ್ಪಾಜಿಯ "ಕಂಡಾಯ" ಮೆರವಣಿಗೆ ಮಾಡಿಸುತ್ತಾರೆ. ಕಂಡ್ದಾಯ ಮೆರವಣಿಗೆ ಮಾಡುವುದರಿಂದ ಊರಿಗೆ ಯಾವ ಮಾರಿ, ಮುಸಣಿಯುರ ಸೋಂಕು ತಗುಲುವುದಿಲ್ಲವೆಂದು, ಶಾಂತಿ ನೆಮ್ಮದಿ ಬರುತ್ತದೆ ಎಂಬುದು ಅವರ ನಂಬಿಕೆ-

ಕಂಡಾಯ ಎಂಬುದು ಒಂದು ತ್ರಿಶೂಲ. ಇದನ್ನು ಮೆರವಣಿಗೆ ಮಾಡುವ ದಿವಸ ಊರಿನಲ್ಲಿ ಯಾವ ವಿಧವಾದ ಕಂಟು, ಘಾಟು ಮಾಡಬಾರದು. ಈ ಕಂಡಾಯುವನ್ನು ಮೂರು ದಿವಸ ಮೆರವಣಿಗೆ ಮಾಡುತ್ತಾರೆ. ಈ ಕಂಡಾಯುವು ಗೊತ್ತಾದ ಆಚಾರ್ಯರ ಮನೆತನದಲ್ಲಿ ಮಾತ್ರ ಇಟ್ಟಿರುತ್ತಾರೆ. ಮೆರವಣಿಗೆ ದಿವಸ ಕಂಡ್ದಾಯ ಹೊತ್ತುಕೊಳ್ಳುವವರು ಉಪವಾಸದಿಂದ ಹಾಗೂ ಮಡಿಯಿಂದ ಇರಬೇಕು. ಇವರೇ ದೇವರೆಂಬ ಭಾವನೆಯಿಂದ ಇವರ ಪಾದಪೂಜೆ ಮಾಡುತ್ತಾರೆ. ಊರಿನಲ್ಲಿ ಮನೆ ತಪ್ಪದಂತೆ ಕಂಡಾಯುಕ್ಕೆ ಪೂಜೆ ಮಾಡಿಸುತ್ತಾರೆ. ಈ ರೀತಿ ಮಾಡುವ ಉದ್ದೇಶವೆಂದರೆ ಕಂಡಾಯ ಮೆರವಣಿಗೆಯ ಸಮಯದಲ್ಲಿ ಕೊಂಬು, ಕಹಳೆ, ಓಲಗದ ಸದ್ದು ಕೇಳಿ ಮಾರಮ್ಮ ಓಡಿ ಹೋಗುತ್ತಾಳೆ ಎಂಬ ನಂಬಿಕೆಯಿಂದ ಮಾಡುತ್ತಾರೆ. ಕಾಳಮ್ಮನ ಪೂಜೆಯುನ್ನು ವಿಶೇಷವಾಗಿ ಮಾಡುತ್ತಾರೆ.

ಪ್ರಧಾನ ಕಸುಬು

ಕಬ್ಬಿಣದ ಕೆಲಸ ಮತ್ತು ಮರಗೆಲಸ ಪ್ರಧಾನವಾಗಿರುತ್ತದೆ. ಕಬ್ಬಿಣದ ಕೆಲಸದಲ್ಲಿ ನೇಗಿಲು ಗುದ್ದಲಿ, ಮಚ್ಚು, ಕುಳ್ಳು, ಕೂಪರು, ತವ, ಹಲ್ಲೆ, ಕುಳ್ಳು, ಮುಂತಾದ ಸಾಮಾನುಗಳನ್ನೆಲ್ಲಾ ಮಾಡಲು ತಿದಿಯನ್ನು ಉಪಯೋಗಿಸುತ್ತಾರೆ. ಈ ತಿದಿಯಲ್ಲಿ ಎರಡು ವಿಧ.

(1) ಚಕ್ಕಳದ ತಿದಿ (2) ಮಿಷನ್ ತಿದಿ.

ಹಿಂದೆ ಎಲ್ಲರೂ ಚಕ್ಕಳದ ತಿದಿಯನ್ನು ಉಪಯೋಗಿಸುತ್ತಿದ್ದರು. ಈಗ ಪಿಸನ್ ತಿದಿಯನ್ನು ಉಪಯೋಗಿಸುತ್ತಿದ್ದಾರೆ.

ಕಮ್ಮಾರರು ಆಯುಧಗಳನ್ನು ಮಾಡಲು ಬೆಂಕಿಗೆ ಉಪಯೋಗಿಸುತ್ತಿದ್ದ ಒಲೆಗೆ ತಿದಿ ಎಂದು ಕರೆಯುತ್ತಾರೆ. ಇದಕ್ಕೆ ತ್ರಿಕೋನಕಾರದ ಮೂರು ತೂಕವಿಲ್ಲದ ಹಲಗೆಯನ್ನು ಜೋಡಿಸಿರುತ್ತಾರೆ. ಇದರ ಮಧ್ಯೆ 2 ರಿಂದ 3 ಅಂಗುಲ ರಂಧ್ರವನ್ನು ಮಾಡಿರುತ್ತಾರೆ. ಒಂದು ಹಲಗೆಯನ್ನು ಕೆಳಗಡೆ ಇಟ್ಟು ಅದರ ಸುತ್ತಲು ಒಂದು ಅಡಿ ಎತ್ತರವಾದ ದನದ ಚಕ್ಕಳವನ್ನು ಕ್ರಾಸಾಗಿ ಕತ್ತರಿಸಿ ಮೇಲಿಂದ ಕೆಳಭಾಗವಾಗಿ ವಾಟವಾಗಿ ಹಲಗೆಯ ಅಂಚಿಗೆ ಮೊಳೆಹೊಡೆದು ಅದರ ಮೇಲೆ ಹಲಗೆ ಇಟ್ಟು ಅದರ ಅಂಚಿಗೂ ಮೇಲ್ಕಂಡಂತೆ ದನದ ಚಕ್ಕಳವನ್ನು ಸೇರಿಸಿರುತ್ತಾರೆ. ಇತ್ತೀಚಿನವರು ಪ್ರತಿಯೊಬ್ಬರು ಪಿಸನ್ ತಿದಿಯನ್ನೇ ಬಳಸುತ್ತಾರೆ. ಇದು ಅದಕ್ಕಿಂತ ಸುಲಭದಲ್ಲಿ ಆಗುವ ಕೆಲಸ.

ಉಪಯೋಗಿಸುವ ಉಪಕರಣಗಳು : ಕಮ್ಮಾರರು ಮರಗೆಲಸ ಮತ್ತು ಕಬ್ಬಿಣದ ಕೆಲಸ ಎರಡನ್ನೂ ಮಾಡುತ್ತಾರೆ. ಈ ಕೆಲಸಗಳನ್ನು ಮಾಡಲು ಅವರು ಬಳಸುವ ಉಪಕರಣಗಳಿವು: ದೊಡ್ಡ ಬಾಚಿ, ಎಡಬಾಚಿ, ಚಿಕ್ಕಬಾಚಿ, ದೊಡ್ಡ ಚಮಟಿಗೆ, ಇಕ್ಕಳ, ರಾವಗೋಲು, ಪ್ಲೊನ್‌ಸುತ್ತಿಗೆಗಳನ್ನು ಬಳಸುತ್ತಾರೆ. ಅವಲ್ಲದೆ ಉಳಿ, ಸೀಪೆಉಳಿ, ಒರಟುಉಳಿ, ಕಿರುಳಿ, ಜೈರಿಗೆ ಅಗರ, ಮೂಲೆ ಮಟ್ಟ, ತಿದಿ, ಗರಗಸ, ಕೈಪಿಡಿ ಗರಗಸ, ದೊಡ್ಡ ಗರಗಸ, ಮುಂತಾದ ಉಪಕರಣಗಳನ್ನೆಲ್ಲಾ ಉಪಯೋಗಿಸುತ್ತಾರೆ.

ಈ ಉಪಕರಣ ಉಪಯೋಗಿಸಿ ಮರದ ಮತ್ತು ಕಬ್ಬಿಣದ ಸಾಮಾನನ್ನು ಮಾಡುತ್ತಾರೆ. ಕಬ್ಬಿಣದ ಸಾಮಾನಿನಲ್ಲಿ ಕೂಪುರ, ಕುಂಟೆ, ಕಬ್ಬಿಣದ ನೇಗಿಲು, ಸರಪಣಿ, ಸರಮಣಿಗೆ ಸ್ಯಾವಿಗೆ ಒರಳು ಕಬ್ಬಿಣದ ಸಾಮಾನುಗಳನ್ನೆಲ್ಲಾ ಮಾಡುತ್ತಾರೆ.

ಮರಗೆಲಸದಲ್ಲಿ ನೇಗಿಲು, ಟೈರುಗಾಡಿ, ಮನೆ ಸಾಮಾನು ಕಿಟಕಿ, ಬಾಗಿಲು, ತೊಲೆ–ಜಂತಿ ಮಂಚ, ಕುರ್ಚಿ ಇತರೆ ಕೈಗೆಲಸಗಳನ್ನೆಲ್ಲಾ ಮಾಡುತ್ತಾರೆ.

ಉಪಕರಣಗಳಿಗೆ ಶಾಂತಿ : ಕಮ್ಮಾರರು ಉಪಯೋಗಿಸುವ ಉಪಕರಣಗಳಿಗೆಲ್ಲಾ ಆಯುಧ ಪೂಜೆ ದಿವಸ ಪೂಜೆಯನ್ನು ಸಲ್ಲಿಸುತ್ತಾರೆ. ಆ ಹಬ್ಬದ ದಿವಸ ಎಲ್ಲಾ ಉಪಕರಣಗಳನ್ನು ಸ್ವಚ್ಛಗೊಳಿಸಿ ನೆಲ, ಮನೆ ಸಾರಿಸಿ, ಗುಡಿಸಿ, ರಂಗೋಲಿ ಇಟ್ಟು ಸಾಮಾನುಗಳನ್ನೆಲ್ಲಾ ಜೋಡಿಸುತ್ತಾರೆ. ಗಂಧದ ಕಡ್ಡಿ, ಕರ್ಪೂರಹಚ್ಚಿ ತೆಂಗಿನಕಾಯಿ ಒಡೆದು ಕೋಳಿ ಅಥವಾ ಕುರಿಯನ್ನು ಬಲಿಕೊಟ್ಟು ಆ ಉಪಕರಣಗಳಿಗೆಲ್ಲ ರಕ್ತಸವರಿ ಶಾಂತಿ ಮಾಡುತ್ತಾರೆ. ಈ ರೀತಿ ಮಾಡುವುದರಿಂದ ವರ್ಷ ಪೂರ್ತಿ ಕೆಲಸ ಮಾಡುವಾಗ ಆಯುಧಗಳಿಂದ ಕಮ್ಮಾರರಿಗೆ ಯಾವ ರೀತಿ ತೊಂದರೆ ಆಗದೆಂದು ನಂಬುತ್ತಾರೆ.

ಕಮ್ಮಾರರಿಗೆ ಗಣೇಶ ಹಬ್ಬ ಬಂತೆಂದರೆ ಬಹಳ ಖುಷಿ. ಈ ಹಬ್ಬವನ್ನು ವಿಜೃಂಭಣೆಯಿಂದ ಮಾಡುತ್ತಾರೆ. ಗೌರಿಹಬ್ಬವನ್ನು ಸಾಮಾನ್ಯವಾಗಿ ದಿನನಿತ್ಯದಂತೆಯೇ ಮಾಡುತ್ತಾರೆ. ಗಣೇಶನ ಹಬ್ಬ 9 ಅಥವಾ 5 ದಿನ ಇರುವಾಗಲೇ "ಜಾಗರೆ" ಸಿದ್ಧಮಾಡುತ್ತಾರೆ. ಅಂದರೆ ಸಣ್ಣ ಸಣ್ಣ ಬುಟ್ಟಿ ಕುಕ್ಕೆಗಳಿಗೆ ಮಣ್ಣನ್ನು ಹಾಕಿ ಅದರ ಮೇಲೆ ಕುರಿಪಿಕ್ಕೆ ಚೆಲ್ಲಿ ಅನಂತರ ಹಲವಾರು ಬಗೆಯ ಕಾಳುಗಳನ್ನು ಚೆಲ್ಲುತ್ತಾರೆ. ಪ್ರತಿನಿತ್ಯವು ನೀರು ಹಾಕುತ್ತಾರೆ ಪೈರು ಬರುತ್ತವೆ. ಈ ಕುಕ್ಕೆಗೆ ಜಾಗರೆ ಎಂದು ಕರೆಯುತ್ತಾರೆ.

ಗಣೇಶ ಹಬ್ಬದ ದಿವಸ ಮನೆ ಮಠವನ್ನೆಲ್ಲಾ ಮಡಿಮಾಡಿ (ಸಾರಿಸಿ) ರಂಗೋಲಿ ಹಾಕಿ ದೇವರನ್ನು ಕೂರಿಸಲು ಸಿದ್ಧಮಾಡುತ್ತಾರೆ. ಮನೆಮಂದಿ ಎಲ್ಲಾ ಸ್ನಾನಮಾಡಿ ಮಡಿ ಬಟ್ಟೆ ಧರಿಸಿ ಸ್ವಚ್ಛರಾಗುತ್ತಾರೆ. ಹಬ್ಬದ ದಿವಸ ಗಣೇಶನ ವಿಗ್ರಹ ತಂದು ಪೂಜಿಸುತ್ತಾರೆ. ಜೊತೆಗೆ ಅವರು ಉಪಯೋಗಿಸುವ ಉಪಕರಣಗಳೆಲ್ಲವನ್ನು ಸ್ವಚ್ಛಮಾಡಿ ಅರಶಿನ ಕುಂಕುಮ ಹಚ್ಚಿ ಹೂ ಮುಡಿಸಿ ದೇವರ ಎರಡು ಕಡೆಯಲ್ಲೂ ಜೋಡಿಸುತ್ತಾರೆ. ದೇವರಪೂಜೆ ಸಾಮಾನುಗಳನ್ನೆಲ್ಲಾ ಸಿದ್ಧಮಾಡಿ ಇಡುತ್ತಾರೆ. ಅಂದು ಒಂದು ವಿಶೇಷ ಏನೆಂದರೆ ದೇವರ ಸಾಮಾನಿನ ಜೊತೆಯಲ್ಲಿ 'ಜನಿವಾರವನ್ನು' ಸಹ ಇಡುತ್ತಾರೆ. ಗಣೇಶನ ಹಬ್ಬದ ದಿವಸ ಪ್ರತಿಯೊಬ್ಬನೂ ಜನಿವಾರವನ್ನು ಬದಲಾಯಿಸಲೇ ಬೇಕು. ಉಪಾಕರ್ಮ ಪೂರ್ಣಿಮೆ ದಿನ ಬದಲಾಯಿಸದಿದ್ದರೂ ಗಣೇಶನ ಹಬ್ಬದ ದಿನ ಎಲ್ಲರೂ ಬದಲಾಯಿಸಿ ಹೊಸ ಜನಿವಾರವನ್ನು ಹಾಕಿಕೊಳ್ಳುತ್ತಾರೆ. ಅವರಲ್ಲಿ ಮದುವೆ ಆಗಿರುವವರು ಆರು ಎಳೆ ಜನಿವಾರವನ್ನು ಮದುವೆ ಆಗದವರು ಮೂರು ಎಳೆ ಜನಿವಾರವನ್ನು ಹಾಕಿಕೊಳ್ಳುತ್ತಾರೆ. ಪೂಜೆ ಎಲ್ಲಾ ಮುಗಿದ ಅನಂತರ 3-4 ಘಂಟೆಗೆ ಊಟ ಮಾಡುತ್ತಾರೆ. ಆದಿನ ಒಂದು ಹೊತ್ತು ಊಟ ಮಾತ್ರ ಮಾಡುತ್ತಾರೆ. ರಾತ್ರಿ ಊಟಮಾಡದೆ ಉಪವಾಸ ಇರುತ್ತಾರೆ. ಆ ರೀತಿ ಮಾಡುವುದರಿಂದ ಗಣಪತಿಯು ಅವರ ಎಲ್ಲಾ ಕೆಲಸಗಳಿಗೂ ಯಶಸ್ಸುಂಟು ಮಾಡುವನು ಎಂಬ ನಂಬಿಕೆ ಅವರಿಗಿದೆ.

ಕಮ್ಮಾರರು ಪ್ರತಿದಿವಸ ಬೆಳಿಗ್ಗೆ ಎದ್ದು ಮನೆ ಬಾಗಿಲಿನ ಕಸ ಗುಡಿಸಿ ನೀರು ಹಾಕಿ ರಂಗೋಲಿ ಬಿಡುತ್ತಾರೆ. ಅನಂತರ ತಿದಿಯ ಹತ್ತಿರ ಅಂದರೆ ಚಕ್ಕಳದ ತಿದಿ ಅಥವಾ ಮಿಷನ್ ತಿದಿಯ ಹತ್ತಿರ ನೀರುಹಾಕಿ ಗುಡಿಸಿ ರಂಗೋಲಿ ಬಿಟ್ಟು ಅರಿಶಿನ ಕುಂಕುಮ ಹಚ್ಚುತ್ತಾರೆ. ಕಾರಣ ದಿವಸದ ವ್ಯಾಪಾರ ಹೆಚ್ಚಿದಷ್ಟೂ ಸಂಪಾದನೆ ಹೆಚ್ಚು ಆಗಲಿ ಎಂಬುದು ಅವರ ನಂಬಿಕೆ.

ಈ ವಿಷಯಕ್ಕೆ ಸಂಬಂಧಿಸಿದಂತೆ ಮಾಹಿತಿಯನ್ನು ತಿಳಿಸಿದವರು—

1. ಚಿಕ್ಕಪುಟ್ಟ ಆಚಾರರು–ವಯಸ್ಸು 55 ಜಾತಿ ಕಂಬಾರರು, ನಗುವನಹಳ್ಳಿ.
2. ಸಿದ್ದೋಜಿರಾಯರು–ವಯಸ್ಸು 60, ಸ್ಥಳ ಗಂಜಾಂ.
3. ಗಂಗೋಜಿರಾಯರು–ವಯಸ್ಸು 65 ಸ್ಥಳ ಶ್ರೀರಂಗಪಟ್ಟಣ.

*　　　*　　　*

ಇಂದಿನ ದಿನಗಳಲ್ಲಿ ಜನಾಂಗಶಾಸ್ತ್ರದ (ರೇಸಿಯಾಲಜಿ) ಕಡೆಗೆ ಮಾನವ ಶಾಸ್ತ್ರಜ್ಞರು ಮತ್ತು ಜಾನಪದ ತಜ್ಞರು ಹೆಚ್ಚಿನ ಗಮನ ಹರಿಸಿದ್ದಾರೆ. ಕಾರಣ ಜನಾಂಗ ಎಂಬ ಪದ, ಭಾಷೆ ಸಂಸ್ಕೃತಿ ಎಂಬ ವಿವಿಧ ಅರ್ಥಗಳಲ್ಲಿ ಬಳಕೆಯಾಗಿದೆ. ಜನಾಂಗಿಕ ಭಿನ್ನತೆಗಳು ಮಾನವನ ದೈಹಿಕ ರಚನೆಗಳಲ್ಲಿಯ ವ್ಯತ್ಯಾಸಗಳನ್ನು ಒಳಗೊಂಡಿವೆ. ಈ ರಚನಾತ್ಮಕ ವ್ಯತ್ಯಾಸಗಳನ್ನು ವಂಶವಾಹಿಗಳು (ಜೀನ್ಸ್) ನಿರ್ಧರಿಸುತ್ತವೆ. ಆದುದರಿಂದ ಜನಾಂಗ ಎಂಬುದು ಜೈವಿಕವಾದ ಅನುವಂಶಿಕತೆಗೆ ಸಂಬಂಧಿಸಿದ ಪದವೆಂದು ಸ್ಪಷ್ಟವಾಗುತ್ತದೆ.

ಭಾರತದಲ್ಲಿಯ ಅನೇಕ ಜನಾಂಗಗಳು, ಬುಡಕಟ್ಟುಗಳು ಸಾಮಾಜಿಕವಾಗಿ ಆರ್ಥಿಕವಾಗಿ ಇನ್ನಿತರ ಸಾಮಾಜಿಕ ವರ್ಗಗಳೊಂದಿಗೆ ಸರಿಸಮಾನವಾಗಿ ಬೆಳೆಯಲು ಅವಕಾಶವಿಲ್ಲದ್ದನ್ನು ಗಮನಿಸಿ, ಅಂಥ ವಿವಿಧ ಜನಾಂಗಗಳನ್ನು ವರ್ಗಗಳನ್ನು ಗುರುತಿಸಿ ಅವಕ್ಕೆ ವಿಶಿಷ್ಟ ಸೌಲಭ್ಯಗಳನ್ನು ಒದಗಿಸುವ ಕ್ರಮ ಕೈಗೊಳ್ಳಲು ಭಾರತ ಸಂವಿಧಾನದಲ್ಲಿ ಅವಕಾಶ ಮಾಡಿಕೊಡಲಾಗಿದೆ. ಸಂವಿಧಾನದ 341-42ನೆಯ ಅನುಚ್ಛೇದಗಳ ಪ್ರಕಾರ ಅನೇಕ ಜನಾಂಗಗಳನ್ನು ಬುಡಕಟ್ಟುಗಳನ್ನು ಗುರುತಿಸಿ ಅವುಗಳ ಪಟ್ಟಿಯನ್ನು ಪ್ರಕಟಿಸಲಾಗಿದೆ. ಸಂವಿಧಾನದ ಪರಿಶಿಷ್ಟ ಭಾಗವಾಗಿ ಇದು ಸೇರಿದೆ.

ಕರ್ನಾಟಕದ ವಿವಿಧ ಜನಾಂಗಗಳ, ಬುಡಕಟ್ಟುಗಳ ಬಗ್ಗೆ ಥರ್ಸ್ಟನ್, ಎಂಥೋವೆನ್, ಎಲ್ವಿನ್, ಲೂಯಿಸ್, ಗುಹಾ, ನಂಜುಂಡಯ್ಯ, ಅನಂತಕೃಷ್ಣ ಅಯ್ಯರ್ ಮೊದಲಾದ ಮಹನೀಯರು ಕೆಲವು ಉಪಯುಕ್ತ ವಿವರಗಳನ್ನು ನೀಡಿದ್ದಾರೆ.

*　　　*　　　*

ಎಂ. ಪಿ. ಮಹಾದೇವಯ್ಯ

ಪ್ರಾಚೀನ ಕರ್ನಾಟಕದಲ್ಲಿ ರಾಣಿಯರ ಪಾತ್ರ

ಪ್ರಾಚೀನ ಕರ್ನಾಟಕದಲ್ಲಿ ರಾಣಿಯರಿಗೆ ಅಷ್ಟೇನೂ ಮಹತ್ವವನ್ನು ಕೊಟ್ಟಿಲ್ಲವೆಂಬುದು ವ್ಯಕ್ತವಾಗುತ್ತದೆ. ಹಾಗೆಂದಮಾತ್ರಕ್ಕೆ ಅವರು ಕೇವಲ ಅಂತಃಪುರದಲ್ಲಿಯೇ ಇದ್ದು ರಾಜ್ಯದ ಆಗುಹೋಗುಗಳ ವಿಷಯದಲ್ಲಿ ಯಾವ ಆಸಕ್ತಿಯನ್ನೂ ತೋರಲಿಲ್ಲವೆಂದು ಅಭಿಪ್ರಾಯವಲ್ಲ. ಸಮಯಬಂದಾಗ ಅಥವಾ ಅವರ ನೆರವು ಆಡಳಿತಕ್ಕೆ ಅಥವಾ ರಾಜ್ಯಕ್ಕೆ ಬೇಕಾದಾಗ ರಾಣಿಯರು ಸ್ವಲ್ಪವೂ ಹಿಂಜರಿಯದೆ ತಮ್ಮ ಪಾತ್ರವನ್ನು ಆಸಕ್ತಿಯಿಂದಲೂ ಮತ್ತು ಧೈರ್ಯದಿಂದಲೂ ನಿರ್ವಹಿಸುತ್ತಿದ್ದರೆಂಬುದು ತಿಳಿದು ಬರುತ್ತದೆ. ಈ ವಿಷಯವನ್ನು ತಿಳಿಯಲು ಸಮಕಾಲೀನ ಶಾಸನಗಳೇ ನಮಗೆ ಹೆಚ್ಚಿನ ಮಾಹಿತಿಯನ್ನು ಒದಗಿಸುತ್ತವೆ. ಆದುದರಿಂದ ಅವುಗಳ ಸಹಾಯದಿಂದ ಪ್ರಾಚೀನ ಕರ್ನಾಟಕದ ಇತಿಹಾಸದಲ್ಲಿ ರಾಣಿಯರು ಯಾವ ರೀತಿಯ ಪಾತ್ರವನ್ನು ವಹಿಸುತ್ತಿದ್ದರೆಂಬುದನ್ನು ಗಮನಿಸಬಹುದು.

ಕರ್ನಾಟಕ ಇತಿಹಾಸವನ್ನು ಕುರಿತು ವಿವೇಚಿಸುವಾಗ ಕದಂಬ, ಗಂಗರ ಕಾಲಕ್ಕಿಂತ ಹೆಚ್ಚಾಗಿ ಮಾಹಿತಿಗಳು ಬಾದಾಮಿ ಮತ್ತು ಕಲ್ಯಾಣದ ಚಾಲುಕ್ಯರು, ರಾಷ್ಟ್ರಕೂಟರು ಮತ್ತು ಹೊಯ್ಸಳರ ಕಾಲಗಳಲ್ಲಿ ವಿಶೇಷವಾಗಿ ದೊರಕುತ್ತವೆ. ಶಾತವಾಹನರ ಕಾಲದಲ್ಲಿ ಮಾತೃವಾಚಕ ಹೆಸರುಗಳು ವಿಶೇಷವಾಗಿ ಕಂಡುಬರುವುದರಿಂದ, ರಾಣಿಯರಿಗೆ ಹೆಚ್ಚಿನ ಗೌರವವಿದ್ದಿತೆಂದು ಗೊತ್ತಾಗುತ್ತದೆ. ಗೌತಮೀಪುತ್ರ, ವಾಸಿಷ್ಠೀಪುತ್ರ ಮುಂತಾದ ಹೆಸರುಗಳಿಂದ ಇದು ವ್ಯಕ್ತಪಡುತ್ತದೆ. ಗೌತಮೀ ಬಲಶ್ರೀ ಶಾತವಾಹನ ರಾಣಿಯರಲ್ಲಿ ಪ್ರಮುಖಳಾಗಿದ್ದಳೆಂಬುದು ಖ್ಯಾತವಾಗಿರುವ ವಿಷಯವೇ ಆಗಿದೆ. ಆದರೆ ಮುಂದೆ ಬಂದಂತೆ ಈ ಪದ್ಧತಿ ಅಷ್ಟಾಗಿ ಮುಂದುವರೆದಂತೆ ಕಂಡುಬರುವುದಿಲ್ಲ. ಏಕೆಂದರೆ ಬನವಾಸಿ ಕದಂಬರ ಕಾಲದಲ್ಲಿ ರಾಣಿಯರಿಗೆ ಪ್ರಾಮುಖ್ಯ ಇದ್ದದ್ದು ಶಾಸನಗಳಿಂದ ತಿಳಿದು ಬರುವುದಿಲ್ಲ. ಇದು ಕಾಲಕ್ರಮದಲ್ಲಿ ಸುಧಾರಣೆ ಹೊಂದಿತೆಂಬುದು ಗೊತ್ತಾಗುತ್ತದೆ.

ಬಾದಾಮಿ ಚಾಲುಕ್ಯರ ಕಾಲದಲ್ಲಿ ದುರ್ಲಭದೇವಿ, ಕುಂಕುಮದೇವಿ, ಇಂದುಕಾಂತಿ, ಲೋಕಮಹಾದೇವಿ, ತ್ರೈಲೋಕ್ಯಮಹಾದೇವಿ ಮುಂತಾದ ರಾಣಿಯರು ಶಾಸನಗಳಿಂದ ಖ್ಯಾತರಾಗಿದ್ದಾರೆ. ಇವರ ಪೈಕಿ ಕುಂಕುಮದೇವಿಯು ಅನೇಕ ಜೈನ ಮತ್ತು ಶೈವ ದೇವಾಲಯಗಳನ್ನು ನಿರ್ಮಿಸಿದಳೆಂದು ತಿಳಿದು ಬರುತ್ತದೆ.[1] ಇಮ್ಮಡಿ ವಿಕ್ರಮಾದಿತ್ಯನ ರಾಣಿಯರಾದ ಲೋಕಮಹಾದೇವಿ ಮತ್ತು ತ್ರೈಲೋಕ್ಯ ಮಹಾದೇವಿಯರು ಚಾಲುಕ್ಯವಾಸ್ತುಶಿಲ್ಪ ಇತಿಹಾಸದಲ್ಲಿ ಅಮರ ರಾಗಿದ್ದಾರೆ. ಲೋಕಮಹಾದೇವಿಯು ಈಗ ವಿರೂಪಾಕ್ಷ ಎಂಬ ಖ್ಯಾತಿಯಾಗಿರುವ ಲೋಕೇಶ್ವರ ದೇವಾಲಯವನ್ನು ಪಟ್ಟದಕಲ್ಲಿನಲ್ಲಿ ನಿರ್ಮಿಸಿದಳು.[2] ತ್ರೈಲೋಕ್ಯ ಮಹಾದೇವಿಯು ಪಟ್ಟದಕಲ್ಲಿನಲ್ಲಿ ಈಗ ಮಲ್ಲಿಕಾರ್ಜುನ ಎಂದು ಖ್ಯಾತವಾಗಿರುವ ತ್ರೈಲೋಕೇಶ್ವರ ದೇವಾಲಯವನ್ನು ನಿರ್ಮಿಸಿದಳು.[3] ವಿಜಯಮಹಾದೇವಿಯು ತನ್ನ ಗಂಡ ಚಂದ್ರಾದಿತ್ಯನ ಮರಣಾನಂತರ, ತನ್ನ ಮಗ ಇನ್ನೂ ವಯಸ್ಕನಾಗಿಲ್ಲದೇ ಇದ್ದುದರಿಂದ, ರಾಜಮಾತೆಯಾಗಿ ರಾಜ್ಯಭಾರವನ್ನು ನಡೆಸುತ್ತಿದ್ದಳು.[4] ಲೋಕ ಮಹಾದೇವಿ ಕುರುಟ್ಟಕುಂಟೆ ಎಂಬ ಪ್ರಾಂತದ ಆಡಳಿತವನ್ನು ನಡೆಸುತ್ತಿದ್ದಳೆಂದು ಶಾಸನವೊಂದು ತಿಳಿಸುತ್ತದೆ.[5] ವಿನಯಾದಿತ್ಯನ ರಾಣಿಯಾದ ವಿನಯವತಿಯ ಆಜ್ಞೆಯ ಮೇರೆಗೆ ಕೆಲವು ದತ್ತಿಗಳನ್ನು ಕೊಡಲಾಯಿತೆಂದು ಅವನ ಶಾಸನವೊಂದು ತಿಳಿಸುತ್ತದೆ.[6] ಈಕೆಯು ಬಾದಾಮಿ ಶಾಸನದಲ್ಲಿ ರಾಜಮಾತೆಯಾಗಿ ಕಾಣಿಸಿಕೊಳ್ಳು ತ್ತಾಳೆ. ಬ್ರಹ್ಮ, ವಿಷ್ಣು, ಮಹೇಶ್ವರರಿಗಾಗಿ ನಿರ್ಮಿತವಾದ ದೇವಾಲಯಕ್ಕೆ ಮುಖ್ಯ ಕಾರಣಳಾದವಳು ವಿನಯವತಿ.[7] ಮತ್ತೊಬ್ಬ ರಾಣಿ ಗಂಗಮಹಾದೇವಿಯ ಅಪ್ಪಣೆಯಂತೆ ವಿಕ್ರಮಾದಿತ್ಯನು ಗದ್ವಾ ಶಾಸನವನ್ನು ಹೊರಡಿಸಿದನು.[8] ಇಮ್ಮಡಿ ಕೀರ್ತಿವರ್ಮನ ರಾಣಿಯಾದ ಮಹಾದೇವಿಯ ಕೋರಿಕೆಯ ಮೇರೆಗೆ ಕೀರ್ತಿವರ್ಮನು ರಕ್ತಪುರದಿಂದ ಶಾಸನವೊಂದನ್ನು ಹೊರಡಿಸಿದನೆಂದು ಇನ್ನೊಂದು ಶಾಸನ ತಿಳಿಸು ತ್ತದೆ.[9] ಇವುಗಳಿಂದ ಬಾದಾಮಿ ಚಾಲುಕ್ಯ ರಾಣಿಯರು ಧಾರ್ಮಿಕ ಮತ್ತು ಸಾಂಸ್ಕೃತಿಕ ಕಾರ್ಯಗಳಲ್ಲಿ ವಿಶೇಷ ಆಸಕ್ತಿ ವಹಿಸುತ್ತಿದ್ದರೆಂದು ತಿಳಿದುಬರುತ್ತದೆ.

ತಲಕಾಡಿನ ಗಂಗರ ಕಾಲದಲ್ಲಿಯೂ ಇದೇ ವಿಧವಾದ ಪ್ರವೃತ್ತಿಯನ್ನು ಗಮನಿಸುತ್ತೇವೆ. ಶ್ರೀಪುರುಷನ ರಾಣಿಯಾದ ಇಮ್ಮಡಿ ವಿನಯವತಿಯು ಮಲೆನೆಲ್ಲೂರು ಎಂಬಲ್ಲಿ ರಾಜ್ಯವಾಳುತ್ತಿದ್ದಳು ಎಂದು ಹೇಳಿದೆ.[10] ದುಗ್ಗಮಾರನ ರಾಣಿಯಾದ ಕಾಂಚಿಯಬ್ಬೆಯು ಆಗಳಿಯಲ್ಲಿ ರಾಜ್ಯಭಾರ ಮಾಡುತ್ತಿದ್ದಳು.[11] ಬೂತುಗನ ರಾಣಿಯು ಕುಣಿಗಲ್ಲಿನಲ್ಲಿ ಆಧಿಪತ್ಯವನ್ನು ನಡೆಸುತ್ತಿದ್ದಳು.[12] ಈ ಸಂದರ್ಭದಲ್ಲಿ ತಿಳಿದುಬರುವ ಪ್ರಮುಖ ಅಂಶವೆಂದರೆ, ರಾಜನು ರಾಜಧಾನಿಯಲ್ಲಿ ಇಲ್ಲದೇ ಇರುವಾಗ ರಾಣಿಯೇ ತೆರಿಗೆಗಳನ್ನು ತೆಗೆದುಕೊಂಡು ಭಂಡಾರಕ್ಕೆ ಸೇರಿಸು ತ್ತಿದ್ದಳು. ಇವರು ತೆರಿಗೆಗಳಿಗೆ ವಿನಾಯಿತಿಯನ್ನು ಕೊಡುವ ಅಧಿಕಾರವನ್ನೂ ಹೊಂದಿದ್ದರು. ಜಾಗಿಯಬ್ಬರಸಿಯು ಬಿತ್ತುವಟ್ಟ ಎಂಬ ತೆರಿಗೆಯನ್ನು ಮನ್ನಾ

ಮಾಡಿದ ಸಂಗತಿ ಶಾಸನದಿಂದ ತಿಳಿದುಬರುತ್ತದೆ.[13] ಶಾಸನವೊಂದರಿಂದ ವಿದ್ಯಾಧರನ ರಾಣಿಯಾದ ಸಾಲಿಯಬ್ಬೆಯು ತನ್ನ ಗಂಡನ ಜೊತೆ ಯುದ್ಧಭೂಮಿಗೂ ಹೋಗಿ ಅಲ್ಲಿ ಮರಣವನ್ನಪ್ಪಿದ ಸಂಗತಿ ತಿಳಿದುಬರುತ್ತದೆ.[14] ಅಲ್ಲಿಯೇ ಕಾಣ ಬರುವ ಶಿಲ್ಪಫಲಕದಲ್ಲಿ ಸಾಲಿಯಬ್ಬೆಯು ಕುದುರೆಯನ್ನೇರಿ ಕತ್ತಿಯನ್ನು ಹಿಡಿದು, ಆನೆಯ ಮೇಲೆ ಕುಳಿತಿರುವ, ಯೋಧನ ಮೇಲೆ ಯುದ್ಧಮಾಡುವ ದೃಶ್ಯವೂ ಕಂಡು ಬರುತ್ತದೆ.[15]

ರಾಷ್ಟ್ರಕೂಟರ ಕಾಲವಲ್ಲಿ ರಾಣಿಯರು ರಾಜ್ಯಪಾಲರಾಗಿ ಕಾರ್ಯ ನಿರ್ವಹಿಸಿದ ಅಥವಾ ಇನ್ಯಾವ ಆಡಳಿತ ಕಾರ್ಯವನ್ನು ನಡೆಸುತ್ತಿದ್ದರೆಂಬುದಕ್ಕೆ ನಿದರ್ಶನಗಳು ದೊರಕಿಲ್ಲ. ಅಳತೇಕರ್ ಅವರು ಈ ವಿಷಯವನ್ನು ಪ್ರಸ್ತಾಪಿಸುತ್ತ, ಇದು ಸೋಜಿಗದ ಸಂಗತಿ. ಬಹುಶಃ ಮಾತೃಪ್ರಧಾನ್ಯ ವಂಶಕ್ಕೆ ರಾಷ್ಟ್ರಕೂಟರು ಸೇರಿದವ ರಲ್ಲ ಎಂಬ ತೀರ್ಮಾನವನ್ನು ಕೊಟ್ಟಿದ್ದಾರೆ.[16] ಇದು ಎಷ್ಟರ ಮಟ್ಟಿಗೆ ನಿಜ ಎಂದು ಹೇಳಲಾಗುವುದಿಲ್ಲ. ಆದರೆ ರಾಣಿಯರು ಧಾರ್ಮಿಕ ಜೀವನದಲ್ಲಿ ಪಾಲ್ಗೊಳ್ಳುತ್ತಿ ದ್ದರು ಎಂಬುದು ಮಾತ್ರ ಖಚಿತವಾದ ಸಂಗತಿ.

ರಾಷ್ಟ್ರಕೂಟರು ಮತ್ತು ಗಂಗರ ಸಮಕಾಲೀನರೇ ಆದ ನೊಳಂಬರ ಇತಿಹಾಸ ದಲ್ಲಿಯೂ ಅನೇಕ ರಾಣಿಯರು ಪ್ರಮುಖ ಪಾತ್ರ ವಹಿಸಿದ ಸಂಗತಿ ತಿಳಿದುಬರುತ್ತದೆ. ಮೊದಲನೆಯ ಮಹೇಂದ್ರನ ರಾಣಿಯರಾದ ಗಾವಬ್ಬೆ, ಬಿಜ್ಯಮಹಾದೇವಿ, ಪರಮ ಮಹಾದೇವಿ, ಅಕ್ಕಬ್ಬೆ ಮತ್ತು ದೊಂಬಬ್ಬೆಯರು ಮಹೇಂದ್ರನ ಕಾಲದಲ್ಲಿ ರಾಜ್ಯದ ವಿವಿಧ ಭಾಗಗಳನ್ನು ಆಳುತ್ತಿದ್ದರೆಂದು ಹೇಮಾವತಿಯಲ್ಲಿ ದೊರಕಿರುವ ಶಾಸನ ವೊಂದು ತಿಳಿಸುತ್ತದೆ. ಪೋಳಲ್ ಚೋರನ ಅಗ್ರಮಹಷಿಯಾದ ದಿವಬ್ಬರಸಿಯು ಇದೇ ರೀತಿಯಲ್ಲಿ ರಾಜ್ಯವಾಳುತ್ತಿದ್ದಳು.[17] ಪರಮೇಶ್ವರ ಪಲ್ಲವಾಧಿರಾಜನ ರಾಣಿಯಾದ ಗವ ಗಣಬ್ಬೆಯು ಮದರಿಕಲ್ಲಿನಲ್ಲಿ ರಾಜ್ಯವಾಳುತ್ತಿದ್ದಳು.[18] ಇತರ ನೊಳಂಬ ರಾಣಿಯರಾದ ಪೊಲ್ಲಬ್ಬರಸಿ, ಜಯಬ್ಬೆ ಮುಂತಾದವರು ಧಾರ್ಮಿಕ ಕಾರ್ಯಗಳಲ್ಲಿ ಪಾಲ್ಗೊಂಡಿರುವುದು ತಿಳಿಯುತ್ತದೆ.[19]

ತುಳುನಾಡಿನ ಆಳೂಪರ ಇತಿಹಾಸದಲ್ಲಿ ರಾಣಿಯರ ಪಾತ್ರ ಇತರ ರಾಜಮನೆ ತನದವರ ಕಾಲಕ್ಕಿಂತ ಹೆಚ್ಚಿನ ಸ್ಥಾನವನ್ನು ಪಡೆದಿದ್ದಿತೆಂದು ಗೊತ್ತಾಗುತ್ತದೆ. ಬಹುಶಃ ಮಾತೃಪ್ರಧಾನ್ಯ ಪದ್ಧತಿಯನ್ನು ಇವರು ಅನುಸರಿಸುತ್ತಿದ್ದದರಿಂದ, ಇವರಲ್ಲಿ ರಾಣಿಯರಿಗೆ ವಿಶೇಷ ಪ್ರಾಮುಖ್ಯ ಬಂದಿರಬೇಕೆಂದು ಊಹಿಸಬಹುದು. ವೀರಪಾಂಡ್ಯ ಆಳುಪೇಂದ್ರನ ರಾಣಿಯಾದ ಬಲ್ಲಮಹಾದೇವಿಯು ರಾಣಿಯಾಗಿಯೇ ರಾಜ್ಯವನ್ನಾಳಿ ದಳು. ರಾಜ, ಮಂತ್ರಿ, ಅಧಿಕಾರಿಗಳ ಜೊತೆ ರಾಜಸಭೆಯಲ್ಲಿ ಕುಳಿತುಕೊಂಡು ರಾಜ್ಯದ ಆಡಳಿತ ವಿಷಯಗಳನ್ನು ಚರ್ಚಿಸುತ್ತಿದ್ದಳು.[20] ಮತ್ತೊಂದು ಶಾಸನವು ಪಾಂಡ್ಯ ಮಹಾದೇವಿಯು ಪನ್ನೀರ್‌ಪಳ್ಳಿ ಎಂಬ ಗ್ರಾಮದ ಆಡಳಿತವನ್ನು ನಡೆಸು ತ್ತಿದ್ದಳೆಂದು ತಿಳಿಸುತ್ತದೆ.[21] ಪಟ್ಟದ ಪಿರಿಯರಸಿ ಪಟ್ಟಮಹಾದೇವಿಯು ರಾಜ

ಮಾತೆಯಾಗಿ ರಾಜ್ಯವನ್ನಾಳುತ್ತಿದ್ದಳೆಂದು ಕೋಟೀಶ್ವರದ ಶಾಸನವು ತಿಳಿಸುತ್ತದೆ.[22]

ಗೋವೆಯಲ್ಲಿ ಆಳುತ್ತಿದ್ದ ಕದಂಬರ ಇತಿಹಾಸದಲ್ಲಿಯೂ ಅನೇಕ ಉದಾಹರಣೆಗಳು ದೊರೆಯುತ್ತವೆ. ಹಾನುಗಲ್ಲಿನ ದೊರೆ ಮಯೂರವರ್ಮನ ರಾಣಿಯಾದ ಅಕ್ಕಾದೇವಿಯು ಕಿನುಕಾಡು 70, ತಗರೆ 60 ಮತ್ತು ಮಾಸವಾಡಿ 140 ಪ್ರಾಂತ್ಯಗಳನ್ನು ಆಳುತ್ತಿದ್ದಳು.[23] ಇಮ್ಮಡಿ ಜಯಕೇಶಿಯ ರಾಣಿಯಾದ ಮೈಳಾಲದೇವಿಯು ಗೋವೆಯ ರಾಜ್ಯವನ್ನು ಆಳುತ್ತಿದ್ದಳೆಂದು ಶಾಸನವೊಂದು ತಿಳಿಸುತ್ತದೆ.[24] ಕದಂಬ ದೊರೆ ಶಿವಚಿತ್ತನ ರಾಣಿಯಾದ ಕಮಲದೇವಿಯು ದೇಗಾಂವೆಯ ಕಮಲನಾರಾಯಣ ದೇವಾಲಯವನ್ನು ನಿರ್ಮಿಸಿ, ಅದರ ನಿರ್ವಹಣೆಯ ಕಾರ್ಯವನ್ನು ತಿಪ್ಪೋಜನಿಗೆ ವಹಿಸಿದಳು.[25]

ಕಲ್ಯಾಣದ ಚಾಲುಕ್ಯರ ಕಾಲಕ್ಕೆ ಬಂದರೆ ರಾಣಿಯರು ಆಡಳಿತದಲ್ಲಿ ಹೆಚ್ಚಿನ ಪಾತ್ರವನ್ನು ವಹಿಸುತ್ತಿದ್ದರೆಂಬುದಕ್ಕೆ ಸಾಕಷ್ಟು ಉದಾಹರಣೆಗಳು ದೊರೆಯುತ್ತವೆ. ಇವರು ಸುಶಿಕ್ಷಿತರೂ ಆಗಿದ್ದು ದಕ್ಷ ಆಡಳಿತಗಾರರಾಗಿದ್ದು, ಸಣ್ಣ ಪುಟ್ಟ ಪ್ರದೇಶಗಳ ರಾಜ್ಯಪಾಲರಾಗಿದ್ದ ನಿದರ್ಶನಗಳೂ ದೊರೆಯುತ್ತವೆ.

ಕೇತಲದೇವಿಯು ಮೊದಲನೆಯ ಸೋಮೇಶ್ವರನ ರಾಣಿಯಾಗಿದ್ದಳು. ಈಕೆಯು ಅಗ್ರಹಾರ ಪೊನ್ನವಾಡದ ರಾಜ್ಯಪಾಲಳಾಗಿದ್ದಳೆಂದು ಕ್ರಿ.ಶ. 1054ನೆಯ ವರ್ಷದ ಶಾಸನವು ತಿಳಿಸುತ್ತದೆ.[26] ಇಲ್ಲಿಯೇ ದೊರಕಿರುವ ಕ್ರಿ.ಶ. 1062ರ ಮತ್ತೊಂದು ಶಾಸನವೂ ಕೂಡ ಇದೇ ವಿಷಯವನ್ನೇ ತಿಳಿಸುವುದರಿಂದ, ಆಕೆಯು 1062ರಲ್ಲಿಯೂ ರಾಜ್ಯಪಾಲಳಾಗಿಯೇ ಇದ್ದಳೆಂದು ಗೊತ್ತಾಗುತ್ತದೆ.[27] ಈ ಶಾಸನಗಳು ಈಕೆಯನ್ನು ವಿಶೇಷವಾಗಿ ಹೊಗಳಿ ಹಾಡಿವೆ. ಈಕೆ ಚಾಲುಕ್ಯ ರಾಮ ಮಾನಸ ಸರೋಜ ರಾಜಹಂಸೆಯೂ, ಸರಸ್ವತೀ ಕರ್ಣಾವತಂಸೆ ಮತ್ತು ರೂಪವಿದ್ಯಾಧರಿ ಎಂದೆನಿಸಿದ್ದಳು. ಈಕೆಯು ಜನಾನುರಾಗಿಯಾದ ಅನೇಕ ಧಾರ್ಮಿಕ ಕಾರ್ಯಗಳನ್ನು ಕೈಗೊಂಡಿದ್ದಳು. ಈಕೆ ಸಿದ್ಧೇಶ್ವರ ದೇವಾಲಯಕ್ಕೆ ಮತ್ತು ಜಿನಾಲಯಗಳಿಗೆ ದತ್ತಿಗಳನ್ನು ಕೊಡುವುದರ ಮೂಲಕ ಈ ಎರಡೂ ಧರ್ಮಗಳನ್ನು ಸಮಾನವಾಗಿ ಕಾಣುತ್ತಿದ್ದಳೆಂದು ತಿಳಿದು ಬರುತ್ತದೆ.

ಮೊದಲನೆಯ ಸೋಮೇಶ್ವರನ ಮತ್ತೊಬ್ಬ ರಾಣಿಯಾದ ಮೈಳಲದೇವಿಯೂ ಇನ್ನೊಬ್ಬ ಗಣ್ಯ ರಾಣಿಯಾಗಿದ್ದಳು. ಈಕೆಯು ಬನವಾಸಿ ಹನ್ನೆರಡುಸಾವಿರ ಪ್ರಾಂತ್ಯದ ರಾಜ್ಯಪಾಲಳಾಗಿದ್ದಳು.[28] ಬನವಾಸಿಯು ಅತಿ ಮುಖ್ಯ ಪ್ರಾಂತ್ಯಗಳಲ್ಲಿ ಒಂದು ಎಂಬುದನ್ನು ಗಮನಿಸಿದಾಗ, ಈಕೆಯ ಪ್ರಾಮುಖ್ಯವೆಷ್ಟು ಎಂಬುದು ತಿಳಿಯುತ್ತದೆ. ಕ್ರಿ.ಶ. 1053ರಲ್ಲಿ ಈಕೆಯ ಕೈಕೆಳಗಿನ ಅಧಿಕಾರಿಯಾದ ಚಟ್ಟಮಯ್ಯನು ಚಿಲ್ಲುಕಾಚಾರ್ಯ ಎಂಬ ಶೈವಗುರುವಿಗೆ ದತ್ತಿಗಳನ್ನು ಬಿಟ್ಟುಕೊಟ್ಟ ವಿಷಯವನ್ನು ತಿಳಿಸುತ್ತದೆ. ಶಾಸನಗಳಲ್ಲಿ ಈಕೆಯನ್ನು ದಾನಚಿಂತಾಮಣಿ ಎಂದು ಹೊಗಳಲಾಗಿದೆ.[29]

ಇಮ್ಮಡಿ ಸೋಮೇಶ್ವರನಿಗೆ ಕಂಚಲ ಮಹಾದೇವಿ ಎಂಬ ರಾಣಿ ಇದ್ದಳು. ಈಕೆಯು ಮುಳುಗುಂದವನ್ನು ತನ್ನ ರಾಜಧಾನಿಯನ್ನಾಗಿ ಮಾಡಿಕೊಂಡು ಈ ಪ್ರಾಂತ್ಯವನ್ನು ಆಳುತ್ತಿದ್ದಳೆಂದು ಶಾಸನದಿಂದ ತಿಳಿದುಬರುತ್ತದೆ.[30] ಅಂದರೆ ಈಕೆಯೂ ಒಂದು ಪ್ರಾಂತ್ಯದ ರಾಜ್ಯಪಾಲಳಾಗಿದ್ದಳೆಂದು ಗೊತ್ತಾಗುತ್ತದೆ. ಈಕೆಯ ಆಡಳಿತ ಕಾಲದಲ್ಲಿ ಮಹಾರಾಜ ಸೋಮೇಶ್ವರನು ನಂದಿ ಪಂಡಿತದೇವ ಎಂಬ ಜೈನ ಗುರುವಿಗೆ ಗುಡಿಗೆರೆಯನ್ನು ದಾನವಾಗಿ ಕೊಟ್ಟ ವಿಷಯವನ್ನು ಈ ಶಾಸನ ತಿಳಿಸುತ್ತದೆ. ಆಗ ನಡೆದ ಮಹಾಸಭೆಯಲ್ಲಿ ರಾಜ, ಕಂಚಲಮಹಾದೇವಿ, ವರಿಷ್ಠ ಅಧಿಕಾರಿಗಳು ಮತ್ತು ಮಹಾಜನಗಳು ಸಭೆಯಲ್ಲಿ ಭಾಗವಹಿಸಿದ್ದರೆಂದು ತಿಳಿದುಬರುತ್ತದೆ.

ಆರನೆಯ ವಿಕ್ರಮಾದಿತ್ಯನಿಗೆ ಅನೇಕ ಮಹಾರಾಣಿಯರಿದ್ದರು. ಇವರ ಪೈಕಿ ಪದ್ಮಲದೇವಿ, ಪಿರಿಯ ಕೇತಲದೇವಿ ಮತ್ತು ಲಕ್ಷ್ಮೀದೇವಿಯರು ಆಡಳಿತದಲ್ಲಿಯೂ ಪಾಲ್ಗೊಂಡಿದ್ದರು ಎಂಬುದು ಖಚಿತವಾಗಿ ತಿಳಿಯುತ್ತದೆ. ಪದ್ಮಲದೇವಿಯು ಕ್ರಿ.ಶ. 1116ರಲ್ಲಿ ಮುನಗೋಳಿ ಎಂಬ ಪ್ರಾಂತ್ಯದ ರಾಜ್ಯಪಾಲಳಾಗಿದ್ದಳೆಂದು ಶಾಸನವೊಂದು ತಿಳಿಸುತ್ತದೆ.[31] ಈ ಶಾಸನದಿಂದ ತಿಳಿಯುವ ವಿಷಯವೆಂದರೆ ಮುನಗೋಳಿಯ ಮಹಾಜನಗಳು ರಾಣಿ ಪದ್ಮಲದೇವಿಯಲ್ಲಿ ಬಿನ್ನಹ ಮಾಡಿ, ಈ ಗ್ರಾಮವನ್ನು ಅಗ್ರಹಾರವನ್ನಾಗಿ ಮಾಡಿ ನರಸಿಂಹದೇವಾಲಯವನ್ನು ಸ್ಥಾಪಿಸಬೇಕೆಂದು ಬೇಡಿಕೊಂಡರು. ರಾಣಿಯು ಕೂಡಲೆ ತನ್ನ ಒಪ್ಪಿಗೆಯನ್ನು ಕೊಟ್ಟು ತನ್ನ ಕೈಕೆಳಗಿನ ಅಧಿಕಾರಿಯಾದ ಪುಲಿಮೆಯ ನಾಯಕನನ್ನು ಬರಹೇಳಿ ಈ ಕಾರ್ಯವನ್ನು ಕೂಡಲೆ ಮಾಡುವಂತೆ ಅಜ್ಞಾಪಿಸಿದಳು.[32] ಈ ಶಾಸನವು ಪದ್ಮಲದೇವಿಯನ್ನು ಅಭಿನವ ಸರಸ್ವತಿ ಮತ್ತು ದಾನವಿನೋದೆ ಎಂದು ಹೊಗಳಿವೆ.

ಪಿರಿಯ ಕೇತಲದೇವಿಯು ಸಿರಿಗುಪ್ಪೆ, ಕೊಳನೂರು ಮತ್ತು ಸಿರಿಯೂರು ಗ್ರಾಮಗಳನ್ನು ಒಳಗೊಂಡ ಪ್ರಾಂತದ ರಾಜ್ಯಪಾಲಳಾಗಿದ್ದಳು.[33] ಈಕೆಯು ಸಿರಿಗುಪ್ಪೆಯಲ್ಲಿ ಒಂದು ಈಶ್ವರ ದೇವಾಲಯವನ್ನು ಕೇತಾಳೇಶ್ವರ ಎಂಬ ಹೆಸರಿನಲ್ಲಿ ಸ್ಥಾಪಿಸಿದಳು. ಮಹಾಮಂಡಲೇಶ್ವರ ಸಿಂದವಂಶದ ಚಿಕ್ಕರಸನು ಈಕೆಯ ಕೈಕೆಳಗೆ ಅಧಿಕಾರಿಯಾಗಿ ಈ ಕೆಲಸವನ್ನು ನಿರ್ವಹಿಸಿದನು. ಈಕೆಯನ್ನು ಸಂಗೀತ ವಿದ್ಯಾಧರೆ ಎಂದು ಈ ಶಾಸನ ಹೊಗಳಿದೆ. ಇದು ಕೇವಲ ಹೊಗಳಿಕೆಯ ಮಾತಲ್ಲವೆಂಬುದು ಈ ಶಾಸನದಿಂದಲೂ ತಿಳಿಯುತ್ತದೆ; ಏಕೆಂದರೆ ಈ ಶಾಸನದಲ್ಲಿ ಈ ರಾಣಿಯು ಸಂಗೀತಗಾರರಿಗೂ, ನಟರಿಗೂ, ದತ್ತಿಗಳನ್ನು ಕೊಟ್ಟ ವಿಷಯವು ಪ್ರಸ್ತಾಪಿತವಾಗಿದೆ.[34]

ಲಕ್ಷ್ಮೀದೇವಿಯು ಆರನೆಯ ವಿಕ್ರಮಾದಿತ್ಯನ ಮತ್ತೊಬ್ಬ ರಾಣಿ. ಇವಳು ದ್ರೋಣಪುರ ಪ್ರಾಂತ್ಯದ ರಾಜ್ಯಪಾಲಳಾಗಿದ್ದಳೆಂದು ಕ್ರಿ.ಶ.1080ರ ಶಾಸನವೊಂದು ತಿಳಿಸುತ್ತದೆ.[35] ಆಕೆಯು ಆರನೆಯ ಪಟ್ಟದಮಹಿಷಿಯೂ, ಪಿರಿಯ ಅರಸಿಯೂ ಆಗಿದ್ದಳು. ಕ್ರಿ.ಶ. 1084ರ ಶಾಸನವೊಂದರಲ್ಲಿ ಲಕ್ಷ್ಮೀದೇವಿಯು ಕಲ್ಯಾಣದಿಂದ ರಾಜ್ಯವಾಳುತ್ತಿದ್ದಳು ಎಂದು ಉಲ್ಲೇಖಿತವಾಗಿದೆ. ಕ್ರಿ.ಶ. 1095ರ ಮತ್ತೊಂದು

ಶಾಸನದಲ್ಲಿ ಈಕೆಯು ಧರ್ಮಪುರವೂ ಸೇರಿದಂತೆ ಹದಿನೆಂಟು ಅಗ್ರಹಾರಗಳನ್ನು ಆಳು ತ್ತಿದ್ದಳೆಂದು ಹೇಳಿದೆ. ಕ್ರಿ.ಶ. 1109-10ರಲ್ಲಿ ಈಕೆಯು ನಿಟ್ಟಸಂಗಿಯನ್ನು ಆಳುತ್ತಿದ್ದಳು.[36] ಈಕೆಯು ಕೆಲವು ನಾಣ್ಯಗಳನ್ನು ಅಚ್ಚು ಹಾಕಿಸಿದಳೆಂದು ವಿದ್ವಾಂಸರು ಭಾವಿಸಿದ್ದಾರೆ. ಅಂದರೆ ನಾಣ್ಯಗಳನ್ನು ಅಚ್ಚುಹಾಕಿಸುವಷ್ಟು ಪ್ರಮುಖ ಪಾತ್ರವನ್ನು ವಹಿಸಿದ್ದಳೆಂದು ಇದರಿಂದ ತಿಳಿಯುತ್ತದೆ. ಈ ನಾಣ್ಯಗಳಲ್ಲಿ ಲಕುಮಾ ದೇವಿ ಎನ್ನುವ ಬರಹವಿದ್ದು, ಈ ನಾಣ್ಯಗಳು ಕಲ್ಯಾಣ ಚಾಲುಕ್ಯ ಶೈಲಿಗೆ ಸೇರಿವೆ.[37]

ದೊಡ್ಡ ವಂಶಗಳಿಗೆ ಸೇರಿದ ರಾಣಿಯರು ಮಾತ್ರವಲ್ಲದೆ, ಸಾಮಂತ ವಂಶದ ರಾಣಿಯರೂ ಕೂಡ ಆಡಳಿತದಲ್ಲಿ ಪಾತ್ರವಹಿಸುತ್ತಿದ್ದರೆಂದು ತಿಳಿದು ಬರುತ್ತದೆ. ಸತ್ಯಾಶ್ರಯ ಮತ್ತು ಎರಡನೆಯ ಜಯಸಿಂಹ ಮಹಾರಾಜರ ಕಾಲದಲ್ಲಿ ಸಾಮಂತ ನಾಗಿ ಆಳುತ್ತಿದ್ದ ಕುಂದರಾಜನ ಮೂವರು ರಾಣಿಯರು ಗಮನಾರ್ಹರಾದವರು. ಇವನಿಗೆ ಪಂಪಾದೇವಿ, ಕುಂಡಲದೇವಿ ಮತ್ತು ಜೋಗಬ್ಬೆ ಎನ್ನುವ ಮೂವರು ರಾಣಿ ಯರಿದ್ದರು. ಪಂಪಾದೇವಿಯು ಜಿಡಗೂರು ಸೀಮೆಯ ಅಧಿಕಾರಿಯಾಗಿದ್ದಳು, ಕುಂಡಲದೇವಿಯು ಕ್ರಿ.ಶ. 1028ರಲ್ಲಿ ಈಗಿನ ಹಾವೇರಿಯ ಸುತ್ತಮುತ್ತಲ ಪ್ರದೇಶ ವನ್ನು ಆಳುತ್ತಿದ್ದಳು.[38] ಮೂರನೆಯವಳಾದ ಜೋಗಬ್ಬೆಯು 1019ರಲ್ಲಿ ಅಜ್ಜಡಿ ಪ್ರಾಂತದ ಆಡಳಿತವನ್ನು ನಡೆಸುತ್ತಿದ್ದಳು.[39]

ಹೊಯ್ಸಳರ ಕಾಲದಲ್ಲಿಯೂ ಇದೇ ಪದ್ಧತಿಯು ಮುಂದುವರೆಯಿತು. ಹೊಯ್ಸಳರ ಶಾಸನಗಳು ಅನೇಕ ರಾಣಿಯರು ರಾಜ್ಯಪಾಲರಾಗಿದ್ದುದನ್ನು ತಿಳಿಸು ತ್ತದೆ. ವಿನಯಾದಿತ್ಯನ ರಾಣಿಯಾದ ಕೇಳೆಯಬ್ಬರಸಿಯು ಯಾವ ಪ್ರಾಂತ್ಯವನ್ನು ಆಳುತ್ತಿದ್ದಳೆಂದು ತಿಳಿದಿಲ್ಲವಾದರೂ, ಆಕೆಯು ಮರಿಯಾನೆ ದಂಡನಾಯಕನಿಗೆ ಅಸಂದಿನಾಡಿನಲ್ಲಿರುವ ಸಿಂದಿಗೆರೆಯ ಅಧಿಪತ್ಯವನ್ನು ಕೊಡುವಷ್ಟು ಪ್ರಭಾವಿತೆಯಾಗಿ ದ್ದಳು.[40] ಇದರಿಂದ ಅವಳು ರಾಜ್ಯಾಡಳಿದಲ್ಲಿಯೂ ಪ್ರಭಾವಿತೆಯಾಗಿದ್ದಳು ಎಂದು ಗೊತ್ತಾಗುತ್ತದೆ.

ಹೊಯ್ಸಳ ವಂಶದಲ್ಲಿ ಅತ್ಯಂತ ಪ್ರಖ್ಯಾತನಾದ ವಿಷ್ಣುವರ್ಧನ ಮಹಾರಾಜನ ಕಾಲದಲ್ಲಿ ಅವನ ರಾಣಿಯರು ಹೆಚ್ಚಿನ ಪಾತ್ರವನ್ನು ವಹಿಸುತ್ತಿದ್ದರೆಂಬುದು ಗೊತ್ತಾ ಗುತ್ತದೆ. ಅವನಿಗೆ ಅನೇಕ ರಾಣಿಯರಿದ್ದರು. ಶಾಂತಲೆ, ಬಮ್ಮಲದೇವಿ, ರಾಜಲ ದೇವಿ, ಲಕ್ಷ್ಮೀದೇವಿ, ದೇವಕಿ ದೇವಿ ಮುಂತಾದವರು ಶಾಸನಗಳಿಂದ ಖ್ಯಾತರಾಗಿ ದ್ದಾರೆ. ಶಾಂತಲಾದೇವಿಯು ನೃತ್ಯ ಸಂಗೀತಗಳಿಗೆ ಪ್ರಖ್ಯಾತಳಾಗಿದ್ದು ಹೊಯ್ಸಳ ಇತಿಹಾಸದಲ್ಲಿ ಅಮರಳಾಗಿದ್ದಾಳೆ. ಅವಳು ಯಾವ ಪ್ರಾಂತ್ಯದ ರಾಜ್ಯಪಾಲಳಾಗಿದ್ದ ಳೆಂಬುದು ಸರಿಯಾಗಿ ತಿಳಿದಿಲ್ಲ. ಆದರೆ ಸಾಂಸ್ಕೃತಿಕ ಮತ್ತು ಧಾರ್ಮಿಕ ಕಾರ್ಯಗಳಲ್ಲಿ ಅವಳು ಮಹತ್ತರವಾದ ಪಾತ್ರವನ್ನು ವಹಿಸುತ್ತಿದ್ದಳು ಎಂಬುದು ತಿಳಿದು ಬಂದಿದೆ. ವಿಷ್ಣುವರ್ಧನನು ವೈಷ್ಣವನಾದರೂ ಕೂಡ, ಈಕೆಯು ಜೈನಳಾಗಿಯೇ ಇದ್ದು ತನ್ನ ಧರ್ಮವನ್ನು ಪಾಲಿಸಿಕೊಂಡು ಬಂದಳು. ಈ ರೀತಿ ತನ್ನ ಧಾರ್ಮಿಕ ಸ್ವಾತಂತ್ರವನ್ನು

ಕಾಪಾಡಿಕೊಂಡು ಬಂದ ಶ್ರೇಷ್ಠರಾಣಿ ಈಕೆ. ಕ್ರಿ.ಶ. 1123ರಲ್ಲಿ ಇವಳು ಶ್ರವಣ ಬೆಳಗೊಳದ ಸವತಿಗಂಧವಾರಣ ಬಸದಿಯನ್ನು ನಿರ್ಮಿಸಿ, ಅಲ್ಲಿ ಪೂಜಾದಿಗಳಿಗೆ ದತ್ತಿಗಳನ್ನು ಬಿಟ್ಟುಕೊಟ್ಟಳು. ಕ್ರಿ.ಶ. 1131ರಲ್ಲಿ ಇವಳು ಮರಣ ಹೊಂದಿದಳು.[41]

ಆಡಳಿತದಲ್ಲಿ ಹೆಚ್ಚಿನ ಪಾತ್ರವಹಿಸಿದ ವಿಷ್ಣುವರ್ಧನನ ಇನ್ನೊಬ್ಬ ರಾಣಿಯೆಂದರೆ ಬಮ್ಮಲದೇವಿ. ಶಾಂತಲಾದೇವಿಯ ಮರಣಾನಂತರ ಇವಳು ರಾಣಿಯಾದಳು. ಕ್ರಿ.ಶ. 1136ರಿಂದ 38ರತನಕ ಬಮ್ಮಲದೇವಿಯು ಆಸಂದಿ 500, ನಿರಗುಂದ 300 ಪ್ರಾಂತ್ಯಗಳ ಆಡಳಿತಾಧಿಕಾರಿಯಾಗಿದ್ದಳು.[42] ಅವಳ ಕೈಕೆಳಗೆ ನಾಡಪ್ರಭು ಎರಕಗವುಡನು ಕಿಸೂರನ್ನು ಆಳುತ್ತಿದ್ದನು. ಕ್ರಿ.ಶ. 1139ರಲ್ಲಿ ಹಾನುಂಗಲ್ಲಿನಲ್ಲಿ ಆಳುತ್ತಿದ್ದಳೆಂದು ಹೇಳಲಾಗಿದೆ.[43] ಅರಸೀಕೆರೆಯ ಶಾಸನವೊಂದರ ಪ್ರಕಾರ ಈಕೆಯು ಕುದುರೆಯ ತರಬೇತಿಯಲ್ಲಿ ಆಸಕ್ತಿ ವಹಿಸಿದ್ದು ಮಾತ್ರವಲ್ಲದೆ, ಅನಂತಪಾಲ ಎಂಬ ಕುದುರೆ ಸಾಹಣಿಯ ನೇತೃತ್ವದಲ್ಲಿ ನಡೆಯುತ್ತಿದ್ದ ಅಶ್ವಶಾಲೆಯ ಮೇಲ್ವಿಚಾರಕಳೂ ಆಗಿದ್ದಳು.[44] ಬಮ್ಮಲದೇವಿಯು ಶಂಕರನಾರಾಯಣ ದೇವಾಲಯಕ್ಕೆ ದತ್ತಿಗಳನ್ನು ಕೊಟ್ಟುದಲ್ಲದೆ ನಿರಗುಂದನಾಡಿನಲ್ಲಿ ಬಂದು ಬ್ರಹ್ಮಪುರಿಯನ್ನು ಸ್ಥಾಪಿಸಿದಳು.[45]

ಇಮ್ಮಡಿ ಬಲ್ಲಾಳನಿಗೆ ಕೊನೆಯ ಪಕ್ಷ ಏಳು ರಾಣಿಯರಿದ್ದರೆಂದು ತಿಳಿದು ಬರುತ್ತದೆ. ಬಮ್ಮಲದೇವಿ ಅಥವಾ ಮಹಾದೇವಿಯು ಖ್ಯಾತ ರಾಣಿಯೆಂದೂ ಗೊತ್ತಾಗುತ್ತದೆ. ಆದರೆ ಆಡಳಿತದಲ್ಲಿ ಅವಳ ಪಾತ್ರವೇನೆಂಬುದು ತಿಳಿದು ಬಂದಿಲ್ಲ. ಉಮಾದೇವಿಯು ಪ್ರಭಾವಿತೆಯಾದ ರಾಣಿಯಾಗಿದ್ದಳು. ಕ್ರಿ.ಶ. 1209ರಲ್ಲಿ ಇವಳು ಮಗುರೆ 300 ಎಂಬ ಪ್ರಾಂತ್ಯದ ರಾಜ್ಯಪಾಲಳಾಗಿದ್ದಳು.[46] ಇವಳ ಅಧೀನದಲ್ಲಿ ಕುಮಾರ ಪಂಡಿತಯ್ಯ ದಂಡನಾಯಕನು ಆಳುತ್ತಿದ್ದನು. ಮತ್ತೊಬ್ಬ ರಾಣಿಯಾದ ಚೋಳಮಹಾದೇವಿಯು ತನ್ನ ಖಜಾನೆಯ ಅಧಿಕಾರಿಯಾದ ರಾಯಣ್ಣ ನೊಡಿಗೂಡಿ ನೆತ್ತರುಕೊಡುಗೆಯನ್ನು ನೀಡಿದ ವಿಚಾರ ತಿಳಿದುಬರುತ್ತದೆ.[47] ಮತ್ತೊಬ್ಬ ರಾಣಿಯಾದ ಕೇತಲದೇವಿಯು ಪ್ರತಿಭಾವಂತೆಯಾದ ರಾಣಿಯಾಗಿದ್ದಳು. ಲೂಯಿ ರೈಸರ ಪ್ರಕಾರ ರಾಜನು ಯುದ್ಧ ನಿರತನಾಗಿದ್ದಾಗ ಈಕೆಯು ರೀಜಂಟಳಾಗಿದ್ದು ರಾಜ್ಯಾಡಳಿತವನ್ನು ನೋಡಿಕೊಳ್ಳುತ್ತಿದ್ದಳು.[48] ಪದ್ಮಲದೇವಿಯು ಪಟ್ಟದರಸಿ ಎಂಬ ಬಿರುದಿನಿಂದ ಖ್ಯಾತಳಾಗಿದ್ದಳು. ಕ್ರಿ.ಶ. 1212ರಲ್ಲಿ ಬಲ್ಲಾಳನು ವಿಜಯ ಸಮುದ್ರದಲ್ಲಿದ್ದಾಗ ಪದ್ಮಲದೇವಿಯು ಹೊಸಹಡಗಿಲಿ ಪ್ರಾಂತ್ಯವನ್ನು ಆಳುತ್ತಿದ್ದಳು.[49] ಇವಳ ಅಧೀನದಲ್ಲಿ ಪೆರ್ಗಡೆ ಶ್ರೀಕರಣ, ಮಹಾಪಾಸಾಯಿತ ನಾಗಣ್ಣನು ಆಳುತ್ತಿದ್ದನು. ಈ ರೀತಿ ಹೊಯ್ಸಳ ರಾಣಿಯರು ಆಡಳಿತದಲ್ಲಿ ಹೆಚ್ಚಿನ ಆಸಕ್ತಿ ವಹಿಸುತ್ತಿದ್ದರು.

ಈ ಮೇಲಿನ ಸಮೀಕ್ಷೆಯಿಂದ ತಿಳಿದು ಬರುವ ಮುಖ್ಯ ಅಂಶಗಳನ್ನು ಈಗ ಗಮನಿಸಬಹುದು. ಕರ್ನಾಟಕದ ರಾಜರು ಅನೇಕ ರಾಣಿಯರನ್ನು ಹೊಂದಿದ್ದು, ಅವರನ್ನು ವಿದ್ಯಾಬುದ್ಧಿಗೆ ತಕ್ಕಂತೆ ಅವಕಾಶಗಳನ್ನು ಕಲ್ಪಿಸಿಕೊಡುತ್ತಿದ್ದರು.

ಅನೇಕ ರಾಣಿಯರಿದ್ದಾಗ್ಯೂ, ಪಟ್ಟ ಮಹಿಷಿಯ ಸ್ಥಾನವನ್ನು ಒಬ್ಬ ರಾಣಿಗೆ ಮಾತ್ರ ಕೊಡುತ್ತಿದ್ದರು. ಆಕೆಯ ಮರಣಾನಂತರ ಇನ್ನೊಬ್ಬಳನ್ನು ಪಟ್ಟಮಹಿಷಿಯಾಗಿ ಸ್ವೀಕರಿಸುತ್ತಿದ್ದರು. ವಿಶೇಷವಾಗಿ ರಾಣಿಯರು ಸಣ್ಣಪುಟ್ಟ ಪ್ರಾಂತ್ಯಗಳ ರಾಜ್ಯಪಾಲರಾಗಿ ಆಡಳಿತದಲ್ಲಿ ಆಸಕ್ತಿ ವಹಿಸುತ್ತಿದ್ದರು. ಜೊತೆಗೆ ಧಾರ್ಮಿಕ ಮತ್ತು ಸಾಂಸ್ಕೃತಿಕ ಕಾರ್ಯಗಳಲ್ಲಿ ಅವರಿಗೆ ವಿಶೇಷ ಆಸಕ್ತಿ ಇದ್ದಿತು. ದೇವಾಲಯ ನಿರ್ಮಾಣ, ದತ್ತಿ ಕೊಡುವಿಕೆ, ಅಗ್ರಹಾರ ಮತ್ತು ಬ್ರಹ್ಮಪುರಿಗಳ ನಿರ್ಮಾಣ ಮುಂತಾದ ಕೆಲಸಗಳನ್ನು ಅವರು ಹೆಚ್ಚಿಗೆ ಮಾಡುತ್ತಿದ್ದರು. ಸಂಗೀತ, ನೃತ್ಯ ಮುಂತಾದ ಕಲೆಗಳಲ್ಲಿಯೂ ಅವರು ಆಸಕ್ತಿ ವಹಿಸುತ್ತಿದ್ದರು. ಅವರು ಯುದ್ಧದಲ್ಲಿ ಭಾಗವಹಿಸುತ್ತಿದ್ದರೆಂಬುದಕ್ಕೆ ಯಾವ ಆಧಾರಗಳೂ ದೊರಕಿಲ್ಲ. ಒಟ್ಟಿನಲ್ಲಿ ಹೇಳುವುದಾದರೆ ಆ ಕಾಲದ ರಾಜಕೀಯಕ್ಕಿಂತ, ರಾಣಿಯರಿಗೆ ಆಡಳಿತ, ಧಾರ್ಮಿಕ ಮತ್ತು ಸಾಂಸ್ಕೃತಿಕ ಕಾರ್ಯಗಳಲ್ಲಿಯೇ ಹೆಚ್ಚಿನ ಆಸಕ್ತಿ ಇದ್ದಿತೆಂದು ಖಚಿತವಾಗಿ ಹೇಳಬೇಕಾಗುತ್ತದೆ.

ಟಿಪ್ಪಣಿಗಳು

1. ಎಪಿ ಇಂ (ಎಪಿಗ್ರಾಫಿಯ ಇಂಡಿಕ), 32, ಪು. 317
2. ಇಂ, ಆ (ಇಂಡಿಯನ್ ಆಂಟಿಕ್ವೇರಿ), 8, ಪು. 167
3. ಎಪಿ ಇಂ. 3, ಪು. 1
4. ಇಂ ಆ. 7. ಪು. 163
5. ಶಾಸನವರದಿ 1926–27, ಪು. 10
6. ಎಪಿ ಇಂ, 25 ಪು. 289
7. ಇಂ ಆ, 10, ಪು. 60
8. ಎಪಿ ಇಂ. 10, ಪು. 100
9. ಅದೇ 9, ಪು. 200
10. ಷೇಕ್ ಅಲಿ : ಹಿಸ್ಟರಿ ಆಫ್ ದಿ ವೆಸ್ಟರ್ನ್ ಗಂಗಾಸ್, ಪು. 173
11. ಅದೇ
12. ಅದೇ
13. ಎಂ, ಎಆರ್, 1911, ಪು. 38
14. ಎಪಿ ಕ, 2, ಶಾಸನ 318
15. ಅದೇ
16. ಆಳತೇಕರ್, ರಾಷ್ಟ್ರಕೂಟಾಸ್ ಅಂಡ್ ದೇರ್ ಟೈಮ್ಸ್, ಪು 153
17. ಕೃಷ್ಣಮೂರ್ತಿ; ನೊಳಂಬಾಸ್ ; ಪು. 139
18. ಅದೇ

19. ಅದೇ
20. ಶಾಸನವರದಿ, 1931–32, ಶಾಸನ 257
21. ಅದೇ 1964–65, ಶಾಸನ 478
22. ಸೌ ಇಂಇ (ಸೌತ್ ಇಂಡಿಯನ್ ಇನ್‌ಸ್ಕ್ರಿಪ್ಷನ್) 9, ಭಾಗ 1, ಶಾಸನ 395
23. ಎಪಿ ಇಂ; 15, ಪು. 78
24. ಶಾಸನವರದಿ 1950–51, ಶಾಸನ 92
25. ಜೆ ಬಿ ಬಿ ಆರ್ ಎ ಎಸ್ ; 9, ಪು. 275
26. ಇಂ ಆ, 29, ಪು. 270
27. ಶಾಸನವರದಿ 1933–34 ಶಾಸನ 169
28. ಶಾಸನವರದಿ 1932–33, ಶಾಸನ 72
29. ಎಪಿ ಇಂ, 16, ಪು. 338
30. ಶಾಸನವರದಿ 1938–39, ಪು. 270
31. ಸೌ ಇಂ ಇ, 9, ಭಾಗ 1, ಪು. 4
32. ಅದೇ
33. ಅದೇ, ಪು. 145
34. ಅದೇ
35. ಸೌ ಇಂ ಇ, 9, ಭಾಗ 1, ಪು. 145
36. ಎಪಿ ಇಂ, 15, ಪು. 100
37. ನರಸಿಂಹಮೂರ್ತಿ ; ಕಾಯಿನ್ಸ್ ಆಫ್ ಕರ್ನಾಟಕ, ಪು. 84
38. ಎಪಿ ಇಂ, 15, ಪು, 329
39. ಶಾಸನವರದಿ 1932–33, ಶಾಸನ 124
40. ಎಪಿ ಕ, 2, ಶಾಸನ 349
41. ಅದೇ, ಶಾಸನ 143
42. ಅದೇ, 5, ಅರಸೀಕೆರೆ 32
43. ಅದೇ, 12, ಗುಬ್ಬಿ 13
44. ಅದೇ, 5, ಅರಸೀಕೆರೆ 58
45. ಅದೇ, 12, ಗುಬ್ಬಿ 13
46. ಅದೇ, 5, ಅರಸೀಕೆರೆ 40
47. ಅದೇ, 5, ಚನ್ನರಾಯಪಟ್ಟಣ 205
48. ಅದೇ. 6, ಮುಸ್ನುಡಿ, ಪು. 18
49. ಶಾಸನವರದಿ 1915, ಪು. 114.

* * *

ಕರ್ಣಾಟಕದ ರಾಣಿಯರು ರಾಜ್ಯದ ಸಾಮಾಜಿಕ ಮತ್ತು ಧಾರ್ಮಿಕ ಕ್ಷೇತ್ರಗಳಲ್ಲಿ ಮಾತ್ರವೇ ಅಲ್ಲದೆ, ರಾಜಕೀಯ ಕ್ಷೇತ್ರದಲ್ಲೂ ಪ್ರಧಾನ ಪಾತ್ರವನ್ನು ವಹಿಸುತ್ತಿದ್ದರು. ರಾಜನು ತನ್ನ ರಾಣಿಯರನ್ನು ರಾಜ್ಯದ ಬೇರೆ ಬೇರೆ ಭಾಗಗಳನ್ನಾಳಲು ನೇಮಿಸುತ್ತಿದ್ದನು. ಕ್ರಿ.ಶ. ಸು. 920ರಲ್ಲಿ ಬೂತುಗನ ಅರಸಿ ಸರಮಬ್ಬೆಯು ಕುಗ್ಗಿಗಲ್ಲನ್ನು ಆಳುತ್ತಿದ್ದ ವಿಚಾರ ಶಾಸನವೊಂದರಿಂದ ತಿಳಿದು ಬಂದಿದೆ. ಅಂತೆಯೇ ಕ್ರಿ.ಶ. 997ರಲ್ಲಿ ಶ್ರೀಮಚ್ಚಾಳುಕ್ಯ ಪೆರ್ಮಾನಡಿ ದೇವರ ಮಗಳು ಪಂಪಾದೇವಿಯು ರಾಜ್ಯಾಡಳಿತ ನಡೆಸುತ್ತಿದ್ದ ಸಂಗತಿ ಶಾಸನದಲ್ಲಿ ವ್ಯಕ್ತವಾಗಿದೆ. ಕೆಲವೊಮ್ಮೆ ರಾಣಿಯರು ರಾಜ್ಯದ ರಾಜಧಾನಿಯಲ್ಲೇ ಇದ್ದುಕೊಂಡು ಬೇರೆ ಬೇರೆ ಭಾಗಗಳ ಆಡಳಿತ ನಡೆಸುತ್ತಿದ್ದರೆಂಬುದಕ್ಕೆ ಶಾಸನದ ಆಧಾರ ದೊರೆಯುತ್ತದೆ.

ಪ್ರಾಚೀನ ಕಾಲದಲ್ಲಿ ರಾಜಕುಮಾರಿಯರಿಗೆ ಪೂರ್ವಭಾವಿಯಾಗಿ ಅಗತ್ಯ ಶಿಕ್ಷಣ ಪಡೆಯುವ ವ್ಯವಸ್ಥೆ ಇದ್ದಿರಬೇಕೆಂದು ಊಹಿಸಲಾಗಿದೆ. ಬಾದಾಮಿ ಚಾಳುಕ್ಯರ ಚಂದ್ರಾದಿತ್ಯನ ರಾಣಿ ವಿಜಯ ಭಟ್ಟಾರಿಕೆ ಸ್ವತಃ ಕವಯಿತ್ರಿಯಾಗಿದ್ದು ರಾಜ್ಯದ ಆಡಳಿತವನ್ನೂ ನೋಡಿಕೊಳ್ಳುತ್ತಿದ್ದಳು. ರಾಷ್ಟ್ರಕೂಟರ ಕಾಲದಲ್ಲಿ ನಾಗರ ಖಂಡದ ನಾಳ್ಗಾವುಂಡ ತನ್ನ ಅರಸನಿಗಾಗಿ ಹೋರಾಡಿ ಮಡಿದಾಗ ಅವನ ಮಡದಿ ಜಕ್ಕಿಯಬ್ಬೆ ಪ್ರಾಂತಾಧಿಕಾರ ವಹಿಸಿಕೊಂಡು ನಿರ್ವಹಿಸಿದಳು. ಕಲ್ಯಾಣದ ಚಾಳುಕ್ಯರ ಕಾಲದಲ್ಲಿ ಕಿಸುಕಾಡಿನ ಸತ್ಯಾಶ್ರಯನ ಮಗಳಾದ ಅಕ್ಕಾದೇವಿ ಪ್ರಾಂತಾಧಿಕಾರಣಿಯಾಗಿ ಅಧಿಕಾರ ನಡೆಸಿದಳು. ಕಳಚುರ್ಯ ಸೋವಿದೇವನ ರಾಣಿ ಸೋವಲಾದೇವಿ ವಿದ್ವಜ್ಜನರ ಸಭೆಯಲ್ಲಿ ನೃತ್ಯಕಲಾಪ್ರದರ್ಶನವಿತ್ತು ಮೆಚ್ಚುಗೆ ಪಡೆದಿದ್ದಳು!

* * *

ಆರ್. ರಾಮಕೃಷ್ಣ

ಗತಕಾಲದ ಗುಪ್ತನಿಧಿ ಅರಬ್ಬೀ ಮಲಯಾಳ: ಒಂದು ಪರಿಚಯ

ಪ್ರಪಂಚದ ಪ್ರತಿಯೊಂದು ರಾಷ್ಟ್ರದ ಸಂಸ್ಕೃತಿಯಲ್ಲೂ ಪ್ರಧಾನ ಅಂಶವೊಂದಿರುತ್ತದೆ. ಉದಾಹರಣೆಗೆ ಈಜಿಪ್ಟ್ ಸಂಸ್ಕೃತಿಯಲ್ಲಿ ಸಾಮ್ರಾಜ್ಯತತ್ವ, ಚೀನಾ ಸಂಸ್ಕೃತಿಯಲ್ಲಿ ನೀತಿ, ಗ್ರೀಕ್ ಸಂಸ್ಕೃತಿಯಲ್ಲಿ ಕಲೆ ಮತ್ತು ಸ್ವಾತಂತ್ರ್ಯಾಕಾಂಕ್ಷೆ, ರೋಮನ್ ಸಂಸ್ಕೃತಿಯಲ್ಲಿ ಕಾನೂನು ಕಟ್ಟಳೆ, ಅರೇಬಿಯನ್ ಸಂಸ್ಕೃತಿಯಲ್ಲಿ ಮತಾಭಿಮಾನ ಪ್ರಧಾನ ಅಂಶಗಳು. ಈ ಪ್ರಾಚೀನ ಸಂಸ್ಕೃತಿಗಳಲ್ಲಿ ರಾಜಕೀಯ, ಆರ್ಥಿಕ ಅಥವಾ ಮತೀಯ ಅಂಶಗಳೇ ಪ್ರಧಾನವಾಗಿ ಪರಿಣಮಿಸಿದುದರಿಂದ ಕಾಲಕ್ರಮೇಣ ಅವು ಅವನತಿಗೀಡಾದುವು. ಆದರೆ ಪ್ರಾಚೀನ ಸಂಸ್ಕೃತಿಗಳಲ್ಲಿ ಒಂದಾದ ಭಾರತೀಯ ಸಂಸ್ಕೃತಿ ಮಾತ್ರ ಇಂದಿಗೂ ಜೀವಂತವಾಗಿ ಪ್ರಪಂಚ ಪ್ರಸಿದ್ಧಿಯನ್ನು ಪಡೆದಿದೆ. ಭಾರತೀಯರ ಮತ-ಧರ್ಮ, ಆಚಾರ-ವಿಚಾರ, ಸತ್ಯ-ಸೌಂದರ್ಯ, ಸೌಜನ್ಯ-ಸುಗುಣಗಳ ಅನ್ವೇಷಣೆ, ತತ್ತ್ವವಿವೇಚನೆ, ಕಲೆ, ವಾಸ್ತುಶಿಲ್ಪ, ವ್ಯಾಪಾರ ವಾಣಿಜ್ಯ ವ್ಯವಹಾರ ಮುಂತಾದ ಎಲ್ಲ ಅಂಶಗಳಲ್ಲೂ ಆಧ್ಯಾತ್ಮಿಕ ದೃಷ್ಟಿಯೇ ಪ್ರಮುಖವಾಗಿರುವುದರಿಂದ ನಮ್ಮ ಸಂಸ್ಕೃತಿಯ ಪ್ರತಿಯೊಂದು ಅಂಶಕ್ಕೂ ವಿಶಿಷ್ಟತೆ ಲಭಿಸಿದೆ. ಪ್ರಪಂಚದ ಅನೇಕ ಜನಾಂಗಗಳೂ ಸಂಸ್ಕೃತಿಗಳೂ ಭಾಷೆಗಳೂ ಭಾರತದಲ್ಲಿ ತಮ್ಮ ಪ್ರಭಾವವನ್ನು ಬೀರಿದ್ದರೂ ಭಾರತೀಯ ಸಂಸ್ಕೃತಿ ಅವನ್ನು ವಿಶಿಷ್ಟ ಬಗೆಯಲ್ಲಿ ತನ್ನದಾಗಿಸಿಕೊಂಡಿದೆ. ಇದಕ್ಕೆ ಮುಖ್ಯ ಕಾರಣ ಭಾರತೀಯರ ಆಧ್ಯಾತ್ಮಿಕ ದೃಷ್ಟಿ, ಸಹನೆ ಮತ್ತು ಸಹಕಾರ. ಈ ತ್ರಿವೇಣಿ ಸಂಗಮದ ಫಲಸ್ವರೂಪಗಳ ಪೈಕಿ ಅರಬ್ಬೀ ಮಲಯಾಳವೂ ಒಂದಾಗಿದೆ.

ಭಾರತೀಯರ ಸಂಸ್ಕೃತಿ, ನಾಗರಿಕತೆಗಳ ಉನ್ನತಿ, ಅಸಾಧಾರಣ ಖನಿಜ ಸಂಪತ್ತು ಮುಂತಾದವುಗಳ ಮೇಲೆ ವಿದೇಶಿಯರು ತಮ್ಮ ಗೃಧ್ರ ದೃಷ್ಟಿ ಹರಿಸಿದ್ದರು. ಪ್ರಾಚೀನ ಕಾಲದಿಂದಲೂ ಭಾರತ ಸಾಮಾನ್ಯ ವಸ್ತುಗಳ ಜೊತೆಗೆ ಪಾಶ್ಚಾತ್ಯ ರಾಷ್ಟ್ರ

ಅರಬ್ಬರು ಕೇರಳೀಯರೊಡನೆ ವ್ಯಾಪಾರ ಪ್ರಾರಂಭಿಸಿದ ತರುಣದಲ್ಲಿ ಅವರಿಗುಂಟಾದ ಮುಖ್ಯ ತೊಂದರೆಯೆಂದರೆ ಭಾಷಾಮಾಧ್ಯಮದ್ದು. ತಮ್ಮ ಭಾವನೆಗಳನ್ನು ಸಮರ್ಥವಾಗಿ ಅಭಿವ್ಯಕ್ತಿಸಲು, ವಿಚಾರ ವಿನಿಮಯಗಳನ್ನು ಸ್ಪಷ್ಟವಾಗಿ ನಡೆಸಲು ಸಮರ್ಥ ಭಾಷಾಮಾಧ್ಯಮದ ಅವಶ್ಯಕತೆ ಉಂಟಾಯಿತು. ಅವರ ವ್ಯವಹಾರವೆಲ್ಲಾ ಹರುಕು ಮುರುಕು ಮಲಯಾಳದಲ್ಲೇ ನಡೆಯುತ್ತಿತ್ತು. ಭಾಷಾ ತೊಂದರೆಯಿಂದಾಗಿ ಅವರ ವ್ಯವಹಾರದಲ್ಲಿ ಆಗಾಗ್ಗೆ ಅಡಚಣೆಯುಂಟಾಗುತ್ತಿತ್ತು. ಆದರೂ ಅರಬ್ಬರು ಸ್ಥಳೀಯರ ವಿಶ್ವಾಸವನ್ನು ಕಳೆದುಕೊಳ್ಳಲು ಇಚ್ಛಿಸದೆ, ಕೇರಳದ ಉತ್ಪನ್ನಗಳ, ಸ್ಥಳಗಳ, ವಾಣಿಜ್ಯ ಸರಕುಗಳ ಹೆಸರುಗಳನ್ನು ಮಲಯಾಳ ಭಾಷೆಯ ಅನೇಕ ಪದಗಳನ್ನೂ ನುಡಿಗಟ್ಟುಗಳನ್ನೂ ಅರಬಿಕ್ ಲಿಪಿಯಲ್ಲಿ ಬರೆಯಲು ಪ್ರಯತ್ನಿಸಿದರು. ಇಷ್ಟೇ ಅಲ್ಲದೆ ಕೇರಳದಲ್ಲಿಯ ತಮ್ಮ ಪರಿಚಿತರಿಗೆ ಬಂಧುಬಾಂಧವರಿಗೆ ಅರಬಿಕ್ ಲಿಪಿಯನ್ನು ಬಳಸಿ ಮಲಯಾಳದಲ್ಲಿ ಪತ್ರ ಬರೆಯಲೂ ಪ್ರಯತ್ನಪಟ್ಟರು. ಇದರಿಂದಾಗಿ ಅರಬ್ಬೀ–ಮಲಯಾಳ ಎಂಬ ನೂತನ ಪ್ರಭೇದ ರೂಪುಗೊಳ್ಳಲು ಸಾಧ್ಯವಾಯಿತು.

* * * * *

ಕಾಜಿ ಮೊಹಮ್ಮದನ 'ಮೊಹಿಯದೀನ್ ಮಾಲಾ' ಎಂಬುದೇ ಅರಬ್ಬೀ ಮಲಯಾಳದ ಮೊತ್ತಮೊದಲ ಬರೆಹವೆಂದು ಪರಿಗಣಿಸಲಾಗಿದೆ. ಮಾಣಿಕ್ಯ ಮತ್ತು ಹವಳ ಬಳಸಿ ಈ ಪದ್ಯಕಾವ್ಯ ರಚಿಸಿದ್ದೇನೆ ಎಂಬುದಾಗಿ ಕವಿಯೇ ಹೇಳಿಕೊಂಡಿದ್ದಾನೆ. ಇದರಿಂದ ಸ್ಪಷ್ಟವಾಗುವ ಸಂಗತಿಯೆಂದರೆ ಕವಿ ಮಣಿಪ್ರವಾಳ ಶೈಲಿಯನ್ನು (ಮಣಿ–ಮಾಣಿಕ್ಯ, ಪ್ರವಾಳ–ಹವಳ, ಸಂಸ್ಕೃತ ಮತ್ತು ಮಲಯಾಳದ ಮಧುರ ಸಂಗಮದಿಂದ ಅವತರಿಸಿದ ಸಾಹಿತ್ಯಕ ಶೈಲಿ) ಅನುಸರಿಸಿದ್ದಾನೆಂದು ತಿಳಿದುಬರುತ್ತದೆ.

ಮಲಯಾಳ ಸಾಹಿತ್ಯದ ಜನಪ್ರಿಯ ಕವಿ ಎಟುತಚ್ಛನ್ ಮತ್ತು ಕಾಜಿ ಮೊಹಮ್ಮದ್ ಇಬ್ಬರೂ ಸಮಕಾಲೀನರು. ಇವರ ಶೈಲಿಗಳೂ ಪರಸ್ಪರ ಹೋಲುತ್ತವೆ. ಇಬ್ಬರೂ ಜನಸಾಮಾನ್ಯರ ಭಾಷೆಯನ್ನೇ ಬಳಸಿಕೊಂಡು ಕಾವ್ಯ ರಚಿಸುವ ಪ್ರಯತ್ನ ಮಾಡಿದರು. ಭಾಷಾಶೈಲಿಯಲ್ಲಿ ಮಾತ್ರವೇ ಅಲ್ಲದೆ ದೈವಾರಾಧನೆ ವಿಷಯದಲ್ಲೂ ಎಟುತಚ್ಛನ್‌ನಿಂದ ಕಾಜಿ ಮೊಹಮ್ಮದ್ ಪ್ರಭಾವಿತನಾಗಿದ್ದಾನೆ. ಎಟುತಚ್ಛನ ರಾಮಾಯಣ ಕೇರಳೀಯರ ಪಾರಾಯಣ. ರಾಮಾಯಣದಲ್ಲಿ ಶ್ರೀರಾಮ ಮತ್ತು ಸೀತಾದೇವಿ ಇಬ್ಬರೂ ಲೋಕಕಲ್ಯಾಣಕ್ಕಾಗಿ ಭೂಮಿಯಲ್ಲಿ ಅವತರಿಸಿದಂಥವರು (ದೇವಾಂಶ ಸಂಭೂತರು). ಮೊಹಿಯದೀನ್ ಮಾಲಾ ಕಾವ್ಯದ ಶೂರ ಮತ್ತು ಪ್ರಧಾನ ಪಾತ್ರ ಶೇಕ್ ಮೊಹಿಯದೀನ್. (ಶೇಕ್ ಮೊಹಿಯದೀನ್ ಒಬ್ಬ ಸೂಫಿ ಸಂತ). ಈತ ದೇವಾಂಶ ಸಂಭೂತ. ಭಗವಂತನ ಒಂದು ರೂಪ ಅಥವಾ ಶಕ್ತಿ. ಈ ಕಾವ್ಯ ಇಸ್ಲಾಮೇತರ ಅಂಶಗಳನ್ನು ಒಳಗೊಂಡಿದೆ ಎಂಬುದಾಗಿ ಇಸ್ಲಾಮ್ ಪಂಡಿತರು ಸ್ಪಷ್ಟಪಡಿಸಿದ್ದಾರೆ.

ತಮಿಳು ಭಾಷೆಯಿಂದ ಅಥವಾ ಮೂಲ ದ್ರಾವಿಡ ಭಾಷೆಯಿಂದ ಮಲಯಾಳ ಬೇರೆಯಾಗುವ ಮುಂಚೆ ಬಳಕೆಯಲ್ಲಿದ್ದ ಶಬ್ದಗಳೂ ಪದಗಳೂ ನುಡಿಗಟ್ಟುಗಳೂ ಅರಬ್ಬೀ ಮಲಯಾಳದಲ್ಲಿ ಬಳಕೆಯಾಗಿವೆ. ಅರಬ್ಬೀ ಮಲಯಾಳ ಬರೆಹಗಾರರು ಮಲಯಾಳದ ಆಧುನಿಕ ರೂಪದಲ್ಲಿ ಹೆಚ್ಚು ಪರಿಣತಿ ಗಳಿಸಿರಲಿಲ್ಲ. ಆದುದರಿಂದ ಅವರು ಪಾಂಡಿತ್ಯಪೂರ್ಣ ಶೈಲಿಯಲ್ಲಿ ಕೃತಿಯನ್ನು ರಚಿಸಲು ಸಾಧ್ಯವಾಗಲಿಲ್ಲ. ಅವರ ಅನೇಕ ಕೃತಿಗಳಲ್ಲಿ ವ್ಯಾಕರಣಾತ್ಮಕ ದೋಷಗಳನ್ನು ಕಾಣಬಹುದು. ಎಲ್ಲಕ್ಕಿಂತ ಹೆಚ್ಚಾಗಿ ಅವರು ಅನ್ಯಭಾಷಾ ಪದಗಳನ್ನೇ ತಮ್ಮ ಕೃತಿಗಳಲ್ಲಿ ವಿಪುಲವಾಗಿ ಬಳಸಿದ್ದಾರೆ. ಮಲಯಾಳ ಭಾಷೆಯ ರಚನೆಯನ್ನು ಗಮನಿಸದೆ ರಚಿಸಿದಂಥ ಕೆಲವು ಕೃತಿಗಳು ಕೃತಕವೆನಿಸಿವೆ, ಕ್ಷುಲ್ಲಕವೆನಿಸಿವೆ. ಈ ಎಲ್ಲ ಕಾರಣಗಳಿಂದ ಅರಬ್ಬೀ ಮಲಯಾಳ ಸುಧಾರಿತ ಅಥವಾ ಮುಂದುವರಿದ ಭಾಷೆಯಾಗಲು ಸಾಧ್ಯವಾಗಲಿಲ್ಲ. ಯಾವ ಉದ್ದೇಶಕ್ಕಾಗಿ ಇದನ್ನು ಸೃಷ್ಟಿಸಲಾಯಿತೋ ಆ ಉದ್ದೇಶವೇ ಮರೆಯಾದ ತರುವಾಯ ಇದರ ಉಳಿವು ಹೇಗೆ ಸಾಧ್ಯ? ಕೇರಳದ ಮುಸ್ಲಿಮರಿಗೂ ಸಹ ಇದರ ಅವಶ್ಯಕತೆ ಉಂಟು ಎನಿಸಲಿಲ್ಲ.

ಇಷ್ಟಾದರೂ ನಾವು ಅರಬ್ಬೀ ಮಲಯಾಳ ಭಾಷೆ, ಸಾಹಿತ್ಯದ ಪ್ರಾಮುಖ್ಯ ವನ್ನು ಕಡೆಗಣಿಸಲು ಸಾಧ್ಯವಿಲ್ಲ. ಏಕೆಂದರೆ ಇತಿಹಾಸ, ಕಥೆ, ಕಾದಂಬರಿ, ವಿಮರ್ಶೆ, ಅವಲೋಕನ, ವಿಜ್ಞಾನ, ಕೋಶ ನಿರ್ಮಾಣ ಇತ್ಯಾದಿ ಕ್ಷೇತ್ರಗಳಿಗೆ ಸಂಬಂಧಿಸಿದಂತೆ ಅಪೂರ್ವ ಜ್ಞಾನಭಂಡಾರ ಈ ಭಾಷೆಯಲ್ಲಿ ದೊರೆಯುತ್ತದೆ. ಈ ಎಲ್ಲ ಕ್ಷೇತ್ರಗಳಿಗೆ ಸಂಬಂಧಿಸಿದ ಪುಸ್ತಕಗಳು ಗದ್ಯರೂಪದಲ್ಲೂ ಇವೆ, ಪದ್ಯರೂಪದಲ್ಲೂ ಇವೆ.

ಮೊಹಿಯದೀನ್ ಮಾಲಾ ಮೊತ್ತಮೊದಲ ಕೃತಿಯಾದರೂ ಅದಕ್ಕೂ ಪೂರ್ವ ದಲ್ಲಿ ಲಾವಣಿಗಳಿದ್ದವು (ಕಥನಗೀತೆ). ಇವು ಸುಂದರ 'ಸಂಗೀತ ಲಹರಿ'ಗಳು ಎಂಬುದಾಗಿ ಭಾವಿಸಿರುವವರುಂಟು.

ಜಾಮೊರಿನ್ ದೊರೆಯ ಆಸ್ಥಾನದಲ್ಲಿ ವಿದೂಷಕನಾಗಿದ್ದ (ಅಥವಾ ಸಲಹೆಗಾರ ನಾಗಿದ್ದ) ಕುನ್‌ಹಯನ್ ಮುಸಲಿಯರ್ ಎಂಬಾತ ಅನೇಕ ಆಧ್ಯಾತ್ಮಿಕ ಗೀತೆಗಳನ್ನು ಬರೆದಿದ್ದಾನೆ. ಈ ಗೀತೆಗಳ ಪೈಕಿ ಕಪ್ಪಪ್ಪಾಟ್ಟು ಎಂಬುದು ಹೆಸರಾಂತ ಕೃತಿ. ಕಪ್ಪಪ್ಪಾಟ್ಟು ಎಂದರೆ ಹಡಗಿನ ಹಾಡು ಎಂದರ್ಥ. ಜೀವನವೆಂಬ ಸಮುದ್ರದಲ್ಲಿ ತೇಲುತ್ತಿರುವ ಹಡಗಿಗೆ ಮಾನವ ದೇಹವನ್ನು ಪ್ರತಿಮಾತ್ಮಕವಾಗಿ ಕವಿ ಬಳಸಿದ್ದಾನೆ. ಈ ಕೃತಿಯಲ್ಲಿ ಹಿಂದೂ ಸಂಸ್ಕೃತಿ ಪ್ರಭಾವ ದಟ್ಟವಾಗಿದೆ. ಸ್ವರ್ಗದಲ್ಲಿಯ ಭಗವಂತ ನನ್ನು (ಪ್ರವಾದಿ) ಅವನ ನಿಜಸ್ವರೂಪವನ್ನು ಕಾಣಲು ಕವಿ ಪ್ರಾರ್ಥಿಸಿದ್ದಾನೆ. ಉತ್ತರ ರಾಮಾಯಣದಲ್ಲೂ ಇಂಥದೇ ಒಂದು ಪ್ರಸಂಗವಿದೆ.

ಕೊಂದೊತ್ತಿಯ ಮೊಯಿದೀನ್ ಕುಟ್ಟಿ ವೈದ್ಯರ್ ಎಂಬಾತ ಅರಬ್ಬೀ ಮಲಯಾಳದ ಹೆಸರಾಂತ ಜನಪ್ರಿಯ ಕವಿ. ಇವನ ಕವನಗಳು ಹೆಚ್ಚು ಮನ್ನಣೆ ಗಳಿಸಿವೆ. ಬಾಬರನ ಯುದ್ಧಗಳ ಇತಿಹಾಸ, ಪ್ರವಾದಿ ಮೊಹಮ್ಮದನ ಸಾಧನೆ

ಮುಂತಾದವುಗಳ ಜೊತೆಗೆ ಬದ್ರುಲ್ ಮುನೀರ್ ಹುಸ್ನೈನುಲ್ ಜಮಾಲ್ ಇವರಿಬ್ಬರನ್ನು ಕುರಿತಂತೆ ಪ್ರೇಮಕಥಾ ಕಾವ್ಯವನ್ನು ಬರೆದಿದ್ದಾನೆ. ಈ ಕಾವ್ಯದ ಪ್ರಧಾನ ರಸ ಶೃಂಗಾರ. ಕೇರಳ ಸಾಹಿತ್ಯದ ಅರಬ್ಬೀ ಮಲಯಾಳದ ಮಹಾನ್ ಕೃತಿಗಳ ಪೈಕಿ ಇದೂ ಒಂದೆಂದು ಆದರಿಸಲಾಗಿದೆ. ಅರಬ್ಬೀ ಮಲಯಾಳದ ಗದ್ಯಕೃತಿಗಳ ಪ್ರಾರಂಭದಲ್ಲಿ ಖುರಾನ್ ಪವಿತ್ರ ಗ್ರಂಥದ ವ್ಯಾಖ್ಯಾನ ಹಾಗೂ ಪ್ರವಾದಿ ಮೊಹಮ್ಮದನ ಸೂಕ್ತಿಗಳ ಅರ್ಥ ವಿವರಣೆ ಕೆಲಸ ನಡೆಯಿತು. ಕಣ್ಣಾನೂರು ಅರಕಲ್ಲಿನ ಮಯನ್ ಕುಟ್ಟಿಎಲಯ ಎಂಬಾತನೇ ಖುರಾನ್ ಪವಿತ್ರ ಗ್ರಂಥದ ಮೊತ್ತ ಮೊದಲ ಭಾಷಾಂತರಕಾರ. ಅಂದವಾಗಿ ಬರೆಸಿದ ಅನುವಾದಿತ ಕೃತಿಯ ಪ್ರತಿಗಳನ್ನು ಕೇರಳದ ಎಲ್ಲ ಪ್ರಮುಖ ಮುಸ್ಲಿಮ್ ಜಮೀನುದಾರರಿಗೂ ಇತರ ವ್ಯಕ್ತಿಗಳಿಗೂ ಕಳುಹಿಸಿಕೊಡಲಾಗುತ್ತಿತ್ತು. ಅರಬ್ಬೀ ಮಲಯಾಳಕ್ಕೆ ಖುರಾನನ್ನು ಅನುವಾದಿಸಿದ ಮತ್ತಿತರರು: ಕೆ. ಉಮರ್‌ಮೌಲ್ವೀ, ತೇನ್‌ಪಾರಂಬಲ್ ಅಬ್ದುಲ್ ಖಾದರ್ ಮುಸಲಿಯರ್ ಮತ್ತು ಉನ್ನಮ್‌ವೀಟ್ಟಿಲ್ ಮೊಹಮ್ಮದ್ ಮುಸಲಿಯರ್.

ಫೈಲುಲ್–ಮನ್ನಾರ್ (ಸಜ್ಜನಿಕೆಯ ಪ್ರವಾಹ), ಫತಾಹ್–ಉಲ್–ಮನ್ನಾರ್ (ಸಜ್ಜನಿಕೆಯ–ಅನಾವರಣ), ಫತಾಹ್–ಉಲ್–ನೂರ್ (ಪ್ರಭೆಯ ಅನಾವರಣ), ನಿಬ್ರಸುಲ್ ಇನಯ (ಪ್ರಭೆಯ–ಪರ್ಯವಸಾನ) ಇವು ಅರಬ್ಬೀ ಮಲಯಾಳದ ಶ್ರೇಷ್ಠ ಕೃತಿಗಳು. ಸೂಜೈ ಮೊಯ್ದು ಮುಸಲಿಯರ್ ಎಂಬಾತ ಫತಾಹ್–ಉಲ್–ಫತಾಹ್ (ಪ್ರಪಂಚದ ಇತಿಹಾಸ) ಎಂಬ ಪುಸ್ತಕ ಬರೆದಿದ್ದಾನೆ.

ಕೊಂಗನಮ್ ವೀಟ್ಟಿಲ್ ಬಾವ ಮುಸಲಿಯರ್ ಎಂಬವನು ವೈದ್ಯವಿಜ್ಞಾನಕ್ಕೆ ಸಂಬಂಧಿಸಿದ ಅನೇಕ ಪುಸ್ತಕಗಳನ್ನು ಬರೆದಿದ್ದಾನೆ. ಪದ್ಯರೂಪದಲ್ಲಿ ಬರೆದಂಥ ವೈದ್ಯಕೀಯ ವಿಶ್ವಕೋಶ–(Encyclopaedia of Medicine) ಕೂಡ ಈ ಭಾಷೆಯಲ್ಲಿ ರಚನೆಯಾಗಿದೆ. ಚಕ್ಕೇರಿ–ಮೊಯಿದೀನ್ ಕುಟ್ಟಿ, ವಡಕ್ಕನ್ ಪೇರೂರ್ ಅಬ್ದುಲ್ ಖಾದರ್ ಮುಸಲಿಯರ್ ಮತ್ತು ಪಿ. ವಿ. ಮೊಹಮ್ಮದ್ ಹಾಜಿ ಮೊದಲಾದ ಮಹನೀಯರು ಪದಕೋಶಗಳನ್ನು ಹೊರತಂದಿದ್ದಾರೆ.

ಚಲಲಖತ್ ಇಬ್ರಾಹಿಮ್ ಮುಸಲಿಯರ್ ಎಂಬಾತ ಒಬ್ಬ ಶ್ರೇಷ್ಠ ಬರೆಹಗಾರ. ಈತ ವೈವಾಹಿಕ ಜೀವನಕ್ಕೆ ಸಂಬಂಧಿಸಿದ ಅನೇಕ ಪುಸ್ತಕಗಳನ್ನು ಬರೆದಿದ್ದಾನೆ. ಮಾಟ–ಮಂತ್ರ, ಕನಸಿನ ಭವಿಷ್ಯ ಕುರಿತಾಗಿ ಹಲವಾರು ಪುಸ್ತಕಗಳೂ ಉಂಟು. ಕ್ರೈಸ್ತಮತ ಪ್ರಚಾರಕರು ಬೈಬಲ್ ಗ್ರಂಥವನ್ನು ಈ ಭಾಷೆಗೆ ಅನುವಾದ ಮಾಡಿಸಿ ಪ್ರಕಟಿಸಿದ್ದಾರೆ.

ಚಾರ್‌ದರ್‌ವೇಶ್, ಅಲ್ಲಾ-ಉದ್–ದೀನ್, ಕಮರ್‌ಉನ್ನೀಸ್ಸ, ಅಮೀರ್ ಹಂಸ ಎಂಬವು ಈ ಭಾಷೆಯ ಕೆಲವು ಮುಖ್ಯ ಕಾದಂಬರಿಗಳು. 1887 ರಲ್ಲಿ ಪ್ರಕಟವಾದ ಅಪ್ಪು ನೆಡುಙ್ಞಾಡಿಯ ಕುಂದಲತ ಎಂಬ ಕಾದಂಬರಿಯೇ ಮಲಯಾಳ ಭಾಷೆಯ ಮೊತ್ತಮೊದಲ ಕಾದಂಬರಿ. (ಪುಲ್ಲಲಿ ಕುನ್‌ಚು ಮತ್ತು ಇಂದುಲೇಖಾ

ಎಂಬ ಕಾದಂಬರಿಗಳನ್ನೂ ಈ ಸಾಲಿನಲ್ಲಿ ಕೆಲವರು ಸೇರಿಸಿದ್ದಾರೆ) ಇದಕ್ಕೂ ಮುಂಚೆಯೇ ಚಾರ್‌ದರ್‌ವೇಶ್ (ಪರ್ಷಿಯನ್ ಕಾದಂಬರಿಯೊಂದರ ಅನುವಾದ) ಹೊರಬಂದಿತ್ತೆಂದು ವಾದಿಸಿರುವವರೂ ಇದ್ದಾರೆ.

ಅರಬ್ಬೀ ಮಲಯಾಳದಲ್ಲಿ ಹಲವಾರು ಲೇಖನ ಸಂಗ್ರಹಗಳೂ ಮಾಸಪತ್ರಿಕೆಗಳೂ ಪ್ರಕಟವಾಗಿವೆ. ಸಮಾಜ ಸುಧಾರಣೆಗೆ ತನ್ನ ಬದುಕನ್ನೇ ಮುಡಿಪಾಗಿಟ್ಟ ಸನವುಲ್ಲಾ ಮುಕ್ತಿ ತಂಗಲ್ ಎಂಬಾತನೇ ಈ ಭಾಷೆಯಲ್ಲಿ ಮೊತ್ತಮೊದಲ ನಿಯತಕಾಲಿಕವನ್ನು (ತುಖಫತೂಲ್ ಅಖಿರ್ ವಹಿದಾಯುತೂಲ್-ಅಸ್ರಾರ್) ಹೊರತಂದವನು. ವಕ್ಕೊಮ್ ಅಬ್ದುಲ್ ಖಾದರ್ ಮೌಲ್ವೀ ಎಂಬಾತ ಅರಬ್ಬೀ ಮಲಯಾಳ ಲಿಪಿ–ಸುಧಾರಣೆಯನ್ನೇ ಮುಖ್ಯ ಉದ್ದೇಶವಾಗಿಟ್ಟುಕೊಂಡು ‘ಅಲ್-ಇಸ್ಲಾಮ್’ ಎಂಬ ಪತ್ರಿಕೆಯನ್ನು ಹೊರತಂದಿದ್ದಾನೆ. ಅಲ್–ಬಯಾನ್, ಅಲ್–ಮುರ್ಷೀದ್, ಅಲ್–ಇರ್ಷಾದ್ ಎಂಬವು ಅರಬ್ಬೀ ಮಲಯಾಳದಲ್ಲಿ ಪ್ರಕಟಗೊಂಡ ಕೆಲವು ಮುಖ್ಯ ನಿಯತಕಾಲಿಕಗಳು. ಇವುಗಳ ಕೆಲವು ಪ್ರತಿಗಳನ್ನು ಸಂಗ್ರಹಿಸಿ ರಕ್ಷಿಸಿಡಲಾಗಿದೆ.

* * *

ಅರಬ್ಬೀ ಮಲಯಾಳದಲ್ಲಿ ಬೆಳಕು ಕಂಡಿರುವ ಎಲ್ಲ ಪುಸ್ತಕಗಳೂ ಸಂಗ್ರಹಗಳೂ ನಿಯತಕಾಲಿಕಗಳೂ ಭಾಷಾದೋಷದಿಂದ ಮುಕ್ತವಾಗಿಲ್ಲ. ಆಧುನಿಕ ಮಲಯಾಳ ಭಾಷೆಯ ಶಿಷ್ಟರೂಪಕ್ಕೆ ಅನುಗುಣವಾಗಿ ಆ ಕೃತಿಗಳಲ್ಲಿ ಭಾಷೆ ಮೂಡಿಲ್ಲವೆಂದು ಹಿಂದೆಯೇ ಸ್ಪಷ್ಟಪಡಿಸಲಾಗಿದೆ. ಅರಬ್ಬೀ ಮಲಯಾಳ ಕೃತಿಗಳ ಭಾಷೆ ಪೇಲವವಾಗಿದ್ದರೂ ಅವುಗಳಲ್ಲಿ ವ್ಯಕ್ತವಾಗಿರುವ ವಿಚಾರಗಳು ಬೋಧಪ್ರದವಾಗಿವೆ, ತಿಳಿವಳಿಕೆ ಹೆಚ್ಚಿಸುವಂಥವಾಗಿವೆ. ಬಾಳಿನ ನೋವು–ನಲಿವು ಸಮರ್ಥವಾಗಿ ಅಭಿವ್ಯಕ್ತಗೊಂಡಿರುವ ಕೃತಿಗಳೂ ಹಲವಾರಿವೆ. ಈ ನಮ್ಮ ಸಾಹಿತ್ಯದ ಗುಪ್ತನಿಧಿಯನ್ನೂ ಜ್ಞಾನಭಂಡಾರವನ್ನೂ ಸಂಗ್ರಹಿಸಿ ಸಂಪಾದಿಸಿ ಮಲಯಾಳ ಲಿಪಿಯಲ್ಲಿ ಹೊರತರುವ ಕಾರ್ಯ ತ್ವರಿತವಾಗಿ ನಡೆಯಬೇಕಾಗಿದೆ.

ಲೇಖನ ಋಣ

Arabi Malayalam, P. K. Mohammad Kunhi. Page 44–50. Malayalam Literary Survey, January–June 1984.

ಭಾಷೆ ಪ್ರಧಾನವಾಗಿ ಒಂದು ಸಾಮಾಜಿಕ ಚಟುವಟಿಕೆ. ಸುತ್ತಲಿನವರು ಆಡುವುದನ್ನು ಕೇಳಿ ಮಗು ಭಾಷೆಯನ್ನು ಕಲಿಯುತ್ತದೆ. ಅದು ಸಹಜವಾದ ಪ್ರಕ್ರಿಯೆ. ಭಾಷೆಯನ್ನು ಯಾರೂ ಸೃಷ್ಟಿಸುವುದಿಲ್ಲ.

* * *

ಬದಲಾವಣೆಗೆ ಅವಕಾಶವಿಲ್ಲದ ಭಾಷೆಯಲ್ಲಿ ಯಾವಾಗಲೂ ಸಾವಿನ ಬೀಜಗಳು ತುಂಬಿರುತ್ತವೆಂದು ಒಬ್ಬ ಭಾಷಾವಿಜ್ಞಾನಿ ಹೇಳಿದ್ದಾನೆ. ಬದಲಾವಣೆ ಸಾಧ್ಯವಿಲ್ಲದೆ ಕೆಲವು ಭಾಷೆಗಳು ಮೃತಪಟ್ಟವು. ಜೀವಂತವಾದ ಭಾಷೆ ಒಂದೇ ರೀತಿಯಲ್ಲಿರಲು ಸಾಧ್ಯವಿಲ್ಲ. ಅದರಲ್ಲಿ ಉಪಭಾಷೆಗಳು ಬೆಳೆಯುತ್ತವೆ; ವ್ಯಕ್ತಿಭಾಷೆಗಳು ತುಂಬಿರುತ್ತವೆ.

* * *

ಈಗ ಇರುವ ಭಾಷೆಗಳಲ್ಲಿ ವಿಶ್ವಭಾಷೆಯ ಕಲ್ಪನೆಗೆ ಹತ್ತಿರವಾಗಿರುವ ಭಾಷೆ ಎಂದರೆ ಇಂಗ್ಲಿಷ್ ಒಂದೇ. ಜಗತ್ತಿನ ಜನಸಂಖ್ಯೆಯಲ್ಲಿ ಶೇಕಡ ಹತ್ತು ಜನ ಮಾತ್ರ ಆಡುತ್ತಿದ್ದರೂ ಶಿಕ್ಷಣದ ಭಾಷೆಯಾಗಿ, ವಿಜ್ಞಾನದ ಭಾಷೆಯಾಗಿ, ತನ್ನ ಪಾಲಿಗೆ ಬಂದ ರಾಜಕೀಯ ಕಾರಣಗಳಿಂದಾಗಿ ಇಂಗ್ಲಿಷ್ ಈ ಸ್ಥಾನ ಪಡೆದಿದೆ. ಚೀನೀಭಾಷೆಯನ್ನು ಹೆಚ್ಚು ಜನ ಆಡುತ್ತಿದ್ದರೂ ಅದಕ್ಕೆ ವಿಶ್ವಭಾಷೆಯ ಕಲ್ಪನೆಯ ಹತ್ತಿರದಲ್ಲೆಲ್ಲೂ ಸ್ಥಾನವಿಲ್ಲ. ಅದು ಒಂದೇ ಪ್ರದೇಶದಲ್ಲಿ ಸೀಮಿತಗೊಂಡಿದೆ. ಇಂಗ್ಲಿಷ್ ಅದರೋ ಜಗತ್ತಿನಾದ್ಯಂತ ಹರಡಿಕೊಂಡು ವಿದ್ಯಾವಂತರ ನಡುವೆ ಸಂಪರ್ಕಸೇತುವಾಗಿದೆ. ಆದರೆ ಇಂಗ್ಲಿಷ್ ಮೂಲತಃ ಒಂದು ಭಾಷೆಯಾಗಿರುವುದರಿಂದ, ವಿಶ್ವಭಾಷೆಯ ಸ್ವರೂಪ ಅದಕ್ಕಿಲ್ಲ ಎನ್ನುವುದು ಈ ಭಾಷಾವಾದಿಗಳ ವಾದ.

—ಡಾ. ಹಾ. ಮಾ. ನಾಯಕ, ಸಮೂಹ ಗ್ರಂಥದಿಂದ, 1982

ಜಿ. ವರದರಾಜರಾವ್
ಬಿ. ಆರ್. ತುಬಾಕಿ ಮತ್ತು
ಸೀತಾರಾಮ ಜಾಗೀರ್‌ದಾರ್

ಕುಮ್ಮಟದುರ್ಗದ ಒಂದು ಹೊಸ ಶಾಸನ—ಕರ್ನಾಟಕದ ಚರಿತ್ರೆಯ ಮೇಲೆ ಹೊಸ ಬೆಳಕು

ಕನ್ನಡನಾಡಿನ ಗಡಿಗೆರೆಗಳನ್ನು ಕವಿರಾಜಮಾರ್ಗಕಾರನ ಹಾಗೆ ಕಾವೇರಿಯಿಂದ ಗೋದಾವರಿಯವರೆಗೆ ಹಬ್ಬಿದೆಯೆಂದು ಹೇಳಿರುವ ನಂಜುಂಡಕವಿ ಕುಮ್ಮಟದುರ್ಗವನ್ನು ಆಳಿದ 'ಪರದಾರ ಸೋದರ' ರಾಮನ ಕಥೆಯನ್ನು 'ರಾಮನಾಥ ಚರಿತ' ಎಂದು, ಸಾಂಗತ್ಯ ಛಂದೋ ರೂಪದಲ್ಲಿ ಸುಂದರವಾಗಿ ಬರೆದಿದ್ದಾನೆ. ರಾಮನಾಥ, ತಂದೆ ಕಂಪಿಲರಾಯನ ಕಣ್ಮಣಿ. ಈ ತಂದೆ ಮಕ್ಕಳ ಜೀವನ ಚರಿತ್ರೆಯೇ ಕಾವ್ಯದ ವಸ್ತು. 'ವೀರತೆ' ಹಾಗೂ 'ಶುಚಿತೆ' ಈ ಎರಡು ಗುಣಗಳನ್ನು ಮೆರೆಯಲು ನಂಜುಂಡ ಈ ಕಾವ್ಯವನ್ನು ರಚಿಸಿದ್ದಾನೆ :

> ವೀರತೆ ಶುಚಿತೆಯೆಂಬೆರಡು ಗುಣಂಗಳ
> ಮೇರೆಯ ಮೀಱದೆ ನಡೆದು
> ಧಾರುಣಿಯನು ಮೆಚ್ಚಿಸಿದ ವೀರರಾಮನ
> ಚಾರುಚರಿತವ ಪೇಳುವೆನು ॥[1]

ನಂಜುಂಡ ಕವಿ ಈ ಕಾವ್ಯದಲ್ಲಿ ಕಂಪಿಲರಾಯನನ್ನು 'ಕರ್ಣಾಟಪತಿ' 'ಕರ್ಣಾಟ ವಸುಧಾಧೀಶ' 'ಕರ್ಣಾಟ ಭೂರಮಣ' ಎಂದೇ ವರ್ಣಿಸಿದ್ದಾನೆ.[2] ಆದರೆ ನಮ್ಮ ಇತಿಹಾಸ ಗ್ರಂಥಗಳ ಪುಟಗಳಲ್ಲಿ 'ಕಂಪಿಲರಾಯ' ಕೇವಲ ಆನೆಗೊಂದಿ ಅಥವಾ

---

1 ರಾಮನಾಥಚರಿತೆ (ಸಂ. ಎಚ್. ದೇವೀರಪ್ಪ, ಮೈ.ವಿ.ವಿ. ಪ್ರಕಟಣೆ, 1959) ಸಂಪುಟ–೨, ಆ. ೧, ಸಂಧಿ-೧, ಪದ್ಯ–೧೦೨, ಪು. ೧೭

2 ಆದೇ ಗ್ರಂಥ, ಆ. ೧, ಸಂ. ೫–೧೧, ೨೧, ೨೩, ಸಂ. ೬–೧೪೨

ಕುಮ್ಮಟದುರ್ಗದ, ಸಣ್ಣ ಸಂಸ್ಥಾನದ ಅಧಿಪತಿ. ಕೆಲವರ ಪ್ರಕಾರ ಇದು ಕಂಪಿಲಿ ಸಂಸ್ಥಾನ; ಅದಕ್ಕೆ ರಾಜಧಾನಿ ಕುಮ್ಮಟ!. ಈಗ ನಮಗೆ ತಿಳಿದುಬಂದಿರುವ ಇವರ ಚರಿತ್ರೆಯೆಂದರೆ ಅತ್ಯಲ್ಪ. ವಂಶಾವಳಿ ಹೀಗಿದೆ :

ಮುಮ್ಮಡಿ ಸಿಂಗೆಯನಾಯಕ

|

ವೀರಕಂಪಿಲರಾಯ/ಖಂಡೆಯರಾಯ

|

ಯುವರಾಜ ಅಣ್ಣ ಭೈರವದೇವ   ಕುಮಾರರಾಮ

ಕಂಪಿಲರಾಯನಿಗೆ ಅನೇಕ ಜನ ಹೆಣ್ಣು ಮಕ್ಕಳಿದ್ದುದಾಗಿಯೂ ನಂಜುಂಡ ಬರೆದಿದ್ದಾನೆ; ಕುಮಾರರಾಮನಿಗೆ 'ಭೈರವದೇವ' ಎಂಬ ಅಣ್ಣನಿದ್ದುದು ಸ್ಪಷ್ಟ :

ಯುವರಾಜನಣ್ಣ ಭೈರವದೇವನೆಂದೆಂಬ
ಕುವರವೆರಸು ಕಂಪಿಲನು
ಅವನಿಯೆಲ್ಲವನುಱಿ ಬಾಯಿಕೇಳಿಸಿ ಕೀರ್ತಿ
ಯುವತಿಗಿತ್ತನು ದಿಕ್ತಟಗಳ ॥[3]

ಇವರು ಯಾವ ವಂಶದವರು ಏನು ಎಂಬುದರ ಬಗ್ಗೆ ಏನೂ ತಿಳಿದಿಲ್ಲ. ಇವರಿಗೂ ದೋರಸಮುದ್ರದ ಹೊಯ್ಸಳರಿಗೂ ಹಲವು ಯುದ್ಧಗಳು ಜರುಗಿದವು. ಕೇವಲ ರಾಜ್ಯದಾಹದ ಕಾರಣದಿಂದ ಈ ಯುದ್ಧಗಳು ನಡೆದವೆಂದು ಇದುವರೆಗೆ ತಿಳಿಯಲಾಗಿದೆ. ಪ್ರಾಚೀನ ಕರ್ನಾಟಕದ ಎಲ್ಲ ಭೂ ಭಾಗಗಳಲ್ಲಿ ದೊರಕುವ ಶಾಸನಗಳನ್ನು ಇನ್ನೂ ಸಂಗ್ರಹಿಸಿಲ್ಲವಾದುದರಿಂದ ನಮ್ಮ ಇತಿಹಾಸದ ಪುಟಗಳು ಇನ್ನೂ ಸುಸಂಬದ್ಧವಾಗಿಲ್ಲ. ದಿವಂಗತ ಬಿ. ಎಲ್. ರೈಸ್ ಅವರು ಹಳೆಯ ಮೈಸೂರು ಸಂಸ್ಥಾನದ ಭೂಭಾಗದಲ್ಲಿ ದೊರೆತ ಶಾಸನಗಳನ್ನು ಸಂಗ್ರಹಿಸಿ ಪ್ರಕಟಿಸಿರುವಂತೆ (ಆ ಒಂಬತ್ತು ಜಿಲ್ಲೆಗಳನ್ನು ಬಿಟ್ಟು) ಕರ್ನಾಟಕದ ಇತರ ಜಿಲ್ಲೆಗಳಲ್ಲಿ ಎಲ್ಲ ಶಾಸನಗಳನ್ನು ಇನ್ನೂ ಸಂಗ್ರಹಿಸಬೇಕಾಗಿದೆ. ಅಂತೆಯೇ ನಮ್ಮ ದೇಶದ ಇತಿಹಾಸದ ಪುಟಗಳನ್ನು ಹೊಸ ದಾಖಲೆಗಳು ದೊರೆತಾಗಲೆಲ್ಲ ಬದಲಿಸಬೇಕಾದ ಪ್ರಮೇಯವಿದೆ. ವಿದ್ವಾಂಸರು ತೆರೆದ ಮನಸ್ಸಿನಿಂದ ತಮ್ಮ ಅಭಿಪ್ರಾಯಗಳನ್ನು, ತಿಳಿವಳಿಕೆಗಳನ್ನು, ಆಗಾಗ ಬದಲಿಸಿಕೊಳ್ಳಬೇಕು. ಇದು ಅನಿವಾರ್ಯ.

ಇತ್ತೀಚೆಗೆ ನಮಗೆ ಕುಮ್ಮಟದುರ್ಗದಲ್ಲಿ ದೊರಕಿದ ಒಂದು ಶಾಸನವು ತುಂಬ

---

3 ಅದೇ ಗ್ರಂಥ, ಆ. ೧, ಸಂ. ೫-೩೨

ಮಹತ್ವದ್ದಾಗಿದೆ, ಇತಿಹಾಸದ ಪುಟಗಳನ್ನು ಬದಲಿಸುವಂತಹದ್ದಾಗಿದೆ. ಇದೊಂದು ವೀರಗಲ್ಲ–ಶಾಸನ, ಶಾಸನ ಪಾಠವಿಂತಿದೆ :

ಒಂದನೆಯ ಪಟ್ಟಿ

1. ಸ್ವಸ್ತಿ ಶ್ರೀಮತು ಯಾದವನಾರಾಯಣ ಬುಜಬಳಪ [ರಾ]
2. ಕ್ರಮ ಪ್ರತಾಪಚಕ್ರವರ್ತ್ತಿ ಶ್ರೀಮನು ಮಹಾಮಂ[ಡಲಿಕ] ಹೊ
3. ಯ್ಸಸ [ಣ] ವೀರಕಂಪಿಲದೇವನು ಕುಮಟದಲಿ ರಾಜ್ಯಂಗೆಯು . .
4. ರೆ ಸಕ ೧೨೩೮ನೆ ರಾಕ್ಷಾಸ ಸವ್ವಂಚರದ ಜೇಟ್ಟಸು ೧೦ ಬುಧವಾರ.

ಎರಡನೆಯ ಪಟ್ಟಿ

5. ಳು । ಕುತಬಿಸುರತಣ ಖಾನಗಳು ನೇಮಿಸಹಿತ ನಡದು ಬಂದಲ್ಲಿ ತುಳುವಲ ಎ
6. ಕ್ಕಟಿಗ ದೇಸಿಂಗನಾಯ್ಕನ ತಂಮ ಕಾಮನಾಯ್ಕನು ರಣದಲಿ ಹೊ
7. ಯ್ದಾ [ಡಿ] ಬಿದ್ದನು ಹತನ ಅಕ್ಕ ಮಳಿಯಬೆರು ಯೇತಿಸಿದ ಬೀರಗ*
8. ಲು ಬರದಾತಮ್ಮೆತಿನಹಟಿಯ ಹೆಗ್ಗಡೆ ಮಂಗಳ ಮ [ಹಾ*] ಶ್ರೀ ಶ್ರೀ

ಶಾಸನಪಾಠವನ್ನು ಓದಿದ ಮೇಲೆ ಯಾರಿಗೂ ವೀರಕಂಪಿಲದೇವನು ಹೊಯ್ಸಳ ವಂಶದ ವ್ಯಕ್ತಿಯೆನ್ನುವುದರಲ್ಲಿ ಏನೇನು ಸಂದೇಹ ಉಳಿಯುವದಿಲ್ಲ. ವೀರಕಂಪಿಲರಾಯನು ತಳೆದಿರುವ ಬಿರುದಾವಳಿಯನ್ನು ಗಮನಿಸಿದರೆ ಆತನದು ಕುಮ್ಮಟದುರ್ಗದಲ್ಲಿದ್ದು ಆಳುತ್ತಿದ್ದ ಮೂಲತಃ ಹೊಯ್ಸಳವಂಶದ ಇನ್ನೊಂದು ಶಾಖೆಯೆನ್ನುವುದು ಬೆಣ್ಣೆಯಷ್ಟು ಬೆಳ್ಳಗಿದೆ. ಪ್ರಾಯಃ ಈ ಕಾರಣದಿಂದಲೇ ಹೊಯ್ಸಳ ಮೂಲಮನೆತನದ ರಾಜರಿಗೂ ಇವರಿಗೂ ಆಗಾಗ್ಗೆ ಕದನಗಳಾದವು. ವೀರಕಂಪಿಲರಾಯನ ಮಗನಿಗೆ "ಕುಮಾರ ರಾಮನಾಥ" ಎಂದು ಹೆಸರು ಬಂದಿರುವುದು ತುಂಬ ಗಮನಾರ್ಹವಾದ ಸಂಗತಿಯೆ. ಇದು ಯೋಚಿಸಿ ನಿರ್ಣಯಕ್ಕೆ ಬರಬೇಕಾದ ವಸ್ತು. ಮಗುವಿಗೆ ಅದೇ ವಂಶದ ಹಿರಿಯರ ಹೆಸರಿಟ್ಟಾಗ ಒಮ್ಮೊಮ್ಮೆ ಆ ಮಗುವನ್ನು ' ಚಿಕ್ಕ ' ಇಲ್ಲವೆ ' ಕುಮಾರ' ಎಂಬ ಶಬ್ದದ ಜೊತೆಗೆ ಉದಾಹರಣೆಗೆ ' ಚಿಕ್ಕದೇವರಾಯ ' ' ಚಿಕ್ಕನರಸಿಂಹ/ಚಿಕ್ಕನರಸಿಂಗ '[4] ' ಕುಮಾರ ಬಮ್ಮಿದೇವ '

---

* ' ಶಾಶ [ನ*] ಗಲು ' ಎಂದೂ ಓದಬಹುದು.

[4] S.I.I. Vol. xv, no. 219, p. 267 ; ಕ್ರಿ.ಶ. 1207 ರಲ್ಲಿ ವೀರ ಬಲ್ಲಾಳನ ದ್ವಿತೀಯಪುತ್ರ ನರಸಿಂಗನನ್ನು ' ಚಿಕ್ಕನರಸಿಂಗಯ್ಯ ' ಎಂದು ಕರೆದಿರುವುದು ಲಕ್ಷಿಸಬೇಕಾದ ಸಂಗತಿ. ಇವನೇ ಮುಂದೆ ಇಮ್ಮಡಿನರಸಿಂಹ. ಇಮ್ಮಡಿ ಬಲ್ಲಾಳನ ತಂದೆ ವಿಷ್ಣುವರ್ಧನನ ಪುತ್ರ ನರಸಿಂಹನ ಹೆಸರೇ ಇಲ್ಲಿ ಆವರ್ತನಗೊಂಡಿದೆಯೆಂಬುದು ಗಮನಾರ್ಹ.

ಎಂದು ಮುಂತಾಗಿ ಕರೆಯುವ ಪದ್ಧತಿಯೂ ಇತ್ತು. ಈ ದೃಷ್ಟಿಯಿಂದ ವಸ್ತುವನ್ನು ಪುನಃ ಪರಿಶೀಲಿಸಿದರೆ 'ಕುಮಾರ ರಾಮನಾಥ' 'ಕುಮಾರ ರಾಮ' ಈ ಮಾತುಗಳ ಹಿಂದೆ ಆತನ ವಂಶದ ಹಿರಿಯರೊಬ್ಬರ ಹೆಸರೇ ಅವನಿಗಿದ್ದುದು ಸ್ಪಷ್ಟವಾಗುತ್ತದೆ. ಹೊಯ್ಸಳ ವಂಶವನ್ನು ಮನದಂದರೆ ಹೊಯ್ಸಳ ಚಕ್ರವರ್ತಿ ಸೋಮೇಶ್ವರನಿಗೆ ನರಸಿಂಹ ಹಾಗೂ ರಾಮನಾಥ ಎಂಬ ಮಕ್ಕಳಿದ್ದುದು ಲೋಕ ಪ್ರಸಿದ್ಧ ವಿಷಯ. ರಾಮನಾಥನು ಕಣ್ಣನೂರಿನಿಂದ ರಾಜ್ಯವಾಳುತ್ತಿದ್ದುದೂ ಅವನು ದಾಯಾದಿಗಳೊಂದಿಗೆ ಯುದ್ಧ ಮಾಡಿದುದೂ ಈಗಾಗಲೇ ತಿಳಿದ ವಿಷಯ. ಜಟಾವರ್ಮ ಸುಂದರಪಾಂಡ್ಯನಿಗೆ ಸೋತ ರಾಮನಾಥ ಕಣ್ಣನೂರನ್ನು ಬಿಟ್ಟು ಪುನಃ ಕರ್ನಾಟಕಕ್ಕೆ ಹಿಂದಿರುಗಬೇಕಾಯಿತು. ರಾಮನಾಥನ, ಅನಂತರದ, ಅವನ ಚರಿತ್ರೆ ಮತ್ತು ಅವನ ವಂಶದ ಬೆಳವಣಿಗೆಯ ಬಗ್ಗೆ ನಮಗೆ ಏನೂ ವಿಶೇಷವಾಗಿ ತಿಳಿಯದು. ಈ ಶಾಸನ, ಕಂಪಿಲದೇವನು ಹೊಯ್ಸಳ ವಂಶದವನೆಂಬುದನ್ನು ಸೂಚಿಸಿ ಇದುವರೆಗೆ ತಿಳಿದ "ಕಂಪಿಲಿ ರಾಜ್ಯ" ಎಂಬ ಒಂದು ವಿಶಿಷ್ಟ ರಾಜಮನೆತನ ಕೇವಲ ಕಾಲ್ಪನಿಕ ಎಂಬುದನ್ನು ಸ್ಪಷ್ಟಪಡಿಸುತ್ತದೆ. ಇನ್ನು ಮುಂದೆ ಕಂಪಿಲಿರಾಜ್ಯ ಬೇರೆಯಲ್ಲ.

ಈ ಶಾಸನದಲ್ಲಿ ಶಕವರ್ಷ ಇತ್ಯಾದಿ ಎಲ್ಲಾ ವಿವರಗಳಿದ್ದು ಇತಿಹಾಸದ ಅಧ್ಯಯನಕ್ಕೆ ಬಹಳ ಉಪಯುಕ್ತವಾಗಿದೆ. ಶಾ. ಶ. 1238 ರಾಕ್ಷಸ ಸಂವತ್ಸರ ಜ್ಯೇಷ್ಠ ಶು 10 ಬುಧವಾರ ಎಂಬ ಇಲ್ಲಿನ ತೇದಿವಿವರಗಳು ಕ್ರಿ. ಶ. 1315 ಮೇ 14 ಬುಧವಾರಕ್ಕೆ ಸಂಪೂರ್ಣ ಸರಿಹೊಂದುತ್ತವೆ. ಆ ದಿನದಂದು ಕುಮ್ಮಟದುರ್ಗವನ್ನು ಯಾದವನಾರಾಯಣ, ಪ್ರತಾಪಚಕ್ರವರ್ತಿ, ಹೊಯ್ಸಣ ವೀರಕಂಪಿಲದೇವನು ಆಳುತ್ತಿರಲು ತುರುಕರು ಕುಮ್ಮಟದುರ್ಗದಮೇಲೆ ದಾಳಿಯೆತ್ತಿ ಬಂದರು. ಹೀಗೆ ದಂಡೆತ್ತಿ ಬಂದಮುಖ್ಯ ವ್ಯಕ್ತಿಗಳೆಂದರೆ: 1. ಕುತಬಿಸುರತಣ 2. ಖಾನಗಳು ಮತ್ತು 3. ನೇಮಿ. ಈ ವೈರಿಗಳು ಯುದ್ಧಕ್ಕೆ ಬಂದಾಗ್ಗ ಕಂಪಿಲರಾಯನ ತುಳುವಲ ಆಪ್ತ ಏಕಾಂಗವೀರ ದೇಸಿಂಗನಾಯ್ಕನ ತಂಮ ಕಾಮನಾಯ್ಕನು ರಣದಲ್ಲಿ ಹೋರಾಡಿ ಮಡಿದನು. ಆತನ ಸಾವಿನ ಸ್ಮರಣೆಗಾಗಿ ಈ ವೀರಗಲ್ಲಸ್ಮಾರಕವನ್ನು ಆ ವೀರನ ಅಕ್ಕಮಳಿಯ ಬೆರು (ಮಾಳಿಯಬ್ಬೆಯರು) ಹಾಕಿಸಿದರು. ಶಾಸನವನ್ನು ಬರೆದವ್ಯಕ್ತಿ 'ಎತ್ತಿನಹಟಿ' ಎಂಬ ಗ್ರಾಮದ ಹೆಗ್ಗಡೆ. 'ಕುಮ್ಮಟದುರ್ಗ' ಹಾಗೂ 'ಎತ್ತಿನಹಟ್ಟಿ' ಈ ಎರಡೂ ಗ್ರಾಮಗಳು ಈಗ ರಾಯಚೂರು ಜಿಲ್ಲೆಯ ಗಂಗಾವತಿ ತಾಲೂಕಿನಲ್ಲಿವೆ. 'ಖಾನಗಳು' ಎಂಬ ಮಾತಿನಿಂದ ಮುಸಲ್ಮಾನ ದಂಡನಾಯಕರೆಂದು ಹೇಳಬಹುದೆ ವಿನಾ ಯಾರೆಂದು ಗುರುತಿಸಲು ಸಾಧ್ಯವಿಲ್ಲ. ಆದರೆ ಹೀಗೆ 'ಕುತಬಿಸುರತಣ' ಮತ್ತು 'ನೇಮಿ' ಇವರ ಬಗ್ಗೆ ಹೇಳಲು ಬರುವುದಿಲ್ಲ. ಇವರ ಬಗ್ಗೆ ಇನಿತು ವಿಚಾರ ಮಾಡಿದರೆ ಕರ್ನಾಟಕದ ಹಾಗೂ ಭಾರತದ ಇತಿಹಾಸದ ಮೇಲೆ ಹೊಸಬೆಳಕು ಮೂಡುತ್ತದೆ. 'ಕುತ್‌ಬುದ್ದೀನ್ ಸುಲ್ತಾನ್' ಎಂಬುದರ ಅಪಭ್ರಂಶಿತರೂಪವೇ 'ಕುತಬಿಸುರತಣ'. ಕ್ರಿ.ಶ. 1315ರಲ್ಲಿ ದಿಲ್ಲಿಯಲ್ಲಿ ಅಲ್ಲಾವು

ದ್ದೀನ್ ಖಿಲ್ಜಿಯು ಚಕ್ರವರ್ತಿ ಆಗಿದ್ದು ರಾಜ್ಯವಾಳುತ್ತಿದ್ದನು. ಆತನ ದಂಡನಾಯಕ 'ಮಲಿಕ್ ಕಾಫುರ್' ದಕ್ಷಿಣ ಮೇಲೆ ದಂಡೆತ್ತಿ ಬಂದನೆಂದು ಇದುವರೆಗಿನ ಇತಿಹಾಸ ಗ್ರಂಥಗಳ ಪುಟಗಳು ಸಾರಿವೆ. ಆದರೆ ಈ ಶಾಸನವು ದಕ್ಷಿಣದ ಕುಮ್ಮಟದುರ್ಗದ ಮೇಲೆ ದಂಡೆತ್ತಿಬಂದ ಮುಖ್ಯ ವ್ಯಕ್ತಿಯೆಂದರೆ 'ಕುತಬಿಸುರತಣ'! ಈತ ಇನ್ನಾರು ಅಲ್ಲ ಅಲ್ಲಾವುದ್ದೀನ್ ಖಿಲ್ಜಿಯ ಪುತ್ರ "ಕುತ್‌ಬುದ್ದೀನ್ ಮುಬಾರಕ್ ಷಾ". ನಂಜುಂಡನು ತನ್ನ ಕಾವ್ಯದಲ್ಲಿ ಡಿಳ್ಳಿಯಲ್ಲಿ ಆಳುತ್ತಿದ್ದ ವ್ಯಕ್ತಿ ಅಲ್ಲಾವುದ್ದೀನ್ ಖಿಲ್ಜಿ ಎಂದೇ ಹೇಳಿರುವನು.[5] ನಂಜುಂಡನ ಕೆಳಗಿನ ಪದ್ಯ ಬಹಳಗಮನಾರ್ಹವಾಗಿದೆ.

> ಕದುಬಿದಿಖಾನ ಕೈರವಖಾನ ದಾದಿರ
> ಸದಿರಿದಿಖಾನ ಮೀನಿಯನು
> ಕದಿರಖಾನನು ಜಲಹರಿಖಾನರೆಂದೆಂಬ
> ಮದಮುಖಖಾನರೇಱಿದರು ॥[6]

ಇಲ್ಲಿ ಬಂದಿರುವ 'ಕದುಬಿದಿಖಾನ' ಇದು "ಕುತ್‌ಬುದ್ದೀನ್" ಇದರ ವಿಕೃತ ರೂಪವೆಂಬುದು ಎಂದಾಗ ಯಾರೂ ಅಚ್ಚರಿಪಡಬೇಕಾಗಿಲ್ಲ. ಅಂತೆಯೆ ಇನ್ನು ಮುಂದೆ ಮುಂದೆ ನಾವು ಈ ಐತಿಹಾಸಿಕಘಟನೆಯನ್ನು ಗಣನೆಗೆ ತೆಗೆದುಕೊಂಡು ಇತಿಹಾಸವನ್ನು ಸರಿಯಾಗಿ ನಿರೂಪಿಸಬೇಕಾಗಿದೆ. ಇನ್ನು ದಕ್ಷಿಣ ಭಾರತಕ್ಕೆ ದಂಡೆತ್ತಿ "ಮಲಿಕ್‌ಫುರ್" ಬಂದಿದ್ದನಲ್ಲ ಎಂದು ಪ್ರಶ್ನೆ ಎತ್ತಿದರೇ ಇಷ್ಟೇ ಹೇಳ ಬಹುದು, ಆತ ಅಲ್ಲಾವುದ್ದೀನ್ ಖಿಲ್ಜಿಯ ಪುತ್ರನ ಹತ್ತಾರುಮಂದಿ ದಂಡನಾಯಕರಲ್ಲಿ ಒಬ್ಬ ಪ್ರಮುಖ ದಂಡನಾಯಕ ಅಷ್ಟೆ. ಈ ದಿಶೆಯಲ್ಲಿ ಈ ಶಾಸನದಲ್ಲಿ ಬಂದಿರುವ 'ನೇಮಿ' ಎಂಬ ವ್ಯಕ್ತಿ ನಂಜುಂಡ ಕವಿಯ ನೇಮಿಖಾನ ಆಗಿದ್ದು ಇತಿಹಾಸಜ್ಞರು ಈಗಾಗಲೇ ಸಮೀಕರಿಸಿದ 'ಮಲಿಕ್‌ಕಾಫುರ್' ಎಂದರೆ ತಪ್ಪಾಗುವುದಿಲ್ಲ. 'ಮಲಿಕ್‌ಫುರ್' ಮೂಲತಃ ಮುಸಲ್ಮಾನ ಆಗಿರದೇ ಹಿಂದೂ ಮತದಿಂದ ಮತಾಂತರಿತ ವ್ಯಕ್ತಿಯೆಂಬುದನ್ನು ಜ್ಞಾಪಕಕ್ಕೆ ತಂದುಕೊಂಡರೆ ಅವನ ನಿಷ್ಠೆಯ ಬಗ್ಗೆ-ಮುತ್ಸದ್ದಿ ತನದ ಬಗ್ಗೆ - ಸರಿಯಾದ ಕಲ್ಪನೆಯು ನಮಗೆ ಮೂಡಲು ಸಾಧ್ಯ. ಅಲ್ಲಾವುದ್ದೀನಖಿಲ್ಜಿ ತನ್ನ ಪುತ್ರನ ಕೈಕೆಳಗೆ ದೊಡ್ಡದಂಡನ್ನೂ ಅನೇಕ ಪ್ರಮುಖ ದಂಡನಾಯಕರನ್ನೂ ಕಳಿಸಿದ್ದನೆಂದರೆ ಆಶ್ಚರ್ಯಪಡಬೇಕಾಗಿಲ್ಲ. ಇದುವರೆಗಿನ ವಿವರಣೆಗಳು ಸಮಕಾಲೀನದಾಖಲೆಗಳನ್ನು ಆಧರಿಸಿಲ್ಲ. ಈಕಾಲ ಖಂಡದ ನಂಬಲರ್ಹ ವಾದ ಪುಸ್ತಕನೆಂದರೆ ಜಿಯಾವುದ್ದೀನ್ ಬರ್ನೀಯ "ತಾರೀಖ್-ಇ-ಫಿರೋಜ್

5 ಪೂರ್ವೋಕ್ತ 'ರಾಮನಾಥ ಚರಿತ' ಸಂಧಿ : 17 ಪದ್ಯ 16 : 18–61 ; 30-25: 41–19 ಮತ್ತು 43–54

6 ಪೂರ್ವೋಕ್ತ 'ರಾಮನಾಥಚರಿತ' ಸಂಧಿ–20, ಪದ್ಯ–19

ಷಾಹೀ ". ಇದು ತುಘಲಕ್ ಮನೆತನದ ಚರಿತ್ರೆಯನ್ನು ವಿವರಿಸುವ ಗ್ರಂಥ. ಖಿಲ್ಜಿ ಮನೆತನದ ಚರಿತ್ರೆ ಇದರಲ್ಲಿ ಅಷ್ಟು ನಿಖರವಾಗಿ ಬಂದಿಲ್ಲ.

ಕುಮಾರ ರಾಮ ಹಾಗೂ ಮಹಮ್ಮದ್ ಬಿನ್ ತುಘಲಕ್ ದೊರೆಯ ಪುತ್ರಿ ಇವರ ಮಧ್ಯೆ ಉಂಟಾದ ಪ್ರೇಮ ಕಥೆಯನ್ನು ಅಲ್ಲಾವುದ್ದೀನ್ ದೊರೆಯ ಕಾಲಕ್ಕೆ ನಡೆದುದೆಂದು ವಿವರಿಸಲು ಬರುವಂತಿಲ್ಲ. ಒಂದು ದೃಷ್ಟಿಯಿಂದ ಅನಂತರದ ಘಟನೆಯನ್ನು ಪ್ರಕೃತ ವಿವೇಚನೆಗೆ ಎತ್ತಿಕೊಳ್ಳದಿದ್ದರೂ ನಡೆಯುತ್ತದೆ. ಕುತ್‌ಬುದ್ದೀನ್ ದೊರೆಯ ಆಡಳಿತವನ್ನು ಸೂಚಿಸುವ ದಾಖಲೆಗಳು (ಕ್ರಿ.ಶ.1320) ಕರ್ನಾಟಕದಲ್ಲೇ ದೊರೆತಿವೆ.[7] ಆದುದರಿಂದ ಪ್ರಕೃತ ಶಾಸನ ಅದಕ್ಕೂ ಪೂರ್ವದ್ದೇ ಆಗಿದ್ದು ಅವನ ಆಡಳಿತದ ಬಗ್ಗೆ—ಖಿಲ್ಜಿ ಮನೆತನದ ಚರಿತ್ರೆಯ ಬಗ್ಗೆ–ಹೊಸಬೆಳಕನ್ನೇ ಬೀರಿದೆ. ಈ ಪ್ರಣಯ ಕಥನಕ್ಕೆ ನಾಂದಿಯೂ ಪ್ರಾಯಃ ಈ ಕಾಲದಲ್ಲೇ ಬಿದ್ದಿರಬಹುದು. ನಂಜುಂಡನ ಕೃತಿಯಲ್ಲಿ ಈ ಬಗ್ಗೆ ಕಿಂಚಿತ್ ಹೊಳಹು ದೊರೆಯುತ್ತದೆ. ಅದೆಂದರೆ ಕುಮ್ಮಟದುರ್ಗದ ಮೇಲೆ ದಂಡೆತ್ತಿ ಬಂದ ಮುಸಲ್ಮಾನ್ ದಂಡನಾಯಕದಲ್ಲಿ ಮಹಮ್ಮದ್ ಬಿನ್ ತುಘಲಕ್ ಒಬ್ಬ. ಆಗ ಅವನ ಹೆಸರು 'ಮಹಮ್ಮದ್ ಬಿನ್ ತುಘ್‌ಲಕ್' ಆಗಿರದೆ—ಜೌನ್‌ಖಾನ್ ಎಂದಿದ್ದಿತು ಅಷ್ಟೆ! "ಮಹಮ್ಮದ್ ಬಿನ್ ತುಘ್‌ಲಕ್" ಹೆಸರು ಪಟ್ಟಕ್ಕೆ ಕುಳಿತ ಕಾಲದಲ್ಲಿ ಧರಿಸಿದುದು.[8] ನಂಜುಂಡ ಕವಿ ತನ್ನ ಕೃತಿಯಲ್ಲಿ ಹೇಳಿದ ಹಲವು ಹೆಸರುಗಳಲ್ಲಿ "ಜೋನೆಗ" ಎಂಬುದು ಈ ದಿಶೆಯಲ್ಲಿ ಬಹಳ ಮಹತ್ವದ್ದಾಗಿದೆ.

> ಚೀನ ಮುಂಗಲಿಯಂಗ ವಂಗ ಗುರ್ಜರ ಸೂರ
> ಸೇನ ಮಾಳವ ನೇಪಾಳ
> ಜೋನೆಗ ಜವನ ಹಮ್ಮೀರ ಕೋಸಲ ಕೋರಾ
> ಸಾನಿಗಳೆಸೆದರಂದಲ್ಲಿ॥[9]

ನಂಜುಂಡನ ಕಾಲಕ್ಕಾಗಲೇ ಈ ಘಟನೆಗಳು ನಡೆದು ಸುಮಾರು 150 ವರ್ಷಕ್ಕೂ ಹೆಚ್ಚಾಗಿದುದರಿಂದ ಇತಿಹಾಸದ ಸಂಗತಿಗಳು ಐತಿಹ್ಯಕ್ಕೆ ಆಗಲೇ ತಿರುಗಿದ್ದವು. ಕುಮಾರರಾಮನ ಚರಿತ್ರೆ, ಶೌರ್ಯ, ಪರದಾರಸೋದರತ್ವಗಳು ಪವಾಡದ, ಪೌರಾಣಿಕ

---

[7] ಬಿಜಾಪೂರ್ ಊರಿನಲ್ಲಿರುವ ಕರೀಮುದ್ದೀನ ಮಸೀದಿಯಲ್ಲಿರುವ ಒಂದು ಶಾಸನ ಕುತ್‌ಬುದ್ದೀನ್ ದೊರೆಯ ಆಡಳಿತವನ್ನು ಸೂಚಿಸಿ ಬರೆದುದಾಗಿದೆ–Memoirs of the Archaeological survey of India. No. 49, 1936 A.D.

[8] ಮಹಮ್ಮದ್ ಬಿನ್ ತುಘಲಕ್‌ನಿಗೆ 'ಜೂನ್/ಜೌನ್‌ಖಾನ್' 'ಉಲುಘ ಖಾನ್' ಎಂಬ ಇತರ ಹೆಸರುಗಳೂ ಇದ್ದವು–Bharatiya Vidyabhavan's 'History and culture of the Indian people, Vol vi, · Delhi Sultanate' pp. 53, 61 etc.

[9] ಪೂರ್ವೋಕ್ತ 'ರಾಮನಾಥಚರಿತ' ಸಂಧಿ. 40–23

ಸ್ವರೂಪದ ವಸ್ತುಗಳಾಗಿದ್ದವು. ಆದರೂ ನಂಜುಂಡಕವಿಯ ಕೃತಿ, ಪಾಂಚಾಳಗಂಗ ಹಾಗೂ ಮಹಲಿಂಗಸ್ವಾಮಿಯ ಕೃತಿಗಳಿಗಿಂತ ಹೆಚ್ಚು ಐತಿಹಾಸಿಕವಾಗಿದೆ. ಗಂಗ ಹಾಗೂ ಮಹಲಿಂಗಸ್ವಾಮಿಯ ಕೃತಿಗಳಲ್ಲಿ ತೌಲನ ದೃಷ್ಟಿಗೆ ನಂಜುಂಡನ ಕೃತಿಯಿಂದ ಭಿನ್ನವಾದ ಹಲವು ಸಂಗತಿಗಳಿವೆ. ಗಂಗನ ಕಾವ್ಯದ ಒಂದು ಹಸ್ತ ಪ್ರತಿಯಲ್ಲಿ (ಗಂ.2) "ಮಾತ್ರವೇ ಕಂಡು ಬರುವ ಕೆಲವು ಅಧಿಕಾಂಶಗಳನ್ನು ನೋಡಿದರೆ ಕುಮಾರರಾಮನ ಸಾಂಗತ್ಯದಲ್ಲಿ ಬೇಡರಿಗೆ ಸಂಬಂಧಿಸಿದ ವಿಶೇಷ ವೃತ್ತಾಂತಗಳನ್ನು ಸೇರಿಸಲು ಯಾರೋ ಪ್ರಯತ್ನಿಸಿರಬೇಕೆಂದು ಭಾಸವಾಗದೆ ಇರದು"[10] ಎಂಬ ಊಹೆಯು ಈಗ ಈ ಶಾಸನದ ಮೂಲಕ ಸತ್ಯವಾಗಿದೆ, ಈ ವಂಶ ಹೊಯ್ಸಳರದ್ದೆಂದು ತಿಳಿಸಿ.


ಪ್ರಸ್ತುತ ಶಾಸನ ಚಿಕ್ಕದಾಗಿದ್ದರೂ ಇದುವರೆಗೆ ತಿಳಿಯದ ಕೆಲವು ಹೊಸ ಸಂಗತಿಗಳನ್ನು ತಿಳಿಸಿ ಕಂಪಿಲಿಯ ರಾಜ್ಯದ ಮೇಲೆ, ಹೊಯ್ಸಳರ ಚರಿತ್ರೆಯ ಮೇಲೆ ಮತ್ತು ಖಿಲ್ಜಿ ಸಂತತಿಯ ಚರಿತ್ರೆಯ ಮೇಲೆ ಹೊಸ ಬೆಳಕನ್ನು ಚೆಲ್ಲಿ ತನ್ನಷ್ಟಕ್ಕೆ ಒಂದು ಮಹತ್ವದ ದಾಖಲೆಯಾಗಿದೆ. ಮಲಿಕ್ ಕಾಫುರನಿಗೆ ಇದುವರೆಗೆ ಸಂದ ಹಿರಿಮೆಗಳನ್ನು ಇನ್ನು ಮುಂದೆ ಅಲ್ಲಾವುದ್ದೀನ್ ಖಿಲ್ಜಿಯ ಪುತ್ರ ಕುತ್‌ಬುದ್ದೀನನಿಗೆ ಸಲ್ಲಿಸಿ ಚರಿತ್ರೆಯನ್ನು ಬರೆಯಬೇಕು; ಅಷ್ಟರಮಟ್ಟಿಗೆ ಇತಿಹಾಸದ ಪುಟಗಳು ಮಾರ್ಪಾಟಾಗಬೇಕು.

---

10 ಡಾ|. ಜಿ. ವರದರಾಜರಾವ್ "ಕುಮಾರರಾಮನ ಸಾಂಗತ್ಯಗಳು" ಪು. 368

ಕರ್ನಾಟಕದಲ್ಲಿ ಶಾಸನಗಳು ಅಪಾರ ಸಂಖ್ಯೆಯಲ್ಲಿವೆ. ಅವುಗಳನ್ನು ಸಂಗ್ರಹಿಸುವ ಕಾರ್ಯ ಕರ್ನಾಟಕದಲ್ಲಿ ಬಹು ಹಿಂದೆಯೇ ಪ್ರಾರಂಭವಾಯಿತು. ಮೈಸೂರಿನ ಚಿಕ್ಕದೇವರಾಜ ಒಡೆಯರ ಆಡಳಿತದಲ್ಲಿ ಅನೇಕ ಶಾಸನಗಳನ್ನು ಪ್ರತಿಮಾಡಿಸಿ ಇಟ್ಟಿದ್ದರೆಂಬ ಪ್ರತೀತಿ ಇದೆ. ಆದರೆ ಅವರು ಆಗ ಸಂಗ್ರಹ ಮಾಡಿದ ಉದ್ದೇಶ ದಾನದತ್ತಿಗಳ ಬಗೆಗೆ ಖಚಿತವಾದ ದಾಖಲೆಯನ್ನು ಪಡೆಯುವುದು. ಶಾಸನಗಳನ್ನು ಅಧ್ಯಯನ ಮಾಡಿ ಅವುಗಳಲ್ಲಿಯ ವಿಷಯಗಳನ್ನು ಸಂಗ್ರಹಿಸಲೆಂದು ಕ್ರಮಬದ್ಧವಾಗಿ ಅವುಗಳ ಅನ್ವೇಷಣೆಯ ಕೆಲಸ ಆರಂಭಿಸಿದ ಪಾಶ್ಚಾತ್ಯ ವಿದ್ವಾಂಸರ ಪೈಕಿ ಪ್ರಮುಖರಾದವರು ಕರ್ನಲ್ ಮೆಕೆಂಜಿ, ಸ್ಟೂವರ್ಟ್ ಎಲ್ಫಿನ್‌ಸ್ಟನ್, ಹೆನ್ರಿವಥೆನ್, ವಾಲ್ಟರ್ ಇಲಿಯಟ್, ಡಿಕ್‌ಸನ್, ಬಿ. ಎಲ್. ರೈಸ್, ಜೆ. ಎಫ್. ಫ್ಲೀಟ್.

ಭಾರತೀಯ ವಿದ್ವಾಂಸರಲ್ಲಿ ಶಾಸನ ಸಂಗ್ರಹಣೆಯ ಬಗೆಗೆ ಹೆಚ್ಚಿನ ಕೆಲಸ ಮಾಡಿರುವವರೆಂದರೆ ಆರ್. ನರಸಿಂಹಾಚಾರ್ಯರು. ಶಾಸನ ಸಂಗ್ರಹಣೆಯ ಕೆಲಸದಲ್ಲಿ ನಿರತರಾದ ಇನ್ನಿತರ ವಿದ್ವಾಂಸರೆಂದರೆ ಎನ್. ಲಕ್ಷ್ಮಿನಾರಾಯಣರಾವ್, ಆರ್. ರಾಮರಾವ್, ಪಿ. ಬಿ. ದೇಸಾಯಿ, ಆರ್. ಎಸ್. ಪಂಚಮುಖಿ ಮುಂತಾದವರು.



ಯೋಗಾಚಾರ್ಯ ಕೆ. ಕೇಶವಮೂರ್ತಿ

ಮಂತ್ರಯೋಗ

ಮಂತ್ರೇ ತೀರ್ಥೇ ಕಥಾ ದೈವೇ ದೈವಜ್ಞೇ ಭೇಷಜೇ ಗುರೌ ।
ಯಾದೃಶೀ ಭಾವನಾ ಯಸ್ಯ ಸಿದ್ಧಿರ್ಭವತಿ ತಾದೃಶೀ ॥

[ಮಂತ್ರ, ತೀರ್ಥ, ದೇವರು, ಜ್ಯೋತಿಷಿ, ವೈದ್ಯ ಮತ್ತು ಗುರು ಇವರಲ್ಲಿ ನಮ್ಮ ಭಾವನೆಯು ಹೇಗಿರುತ್ತದೋ ಸಿದ್ಧಿಯು ಅದಕ್ಕೆ ಅನುಗುಣವಾಗಿರುತ್ತದೆ.]

ಮಂತ್ರವೆಂದರೇನು ? " ಮನನಾತ್ ತ್ರಾಯತೇ ಇತಿ ಮಂತ್ರಃ " ಅಂದರೆ ಯಾವುದನ್ನು ಮನಸ್ಸಿನಲ್ಲಿ ಮನನ ಮಾಡುವುದರಿಂದ ನಮ್ಮನ್ನು ಕಾಪಾಡುತ್ತದೆಯೋ ಅದೇ ಮಂತ್ರ.

" ಮಂತ್ರ ಬ್ರಾಹ್ಮಣಾತ್ಮಕೋ ವೇದಃ "

ಎಂಬ ಉಕ್ತಿಯಂತೆ ಮಂತ್ರಗಳು ವೇದದ ಒಂದು ಭಾಗ. ದೇವತಾ ವಿಶೇಷವೊಂದರ ಸ್ತೋತ್ರದಲ್ಲಿ ಹೇಳಿರುವ ಅರ್ಥವನ್ನು ಸ್ಮರಣೆಗೆ ತಂದುಕೊಳ್ಳುವುದಕ್ಕೆ ' ಮಂತ್ರ ' ವೆಂದು ಹೆಸರು. ಮಂತ್ರಗಳ ಸಮುದಾಯಕ್ಕೆ ' ಸಂಹಿತಾ ' ಎಂದು ಹೆಸರು. ಸಂಹಿತೆಗಳು ಋಕ್, ಯಜುಸ್, ಸಾಮ ಮತ್ತು ಅಥರ್ವ ಸಂಹಿತೆಗಳೆಂಬುದಾಗಿ ನಾಲ್ಕು ವಿಧಗಳಾಗಿವೆ. ಆದುದರಿಂದಲೇ ವೇದಗಳು ನಾಲ್ಕು. ಈ ನಾಲ್ಕು ವೇದ ಗಳನ್ನು ಮಹರ್ಷಿ ವೇದವ್ಯಾಸರು ಸಂಕಲಿಸಿದರೆಂದು ಪುರಾಣಗಳು ತಿಳಿಸುತ್ತವೆ. ವೇದವು ದೇವತೆಗಳ ಸ್ತುತಿ. ವೇದಗಳನ್ನು ' ತ್ರಯೀ ' ಎಂಬ ಹೆಸರಿನಿಂದಲೂ ಕರೆಯು ತ್ತಾರೆ. ಈ ಹೆಸರಿನಲ್ಲಿಯೂ ಒಂದು ರಹಸ್ಯವಿದೆ. ಈ ಸಂಜ್ಞಾ ವಿಧಾನವು ಮಂತ್ರಗಳ ಉಪಯೋಗವನ್ನು ಅನುಸರಿಸಿ, ಮಂತ್ರಗಳ ಸ್ವರೂಪವನ್ನು ಅವಲಂಬಿಸಿರುತ್ತದೆ. ಪಾದಗಳಿಂದ ಕೂಡಿದ ಛಂದೋಬದ್ಧವಾದ ಮಂತ್ರಗಳನ್ನು ' ಋಕ್ ' ಎಂದು ಕರೆಯುತ್ತಾರೆ. ಈ ' ಋಕ್ ' ಮಂತ್ರಗಳ ಗಾಯನಕ್ಕೆ ' ಸಾಮ ' ವೆಂದು ಹೆಸರು. ಇವೆರಡರಿಂದ ಬೇರೆಯಾದ ಗದ್ಯಾತ್ಮಕವಾದ ವಾಕ್ಯಗಳನ್ನು ' ಯಜುಸ್ ' ಎಂದು ವ್ಯವಹರಿಸುತ್ತಾರೆ. ವೇದವು ಋಕ್, ಯಜುಸ್, ಮತ್ತು ಸಾಮವೆಂಬುದಾಗಿ

ವಿಭಕ್ತವಾಗಿರುವುದರಿಂದ 'ತ್ರಯೀ' ಎಂದು ಕರೆಯುತ್ತಾರೆ. ಆದುದರಿಂದ ವೇದ ಪ್ರತಿಪಾದ್ಯವಾದ ಧರ್ಮವನ್ನು 'ತ್ರಯೀಧರ್ಮ' ವೆಂದೂ ಆ ಧರ್ಮದ ರಹಸ್ಯ ವನ್ನು ತಿಳಿದ ವಿದ್ವಾಂಸರನ್ನು 'ತ್ರೈವಿದ್ಯ' ರೆಂದೂ ಕರೆಯುತ್ತಾರೆ. ಶ್ರೀಕೃಷ್ಣ ಪರಮಾತ್ಮನು ತ್ರೈವಿದ್ಯರ ಬಗ್ಗೆ ಗೀತೆಯಲ್ಲಿ ಹೀಗೆ ಹೇಳಿದ್ದಾನೆ.

ತ್ರೈವಿದ್ಯಾ ಮಾಂ ಸೋಮಪಾಃ ಪೂರ ಪಾಪಾ
ಯಜ್ಞೈರಿಷ್ಟ್ವಾ ಸ್ವರ್ಗತಿಂ ಪ್ರಾರ್ಥಯಂತೇ ।
ತೇ ಪುಣ್ಯಮಾಸಾದ್ಯ ಸುರೇಂದ್ರ ಲೋಕಮಶ್ನಂತಿ
ದಿವ್ಯಾನ್ ದಿವಿ ದೇವ ಭೋಗಾನ್ ॥ ೯–೨೦

ಅಂದರೆ "ಮೂರು ವೇದಗಳನ್ನು ಬಲ್ಲವರು, ಯಜ್ಞಗಳಿಂದ ನನ್ನನ್ನು ಪೂಜಿಸಿ, ಸೋಮಪಾನ ಮಾಡುವವರಾಗಿ ಪಾಪಗಳನ್ನು ಕಳೆದುಕೊಂಡು ಸ್ವರ್ಗಲೋಕವನ್ನು ಪ್ರಾರ್ಥಿಸುತ್ತಾರೆ. ಅವರು ಪುಣ್ಯವಾದ ಇಂದ್ರಲೋಕವನ್ನು ಹೊಂದಿ, ಸ್ವರ್ಗದಲ್ಲಿ ದಿವ್ಯವಾದ ದೇವಭೋಗಗಳನ್ನು ಅನುಭವಿಸುತ್ತಾರೆ".

ವೇದವೆಂದರೇನು ? ಮಂತ್ರಗಳು ವೇದದ ಒಂದು ಭಾಗವೆಂಬುದನು ತಿಳಿದೆವು. ಅಂದರೆ ಮಂತ್ರಗಳಿಗೆ ವೇದವೇ ಮೂಲ. ಹಾಗಾದರೆ 'ವೇದ' ವೆಂದರೇನು ? ವೇದವು 'ವಿದ್' ಎಂಬ ಧಾತುವಿನಿಂದ ಪ್ರತಿಪಾದಿತವಾಗಿದೆ. ಇದರ ಅರ್ಥ 'ಜ್ಞಾನ' ಎಂದು. ನಮ್ಮ ಭಾರತೀಯ ಸಂಸ್ಕೃತಿಯ ಸ್ತೋತ್ರವೇ ವೇದ. ಭಾರತೀಯ ದರ್ಶನ ಮತ್ತು ಧರ್ಮದ ಆಧಾರವೇ ವೇದ. ವೇದವನ್ನು ಧಾರ್ಮಿಕ ವಿಚಾರಧಾರೆಯ 'ಮಾನಸ ಸರೋವರ' ವೆಂದು ಹೇಳಬಹುದು.

ವೇದದ ಕರ್ತೃ ಯಾರು ? ಯಾವುದೇ ಒಂದು ವಿಚಾರಧಾರೆಯು ಸಾಹಿತ್ಯರೂಪದಲ್ಲಿ ನಮಗೆ ಕಂಡಮೇಲೆ ಅದರ ಕರ್ತೃತ್ವದ ಬಗ್ಗೆ ಗಮನ ಹರಿಯು ವುದು ಸ್ವಾಭಾವಿಕವೇ. ಆದರೆ ವೇದದ ಕರ್ತೃಯಾರು ಎಂಬುದನ್ನು ಹೇಳಲು ಸಾಧ್ಯ ವಿಲ್ಲ. ವೇದದಲ್ಲಿ ಎಲ್ಲಿಯೂ ಕರ್ತೃವಿನ ಹೆಸರು ಬಂದಿರುವುದಿಲ್ಲ. ಕೆಲವು ಮಂತ್ರಗಳಲ್ಲಿ ಋಷಿಗಳು ಮಾತ್ರ ಕಂಡುಬರುತ್ತಾರೆ. ಆದರೆ ಅವರು ಆ ಮಂತ್ರಗಳ ದ್ರಷ್ಟೃಗಳೇ ವಿನಾ ಸ್ವಯಂ ಕರ್ತೃಗಳಲ್ಲ. ಅವರು ತಪಸ್ಸಿನಲ್ಲಿ ಕುಳಿತಾಗ ಅವರ ಅಂತರಂಗದಲ್ಲಿ ಜ್ಞಾನವು ಪ್ರಕಾಶಗೊಂಡು ದಿವ್ಯ ಸತ್ಯದ ಬೋಧೆ ಅವರಿಗಾಯಿತು. ತಾವು ಕಂಡ ಆ ಸತ್ಯವನ್ನು ಅವರು ಪ್ರಕಟಪಡಿಸಿದರು. ಅವರು ಅದನ್ನು ತಮ್ಮ ಅಂತರ್ಯದಲ್ಲಿ ಕಂಡು ಕೇಳುವುದಕ್ಕೆ ಪೂರ್ವಭಾವಿಯಾಗಿಯೇ ವೇದ ಪ್ರತಿಪಾದ್ಯ ವಾದ ದಿವ್ಯಜ್ಞಾನವೊಂದು ಈ ಬ್ರಹ್ಮಾಂಡದಲ್ಲಿ ಸೂಕ್ಷ್ಮರೂಪಿನಿಂದಿದ್ದಿತು. ಶಬ್ದದ ವಿದ್ಯುದಯಸ್ಕಾಂತೀಯ ತರಂಗಗಳು ಆಕಾಶದಲ್ಲಿ ಸದಾ ಇರುತ್ತದೆ. ಆ ತರಂಗ ಗಳನ್ನು ಶಬ್ದದ ತರಂಗಗಳನ್ನಾಗಿ ರೇಡಿಯೋ ಉಪಕರಣವು ಪರಿವರ್ತಿಸಿ ನಮಗೆ

ಕೇಳಲು ಅನುವು ಮಾಡಿಕೊಡುತ್ತದೆಯೇ ವಿನಾ ನಾವು ಕೇಳುವ ಶಬ್ದಗಳು ರೇಡಿಯೋ ಕೃತವಲ್ಲ. ಅಂತೆಯೇ ಋಷಿಗಳ ಮೂಲಕ ಪ್ರಕಟಗೊಂಡ ವೇದವು ಅವರು ನಿರ್ಮಿಸಿದವುಗಳಲ್ಲ. ಆದುದರಿಂದಲೇ ವೇದವನ್ನು 'ಅಪೌರುಷೇಯ' ಎಂಬುದಾಗಿ ಕರೆಯುತ್ತಾರೆ.

ಹೀಗೆ ವೇದೋಕ್ತ ಜ್ಞಾನ ಪ್ರಕಾಶವನ್ನು ತಮ್ಮ ಅಂತರ್ಯದಲ್ಲಿ ಕಂಡದ್ದರಿಂದ ಆ ಋಷಿಗಳನ್ನು 'ಮಂತ್ರದ್ರಷ್ಟಾರ'ರೆಂದೂ, ಅವರಿಗೆ ಸತ್ಯದ ಅಮರವಾಣಿಯು ಕೇಳಿ ಬಂದದ್ದರಿಂದ ಅದನ್ನು 'ಶ್ರುತಿ' ಎಂದೂ ಕರೆಯುವುದು ವಾಡಿಕೆಗೆ ಬಂದಿತು. ವೇದಗಳನ್ನು ನೀಡಿದ ಋಷಿಗಳನ್ನು 'ವೈದಿಕಋಷಿ' ಗಳೆಂದೂ, ಅಲ್ಲಿ ಪ್ರತಿಪಾದಿತವಾಗಿರುವ ಧರ್ಮವನ್ನು "ವೈದಿಕ ಧರ್ಮ"ವೆಂದೂ ಕರೆಯುತ್ತಾರೆ. ಯಾವ ಋಷಿಗಳು ವೇದವನ್ನು ಎಲ್ಲಿ ಯಾವಾಗ ಪಡೆದರು ಎಂಬುದರ ಬಗೆಗಾಗಲೀ, ಎಷ್ಟು ಜನ ಪಡೆದರು ಎಂಬ ವಿವರವಾಗಲೀ ಇನ್ನೂ ನಿರ್ಧರಿಸಲ್ಪಟ್ಟಿಲ್ಲ.

ಇತಿಹಾಸಜ್ಞರ ಅಭಿಪ್ರಾಯ: ಭಾರತದ ಇತಿಹಾಸಜ್ಞರು, ಶಾಸ್ತ್ರ ಗ್ರಂಥಗಳ ಕುರಿತಾದ ಸಂಶೋಧಕರು, ವಿದ್ವಾಂಸರು, ವೇದಗಳನ್ನು ಅಪೌರುಷೇಯಗಳೆಂದು ಒಪ್ಪಿಕೊಳ್ಳದೇ ಅವು ಪ್ರಪಂಚದ ಅತ್ಯಂತ ಪ್ರಾಚೀನ ಗ್ರಂಥಸಮೂಹವಾಗಿದ್ದು, ಅಪಾರ ಜ್ಞಾನ ಭಂಡಾರವಾಗಿದೆ ಎಂದು ನಿರ್ಧರಿಸಿರುತ್ತಾರೆ. ಅದಕ್ಕೆ ಅನುಸಾರವಾಗಿ ಅವರು ವೇದಗಳು ಕ್ರಿ.ಪೂ. ಸುಮಾರು 10,100 ವರ್ಷಗಳ ಹೊತ್ತಿಗೆ ರೂಪುಗೊಳ್ಳಲು ಆರಂಭವಾಗಿ ಹಲವು ಶತಮಾನಗಳ ತನಕ ಬೆಳೆಯುತ್ತಾ ಬಂದವು ಎಂದು ಅಭಿಪ್ರಾಯ ಪಡುತ್ತಾರೆ. ವೇದವನ್ನು ಆರ್ಯರು ರಚಿಸಿದರು ಎಂದು ನಿಶ್ಚಯಿಸಿರುವ ವಿದ್ವಾಂಸರು ಹಾಗೂ ಸಂಶೋಧಕರು, ವೇದ ಸಾಹಿತ್ಯವು ವಿಶ್ವದ ಏಕಮೇವಾದ್ವಿತೀಯವಾದ ಮತ್ತು ಅತಿ ಪ್ರಾಚೀನವಾದ ಆಧ್ಯಾತ್ಮಿಕವಾದ ಸಾಹಿತ್ಯಸಂಗ್ರಹವಾಗಿದ್ದು ಆರ್ಯರ ಸಂಸ್ಕೃತಿಯ ಮಹೋನ್ನತ ಮಟ್ಟದ ಕುರಿತಾದ ವಿವರಗಳನ್ನು ಒಳಗೊಂಡ ವಿಶೇಷ ಮೌಲ್ಯಗಳಿಂದ ಕೂಡಿದ 'ಸಾಹಿತ್ಯನಿಧಿ'ಯಾಗಿದೆ ಎಂದು ಹೇಳಿರುತ್ತಾರೆ. ಆದರೆ ವೇದಗಳು ಪೌರುಷೇಯವೆಂಬುದನ್ನು ಎಲ್ಲರೂ ಒಪ್ಪಿಕೊಂಡಿಲ್ಲ.

ವೇದದ ಮಹತ್ವ: ವೈದಿಕ ಋಷಿಗಳು ವೇದವನ್ನು ತಮ್ಮ ಸ್ಮೃತಿಪಟಲದಲ್ಲಿ ಜೋಪಾನವಾಗಿಟ್ಟುಕೊಂಡು ವಿಶ್ವಕಲ್ಯಾಣಾರ್ಥವಾಗಿ ಅದನ್ನು ತಮ್ಮ ಶಿಷ್ಯರಿಗೆ ಹೇಳಿಕೊಟ್ಟರು. ಹೀಗೆ ಒಬ್ಬರಿಂದ ಇನ್ನೊಬ್ಬರಿಗೆ ಹೇಳಿಕೊಟ್ಟ ವಿಚಾರವಿದಾದುದರಿಂದ ಇದಕ್ಕೆ 'ಆಮ್ನಾಯ' ಎಂಬ ಹೆಸರೂ ಇದೆ. ವೇದವು ನಿಷ್ಕೃಷ್ಟವಾದ ಜ್ಞಾನವನ್ನು ನೀಡುವುದಾದ್ದರಿಂದ ಇದನ್ನು 'ನಿಗಮ'ವೆಂತಲೂ ಕರೆಯುತ್ತಾರೆ. ಶ್ರವಣಾರ್ಥಕವಾದ 'ಶ್ರು' ಧಾತುವಿನಿಂದ 'ಶ್ರುತಿ' ಶಬ್ದವೂ, ಅಭ್ಯಾಸಾರ್ಥಕವಾದ 'ಮ್ನಾ' ಧಾತುವಿನಿಂದ 'ಆಮ್ನ' ಶಬ್ದವೂ ಉತ್ಪತ್ತಿಯಾಗಿದೆಯೆಂದು ನಿರುಕ್ತದಿಂದ ತಿಳಿಯುತ್ತದೆ.

ವೇದವು ವಿಶ್ವಸಾಹಿತ್ಯದಲ್ಲೇ ಪ್ರಾಚೀನವಾದ ಗ್ರಂಥವೆಂಬುದನ್ನು ತಿಳಿದೆವು. ಭಾರತೀಯ ಧರ್ಮ ಮತ್ತು ತತ್ವಜ್ಞಾನಗಳ ಆಕೃತಿ ಮತ್ತು ಪ್ರಕೃತಿ, ಉದ್ಗಮ ಹಾಗೂ ವಿಕಾಸ ಇವುಗಳನ್ನು ಚೆನ್ನಾಗಿ ತಿಳಿಯಬೇಕಾದರೆ, ಈ ಗ್ರಂಥರತ್ನಗಳ ಗಾಢವಾದ ಪರ್ಯಾಲೋಚನೆ ಅತ್ಯಾವಶ್ಯಕ. ಆದರೆ ಶ್ರುತಿ ಸಮ್ಮತವಾದ ದಾರ್ಶನಿಕ ವಿಚಾರಧಾರೆಯ ವಿಷಯದಲ್ಲಿ ಸಂಪೂರ್ಣವಾಗಿ ಮತಭೇದವಿದೆ. ವೇದಗಳನ್ನು ಇಂದು 'ಪ್ರಾಚೀನ ಪದ್ಧತಿ' ಮತ್ತು 'ಅರ್ವಾಚೀನ ಪಾಶ್ಚಾತ್ಯ ರೀತಿ' ಎಂಬ ಎರಡು ವಿಧಗಳಲ್ಲಿ ಅಧ್ಯಯನ ಮಾಡುತ್ತಾರೆ. ಪಾಶ್ಚಾತ್ಯ ರೀತಿಯು ವೇದಾರ್ಥವನ್ನು ಪರಿಶೀಲಿಸಲು ಪಾಶ್ಚಾತ್ಯ ಸಾಹಿತ್ಯವನ್ನು ಅಪೇಕ್ಷಿಸುತ್ತದೆ. ಪ್ರಾಚೀನ ಪದ್ಧತಿಯು ಇತಿಹಾಸ ಪುರಾಣಗಳನ್ನು ವೇದಾರ್ಥದ ವಿಸ್ತರಣಕ್ಕಾಗಿ ಸಹಾಯಕಗಳೆಂಬುದಾಗಿ ಆದರಿಸುತ್ತದೆ. ಮಹಾಭಾರತದ ಆದಿಪರ್ವದಲ್ಲಿ ಬರುವ ಈ ಶ್ಲೋಕವು ಇದನ್ನು ಪ್ರತಿಬಿಂಬಿಸುತ್ತದೆ.

ಇತಿಹಾಸ ಪುರಾಣಾಭ್ಯಾಂ ವೇದಂ ಸಮುಪ ಬೃಂಹಯೇತ್ ।
ಬಿಭೇತ್ಯಲ್ಪ ಶ್ರುತಾದ್ವೇದೋ ಮಾಮಯಂ ಪ್ರಹರಿಷ್ಯತಿ ॥ ೧–೨೫

ಈ ದೃಷ್ಟಿಭೇದದ ವಿಚಾರ ಎರಡೂ ಮತಗಳಲ್ಲಿಯೂ ಭಿನ್ನ ಪ್ರಕಾರದಿಂದಿದೆ. ಪಾಶ್ಚಾತ್ಯ ವಿದ್ವಾಂಸರು ವೇದಗಳಿಗೆ ಅಸಂಸ್ಕೃತ ಮತ್ತು ಅತಿ ಸಂಸ್ಕೃತರಾದ ಆರ್ಯಜನರ ವಿಲಕ್ಷಣವಾದ ಗಾಯನವೆಂಬುದಕ್ಕಿಂತ ಹೆಚ್ಚಿನ ಮಹತ್ವವನ್ನು ಕೊಡುವುದಿಲ್ಲ. ಆದರೆ ಭಾರತೀಯ ಕಲ್ಪಾನುಸಾರವಾಗಿ ವೇದವು ನಿತ್ಯವಾದುದು. ಸಮಸ್ತವಾದ ಜ್ಞಾನದ ಅಮೂಲ್ಯ ಭಂಡಾರ ಮತ್ತು ಧರ್ಮದ ಸಾಕ್ಷಾತ್ಕಾರ ಹೊಂದಿದ್ದ ಮಹರ್ಷಿಗಳು ಅನುಭವಕ್ಕೆ ತಂದುಕೊಂಡಿದ್ದ ಪರಮ ತತ್ತ್ವವನ್ನು ಪರಿಚಯ ಮಾಡಿಕೊಡುವುದೇ ಅದರ ಉದ್ದೇಶ.

ಇಷ್ಟಪ್ರಾಪ್ತಿ: ಅನಿಷ್ಟ ಪರಿಹಾರಯೋಃ ಅಲೌಕಿಕಮುಪಾಯಂ
ಯೋ ಗ್ರಂಥಯೋಃ ವೇದಯತಿ ಸ ವೇದಃ ।

—ಸಾಯಣಾಚಾರ್ಯ

ಅಂದರೆ ಇಷ್ಟಾರ್ಥಸಿದ್ಧಿ ಮತ್ತು ಅನಿಷ್ಟದ ಪರಿಹಾರಗಳನ್ನುಂಟು ಮಾಡುವುದಕ್ಕೆ ಅಲೌಕಿಕ ಉಪಾಯಗಳನ್ನು ತಿಳಿಯುವುದೇ ವೇದ. ಉದಾಹರಣಾರ್ಥವಾಗಿ ಕಂಟಕ ಪರಿಹಾರಕ್ಕೆ ಆಯುಷ್ಯಹೋಮ, ರೋಗ ನಿವಾರಣೆಗೆ ಅರುಣಪೂರ್ವಕ ಸೂರ್ಯನಮಸ್ಕಾರ, ಮೃತ್ಯುಂಜಯ ಜಪ, ನವಗ್ರಹ ಜಪ, ಚಂಡೀ ಹೋಮ, ರುದ್ರ ಹೋಮ, ಮಳೆ ಬರಿಸಲು ಪರ್ಜನ್ಯ ಜಪ, ಸೋಮ ಸೂತ್ರ, ಸ್ವರ್ಗ ಪ್ರಾಪ್ತಿಗೆ ಅಶ್ವಮೇಧಯಾಗ, ಸೋಮಯಾಗ ಇತ್ಯಾದಿ. ಪ್ರತ್ಯಕ್ಷದ ಮತ್ತು ಅನುಮಾನಗಳ ದ್ವಾರಾ ಗೊತ್ತಾಗದ ಅಲೌಕಿಕ ಉಪಾಯಗಳನ್ನು ತಿಳಿಸುವುದರಲ್ಲಿಯೇ ವೇದದ 'ವೇದತ್ವ' ವಿರುವುದು. ಶಂಕರಭಾಷ್ಯದಲ್ಲಿ ಈ ವಿಷಯ ಉಕ್ತವಾಗಿದೆ.

ಶ್ರುತಿಶ್ಚನಃ ಪ್ರಮಾಣಮತೀಂದ್ರಿಯಾರ್ಥ ವಿಜ್ಞಾನೋತ್ಪತ್ತಾ । ೨-೩-೧

ವೇದದ ವಿಭಾಗಕ್ರಮ : ವೇದದಲ್ಲಿ ಮುಖ್ಯವಾಗಿ ನಾಲ್ಕು ವಿಭಾಗಗಳಿವೆ. (೧) ಋಗ್ವೇದ (೨) ಯಜುರ್ವೇದ (೩) ಸಾಮವೇದ ಮತ್ತು (೪) ಅಥರ್ವವೇದ. ಪ್ರತಿಯೊಂದು ವೇದಕ್ಕೂ ನಾಲ್ಕು ಒಳ ವಿಭಾಗಗಳಿವೆ. ಅವು (೧) ಮಂತ್ರ ಸಂಹಿತೆ ಅಥವಾ ಸ್ತುತಿಗಳು (೨) ಬ್ರಾಹ್ಮಣ (೩) ಆರಣ್ಯಕ ಮತ್ತು (೪) ಉಪನಿಷತ್ತುಗಳು.

ಈ ವಿಭಾಗಗಳು ಅನುಕ್ರಮವಾಗಿ ಮನುಷ್ಯನ ಜೀವಿತದ ನಾಲ್ಕು ಅವಸ್ಥಾ ಹಂತಗಳಾದ ಬಾಲ್ಯ, ಯೌವನ, ಪ್ರೌಢ, ವೃದ್ಧಾಪ್ಯ ಅಥವಾ ಬ್ರಹ್ಮಚರ್ಯ, ಗಾರ್ಹಸ್ಥ್ಯ, ವಾನಪ್ರಸ್ಥ ಮತ್ತು ಸನ್ಯಾಸ ಹಂತಗಳಿಗೆ ಉಪಯೋಗವಾಗುವಂತೆ ವಿಭಾಗಿಸಲ್ಪಟ್ಟಿದೆಯೆಂದು ಹೇಳುತ್ತಾರೆ.

ವೇದದಲ್ಲಿ ಪ್ರತಿಪಾದಿತವಾಗಿರುವ ವಿಷಯವನ್ನು ಒಟ್ಟಾಗಿ ಪರಿಗಣಿಸಿ ಮೂರು ಭಾಗಗಳಾಗಿ ವಿಂಗಡಿಸಿರುತ್ತಾರೆ. ಅವು (೧) ಕರ್ಮಕಾಂಡ (೨) ಉಪಾಸನಾ ಕಾಂಡ (೩) ಜ್ಞಾನಾಕಾಂಡ.

(೧) ಕರ್ಮಕಾಂಡ : ವೇದದ ಕರ್ಮಕಾಂಡವು ಹೆಸರೇ ಸೂಚಿಸುವಂತೆ ಕರ್ಮಗಳ ಆಗರ. ಇಲ್ಲಿ ವಿವಿಧ ರೀತಿಯ ಯಾಗಗಳು, ಸಂಸ್ಕಾರ ಪದ್ಧತಿಗಳು. ಇವುಗಳನ್ನು ಆಚರಿಸುವ ವಿಧಾನಗಳು ವರ್ಣಿಸಲ್ಪಟ್ಟಿದೆ. ವೇದದ ಮಂತ್ರ ಭಾಗ ಮತ್ತು ಬ್ರಾಹ್ಮಣ ಭಾಗಗಳು ಕರ್ಮಕಾಂಡಕ್ಕೆ ಸೇರಿದವು. ಮಂತ್ರ ಸಂಹಿತೆಯು ದಂಡಾಕಾರವಾಗಿರುತ್ತದೆ. ಅಂದರೆ ವಾಕ್ಯವು ಉದ್ದವಾಗಿರುತ್ತದೆ. ಉದಾಹರಣಾರ್ಥವಾಗಿ ಯಜುರ್ವೇದ ಸಂಹಿತೆಯಲ್ಲಿ ಬರುವ ಈ ವಾಕ್ಯವನ್ನು ನೋಡಿ.

> ಪ್ರತಿಪೂರುಷ ಮೇಕ ಕಪಾಲಾನ್ನಿರ್ವ ಪತ್ಯೇಕ ಮತಿರಿಕ್ತಂ ಯಾವಂತೋ ಗೃಹ್ಯಾಸ್ಸ್ಮಸ್ತೇಭ್ಯಃ ಕಮಕರಂ ಪಶೂನಾಗಂ ಶರ್ಮಾಸಿ ಶರ್ಮಯಜಮಾನಸ್ಯ ಶರ್ಮಮೇ ಯಚ್ಛ್ಯೆಕ ಏವ ರುದ್ರೋನ ದ್ವಿತೀಯಾಯ ತಸ್ಥ ಆಖುಸ್ತೇ ರುದ್ರ ಪಶುಸ್ತಂಜುಷ ಸ್ವೈಷ್ಯಪತೇ ರುದ್ರಭಾಗ ಸ್ಸಹಸ್ವ ಸ್ರಾಂಬಿಕಯಾತಂ ಜಷಸ್ವ ಭೇಷ ಜಂಗವೇಶ್ವಾಯ ಪುರುಷಾಯ ಭೇಷಜಮಥೋ ಅಸ್ಮಭ್ಯಂ ಭೇಷ್ ಜಗಂ ಸಂಭೇಷ ಜಮ್ ॥

ಮೇಲೆ ಹೇಳಿದ ಇಷ್ಟೂ ಒಂದೇ ಒಂದು ವಾಕ್ಯ. ಇದಕ್ಕಿಂತ ಉದ್ದವಾದ ಹಾಗೂ ಚಿಕ್ಕದಾದ ವಾಕ್ಯಗಳೂ ಇವೆ. ಆದರೆ 'ಬ್ರಾಹ್ಮಣ'ದ ವಾಕ್ಯಗಳು ಇಷ್ಟು ಉದ್ದವಾಗಿರುವುದಿಲ್ಲ. ಒಮ್ಮೊಮ್ಮೆ ಒಂದು ಪದವೇ ಒಂದು ವಾಕ್ಯವಾಗಬಹುದು. ಉದಾಹರಣೆಗೆ ಯಜುರ್ವೇದದ ಒಂದು ಭಾಗವನ್ನು ನೋಡೋಣ.

> ಸತ್ಯಂ ಪ್ರಪದ್ಯೆ । ಋತಂ ಪ್ರಪದ್ಯೆ । ಅಮೃತಂ ಪ್ರಪದ್ಯೆ ।
> ಪ್ರಜಾಪತೇಃ ಪ್ರಿಯಾಂ ತನು ಮಮನಾತ್ಮಾಂ ಪ್ರಪದ್ಯೆ ।

(೨) **ಉಪಾಸನಾ ಕಾಂಡ**: ವಿವಿಧ ರೀತಿಯ ಧ್ಯಾನಾದಿ ಕ್ರಮಗಳನ್ನು ಒಳಗೊಂಡ ಉಪಾಸನ ವಿಧಿಗಳ ವಿವರಣೆಯು ಅಡಕವಾಗಿರುವ ವೇದ ಭಾಗವೇ 'ಉಪಾಸನಾಕಾಂಡ'. ಈ ಉಪಾಸನಾಕಾಂಡದ ಮತ್ತೊಂದು ಹೆಸರೇ 'ಆರಣ್ಯಕ' ಜನಜಂಗುಳಿಯಿಂದ ದೂರವಾಗಿ ಪ್ರಾಪಂಚಿಕ ಕಾರ್ಯಕಲಾಪಗಳಿಂದ ಹೊರಗಾಗಿ ಪ್ರಶಾಂತವಾದ ಆರಣ್ಯಗಳಲ್ಲಿ ವಾನಪ್ರಸ್ಥಾಶ್ರಮವಾಸಿಗಳಾಗಿ ಆಧ್ಯಾತ್ಮ ವಿದ್ಯೆಯನ್ನು ಪರಿಶೀಲಿಸುವುದಕ್ಕೆ ಸಹಾಯ ಮಾಡುವ ವೇದಭಾಗವಿದಾದ್ದರಿಂದ ಇದಕ್ಕೆ 'ಆರಣ್ಯಕ' ವೆಂಬ ಹೆಸರು ಬಂದಿರುತ್ತದೆ. ಕರ್ಮಕಾಂಡದಲ್ಲಿ ವಿವರಿಸಲ್ಪಟ್ಟ ಕರ್ಮವಿಧಿಗಳಿಗೆ ಆಧ್ಯಾತ್ಮಪರವಾದ ಅರ್ಥ ವಿವರಣೆಗಳು, ಆತ್ಮೋನ್ನತಿಗೆ ಧ್ಯಾನ–ಉಪಾಸನೆಗಳ ವಿಷಯಗಳು ವಿಸ್ತಾರವಾಗಿ ಇಲ್ಲಿ ವಿವರಿಸಲ್ಪಟ್ಟಿದೆ. ಗೃಹಸ್ಥಾಶ್ರಮಿಯು ಸನ್ಯಾಸಾಶ್ರಮವನ್ನು ಸ್ವೀಕರಿಸಲು ಸರ್ವಾಂಗೀಣ ತಯಾರಿಯನ್ನು ನೀಡುವ ವಾನಪ್ರಸ್ಥಾಶ್ರಮವನ್ನು ಕುರಿತಾದ ವಿಶಿಷ್ಟ ವಿವರಗಳು ಇಲ್ಲಿ ಬರುತ್ತವೆ.

(೩) **ಜ್ಞಾನಕಾಂಡ**: ಬಾಹ್ಯಾಚರಣೆ ಬಾಹ್ಯಕರ್ಮಗಳೆಲ್ಲವನ್ನೂ ದಾಟಿ, ಮಹೋನ್ನತವಾದ ಹಾಗೂ ಪರಿಪೂರ್ಣವಾದ ಸತ್ಯವೂ, ಸುಂದರವೂ, ಶಿವಮಯವೂ ಆದ ಪದವಿಯೊಂದಿಗೆ ಸಮರಸಗೊಳ್ಳುವ ಸಾಧನ ಮಾರ್ಗದ ವಿವರಣೆಯನ್ನೊಳಗೊಂಡ ವೇದಭಾಗವೇ 'ಜ್ಞಾನಕಾಂಡ'. ಈ ಭಾಗಕ್ಕೆ 'ಉಪನಿಷತ್' ಎಂದೂ ಕರೆಯುತ್ತಾರೆ.

'ಉಪನಿಷತ್' ಎಂಬ ಶಬ್ದವು 'ಉಪ' ಮತ್ತು 'ನಿ' ಎಂಬ ಉಪಸರ್ಗಗಳಿಂದ ಕೂಡಿದ 'ಸದ್' ಧಾತುವಿಗೆ 'ಕ್ವಿಪ್' ಪ್ರತ್ಯಯವನ್ನು ಸೇರಿಸುವುದರಿಂದಾಗಿದೆ. 'ಸದ್' ಧಾತುವಿಗೆ ಮೂರು ಅರ್ಥಗಳಿವೆ. (೧) 'ವಿಸರಣ' ಅಂದರೆ ನಾಶಮಾಡುವುದು (೨) 'ಗತಿ' ಅಂದರೆ ಹೊಂದುವುದು ಮತ್ತು (೩) 'ಅವಸಾಧನ' ಅಂದರೆ ಶಿಥಿಲ ಮಾಡುವುದು. ಯಾವ ವಿದ್ಯೆಯನ್ನು ಅಧ್ಯಯನ ಮಾಡುವುದರಿಂದ ದೃಷ್ಟಾನುಶ್ರವಿಕ ವಿಷಯಗಳಿಂದ ವಿತೃಷ್ಣರಾದ ಮುಮುಕ್ಷು ಜನರಿಗೆ ಸಂಸಾರ ಬೀಜ ಭೂತವಾದ ಅವಿದ್ಯೆಯು ನಷ್ಟವಾಗುತ್ತದೆಯೋ, ಯಾವ ವಿದ್ಯೆಯಿಂದ ಬ್ರಹ್ಮ ಸಾಕ್ಷಾತ್ಕಾರವಾಗುತ್ತದೆಯೋ ಮತ್ತು ಯಾವ ವಿದ್ಯೆಯ ಪರಿಶೀಲನೆಯಿಂದ ಗರ್ಭವಾಸಾದಿ ದುಃಖಸಮೂಹಗಳು ಇಲ್ಲವಾಗುತ್ತವೆಯೋ, ಆ ಆಧ್ಯಾತ್ಮ ವಿದ್ಯೆಯೇ 'ಉಪನಿಷತ್ತು'. ಭಗವಾನ್ ಶ್ರೀ ಶಂಕರಾಚಾರ್ಯರ ಈ ವ್ಯಾಖ್ಯಾನುಸಾರ ಉಪನಿಷತ್ತುಗಳ ಮುಖ್ಯವಾದ ಅರ್ಥ ಬ್ರಹ್ಮವಿದ್ಯೆ ಮತ್ತು ಬ್ರಹ್ಮವಿದ್ಯೆಯನ್ನು ಪ್ರತಿಪಾದಿಸುವ ಗ್ರಂಥಗಳೆಂಬುದು ಕಠಭಾಷ್ಯದಿಂದ ತಿಳಿಯುತ್ತದೆ. ಬ್ರಹ್ಮದ ಸ್ವರೂಪ, ಅದರಿಂದ ಉತ್ಪನ್ನವಾದ ಜೀವ ಮತ್ತು ಜಗತ್ತುಗಳೊಡನೆ ವಾಸ್ತವವಾಗಿ ಅದಕ್ಕಿರುವ ಸಂಬಂಧ, ಬ್ರಹ್ಮ ಸಾಕ್ಷಾತ್ಕಾರಕ್ಕೆ ಸಾಧನ ಇತ್ಯಾದಿ ವಿಷಯಗಳನ್ನು ವಿಸ್ತಾರವಾಗಿ ಈ ಉಪನಿಷತ್ತುಗಳಲ್ಲಿ ಪ್ರತಿಪಾದಿಸಲಾಗಿದೆ. ಅದ್ದರಿಂದಲೇ ಇವುಗಳಿಗೆ 'ಉಪನಿಷತ್' ಎಂಬ ಹೆಸರು ಅನ್ವರ್ಥವಾಗಿದೆ.

'ಉಪನಿಷತ್' ಎಂಬ ಪದಕ್ಕೆ ಮತ್ತೊಂದು ಅರ್ಥವಿದೆ. 'ಉಪ' ಅಂದರೆ ಸಮಿಪದಲ್ಲಿ 'ನಿ' ಅಂದರೆ ಕೆಳಗೆ 'ಷದ್' ಅಂದರೆ ಕುಳಿತು ಕಲಿಯುವ ವಿದ್ಯೆಯೊದುದರಿಂದ ಇದು 'ಉಪನಿಷತ್'. ಅಂದರೆ ಗುರುವಿನ ಸಾಮೀಪ್ಯವನ್ನೈದು ಶ್ರದ್ಧಾಭಕ್ತಿಗಳಿಂದ ಕಲಿಯುವ ವಿದ್ಯೆ. ಈ ಶಬ್ಧದ ಅವಯವಾರ್ಥದಲ್ಲಿ ಬಹಳ ಮತಭೇದಗಳಿವೆ. ಆ ಜಿಜ್ಞಾಸೆ ಇಲ್ಲಿ ಅಪ್ರಸ್ತುತ. ಒಟ್ಟನಲ್ಲಿ "ಮಾನವನನ್ನು ಅಮೃತತ್ವಕ್ಕೊಯ್ಯುವ ಜ್ಞಾನ ಅಥವಾ ಮಾನವನಿಗೂ-ಪರಮಾತ್ಮನಿಗೂ ಇರುವ ಸಂಬಂಧವನ್ನು ತಿಳಿಸುವ ಜ್ಞಾನ" ಎಂದು ಅರ್ಥೈಸಬಹುದು.

ವೇದದಲ್ಲಿರುವುದೇನು : (1) ಋಗ್ವೇದ : 'ಋಚಸ್ತುತೌ' ಎಂಬ ಧಾತುವಿನಿಂದ ಹುಟ್ಟಿರುವುದೇ ಋಗ್ವೇದ ಪದ. 'ಋಗ್ವೇದ'ವೆಂದರೆ ಸ್ತೋತ್ರಮಾಡುವ, ಸ್ತುತಿಸುವ ಸಂಹಿತೆ. ಅಗ್ನಿ, ವಾಯು, ಸೂರ್ಯ, ಇಂದ್ರ, ವಿಷ್ಣು, ರುದ್ರ ಮೊದಲಾದ ದೇವತೆಗಳೊಡನೆ ಅವರ ಪ್ರಕೃತಿ, ಪ್ರವೃತ್ತಿಗಳನ್ನು ಅನುಸರಿಸಿ ಗುಣವರ್ಣನೆಯನ್ನು ಮಾಡಿ ಪಾರ್ಥನೆಗಳನ್ನು ನಿರ್ವಹಿಸುವ ಮಂತ್ರಗಳು, ಸ್ತೋತ್ರಗಳು ಋಗ್ವೇದದಲ್ಲಿ ಬಹುಸಂಖ್ಯೆಯಲ್ಲಿವೆ. ಈ ಸ್ತುತಿಗಳು ವಿಶೇಷವಾದ ಆಧ್ಯಾತ್ಮ ಅಂತರಾರ್ಥಗಳಿಂದ ಕೂಡಿರುತ್ತದೆ. ಉದಾಹರಣಾರ್ಥರಾಗಿ ಋಗ್ವೇದದಲ್ಲಿ ಬರುವ ಪ್ರಾತಃ ಸೂಕ್ತದ ಈ ಕೆಳಗಿನ ಮಂತ್ರಗಳನ್ನು ಪ್ರತಿಯೊಬ್ಬರೂ ಜಪಿಸುತ್ತಾ ಕಾರ್ಯಪ್ರವೃತ್ತರಾಗುವುದು ಸೂಕ್ತವಾಗಿದೆ.

ಓಂ ಪ್ರಾತರಗ್ನಿಂ ಪ್ರಾತರಿಂದ್ರಗ್ಂ ಹವಾಮಹೇ ।
ಪ್ರಾತರ್ಮಿತ್ರಾವರುಣಾ ಪ್ರಾತರಶ್ವಿನಾ ।
ಪ್ರಾತರ್ಭಗಂ ಪೂಷಣಂ ಬ್ರಹ್ಮಣಸ್ಪತಿಂ ।
ಪ್ರಾತಸ್ಸೋಮ ಮುತ ರುದ್ರಗ್ಂ ಹುವೇಮ । (೭-೪೧-೧)

ತೇಜಸ್ವಿಯಾದ ದೇವದೇವನನ್ನು, ಸರ್ವೇಶ್ವರನಾದ ಭಗವಂತನನ್ನು ಸರ್ವರ ಮಿತ್ರರೂಪನಾಗಿಯೂ, ಸರ್ವೋತ್ತಮನಾಗಿಯೂ ಇರುವ ಪರಮೇಶ್ವರನನ್ನು, ಸೂರ್ಯ ಚಂದ್ರಾದಿಗಳನ್ನುಂಟುಮಾಡುವ ಸರ್ವವ್ಯಾಪಕನಾದ ದೇವನನ್ನು, ಇಡೀ ಐಶ್ವರ್ಯದ ಸ್ವಾಮಿಯೂ ಪೋಷಕನೂ ಜ್ಞಾನದ ಅಧಿಪತಿಯೂ ಆದ ದೇವನನ್ನು ಶಾಂತಿಮಯನಾಗಿಯೂ ದುಷ್ಟರಿಗೆ ಭಯಂಕರ ಸ್ವರೂಪನಾಗಿಯೂ ಇರುವ ಭಗವಂತನನ್ನು ನಾವೆಲ್ಲರೂ ಪ್ರಾತಃಕಾಲದಲ್ಲಿ ಭಜಿಸುತ್ತೇವೆ.

ಓಂ ಪ್ರಾತರ್ಜಿತಂ ಭಗಮುಗ್ರಗ್ಂ ಹುವೇಮ ।
ವಯಂ ಪುತ್ರ ಮದಿತೇರ್ಯೋವಿಧರ್ತಾ ।
ಆದ್ರುಶ್ಚಿದ್ಯಂ ಮನ್ಯಮಾನ ಸ್ತುರಶ್ಚಿತ್ ।
ರಾಜಾಜಿದ್ಯಂ ಭಗಂ ಭಕ್ಷೀತ್ಯಾಹ ॥ (೭-೪೧-೨)

ಪ್ರಾತಃಕಾಲದಲ್ಲಿ ವಿಜಯಶಾಲಿಯೂ, ತೇಜಸ್ವಿಯೂ, ಆದ ಸ್ವಾತಂತ್ರ್ಯದ ರಕ್ಷಕನಾದ ಭಗವಂತನನ್ನು ಯಾವಾತನು ವಿಶೇಷ ರೀತಿಯಿಂದ ಪ್ರಪಂಚದ ಧಾರಕನಾಗಿರುತ್ತಾನೋ, ದುರ್ಬಲನೂ, ಬಲವಂತನೂ, ಅರಸನಾದರೂ ಯಾವಾತನ ಮಹಿಮೆಯನ್ನು ಮನ್ನಿಸುತ್ತಾ "ಹೇ ದೇವಾ ನಮಗೆ ಐಶ್ವರ್ಯವನ್ನು ದಯಪಾಲಿಸು"— ಎಂಬುದಾಗಿ ಪ್ರತಿಯೊಬ್ಬನೂ ಹೇಳುತ್ತಾನೋ ಅಂತಹ ಸರ್ವೇಶ್ವರನ ಧ್ಯಾನವನ್ನು ನಾವೆಲ್ಲರೂ ಅಗತ್ಯವಾಗಿ ಮಾಡೋಣ.

ಓಂ ಭಗ ಏವ ಭಗವಾಗಂ ಅಸ್ತು ದೇವಾಃ ।
ತೇನವಯಂ ಭಗವಂತ ಸ್ಯಾಮ ।
ತಂತ್ವಾ ಭಗ ಸರ್ವ ಇಜ್ಜೋಹವೀಮ ।
ಸನೋ ಭಗ ಪುರಏತಾ ಭವೇಹ ॥ (೭-೪೧-೫)

ಸರ್ವಪ್ರಕಾಶಕನಾದ ಭಗವಂತನು ಇಡೀ ಐಶ್ವರ್ಯದ ಸ್ವಾಮಿಯೇ ಆಗಿರುತ್ತಾನೆ. ಆದುದರಿಂದ ಆತನ ಆಶ್ರಯದಿಂದ ನಾವು ಐಶ್ವರ್ಯ ಸಂಪನ್ನರಾಗುವೆವು. ಹೇ ಭಗವಂತನೇ ಭಗವಂತನಾದ ನಿನ್ನನ್ನು ನಾನು ಸಂಪೂರ್ಣ ಭಾವದಿಂದ ಭಜಿಸುತ್ತೇನೆ. ನಿನ್ನ ಪ್ರಾಪ್ತಿಗಾಗಿ ನನ್ನ ಆತ್ಮ ಸಮರ್ಪಣೆ ಮಾಡುತ್ತೇನೆ. ಹೇ ಭಗವಂತನೇ, ಇಂತಹ ಸ್ವಾಮಿಯಾದ ನೀನು ನಮ್ಮ ನಾಯಕನಾಗಿರು, ಮಾರ್ಗದರ್ಶಕನಾಗಿರು.

ಇಂತಹ ಸೂಕ್ತಗಳು ವೇದದಲ್ಲಿ ಅಸಂಖ್ಯಾತವಾಗಿದೆ. ಒಟ್ಟಿನಲ್ಲಿ ಹೇಳುವುದಾದರೆ ಋಗ್ವೇದದಲ್ಲಿ ಹೇಳದ ವಿಷಯವೇ ಇಲ್ಲ ಎನ್ನುವಷ್ಟರ ಮಟ್ಟಿಗೆ ಪರಿಪೂರ್ಣವೂ, ಸತ್ವಪೂರ್ಣವೂ ಆಗಿರುವ ವಿದ್ಯಾಸಾಗರವೇ ಋಗ್ವೇದ.

ಋಗ್ವೇದದಲ್ಲಿ 1028 ಸೂಕ್ತಗಳಿವೆ. ವೇದ ಮಂತ್ರಗಳ ಸಮುದಾಯವೇ 'ಸಂಹಿತೆ' ಋಗ್ವೇದದಲ್ಲಿ ಮುಖ್ಯವಾಗಿ ಇರುವ ವಿಭಾಗಗಳು ಹತ್ತು. ಇವುಗಳನ್ನು 'ಮಂಡಲ'ಗಳೆಂದು ಕರೆಯುತ್ತಾರೆ.

ಹಾಗೆಯೇ ಇದರಲ್ಲಿ 64 ಅಧ್ಯಾಯಗಳಿವೆ. ಋಗ್ವೇದವನ್ನು ಕುರಿತಾದ ಹೆಚ್ಚಿನ ವಿವರಗಳು ಹೀಗಿವೆ.

1.	ಋಗ್ವೇದದ ಉಪವೇದ	:	ಆಯುರ್ವೇದ
2.	ಋಗ್ವೇದದ ಬ್ರಾಹ್ಮಣ	:	ಐತರೇಯ, ಸಂಖ್ಯಾಯನ, ಕೌಷೀತಕಿ,
3.	ಋಗ್ವೇದದ ಆರಣ್ಯಕ	:	ಐತರೇಯ, ಕೌಷೀತಕಿ,
4.	ಋಗ್ವೇದದ ಶ್ರೌತಸೂತ್ರ	:	ಆಶ್ವಲಾಯನ
5.	ಋಗ್ವೇದದ ಗೃಹ್ಯಸೂತ್ರ	:	ಸಾಂಖ್ಯಾಯನ

6. ಋಗ್ವೇದದ ಸೂಕ್ತಗಳಲ್ಲಿಯ ಮುಖ್ಯ ದ್ರಷ್ಟಾರರು: ಮಧುಚ್ಛಂದ, ಮೇಧಾತಿಥಿ, ಶುನಶ್ಶೇಫ, ಕಣ್ವ, ಪರಾಶರ, ಕಶ್ಯಪ, ವಿಶ್ವಾಮಿತ್ರ, ವಾಮದೇವ ಋಷಿಗಳು.

7. ಋಗ್ವೇದದ ಅರ್ಥ ವಿವರಣೆ ತಿಳಿಸುವ ಸಹಾಯಕ ಗ್ರಂಥಗಳು:—

(i) ನಿಘಂಟು ಮತ್ತು ದೇವರಾಜಯಜ್ವಾ ಇವರ ಟೀಕೆ.

(ii) ಯಾಸ್ಕರನ ನಿರುಕ್ತ ಮತ್ತು ದುರ್ಗಾಚಾರ್ಯನ ಟೀಕೆ.

(೨) **ಯಜುರ್ವೇದ:** ಯಾಜ್ಞಯಾಗಾದಿಗಳನ್ನು ಕುರಿತ ವಿವರವಾದ ವಿಧಿ ವಿಧಾನಗಳು ಯಜುರ್ವೇದದಲ್ಲಿ ಸೇರಿದೆ. ಈ ವೇದದಲ್ಲಿ 40 ಅಧ್ಯಾಯಗಳಿವೆ. ಯಜುರ್ವೇದದಲ್ಲಿ 'ಕೃಷ್ಣಯಜುರ್ವೇದ' ಮತ್ತು 'ಶುಕ್ಲಯಜುರ್ವೇದ' ಎಂಬ ಎರಡು ವಿಭಾಗಗಳಿದ್ದು ಕೃಷ್ಣಯಜುರ್ವೇದಕ್ಕೆ 'ತೈತ್ತರೀಯ ಸಂಹಿತೆ' ಯೆಂದೂ ಶುಕ್ಲಯಜುರ್ವೇದಕ್ಕೆ 'ವಾಜಸನೇಯ ಸಂಹಿತೆ' ಎಂದೂ ಹೆಸರಿದೆ.

ಋಗ್ವೇದದಂತೆಯೇ ಯಜುರ್ವೇದದಲ್ಲಿಯೂ ಸಹ ದೇವತಾ ಸ್ತುತಿಗಳಿವೆ. ಕೃಷ್ಣಯಜುರ್ವೇದ ತೈತ್ತರೀಯ ಸಂಹಿತಾ ಚತುರ್ಥ ವೈಶ್ವದೇವ ಕಾಂಡದ ಪಂಚಮ ಪ್ರಪಾಠಕದಲ್ಲಿ ಬರುವ ಶ್ರೀರುದ್ರಸೂಕ್ತವೂ ಮತ್ತು ಸಪ್ತಮ ಪ್ರಪಾಠಕದ ಚಮಕವೂ ಪರಮೇಶ್ವರನನ್ನು ಕುರಿತ ಸ್ತುತಿಯಾಗಿದೆ. ಉದಾಹರಣಾರ್ಥವಾಗಿ ರುದ್ರನಮಕದಲ್ಲಿ ಬರುವ ಒಂದು ವಾಕ್ಯವನ್ನು ನೋಡೋಣ.

ಓನ್ನಮಸ್ತೇ ರುದ್ರ ಮನ್ಯವ ಉತೋತ ಇಷವೇ ನಮಃ ।
ನಮಸ್ತೇ ಅಸ್ತು ಧನ್ವನೇ ಬಾಹುಭ್ಯಾಮುತ ತೇ ನಮಃ ॥

ಯಜುರ್ವೇದದ ಬಗ್ಗೆ ಹೆಚ್ಚಿನ ವಿವರಗಳು ಈ ಕೆಳಕಂಡಂತಿವೆ.

1.	ಯಜುರ್ವೇದದ	ಉಪವೇದ	: ಧನುರ್ವೇದ
2.	ಕೃಷ್ಣಯಜುರ್ವೇದದ	ಬ್ರಾಹ್ಮಣ	: ತೈತ್ತರೀಯ, ಮೈತ್ರಾಯಣಿ
3.	ಕೃಷ್ಣಯಜುರ್ವೇದದ	ಆರಣ್ಯಕ	: ತೈತ್ತರೀಯ
4.	ಕೃಷ್ಣಯಜುರ್ವೇದದ	ಗೃಹ್ಯಸೂತ್ರ	: ಆಪಸ್ತಂಭ, ಭೋಧಾಯನ ಭಾರದ್ವಾಜ, ಮಾನವ.
5.	ಕೃಷ್ಣಯಜುರ್ವೇದದ	ಬ್ರಾಹ್ಮಣ	: ಶತಪಥ
6.	ಕೃಷ್ಣಯಜುರ್ವೇದದ	ಆರಣ್ಯಕ	: ದೂರ್ಧಂದಿನ
7.	ಶ್ರೌತಸೂತ್ರ		: ಕಾತ್ಯಾಯನ, ಬೈಜವಾಪ. ಪಾರಸ್ಕರ.
8.	ಗೃಹ್ಯಸೂತ್ರ		: ಪಾರಸ್ಕರ, ಕಾಪೇಯ
9.	ಯಜುರ್ವೇದದ ಭಾಷ್ಯ		: ಶ್ರೀಸಾಯಣಾಚಾರ್ಯರ ಭಾಷ್ಯ ಶ್ರೀ ಉದ್ಭಟರ ಭಾಷ್ಯ

(೩) **ಸಾಮವೇದ**: 'ಸಾಮ' ಎಂದರೆ 'ಗಾನ' ಎಂದರ್ಥ. ಮಂತ್ರಗಳನ್ನು ಸ್ವರಸಂಯೋಜನೆ ಮಾಡಿ ಹಾಡುವುದಕ್ಕೆ 'ಸಾಮ' ಎನ್ನುತ್ತಾರೆ. ದೇವತೆಗಳನ್ನು ಉದ್ದೇಶಿಸಿ ಸ್ತುತಿಸುವ ಮಂತ್ರಗಳು ಇಲ್ಲಿ ಸ್ವರಲಯ ಸಹಿತ ಛಂದೋಬದ್ಧವಾಗಿವೆ. ಈ ವೇದಮಂತ್ರಗಳನ್ನು ಯಜ್ಞದಲ್ಲಿ ಉದ್ಗಾತೃವು ಹಾಡುತ್ತಾನೆ. ಈ ವೇದದಲ್ಲಿ ಋಗ್ವೇದದ ಮಂತ್ರಗಳೇ ತತ್ಪ್ರತಿಯೆಂಬಂತಿದ್ದು ಹೆಚ್ಚು ಕಡಿಮೆ 78 ಮಂತ್ರಗಳು ಮಾತ್ರ ಹೊಸದಾಗಿವೆ. 'ಸಂಗೀತ ವೇದ'ವೆಂದು ಕರೆಯಲ್ಪಡುವ ಈ ವೇದದಲ್ಲಿ ನಾಲ್ಕು ತರಹದ ಗಾನ ಸ್ತೋತ್ರಗಳೂ ಸ್ಥೂಲವಾಗಿ ಕಂಡು ಬರುತ್ತವೆ. ಅವು (1) ಗ್ರಾಮಗೇಯ, (2) ಊಹ (3) ಊಹ್ಯ ಮತ್ತು (4) ಅರಣ್ಯಗಾನ. ಸಾಮವೇದದಲ್ಲಿ ಭಾರತೀಯ ಸಂಗೀತಶಾಸ್ತ್ರದ ಸಪ್ತಸ್ವರಗಳೂ ಪ್ರಯೋಗಿಸಲ್ಪಟ್ಟವೆಯೆಂದು ಸಂಗೀತಜ್ಞರು ಅಭಿಪ್ರಾಯಪಡುತ್ತಾರೆ. ವೇದಕಾಲದಲ್ಲಿ ಸಂಗೀತವು ಉನ್ನತ ಮಟ್ಟವನ್ನು ತಲುಪಿತ್ತೆಂಬುದಕ್ಕೆ ಈ ವೇದವು ನಿದರ್ಶನವಾಗಿದೆ. ಸಾಮವೇದದಲ್ಲಿ 15 ಭಾಗಗಳಿದ್ದು 32 ಅಧ್ಯಾಯಗಳಿವೆ. ಹೆಚ್ಚಿನ ವಿವರಗಳು ಈ ರೀತಿ ಇವೆ.

1. ಸಾಮವೇದದ ಬ್ರಾಹ್ಮಣ : ತಲವಕಾರ, ಪಂಚವಿಂಶ ಅಥವಾ ತಾಂಡ್ಯ, ಷಡ್ವಿಂಶತಿ.
2. ಶ್ರೌತಸೂತ್ರ : ಲಾಟ್ಯಾಯನ, ದ್ರಾಹ್ಯಾಯಣ
3. ಗೃಹ್ಯಸೂತ್ರ : ಗೋಭಿಲ, ಖಾದಿರ, ಗೌತಮ
4. ಉಪವೇದ : ಗಾಂಧರ್ವವೇದ (ಸಂಗೀತ)

(೪) **ಅಥರ್ವವೇದ**: ವೇದವಿಭಾಗದಲ್ಲಿ ಕೊನೆಯದೇ 'ಅಥರ್ವವೇದ'. ಅಥರ್ವಣ ಅಂಗೀರಸ ಋಷಿಗಳಿಂದ ಕಂಡುಹಿಡಿಯಲ್ಪಟ್ಟ ಮಂತ್ರಗಳಿಂದ ಕೂಡಿದ ವೇದವಿದಾದ್ದರಿಂದ ಇದಕ್ಕೆ 'ಅಥರ್ವ' ಎಂಬ ಹೆಸರು ಬಂದಿದೆಯೆಂಬುದು ಕೆಲವು ತಜ್ಞರ ಅಭಿಪ್ರಾಯ. ಈ ವೇದಕ್ಕೆ 'ಅಥರ್ವಣವೇದ,' 'ಅಥರ್ವಾಂಗಿರಸ,' 'ಅಂಗೀರಸ,' 'ಭೃಗ್ವಂಗಿರಸ,' 'ಭೃಗುವಿಸ್ತರ,' 'ಭೈಷಜ್ಯವೇದ,' 'ಕ್ಷತ್ರವೇದ' ಎಂಬ ಹೆಸರುಗಳೂ ಇವೆ.

ಈ ವೇದದಲ್ಲಿ 20 ಕಾಂಡಗಳೂ, 760 ಸೂಕ್ತಗಳೂ, 6000 ಮಂತ್ರಗಳೂ ಇವೆ. ಅಥರ್ವಣ ಋಷಿಗಳಿಂದ ಸುಮಾರು 175 ಸೂಕ್ತಗಳೂ, ಅಂಗಿರಸರಿಂದ 15 ಸೂಕ್ತಗಳೂ, ಅಥರ್ವಾಂಗಿರಸರಿಂದ 17 ಸೂಕ್ತಗಳೂ, ಬ್ರಹ್ಮನ್ ಋಷಿಗಳಿಂದ 100 ಸೂಕ್ತಗಳೂ, ಉಳಿದವು ಇತರ ಋಷಿಗಳಿಂದಲೂ ಸಂಕಲಿತವಾಗಿವೆ.

ಗದ್ಯ ಪದ್ಯ ಶೈಲಿಯಲ್ಲಿ ಸಮ್ಮಿಶ್ರವಾಗಿರುವ ಈ ವೇದದಲ್ಲಿ ವಿವಾಹ ಪದ್ಧತಿ, ಗೃಹನಿರ್ಮಾಣ, ರಾಜ್ಯದಲ್ಲಿ ರಾಜರ ಆಯ್ಕೆ, ಶವ ಸಂಸ್ಕಾರ ಇತ್ಯಾದಿ ದಿನನಿತ್ಯದ ಜೀವನಕ್ಕೆ ಸಂಬಂಧಿಸಿದ ವಿಚಾರಗಳು ಕೂಡ ಇವೆ. ಅಲ್ಲದೇ ತಂತ್ರವಿದ್ಯೆ, ಆಭಿಚಾರಿಕ

ವಾದ ಮಾಟ, ಛಿದ್ರ, ಮಾರಣ, ಉಚ್ಚಾಟನ. ಸ್ತಂಭನ, ಯಕ್ಷಿಣೀ, ಇಂದ್ರಜಾಲ, ಮಹೇಂದ್ರಜಾಲ ಇತ್ಯಾದಿ ವಿದ್ಯೆಗಳ ವಿಚಾರವೂ ವಿಸ್ತಾರವಾಗಿವೆ. ಆದುದರಿಂದಲೇ ಅಥರ್ವವೇದವು 'ವೇದ'ದ ಸ್ಥಾನವನ್ನು ಪಡೆಯಲು ಬಹುಕಾಲಬೇಕಾಯಿತು. ಎಂದು ಕೆಲವು ವಿದ್ವಾಂಸರು ಅಭಿಪ್ರಾಯ ಪಡುತ್ತಾರೆ.

ತ್ರಯೀ ವಿದ್ಯೆಯಲ್ಲಿ ಅಥರ್ವವೇದವು ಸೇರದೇ ಇರುವುದನ್ನು ಗಮನಿಸಿದರೆ ಈ ಮಾತಿನ ಸತ್ಯಾಂಶವು ಸ್ಫುರಿಸುತ್ತದೆ. ತ್ರಯೀವಿದ್ಯೆಯು ಗುರಿ ಕೇವಲ ಆಮುಷ್ಮಿಕ. ಅಥರ್ವವೇದವು ಐಹಿಕ ಸುಖಕ್ಕೆ ಹೆಚ್ಚು ಗಮನ ಕೊಟ್ಟಿತು. ಮೂರು ವೇದಗಳಲ್ಲಿ ಉಕ್ತವಾಗಿದ್ದ ಅತಿ ಜಟಿಲ ರೀತಿಯ, ಹೆಚ್ಚು ಧನವ್ಯಯದ ಮಹಾಯಜ್ಞ ಯಾಗಾದಿಗಳನ್ನು ಈ ಮಂತ್ರದ ದ್ರಷ್ಟಾರರು ಸುಲಭಗೊಳಿಸಿದರು.

ಅಥರ್ವವೇದದಲ್ಲಿ ಆಗ್ನೇಯ, ವಾಯುವ್ಯ ಇತ್ಯಾದಿ ಶಸ್ತ್ರಾಸ್ತ್ರಗಳ ಪ್ರಯೋಗ ಮಂತ್ರಗಳೂ ಇವೆ. ಇವೇ ಅಲ್ಲದೇ ವೈರ ಪ್ರಶಮನ, ದೀರ್ಘಾಯುಕ್ರಮ, ಆರೋಗ್ಯ ಕ್ರಮ, ಸತ್ಯವ್ರತ, ಶ್ರೇಯಸ್ಸು, ರೋಗಗಳ ನಿವಾರಣೋಪಾಯಗಳು, ಔಷಧಿಗಳ ವಿವರಗಳೂ ಸಹ ಇಲ್ಲಿವೆ. ಇದರ ಜತೆಗೆ ಯಜ್ಞಯಾಗಾದಿಗಳಲ್ಲಿ ಅನುಸರಿಸುವ ಕ್ರಮದ ತಿಳಿವಳಿಕೆಯೂ ಇದರಲ್ಲಿದೆ. ಯಜ್ಞದಲ್ಲಿ 'ಬ್ರಹ್ಮ'ನಿಗೆ ಈ ವೇದವು ಉಪಯುಕ್ತವಾದುದರಿಂದ ಇದನ್ನು 'ಬ್ರಹ್ಮವೇದ' ಎಂದೂ ಕರೆಯುತ್ತಾರೆ.

ಹೆಚ್ಚಿನ ವಿವರಗಳು ಈ ಕೆಳಕಂಡಂತಿವೆ.

1. ಉಪವೇದ	:	ಸ್ಥಾಪತ್ಯವೇದ ಅಥವಾ ಅರ್ಥವೇದ.
2. ಅಥರ್ವವೇದದ ಬ್ರಾಹ್ಮಣ	:	ಗೋಪಥ
3. ಶ್ರೌತಸೂತ್ರಗಳು	:	ವೈತಾನ, ಕೌಶಿಕ
4. ಗೃಹ್ಯಸೂತ್ರ	:	ಕೌಶಿಕ
5. ಉಪನಿಷತ್ತುಗಳು	:	ಪ್ರಶ್ನೋಪನಿಷತ್ತು, ಮುಂಡಕೋಪನಿಷತ್ತು, ಮಾಂಡೂಕ್ಯೋಪನಿಷತ್.

ಹೀಗೆ ವೈದಿಕ ಸಾಹಿತ್ಯದಲ್ಲಿ ಪ್ರಕಾಶಿತವಾಗಿರುವ ಭಾಗವು ವಿಪುಲವಾಗಿದೆ. ಅಂತೆಯೇ ಅಪ್ರಕಾಶಿತವಾಗಿರುವ ಭಾಗವೂ ಅಧಿಕವಾಗಿದೆ. ನಮ್ಮ ದೌರ್ಭಾಗ್ಯ ಹಾಗೂ ಔದಾಸೀನ್ಯದಿಂದ ವೇದದ ಅನೇಕ ಶಾಖೆಗಳು ಲುಪ್ತವಾಗಿ ಹೋಗಿವೆ. ಕೆಲವು ಖಿಲವಾಗಿ ಹೋಗಿವೆ. ಮಹಾಭಾಷ್ಯದ ಅನುಸಾರ ಋಗ್ವೇದದಲ್ಲಿ 21 ಶಾಖೆಗಳೂ, ಯಜುರ್ವೇದದಲ್ಲಿ 100 ಶಾಖೆಗಳೂ, ಸಾಮವೇದದಲ್ಲಿ 1000 ಶಾಖೆಗಳೂ ಮತ್ತು ಅಥರ್ವವೇದದಲ್ಲಿ 9 ಶಾಖೆಗಳೂ, ಇದ್ದವು. ಒಟ್ಟು 1130 ಶಾಖೆಗಳಲ್ಲಿ ಈಗ ಸುಮಾರು 10 ಅಥವಾ 12 ಶಾಖೆಗಳಿಗಿಂತ ಹೆಚ್ಚು ಸಿಕ್ಕಿಲ್ಲ. ವಿಷಯದ ದೃಷ್ಟಿಯಿಂದ ಎಲ್ಲಾ ಸಂಹಿತೆಗಳಿಗಿಂತಲೂ ಋಗ್ವೇದ ಸಂಹಿತೆಯೇ ಮಹತ್ವಪೂರ್ಣವಾದದು ಮತ್ತು ಪ್ರಥಮವಾದುದೆಂದು ಆದರಿಸುತ್ತಾರೆ.

ಮಂತ್ರಗಳ ನಿತ್ಯತ್ವ

ಮಂತ್ರವು ವರ್ಣಗಳ ಮಾಲೆ. ಈ ವರ್ಣಗಳಾದರೋ ಶಬ್ದಗಳ ಚಿಹ್ನೆ. ಶಬ್ದವೇ ಸೃಷ್ಟಿಯ ಮೂಲ. ಶಬ್ದವು ಸ್ವಯಂ ನಿತ್ಯ. ಶಬ್ದದ ನಿತ್ಯತ್ವವೇ ವೇದದ ನಿತ್ಯತ್ವಕ್ಕೆ ಪ್ರಬಲವಾದ ಕಾರಣ ಹಾಗೂ ಸರ್ವಶ್ರೇಷ್ಠವಾದ ಸಾರ್ಥಕ ಪ್ರಮಾಣ. ಕಿವಿಗಳಿಂದ ಕೇಳಲಾಗುವ ಧ್ವನಿಗಳು ಅನಿತ್ಯವಾದವು. ಅವು ಕೇವಲ ಶಬ್ದಗಳ ಸ್ವರೂಪವನ್ನು ಸೂಚಿಸುತ್ತವೆ. ಒಂದು ಪ್ರಬಲ ಹಾಗೂ ಪ್ರಸಿದ್ಧವಾದ ಉಕ್ತಿಯು ಈ ರೀತಿ ಇದೆ– "ಉಚ್ಚಾರವಾಡಲಾದ ಧ್ವನಿಯೇ ವಾಸ್ತವವಾದ ಶಬ್ದವಾಗುವುದಾದರೆ ಒಂದೇ ಶಬ್ದವನ್ನು ಹತ್ತು ಬಾರಿ ಉಚ್ಚಾರ ಮಾಡುವುದರಿಂದ ಹತ್ತು ಶಬ್ದಗಳ ಅನುಭವವಾಗಬೇಕಾಗುತ್ತದೆ. ಆದರೆ ಹಾಗಾಗದೇ ಒಂದೇ ಶಬ್ದದ ಅನುಭವವಾಗುತ್ತದೆ. ಆದುದರಿಂದ ಉಚ್ಚಾರಣೆಯು ಶಬ್ದಗಳನ್ನು ಉತ್ಪತ್ತಿ ಮಾಡುವುದಿಲ್ಲ. ಆದರೆ ಅದರ ಸ್ವರೂಪದ ಆವಿರ್ಭಾವವನ್ನುಂಟುಮಾಡುತ್ತವೆ. ಆದುದರಿಂದ ಉಚ್ಚಾರಣೆಯನ್ನು ಅವಲಂಬಿಸಿರುವುದರಿಂದ ಶಬ್ದವು ನಿತ್ಯವಾದುದು. ಅರ್ಥದೊಡನೆ ಶಬ್ದದ ಸಂಬಂಧವು ಸ್ವಾಭಾವಿಕ ಹಾಗೂ ನಿತ್ಯವಾಗಿರುತ್ತದೆ. ಮಂತ್ರಗಳು ನಿತ್ಯವಾದ ಶಬ್ದಗಳ ಸಮೂಹವಾಗಿರುತ್ತವೆ. ಆದ್ದರಿಂದ ವೇದವು ನಿತ್ಯವಾಗಿರುತ್ತದೆ."

ನಾವು ವಿಧವಿಧವಾದ ಶಬ್ದಗಳನ್ನು ಕೇಳಿದಾಗ ವಿವಿಧ ಭಾವನೆಗಳನ್ನು ಹೊಂದುತ್ತೇವೆ. ಕಾವ್ಯದಲ್ಲಿ ಬರುವ ನವರಸಗಳೂ ಕೂಡ ಶಬ್ದ ವೈವಿಧ್ಯದಿಂದಲೇ ರೂಪುಗೊಳ್ಳುತ್ತದೆ. ಶಬ್ದವು ಆಕಾಶದಲ್ಲಿ ಸ್ಪಂದನವನ್ನು ಉಂಟುಮಾಡುತ್ತದೆ. ಸ್ಪಂದನದಿಂದ ವಾಯುವಿನ ಉದಯ.

> ಆಕಾಶಾದ್ವಾಯುಃ । ವಾಯೋರಗ್ನಿಃ । ಅಗ್ನೇರಾಪಃ । ಅದ್ಭ್ಯಃ ಪೃಥಿವೀ ।
> ಪೃಥಿವ್ಯಾ ಓಷಧಯಃ । ಓಷಧೀಭ್ಯೋಽನ್ನಂ । ಅನ್ನಾತ್ಪುರುಷಃ ।

ಎನ್ನುತ್ತದೆ ಉಪನಿಷತ್ತು. ಅಂದರೆ ಆಕಾಶದಿಂದ ವಾಯು; ವಾಯುವಿನಿಂದ ಅಗ್ನಿ; ಅಗ್ನಿಯಿಂದ ನೀರು; ನೀರಿನಿಂದ ಭೂಮಿ, ಭೂಮಿಯಿಂದ ವನಸ್ಪತಿಗಳೂ, ವನಸ್ಪತಿಗಳಿಂದ ಅನ್ನವೂ, ಅನ್ನದಿಂದ ಪುರುಷನೂ ಉದ್ಭವಿಸಿದರು. ಸೃಷ್ಟಿಯಾದ ಕೂಡಲೇ ಅದರ ಪಾಲನೆ ಮತ್ತು ನಾಶ ಆಗಲೇಬೇಕಲ್ಲವೇ? ಈ ಮೂರು ಕಾರ್ಯಗಳೂ ಸಹ ಶಬ್ದದಿಂದಲೇ ಆಗುತ್ತಿದೆ. ಆ ಶಬ್ದ ಸಮೂಹವೇ ಮಂತ್ರ. ಅಂದ ಮೇಲೆ ಮಂತ್ರದಿಂದ ಜಗತ್ತಿನ ಎಲ್ಲಾ ವಸ್ತುಗಳನ್ನೂ ಸೃಷ್ಟಿಮಾಡಬಹುದು, ರಕ್ಷಿಸಬಹುದು ಹಾಗೂ ನಾಶಮಾಡಬಹುದು. ಆದ್ದರಿಂದಲೇ ಶ್ರೀಕೃಷ್ಣನು ಹೀಗೆ ಹೇಳಿದ್ದಾನೆ :

> ದೈವಾಧೀನಂ ಜಗತ್ಸರ್ವಂ । ಮಂತ್ರಾಧೀನಂ ತು ದೈವತಂ ।
> ತನ್ಮಂತ್ರಂ ಬ್ರಾಹ್ಮಣಾಧೀನಂ । ಬ್ರಾಹ್ಮಣೋ ಮಮ ದೇವತಾ ॥

ಅಂದರೆ ಈ ಜಗತ್ತೆಲ್ಲವೂ ದೇವರ ಅಧೀನ. ಆ ದೇವರು ಮಂತ್ರಗಳ ಅಧೀನ; ಅಂತಹ ಮಂತ್ರಗಳು ಬ್ರಾಹ್ಮಣರ ಅಧೀನ; ಅದುದರಿಂದ ಬ್ರಾಹ್ಮಣನೇ ನನ್ನ ದೇವರು. ಬ್ರಾಹ್ಮಣನೆಂದರೆ ಬ್ರಹ್ಮಜ್ಞಾನಿ ಎಂದರ್ಥ.

ಬ್ರಹ್ಮಜ್ಞಾನಂ ತು ಬ್ರಾಹ್ಮಣಾಃ ।

ಎನ್ನುತ್ತದೆ ಶಾಸ್ತ್ರ.

ಮಂತ್ರ ಪಠಣ ಕ್ರಮ: ಪಾಠ, ಪಾರಾಯಣ, ಯಜ್ಞಯಾಗಾದಿಗಳಲ್ಲಿ, ದೇವತಾರ್ಚನೆಗಳಲ್ಲಿ, ಉಪನಯನ ವಿವಾಹಾದಿ ಸಂಸ್ಕಾರಗಳಲ್ಲಿ ಮತ್ತು ದಹನ, ಸಂಚಯನ, ಏಕಾಹ ಮುಂತಾದ ಅಪರ ಸಂಸ್ಕಾರಗಳಲ್ಲಿ ಪಠಣ ಮಾಡುವ ಮಂತ್ರ ಮತ್ತು ಮಂತ್ರಕ್ರಮವೇ ಬೇರೆ, ಸಂಹಿತಾ ಪಾಠದಲ್ಲಿ ಪದಪಾಠ, ಕ್ರಮಪಾಠ, ಜಟಾ ಪಾಠ ಮತ್ತು ಘನಪಾಠಗಳೆಂಬ ನಾಲ್ಕು ಪ್ರಕಾರಗಳಿವೆ. ದಂಡಾಕಾರವಾಗಿರುವ ಸಂಹಿತೆಯನ್ನು ಪದ ವಿಭಾಗ ಮಾಡುವುದೇ ಪದಪಾಠ. ಪದಪಾಠ ಮಾಡುವಾಗಲೂ ಸ್ವರ ವಿಶೇಷಗಳನ್ನು ಅನುಸರಿಸಬೇಕು. ವೇದಕ್ಕೆ ನಾಲ್ಕು ಸ್ವರಗಳು, ಉದಾತ್ತ; ಅನುದಾತ್ತ, ಸ್ವರಿತ ಮತ್ತು ಪ್ರಚಯ.

" ಉಚ್ಚೈರುದಾತ್ತಃ ನೀಚೈರನುದಾತ್ತಃ ಸಮಾಹಾರ ಸ್ವರಿತಃ ।

ಎಂಬ ಉಕ್ತಿಯಂತೆ ಮಂತ್ರ ಪಠಣ ಮಾಡಬೇಕು. ಅಂದರೆ ಮೇಲಿನ ಸ್ವರಸ್ಥಾಯಿಯಲ್ಲಿ ಹೇಳುವುದು ಉದಾತ್ತ ; ಕೆಳಗಿನ ಸ್ವರಸ್ಥಾಯಿಯಲ್ಲಿ ಹೇಳುವುದು ಅನುದಾತ್ತ ; ಸಮಸ್ಥಾಯಿಯಲ್ಲಿ ಹೇಳುವುದು ಸ್ವರಿತ. ಮಂತ್ರಗಳಿಗೆ ಸ್ವರವೇ ಅತಿ ಮುಖ್ಯ. ಸ್ವರವನ್ನು ವರ್ಜಿಸುವುದಾಗಲೀ, ಅಥವಾ ಒಂದರ ಸ್ಥಾನದಲ್ಲಿ ಮತ್ತೊಂದು ಸ್ವರವನ್ನು ಹೇಳುವುದಾಗಲೀ, ಯಾಜಮಾನನಿಗೆ ಅಂದರೆ ಪಾಠಕನಿಗೆ ಮೃತ್ಯು ಸ್ವರೂಪ. ಹೇಗೆಂದರೆ—

ಮಂತ್ರೋಹೀನಃ ಸ್ವರತೋ ವರ್ಣತೋ ವಾ ।
ಮಿಥ್ಯಾ ಪ್ರಯುಕ್ತೋ ನತ ಮರ್ಥಮಾಃ ।
ಸ ವಾಗ್ವಜ್ರೋ ಯಜಮಾನಂ ಹಿನಸ್ತಿ ।
ಯಥೇಂದ್ರ ಶತ್ರುಃ ಸ್ವರತೋಽಪರಾದಾತ್ ॥

ಈ ಶ್ಲೋಕದ ಹಿಂದೆ ಒಂದು ಕಥೆಯೇ ಅಡಗಿದೆ. ಕಶ್ಯಪಮಹರ್ಷಿಗಳ ಧರ್ಮಪತ್ನಿಯಾದ ದಿತಿಯ ಮಕ್ಕಳಾದ ಅಸುರರೆಲ್ಲರೂ ಸಮುದ್ರಮಥನ ಸಮಯದಲ್ಲಿ ಹತರಾದರು. ಆಗ ಖಿನ್ನಮನಸ್ಕಳಾದ ದಿತಿಯು ತನ್ನ ಪತಿಯ ಬಳಿ ಸಾರ್ದು, "ಸ್ವಾಮಿ ನಿನ್ನ ಮಕ್ಕಳಾದ ದೇವತೆಗಳು ಮಹಾಬಲಿಷ್ಠರೆನಿಸಿ ನನ್ನ ಮಕ್ಕಳನ್ನೆಲ್ಲ ಕೊಂದು ಬಿಟ್ಟರು. ಆದುದರಿಂದ ದೇವೇಂದ್ರನನ್ನು ಕೊಲ್ಲತಕ್ಕ ಪರಾಕ್ರಮಶಾಲಿಯೂ, ಬಲಾಢ್ಯನೂ, ದೀರ್ಘಾಯುವೂ ಆದ ಒಬ್ಬ ಮಗನನ್ನು ನನಗೆ ದಯಪಾಲಿಸು"

ಎಂದು ಬೇಡಿಕೊಂಡಳು. ಕಶ್ಯಪರು, "ಹಾಗೆಯೇ ಆಗಲಿ, ಮಹಾಪರಿಶುದ್ಧಳಾಗಿ ಪುತ್ರಪ್ರಾಪ್ತಿಗಾಗಿ ತಪವನ್ನಾಚರಿಸು, ನಿನ್ನ ಇಷ್ಟಾರ್ಥವು ಸಿದ್ಧಿಸುವುದು" ಎಂದರು. ದಿತಿಯು ಕುಶಪ್ಲವನೆಂಬ ಕ್ಷೇತ್ರದಲ್ಲಿ ತೀವ್ರವಾದ ತಪಸ್ಸನ್ನು ಮಾಡತೊಡಗಿದಳು. ಈಕೆಯ ತಪಸ್ಸಿಗೆ ಮೆಚ್ಚಿದ ಬ್ರಹ್ಮನು ಪ್ರತ್ಯಕ್ಷನಾಗಿ ಏನು ವರಬೇಕೆಂದು ಕೇಳಿದ. ಆಗ ದಿತಿಯು,

"ಇಂದ್ರ ಶತ್ರುರ್ವರ್ಧಸ್ವ"

ಎಂದು ಅಪಸ್ವರದಲ್ಲಿ ಮಂತ್ರೋಚ್ಚಾರಣೆ ಮಾಡಿದಳು. ಆಕೆಯ ಉದ್ದೇಶ "ನನ್ನ ಗರ್ಭದಲ್ಲಿ ಇಂದ್ರನ ಶತ್ರುವು ವರ್ಧಿಸಲಿ" ಎಂದಾಗಿತ್ತು. ಆದರೆ ಸ್ವರದ ವ್ಯತ್ಯಾಸದಿಂದ "ನನ್ನ ಮಗನು ಇಂದ್ರನಿಂದ ಹತನಾಗಲಿ" ಎಂಬ ಅರ್ಥವು ಸ್ಫುರಿಸಿತು. ಬ್ರಹ್ಮನು 'ತಥಾಸ್ತು' ಎಂದು ಹೇಳಿ ಹೊರಟುಹೋದ. ಇಂದ್ರನು ದಿತಿಯ ಗರ್ಭವನ್ನು ಪ್ರವೇಶಿಸಿ ಆಕೆಗರಿವಿಲ್ಲದಂತೆ ಆ ಗರ್ಭವನ್ನು ಏಳು ತುಂಡುಗಳಾಗಿ ಕತ್ತರಿಸಿದನು. ಅವೇ ಮುಂದೆ ಸಪ್ತ ಮರುತ್ತುಗಳಾದವು. ಹೀಗೆ ಸ್ವರದ ತಪ್ಪಿನಿಂದ ಇಂದ್ರನನ್ನು ಕೊಲ್ಲಬೇಕಾದ ಮಗ, ಇಂದ್ರನಿಂದ ಕೊಲ್ಲಲ್ಪಟ್ಟ.

ಈಗ ಉದಾಹರಣಾರ್ಥವಾಗಿ ಯಜುರ್ವೇದದ ರುದ್ರಾಧ್ಯಾಯದಿಂದ ವಾಕ್ಯದ ಭಾಗವೊಂದನ್ನು ತೆಗೆದುಕೊಂಡು ಅದನ್ನು ನಾಲ್ಕು ಪಾಠಕ್ರಮದಲ್ಲೂ ನಡೆಸೋಣ.

೧. **ಮೂಲಪಾಠ:** ಇದನ್ನು 'ಸಂಹಿತಾ ಪಾಠ'ವೆಂತಲೂ ಕರೆಯುತ್ತಾರೆ.

ನಮೋ ವಿಕ್ಷೀಣಕೇಭ್ಯೋ ನಮೋವಿಚಿನ್ವತ್ಕೇ ಭ್ಯೋ

ನಮ ಆನಿರ್‍ಹತೇಭ್ಯೋ ನಮ ಆಮೀವತ್ಕೇಭ್ಯಃ ।

೨. **ಪದಪಾಠ:** ಮೂಲಪಾಠದ ಸ್ವರವು ಇಲ್ಲಿ ಬದಲಾವಣೆಯಾಗಿರುವುದನ್ನು ಗಮನಿಸಿ.

ನಮಃ । ವಿಕ್ಷೀಣಕೇಭ್ಯ ಇತಿ ವಿ–ಕ್ಷೀಣಕೇಭ್ಯಃ । ನಮಃ ।

ವಿಚಿನ್ವತ್ಕೇಭ್ಯ ಇತಿ ವಿ– ಚಿನ್ವತ್ಕೇಭ್ಯಃ । ನಮಃ ।

ಆನಿರ್‍ಹತೇಭ್ಯ ಇತ್ಯಾನಿಃ–ಹತೇಭ್ಯಃ । ನಮಃ ।

ಆಮೀವತ್ಕೇಭ್ಯ ಇತ್ಯಾ – ಮೀವತ್ಕೇಭ್ಯಃ ॥

೩. **ಕ್ರಮಪಾಠ :** ಪದಪಾಠವಾದ ನಂತರದ ಪಾಠವೇ ಕ್ರಮ ಪಾಠ. ಇಲ್ಲಿ ಪದಗಳು ಕ್ರಮವಾಗಿ ೧–೨; ೨–೩; ೩–೪; ೪–೫;........
ಈ ರೀತಿ ಎರಡೆರಡು ಪದಗಳನ್ನು ಸೇರಿಸಿಕೊಂಡು ಹೋಗಬೇಕು. ಇಲ್ಲಿ ಒಂದು ಪದವು ಎರಡು ಬಾರಿ ಬರುತ್ತದೆ. ಇದನ್ನು ಕ್ರಮಸ್ವಸ್ತಿ ವಾಚನದಲ್ಲಿ ಹಾಗೂ ಕ್ರಮಾರ್ಚನೆಯಲ್ಲಿ ಪಠಿಸುತ್ತಾರೆ.

ನಮೋ ವಿಕ್ಷೀಣಕೇಭ್ಯಃ । ವಿಕ್ಷೀಣಕೇಭ್ಯೋ ನಮಃ ।
೧ ೨ ೨ ೩

ವಿಕ್ಷೀಣಕೇಭ್ಯ ಇತಿವಿ–ಕ್ಷೀಣಕೇಭ್ಯಃ । ನಮೋ ವಿಚಿನ್ವತ್ಕೇಭ್ಯಃ ।
೩ ೪

ವಿಚಿನ್ವತ್ಕೇಭ್ಯೋನಮಃ । ವಿಚಿನ್ವತ್ಕೇಭ್ಯ ಇತಿವಿ–ಚಿನ್ವತ್ಕೇಭ್ಯಃ ।
೪ ೫

ನಮ ಆನಿರ್ಹತೇಭ್ಯಃ । ಆನಿರ್ಹತೇಭ್ಯೋ ನಮಃ ।
೫ ೬ ೬ ೭

ಆನಿರ್ಹತೇಭ್ಯ ಇತ್ಯಾನಿಃ–ಹತೇಭ್ಯಃ । ನಮ ಆಮೀವತ್ಕೇಭ್ಯಃ ।
೭ ೮

ಆಮೀವತ್ಕೇಭ್ಯ ಇತ್ಯಾ–ಮೀವತ್ಕೇಭ್ಯಃ ।

೪. **ಜಟಾಪಾಠ :** ಕ್ರಮಪಾಠವಾದ ಮೇಲೆ ಜಟಾಪಾಠವನ್ನು ಅಧ್ಯಯನ ಮಾಡುತ್ತಾರೆ. ಇಲ್ಲಿ ಒಂದು ಪದವು ಆರು ಬಾರಿ ಬರುತ್ತದೆ. ಜಟೆಯನ್ನು ವಿವಾಹಾದಿ ಸಂದರ್ಭಗಳಲ್ಲಿ ಸಭೆಯಲ್ಲಿ ಪಠಿಸುತ್ತಾರೆ. ಜಟೆಯಲ್ಲಿ ಪದಗಳ ಸಂಯೋಜನೆ ಈ ರೀತಿ ಇರುತ್ತದೆ.

೧–೨, ೨–೧, ೧–೨, ೨–೩, ೩–೨, ೨–೩,........

ಉದಾಹರಣಾರ್ಥವಾಗಿ ಮೇಲಿನ ವಾಕ್ಯದಲ್ಲಿ ಮೊದಲ ಎರಡು ಪದಗಳಿಗೆ ಮಾತ್ರ ಜಟೆ ಹೇಳಿದರೆ ಅದು ಹೀಗಾಗುತ್ತದೆ.

ನಮೋ ವಿಕ್ಷೀಣಕೇಭ್ಯ ವಿಕ್ಷೀಣಕೇಭ್ಯೋ ನಮೋ
೧ ೨ ೨ ೧

ನಮೋ ವೀಕ್ಷಿಣಕೇಭ್ಯಃ ಃ..........
೧ ೨

೫. ಘನಪಾಠ : ಜಟೆಯಿಂದ ಮುಂದುವರಿದುದೇ ಘನ. ಇಲ್ಲಿ ಒಂದು ಪದವು ಹತ್ತು ಸಾರಿ ಬರುತ್ತದೆ. ಇದನ್ನು ದೇವಾಲಯಗಳಲ್ಲಿ ವಿಶೇಷ ಪೂಜೆಯ ಸಂದರ್ಭದಲ್ಲಿ ಪಠಿಸುತ್ತಾರೆ. ವಿವಾಹೋಪನಯನಾದಿ ಶುಭ ಕಾರ್ಯಗಳಲ್ಲೂ ಪಠಿಸುವುದುಂಟು. ಉದಾಹರಣಾರ್ಥವಾಗಿ ಮೊದಲ ಮೂರು ಪದಗಳನ್ನು ತೆಗೆದುಕೊಂಡು ಘನವನ್ನು ಹೇಳೋಣ. ಇಲ್ಲಿ ಪದಗಳು ಆವರ್ತವಾಗುವ ಕ್ರಮ ಹೀಗಿದೆ.

೧-೨, ೨-೧, ೧-೨-೩, ೩-೨-೧, ೧-೨-೩;
೨-೩, ೩-೨, ೨-೩-೪, ೪-೩-೨, ೨-೩-೪;

ಸಮೋ ವಿಕ್ಷೀಣಕೇಭ್ಯ ವಿಕ್ಷೀಣಕೇಭ್ಯೋ ಸಮೋ ನಮೋ
೧ ೨ ೨ ೧ ೧

ವಿಕ್ಷೀಣಕೇಭ್ಯೋ ಸಮೋ ನಮೋ ವಿಕ್ಷೀಣಕೇಭ್ಯೋ
೨ ೩ ೩ ೨

ಸಮೋ ನಮೋ ವಿಕ್ಷೀಣಕೇ ಭ್ಯೋ ನಮಃ ।
೧ ೧ ೨ ೩

ವೇದವನ್ನು ಪೂರ್ತಿಯಾಗಿ ಅಧ್ಯಯನ ಮಾಡಿದ್ದರೆ ಅಂತಹವರಿಗೆ 'ಸಾಂಗಾಧ್ಯಾಯಿ, ಎಂತಲೂ, ಕ್ರಮಪಾಠವು ಪೂರ್ತಿಯಾಗಿದ್ದರೆ. 'ಕ್ರಮಪಾಠಿ' ಎಂತಲೂ, ಜಟೆಯನ್ನು ಅಭ್ಯಸಿಸಿದವರಿಗೆ 'ಜಟಾಪಾಠಿ' ಎಂತಲೂ ಮತ್ತು ಘನವನ್ನು ಅಧ್ಯಯನ ಮಾಡಿದವರಿಗೆ 'ಘನಪಾಠಿ' ಎಂತಲೂ ಹೆಸರು. ಇದಾವುದೂ ಅಲ್ಲದೆ ಕೇವಲ ಸಂಹಿತಾ ಭಾಗವನ್ನು ಮಾತ್ರ ಅಧ್ಯಯನ ಮಾಡಿದ್ದರೆ 'ಮಂತ್ರಭಾಗ'ವು ಆಗಿದೆಯೆಂದರ್ಥ.

ಎರಡು ವೇದವನ್ನು ಅಧ್ಯಯನ ಮಾಡಿದವರಿಗೆ 'ದ್ವಿವೇದಿ' ಎಂತಲೂ, ಮೂರು ಹಾಗೂ ನಾಲ್ಕು ವೇದಗಳನ್ನು ಅಧ್ಯಯನ ಮಾಡಿದವರಿಗೆ 'ತ್ರಿವೇದಿ' ಹಾಗೂ 'ಚತುರ್ವೇದಿ' ಎಂತಲೂ ಹೆಸರು. ಈಗಲೂ ಕೆಲವರು ತಮ್ಮ ಹೆಸರಿನ ಮುಂದೆ ದ್ವಿವೇದಿ, ತ್ರಿವೇದಿ, ಚತುರ್ವೇದಿ ಇತ್ಯಾದಿ ಪದಗಳನ್ನು ಬರೆದಿರುತ್ತಾರೆ. ಇದರ ಅರ್ಥ ಅವರ ವಂಶವಲ್ಲಿ ಯಾರೋ ಅಷ್ಟು ವೇದಗಳನ್ನು ಅಧ್ಯಯನ ಮಾಡಿದವರಿದ್ದರೆಂದಷ್ಟೆ.

ಹೀಗೆಯೇ ಘನಪಾಠಿ, ಶಾಸ್ತ್ರಿ, ಸೋಮಯಾಜಿ, ಉಪಾಧ್ಯಾಯ, ಜೋಯಿಸ್, ಅವಧಾನಿ ಇತ್ಯಾದಿಗಳು ಅವರ ವಂಶದಲ್ಲಿ ಯಾರೋ ಹೀಗಿದ್ದರೆಂಬುದನ್ನು ಸೂಚಿಸುತ್ತದೆಯೇ ವಿನಾ ಅವರಲ್ಲ. 'ಸೋಮಯಾಜಿ' ಎಂದರೆ ಸೋಮಯಾಗವನ್ನು ಮಾಡಿದವನು; 'ಉಪಾಧ್ಯಾಯ' ಎಂದರೇ ವೇದಾಧ್ಯಯನ ಮಾಡಿದವನು ಎಂದರ್ಥ.

ಏಕದೇಶಂ ತು ವೇದಸ್ಯ ವೇದಾಂಗಾನ್ಯಪಿ ವಾ ಪುನಃ ।
ಯೋಽಧ್ಯಾಪಯತಿ ವೃತ್ತ್ಯರ್ಥಂ ಉಪಾಧ್ಯಾಯಃ ಸ ಉಚ್ಯತೇ ॥

ಎಂಬುದು ಉಪಾಧ್ಯಾಯ ಶಬ್ದಕ್ಕಿರುವ ಅರ್ಥ. ಒಂದು ವೇದವನ್ನೋ ಅಥವಾ ವೇದಾಂಗವನ್ನೋ ವಿದ್ಯಾರ್ಥಿಗೆ ಕಲಿಸುವ ವೃತ್ತಿಯಲ್ಲಿ ತೊಡಗಿರುವವನೇ 'ಉಪಾಧ್ಯಾಯ'.

ಮಂತ್ರಾಧ್ಯಯನ ಕ್ರಮ: ಮಂತ್ರವನ್ನು ಅಧ್ಯಯನ ಮಾಡಲೂ ಒಂದು ಕ್ರಮವಿದೆ. ಪಾಡ್ಯ, ಅಷ್ಟಮಿ, ಮಹಾಪ್ರದೋಷ, ಚತುರ್ದಶಿ, ಪೌರ್ಣಿಮೆ, ಅಮಾವಾಸ್ಯೆ, ಸಂಕ್ರಮಣಗಳು ಅನಧ್ಯಯನದ ದಿನಗಳು. ಶುಕ್ಲ ಪಕ್ಷದಲ್ಲಿ ವೇದವನ್ನೂ, ಕೃಷ್ಣ ಪಕ್ಷದಲ್ಲಿ ವೇದಾಂಗಗಳನ್ನೂ ಅಧ್ಯಯನ ಮಾಡಬೇಕು. ಮೊದಲು ತಾನು ಯಾವ ಶಾಖೆಗೆ ಸೇರಿದವನೋ ಆ ವೇದವನ್ನು ಅಧ್ಯಯನ ಮಾಡಿ ಅನಂತರ ಉಳಿದ ವೇದಗಳನ್ನು ಅಧ್ಯಯನ ಮಾಡಬಹುದು.

ಸ್ವಶಾಖಾಯಃ ಪರಿತ್ಯಜ್ಯ ಅನ್ಯಶಾಖ ಮುಪಾಸತೇ ।
ಶಾಖಾರಂಡಂ ಸವಿಜ್ಞೇಯಃ ಸರ್ವಧರ್ಮ ಬಹಿಷ್ಕೃತಃ ॥

ಅಂದರೆ ತನ್ನ ಶಾಖೆಯ ವೇದಾಧ್ಯಯನವನ್ನು ತ್ಯಜಿಸಿ, ಯಾವನು ಅನ್ಯಶಾಖೆಯ ವೇದವನ್ನು ಅಭ್ಯಸಿಸುವನೋ ಅಂತಹವನು 'ಶಾಖಾರಂಡ'ನೆಂಬ ಸಂಜ್ಞೆಯನ್ನು ಪಡೆದು ಎಲ್ಲ ಧರ್ಮಗಳಿಂದಲೂ ದೂಡಲ್ಪಡುವನು. ಇದರ ಅರ್ಥ ಋಗ್ ಶಾಖೆಯವರು ಮೊದಲು ಋಗ್ವೇದವನ್ನೂ, ಯಜುಶ್ಶಾಖೆಯವರು ಯಜುರ್ವೇದವನ್ನೂ, ಸಾಮಕರು ಸಾಮವೇದವನ್ನೂ ಮೊದಲು ಅಧ್ಯಯನ ಮಾಡಬೇಕು.

ಮಂತ್ರಪಠಣೆಯ ಫಲ: ಮಂತ್ರಗಳು ದೇವ, ದ್ವಿಜ, ಗುರು ಆರಾಧನಾ ಸಂದರ್ಭಗಳಲ್ಲಿ ಸೂಕ್ತರೂಪವಾಗಿಯೂ, ಪ್ರಯೋಗ ರೂಪವಾಗಿಯೂ ಪಠಿಸಲ್ಪಡುತ್ತದೆ. ಉದಾಹರಣಾರ್ಥವಾಗಿ ಪುರುಷಸೂಕ್ತ, ನಾರಾಯಣ ಸೂಕ್ತ, ಶ್ರೀ ಸೂಕ್ತ, ದೂರ್ವಾಸೂಕ್ತ, ಮೃತ್ತಿಕಾಸೂಕ್ತ, ಅಘಮರ್ಷಣ ಸೂಕ್ತ, ದುರ್ಗಾಸೂಕ್ತ, ಭಾಗ್ಯಸೂಕ್ತ, ಆಯುಷ್ಯಸೂಕ್ತ, ನವಗ್ರಹಸೂಕ್ತ, ನಕ್ಷತ್ರಸೂಕ್ತ, ವಿಷ್ಣುಸೂಕ್ತ, ನೀಳಾಸೂಕ್ತ, ಭೂಸೂಕ್ತ, ಸರಸ್ವತೀಸೂಕ್ತ, ರಾತ್ರೀಸೂಕ್ತ, ಹಿರಣ್ಯಗರ್ಭಸೂಕ್ತ, ಅಗ್ನಿಸೂಕ್ತ, ಬಳಿತ್ಥಾಸೂಕ್ತ, ಮನ್ಯುಸೂಕ್ತ, ಧರ್ಮಸೂಕ್ತ, ಶಾಂತಿಸೂಕ್ತ, ಗಣೇಶಸೂಕ್ತ, ರುದ್ರಸೂಕ್ತ, ಸೌರಸೂಕ್ತ, ದೇವಿಸೂಕ್ತ, ಪವಮಾನಸೂಕ್ತ, ನತಮಂಹೋಸೂಕ್ತ, ಇತಿಹಾ ಇತಿಸೂಕ್ತ, ಅಸ್ಯವಾಮೀಯ ಸೂಕ್ತ ಇತ್ಯಾದಿ; ಈ ಮಂತ್ರಗಳನ್ನು ವಿಧಿವತ್ತಾಗಿ ಗ್ರಹಿಸಿ, ನಿತ್ಯ ಪಾರಾಯಣದಿಂದ ಸಿದ್ಧಿಸಿಕೊಂಡು, ಯೋಗ್ಯವಿಧಾನದಿಂದ ಪಠಿಸಿದ್ದರೆ ದೈವಾನುಗ್ರಹವಾಗುವುದಲ್ಲದೆ ಇಷ್ಟಾರ್ಥ ಸಿದ್ಧಿಯಾಗುತ್ತದೆ. ಈ ಫಲ ಶ್ರುತಿಗಳನ್ನು ಆಯಾ ಮಂತ್ರಗಳಲ್ಲಿ ಆಯಾ ದ್ರಷ್ಟಾರರೇ ಹೇಳಿದ್ದಾರೆ. ಉದಾಹರಣಾರ್ಥವಾಗಿ ಒಂದೆರಡನ್ನು ನೋಡೋಣ. ಅಥರ್ವಣ ವೇದದಲ್ಲಿ ಬರುವ

'ಗಣೇಶಾಥರ್ವ ಶೀರ್ಷ' ಎಂಬ ಮಂತ್ರವು ಗಣಪತಿಯನ್ನು ಕುರಿತದ್ದು, ಇದರ ಫಲಶ್ರುತಿ ಹೀಗಿದೆ.

ಏತದಥರ್ವ ಶೀರ್ಷಂ ಯೋऽಧೀತೇ ಸಬ್ರಹ್ಮ ಭೂಯಾಯ ಕಲ್ಪತೇ। ಸ ಸರ್ವ ವಿಘ್ನೈರ್ನ ಬಾಧ್ಯತೇ। ಸ ಸರ್ವತ್ರ ಸುಖಮೇಧತೇ। ಸ ಪಂಚಮಹಾ ಪಾಪಾತ್ಪ್ರಮುಚ್ಯತೇ। ಸಾಯಮಧೀಯಾನೋ ದಿವಸ ಕೃತಂ ಪಾಪಂ ನಾಶಯತಿ। ಪ್ರಾತರಧೀಯಾನೋ ರಾತ್ರಿಕೃತಂ ಪಾಪಂ ನಾಶಯತಿ। ಸಾಯಂ ಪ್ರಾತಃ ಪ್ರಯುಂಜಾನೋ ಪಾಪೋऽ ಪಾಪೋ ಭವತಿ। ಸರ್ವತ್ರಾಧೀಯಾನೋऽ ಪವಿಘ್ನೋ ಭವನಿ। ಧರ್ಮಾರ್ಥ ಕಾಮ ಮೋಕ್ಷಂ ಚ ವಿಂದತಿ। ಸಹಸ್ರಾವರ್ತನಾದ್ಯಂ ಯಂ ಕಾಮಮಧೀತೇ ತಂ ತಮನೇನ ಸಾಧಯೇತ್। ಅನೇನ ಗಣಪತಿಮಭಿಷಿಂಚತಿ ಸ ವಾಗ್ಮೀ ಭವತಿ। ಚತುರ್ಥ್ಯಾ ಮನಶ್ನಂಜಪತಿ ಸ ವಿದ್ಯಾವಾನ್ಭವತಿ। ಇತ್ಯಥರ್ವಣ ವಾಕ್ಯಂ। ಯೋ ದೂರ್ವಾಂಕುರೈರ್ಯಜತಿ ಸವೈಶ್ರವಣೋಪಮೋ ಭವತಿ। ಯೋ ಲಾಜೈರ್ಯಜತಿ ಸ ಯಶೋವಾನ್ಭವತಿ। ಸ ಮೇಧಾವಾನ್ಭವತಿ। ಯೋ ಮೋದಕ ಸಹ ಸ್ರೇಣ ಯಜತಿ ಸ ವಾಂಛಿತ ಫಲಮವಾಪ್ನೋತಿ। ಯಾಸ್ಸಾಜ್ಯ ಸಮಿದ್ಭಿರ್ಯಜತಿ ಸ ಸರ್ವಂ ಲಭತೇ ಸ ಸರ್ವಂ ಲಭತೇ। ಸೂರ್ಯ ಗ್ರಹೇ ಮಹಾನದ್ಯಾಂ ಪ್ರತಿಮಾ ಸನ್ನಿಧೌ ವಾ ಜಪ್ತ್ವಾ ಸಿದ್ಧ ಮಂತ್ರೋಭವತಿ। ಮಹಾ ವಿಘ್ನಾತ್ಪ್ರಮುಚ್ಯತೇ। ಮಹಾದೋಷಾತ್ಪ್ರಮುಚ್ಯತೇ। ಮಹಾಪ್ರತ್ಯವಾಯಾತ್ಪ್ರಮುಚ್ಯತೇ। ಸ ಸರ್ವವಿದ್ಭವತಿ ಸ ಸರ್ವವಿದ್ಭವತಿ ಯ ಏವಂವೇದ॥

ಈ ಗಣೇಶಾಥರ್ವ ಶೀರ್ಷವೆಂಬ ಮಂತ್ರವನ್ನು ಯಾರು ಅಧ್ಯಯನ ಮಾಡುತ್ತಾರೋ ಅವರು ಬ್ರಹ್ಮಜ್ಞಾನಿಗಳಾಗುತ್ತಾರೆ. ಯಾವ ವಿಘ್ನಗಳೂ ಅವರನ್ನು ಬಾಧಿಸಲಾರವು. ಎಲ್ಲ ವಿಧದಿಂದಲೂ ಅವರಿಗೆ ಸುಖಪ್ರಾಪ್ತಿಯಾಗುತ್ತದೆ. ಅವರು ಮಾಡಿದ ಪಂಚ ಮಹಾಪಾತಕಗಳಾದ ಬ್ರಹ್ಮಹತ್ಯೆ, ಸುರಾಪಾನ, ಸ್ವರ್ಣಸ್ತೇಯ, ಗುರ್ವಾಂಗನಾ ಗಮನಗಳು ನಾಶವಾಗುತ್ತವೆ. ಸಾಯಂಕಾಲ ಈ ಮಂತ್ರವನ್ನು ಪಠಿಸಿದರೆ ಹಗಲು ಮಾಡಿದ ಪಾಪಗಳು ನಾಶವಾಗುತ್ತವೆ. ಪ್ರಾತಃ ಕಾಲ ಪಠಿಸಿದರೆ ರಾತ್ರಿ ಮಾಡಿದ ಪಾಪಗಳು ನಾಶವಾಗುತ್ತವೆ. ಬೆಳಿಗ್ಗೆ ಮತ್ತು ಸಾಯಂಕಾಲಗಳಲ್ಲಿ ಪಠಿಸಿದರೆ ಪಾಪಿಯು ಎಲ್ಲ ಪಾಪಗಳಿಂದಲೂ ಬಿಡಲ್ಪಡುತ್ತಾನೆ. ಯಾವಾಗಲೂ ಪಠಿಸುತ್ತಿದ್ದರೆ ವಿಘ್ನಗಳಿಂದ ಮುಕ್ತನಾಗುತ್ತಾನೆ. ಚತುರ್ವಿಧ ಫಲಪುರುಷಾರ್ಥಗಳಾದ ಧರ್ಮ, ಅರ್ಥ, ಕಾಮ ಮತ್ತು ಮೋಕ್ಷಗಳನ್ನು ಹೊಂದುತ್ತಾನೆ. ಯಾವ ಇಷ್ಟಾರ್ಥವನ್ನು ಬಯಸಿ ಒಂದು ಸಾವಿರ ಬಾರಿ ಇದನ್ನು ಪಠಿಸುತ್ತಾನೋ ಆ ಇಷ್ಟಾರ್ಥವು ಕೈಗೂಡುತ್ತದೆ. ಈ ಮಂತ್ರವನ್ನು ಹೇಳುತ್ತಾ ಶ್ರೀ ಗಣಪತಿಗೆ ಅಭಿಷೇಕಮಾಡಿದರೆ ಅಂತಹವನು ವಾಗ್ಮಿಯಾಗುತ್ತಾನೆ. ಚತುರ್ಥಿಯ ದಿನ ಉಪವಾಸವಿದ್ದು ಈ ಮಂತ್ರವನ್ನು ಪಠಿಸಿದರೆ ಅಂತಹವನು ವಿದ್ಯಾವಂತನಾಗುತ್ತಾನೆ. ಇದು ಅಥರ್ವಣ ವೇದದಲ್ಲಿ ಹೇಳಿರುವ ಮಾತು. ಅಂದರೆ ಹುಸಿಯಾಗತಕ್ಕದ್ದಲ್ಲ.

ಯಾರು ಈ ಮಂತ್ರವನ್ನು ಪಠಿಸುತ್ತಾ ಗಣಪತಿಯನ್ನು ಗರಿಕೆಯಿಂದ ಪೂಜಿಸುತ್ತಾರೋ ಅಂತಹವರು ಕುಬೇರನಿಗೆ ಸಮಾನವಾದ ಐಶ್ವರ್ಯವನ್ನು ಪಡೆಯುತ್ತಾರೆ. ಯಾರು ಅರಳಿನಿಂದ ಪೂಜಿಸುತ್ತಾರೋ ಅವರು ಯಶೋವಂತರೂ, ಪ್ರಜ್ಞಾವಂತರೂ ಆಗುತ್ತಾರೆ. ಯಾರು ತುಪ್ಪ ಮತ್ತು ಸಮಿತ್ತುಗಳನ್ನು ಈ ಮಂತ್ರ ಪುರಸ್ಸರವಾಗಿ ಹೋಮ ಮಾಡುತ್ತಾರೋ ಅವರಿಗೆ ಸಕಲ ಇಷ್ಟಾರ್ಥಗಳೂ ಸಿದ್ಧಿಸುತ್ತದೆ. ಯಾರು ಮೋದಕ ಸಹಸ್ರಗಳನ್ನು ಹೋಮ ಮಾಡುತ್ತಾರೋ ಅವರ ಕಾಮ್ಯಗಳು ಈಡೇರುತ್ತವೆ. ಸೂರ್ಯಗ್ರಹಣದ ದಿನ ಮಹಾನದಿಯ ದಡದಲ್ಲಾಗಲೀ ಅಥವಾ ಪ್ರತಿಮಾ ಸನ್ನಿಧಿಯಲ್ಲಾಗಲೀ ಈ ಮಂತ್ರವನ್ನು ಜಪಿಸಿದ್ದೇ ಆದರೆ ಅದು ಸಕಲ ಇಷ್ಟಾರ್ಥಗಳನ್ನೂ ಸಿದ್ಧಿಸುವ ಸಿದ್ಧಮಂತ್ರವಾಗುತ್ತದೆ. ಮಹಾ ವಿಘ್ನಗಳು ದೂರಾಗುತ್ತವೆ. ಮಹಾ ದೋಷಗಳು ನಶಿಸುತ್ತವೆ. ಮಹಾ ತೊಂದರೆಗಳು ಓಡುತ್ತವೆ. ಅಂತಹವನು ಎಲ್ಲವನ್ನು ಹೊಂದುತ್ತಾನೆಂಬುದು ವೇದವಾಕ್ಯ.

ಹೀಗೆಯೇ ಅಥರ್ವಣ ವೇದದಲ್ಲಿ ಉಕ್ತವಾಗಿರುವ 'ಸೂರ್ಯೋಪನಿಷತ್' ಎಂಬ ಮಂತ್ರವನ್ನು ಜಪಿಸುವುದರಿಂದ ಉಂಟಾಗುವ ಫಲವು ಈ ರೀತಿ ಇದೆ

ಯಃ ಸದಾ ಹರಹರ್ ಜಪತಿ ಸವೈ ಬ್ರಾಹ್ಮಣೋ ಭವತಿ ಸವೈ ಬ್ರಾಹ್ಮಣೋ ಭವತಿ। ಸೂರ್ಯಾಭಿಮುಖೋ ಜಪ್ತ್ವಾ ಮಹಾವ್ಯಾಧಿಭಯಾತ್ಪ್ರಮುಚ್ಯತೇ ಅಲಕ್ಷ್ಮೀರ್ನಶ್ಯತಿ। ಅಭಕ್ಷ್ಯಭಕ್ಷಣಾತ್ ಪೂತೋ ಭವತಿ। ಅಗಮ್ಯಾ ಗಮನಾತ್ ಪೂತೋ ಭವತಿ। ಪತಿತ ಸಂಭಾಷಣಾತ್ ಪೂತೋ ಭವತಿ। ಅಸತ್ ಸಂಭಾಷಣಾತ್ ಪೂತೋ ಭವತಿ। ಮಧ್ಯಾಹ್ನೇ ಸೂರ್ಯಾಭಿಮುಖಃ ಪಠೇತ್। ಸದ್ಯೋತ್ಪನ್ನ ಪಂಚ ಮಹಾಪಾತಕಾತ್ ಪ್ರಮುಚ್ಯತೇ। ಯ ಏತಾಂ ಮಹಾಭಾಗಃ ಪ್ರಾತಃ ಪಠತಿ ಸ ಭಾಗ್ಯವಾನ್ ಜಾಯತೇ ಪಶೂನ್ ವಿಂದತಿ। ವೇದಾರ್ಥಂ ಲಭತೇ। ತ್ರಿಕಾಲ ಮೇತಜ್ಜಪ್ತ್ವಾ ಕ್ರತುಶತ ಫಲಮವಾಪ್ನೋತಿ। ಹಸ್ತಾದಿತ್ಯೇ ಜಪತಿ ಸ ಮಹಾಮೃತ್ಯುಂ ತರತಿ ಸ ಮಹಾಮೃತ್ಯುಂ ತರತಿ ಯ ಏವಂವೇದ॥ ಇತ್ಯುಪನಿಷತ್॥

ಯಾರು ಸದಾವಕಾಲವೂ ಈ ಸೂರ್ಯೋಪನಿಷತ್ ಮಂತ್ರವನ್ನು ಜಪಿಸುತ್ತಾರೋ ಅವರು ಬ್ರಹ್ಮಜ್ಞಾನಿಗಳಾಗುತ್ತಾರೆ. ಸೂರ್ಯನಿಗಭಿಮುಖವಾಗಿ ಇದನ್ನು ಜಪಿಸಿದರೆ ಮಹಾವ್ಯಾಧಿ ಮತ್ತು ಭಯಗಳು ದೂರಾಗುತ್ತವೆ. ಅಂತಹವರ ದಾರಿದ್ರ್ಯವು ನಿವಾರಣೆಯಾಗುತ್ತದೆ. ಅಭಕ್ಷ್ಯ ಭಕ್ಷಣದ ದೋಷವು ನಿವಾರಣೆಯಾಗುತ್ತದೆ. ಯಾರಲ್ಲಿ ಪ್ರವೇಶಿಸಕೂಡದೋ ಅಂತಹವರಲ್ಲಿ ಪ್ರವೇಶಿಸಿದ ದೋಷವು ನಿವಾರಣೆಯಾಗುತ್ತದೆ. ಪತಿತರ ಮತ್ತು ಅಸಭ್ಯರ ಜತೆ ಮಾತನಾಡುವುದರಿಂದ ಉಂಟಾದ ದೋಷವು ನಿವಾರಣೆಯಾಗುತ್ತದೆ. ಮಧ್ಯಾಹ್ನ ಸೂರ್ಯನಿಗೆ ಅಭಿಮುಖವಾಗಿ ಇದನ್ನು ಪಠಿಸಿದರೆ ಪಂಚಮಹಾಪಾತಕಗಳು ದೂರಾಗುತ್ತವೆ. ಪ್ರಾತಃಕಾಲದಲ್ಲಿ ಇದನ್ನು ಪಠಿಸಿದರೆ ಆತನು ಭಾಗ್ಯಶಾಲಿಯಾಗುತ್ತಾನೆ. ಹಾಗೂ ಪಶುಗಳನ್ನು ಹೊಂದುತ್ತಾನೆ. ವೇದಾರ್ಥಗಳು ಆತನಿಗೆ ಲಭಿಸುತ್ತದೆ. ದಿನಕ್ಕೆ ಮೂರು ಬಾರಿ ಅಂದರೆ ಬೆಳಗ್ಗೆ,

ಮಧ್ಯಾಹ್ನ ಮತ್ತು ಸಾಯಂಕಾಲಗಳಲ್ಲಿ ಜಪಿಸಿದರೆ ಸಾವಿರ ಯಜ್ಞವನ್ನು ಮಾಡಿದ ಫಲವು ಲಭಿಸುತ್ತದೆ. ಭಾನುವಾರ ಹಸ್ತಾ ನಕ್ಷತ್ರದಲ್ಲಿ ಜಪಿಸಿದರೆ ಮಹಾಮೃತ್ಯುವೂ ಸಹ ದೂರವಾಗುತ್ತದೆ. ಇದು ವೇದ ವಾಕ್ಯ.

ಇಂದ್ರಾಕ್ಷೀ ಸ್ತೋತ್ರ ಮಹಾಮಂತ್ರವನ್ನು ಜಪಿಸುವುದರಿಂದ ಉಂಟಾಗುವ ಫಲ ಈ ರೀತಿ ಇದೆ. ಶಚೀ ಪುರಂದರ ಋಷಿಗಳು ಈ ಸ್ತೋತ್ರ ಮಂತ್ರದ ದ್ರಷ್ಟಾರರು. ಇದು ಮಾರ್ಕಂಡೇಯ ಪುರಾಣದಲ್ಲಿದೆ.

ಆಯುರಾರೋಗ್ಯ ಮೈಶ್ವರ್ಯಂ ಜ್ಞಾನಂ ವಿತ್ತಂ ಯಶೋ ಬಲಂ। ಕ್ಷಯಾಪಸ್ಮಾರಕುಷ್ಠಾದಿ ತಾಪಜ್ವರ ನಿವಾರಣಮ್। ಶೀತಜ್ವರ ನಿವಾರಣಮ್। ಉಷ್ಣ ಜ್ವರ ನಿವಾರಣಂ। ಸನ್ನಿಪಾತಜ್ವರ ನಿವಾರಣಮ್। ಸಮಸ್ತ ಭಯ ನಿವಾರಣಮ್। ಸಮಸ್ತ ರೋಗ ನಿವಾರಣಮ್। ಶತಮಾವರ್ತಯೇ ದ್ಯಸ್ತು ಮುಚ್ಯತೇ ವ್ಯಾಧಿ ಬಂಧನಾತ್। ಆವರ್ತಯೇತ್ಸಹಸ್ರಂತು ಲಭತೇ ವಾಂಛಿತಂ ಫಲಮ್। ಇಂದ್ರ ಸ್ತೋತ್ರ ಮಿದಂ ಪುಣ್ಯಂ ಪರೇಮಾಯುಷ್ಯ ವರ್ಧನಮ್। ಜ್ವರಾದಿ ಸರ್ವರೋಗಾಣಾಂ ಅಪಮೃತ್ಯುರ್ಭಯಾಪಹ ಚ।

ಇಂದ್ರಾಕ್ಷಿ ಸ್ತೋತ್ರಮಂತ್ರವನ್ನು ನಿತ್ಯವೂ ಜಪಿಸುವುದರಿಂದ ಆಯುರಾರೋಗ್ಯ ಐಶ್ವರ್ಯಗಳೂ, ಯಶಸ್ಸೂ ಮತ್ತು ಬಲವೂ ಲಭಿಸುತ್ತದೆ. ಕ್ಷಯ, ಮೂರ್ಛೆ ರೋಗ, ಕುಷ್ಠ, ತಾಪಜ್ವರ, ಶೀತಜ್ವರ, ಉಷ್ಣ ಜ್ವರ ಮುಂತಾದ ಸರ್ವರೋಗಗಳೂ ನಿವಾರಣೆಯಾಗುತ್ತವೆ. ನೂರು ಬಾರಿ ಈ ಮಂತ್ರವನ್ನು ಜಪಿಸುವುದರಿಂದ ವ್ಯಾಧಿಯಿಂದ ಮುಕ್ತನಾಗುತ್ತಾನೆ. ಸಾವಿರ ಬಾರಿ ಜಪಿಸುವುದರಿಂದ ಇಷ್ಟಾರ್ಥಗಳೆಲ್ಲವೂ ಸಿದ್ಧಿಸುತ್ತವೆ. ಈ ಮಂತ್ರವನ್ನು ಜಪಿಸುವುದರಿಂದ ಆಯುಷ್ಯವು ವರ್ಧಿಸುತ್ತದೆ; ಅಪಮೃತ್ಯುವು ಪರಿಹಾರವಾಗುತ್ತದೆ.

ಆಧ್ಯಾತ್ಮಿಕ ಸಾಧನ ಮಾರ್ಗದಲ್ಲಿ ವೇದ ಮಂತ್ರಗಳ ನಿತ್ಯ ಪಾರಾಯಣಕ್ಕೆ ಒಂದು ವಿಶಿಷ್ಟ ಸ್ಥಾನವಿದೆ. ಮಂತ್ರಗಳನ್ನು ಸ್ವರ ಕ್ರಮವನ್ನು ಅನುಸರಿಸಿ ಉಚ್ಚರಿಸಬೇಕು. ಇದರಿಂದ ಮನಸ್ಸು ಉದಾತ್ತ ಭಾವಕ್ಕೇರುವುದು. ವೇದ ಮಂತ್ರಗಳನ್ನು ನಿಧಾನವಾಗಿ ಉಚ್ಚರಿಸಿದರೆ ಅಧ್ಯಯನವು ರಸವತ್ತಾಗುವುದೆಂದು ನಾರದೀಯ ಪುರಾಣದಲ್ಲಿ ಹೇಳಿದೆ.

"ಸಮ್ಯಕ್ ವರ್ಣ ಪ್ರಯೋಗೇನ ಬ್ರಹ್ಮಲೋಕೇ ಮಹೀಯತೇ" ಅಂದರೆ ಚೆನ್ನಾಗಿ ವೇದಾಕ್ಷರಗಳನ್ನುಚ್ಚರಿಸುವವರು ಬ್ರಹ್ಮಲೋಕವನ್ನು ಹೊಂದಿ ಪೂಜ್ಯರಾಗುವರು, ಎಂದು ಸನಂದನ ಮುನಿಗಳು ನಾರದ ಮಹರ್ಷಿಗಳಿಗೆ ವೇದಾಧ್ಯಯನದ ಮಹಿಮೆಯನ್ನು ತಿಳಿಸಿದ್ದಾರೆ. ಪ್ರತಿದಿನವೂ ಪ್ರಾತಃಕಾಲದಲ್ಲಿ ಸ್ನಾನಾದಿಗಳಿಂದ ಪರಿಶುದ್ಧನಾಗಿ ನಿಯಮ ನಿಷ್ಠೆಗಳಿಂದ ವೇದ ಮಂತ್ರಗಳನ್ನು ಪಾರಾಯಣ ಮಾಡಬೇಕು.

ವೇದಾಧ್ಯಯನದ ಮಹಿಮೆಯನ್ನು ವರಾಹ ಪುರಾಣದಲ್ಲಿ ಹೀಗೆ ವರ್ಣಿಸಿದೆ.

"ಪದಕ್ರಮ ವಿಶೇಷಜ್ಞೋ ವರ್ಣಕ್ರಮ ವಿಚಕ್ಷಣಃ ।
ಸ್ವರ ಮಾತ್ರಾ ವಿಶೇಷಜ್ಞೋ ಗಚ್ಛೇದಾಚಾರ್ಯ ಸಂಪದಮ್ ।
ಸಂಹಿತಾ ಪಾಠತಃ ಪುಣ್ಯ ದ್ವಿಗುಣಂ ಪದಪಾಠತಃ ।
ತ್ರಿಗುಣಂ ಕ್ರಮ ಪಾಠೇನ ಜಟಾಪಾಠೇನ ಷಡ್ಗುಣಮ್ ॥

ಅಂದರೆ ಸಂಹಿತಾ, ಪದಪಾಠ, ವರ್ಣೋಚ್ಚಾರಣೆ, ಸ್ವರ, ಮಾತ್ರಾ,–ಇವುಗಳನ್ನು ಚೆನ್ನಾಗಿ ತಿಳಿದವನು ಆಚಾರ್ಯನೆನ್ನಿಸಿಕೊಳ್ಳುವನು, ಸಂಹಿತೆಯನ್ನು ಪೂರ್ಣವಾಗಿ ಅಧ್ಯಯನ ಮಾಡುವುದರಿಂದ ಅಧಿಕ ಪುಣ್ಯ ಬರುತ್ತದೆ. ಪದಪಾಠಾಧ್ಯಯನದಿಂದ ಅದರ ಎರಡರಷ್ಟು, ಕ್ರಮಪಾಠದಿಂದ ಮೂರರಷ್ಟು, ಜಟಾಪಾಠದಿಂದ ಆರರಷ್ಟು ಪುಣ್ಯವು ಲಭಿಸುವುದೆಂದು ಹೇಳಿದೆ."

ವೇದಾಧ್ಯಾಯಿಯ ಮಹಿಮೆಯ ಬಗ್ಗೆ ಮನುಸ್ಮೃತಿಯಲ್ಲಿ ಹೀಗೆ ಹೇಳಿದೆ.

ಯಥೈಜಸ್ತೇಜಸಾ ವಹ್ನಿಃ ಪ್ರಾಪ್ತಂ ನಿರ್ದಹತಿ ಕ್ಷಣಾತ್ ।
ತಥಾ ಜ್ಞಾನಾಗ್ನಿನಾ ಪಾಪಂ ಸರ್ವಂ ದಹತಿ ವೇದವಿತ್ ॥

ತನ್ನಲ್ಲಿ ಬಿದ್ದ ಕಟ್ಟಿಗೆಯನ್ನು ಬೆಂಕಿಯು ಹೇಗೆ ಕ್ಷಣ ಮಾತ್ರದಲ್ಲಿ ದಹಿಸುವುದೋ ಅಂತೆಯೇ ವೇದಜ್ಞನು ಮಾಡಿದ ಪಾಪವು ಆತನ ಜ್ಞಾನಾಗ್ನಿಯಿಂದ ಭಸ್ಮವಾಗುತ್ತದೆ. ಅಲ್ಲದೆ

"ಅಕಾಮತಃ ಕೃತಂ ಪಾಪಂ ವೇದಾಭ್ಯಾಸೇನ ಶುದ್ಧ್ಯತಿ ।"

ಗೊತ್ತಿಲ್ಲದೆ ಮಾಡಿದ ಪಾಪವು ವೇದಾಧ್ಯಯನದಿಂದ ನಿವಾರಣೆಯಾಗುತ್ತದೆ.

ಯಾಜ್ಞವಲ್ಕ್ಯ ಸ್ಮೃತಿಯಲ್ಲಿ ಹೀಗೆ ಹೇಳಿದೆ.

ಚತ್ವಾರೋ ವೇದಧರ್ಮ ಜ್ಞಾಃ
ಪರ್ಷತ್ ತ್ರೈವಿದ್ಯ ಮೇವ ವಾ
ಸಾಬ್ರೂತೇ ಯಂ ಸಧರ್ಮ
ಸಾದ್ಯೇಕೋ ವಾಽಧ್ಯಾತ್ಮವಿತ್ತಮಃ॥

ವೇದ ಮತ್ತು ಧರ್ಮಶಾಸ್ತ್ರವನ್ನು ತಿಳಿದ ನಾಲ್ಕು ಜನರು ಸೇರಿದರೆ ಅದು ಒಂದು 'ಪರ್ಷತ್ತು' ಎನಿಸುತ್ತದೆ. ಮೂರು ವೇದ ಮತ್ತು ಧರ್ಮಶಾಸ್ತ್ರ ತಿಳಿದ ಮೂವರು ಇದ್ದರೂ ಸಹ ಅದು ಪರ್ಷತ್ತು ಎನಿಸುತ್ತದೆ. 'ಪರ್ಷತ್ತು' ಎಂದರೆ ಅನೇಕ ಜ್ಞಾನಿಗಳ ಸಮೂಹ. ಕೇವಲ ಮೂರು ಅಥವಾ ನಾಲ್ಕೇ ಜನರು ಇದ್ದರೂ ಸಹ ಅದು ಒಂದು ಪರ್ಷತ್ತು ಎನಿಸುವುದು ವೇದದ ಮಹಿಮೆಯನ್ನು ಸಾರುತ್ತದೆ.

ವೇದಃ ಶಿವಃ ಶಿವೋ ವೇದೋ ವೇದಾಧ್ಯಾಯೀ ಸದಾಶಿವಃ ।
ತಸ್ಮಾತ್ಸರ್ವ ಪ್ರಯತ್ನೇನ ವೇದನೇವ ಸದಾ ಜಪೇತ್ ॥

ವೇದವೇ ಶಿವ, ಶಿವನೇ ವೇದ. ವೇದವನ್ನು ಅಧ್ಯಯನ ಮಾಡುವವನೇ ಸದಾಶಿವ. ಆದುದರಿಂದ ಸರ್ವಪ್ರಯತ್ನೇನ ವೇದವನ್ನು ಸದಾ ಜಪಿಸಬೇಕು.

ಮಂತ್ರಗಳ ವೈಜ್ಞಾನಿಕ ಸಮೀಕ್ಷೆ: ಮಂತ್ರಶಕ್ತಿ ಅಗಾಧವಾದದ್ದು. ಮಂತ್ರದಿಂದ ಹೊರಡುವ ಸ್ಪಂದನವನ್ನು ಧ್ವನಿಮುದ್ರಿಸಲಾಗುವುದಿಲ್ಲ. ಹೀಗೆ ಮಂತ್ರದಿಂದ ಇಷ್ಟಾರ್ಥ ಸಿದ್ಧಿಗಳನ್ನೂ, ರೋಗನಿವಾರಣೆ, ಆಯುಷ್ಯವೃದ್ಧಿ, ದಾರಿದ್ರ್ಯ ಪರಿಹಾರ ಮುಂತಾದ ಸಹಾಯಕ ಕಾರ್ಯಗಳನ್ನೂ, ದಿಗ್ಬಂಧನ, ಸ್ತಂಭನ, ಸಂಮೋಹನ, ವಿದ್ವೇಷಣ, ಉಚ್ಚಾಟನ, ಮಾರಣ ಮುಂತಾದ ವಿಚ್ಛಿದ್ರಕಾರಕ ಕಾರ್ಯಗಳನ್ನೂ ಮಾಡಬಹುದು. ಆದರೆ ಈ ಕ್ಷುದ್ರ ಕಾರ್ಯಗಳನ್ನು ಮಾಡುವುದ ರಿಂದ ಕೇಡು ಕಟ್ಟಿಟ್ಟ ಬುತ್ತಿ.

ಮಂತ್ರಯೋಗದ ಮೂಲಪುರುಷ ಮುನಿ ಹಿರಣ್ಯಗರ್ಭನೆಂದು ಪ್ರಖ್ಯಾತಿ. ಇದಕ್ಕೆ ಮಹಾಭಾರತ ಮತ್ತು ಭಾಗವತಗಳಲ್ಲಿ ಆಧಾರಗಳಿವೆ.

> ಹಿರಣ್ಯಗರ್ಭೋ ಮಂತ್ರಯೋಗಸ್ಯ ವಕ್ತಾ ನಾನ್ಯಃ ಪುರಾತನಃ
>
> (ಮಹಾಭಾರತ ೧೨–೩೪೯–೬೫)
>
> ಇದಂ ಹಿ ಮಂತ್ರ ಯೋಗೇಶ್ವರ ಹಿರಣ್ಯಗರ್ಭೋ
> ಭಗವಾನ್ ಜಗಾದ್ಯಾತ್ । (ಭಾಗವತ ೫–೧೯–೧೩)

ಎಂಬುದಾಗಿ ಹೇಳಿದೆ. ಮಂತ್ರೌಷಧಿಗೆ ಮೀಸಲಾಗಿರುವ "ಹಿರಣ್ಯ-ಗರ್ಭ ಮಂತ್ರ ಯೋಗ ಸಮೀಕ್ಷೆ" ಎಂಬ ಗ್ರಂಥವನ್ನು ತಾಡಪತ್ರದ ಮೇಲೆ ಭಗವಾನ್ ಹಿರಣ್ಯ ಗರ್ಭಮುನಿ ರಚಿಸಿದ್ದಾನೆ. ಒಂದು ನಿರ್ದಿಷ್ಟ ಕಂಪನ ಮತ್ತು ಲಯಕ್ಕನುಗುಣವಾಗಿ ಉಚ್ಚರಿಸಿದಾಗ ಮನೋಜನ ಎಂದರೆ ಆಲೋಚನಾ ಶಕ್ತಿ ತರಂಗಗಳನ್ನು ಪ್ರಸಾರ ಮಾಡುವ ಶಬ್ದಗಳ ಗುಂಪು ಮಂತ್ರ ಎಂದು ಹಿರಣ್ಯಗರ್ಭನ ವಿವರಣೆ. ಈ ಜೀವಶಕ್ತಿ ಕಣವಾದ 'ಲೈಫ್‌ಟ್ರಾನ್'ಗೆ ಸಹಜವಾಗಿಯೇ ಅನೇಕ ಪರಿಣಾಮಗಳನ್ನುಂಟು ಮಾಡುವ ಸಾಮರ್ಥ್ಯವಿದೆ.

ಭೌತಿಕ ಶರೀರಕ್ಕಿಂತ ಹೆಚ್ಚಿನದು ಮಾನವನಲ್ಲಿದೆಯೆಂದು ಪುರಾತನ ಭಾರ ತೀಯ ವಿಜ್ಞಾನ ಹೇಳುತ್ತದೆ. ನಮ್ಮ ಕಣ್ಣಿಗೆ ಕಾಣುವ ಭೌತಿಕ ಶರೀರವೇ ಸ್ಥೂಲ ಶರೀರ. ಇದರೊಂದಿಗೆ ಸೂಕ್ಷ್ಮ ಶರೀರ ಮತ್ತು ಕಾರಣ ಶರೀರಗಳಿವೆ. ಈ ಸೂಕ್ಷ್ಮ ಶರೀರವನ್ನು 'ಲಿಂಗ ಶರೀರ'ವೆಂತಲೂ ಕರೆಯುತ್ತಾರೆ. ಇದನ್ನು ಅರ್ಥಮಾಡಿ ಕೊಳ್ಳದಿದ್ದರೆ ಮಂತ್ರ ವಿಧಾನ ಅರ್ಥವಾಗುವುದು ಕಷ್ಟ. ಮಂತ್ರವು ಸೂಕ್ಷ್ಮ ಪ್ರಪಂಚದ ಮೇಲೆ ಪರಿಣಾಮವನ್ನುಂಟುಮಾಡುತ್ತದೆ. ಇದನ್ನು ಸ್ಪಷ್ಟವಾಗಿ ತಿಳಿದುಕೊಂಡರೆ ವಿಶ್ವದ ಹುಟ್ಟು ಮತ್ತು ನಾಶದ ಜತೆಗೆ ಜೀವನ ಚಕ್ರದಲ್ಲಿ ತನ್ನ ಸ್ಥಾನವೇನೆಂಬುದು ಮಾನವನಿಗೆ ಅರ್ಥವಾದೀತು.

ವಿಶೇಷ ಬಗೆಯ ಗುಣಗಳುಳ್ಳ, ಹೆಚ್ಚು ಶಕ್ತಿಯುತ ಸಂಕೀರ್ಣ ಕಂಪನಗಳಾದ 'ಈಶಂ'ನಿಂದ ವಿಶ್ವ ಮತ್ತು ಅದರೆಲ್ಲಾ ಭಾಗಗಳು ಸೃಷ್ಟಿಯಾಗಿವೆಯೆಂದು ಉಪನಿಷತ್ತು ತಿಳಿಸುತ್ತದೆ.

ಈಶಾವಾಸ್ಯ ಮಿದಂ ಸರ್ವಂ ಯತ್ಕಿಂಚ ಜಗತ್ಯಾಂ ಜಗತ್ ।

ಎನ್ನುತ್ತದೆ 'ಈಶಾವಾಸ್ಯೋಪನಿಷತ್ತು'. ಆಧುನಿಕ ವಿಜ್ಞಾನವೂ ಸಹ ಇದನ್ನು ಸರಿಯೆಂದು ಒಪ್ಪಿಕೊಂಡಿದೆ. ಕೆಲವೊಂದು ಅವಧಿಯವರೆಗೆ ಶಾಂತವಾಗಿ ಏಕಾಗ್ರತೆಯಿಂದ ಮಂತ್ರಪಠಣ ಮಾಡಿದರೆ ಅದರ ಪರಿಣಾಮಗಳನ್ನು ಪಡೆಯಬಹುದು. ಮಂತ್ರ ಶಕ್ತಿಯನ್ನು ಅರ್ಥಮಾಡಿಕೊಳ್ಳಲು ಅದರ ಅರ್ಥವನ್ನು ತಿಳಿದಿರಬೇಕು. ಆರ್ಷೇಯ ಜ್ಞಾನದಂತೆ ಮಂತ್ರದ ಪದಗಳು ಹೇಗೆ ರಚಿತವಾಗಿದೆಯೆಂದರೆ ಅವುಗಳ ಉಚ್ಚಾರಣೆಯ ಮಾತ್ರದಿಂದ ಉಂಟಾಗುವ ಕಂಪನಗಳು ಅಪೇಕ್ಷಿಸಿದ್ದನ್ನು ಸುಪ್ತ ಪ್ರಜ್ಞೆಯಲ್ಲುಂಟುಮಾಡುತ್ತವೆ. ವಿಶ್ವಸ್ವರೂಪಿಯೆಂದು ಕರೆಯಬಹುದಾದ ಮಹಾ ಕುಂಡಲಿನಿಯಿಂದ ಮೇಲ್ಮಟ್ಟದ ಶಕ್ತಿ ತರಂಗಗಳನ್ನು ಸ್ವೀಕರಿಸುವ ಮತ್ತು ಪ್ರಸಾರ ಮಾಡುವ ಶಕ್ತಿಯುಳ್ಳ ವ್ಯಕ್ತಿಯನ್ನು 'ಸಿದ್ಧಪುರುಷ' ಎನ್ನುತ್ತಾರೆ.

ಮಂತ್ರಯೋಗದ ಪುರಾತನ ಕರ್ತೃವೊಬ್ಬರ ಅಭಿಪ್ರಾಯದಂತೆ ಸಸ್ಯ, ಪ್ರಾಣಿ ಮತ್ತು ಮಾನವ ಶರೀರದಲ್ಲಿ 'ಬಯೋಪ್ಲಾಸ್ಮಿಕ್' ಅಥವಾ ಜೈವಿಕ ಶಕ್ತಿಯ ಪರಿಣಾಮವನ್ನುಂಟುಮಾಡುವ ನರಗಳ ಆರು ಚಕ್ರಗಳಿವೆ. ಈ ಚಕ್ರಗಳು ಸರಿಯಾದ ರೀತಿಯಲ್ಲಿ ಕ್ರಿಯಾಶೀಲವಾಗುವಂತೆ ಎಂದರೆ ಕುಂಡಲಿನಿ ಜಾಗ್ರತವಾಗುವಂತೆ ಮಾಡಿದರೆ ಆ ಸಾಧಕ ತನಗೆ ಬೇಕಾದ ಪರಿಣಾಮಗಳನ್ನುಂಟುಮಾಡಬಹುದು. ಒಂದು ಬಗೆಯ ನಿಷ್ಕ್ರಿಯತೆಯಿಂದಾಗಿ ಈ ಚಕ್ರಗಳು ಸಾಮಾನ್ಯರ ದೇಹದಲ್ಲಿ ಸಕ್ರಿಯವಾಗಿರುವುದಿಲ್ಲ. ಮಂತ್ರಾಭ್ಯಾಸದಿಂದ, ನಿಷ್ಕ್ರಿಯವಾದ ಮೆದುಳಿನ ಭಾವ ಸಕ್ರಿಯವಾಗುವ ವಿಷಯ ಸಾಕಷ್ಟು ಸ್ಪಷ್ಟವಾಗಿದೆ. ಆದ್ದರಿಂದ ಇದರ ಪ್ರಾಮುಖ್ಯತೆಯನ್ನು ಒತ್ತಿ ಹೇಳಬೇಕಾದ್ದಿಲ್ಲ.

ಮಂತ್ರದ ಕಂಪನಗಳು ರೋಗವನ್ನು ಗುಣಪಡಿಸುತ್ತದೆಂದರೆ ನಿಮಗೆ ಆಶ್ಚರ್ಯವಾಗಬಹುದು.

"ಮಂತ್ರಕ್ಕೆ ಮಾಂಗಾಯಿ ಮಡಿಲಿಗುದುರುವುದುಂಟೆ ?"

ಎಂಬ ಕವಿವಾಣಿ ಒಡನೆಯೇ ನೆನಪಿಗೆ ಬರಬಹುದು. ವಿಚಾರವಾದಿಗಳಂತೂ ಇದು ಮೂಢನಂಬಿಕೆಯ ಪರಮಾವಧಿಯೆನ್ನದೆ ಇರರು. ಆದರೆ ಸತ್ಯವು ಎಂದಿದ್ದರೂ, ಯಾರೂ ಅಲ್ಲಗಳೆದರೂ ಸತ್ಯವೇ, ಅದು ಎಂದಿಗೂ ಮಿಥ್ಯೆಯಾಗುವುದಿಲ್ಲ. ಈ ವಿಚಾರವಾದಿಗಳು ವಿಜ್ಞಾನಕ್ಕೆ ಸಂಕುಚಿತವಾದ ಅರ್ಥವನ್ನು ಕೊಟ್ಟಿರುತ್ತಾರೆ. ಅವರ ದೃಷ್ಟಿಯಲ್ಲಿ ಭೌತಶಾಸ್ತ್ರ, ರಸಾಯನಶಾಸ್ತ್ರ, ಜೀವಶಾಸ್ತ್ರ, ಇತ್ಯಾದಿ ವಿಷಯಗಳೇ

ವಿಜ್ಞಾನ, ಪ್ರಯೋಗ, ಅವಲೋಕನ ಮತ್ತು ತೀರ್ಮಾನಗಳಿಗೆ ಸಿಕ್ಕುವ ವಿಷಯಗಳೇ ವಿಜ್ಞಾನವೆಂಬುದು ಅವರ ನಂಬಿಕೆ. ಇದು ಸರಿಯೇ ಆದರೂ ವಿಶಾಲವಾದ ಅರ್ಥವಲ್ಲ.

"ವಿಶೇಷ ಜ್ಞಾನಂ ವಿಜ್ಞಾನಂ"

ಎಂಬುದು ವಿಜ್ಞಾನಕ್ಕಿರುವ ವಿಶಾಲಾರ್ಥ. ಅಂದರೆ ವಿಶೇಷವಾದ ಜ್ಞಾನವೆಲ್ಲಾ ವಿಜ್ಞಾನವೇ. ಇಂದ್ರಿಯಾತೀತವಾದ ವಿಷಯಗಳು, ಜ್ಞಾನಗಳು ಪ್ರಪಂಚದಲ್ಲಿ ವಿಪುಲವಾಗಿದೆ. ಅವೆಲ್ಲವೂ ವಿಜ್ಞಾನವೇ.

ಒಂದು ವಿಶಿಷ್ಟ ಬಗೆಯ ಸ್ಪಂದನ ಲಹರಿಯನ್ನು ಸಸ್ಯ, ಪ್ರಾಣಿ ಮತ್ತು ಮಾನವ ಶರೀರಗಳು ಹೊರಸೂಸುತ್ತವೆಂದು "ಮಂತ್ರಯೋಗ ಸಮೀಕ್ಷೆ" ತಿಳಿಸುತ್ತದೆ. ಮಾನವ ಶರೀರವನ್ನು ತೆಗೆದುಕೊಂಡರೆ ಅದು ೬೪ ಬಗೆಯ ಕಂಪನಗಳನ್ನು ಹೊರಸೂಸುತ್ತದೆ. ಅವುಗಳೇ 'ಧಿಃ' ಈ 'ಧಿಃ' ಸ್ಪಂದನಗಳು ಋಣಾತ್ಮಕವಾದ 'ವ್ಯಯ'ವಾದಾಗ ಮಾನವ ಶರೀರಕ್ಕೆ ರೋಗ ತಗಲುತ್ತದೆ. ಸಂಸ್ಕೃತದಲ್ಲಿ ರೋಗಕ್ಕೆ 'ವ್ಯಾಧಿ' ಎನ್ನುತ್ತಾರೆ. 'ವ್ಯಾಧಿ' ಪದವು 'ವ್ಯಯ' ಎಂಬ ಧಾತುವಿನಿಂದ ಸಾಧಿತವಾಗಿದೆ.

ವ್ಯಯ + ಆ + ಧಿಃ → ವ್ಯಾಧಿಃ

೧೯೭೪ರಲ್ಲಿ ನಡೆಸಿದ ಪ್ರಯೋಗವೊಂದರ ಆಶ್ಚರ್ಯಕರ ಆಧಾರವೂ ಇದಕ್ಕಿದೆ. ಎಮೋರಿ ವಿಶ್ವವಿದ್ಯಾನಿಲಯದ 'ಸ್ಕೂಲ್ ಆಫ್ ಮೆಡಿಸಿನ್'ನ ಡಾ|| ಆರ್. ಪಿ. ಸ್ಟೈಪೆಲ್, ಡಾ|| ಆರ್. ಡಬ್ಲ್ಯು. ಬಾನ್ಸೆಲ್ ಮತ್ತು ಜಾರ್ಜಿಯ ಮಾನಸಿಕ ಆರೋಗ್ಯ ಸಂಸ್ಥೆಯ ಪ್ರಾಧ್ಯಾಪಕ ಡಾ|| ಪಿ. ವಾರ್ನರ್ ಇವರುಗಳು ಮಾನವ ದೇಹದ ಮೇಲೆ ಸಂಶೋಧನೆಯನ್ನು ಸಂಯುಕ್ತವಾಗಿ ನಡೆಸಿದರು. ಪ್ರತಿಯೊಂದು ಮಾನವ ಶರೀರವೂ ಆಕರ್ಷಕ ಗುಣಗಳುಳ್ಳ ಕೆಲವೊಂದು ರಾಸಾಯನಿಕಗಳನ್ನು ಹೊರಚೆಲ್ಲುತ್ತವೆಂದು ಅವರು ಕಂಡು ಹಿಡಿದರು. ೧೯೩೯ ರವರೆಗೆ ಅದೃಶ್ಯ ಕಿರಣಗಳ ಹೊರಸೂಸುವಿಕೆಯ ಬಗ್ಗೆ ವಿಜ್ಞಾನಿಗಳಿಗೆ ಸಂದೇಹವಿತ್ತು. ಮಾನವನಷ್ಟೇ ಅಲ್ಲದೆ ಜಡವೆನಿಸಿದ ಎಲ್ಲ ವಸ್ತುಗಳೂ ಕೂಡ ಈ ಉಪಕರಣ ದೃಶ್ಯ ಕಿರಣಗಳನ್ನು ನಿರಂತರವಾಗಿ ಹೊರಸೂಸುತ್ತವೆಂದು ರೇಡಿಯೋ ಸೂಕ್ಷ್ಮದರ್ಶಕದ ಬಗ್ಗೆ ವರದಿಮಾಡುತ್ತಾ ಅಸೋಸಿಯೇಟೆಡ್ ಪ್ರೆಸ್ ತಿಳಿಸಿದೆ. ವ್ಯಕ್ತಿಯಿಂದ ವ್ಯಕ್ತಿಗೆ ಪ್ರಸಾರವಾಗುವ ಅದೃಶ್ಯ ಕಿರಣಗಳ ವಿಷಯದಲ್ಲಿ ಈ ಪ್ರಕಟಣೆ ಜನರಿಗೆ ಮೊದಲ ವೈಜ್ಞಾನಿಕ ರುಜುವಾತನ್ನೊದಗಿಸಿತು.

ಹಿರಣ್ಯಗರ್ಭ ಮುನಿಯ ಪ್ರಕಾರ ೧೨೫ ಬಗೆಯ ಕಂಪನಗಳಿರುವ ಬೇರೆ ಬೇರೆ ೫೨ ಬೀಜಮಂತ್ರಗಳಿವೆ, ಎಂದರೆ ಪ್ರತಿಯೊಂದು ಬೀಜಮಂತ್ರವನ್ನು ೧೨೫ ಬಗೆಯ ಲಯ ಮತ್ತು ಸ್ವರಗಳಲ್ಲಿ ಉಚ್ಚರಿಸಬಹುದು. ಪರಿಣಿತ ಮಂತ್ರಜ್ಞನೊಬ್ಬನಿಂದ

ಮಂತ್ರೋಚ್ಚಾರಣೆಯ ತರಬೇತಿಯನ್ನು ಮಂತ್ರ ಉಚ್ಚರಿಸಲು ಅಪೇಕ್ಷಿಸುವ ವ್ಯಕ್ತಿ ಕಲಿತಿರಬೇಕಾದುದು ಅವಶ್ಯಕ. ಯೋಗದ ನಾನಾ ವಿಧಾನಗಳಲ್ಲಿ ಅಂತರ್ಗತವಾಗಿ ಹರಿಯುವ ಮೂಲಶಕ್ತಿಯೇ ಮಂತ್ರ, ತಪಸ್ಸಿನ ವೃತ್ತಗಳ ಆಧಾರದ ಮೇಲೆ ರೂಪಿತ ವಾಗಿರುವ ಮಾನಸಿಕ ಮತ್ತು ದೈಹಿಕ ಶಿಸ್ತಿನ ಒಂದು ರೂಪವಿದು. ದೈಹಿಕ ವ್ಯಾಯಾಮ ಮತ್ತು ಕಸರತ್ತುಗಳಿಗಿಂತ ಮಂತ್ರಯೋಗ ಹೆಚ್ಚಿನದು. ಯೋಗದ ಏಣಿಯಲ್ಲಿ ಮೊದಲ ಮೆಟ್ಟಿಲು ಮಂತ್ರ. 'ಮಯೋಽಹಂ' ಎಂದರೆ 'ನಾನೇ ಮಂತ್ರ' ಎಂದು ಭಗವದ್ಗೀತೆ ಹೇಳುತ್ತದೆ.

೧೦೮ ತಂತುಗಳುಳ್ಳ ೧೦೮ ಮೆದುಳಿನ ಕೇಂದ್ರಗಳು ಮಾನವ ಶರೀರದಲ್ಲಿದೆ ಯೆಂದು 'ಮಂತ್ರಯೋಗ ಸಮೀಕ್ಷೆ' ನಿಖರವಾಗಿ ತಿಳಿಸುತ್ತದೆ. ಈ ಕಾರಣ ಕ್ಕಾಗಿಯೇ ಮಂತ್ರವನ್ನು ೧೦೮ ಬಾರಿ ಉಚ್ಚಾರಣೆ ಮಾಡುವುದು ಹಾಗೂ ಮಂತ್ರೋಚ್ಚಾರಣೆ ಮಾಲೆಯಲ್ಲಿ ೧೦೮ ಮಣಿಗಳಿರುವುದು. ಈ ತಂತುಗಳು ಮೆದುಳಿನ ಹಾರ್ಮೋನುಗಳೆಂದು ಕರೆಯಲ್ಪಡುವ ದ್ರವವನ್ನು ಹೊರಸೂಸುವ ಅಂಗಾಂಶಗಳು ಮತ್ತು ಕೋಶಗಳಿಂದಾಗಿರುತ್ತವೆ. ಶರೀರದಲ್ಲಿನ ಎಲ್ಲ ಬಗೆಯ ಹಾರ್ಮೋನುಗಳ ಸ್ರವಿಸುವಿಕೆಯನ್ನು ಮೆದುಳಿನ ಹಾರ್ಮೋನುಗಳ ಸ್ರವಿಸುವಿಕೆ ಉಂಟುಮಾಡುತ್ತದೆ.

ಬೀಜಮಂತ್ರವೊಂದನ್ನು ಉಚ್ಚಾರ ಮಾಡಲು 125 ಬೇರೆ ಬೇರೆ ಪದ್ಧತಿಗಳಿವೆ. ಮಂತ್ರದ ಕೆಲವು ಪದಗಳನ್ನುಚ್ಚರಿಸಲು ಕಂಠದ ನರಗಳು ಮತ್ತು ದೇಹದ ತಂತು ಗಳು ವಿಶೇಷ ರೀತಿಯಲ್ಲಿ ಸ್ಪಂದಿಸಬೇಕು. ಶರೀರದ ಅನೇಕ ರೀತಿಯ ತಂತುಗಳನ್ನು ಮತ್ತು ಅಂಗಾಂಶಗಳನ್ನು ಮಂತ್ರಜ್ಞರು ಕಂಪನಗೊಳಿಸುತ್ತಾರೆ. ಬಯೋಪ್ಲಾಸ್ಮದ ಮೂಲಕ ಪ್ರಸಾರವಾಗುವ ವಿದ್ಯುತ್ಕಾಂತೀಯ ವಿಕಿರಣವನ್ನು ಈ ಅಂಗಾಂಶಗಳು ಮತ್ತು ತಂತುಗಳು ಹೊರ ಚೆಲ್ಲುತ್ತವೆ. ಅನಂತರ ಇವು ಬಯೋ–ಪ್ಲಾಸ್ಮದ ವಿಕಿರಣ ವಾಗಿ ಪರಿವರ್ತನಗೊಳ್ಳುತ್ತದೆ. ಈ ವಿಕಿರಣ ಮೊದಲು ದೇಹದಲ್ಲಿನ ಪ್ರಥಮ ಚಕ್ರ ವಾದ ಮೂಲಾಧಾರದ ಕಡೆಗೆ ನಿರ್ದೇಶಿಸಲ್ಪಡುತ್ತದೆ.

ಷಟ್ಚಕ್ರಗಳು : ಈ ಸಂದರ್ಭದಲ್ಲಿ ನಮ್ಮ ಶರೀರದಲ್ಲಿರುವ ಷಟ್ಚಕ್ರಗಳ ಬಗ್ಗೆ ತಿಳಿಯುವುದು ಅಪ್ರಸ್ತುತವಾಗಲಾರದು. ನಮ್ಮ ಯೋಗ ಶರೀರದಲ್ಲಿ ಭೌತಿಕನೇತ್ರ ಗಳಿಗೆ ಅಗೋಚರವಾದ ಆರು ಚಕ್ರಗಳಿವೆ. ಅವುಗಳೇ ಮೂಲಾಧಾರ, ಸ್ವಾಧಿಷ್ಠಾನ, ಮಣಿಪೂರ, ಅನಾಹತ, ವಿಶುದ್ಧ ಮತ್ತು ಆಜ್ಞಾ, ಇದರ ಮೇಲಿರುವುದೇ ಸಹಸ್ರಾರ. ಮೂಲಾಧಾರದಲ್ಲಿ ಸರ್ಪಾಕಾರವಾಗಿ ಸುತ್ತಿಕೊಂಡಿರುವ ಒಂದು ವಿಶೇಷ ಶಕ್ತಿಯಾದ 'ಕುಂಡಲಿನಿ'ಯನ್ನು ಈ ವಿಕಿರಣವು ಉತ್ತೇಜನಗೊಳಿಸುತ್ತದೆ. ಮೂಲಾಧಾರ ಚಕ್ರವು ನಾಲ್ಕು ದಳದ ತಾವರೆಯಿಂದ ಕೂಡಿದೆ. ಆದುದರಿಂದ ಇದು 'ವ,ಶ,ಷ,ಸ' ಎಂಬ ನಾಲ್ಕು ಬೀಜ ಮಂತ್ರಗಳಿಂದ ಉತ್ತೇಜಿತವಾಗುತ್ತದೆ. ದ್ವಿತೀಯ ಚಕ್ರವಾದ ಸ್ವಾಧಿಷ್ಠಾನವು 'ಬ,ಭ,ಮ,ಯ,ರ,ಲ' ಎಂಬ ಆರು ಬೀಜ ಮಂತ್ರಗಳಿಂದಲೂ, ಮಣಿಪೂರವು 'ಡ,ಢ,ಣ, ತ,ಥ,ದ,ಧ,ನ, ಪ,ಫ,' ಎಂಬ ಹತ್ತು ಬೀಜ ಮಂತ್ರ

ಗಳಿಂದಲೂ, ಇದರ ಮೇಲಿರುವ ಅನಾಹತ ಚಕ್ರವು ಕ,ಖ,ಗ,ಘ,ಙ, ಚ,ಛ,ಜ,ಝ, ಞ, ಟ,ಠ. ' ಎಂಬ ಹನ್ನೆರಡು ಬೀಜ ಮಂತ್ರಗಳಿಂದಲೂ, ಭ್ರೂಮಧ್ಯದಲ್ಲಿರುವ ವಿಶುದ್ಧ ಚಕ್ರವು 'ಹ ಮತ್ತು ಕ್ಷ' ಎಂಬ ಎರಡು ಬೀಜ ಮಂತ್ರಗಳಿಂದಲೂ ಉತ್ತೇಜಿತವಾಗುತ್ತದೆ.

ಬೀಜಮಂತ್ರ 'ಕ್ಷ'ವು ಆಕಾಶ ತತ್ವದಲ್ಲಿಯೂ ಮತ್ತು ಬೀಜಮಂತ್ರ 'ಳ'ವು ಭೂತತ್ವದಲ್ಲಿಯೂ ಸ್ಥಾಪಿತವಾಗಿದೆ. ಒಟ್ಟಿನಲ್ಲಿ 6250 ಬಯೋಪ್ಲಾಸ್ಮದ ವಿಕಿರಣಗಳು ಶರೀರದ ಕಶೇರುಕಸ್ತಂಭದ ಕುಂಡಲಿನೀ ಶಕ್ತಿಯ ಮಾರ್ಗದ ಮೂಲಕ ಪ್ರಸಾರಗೊಳ್ಳುತ್ತವೆ. ಆಯಾಯ ಹಾರ್ಮೋನುಗಳನ್ನು ಸ್ರವಿಸುವ ಅನುಕ್ರಮ ಮೆದುಳಿನ ಕೋಶಕೇಂದ್ರಗಳನ್ನು ಈ ತರಂಗಗಳು ನೇರವಾಗಿ ಆವರಿಸುತ್ತವೆ. ಇದು ಜೀವಶಕ್ತಿಕಣ ಅಥವಾ ಲೈಫ್‌ಟ್ರಾನ್‌ಗಳನ್ನು ಸೃಷ್ಟಿಸುತ್ತವೆ. ಜೀವಶಕ್ತಿಕಣ ವಿಶ್ವಶಕ್ತಿ ಎಂದರೆ ಪ್ರಾಣದ ಮೂಲವಾನ. ಮೆದುಳಿನ ತಂತುಗಳನ್ನು ಜೀವಶಕ್ತಿಕಣ ಉತ್ತೇಜಿಸುತ್ತದೆ. ಯೋಗ್ಯವಾದ ಮೆದುಳಿನ ಹಾರ್ಮೋನುಗಳ ಸ್ರವಣವೆಂದರ್ಥ.

ಒಳ್ಳೆಯ ಆಲೋಚನಾ ತರಂಗವೆಂದರೆ ರೋಗಗಳನ್ನು ಗುಣಪಡಿಸುವ ಮತ್ತು ದೂರವಿಡುವ ಒಳ್ಳೆಯ ಆರೋಗ್ಯವೆಂದರ್ಥ. ಇದು 'ಥಿ'ಯ ಹೊರಸೂಸುವಿಕೆ ಸರಿಯಾದ ರೀತಿಯಲ್ಲಿ ಜರುಗುವಂತೆ ಮಾಡುತ್ತದೆ. ಸುತ್ತಲಿನ ವಿಶ್ವ ಮತ್ತು ಅತೀಂದ್ರಿಯ ಶಕ್ತಿಗಳನ್ನು ಬೆಳೆಸಿಕೊಂಡಿರುವ ವ್ಯಕ್ತಿಯ ನಡುವೆ ಒಳ್ಳೆಯ ಸಾಮರಸ್ಯ ವುಂಟಾಗುವುದಕ್ಕೆ ಇದು ಹಾದಿಯಾಗುತ್ತದೆ.

ಮಂತ್ರ ಸಂಶೋಧನೆ: ಇತ್ತೀಚೆಗೆ ಮಂತ್ರಸಂಶೋಧನೆ ನಡೆಯುತ್ತಿದೆ. ಮಂತ್ರಯೋಗ ಸಂಶೋಧನ ಸಂಸ್ಥೆ (Research Foundation for Mantra Yoga) ಯೊಂದು ಲಾಭದ ದೃಷ್ಟಿಯಿಲ್ಲದೆ ಈ ದಿಶೆಯಲ್ಲಿ ಕಾರ್ಯಪ್ರವೃತ್ತವಾಗಿದೆ. ಈ ಸಂಸ್ಥೆ ಬೊಂಬಾಯಿಯಲ್ಲಿದೆ. ಅಂಗೀಕೃತವಾಗದೆ ವಿವಾದಾತ್ಮಕವಾಗಿರುವ ಭಾರತೀಯ ವಿದ್ಯೆಯನ್ನು ಸಾಮಾನ್ಯ ಬಳಕೆಯಲ್ಲಿರುವ ವ್ಯವಸ್ಥಿತ ಜ್ಞಾನದ ಪರಿಧಿ ಯಲ್ಲಿ ತರುವುದು ಈ ಸಂಸ್ಥೆಯ ಗುರಿ. ಪ್ರಸ್ತುತ ವೈಜ್ಞಾನಿಕ ಸಂಶೋಧನೆಗೆ ಹೊರತಾಗಿರುವ ಹೊಸ ವಿಷಯಗಳನ್ನು ಮಂತ್ರಗಳ ಕಾರ್ಯವ್ಯಾಪ್ತಿಯಲ್ಲಿ ವಿವರಿಸಲು ಬೆಳೆಸಿ ಈಗಿರುವ ಜ್ಞಾನಭಂಡಾರದ ಜತೆಗೆ ಸೇರಿಸಬಹುದು.

ಮಂತ್ರ ತರಬೇತಿ : ಮಂತ್ರ ಸಂಶೋಧನೆ ಸಂಸ್ಥೆಯಂತೆಯೇ ಮಂತ್ರ ತರಬೇತಿ ಕೇಂದ್ರವೊಂದು ನಾಗಪುರ ಜಿಲ್ಲೆಯ ಖಾಪ್ರಿಯಲ್ಲಿ ಸ್ಥಾಪಿಸಲ್ಪಟ್ಟಿದೆ. ಈ ಕೇಂದ್ರಕ್ಕೆ 'ಮಂತ್ರವಿದ್ಯಾನುಸಂಧಾನ ಕೇಂದ್ರ'ವೆಂದು ಹೆಸರು. ಮೂರು ವರ್ಷದ ಅಭ್ಯಾಸಕ್ಕಾಗಿ ವಿದ್ಯಾರ್ಥಿಗಳು ಇಲ್ಲಿಗೆ ಬರುತ್ತಾರೆ. ಇಲ್ಲಿ ಸಂಸ್ಕೃತ, ಹಿಂದಿ, ಮರಾಠಿ, ಕನ್ನಡ ಮತ್ತು ಇಂಗ್ಲೀಷ್ ಮಾಧ್ಯಮಗಳಲ್ಲಿ ವಿದ್ಯಾರ್ಥಿಗಳಿಗೆ ಬೋಧಿಸಲಾಗುವುದು. ಮಂತ್ರಯೋಗದ ಜತೆಗೆ ಅಷ್ಟಾಂಗಯೋಗ, ಹಠಯೋಗ, ಕುಂಡಲಿನೀಯೋಗ, ಕ್ರಿಯಾಯೋಗ, ಧ್ಯಾನಯೋಗ, ತಂತ್ರಶಾಸ್ತ್ರ, ಯಂತ್ರಲೇಖನ, ಪೂಜಾವಿಧಿ, ಭೂತ

ವಿದ್ಯೆ ಮತ್ತು ದಿವ್ಯಪುರುಷಶಾಸ್ತ್ರ ಮೊದಲಾದವುಗಳನ್ನು ಬೋಧಿಸಲಾಗುವುದು. ಅಲ್ಲದೆ ಜೈನಾಗಮ, ಬುದ್ಧ ತ್ರಿಪಿಟಕ, ಬೈಬಲ್, ಖುರಾನ್ ಮತ್ತಿತರ ಧರ್ಮ ಮತ್ತು ಶಾಸ್ತ್ರಗಳನ್ನು ಕಲಿಸಲಾಗುವುದು. ಇಲ್ಲಿ ಕೆಲವೊಂದು ವ್ಯಾಧಿಗಳನ್ನು ಮಂತ್ರ ತರಂಗಗಳನ್ನು ಬಳಸಿ ಗುಣಪಡಿಸುವ ವಿಷಯದಲ್ಲಿ ಸಂಶೋಧನೆ ನಡೆಯುತ್ತಿದೆ. ಮಂತ್ರ ಜಲವನ್ನು ಭೂಮಿಗೆ ಹಾಯಿಸುವುದರ ಮೂಲಕ ಬೆಳೆಯನ್ನು ಹೆಚ್ಚಿಸುವ ಸಾಧ್ಯತೆಯನ್ನು ಸಂಶೋಧಿಸಲು ಪ್ರಯೋಗಗಳು ನಡೆಯುತ್ತಿವೆ. ಪ್ರಯೋಗದ ಫಲಿತಾಂಶಗಳು ಫಲಪ್ರದವಾಗಿದೆಯೆಂದು ತಿಳಿದುಬಂದಿದೆ.

ಮಂತ್ರೋಚ್ಚಾರಣೆಗೆ ಪ್ರಾತಃಕಾಲವು ಅತಿಶ್ರೇಷ್ಠ. ಪ್ರತಿಯೊಂದು ಪ್ರಾತಃಕಾಲವು ಬರುವಾಗ ತನ್ನೊಂದಿಗೆ ನವನವೀನ ಆಸೆಗಳನ್ನೂ, ಸ್ಫೂರ್ತಿಯನ್ನೂ, ಕರ್ತವ್ಯಗಳನ್ನೂ, ಚಿಂತನೆಗಳನ್ನೂ ಹಾಗೂ ಆನಂದವನ್ನೂ ಹೊತ್ತು ತರುತ್ತದೆ. ಈ ಪುಣ್ಯಕಾಲದಲ್ಲಿಯೇ ಸರ್ವಜ್ಞನೂ, ಸಚ್ಚಿದಾನಂದ ಸ್ವರೂಪನೂ ಆದ ಭಗವಂತನಲ್ಲಿ ಹಾರ್ದಿಕವಾಗಿ ಪ್ರಾರ್ಥನೆ ಸಲ್ಲಿಸಬೇಕು ಆಗ ಮಾತ್ರ ನಮ್ಮ ಕಲ್ಯಾಣವಾಗುವುದು ನಿಶ್ಚಿತ. ಎಲ್ಲ ದುರ್ವ್ಯಸನಗಳಿಂದಲೂ ವಿಮುಕ್ತಿಪಡೆಯಲು ಬೇಕಾದ ಶಕ್ತಿಯನ್ನು ಆ ಅನಂತ ಶಕ್ತಿಸಾಮರ್ಥ್ಯಗಳ ಭಂಡಾರನಾದ ಪರಮಾತ್ಮನಲ್ಲಿ ಬೇಡುವ ಮೂಲಕ ಮತ್ತು ಆ ಶಕ್ತಿಯನ್ನು ತನ್ನಲ್ಲಿ ಧಾರಣೆಮಾಡಿಕೊಳ್ಳುವುದರ ಮೂಲಕ ಪರಮಾತ್ಮನ ಸ್ವರೂಪದ ಅರಿವಾಗಿ ಆತ್ಮಾನಂದದ ಅನುಭವವಾಗುತ್ತದೆ. ಇದೇ ಮಂತ್ರಯೋಗದ ಪರಮಗಂತವ್ಯ.

‘ನಾನು ಯಾರು?’ ಎಂಬ ಉಕ್ತಿ ಕೊನೆಯಿಲ್ಲದ, ಹುರುಳಿಲ್ಲದ, ಅರ್ಥ ತಿಳಿಯದೆ ಅನುಸರಿಸುವ ಸೂತ್ರವಲ್ಲ; ಅದು ಜಪಿಸುವ ಮಂತ್ರದ ಪುರಶ್ಚರಣೆಯಲ್ಲ. ಅದು ಕೇವಲ ಮಾನಸಿಕವಾಗಿ ಪ್ರಶ್ನಿಸುವುದಷ್ಟೇ ಅಲ್ಲ. ಇಡೀ ಮನಸ್ಸನ್ನು ಅದರ ಮೂಲದಲ್ಲಿ ನೆಲೆಗೊಳಿಸುವುದೇ ಆತ್ಮವಿಚಾರದ ಮುಖ್ಯ ಉದ್ದೇಶ.

‘ನಾನು ಯಾರು?’ ಎಂಬ ಪ್ರಶ್ನೆಯನ್ನು ಸ್ವಲ್ಪ ಚಿಂತನೆ ಮಾಡಿದರೆ ‘ನಾನು ಯಾರು?’ ಎಂದು ಹೇಳುವ ಆ ನಾನು ಯಾರು? ಎಂಬ ಅರಿವಾಗದೆ ಇರದು. ‘ನಾನು ಯಾರು?’ ಎಂಬ ಪ್ರಶ್ನೆ ಬುದ್ಧಿಗೆ ನಿಲುಕದ ಕೇವಲ ಕಗ್ಗಂಟು ಎಂದು ಹೇಳಲಾಗದು. ಏಕೆಂದರೆ ‘ನಾನು’ವು ಬುದ್ಧಿಗೆ ನಿಲುಕುವುದಿಲ್ಲ ಎಂದು ಹೇಳುವುದು ಯಾರು? ಯಾರೂ ತನ್ನನ್ನು ಕುರಿತು ಸಂದೇಹ ಪಡುವುದು, ಅಂದರೆ ತಾನಿಲ್ಲವೆಂದು ತಿಳಿಯುವುದು ಸಾಧ್ಯವಿಲ್ಲ. ಯಾರೂ ‘ತಾನಿಲ್ಲ’ ಎಂದು ಹೇಳಲಾಗದು; ಏಕೆಂದರೆ ಅದು ಸ್ವವಿರೋಧವಾದುದು. ನಾನು ಇರುವೆನೆಂಬುದು ಸರ್ವರಿಗೂ ಸಾಮಾನ್ಯ ಅನುಭವವಾಗಿದೆ. ಹೀಗೆ ‘ನಾನು ಯಾರು?’ ಎಂಬ ಪ್ರಶ್ನೆ ಆತ್ಮದ ಅಸ್ತಿತ್ವವನ್ನು ದೃಢೀಕರಿಸುತ್ತದೆ. ಅದು ಆತ್ಮವಂಚನೆಯಲ್ಲ.

ಸಮಕಾಲೀನ ಭಾರತೀಯ ತತ್ವಶಾಸ್ತ್ರ
‘ರಮಣ ದರ್ಶನ’ ಪು. ೨೨೬
ಡಾ॥ ಎ. ಎನ್. ಶೇಷಗಿರಿರಾವ್

ಆರ್. ತಿಪ್ಪೇಸ್ವಾಮಿ

ವ್ಯಂಗ್ಯ ಚಿತ್ರಕಲೆ–ಒಂದು ಸಮೀಕ್ಷೆ

ವ್ಯಂಗ್ಯ ಚಿತ್ರಕಲೆ ವಿಶ್ವದಲ್ಲಿ ಅತ್ಯಂತ ಪ್ರಮುಖವೂ, ಪ್ರಭಾವಿತವೂ ಆದ ಕಲೆ. ರಾಜಕೀಯವಾಗಿ, ಸಾಮಾಜಿಕವಾಗಿ ವ್ಯಂಗ್ಯ ಚಿತ್ರಕಲೆ ತನ್ನ ಪ್ರಭಾವವನ್ನು ಬೀರುತ್ತಾ ಜನಮನವನ್ನು ರಂಜಿಸುತ್ತಾ ಬಂದಿದೆ. ಕೇವಲ ಕೆಲವೇ ರೇಖೆಗಳಲ್ಲಿ ಮೂಡಿಬಂದ ಒಂದು ವಿಡಂಬನಾತ್ಮಕ ಚಿತ್ರ ಸಮಾಜವನ್ನು ತಿದ್ದಬಲ್ಲದು. ಮಾರ್ಗದರ್ಶನ ಮಾಡಬಲ್ಲದು. ನೂರು ವಾಕ್ಯದಲ್ಲಿ ತಿಳಿಸುವ ವಿಷಯವನ್ನು ಒಂದು ವ್ಯಂಗ್ಯಚಿತ್ರ ಆ ಕೆಲಸವನ್ನು ಸಮರ್ಥವಾಗಿ ಮಾಡಬಲ್ಲದು.

ವಿಶ್ವದ ಪ್ರಸಿದ್ಧ ವ್ಯಂಗ್ಯ ಚಿತ್ರಕಾರರು ಈ ಒಂದು ಮಾಧ್ಯಮದಲ್ಲಿ ದುಡಿಯುತ್ತಾ ಬಂದಿದ್ದಾರೆ. ಅಂಥ ಖ್ಯಾತರನ್ನು ಇಲ್ಲಿ ಸ್ಮರಿಸುವುದು ಉಚಿತವಾಗಿದೆ.

ಇಂಗ್ಲೆಂಡಿನ ಸರ್ ಫ್ರಾನ್ಸಿಸ್ ಕುರ್ತರ್‌ಗೌಲ್ಡ್ (1844–1925), 'ಏಪ್' (ಕಾರ್ಲೊ ಪೆಲಿಗ್ರಿನ್), 'ಸ್ಪೈ' (ಸರ್ ಲಿಸ್ಲಿ ವಾರ್ಡ್), ಸರ್ ಮ್ಯಾಕ್ಸ್ ಬೀರ್‌ಭೊಮ್, ಅಬ್ರಿ ವಿನ್‌ಸೆಟ್ ಬರ್‌ಡೆಸ್ಲಿ, ವಿಲ್ ಡೈಸನ್, ಪೊಯ್ನ್ (ಪೆರ್ಸಿ ಫಿಯರಾನ್) ಸಿಡ್ನಿ ಸ್ಟ್ರೂಬ್, ಡಬ್ಲ್ಯೂ-ಕೆ. ಹಾಸೆಲ್ಡಿನ್ ಮೊದಲಾದ ಪ್ರಸಿದ್ಧ ವ್ಯಂಗ್ಯ ಚಿತ್ರಕಾರರು 19 (ಹತ್ತೊಂಬತ್ತನೆ) ನೇ ಶತಮಾನದ ಮೊದಲು ಹಾಗೂ 20 ನೇ ಶತಮಾನದಲ್ಲಿ ವ್ಯಂಗ್ಯ ಚಿತ್ರ ಕಲೆಯಲ್ಲಿ ಉತ್ತಮ ಸೇವೆ ಸಲ್ಲಿಸಿದರು.

ಅದರಲ್ಲೂ ಫ್ರಾನ್ಸಿಸ್‌ನು ಈ ಕಲಾರಂಗದಲ್ಲಿ ಸಾಧಿಸಿದ ಕೆಲಸ ಹೆಚ್ಚಿನದು. ಟ್ರೂತ್, ಸ್ಟ್ರ್ಯಾಂಡ್ ಮ್ಯಾಗ್‌ಜೈನ್, ರಿವ್ಯೂ ಆಫ್ ರಿವ್ಯೂ, ಪಾಲ್‌ಮಾಲ್ ಗೆಜೆಟ್ ಪತ್ರಿಕೆಗಳಲ್ಲಿ ಈತನ ವ್ಯಂಗ್ಯ ಚಿತ್ರಗಳು ಪ್ರಕಟವಾಗುತ್ತಿದ್ದವು. ಫ್ರಾನ್ಸಿಸ್ ಕೊನೆಯಲ್ಲಿ 'ವಾಷಿಂಗ್‌ಟನ್ ಗೆಜೆಟ್' ಪ್ರಸಿದ್ಧ ಪತ್ರಿಕೆಯ ಉಪಸಂಪಾದಕನಾಗಿ ಸೇರಿ ಅಲ್ಲೂ ವ್ಯಂಗ್ಯ ಚಿತ್ರಕಾರನಾಗಿ ಕೆಲಸ ನಿರ್ವಹಿಸಿದ. ಸಂಪಾದಕ ಹಾಗೂ ವ್ಯಂಗ್ಯ ಚಿತ್ರಕಾರನಾದ ಪ್ರಥಮ ವ್ಯಕ್ತಿಯೆನ್ನುವ ಕೀರ್ತಿ ಈತನದು.

1868 ರಲ್ಲಿ ಪ್ರಾರಂಭವಾದ 'ವ್ಯಾನಿಟಿ ಫೇರ್' ಸಾಮಾಜಿಕ ಪತ್ರಿಕೆಯಲ್ಲಿ ವ್ಯಂಗ್ಯಚಿತ್ರಕಾರರಾದ 'ಸ್ಪೈ' ಮತ್ತು 'ಏಪ್' ಚಿತ್ರಗಳು ಪ್ರಕಟಗೊಂಡು ಪತ್ರಿಕೆ ಪ್ರಸಿದ್ಧಿಗೇರಿತು.

ನಂತರ 1894–99ರ ಅವಧಿಯಲ್ಲಿ ಸಚಿತ್ರ ತ್ರೈಮಾಸಿಕ 'ಎಲ್ಲೋ ಬುಕ್' ಪ್ರಾರಂಭವಾಗಿ ಇಲ್ಲಿ ಎಬ್ರಿ ವಿನ್‌ಸೆಂಟ್ ಬೀರ್‌ಬೋಮ್ ಕಲಾವಿಭಾಗದ ಮುಖ್ಯಸ್ಥನಾದ. ಈ ತ್ರೈಮಾಸಿಕ 19ನೇ ಶತಮಾನದ ಕೊನೆಯಲ್ಲಿ ಪ್ರಸಿದ್ಧವಾಗಿತ್ತು. ಈತ ಈ ಸಂಚಿಕೆಯಲ್ಲಿ ಕೆಲಸ ನಿರ್ವಹಿಸಿದ್ದು ಕೇವಲ ಒಂದೇ ವರ್ಷ. ಆದರೂ ಆ ದಿನಗಳಲ್ಲಿ ಈ ಪತ್ರಿಕೆಯ ಹೆಸರು ಎಲ್ಲರ ನಾಲಿಗೆಯ ಮೇಲೂ ನಲಿದಾಡುತ್ತಿತ್ತು. ಸರ್ ಮ್ಯಾಕ್ಸ್ ಮತ್ತೊಬ್ಬ ವ್ಯಂಗ್ಯಚಿತ್ರಕಾರ. ಒಳ್ಳೆ ಬರಹಗಾರನೂ, ವಿಮರ್ಶಕನೂ ಆಗಿದ್ದ. 'ಎಲ್ಲೋ ಬುಕ್' ತ್ರೈಮಾಸಿಕದಲ್ಲಿ ಈತನ ಲೇಖನಗಳು ಎಡೆಬಿಡದೆ ಪ್ರಕಟವಾಗುತ್ತಿದ್ದವು. 'ಸಾಟರ್ಡೆ ರಿವ್ಯೂ'ನಲ್ಲಿ ಆ ವೇಳೆ ಜಾರ್ಜ್ ಬರ್ನಾರ್ಡ್ ಷಾ ಅವರ ಲೇಖನಗಳು ಪ್ರಕಟವಾಗುತ್ತಿದ್ದವು. ಅವರ ಸ್ಥಾನದಲ್ಲಿ ಸರ್ ಮ್ಯಾಕ್ಸ್ ರಂಗಭೂಮಿ ಕಲಾವಿಮರ್ಶಕನಾಗಿ ಮುಂದುವರಿದಿದ್ದ. ಈ ವ್ಯಂಗ್ಯಚಿತ್ರಕಾರ ಹ್ಯಾಪಿ ಹಿಪ್ರೋಕ್ರೈಟ್ ಮತ್ತು ಜುಲೇಕಾ ಡಾಬ್‌ಸನ್ ಎಂಬ ಎರಡು ಗ್ರಂಥಗಳನ್ನು ಬರೆದ. ಆದರೂ ಈತ ಲೇಖಕ ಹಾಗೂ ವಿಮರ್ಶಕನಾದಾಗ್ಯೂ ವ್ಯಂಗ್ಯಚಿತ್ರಕಾರನಾಗಿಯೇ ದೊಡ್ಡ ಹೆಸರು ಮಾಡಿದ. ಈತನ ವೈಯುಕ್ತಿಕ ವ್ಯಂಗ್ಯ ಚಿತ್ರಗಳು ಎಲ್ಲ ವರ್ಗದ ಜನರಿಂದ ಮಾನ್ಯತೆ ಪಡೆದವು. ಅಲ್ಲದೆ ಹೆಚ್ಚಿನ ಜನಪ್ರಿಯತೆಯನ್ನು ತಂದುಕೊಟ್ಟವು.

ಇಂಗ್ಲೆಂಡಿನ ಪತ್ರಿಕಾರಂಗದ ಮತ್ತೊಬ್ಬ ಪ್ರಸಿದ್ಧ ವ್ಯಂಗ್ಯಚಿತ್ರಕಾರ ಡೇವಿಡ್ ಅಲೆಗ್ಜಾಂಡರ್ ಸಿಸಿಲ್ 'ಲೋ' ಮರೆಯಲಾಗದ ವ್ಯಕ್ತಿಯಾಗಿದ್ದ. ನ್ಯೂಜಿಲೆಂಡ್ ದೇಶದಲ್ಲಿ ಹುಟ್ಟಿದ 'ಲೋ' ವಿಶ್ವದಲ್ಲೇ ಪ್ರಸಿದ್ಧ ವ್ಯಂಗ್ಯಚಿತ್ರಕಾರನಾಗಿದ್ದ. ಈತ ತನ್ನ ಹನ್ನೊಂದನೇ ವಯಸ್ಸಿನಿಂದಲೂ ಪತ್ರಿಕಾ ಲೋಕಕ್ಕೆ ತನ್ನ ವ್ಯಂಗ್ಯ ಚಿತ್ರಗಳನ್ನು ರಚಿಸಿಕೊಡುತ್ತಾ ಬಂದಿದ್ದ. ನ್ಯೂಜಿಲೆಂಡಿನ 'ಸ್ಪೆಕ್ಟೇಟರ್' ಪತ್ರಿಕೆಯಿಂದ ಇವರ ಕಲಾವೃತ್ತಿ ಪ್ರಾರಂಭವಾಯಿತು. ಲಾರ್ಡ್ ಬೀವರ್‌ಬ್ರೂಕ್‌ನ ಟೋರಿ–ನ್ಯೂಸ್‌ಪೇಪರ್ 'ಈವಿನಿಂಗ್ ಸ್ಟ್ಯಾಂಡರ್ಡ್' ಪತ್ರಿಕೆಯ ಮೂಲಕ ಖ್ಯಾತಿಗೊಂಡ. ಸ್ಟ್ಯಾಂಡರ್ಡ್‌ನ ಪತ್ರಿಕೆಯಲ್ಲಿ ಲೋನ ಉತ್ತಮ ವ್ಯಂಗ್ಯ ಚಿತ್ರಗಳು ಪ್ರಕಟಗೊಂಡವು. ಅದರಲ್ಲೂ ಹಿಟ್ಲರ್, ಮುಸಲೋನಿ, ಪ್ರಮುಖ ಇತರ ಹಿಟ್ಲರ್‌ನ ಅನುಯಾಯಿಗಳು ಮತ್ತು ತೀವ್ರಗಾಮಿ ಚಳುವಳಿಗಾರರ ಬಗ್ಗೆ ವ್ಯಂಗ್ಯ ಚಿತ್ರಗಳನ್ನು ಸೊಗಸಾಗಿ ಚಿತ್ರಿಸುತ್ತಿದ್ದನು. 'ಲೋ'ನ ವ್ಯಂಗ್ಯ ಚಿತ್ರಗಳು ಹಿಟ್ಲರ್ ಮತ್ತು ಮುಸಲೋನಿ ಅವರ ದುರಾಡಳಿತವನ್ನು ವಿಡಂಬನಾತ್ಮಕವಾಗಿ ಪ್ರತಿಭಟಿಸುತ್ತಿದ್ದವು. ಈ ಕಾರಣದಿಂದಾಗಿ 1935–36 ರಲ್ಲಿ 'ಲೋ'ನ ಈ ಬಗೆಯ ವ್ಯಂಗ್ಯ ಚಿತ್ರಗಳು ಪ್ರಕಟವಾಗದಂತೆ ಮತ್ತು ಜರ್ಮನಿಯಲ್ಲಿ ನಿರ್ಬಂಧಗೊಳಿಸ

ಸಾಯಿತು. 'ಲೋ' ನು ರಚಿಸಿದ ಹಿಟ್ಲರನ್ನು ಜಿನೀವಾದ ಲೀಗ್ ಆಫ್ ನೇಷನ್‌ಗೆ ಬೆಂಕಿ ಹಚ್ಚುವಂಥ ಚಿತ್ರ ಹಿಟ್ಲರನಿಗೆ ಕೋಪ ತರಿಸಿತು.

ಲೀಗ್‌ನಿಂದ ಜರ್ಮನಿಗೆ ಹಿಟ್ಲರನು ಹಿಂದೆಗೆದ ಸನ್ನಿವೇಶದ ವ್ಯಂಗ್ಯ ಚಿತ್ರ ಅದಾಗಿತ್ತು. 'ಲೋ' ನ ಚಿತ್ರಗಳು ವಿಶ್ವದ ಅನೇಕ ಪ್ರಮುಖ ಪತ್ರಿಕೆಗಳಲ್ಲೂ ಮರು ಪ್ರಕಟಣೆ ಕಾಣುತ್ತಿದ್ದವು.

1930 ರ ನವೆಂಬರ್ 4 ರಂದು ಫ್ರೆಂಚ್‌ನ ವ್ಯಂಗ್ಯಚಿತ್ರಗಳ ಪ್ರಾರಂಭ ಕಂಡದ್ದು ಚಾರ್ಲ್ಸ್ ಫಿಲಿಪನ್‌ನಿಂದ. ಅದೂ 'ಲಾ ಕ್ಯಾರಿಕೆಚರ್ ಮತ್ತು ಲಿ ಕ್ಯಾರಿಕೆಚರ್ ಪ್ರಕಟಣೆಗಳಿಂದ. ಫ್ರಾನ್ಸ್ ತನ್ನ ದೇಶದ ಖಾರವಾದ ಮತ್ತು ಬಲಶಾಲಿಯಾದ ಅನೇಕ ವ್ಯಂಗ್ಯಚಿತ್ರಕಾರರನ್ನು ಸೃಷ್ಟಿಸಿತು. ಅವರಲ್ಲಿ ಪ್ವಾಲ್ ಗಾವರ್ನಿ, ಹಾನರಿ ಡೋಮಿಯರ್, ಪ್ವಾಲ್ ಗುಸ್ಟೈವ್ ಡೋರಿ, ರ್‍ಯಾಂಡಲ್ಫ್ ಕಾಲ್ಡಕಟ್ (1946-86) ಜಾವರ್, ಹೆನ್ರಿ ಟಿಮೋನೀರ್, ಟ್ರಾವಿಸ್, ಕಾರೆನ್ ಡಿಚ್ ಮೊದಲಾದವರು ಅಗ್ರಗಣ್ಯರು. ಜಾರ್ಲ್ಸ್ ಫಿಲಿಪನ್ (1806–62) ಎಂಬ ಪ್ರಕಾಶಕನೂ ಒಬ್ಬ ವ್ಯಂಗ್ಯಚಿತ್ರಕಾರನಾಗಿದ್ದ. ಈತನಿಗಿಂತ ಮೊದಲು ನೆನೆಯಬೇಕಾದ ವ್ಯಂಗ್ಯಚಿತ್ರಕಾರರಲ್ಲಿ ಆಟ್ಯೋನಿ ವಾಚ್ಯು, ಹ್ಯೂಟ್ ಮತ್ತು ಡುಜ್ಯೋಕೊರ್ಟೆ ಇವರು ಪ್ರಮುಖರಾಗಿದ್ದಾರೆ.

18ನೇ ಶತಮಾನದ ಕೊನೆಯಲ್ಲಿ ಫ್ರೆಂಚ್ ದೇಶದ ಆಧುನಿಕ ವ್ಯಂಗ್ಯಚಿತ್ರಕಲೆ ಬೆಳೆದು ಬಂದರೂ 15ನೇ ಶತಮಾನದಲ್ಲಿ ಸಹಜವಾಗಿ ಫ್ರೆಂಚ್ ವ್ಯಂಗ್ಯಚಿತ್ರಕಲೆ ಪ್ರಾರಂಭವಾಯಿತು. ಈ ಕಾಲದಲ್ಲಿ ಖ್ಯಾತ ಎಂಗ್ರೇವ್ ಸ್ವಿಸ್ ದೇಶದ ಮಾದರಿಗಳ ಅಚ್ಚುಗಳ ಸೋಲು ಎಂಬ ಚಿತ್ರ ಪ್ರಸಿದ್ಧವಾಗಿತ್ತು. ಇದರಲ್ಲಿ ಫ್ರಾನ್ಸ್‌ನ 12 ನೇ ಲೂಯಿಸ್, ಇಂಗ್ಲೆಂಡಿನ 7ನೇ ಹೆನ್ರಿ, ಸ್ಪೇನಿನ ಮತ್ತು ಸ್ವಿಸ್‌ನ ಚಕ್ರವರ್ತಿಯರನ್ನು ತೋರಿದ ರೇಖಾಚಿತ್ರ ಇದು. 17ನೇ ಶತಮಾನದಲ್ಲಿ ಫ್ರಾನ್ಸ್‌ನ ವ್ಯಂಗ್ಯ ಚಿತ್ರಕಲೆ ಎಡೆಬಿಡದೆ ಕಾಣಿಸಿಕೊಂಡಿತು. ಆದರೆ 17ನೇ ಶತಮಾನದಲ್ಲಿ ಇಪ್ಪತ್‌ನಾಲ್ಕನೆ ಲೂಯಿಸ್‌ನು ಮಾಡಿದ ಪತ್ರಿಕಾ ಪ್ರತಿಬಂಧಕಾಜ್ಞೆಯಿಂದಾಗಿ ವ್ಯಂಗ್ಯಚಿತ್ರಕಲೆಗೆ ತಡೆಯೊಡ್ಡಿದಂತಾಯಿತು.

ಹೊನ್ರೇ ಡ್ಯೂಮಿಯರ್‌ನು 'ಲಾ ಕ್ಯಾರಿಕೆಚರ್' ಮತ್ತು 'ಲಿ ಕಾರಿಕೆಚರ್' ಪ್ರಕಟಣೆಗಳ ಮೂಲಕ ಫ್ರೆಂಚ್ ದೇಶದಲ್ಲೇ ಎತ್ತರಕ್ಕೇರಿದ ಖ್ಯಾತ ವ್ಯಂಗ್ಯಚಿತ್ರಕಾರನಾಗಿದ್ದ. ಈ ಪತ್ರಿಕೆಗಳಲ್ಲಿ ಈತನ ಸುಮಾರು 4000 ಚಿತ್ರಗಳು ಬೆಳಕು ಕಂಡಿದ್ದವು. ಕಿಂಗ್ ಲೂಯಿ ಫಿಲಿಪ್ಸ್‌ನ ಬಗ್ಗೆ ಬರೆದ ಒಂದು ವ್ಯಂಗ್ಯ ಚಿತ್ರಕ್ಕಾಗಿ ಈತ ಸೆರೆವಾಸ ಕಾಣಬೇಕಾಯಿತು. ಈತನ ಚಿತ್ರಗಳಲ್ಲಿ ಮುಖ್ಯವಾಗಿ ಸಾಮಾಜಿಕ ಹಾಗೂ ರಾಜಕೀಯ ಅಷ್ಟೇ ಅಲ್ಲ, ಕೆಳವರ್ಗದ ಜನ ಸಾಮಾನ್ಯರ ಬಗ್ಗೆಯೂ ವಸ್ತು ವಿಶೇಷ ಜೀವಿತದ ಕೊನೆಯ ದಿನದ (1979)ವರೆಗೂ ಎಡೆಬಿಡದೆ ಹೋರಾಟ ನಡೆಸಿದ, ಅದೂ ವ್ಯಂಗ್ಯಚಿತ್ರಕಾರನಾಗಿ. ಸಮಾಜವನ್ನು

ತಿದ್ದಿದ ಮಾರ್ಗದರ್ಶನ ನೀಡಿದ. ಈತನ ನಂತರ 'ಪಾವೆಲ್ ಗ್ಯಾವರಿನ್' ಮತ್ತೊಬ್ಬ ದೈತ್ಯ ವ್ಯಂಗ್ಯಚಿತ್ರಕಾರ ತನ್ನದೇ ಪ್ರಕಟಣೆಗಳ ಮೂಲಕ ಉತ್ತಮ ಕೆಲಸ ಮಾಡಿದ. "ಜನರಲ್ ಡಿಸೆಜೆನ್ಸ್ ಡ್ಯುಮೋನ್‌ಡಿ" ಪತ್ರಿಕೆಯನ್ನು 1903 ರಲ್ಲಿ ಈತ ಪ್ರಕಟಿಸಿದ. ಪರ್ಶಿಯನ್ ದೇಶದ ಜನಜೀವನವನ್ನು ದಿಟ್ಟತನದಿಂದ ವ್ಯಂಗ್ಯಚಿತ್ರಗಳ ಮೂಲಕ ಬೆಳಕಿಗೆ ತಂದ. "ಲಿ ಚಾರ್‍ವರಿ" ಪತ್ರಿಕೆಯಲ್ಲಿ ತೊಡಗಿದ ಅನೇಕ ಚಿತ್ರಗಳನ್ನು ರಚಿಸಿದ. ಈತ ಎಲ್ಲೆಲ್ಲೂ ಪ್ರಸಿದ್ಧನಾದ; ಮಾನವರ ಗುಣಗಳನ್ನು ಅವರ ಜೀವನವನ್ನು ಅತಿ ಸೂಕ್ಷ್ಮವಾಗಿ ಅವಲೋಕಿಸುತ್ತಿದ್ದ. ಅನೇಕ ಚಾರಿತ್ರಿಕ ಚಿತ್ರಗಳನ್ನು ರಚಿಸಿದ. ಆದರೂ ಈತನ ನೈಪುಣ್ಯತೆ ವ್ಯಂಗ್ಯಚಿತ್ರಕಾರ ನಾಗಿ ಹೆಚ್ಚು ವ್ಯಕ್ತವಾಗುತ್ತದೆ. "ಲಿ ರೈರಿ" ಎಂಬ ಮತ್ತೊಂದು ಪತ್ರಿಕೆ ಫ್ರೆಂಚ್ ದೇಶದ ವ್ಯಂಗ್ಯಚಿತ್ರಕಲೆಯ ಇತಿಹಾಸದಲ್ಲಿ ವಿಶಿಷ್ಟಸ್ಥಾನಗಳಿಸಿತ್ತು. ಇದರ ಮೊದಲ ಪುಟಗಳು ಪ್ರಸಿದ್ಧ ಕಲಾವಿದ ಜೆ. ಎಲ್. ಫೊರ್‌ಇನ್‌ನ ವರ್ಣಚಿತ್ರ ಗಳಿಂದ ಕಂಗೊಳಿಸುತ್ತಿತ್ತು. ಇನ್ನು ಅನೇಕ ಉತ್ತಮ ಚಿತ್ರಕಾರರಿಂದ ಈ ಸಂಚಿಕೆ ಶೋಭಿಸುತ್ತಿತ್ತು.

ಅಮೆರಿಕಾದ ವ್ಯಂಗ್ಯಚಿತ್ರಕಲೆಯ ಚರಿತ್ರೆಯ ಪುಟಗಳನ್ನು ಗಮನಿಸಿದಾಗ ಮೊದಲ ವ್ಯಂಗ್ಯಚಿತ್ರ ಜೆನ್‌ಜಮಿನ್ ಫ್ರಾನ್‌ಕ್ಲಿನ್‌ನು ರಚಿಸಿದ್ದು ಕಾಣಬರುತ್ತದೆ. ಈತನ ಚಿತ್ರಗಳು 1751ರಲ್ಲಿ ಪ್ರಾರಂಭವಾದ 'ಪನ್ಸಿಲ್ವೇನಿಯ ಗೆಜೆಟ್' ಸಂಚಿಕೆ ಯಲ್ಲಿ ಪ್ರಕಟವಾಗುತ್ತಿದ್ದವು. ಈತ ರಚಿಸಿದ 'ಜಾಯಿನ್ ಅಥವಾ ಡೈ' ಎಂಬ ಚಿತ್ರ ಅಮೆರಿಕದ ಚಿತ್ರ.

ವಸಾಹತುಗಳ ವಿಂಗಡನೆಗಾಗಿ ಜನರ ಹೋರಾಟವನ್ನು ಆ ಚಿತ್ರ ಪ್ರತಿಬಿಂಬಿಸು ತ್ತಿತ್ತು. ಆ ಕ್ರಾಂತಿಕಾರಿ ಸನ್ನಿವೇಶಗಳಿಗೆ ತಕ್ಕ ಚಿತ್ರ ಅದಾಗಿತ್ತು; 18ನೇ ಶತ ಮಾನದ ಅಮೆರಿಕದ ವ್ಯಂಗ್ಯಚಿತ್ರಗಾರರಲ್ಲಿ ಪಾವಲ್ ರಿವಿರಿ ಒಬ್ಬ ಪ್ರಮುಖ ನಾಗಿದ್ದ. ಈತನಿಗೆ ಮೊದಲು ಅಮೆರಿಕದಲ್ಲಿ ಅನೇಕ ರಾಜಕೀಯ ವ್ಯಂಗ್ಯಚಿತ್ರಗಳನ್ನು ರಚಿಸುತ್ತಿದ್ದವನು ಫ್ರೆಂಚ್ ದೇಶದ ಹ್ಯುಗೆಟ್ ಎಂಬುವನು.

ಪ್ರಸಿದ್ಧ ವ್ಯಂಗ್ಯಚಿತ್ರಕಾರ ಸ್ಕಾಟ್‌ಲ್ಯಾಂಡಿನ ವಿಲಿಯಂ ಚಾರ್ಲ್‌ಸ್‌ನು ಪ್ರಥಮ ಅಮೆರಿಕಾದ ರಾಜಕೀಯ ವ್ಯಂಗ್ಯಚಿತ್ರಕಾರನಾಗಿದ್ದ. ಈತ ಇಂಗ್ಲೆಂಡಿನ (1812ರ) ಪ್ರಥಮ ಮಹಾಯುದ್ಧದ ಸಂದರ್ಭದಲ್ಲಿದ್ದವನು.

ಅಮೆರಿಕಾದ ವ್ಯಂಗ್ಯಚಿತ್ರಗಳ ಸ್ವರ್ಣಯುಗ ಪ್ರಾರಂಭವಾದುದು ರ್ಯಾರ್‌ಪರ್ಸ್ ವೀಕ್ಲಿ (1957) ಯಿಂದ. ಥಾಮಸ್ ನೆಸ್ಟ್ ಇಲ್‌ಲ ವ್ಯಂಗ್ಯಚಿತ್ರಕಾರನಾಗಿ ಆಂತರಿಕ ಯುದ್ಧವನ್ನು ಬೆಂಬಲಿಸಿ ಚಿತ್ರ ಬರೆದಿದ್ದ. ಪ್ರೆಸಿಡೆಂಟ್ ಲಿಂಕನ್‌ನು ಈತನ ಚಿತ್ರ ಗಮನಿಸಿ ಆಹ್ವಾನಿಸಿದ. ಈತನ ಶಕ್ತಿಶಾಲಿ ವ್ಯಂಗ್ಯಚಿತ್ರಗಳು ಇಂದಿನ ಅಮೆರಿಕಾದ ಚಿತ್ರಕಾರರಿಗೆ ಸ್ಫೂರ್ತಿ ಹಾಗೂ ಮಾರ್ಗದರ್ಶನ ನೀಡುತ್ತಿವೆ. 'ಡೆಮಾಕ್ರೆಟಿಕ್ ಡಾಂಕಿ' ಮತ್ತು ತೆಮ್ಮಾನ್ಸ್ ಟೈಗರ್ (ಲಂಚಕೋರತನ ಇತ್ಯಾದಿ) ಈತ ಸ್ಥಾಪಿಸಿದ

ವ್ಯಂಗ್ಯಚಿತ್ರಕಾರರ ಸಂಸ್ಥೆಗಳು. ಈತನ ಮತ್ತು 'ಹ್ಯಾರ್ಪರ್ಸ್ ವೀಕ್ಲಿ' ಬಾಂಧವ್ಯ ಕೊನೆಗೊಂಡಿದ್ದು 1884ರಲ್ಲಿ.

ಅಮೇರಿಕದಲ್ಲಿ ಹ್ಯಾರ್ಪರ್ಸ್ ವ್ಯಂಗ್ಯಚಿತ್ರಗಳ ಪತ್ರಿಕೆ ಅಲ್ಲದೆ ಬಿಸ್ಲಿನ್ ವೀಕ್ಲಿ, ಪುಕ್, ಜಡ್ಜ್, ವ್ಯಾನಿಟ್ ಫೇರ್ ಮತ್ತು ಲೈಫ್ ಮುಂತಾದ ಪತ್ರಿಕೆಗಳು ಉತ್ತಮ ಪ್ರಸಾರದಲ್ಲಿದ್ದವು. ಜೋಸೆಫ್ ಕೀಪ್ಲರ್‌ನು 'ಪುಕ್' ಪತ್ರಿಕೆಯ ಸ್ಥಾಪಕ, ವಿಯನ್ನಾದ ಕೀಪ್ಲರ್‌ನು 1968ರಲ್ಲಿ ಅಮೆರಿಕಕಾಕ್ಕೆ ಬಂದು ನೆಲಸಿದ. ಜರ್ಮನ್ ಭಾಷೆಯ ಪತ್ರಿಕೆಯ ಪ್ರಕಟಣೆ ಕೈಹಾಕಿ ನಷ್ಟ ಅನುಭವಿಸಿದ. ಮುಂದೆ ನ್ಯೂಯಾರ್ಕ್‌ನಲ್ಲಿ ವ್ಯಂಗ್ಯಚಿತ್ರಕಾರನಾಗಿ ಜೀವನ ಸಾಗಿಸಿದ. ಇನ್ನೊಬ್ಬ ವ್ಯಂಗ್ಯಚಿತ್ರಕಾರ ಬರ್ನ್ಯಾಹರ್ಡ್ ಗಿಲ್ಲಮ್ ಎಂಬುವನೂ 'ಪುಕ್' ಮತ್ತು 'ಜಡ್ಜ್' ಪತ್ರಿಕೆಗಳಲ್ಲಿ ವ್ಯಂಗ್ಯಚಿತ್ರಕಾರನಾಗಿ ಪ್ರಸಿದ್ಧಿಗೇರಿದ.

ಏನೇ ಆಗಲಿ ಅಮೆರಿಕಾದ ರಾಜಕೀಯ ವ್ಯಂಗ್ಯಚಿತ್ರಗಳು ಪ್ರವೇಶ ಕಂಡದ್ದು 1880ರ ಸುಮಾರಿನಲ್ಲಿ. ಅಂದಿನಿಂದ ಪ್ರಮುಖ ವ್ಯಂಗ್ಯ ಚಿತ್ರಕಾರರಾದ ಚಾರ್ಲ್ಸ್ ಜಿ. ಬುಷ್, ಹೋಮರ್ ಡವಿನ್‌ಪೋರ್ಟ್, ವಾಲ್ಕರ್, ಡಿಂಗ್, ರೋಲಿನ್‌ಕಿರ್‌ಬೈ, ರೋಜರ್ಸ್, ರಾಬಿನಸನ್, ಫಿಡ್ಜ್‌ಪಟ್–ರಿಕ್, ಮುಂತಾದವರು ವ್ಯಂಗ್ಯಚಿತ್ರಕಾರರಾಗಿ ಹೆಸರುಗಳಿಸಿದ್ದರು. 18 ವರ್ಷಗಳ ಕಾಲ 'ಲಿಸ್ಲಿನ್ ಮ್ಯಾಗಜೈನ್' ಮತ್ತು 'ಪುಕ್' ಪತ್ರಿಕೆಗಳಲ್ಲಿ ಕೆಲಸ ಮಾಡಿದ 'ಓಪರನು ಮುಂದೆ ನ್ಯೂಯಾರ್ಕ್‌ನ 'ಜನರಲ್'ನಲ್ಲಿ ರಾಜಕೀಯ ವ್ಯಂಗ್ಯಚಿತ್ರಕಾರನಾಗಿ ಸೇರಿಕೊಂಡ. 'ಹ್ಯಾಪಿ ಹೋಲಿಗನ್' ಈತನ ವ್ಯಂಗ್ಯ ಚಿತ್ರಮಾಲಿಕೆಯಿಂದ ವಿಖ್ಯಾತಿಗೇರಿದ. ಡಾವನ್ ಪೋರ್ಟ್ ಎಂಬಾತ ಸ್ಯಾನ್‌ಫ್ರಾನ್ಸಿಸ್‌ನಲ್ಲಿ ಎಗ್ಝಾಮಿನರ್ ಮತ್ತು ನ್ಯೂಯಾರ್ಕ್ ಇವಿನಿಂಗ್ ಜರ್ನಲ್‌ನಲ್ಲಿ ಈತ ಅತ್ಯಂತ ಹೆಚ್ಚಿನ ಸಂಭಾವನೆಗಳಿಸುತ್ತಿದ್ದ. ರೋಲಿನ್ ಕಿರ್‌ಬೈ "ದಿ ವರ್ಲ್ಡ್" ನಲ್ಲಿ ವ್ಯಂಗ್ಯಚಿತ್ರಕಾರನಾಗಿ ಬಹುಮಾನ ಗಳಿಸಿದ. ಡಿಂಗ್ ಎಂಬಾತ 'ನ್ಯೂಯಾರ್ಕ್ ಹೆರಾಲ್ಡ್ ಟ್ರಿಬ್ಯೂನ್'ನಲ್ಲೂ ನೆಲ್ಸನ್‌ನು 'ಬ್ರೊಕ್ಲಿನ್ ಈಗಲ್' ಪತ್ರಿಕೆಯಲ್ಲಿ ಫಿಡ್ಜ್‌ಪೆಟ್ರಿಕ್‌ನು ಸೇಂಟ್ ಲೂಯಿಸ್ ಪೋಸ್ಟ್-ಡಿಸ್ಪ್ಯಾಚ್‌ನಲ್ಲೂ ಅದ್ಭುತ ವ್ಯಂಗ್ಯಚಿತ್ರಗಳನ್ನು ನೀಡುತ್ತಾ ಬಂದರು.

'ನ್ಯೂಯಾರ್ಕರ್' ಅಮೆರಿಕಾದ ಅತ್ಯಂತ ಹೆಚ್ಚಿನ ಪ್ರಸಾರ ಹೊಂದಿರುವ ವ್ಯಂಗ್ಯಚಿತ್ರಗಳ ಪತ್ರಿಕೆ. ವಿಖ್ಯಾತ ವ್ಯಂಗ್ಯಚಿತ್ರಕಾರ—ಪೀಟರ್ ಆರ್ನೊ ಜೊತೆಗೆ ಅನೇಕ ಇತರ ವ್ಯಂಗ್ಯಚಿತ್ರಕಾರರು ಈ ಪ್ರಸಿದ್ಧ ಪತ್ರಿಕೆಯಲ್ಲಿ ಕೆಲಸ ಮಾಡುತ್ತಿದ್ದಾರೆ. ಇಲ್ಲಿ ಕಥಾಮಾಲಿಕೆಯ ವ್ಯಂಗ್ಯಚಿತ್ರಗಳು ಪ್ರಕಟಣೆ ಮಾಡಲಾಗುತ್ತಿದೆ. 'ವಾಲ್ಟ್ ಡಿಸ್ನಿ' ಜಗತ್‌ಪ್ರಸಿದ್ಧನಾದ ಚಿತ್ರಕಾರ. 1901ರಲ್ಲಿ ಜನಿಸಿದ ಈತ ಮಿಕ್ಕಿ ಮೌಸ್ ಚಿತ್ರಿಸಿದ. ಕ್ರಮೇಣ ಡೊನಾಲ್ಡ್ ಡಕ್, ಗೂಫಿ ಮತ್ತು ಅಂಕಲ್ ಸ್ಕ್ರೂಜ್ ಬರೆದ. ಅನಂತರ ಅವನ ಚಲನಚಿತ್ರಗಳು ಬಂದವು. ಅವುಗಳಲ್ಲಿ

ಬೀವರ್ ರ್‍ಯಾಲಿ, ಲಿವಿಂಗ್ ಡೆಸರ್ಟ್, ಚಾರ್ಲಿನ ಲೋನ್ ಸಮ್ ಕೌಗರ್ ಹಾಗೂ ಬ್ಲಾಕ್ ಬಿಯರ್ಡ್ಸ್ ಮೊದಲಾದ ಚಿತ್ರಗಳು ಹೊರಬಂದವು. ನಾವು 'ಡೊನಾಲ್ಡ್ ಡಕ್,' 'ಮಿಕ್ಕಿ ಮೌಸ್'ಗಳನ್ನು ನೋಡಲು ಪ್ಯಾಂಟಸಿಲಾಂಡ್‌ಗೆ ಹೋಗಬೇಕು. ಅಲ್ಲಿ ನಾವು ಅವುಗಳ ಜೊತೆ ಮಾತನಾಡಬಹುದು. 'ವಾಲ್ಟ್ ಡಿಸ್ನಿ' ಯನ್ನು ವ್ಯಂಗ್ಯ ಚಿತ್ರಕಾರರ ಸಾಲಿನಲ್ಲಿ ಸೇರಿಸಬಹುದಾಗಿದೆ. ಈತನ ಚಿತ್ರಗಳಲ್ಲಿ ವಿಡಂಬನೆ ಇದೆ, ನಗೆ ತರಿಸುವ ವಕ್ರತೆ ಇದೆ.

ಭಾರತದಲ್ಲಿ ಸಾಮಾನ್ಯವಾಗಿ ಎಲ್ಲ ಪತ್ರಿಕೆಗಳಲ್ಲೂ ವ್ಯಂಗ್ಯಚಿತ್ರಗಳನ್ನು ಗಮನಿಸಬಹುದಾಗಿದೆ. ಮುದ್ರಣ ಕಾಣುವ ಮೊದಲು ಭಾರತದಲ್ಲಿ ಬಂಗಾಳದ ಆದಿವಾಸಿ ಜಾನಪದ ಕಲಾವಿದರು ವಿಡಂಬನಾ ಚಿತ್ರಗಳನ್ನು ರಚಿಸುತ್ತಿದ್ದರು. ಕಾಳಿ ಘಟದ 'ಪಟ್ಟುವ' ಎಂದು ಹೆಸರಾಯಿತು. ಆ ಚಿತ್ರಗಳು ಈಗಿನಂತಿರಲಿಲ್ಲ. ನೀತಿಯುತವಾದ ಚಿತ್ರಗಳವು. ಆದರೆ ಅವುಗಳಲ್ಲಿ ವಿಡಂಬನೆ ಎದ್ದು ತೋರುತ್ತಿತ್ತು. ಇವು ಆಧುನಿಕ ಕಲಾವಿದರನ್ನು ವಿಮರ್ಶನಕಾರರ ಮೆಚ್ಚಿಗೆ ಗಳಿಸಿದುವು. ಕಾಲಿಘಟ್ಟದ ಚಿತ್ರಮಾಲಿಕೆಗಳು ಇಂದಿನ ವ್ಯಂಗ್ಯಚಿತ್ರಗಳಂತಿರಲಿಲ್ಲ. ಆದರೆ ಸಮಾಜದ ಕುಂದು ಕೊರತೆಯನ್ನು ಎತ್ತಿ ತೋರಿಸುತ್ತಿದ್ದವು. ಸಾಮಾಜಿಕ ಕಟ್ಟುಪಾಡುಗಳನ್ನು, ಧರ್ಮ ನಿಂದನೆ, ಬಹುಪತ್ನಿತ್ವ, ಕುಡಿತ ಮುಂತಾದ ಸಮಾಜಘಾತಕತನವನ್ನು ಈ ವಿಡಂಬನಾತ್ಮಕ ಚಿತ್ರಗಳಿಂದ ಜನರ ಮನಸ್ಸನ್ನು ಕೆಣಕಿ ತಿದ್ದುವ ಪ್ರಯತ್ನ ಯಶಸ್ವಿಯಾಗಿತ್ತು.

19ನೆಯ ಶತಮಾನದ ನಡುವಣ ಕಾಲದಲ್ಲಿ ವ್ಯಂಗ್ಯಚಿತ್ರಗಳು ಇಂಡಿಯಾದ ಪತ್ರಿಕೆಗಳಲ್ಲಿ ಪ್ರಕಟಣೆ ಕಂಡುವು. ಇಂಡಿಯಾದಲ್ಲಿ ಇಂಗ್ಲಿಷರು ಪ್ರಥಮವಾಗಿ ವ್ಯಂಗ್ಯ ಚಿತ್ರಗಳನ್ನು ವಾರ್ತಾಪತ್ರಿಕೆಗಳಲ್ಲಿ ಪ್ರಕಟವಾಗುವಂತೆ ಮಾಡಿದರು. 'ಪಂಚ್' ಮತ್ತು 'ಲಂಡನ್ ಕಾರಿವಾರಿ' ಪತ್ರಿಕೆಗಳಿಂದ ಪ್ರಭಾವಿತರಾದ ವಿದೇಶಿಯರು ಇಂಡಿಯಾದಲ್ಲೂ ಅವುಗಳ ಪ್ರಸಾರ ಇಲ್ಲೂ ಮುಂದುವರಿಸಿದರು. 'ಪಂಚ್' ಅಂದಿನ ದಿನಗಳಲ್ಲಿ ಇಂಡಿಯಾದಲ್ಲಿ ದೊರಕುವುದು ಸುಲಭ ಇರಲಿಲ್ಲ.

ದೆಹಲಿಯಿಂದ 'ಇಂಡಿಯನ್ ಪಂಚ್' ಇಂಡಿಯಾದ ಪ್ರಥಮ ವ್ಯಂಗ್ಯಚಿತ್ರ ಮಾಸಿಕವಾಗಿ ಪ್ರಕಟವಾಯಿತು. ಇದರ ಪ್ರಕಾಶಕ ಸಿಪಾಯ್ ಮಾಡಿನಿ ಎಂಬಾತ ಇಂಗ್ಲೀಷ್ ವ್ಯಕ್ತಿ. 'ಇಂಡಿಯನ್ ಪಂಚ್' 1859ರ ಜನವರಿ 1 ರಂದು ಪ್ರಕಟಗೊಂಡಿತು. ಇದರ ಸಂಪಾದಕರ ಹೆಸರು ಆ ಸಂಚಿಕೆಯಲ್ಲಿ ಕಾಣಬರಲಿಲ್ಲ. ಆದರೆ ಇದರ ಪ್ರಕಾಶಕ ಈಲಿಯನ್. ಪಂಚ್‌ನ ಪ್ರತಿಯೊಂದು ಸಂಚಿಕೆಯೂ ವ್ಯಂಗ್ಯಚಿತ್ರಗಳಿಂದ ಕಂಗೊಳಿಸುತ್ತಿತ್ತು. ನಾನಾ ಸಾಹೇಬ್, ಝಾನ್ಸಿರಾಣಿ ಮತ್ತು ಉನ್ನತ ಮಿಲಿಟರಿ ಹಾಗೂ ಆಡಳಿತ ಅಧಿಕಾರಿಗಳ ವ್ಯಂಗ್ಯ ಚಿತ್ರಗಳನ್ನು ಆ ಸಂಚಿಕೆಗಳಲ್ಲಿ ಕಾಣಬಹುದಿತ್ತು. ಇಲ್ಲಿ ಸಾಮಾಜಿಕವಾದ ಹಾಗೂ ರಾಜಕೀಯ ವ್ಯಂಗ್ಯಚಿತ್ರಗಳನ್ನು ಕಾಣಬಹುದಿತ್ತು.

ಮತ್ತೊಂದು ಅಸೋಘವಾದ ವ್ಯಂಗ್ಯಚಿತ್ರ ಸಂಚಿಕೆ ಕಲ್ಕತ್ತಾದಿಂದ ಪ್ರಕಟವಾಗುತ್ತಿತ್ತು. ಈ ಸಂಚಿಕೆಯನ್ನು ಡೆಕ್ರಿನ್ ಲೀನ್ ಎಂಬುವನು ಪ್ರಾರಂಭಿಸಿದ (1871ರಲ್ಲಿ) ಇಂಡಿಯಾ ಮತ್ತು ಬ್ರಿಟಿಷ್ ದೇಶಗಳಲ್ಲಿ ಹೆಸರುವಾಸಿ ಕಂಡಿತು. ಈ ಪತ್ರಿಕೆಯ ಸಂಪಾದಕರ ಹೆಸರೂ ಕಾಣುವಂತಿಲ್ಲ. ಕಾರಣ ವಿಚಿತ್ರವಾದುದು. ದೆಹಲಿಯ 'ಇಂಡಿಯನ್ ಪಂಚ್' ಮತ್ತು ಕಲ್ಕತ್ತಾದಲ್ಲಿ 'ಇಂಡಿಯನ್ ಚ್ಯಾರಿವರಿ' ನಂತೆ ಮತ್ತೊಂದು ವ್ಯಂಗ್ಯಚಿತ್ರ ಮಾಸಿಕ ಸಂಚಿಕೆ ಕಲ್ಕತ್ತಾದಲ್ಲಿ ಪ್ರಾರಂಭಗೊಂಡಿತು. ಇದು ಮೊದಲು ಬಂಗಾಳಿ ಭಾಷೆಯ ಮಾಸಿಕವಾಗಿತ್ತು. ಇದರ ಹೆಸರು 'ಹರ್‌ಬೊಲ ಬಾನ್‌ರ' ಎಂದಿತ್ತು. 1874ರಲ್ಲಿ ಪ್ರಾರಂಭವಾದ ಒಂದು ತಿಂಗಳಲ್ಲೇ ಇದರ ಹೆಸರು 'ನ್ಯೂ ಇಂಡಿಯನ್ ಪಂಚ್' ಎಂದು ಬದಲಾಯಿತು.

ಈ ಮೂರು ಸಂಚಿಕೆಗಳ ಜೊತೆಗೆ ಇನ್ನು ಇತರ ಒಳ್ಳೆಯ ವಿಡಂಬನಾ ಸಂಚಿಕೆಗಳು ಬಂಗಾಳದಲ್ಲಿ ಹುಟ್ಟಿಕೊಂಡವು. ಅವುಗಳಲ್ಲಿ 'ಬಸಂತಕ್' ಮತ್ತು 'ಪಂಚಾನಂ' ಮಾಸಿಕ ಸಂಚಿಕೆಗಳು ಪ್ರಸಿದ್ಧವಾಗಿದ್ದವು. 'ಬಸಂತಕ್' ಪ್ರಥಮ ಸಂಚಿಕೆ 31–1–1874ರಲ್ಲಿ ಹೊರಬಂದಿತು. ಈ ಸಂಚಿಕೆಗಳ ಸಂಪಾದಕರು ಪ್ರಾಣನಾಥದತ್ತ ಮತ್ತು ಗಿರೀಂದ್ರನಾಥದತ್ತ ಸಂಪಾದಕರೂ ವ್ಯಂಗ್ಯಚಿತ್ರಕಾರರೂ ಆಗಿದ್ದರು.

ಇಂಡಿಯಾದ ಇತರ ವ್ಯಂಗ್ಯಚಿತ್ರ ಪತ್ರಿಕೆಗಳಲ್ಲಿ 'ಉರ್ದು ಪಂಚ್' ಲಕ್ನೋನಿಂದ ಮತ್ತು 'ಹಿಂದಿ ಪಂಚ್' ಬೊಂಬಾಯಿನಿಂದ ಪ್ರಕಟವಾಗುತ್ತಿದ್ದವು. 'ಉರ್ದು ಪಂಚ್' ಉರ್ದು ಭಾಷೆಯಲ್ಲಿ ಪ್ರಥಮ 16–1–1877ರಲ್ಲಿ ಪ್ರಕಟವಾಯಿತು. ಮುನ್ಸಿಮಹಮದ್ ಸಜ್ಜದ್ ಹುಸೇನ್ ಎಂಬಾತ ಈ ಪತ್ರಿಕೆಯ ಸ್ಥಾಪಕನಾಗಿದ್ದ.

20ನೇ ಶತಮಾನದಲ್ಲಿ ಬಂಗಾಳ ಇಂಡಿಯಾದ ವ್ಯಂಗ್ಯಚಿತ್ರಕ್ಕೆ ಹೆಚ್ಚಿನ ಮಾನ್ಯತೆ ನೀಡಿತ್ತು. ಅಬನೀಂದ್ರನಾಥ ಠಾಕೂರರ ದೊಡ್ಡಣ್ಣನಾದ ಖ್ಯಾತ ಚಿತ್ರಕಾರರಾದ ಗಗನೀಂದ್ರನಾಥ ಠಾಕೂರ್‌ರವರು (1867–1938) ವಿಡಂಬನಾತ್ಮಕ ಸಾಮಾಜಿಕ ವ್ಯಂಗ್ಯಚಿತ್ರಕಾರರಾಗಿ ಹೆಸರಾಗಿದ್ದರು. ಇವರು ಯಾವ ವ್ಯಂಗ್ಯಚಿತ್ರಕಾರರಿಗೂ ಕಡಿಮೆ ಇರಲಿಲ್ಲ. ಇವರ 'ಅದ್ಭುಟ್ ಲೋಕ್' 'ಬಿರುಪಟ್‌ರಾ' ಮತ್ತು 'ನಾಬಾ ಹುಲ್ಲೂರ್' ವ್ಯಂಗ್ಯಚಿತ್ರ ಪುಸ್ತಕ ರೂಪದಲ್ಲಿ ಪ್ರಕಟವಾಗಿವೆ.

ಇಂದಿನ ದಿನಗಳಲ್ಲಿ ಇಂಡಿಯಾದ ಪತ್ರಿಕೋದ್ಯಮದಲ್ಲಿ ವ್ಯಂಗ್ಯಚಿತ್ರ ಕಲೆ ಅದ್ಭುತವಾದ ಕೆಲಸಮಾಡಿದೆ. ದಿನಪತ್ರಿಕೆ ಹಾಗೂ ಮಾಸಪತ್ರಿಕೆಗಳಲ್ಲಿ ವ್ಯಂಗ್ಯಚಿತ್ರಗಳು ಪ್ರಕಟವಾಗಿ ಜನಮನವನ್ನು ತಣಿಸುತ್ತವೆ.

ಭಾರತದ ಇತರ ರಾಜ್ಯಗಳಲ್ಲಿ ನೂರಾರು ಜನ ವ್ಯಂಗ್ಯ ಚಿತ್ರಕಾರರು ನಾನಾ ಪತ್ರಿಕೆಗಳಲ್ಲಿ ದುಡಿಯುತ್ತಿದ್ದಾರೆ. ಆದರೆ ಬೆರಳೆಣಿಸುವಷ್ಟು ಮಂದಿ ಪ್ರಸಿದ್ಧರಾಗಿದ್ದಾರೆ. ಶಂಕರ್ ಅವರು 'ಶಂಕರ್ಸ್‌ವೀಕ್ಲಿ'ಯ ಮೂಲಕ ಅನುಪಮ ಸೇವೆ ಸಲ್ಲಿಸಿದ್ದಾರೆ. ಆರ್. ಕೆ. ಲಕ್ಷ್ಮಣ್, ಮಾರಿಯೋ, ಅಬು ಅಬ್ರಾಹ್ಯಾಂ ಹೆಸರಾದಂತೆ

ಕರ್ನಾಟಕದಲ್ಲಿ ರಾಮಮೂರ್ತಿ, ಹುಬ್ಲೀಕರ್, ಹರಿಣಿ, ಕೆ. ಆರ್. ಸ್ವಾಮಿ, ಎಸ್. ಕೆ. ನಾಡಿಗ್, ಹೆಚ್. ಬಿ. ಮಂಜುನಾಥ್, ವಿ. ಗೋಪಾಲ್, ಇನ್ನೂ ಅನೇಕಾನೇಕ ತರುಣ ವ್ಯಂಗ್ಯ ಚಿತ್ರಕಾರರು ಬೆಳಕಿಗೆ ಬಂದಿದ್ದಾರೆ. ಹಿಂದೆ ಕೊರವಂಜಿ, ವಿಕಟ ವಿನೋದಿನಿ, ವಿನೋದ ಮಾಸಿಕ ಪತ್ರಿಕೆಗಳ ಮೂಲಕ ಆರ್. ಕೆ. ಲಕ್ಷ್ಮಣ್, ಪಿ. ಆರ್. ತಿಪ್ಪೇಸ್ವಾಮಿ, ಎಸ್. ಎಸ್. ಕುಕ್ಕೆ, ಅರಗಂ ಕೃಷ್ಣಮೂರ್ತಿ, ಅನಂತಯ್ಯ, ಶ್ರೀನಿವಾಸಲು, ಮುಂತಾದವರ ವ್ಯಂಗ್ಯಚಿತ್ರಗಳು ಬೆಳಕು ಕಂಡಿವೆ. ಈಗ ಸುಧಾ, ಮಯೂರ, ತರಂಗ, ಪ್ರಜಾಮತ, ಸಂಗಾತಿ, ತುಷಾರ ಮುಂತಾದ ಪತ್ರಿಕೆಗಳಲ್ಲಿ ಅನೇಕ ತರುಣರ ವ್ಯಂಗ್ಯ ಚಿತ್ರಗಳನ್ನು ಗಮನಿಸಬಹುದಾಗಿದೆ. ಆದರೆ ಕೆಲವು ಚಿತ್ರಗಳಲ್ಲಿ ಚಿತ್ರಗಳಿಗಿಂತ ಕೆಳಗೆ ಕೊಡುವ ವಿವರಗಳೇ ಅತಿ ಎನಿಸುತ್ತವೆ.

ಏನೇ ಇರಲಿ, ವ್ಯಂಗ್ಯಚಿತ್ರಕಲೆ ಪತ್ರಿಕೋದ್ಯಮದ ಒಂದು ಆಕರ್ಷಕ ಅಂಗವಾಗಿ ಮುಂದುವರಿಯುತ್ತಾ ರಚನಾತ್ಮಕ ಮಾರ್ಗದೆಡೆ ಸಮಾಜವನ್ನು ತಿದ್ದಲು ಸಹಕಾರಿಯಾಗುತ್ತಿರುವುದು ಸಂತೋಷದ ಸಂಗತಿ.

ಶಿವಸ್ವಾಮಿ

ಕರ್ನಾಟಕದಲ್ಲಿ ಶೈವಪಂಥಗಳು

ಕರ್ನಾಟಕದ ಇತಿಹಾಸದಲ್ಲಿ ಶೈವ ಧರ್ಮವನ್ನು ಸೈಂಧವ ಸಂಸ್ಕೃತಿಯಲ್ಲಿ ಗುರುತಿಸಲಾಗಿದೆ. ಆದರೂ, ಅನಂತರ ಬಂದ ಹಾದಿಯಲ್ಲಿ ಋಗ್ವೇದದಲ್ಲಿ, ಶ್ವೇತಾಶ್ವತರ ಉಪನಿಷತ್ತಿನಲ್ಲಿ, ಬ್ರಾಹ್ಮಣಕಗಳಲ್ಲಿ, ಮಹಾಭಾರತದಲ್ಲಿ, ಪುರಾಣಗಳಲ್ಲಿ, ಆಗಮಗಳಲ್ಲಿ ಇದು ಬೆಳೆದು ಬಂದ ದಾರಿಯನ್ನು ಇತಿಹಾಸಕಾರರು ಗುರುತಿಸುತ್ತಾರೆ. ಶೈವ ಧರ್ಮವೆನ್ನುವುದು ಹೆಸರು. ಈ ಮಾತಿನ ಮೂಲಾರ್ಥ “ಶಿವನನ್ನು ಕುರಿತದ್ದು” “ಶಿವನಿಗೆ ಸಂಬಂಧಿಸಿದುದು (ಶಿವ + ,ಅಣ್—ಶಿವಸ್ಯೇದಂ) ಶಿವ ಪಾರಮ್ಯವನ್ನು ಒಪ್ಪಿಕೊಂಡು ‘ಶಿವನನ್ನು ಒಲಿಸಿಕೊಳ್ಳುವ ಹಂಬಲವಿದ್ದು, ಶಿವಗತಿಯೇ ಬದುಕಿನ ಲಕ್ಷ್ಯವೆಂದು ನಂಬಿಕೊಂಡವರು ಶೈವರು. ಆದರೆ ಎಲ್ಲ ಕಾಲಕ್ಕೂ ಇವರಿಗೆ ಶೈವರೆಂಬ ಹೆಸರೇ ಇದ್ದಿತೆನ್ನಲಾಗದು. ಋಗ್ವೇದದಲ್ಲಿ ಸುದಾಸರೊಂದಿಗೆ, ಭರತರೊಂದಿಗೆ ಹಗರಣ ಮಾಡಿದ ಶಿವಾಸರಿದ್ದರು ‘ವಿಷಾಣಿ’ಗಳಾದ ಇವರು ಶೈವರೇ. ಪತಂಜಲಿಯ ಕಾಲಕ್ಕೆ ಇವರು ಶಿವ ಭಾಗವತರೆನ್ನಿಸಿಕೊಂಡರು. ಸಿದ್ಧಾಂತ ಶಿಖಾಮಣಿಯು ‘ಶಿವಾಶ್ರಿತ’ರೆಂದೂ ಇವರನ್ನು ಕರೆದಿದೆ. ಕ್ರಿಸ್ತ ಪೂರ್ವ ಒಂದೆರಡು ಶತಮಾನಗಳಲ್ಲಿ ಶಿವರಕ್ಷಿತರಿದ್ದ ಉಲ್ಲೇಖ ತಕ್ಷಶಿಲೆ, ಖರೋಷ್ಠಿ—ಬ್ರಾಹ್ಮಿ ಶಾಸನಗಳಿಂದ ತಿಳಿದುಬರುತ್ತದೆ. ಕ್ರಿಸ್ತಾಬ್ದ ಮೊದಲಾಗುವಾಗ, ‘ಅತ್ಯಂತ ಮಹೇಶ್ವರ’ರಿದ್ದರು (ಅತ್ಯಂತ ಸ್ವಾಮಿ ಮಹಾಭೈರವ ಭಕ್ತರು). ವಾಕಾಟಕರ ಶಾಸನಗಳು ಇವರನ್ನು ಪ್ರಸ್ತಾಪಿಸುತ್ತವೆ. ಮುಂದೆ ಮೌಖರಿ ಅರಸರ ಕಾಲದಲ್ಲಿ ‘ಪರಮ ಮಹೇಶ್ವರ’ರಿದ್ದರು. ‘ಪಶುಪತಿ ಭಕ್ತ’ರಿದ್ದರು. ಗುಪ್ತರ ಕಾಲದಲ್ಲಿ ಧರ್ಮ ಹಲವಾರು ಕವಲುಗಳೊಡೆದವು. ನಾರದೀಯ ಪುರಾಣವು ಪಾಶುಪತ ಮಹಾವ್ರತಧರ, ಸಿದ್ಧಾಂತ ಮಾರ್ಗ, ಕಾಪಾಲಿಕರೆಂಬ ಶಾಖೆಗಳನ್ನು ಉಲ್ಲೇಖಿಸುತ್ತವೆ. ವಾಮನ ಪುರಾಣವು ಆದಿಶೈವ, ಪಾಶುಪತ, ಕಾಲವದನ, ಕಪಾಲಿ ಎಂಬ ನಾಲ್ಕು ಶೈವ ವಿಭಾಗಗಳನ್ನು ಪಟ್ಟಿ ಮಾಡಿದೆ. ಬಾದರಾಯಣ ಸೂತ್ರಗಳಿಗೆ ಶಂಕರಾಚಾರ್ಯರು ಸಿದ್ಧಪಡಿಸಿದ ಭಾಷ್ಯಕ್ಕೆ ವ್ಯಾಖ್ಯಾನವನ್ನು ಬರೆದ ವಾಚಸ್ಪತಿ ಮಿಶ್ರನು ಮಾಹೇಶ್ವರರಲ್ಲಿ ಶೈವ, ಪಾಶುಪತ,

ಕಾರುಣಿಕ—ಸಿದ್ಧಾಂತಿ, ಕಪಾಲಿಕ ಎನ್ನುವ ನಾಲ್ಕು ಪಂಗಡಗಳಿದ್ದುವೆಂದು ತಿಳಿಸಿದ್ದಾನೆ. ರಾಮಾನುಜಾಚಾರ್ಯರು ಶ್ರೀ ಭಾಷ್ಯದಲ್ಲಿ ಕಪಾಲಿ, ಕಾಲಾಮುಖ, ಪಾಶುಪತ, ಶೈವಗಳೆಂಬ ಪ್ರಭೇದವನ್ನು ಸೂಚಿಸಿದ್ದಾರೆ. ಶೈವ ಧರ್ಮದ ಇತಿಹಾಸದಲ್ಲಿ ಈ ಶಾಖೆಗಳನ್ನೆಲ್ಲ ಪರಿಶೀಲಿಸಬೇಕಾಗುತ್ತದೆ. ಪಾಶುಪತ ಧರ್ಮದ ದರ್ಶನ ಭಾಗವನ್ನು ಪರೀಕ್ಷೆ ಮಾಡಬೇಕಾಗುತ್ತದೆ. ಸಿದ್ಧಾಂತ ಮಾರ್ಗವು ಕಾಶ್ಮೀರದಲ್ಲಿ, ಕರ್ನಾಟಕದಲ್ಲಿ, ತಮಿಳುನಾಡಿನಲ್ಲಿ, ಆಂಧ್ರ ಪ್ರದೇಶದಲ್ಲಿ ಬೆಳೆದು ಬಂದ ಬಗೆಯನ್ನು ವಿಶ್ಲೇಷಣೆ ಮಾಡಬೇಕಾಗುತ್ತದೆ. ನಡುಯುಗದಲ್ಲಿ ನಡೆದ ಆಂದೋಳನದಿಂದ ಹಳೆಯ ಶೈವ ಧರ್ಮ ಹೊಸದಾಗಿ ಮುಪ್ಪುರಿಗೊಂಡುದನ್ನೂ ವಿವರಿಸಬೇಕಾಗುತ್ತದೆ. ಐದಾರು ಸಾವಿರ ವರ್ಷಗಳು ಹೀಗೆ ಉಳಿದು, ಬೆಳೆದು, ಹರಡಿಕೊಂಡು ಬಂದ ಧರ್ಮವನ್ನೂ ಸ್ಥೂಲವಾಗಿ ಶೈವವೆಂದು ಗುರುತಿಸಿ, ಅದರ ಧೋರಣೆಯನ್ನು ಅರಿತುಕೊಳ್ಳುವ ಪ್ರಯತ್ನಗಳು ನಡೆದಿವೆ. ಆದರೆ ಶೈವವೆಂದು ಸ್ಥೂಲವಾಗಿ ನಿರ್ದೇಶನಗೊಂಡಿರುವ ಧರ್ಮದ ಬುನಾದಿಯಾವುದು, ಅದರ ಮೊದಲ ಚೌಕಟ್ಟು ಏನಿದ್ದಿತು ಎನ್ನುವುದರ ಕಡೆ ಅಷ್ಟಾಗಿ ಗಮನ ಹರಿದಿಲ್ಲ.

ಪ್ರಾರಂಭದ ದೆಸೆಯಲ್ಲಿ ಶೈವಧರ್ಮವೂ ಇವುಗಳ ಪ್ರಭಾವಕ್ಕೆ ಒಳಗಾಗಿದ್ದಿತೆನ್ನಬಹುದು. ಶಿವನೂ ಸಹ ಮೂಲದಲ್ಲಿ ಆರ್ಯದೇವತೆಯಲ್ಲ; ದ್ರಾವಿಡ ದೇವತೆ ಎಂಬ ಅಭಿಪ್ರಾಯವೂ ಒಂದಿದೆ. ಸಿಂಧೂ ಸಂಸ್ಕೃತಿಯ ಕಾಲದಿಂದಲೂ ಉಪಾಸನೆಗೊಳ್ಳುತ್ತಿದ್ದ ಶಿವ, ಆರ್ಯರ ರುದ್ರನಾಗಿ ವೇದಗಳಲ್ಲಿ ಸ್ಥಾನವನ್ನು ಪಡೆದು ಕ್ರಮೇಣ ಹಿಂದೂ ಧರ್ಮದ ಪ್ರಧಾನದೈವಗಳಲ್ಲಿ ಒಬ್ಬನಾಗಿ ಪರಿಣಮಿಸಿದ; ಲಿಂಗರೂಪದಿಂದಲೂ ಉಪಾಸನೆಗೊಳ್ಳತೊಡಗಿದ. ಕರ್ನಾಟಕದಲ್ಲಿ ಬಹು ಪ್ರಾಚೀನ ಕಾಲದಿಂದಲೂ ಶಿವ ಮತ್ತು ಲಿಂಗಗಳ ಉಪಾಸನೆ ಇದ್ದಿತೆಂಬುದಕ್ಕೆ ಆಧಾರಗಳಿವೆ. ಕದಂಬರ ಕಾಲದಲ್ಲಿ ಪ್ರಾಮುಖ್ಯವಾಗಿದ್ದುದು ಶೈವ ಧರ್ಮ. ಶೈವ ದೇವಾಲಯಗಳಿಗೆ ದಾನ ದತ್ತಿಗಳನ್ನು ಕೊಟ್ಟ ಶಾಸನಗಳೇ ಇದನ್ನು ಸ್ಪಷ್ಟಪಡಿಸುತ್ತವೆ. ಸ್ಥಾನಕುಂದೂರಿನ ಪ್ರಣವೇಶ್ವರ ದೇವಾಲಯಕ್ಕೆ ಕದಂಬ ವಂಶದ ರಾಜರು ಕೊಟ್ಟ ದಾನವನ್ನೂ (ಅದರ ಬಳಿ ಕಟ್ಟಿಸಿದ ಕೆರೆಯನ್ನು ಉಲ್ಲೇಖಿಸುವ ತಾಳಗುಂದದ ಶಾಸನವನ್ನು) ಇಲ್ಲಿ ಸ್ಮರಿಸಿಕೊಳ್ಳಬಹುದು. ರುದ್ರ ತನ್ನ ಉಗ್ರ ರೂಪವನ್ನು ಕಳೆದುಕೊಂಡು ಶಿವ–ಶಂಭು–ಶಂಕರನಾಗಿ ಬೆಳೆಯತೊಡಗಿದ್ದ. ಕಾಪಾಲಿಕ ಮೊದಲಾದ ಉಗ್ರ ಪಂಥಗಳ ಪ್ರಭಾವ ಕಡಿಮೆಯಾಗುತ್ತಿತ್ತು. ಶಿವನಂತೆಯೇ ಕಾಳಿ, ದುರ್ಗಿ ಮೊದಲಾದ ದೇವತೆಗಳೂ, ಪರಿಷ್ಕೃತ ರೂಪವನ್ನು ಪಡೆದು ವೈದಿಕ ಧರ್ಮದೊಳಗೆ ಸೇರಿ ಆದಿಶಕ್ತಿ, ಗೌರಿ ಎಂಬುದಾಗಿ ಹೆಸರು ಪಡೆದವು.

ವೇದ ಪೂರ್ವದ ಸಿಂಧೂ ಸಂಸ್ಕೃತಿಯ ಕಾಲದಿಂದಲೂ ಶಿವನ ಉಪಾಸನೆ ಪ್ರಚಲಿತವಾಗಿದ್ದಿತೆಂಬುದಕ್ಕೆ ಆಧಾರಗಳು ಸಿಕ್ಕುತ್ತವೆ. ಆದರೆ ಅದನ್ನು ವ್ಯವಸ್ಥಿತವಾದ ರೀತಿಯಲ್ಲಿ ಪ್ರತಿಪಾದಿಸಿದವರು ಯಾರು ಮತ್ತು ಎಂದು ಎನ್ನುವುದನ್ನು

ನಿರ್ದಿಷ್ಟವಾಗಿ ಹೇಳುವಂತಿಲ್ಲ. ಮಹಾಭಾರತದ ಕಾಲದಲ್ಲಾಗಲೇ ಶಿವನ ಉಪಾಸನೆ ಪ್ರಧಾನವಾಗಿದ್ದುದಕ್ಕೆ ಆಧಾರಗಳಿವೆ. ಅಲ್ಲದೆ 'ಪಾಶುಪತ' ಎಂಬ ಹೆಸರಿನ ಶೈವ ಶಾಖೆಯೂ ಪ್ರಸಿದ್ಧವಾಗಿದ್ದುದು ಕಂಡು ಬರುತ್ತದೆ. ಮಾಧವಾಚಾರ್ಯ ತಮ್ಮ "ಸರ್ವ ದರ್ಶನ ಸಂಗ್ರಹ"ದಲ್ಲಿ ಪಾಶುಪತ ಶೈವ ಶಾಖೆಯೊಂದನ್ನು ವಿವರಿಸುತ್ತಾ 'ನಕುಲೀಸ' ಅಥವಾ 'ಲಕುಲೀಶ' ಎಂಬುವನಿಂದ ಈ ಸಿದ್ಧಾಂತ ಪ್ರತಿಪಾದಿತವಾಗಿರ ಬೇಕೆಂಬುದಕ್ಕೆ ಇನ್ನು ಅನೇಕ ಆಧಾರಗಳಿವೆ. ಸಾಕ್ಷಾತ್ ಶಿವಸ್ವರೂಪನೆಂಬುದನ್ನು ಗೌರವವನ್ನು ಪಡೆದಿದ್ದ ಈತನಿಗೆ—ಕುಷಿಕ, ಗಾರ್ಗ್ಯ, ಕೌರುಷ ಮತ್ತು ಮೈತ್ರೈಯ ಎಂಬ ನಾಲ್ವರು ಶಿಷ್ಯರಿದ್ದರು. ಇವರೂ ಶೈವಧರ್ಮವನ್ನು ಪ್ರತಿಪಾದಿಸಿದರೆಂದೂ ಹೇಳಬಹುದು. ಕ್ರಿ. ಪೂ. ಸು. 2ನೇ ಶತಮಾನದ ವೇಳೆಗಾಗಲೇ ಶೈವರಲ್ಲಿ ಪಾಶುಪತ, ಕಾಪಾಲಿಕ, ಕಾಳಾಮುಖ, ಶೈವ ಎಂಬ ನಾಲ್ಕು ವಿಭಾಗಗಳಾಗಿದ್ದುವೆಂದು ತಿಳಿದು ಬರುತ್ತದೆ. ಇವುಗಳಲ್ಲಿ ಪಾಶುಪತ, ಎಂಬುದು ಎಲ್ಲ ಶೈವ ಶಾಖೆಗಳನ್ನು ಒಳಗೊಳ್ಳಬಲ್ಲ ವ್ಯಾಪಕವಾದ ಅರ್ಥದಲ್ಲಿ ಬೆಳೆದು ಬಂದಂತೆ ತೋರುತ್ತದೆ. ಜೀವ ಗಳೆಲ್ಲಾ ಪಶುಗಳು, ಶಿವನೇ ಪಶುಪತಿ; ಎಂಬ ಸಮಾನತತ್ವ "ಪಾಶುಪತ" ಎಂಬ ಹೆಸರಿನಿಂದ ಎಲ್ಲಾ ಶೈವ ಶಾಖೆಗಳಿಗೂ ಒಂದು ರೀತಿಯಲ್ಲಿ ಅನ್ವಯಿಸಿದುದಲ್ಲದೆ ಅದೇ ಒಂದು ವಿಶಿಷ್ಟ ಮಾರ್ಗವಾಗಿ ಬೆಳೆದು ಬಂದಿದೆ.

ಕಾರ್ಯ, ಕಾರಣ, ಯೋಗ, ವಿಧಿ ಮತ್ತು ದುಃಖಾಂತ ಎಂಬ ಐದು ಅಂಶಗಳನ್ನು ಪಾಶುಪತ ಶೈವಮಾರ್ಗ ಒಳಗೊಂಡಿದೆ. ಕಾರ್ಯ ಎಂದರೆ ಸೃಷ್ಟಿ. ಇದರ ವಿಚಾರ ವಾಗಿ ಅತಿ ಹೆಚ್ಚಿನ ಜಿಜ್ಞಾಸೆಗೆ ಪಾಶುಪತ ಶೈವ ತೊಡಗುವುದಿಲ್ಲ. ಶಿವ ಜಗತ್ತಿಗೆ ನಿಮಿತ್ತ ಕಾರಣ : ಸರ್ವಶಕ್ತನಾದ ಆತನ ಕಾರ್ಯ—ಈ ಸೃಷ್ಟಿ ಎಂದು ಸೃಷ್ಟಿಯ ಸತ್ಯವನ್ನು ಒಪ್ಪಿಕೊಂಡು ಇದರ ಬಂಧನದಿಂದ ಜೀವ (ಅ) ಪಶು ಬಿಡುಗಡೆಯನ್ನು ಪಡೆಯುವುದೇ ಮುಕ್ತಿ ಎನ್ನುತ್ತವೆ.

ಯೋಗ ಮತ್ತು ವಿಧಿ ಅಂಶಗಳು ಮುಕ್ತಿಗೆ ಅದು ಹಾಕಿಕೊಟ್ಟ ಸಾಧನೆಯ ಮಾರ್ಗವನ್ನು ಒಳಗೊಂಡಿವೆ. ಪತಿಯೊಡನೆ ಪಶುವಿನ ಸತತ ಸಂಬಂಧವೇ 'ಯೋಗ' ಎಂದು ಪಾಶುಪತ ಹೇಳುತ್ತದೆ. ದೇಹದಂಡನೆಯಿಂದ ಎಲ್ಲ ಕರ್ಮಗಳನ್ನು ಕಳಚಿ ಹಾಕಿ ಧ್ಯಾನ ಮಗ್ನರಾಗುವ ವಿಧಿಯನ್ನು ಅದು ನಿರೂಪಿಸುತ್ತದೆ. ಈ ವಿಧಿಯಿಂದ ಯೋಗ ಮಾರ್ಗದಲ್ಲಿ ಮುಂದುವರಿದಂತೆಲ್ಲಾ ಶಿವನ ಅನುಗ್ರಹದಿಂದ ಅದ್ಭುತ ಅಲೌಕಿಕ ಶಕ್ತಿಗಳು ಆತನಿಗೆ ಲಭಿಸುತ್ತದೆ. ಶಿವನನ್ನು ನಿಷ್ಕಲ ರೂಪದಿಂದ ಮಾತ್ರ ಧ್ಯಾನಿಸಬೇಕೆಂಬುದನ್ನು ಪಾಶುಪತ ಶೈವ ಒತ್ತಿ ಹೇಳುತ್ತದೆ. ಶಿವ 'ವಾಗ್ವಿಶುದ್ಧ' ನಾದವನಾದುದರಿಂದ ಅವನನ್ನು ನಿರಾಕಾರ ಸ್ವರೂಪದಿಂದಲೇ ಧ್ಯಾನಿಸಬೇಕೆಂಬುದು ಇವರ ಅಭಿಪ್ರಾಯ. ಪ್ರಪಂಚದ ಪ್ರಲೋಭನೆಗೆ ಒಳಗಾಗದೆ ತೀವ್ರ ವೈರಾಗ್ಯವನ್ನು ಪಡೆಯುವುದಕ್ಕೋಸ್ಕರ ಈಶ್ವರ ರೂಪವನ್ನು ಅನುಕರಿಸಿ ಕಠಿಣವಾದ ಸಾಧನೆಯನ್ನು

ಕೈಗೊಳ್ಳಬೇಕೆನ್ನುತ್ತದೆ. ಪಾಶುಪತ ಯೋಗ. ಈ ಮಾರ್ಗದಲ್ಲಿ ನಡೆದರೆ ಜೀವನ ದುಃಖ ಕೊನೆಗೊಳ್ಳುತ್ತದೆ. ಇದೇ ದುಃಖಾಂತ.

ಈಶ್ವರ ರೂಪವನ್ನು ಅನುಕರಿಸುವುದು ಎಂಬ ಮಾತು ಶೈವ ಧರ್ಮದಲ್ಲಿ ಕೆಲವು ಉಗ್ರ ಪಂಥಗಳಿಗೂ, ವಾಮಮಾರ್ಗಗಳಿಗೂ ಕಾರಣವಾಗಿ ಪರಿಣಮಿಸಿತು. ಅವಿತತ್ಕರಣ (ಮಾಡಬಾರದೆ ಇರುವುದನ್ನು ಮಾಡುವುದು) ಅವಿತದ್ಭಾಷಣ (ಆಡಬಾರದೆ ಇರುವುದನ್ನು ಆಡುವುದು) ಎನ್ನುವ ಅರ್ಥದಲ್ಲಿ ಅದು ಕೊನೆಗೊಂಡಿತು. ಜೀವ ತನ್ನ ಗುರಿಯನ್ನು ಸಾಧಿಸಬೇಕಾದರೆ ಈ ಕೆಳಗೆ ಕಾಣಿಸಿರುವ ನಿಯಮಗಳನ್ನು ಅನುಸರಿಸಬೇಕಾಗುತ್ತದೆ. ಕಾಪಾಲಿಕರ ಮಾರ್ಗದಲ್ಲಿ

1. ಯಾವಾಗಲೂ ನರಕಪಾಲವನ್ನು ಧರಿಸಿ ಅದರಲ್ಲಿಯೇ ಆಹಾರವನ್ನು ತಿನ್ನುವುದು.
2. ಸ್ಮಶಾನದಲ್ಲಿ ವಾಸಿಸುವುದು, ಸದಾಕಾಲ ಮೈಗೆಲ್ಲಾ ಬೂದಿಯನ್ನು ಬಳಿದುಕೊಳ್ಳುವುದು.
3. ಬೂದಿಯನ್ನು ತಿನ್ನುವುದು.
4. ಕೈಯಲ್ಲಿ ಲಾಕುಳ (ಅ) ದಂಡವನ್ನು ಹಿಡಿದಿರುವುದು.
5. ಮದ್ಯ ತುಂಬಿದ ಮಡಿಕೆಯನ್ನು ಬಳಿಯಲ್ಲಿಟ್ಟುಕೊಂಡಿರುವುದು ಅದರ ಸೇವನೆಯಿಂದ ಜಗತ್ತನ್ನು ಮರೆಯುವುದು.
6. ಆ ಮಧ್ಯದ ಮಡಿಕೆಯಲ್ಲಿ ಶಿವಪ್ರತಿಷ್ಠಾಪಿತವಾಗಿರುವಂತೆ ಭಾವಿಸಿ ಪೂಜಿಸುವುದು ;

ಈ ಮೊದಲಾದ ವಿಧಿಗಳನ್ನು ನೋಡುತ್ತಿರುವಂತೆಯೇ ಭಕ್ತಿಯ ಹೆಸರಿನಲ್ಲಿ ಹಿಡಿಯಬಹುದಾದ ವಿಕಾರ ಮಾರ್ಗವನ್ನು ಕಂಡುಕೊಳ್ಳುತ್ತೇವೆ. ಶಿವನ ಉಗ್ರ ರೂಪದ ವರ್ಣನೆಯ ಹಿಂದಿರುವ ರಹಸ್ಯವನ್ನು ತಿಳಿಯದೆ ಆ ಉಗ್ರರೂಪವನ್ನೇ ಅನುಕರಿಸಬೇಕೆಂದು ಪ್ರಯತ್ನಪಟ್ಟುದೇ ಇಂಥ ಅಭಾಸಕ್ಕೆ ಕಾರಣ.

ಆದರೆ ಶೈವ ಮಾರ್ಗಗಳೆಲ್ಲವೂ ಇಂತಹ ವಾಮಪಂಥವನ್ನು ಅವಲಂಬಿಸಿಲ್ಲ. ಕಾಳಾಮುಖ ಪಾಶುಪತಗಳು ಮಾನವೀಯತೆಯ ವಿಕಾಸದ ದೃಷ್ಟಿಯಿಂದ ಬಹಳ ಮಹತ್ವ ಪೂರ್ಣವಾದ ರೀತಿಯಲ್ಲಿ ರೂಪುಗೊಂಡವು. ಶಿವಾಗಮಗಳು ಮತ್ತು ಶಿವಪುರಾಣಗಳು ಈ ವ್ಯಾಪಕವಾದ ತತ್ವವನ್ನು ಅಳವಡಿಸಿಕೊಂಡು ಶೈವಧರ್ಮವನ್ನು ಮಂಗಳಕರವಾದ ಮಾರ್ಗದಲ್ಲಿ ನಡೆಸಿದುವು. ಆ ತತ್ತ್ವದ ವಿವರಗಳಿಗೆ ಹೋಗದೆ ಒಂದು ಮಾತಿನಲ್ಲಿ ಸಂಗ್ರಹಿಸಬಹುದಾದರೆ-- ಹೀಗೆ ನಿರೂಪಿಸಬಹುದು ; ಅದರ ತಿರುಳನ್ನು ಶಿವ ಅನಾದಿ, ಅನಂತ, ಸರ್ವಸ್ವ, ಸರ್ವಶಕ್ತ, ಆತನೇ ಜಗತ್ತಿನ ನಿಮಿತ್ತ ಕಾರಣ ತನ್ನಲ್ಲಿಯೇ ಅಂತರ್ಗತವಾಗಿರುವ ಶಕ್ತಿಯ ಸಹಾಯದಿಂದ ಜಗತ್ತನ್ನು ಸೃಷ್ಟಿಸುತ್ತಾನೆ. ಶಿವನಲ್ಲಿರುವ ಈ ಶಕ್ತಿಯು ಚಿದ್ರೂಪನಾದ ಶಿವನಿಗೆ ಅಚಿದ್ರೂಪ

ವಾದ ಸೃಷ್ಟಿಗೂ ಮಧ್ಯವರ್ತಿಯಾದ ತತ್ತ್ವ ಎಲ್ಲ ಜೀವರುಗಳ ಬಂಧನಕ್ಕೂ ಮತ್ತು ಬಿಡುಗಡೆಗೂ ಈ ಶಕ್ತಿಯೇ ಕಾರಣ. ಇದನ್ನೆ 'ಮಾಹೇಶ್ವರಿ ಶಕ್ತಿ' ಎಂದು ಕರೆಯಲಾಗಿದೆ. ಬಂಧನಕ್ಕೆ ಒಳಗಾದ ಜೀವಿಯು ಬಿಡುಗಡೆಗೆ ನೆರವಾಗುತ್ತದೆ. ಈ ಶಕ್ತಿ ಮನುಷ್ಯ ಅನೇಕ ವೇಳೆ ದುಃಖದಿಂದ ನರಳುವಂತೆ ತೋರುವುದು—ಅವನ ಉದ್ಧಾರಕಾಗಿ ಮಾಹೇಶ್ವರಿ ಶಕ್ತಿ ಕೈಗೊಂಡ ಉಪಾಯ. ಎಲ್ಲ ಜೀವಿಗಳ ಉದ್ಧಾರಕ್ಕೂ ಕಾರಣ ಈ ಶಕ್ತಿಯೇ. ಶಿವ ಇದರ ಸಹಾಯದಿಂದ ಜೀವಿಗಳ ಉದ್ಧಾರಕ್ಕೆ ಕಾರಣವಾದಂತಹ ಕರ್ಮಗಳನ್ನು ಮಾಡಿಸುತ್ತಾನೆ. ಕೊನೆಯಲ್ಲಿ ಜೀವಿಗಳನ್ನು ಮಲತ್ರಯಗಳಿಂದ ಬಿಡುಗಡೆಗೊಳಿಸುತ್ತಾನೆ.

ಆಣವಮಲ, ಮಾಯಾಮಲ, ಮತ್ತು ಕಾರ್ಮಿಕಮಲ—ಇವೇ ಮಲತ್ರಯಗಳು. ಇವು ಈ ಆತ್ಮವನ್ನು ಬಂಧಿಸಿವೆ. ಈ ಮುಪ್ಪುರಿ ಪಾಶ ಜೀವವನ್ನು ಬಂಧಿಸಿ ಆತ್ಮದ ಆನಂದವನ್ನು ನಾಶಗೊಳಿಸಿದೆ. ಆತನನ್ನು ಬಂಧನಕ್ಕೆ ಗುರಿಪಡಿಸಿ ಬಂಧಿತನನ್ನಾಗಿ ಮಾಡಿದೆ—ಈ ಪಾಶ, ಶಿವ ತನ್ನ ಅನುಗ್ರಹ ಶಕ್ತಿಯಿಂದ ಈ ಪಾಶವನ್ನು ಕತ್ತರಿಸಿ ಉದ್ಧಾರ ಮಾಡುವ ಪಶುಪತಿ. ಜೀವಿ ಈ ಪಾಶದಿಂದ ಬಿಡುಗಡೆಯನ್ನು ಪಡೆಯುವಾಗ ಶಿವ-ಜೀವದ ಸಾಮರಸ್ಯ ಸಿದ್ಧಿಸುತ್ತದೆ. ಇದೇ ಮೋಕ್ಷ. ಇದು ಶಿವಾಗಮಗಳಲ್ಲಿ ಪ್ರತಿಪಾದಿತವಾದ ಶಿವತತ್ತ್ವದ ಸ್ಥೂಲರೂಪ.

ಇದರ ಆಧಾರದ ಮೇಲೆ ಅನೇಕ ಶೈವ ಶಾಖೆಗಳು ರೂಪುಗೊಂಡವು. ಅವುಗಳಲ್ಲಿ ಕಾಶ್ಮೀರಶೈವ, ತಮಿಳುಶೈವ ಸಿದ್ಧಾಂತ ಮತ್ತು ವೀರಶೈವ—ಇವು ಬಹಳ ಮುಖ್ಯವಾದವುಗಳು. ಕಾಶ್ಮೀರಶೈವ ಸಿದ್ಧಾಂತದಲ್ಲಿ ಎರಡು ಶಾಖೆಗಳಿವೆ:—ಸ್ಪಂದ ಶಾಸ್ತ್ರ ಮತ್ತು ಪ್ರತ್ಯಭಿಜ್ಞಾ ಶಾಸ್ತ್ರ ಎಂಬುದಾಗಿ ಅವುಗಳನ್ನು ಕರೆದಿದ್ದಾರೆ. ವಸುಗುಪ್ತ ಮತ್ತು ಅವನ ಶಿಷ್ಯ ಕಲ್ಲಟ ಇವರು ಸ್ಪಂದಶಾಸ್ತ್ರ ಪ್ರವರ್ತಕರು. ಸೋಮಾನಂದ ಎಂಬುವನು ಪ್ರತ್ಯಭಿಜ್ಞಾ ಸಿದ್ಧಾಂತವನ್ನು ಪ್ರತಿಪಾದಿಸಿದವನು. ವಾಸುಗುಪ್ತನು ಶಿವಸೋತ್ರ ಮತ್ತು ಸ್ಪಂದಕಾರಿಕೆಗಳನ್ನು ಬರೆದಿದ್ದಾನೆ. ಇವುಗಳಲ್ಲಿ ಪ್ರತಿಪಾದಿತವಾದ ತತ್ತ್ವವೇ ಸ್ಪಂದಶಾಸ್ತ್ರಕ್ಕೆ ಆಧಾರ. ಶಿವ ತನ್ನ ಅದ್ಭುತ ಶಕ್ತಿಯಿಂದ ತಾನೇ ಸೃಷ್ಟಿಗೂ ಕಾರಣನಾಗುತ್ತಾನೆ. ಆದುದರಿಂದ ಆತ್ಮ ಶಿವಸ್ವರೂಪವಾದುದೇ. ಆತ್ಮ ಪಡೆಯುವ ಈ ದೃಷ್ಟಿಯನ್ನು 'ಭೈರವ' ಎಂದು ಕರೆಯಲಾಗಿದೆ. ಭೈರವ ದೃಷ್ಟಿಯೇ ಆತ್ಮನು ಪಡೆಯುವ ಮುಕ್ತಸ್ಥಿತಿ. ತಾನೇ ಶಿವನೆಂಬ ಸತತ ಗ್ರಹಿಕೆಯಿಂದ ಶಿವತ್ವ ಸಿದ್ಧಿಸುತ್ತದೆಂದು ಇದು ಮುಕ್ತಿಯ ಸ್ವರೂಪವನ್ನು ವಿವರಿಸುವುದರಿಂದ ಇದನ್ನು 'ಪ್ರತ್ಯಭಿಜ್ಞಾ' ಎಂದು ಕರೆಯಲಾಗಿದೆ. ಇದು ಶಿವಶಕ್ತಿ ಅಣು (ಅ) ಪತಿಪಾಶ ಮತ್ತು ಪಶು ಎಂದು ಮೂರು ಮೂಲ ತತ್ತ್ವಗಳು ಒಳಗೊಂಡಿರುವುದರಿಂದ 'ತ್ರಿಕ್' ಎಂದೂ ಇದನ್ನು ಕರೆಯುವುದುಂಟು.

ದಕ್ಷಿಣ ಭಾರತದಲ್ಲಿಯೂ ಶೈವಧರ್ಮ ಬಹಳ ಪ್ರಾಚೀನ ಕಾಲದಿಂದಲೂ ಪ್ರಚಲಿತವಾಗಿತ್ತು ಮತ್ತು ಕಾಶ್ಮೀರ ಶೈವವೂ ದಕ್ಷಿಣದ ಕಡೆಗೆ ಬಂದು ತನ್ನ

ಪ್ರಭಾವವನ್ನು ಬೀರಿತು. ಸುಮಾರು 5 ರಿಂದ 9ನೆಯ ಶತಮಾನದವರೆಗಿನ 'ಕಾಲವನ್ನು ದಕ್ಷಿಣ ಭಾರತದಲ್ಲಿ ಶೈವಧರ್ಮದ ಬೆಳವಣಿಗೆಯ ಕಾಲ ಎನ್ನಬಹುದು. ಈ ಅವಧಿಯಲ್ಲಿ ಅನೇಕ ಶೈವಗ್ರಂಥಗಳು ರಚಿತವಾದವು. ತಮಿಳಿನಲ್ಲಿ ನಾಯನಾರರು ಶಿವನ ಉಗ್ರರೂಪವನ್ನು ತೊಡೆದು ಹಾಕಿ ಪ್ರೇಮಮಯನಾದ, ಶಾಂತರೂಪನಾದ, ಕರುಣಾಶಾಲಿಯಾದ ಶಿವನ ನಿಜಸ್ವರೂಪವನ್ನು ಬೆಳಗಬಲ್ಲ ಭಕ್ತಿಗೀತೆಗಳನ್ನು ಹಾಡಿದರು. ಶಿವಭಕ್ತರ ಈ ಕೀರ್ತನೆಗಳ ಸಂಗ್ರಹವು "ತೇವಾರಂ" ಎಂಬ ಹೆಸರಿನಿಂದ ಪ್ರಸಿದ್ಧವಾಯಿತು. ಈ ಗೀತೆಗಳಲ್ಲಿ ಹೊರಹೊಮ್ಮಿದ ಶೈವದರ್ಶನವನ್ನು ತರ್ಕಬದ್ಧವಾದ ಸಿದ್ಧಾಂತದ ರೂಪದಲ್ಲಿ ಪ್ರತಿಪಾದಿಸುವ ಸೂತ್ರಗಳು ರಚಿತವಾದವು. ಮೆಯ್‌ಯ್‌ಕಂಡದೇವನ 'ಶಿವಜ್ಞಾನ ಬೋಧ' ಅರಳ್‌ನಂದಿಯ 'ಶಿವಜ್ಞಾನಸಿದ್ಧಿ' 'ಉಮಾಪತಿಯ' 'ಶಿವಪ್ರಕಾಶ' ಮೊದಲಾದ 14 ತಮಿಳು ಗ್ರಂಥಗಳು ಶೈವ ಸಿದ್ಧಾಂತದ ರೂಪವನ್ನು ಪೂರ್ಣಗೊಳಿಸಿದವು. 63 ಮಂದಿ ಪುರಾತನರು ಪ್ರಸಿದ್ಧರಾಗಿ ಶೈವ ಧರ್ಮದಲ್ಲಿ ಮತ್ತು ಮುಂದೆ ವೀರಶೈವದಲ್ಲಿಯೂ ಅತಿ ಪ್ರಮುಖವಾದ ಸ್ಥಾನವನ್ನು ಪಡೆದರು.

ಶೈವಸಿದ್ಧಾಂತದ ಪ್ರಕಾರ ಸೃಷ್ಟಿಕರ್ತ, ಸೃಷ್ಟಿ ಮತ್ತು ಜೀವರು—ಈ ಮೂರು ಅನಾದಿಯಾದವು. ಶಿವ ಜಗತ್ತಿನ ಮೂಲ ಕಾರಣ. ಅವನ ಶಕ್ತಿ ನಿಮಿತ್ತ ಕಾರಣ, ಮಾಯೆ ಉಪಾದಾನ ಕಾರಣ—ಎಂಬುದು ಶೈವ ಸಿದ್ಧಾಂತದ ಅಭಿಪ್ರಾಯ. 'ವೀರಶೈವ ಎನ್ನುವ ಪಂಥ ಪ್ರಾಚೀನವಾದುದೆಂಬುದನ್ನು ಒಪ್ಪಿಕೊಳ್ಳಲೇ ಬೇಕು. ಅಲ್ಲದೆ 14ನೆಯ ಶತಮಾನದ ಮಾಧವರು ತಮ್ಮ ಸರ್ವದರ್ಶನ ಸಂಗ್ರಹದಲ್ಲಿ ವೀರಶೈವ ಎಂಬ ಹೆಸರನ್ನು ಹೇಳಿಲ್ಲ. ವೀರಶೈವರಿಗೂ ಕಾಳಾಮುಖರಿಗೂ ಭೇದವಿಲ್ಲವೆಂದು ಅವರು ಕಲ್ಪಿಸಿದಂತೆ ತೋರುತ್ತದೆ. ಹಿಂದಿನಿಂದಲೂ ಪ್ರಸಿದ್ಧವಾಗಿ ಬಂದ ಕಾಳಮುಖದಲ್ಲಿಯೇ ವೀರಶೈವವನ್ನು ಸಮಾವೇಶಗೊಳಿಸುವ ಪದ್ಧತಿ ಮೊದಲಿನಿಂದಲೂ ಇತ್ತೆಂಬುದಕ್ಕೆ ಅದನ್ನು ಸಮರ್ಥನೆಯಾಗಿ ತೆಗೆದುಕೊಳ್ಳಬಹುದು.

ಇಂಥ ಕಾಳಾಮುಖ ಮಠಗಳು ಕರ್ನಾಟಕದ ಅನೇಕ ಕಡೆಗಳಲ್ಲಿದ್ದವು. ಇದು ಬಹಳ ಪ್ರಭಾವಶಾಲಿಯಾದ ಶೈವ ಶಾಖೆಯಾಗಿ ಪರಿಣಮಿಸಿತ್ತು. ಕಾಳಾಮುಖರಿಗೂ ಕಾಪಾಲಿಕರಿಗೂ ಏನು ವ್ಯತ್ಯಾಸವಿಲ್ಲವೆಂದೂ ಒಂದೇ ಶೈವ ಪಂಥವನ್ನು ಬೇರೆ ಬೇರೆ ಹೆಸರುಗಳಿಂದ ಕರೆಯಲಾಗಿದೆಯೆಂದೂ ಡಾ|| ಆರ್. ಜಿ. ಭಂಡಾರಕರ್ ಅವರು ಅಭಿಪ್ರಾಯ ಪಡುತ್ತಾರೆ. ಆದರೆ ಡಾ|| ಎಸ್. ಸಿ. ನಂದಿಮಠ ಅವರು ಇವೆರಡೂ ಸಂಪೂರ್ಣವಾಗಿ ಭಿನ್ನವಾದ ಪಂಥಗಳೆಂಬುದನ್ನು ಸ್ಪಷ್ಟಪಡಿಸಿದ್ದಾರೆ. ಕಾಪಾಲಿಕರು ಉಗ್ರಪಂಥಿಗಳು, ಹಿಂದೆ ನೋಡಿದಂತೆ ವಾಮಮಾರ್ಗಾನುಯಾಯಿಗಳು. ಆದರೆ ಕಾಳಾಮುಖ ಸಾತ್ವಿಕ ಶೈವ ಮಾರ್ಗ. ಕಾಪಾಲಿಕರ ವರ್ಣನೆ, ಪ್ರಬೋಧ ಚಂದ್ರೋದಯ, ಮಾಲತಿ ಮಾಧವ ಇತ್ಯಾದಿ ಗ್ರಂಥಗಳಲ್ಲಿ ದೊರೆಯುತ್ತದೆ. ಅದಕ್ಕೂ ಮತ್ತು ಕರ್ನಾಟಕ ಶಾಸನಗಳಲ್ಲಿ ದೊರೆಯುವ ಕಾಳಾಮುಖ ಗುರುಗಳ

ವರ್ಣನೆಗೂ ಸಂಬಂಧವೇ ಇಲ್ಲ. ಕಾಳಾಮುಖ ಗುರುಗಳು ರಾಜಧಿರಾಜರುಗಳಿಂದ ಕೂಡ ಭಕ್ತಿ ಗೌರವಗಳನ್ನು ಪಡೆಯುತ್ತಿದ್ದವರು. ಇವರಿಗೆ ದಾನವನ್ನು ಕೊಡುವಾಗ—“ಕಾಲಂ ಕರ್ಚಿ” ಧಾರಾಪೂರ್ವಕವಾಗಿ ಕೊಡುತ್ತಿದ್ದರೆಂಬ ಮಾತು ಅನೇಕ ಶಾಸನಗಳಲ್ಲಿ ಬರುತ್ತದೆ. ಉದಾ: 9, 10, 11ನೇ ಶತಮಾನದಲ್ಲಿನ ರಾಜರುಗಳು ಶಾಸನಗಳಲ್ಲಿ ಕಂಡು ಬರುತ್ತದೆ. ವೀರಶೈವಕ್ಕೂ ಕಾಳಾಮುಖಕ್ಕೂ ಭೇದಗಳಿದ್ದರೂ ಕನ್ನಡನಾಡಿನ ಮಟ್ಟಿಗೆ ಹೇಳಬಹುದಾದರೆ ಶ್ರೀ ಬಸವಣ್ಣನವರ ಕಾಲದ ವೀರಶೈವವು, ಕಾಳಮುಖ ಪಂಥವನ್ನು ತನ್ನಲ್ಲಿ ಅಳವಡಿಸಿಕೊಂಡಂತೆ ತೋರುತ್ತದೆ. ಅನೇಕ ಕಾಳಾಮುಖ ಮಠಗಳು ವೀರಶೈವ ಮಠಗಳಾಗಿ ಪರಿವರ್ತನೆಗೊಂಡವು. ಉದಾ: ಕೋಡಿಮು ಮಠ, ಹೂಲಿಯ ಪಂಚವಣ್ಣಿಗೆಯ ಮಠವೂ ಮೊದಲು ಕಾಳಾಮುಖವಾಗಿದ್ದು ತರುವಾಯ ವೀರಶೈವ ಮಠವಾಗಿ ಪರಿವರ್ತಿತವಾಯಿತು ಎಂಬ ವಿಚಾರವನ್ನು ಅನೇಕ ಮಂದಿ ವಿದ್ವಾಂಸರು ಒಪ್ಪಿದ್ದಾರೆ. ಬಸವಣ್ಣನವರ ಕ್ರಾಂತಿಯಿಂದ ವೀರಶೈವ ಪಂಥ ಎಲ್ಲ ಶೈವ ಪಂಥಗಳನ್ನು ಒಳಗೊಂಡು ಪೂರ್ಣಗೊಂಡಿತು.

ಹಲವು ಸಿದ್ಧ ಸಂಪ್ರದಾಯಗಳಲ್ಲಿ ಪ್ರಮುಖವಾಗಿ ಶೈವ ಸಿದ್ಧರುಗಳಲ್ಲಿ ನಾಥ ಸಿದ್ಧರು, ರಸಸಿದ್ಧರು, ಮಾಹೇಶ್ವರ ಸಿದ್ಧರು, ಕಾಪಾಲಿಸಿದ್ಧರು ಕಾಣಬರುತ್ತಾರೆ. ಇವು ಅಲ್ಲದೆ ಕನ್ನಡ ನಾಡಿನಲ್ಲೂ ಹಲವು ಸಿದ್ಧಪರಂಪರೆಗಳಿದ್ದಂತೆ ತೋರುತ್ತದೆ. ಇಲ್ಲಿ ಶೈವಸಿದ್ಧ ಪರಂಪರೆಗಳು ಮುಖ್ಯವಾದವು. ವೀರಶೈವ ಸಾಹಿತ್ಯದಲ್ಲಿ ಹಲವಾರು ಸಿದ್ಧರ ಪ್ರಸಂಗಗಳು ಉಲ್ಲೇಖಗಳು ದೊರೆಯುತ್ತವೆ. ಬಸವಣ್ಣನವರ ವಚನದಲ್ಲಿ “ಒಲೆಯಡಿಯನುರುಹಿದಡೆ ಹೊಗೆ ಗೋಳಕನಾಥ ಕೊರಳಸುತ್ತಿತ್ತು, ಮಹೇಶಳ ಜಡೆಸೀಯಿತ್ತು, ಮಾರೀಚನ ಸಿರ ಬೆಂದಿತ್ತು” (ಬಸವ 930) ಎಂದು ಹೇಳಿ ಗೋರುಕನಾಥನ ಉಲ್ಲೇಖವಿದೆ. ಪ್ರಭುದೇವನ ವಚನ ಒಂದರಲ್ಲಿ ನವನಾಥರ ಉಲ್ಲೇಖ ಈ ರೀತಿ ಇದೆ. “ಕೊಂಕಣ ದ್ವೀಪದಲ್ಲಿ ಒಂದು ಕಪಿ ಹುಟ್ಟಿತ್ತು, ತಪವ ಮಾಡಿ ಸಪ್ತಋಷಿಯ ನುಂಗಿತ್ತು. ನವನಾಥ ಸಿದ್ಧರ ತೊತ್ತಳದುಳಿಯಿತ್ತು” (ಅ. ವ. ಚಂ. 371). ಹರಿಹರ ರಾಘವಾಂಕ ಮೊದಲಾದವರ ಕಾವ್ಯಗಳಲ್ಲಿ ಹಲವು ಸಿದ್ಧರ ಪ್ರಸಂಗಗಳು ಬಂದಿವೆ. ರೇವಣ್ಣಸಿದ್ಧ, ಮರುಳಸಿದ್ಧ, ಸಿದ್ಧರಾಮ ಮೊದಲಾದವರು ಶೈವಸಿದ್ಧ ಪರಂಪರೆಗೆ ಸೇರಿದವರು. ಹರಿಹರ ತನ್ನ ರೇವಣಸಿದ್ಧೇಶ್ವರ ರಗಳೆ'ಯಲ್ಲಿ ರೇವಣ್ಣಸಿದ್ಧನನ್ನು ಮಹಾಸಿದ್ಧ, ಸಿದ್ಧರ ದೇವ, ಸಿದ್ಧಕುಲ ಚಕ್ರವರ್ತಿ ಮೊದಲಾದ ವಿಶೇಷಣಗಳಿಂದ ಸ್ತುತಿಸಿದ್ದಾನೆ. “ಕಂಥೆಯ ಕಮನೀಯ ರೂಪಂ, ವಜ್ರ ಕುಂಡಲದ ವಜ್ರಧರಂ, ಲಾಕುಳದ ಲೋಕೇಶ ಬಂಧು, ಮೆಟ್ಟಿರ್ದ ಪಾವುಗೆಯ ಕಟ್ಟಿಧಿಕಂ, ಕೋವಣದಬಾವುಕಂ” “ಮೊದಲಾದ ವರ್ಣನೆಗಳಿಂದ ಸಿದ್ಧರ ವೇಷಭೂಷಗಳ ಪರಿಚಯವೂ ಆಗುತ್ತದೆ. “ಸಿದ್ಧರಾಮ ಚರಿತೆ'ಯನ್ನು ರಾಘವಾಂಕನು ಪರವಾದಿಗಳನ್ನು ಕುರಿತು ಹೀಗೆಂದಿದ್ದಾನೆ. ಸಿದ್ಧರಾಮನಿಗೆ ಸರಿಯೆನ್ನುವ ಪರವಾದಿಗಳಿಗೆ ಸಿರದೊಳು ವಾಮ ಪಾದುಕೆಯನ್ನು ಇಳುಹುವೆನೆಂದು ನುಡಿದಿದ್ದಾನೆ. ಈ ಪರವಾದಿ

ಗಳೆಂದರೆ ನಾರು, ಬೇರು, ಅಂಜನ, ಘಟಿಕೆ, ಮೂಲಿಕೆ, ರಸಸಿದ್ಧಿ ವಶ್ಯ, ಕಾಲವಂಚನಾಭ್ಯಾಸ, ಯಂತ್ರ, ತಂತ್ರ, ಪರಕಾಯ ಪ್ರವೇಶವುಂ ಬಯಸುವ ವಿಕಾರಿ ಸಿದ್ಧರು, ವ್ಯಾಳಿ, ಕೋರಂಟ, ನಾಗಾರ್ಜುನ, ರತ್ನಘೋಷ ಇವರಿಗೆ ಆದ ಗತಿಯನ್ನು ಬಣ್ಣಿಸುತ್ತದೆ. ರಾಘವಾಂಕನ ಕಾವ್ಯದಲ್ಲಿ ಸಿದ್ಧರಾಮನನ್ನು ಸಿದ್ಧಕುಲತಿಲಕ ಸಿದ್ಧೇಶ್ವರ, ಸಿದ್ಧಕುಲಕಮಲರವಿ, ಸಿದ್ಧವರೇಣ್ಯ, ಸಿದ್ಧರದೇವ, ಸಿದ್ಧಾರಾದಿತ್ಯ, ಸಿದ್ಧನಿಧಾನ ಮೊದಲಾದ ಶಬ್ದಗಳಿಂದ ಸಂಬೋಧಿಸಿದ್ದಾನೆ. ಮೇಲೆ ತಿಳಿಸಿದ ವಿಕಾರೀ ಸಿದ್ಧರಲ್ಲಿ ಕೆಲವರು ರಸಸಿದ್ಧರು, ಚೌರಸಿ (ಸಿದ್ಧರ ಪಟ್ಟಿಯಲ್ಲಿ ಬರುತ್ತಾರೆ. ಉದಾ : ರಸಸಿದ್ಧ ನಾಗಾರ್ಜುನ ಅಷ್ಟೆ ಅಲ್ಲ, ಗೋರಖನಾಥ, ಕನ್ನಡ ನಾಡಿನವನು, ಚೌರಾಸಿ ಸಿದ್ಧರಲ್ಲಿ ಒಬ್ಬನಾದ ಕಣ್ಣಪ್ಪ ಕರ್ನಾಟಕದವರು ಎಂದು ವಿದ್ವಾಂಸರು ಅಭಿಪ್ರಾಯ ಪಟ್ಟಿದ್ದಾರೆ. ನಾಥಸಿದ್ಧರಿಗೂ ರೇವಣ್ಣ, ಅಲ್ಲಮರೇ ಮೊದಲಾದ ಶೈವಸಿದ್ಧರಿಗೂ ಸಂಬಂಧವಿದ್ದಿರಬೇಕು. ಇವರೆಲ್ಲರ ಹಿಂದೆ ನಾಥಸಿದ್ಧರೇ ಆಗಿದ್ದಾರೆಂದು ಶ್ರೀ ಕುಂದಣಗಾರ್ ಕಪಟರಾಳ ಕೃಷ್ಣರಾವ್ ಮೊದಲಾದ ವಿದ್ವಾಂಸರು ಅಭಿಪ್ರಾಯ ಪಟ್ಟಿದ್ದಾರೆ. ಕರ್ನಾಟಕದ ಒಂದು ಭಾಗವಾಗಿದ್ದ ಕೊಲ್ಲಾಪುರ ಸಿದ್ಧಪೀಠಗಳಲ್ಲಿ ಒಂದಾಗಿತ್ತು. ಮಂಗಳೂರಿನ ಕದರಿಯ ಗೋರಕಮಠ, ವಿಟ್ಲದ ಮಠ, ಜೇಡಕೀಹಾಳ, ಉತ್ತರ ಕರ್ನಾಟಕದ ಸುಡುಗಾಡು ಸಿದ್ಧರು ಇವೆಲ್ಲರ ವೃತ್ತ ಕರ್ನಾಟಕದಲ್ಲಿ ಸಿದ್ಧಮತದ ಅಸ್ತಿತ್ವದ ಹಿನ್ನೆಲೆಯನ್ನು ತೆರೆದು ತೋರಿಸುವುದರಲ್ಲಿ ಎಂ. ಎಸ್. ಕೃಷ್ಣಮೂರ್ತಿಯವರ ಸಂಶೋಧನೆ ಪ್ರಗತಿಪರವಾಗಿದೆ.

ಶೈವ ತಂತ್ರಗಳಿಗೆ ಆಗಮಗಳು ; ಶೈವಾಗಮಗಳ ಪರಂಪರೆ ಕೂಡ ತುಂಬ ಪ್ರಾಚೀನ. ಈ ಶೈವಾಗಮಗಳು ಶಿವನ ಸದ್ಯೋಜಾತವೇ ಮೊದಲಾದ ಪಂಚಮುಖಗಳಿಂದ ಹೊಮ್ಮಿದವಂತೆ. ಈ ಪಂಚಮುಖಗಳಿಂದ ಹೊರಹೊಮ್ಮಿದ ಆಗಮಗಳ ಸಂಖ್ಯೆ 28 ಎಂದು ಹೇಳಲಾಗಿದೆ. ಉಪಆಗಮಗಳೂ ಸೇರಿದರೆ ಇವುಗಳ ಸಂಖ್ಯೆ ಇನ್ನೂರ ಮೂವತ್ತಕ್ಕೂ ಮೀರುತ್ತದೆ. ಇವುಗಳನ್ನು ಶೈವಸಿದ್ಧಾಂತವೆಂದೂ ಕರೆಯಲಾಗುತ್ತದೆ.

ಈ ಆಗಮಗಳ ಆಧಾರದ ಮೇಲೆ ಶಿವನನ್ನು ಪಾಶುಪತ ಶುದ್ಧಶೈವ ಮತ್ತು ಕಪಾಲ—ಈ ಮೂರು ಪ್ರಮುಖ ಸಂಪ್ರದಾಯಗಳ ಪ್ರವರ್ತಕ ಎಂದು ಹೇಳಿದೆ. ತಾಂತ್ರಿಕ ಶೈವಮತಗಳಲ್ಲಿ ಪಾಶುಪತಮತ ತುಂಬ ಪ್ರಾಚೀನವಿರಬೇಕು. ಉಪನಿಷತ್ಕಾಲದಲ್ಲೇ ಇದರ ವಿಕಾಸವಾಗತೊಡಗಿತ್ತು. ಇದರ ಐತಿಹಾಸಿಕ ಸಂಸ್ಥಾಪಕ ಲಕುಲೀಶ ಇಲ್ಲವೆ ನಕುಲೀಶ. ಈತನ ವಿಗ್ರಹಗಳು ಇಂದಿಗೂ ಗುಜರಾತ್, ರಾಜಸ್ಥಾನ್, ಮಾಳವ ಹಾಗೂ ಬಂಗಾಳದಲ್ಲಿ ದೊರೆಯುತ್ತವೆ ಅವುಗಳಲ್ಲಿ ಆತ ಒಂದು ಕೈಯಲ್ಲಿ ಲಕುಟ (ದೊಣ್ಣೆ) ಹಿಡಿದಿರುವಂತೆ ಕೆತ್ತಿದೆ. ಆದ್ದರಿಂದ ಆತನ ಹೆಸರು ಲಕುಲೀಶ ಎಂದಾಗಿರಬೇಕು. ಈತನ ಕಾಲವನ್ನು ಮಥುರೆಯ ಶೈವ ಸ್ತಂಭ ಲೇಖನದ ಆಧಾರದ ಮೇಲೆ ಕ್ರಿ. ಶ. 2ನೇಯ ಶತಮಾನದ ಉತ್ತರಾರ್ಧವೆಂದು ಡಾ॥

ಭಂಡಾರ್ಕರ್ ಅವರು ನಿರ್ಧರಿಸಿದ್ದಾರೆ. ಇದೇ ಕಾಲದ ಕುಶಾಣ ವಂಶದ ಅರಸ ಹುವಿಷ್ಕನ ನಾಣ್ಯಗಳ ಮೇಲೆ ಲಕುಟಧಾರಿ ಶಿವನ ಮೂರ್ತಿಗಳು ದೊರೆಯುತ್ತವೆ.

ಪಾಶುಪತ:—ಶೈವಾಗಮಗಳಲ್ಲಿ ಪತಿ, ಪಶು ಮತ್ತು ಪಾಶ—ಈ ರೀತಿ ಮೂರು ಪದಾರ್ಥಗಳನ್ನು ಹೇಳಿದ್ದಾರೆ. ಪಾಶುಪತ ಮತದಲ್ಲಿ ಕಾರಣ, ಕಾರ್ಯ, ಯೋಗ, ವಿಧಿ ಮತ್ತು ದುಃಖಾಂತ—ಈ ರೀತಿ ಐದು ಪದಾರ್ಥಗಳನ್ನು ಹೇಳಿದೆ. ಕಾರಣ ಸಾಕ್ಷಾತ್ ಶಿವ ಕಾರಣದಿಂದ ನಿರ್ವರ್ತಿತವಾದ ಪದಾರ್ಥವೇ ಕಾರ್ಯ. ಇದು ಪರ ತಂತ್ರ. ಇದರಲ್ಲಿ ವಿದ್ಯೆ, ಕಲೆ ಮತ್ತು ಪಶು ಎಂದು ಮೂರು ವಿಧ. ವಿದ್ಯೆ ಪಶುವಿನ ಗುಣ; ಇದರಲ್ಲಿ ಎರಡು ಬಗೆ: ಬೋಧಾತ್ಮಿಕಾ ಮತ್ತು ಅಬೋಧಾತ್ಮಿಕಾ. ಅಬೋಧಾತ್ಮಿಕೆಯಲ್ಲೂ ಕೂಡ ವಿವೇಕ ಜನಕ ಹಾಗೂ ಅವಿವೇಕಾತ್ಮಿಕಾ ಎಂದು ಎರಡು ವಿಧ, ಅಬೋಧ ಅಧರ್ಮದ ಜನನಿ, ಕಲೆಯಲ್ಲಿ ಚೇತನದ ವಶಕ್ಕೆ ಬರುವ ದ್ರವ್ಯಗಳು ಬರುತ್ತದೆ. ಸ್ವಂತ ಜೀವ, ಇದರಲ್ಲೂ ಎರಡು ಬಗೆ: ಶರೀರೇಂದ್ರಿಯ ಧಾರೀ ' ಪಶು ಮತ್ತು ಅದರಿಂದ ಮುಕ್ತ ಪಶು ನಿರಂಜನ, ಮೂರನೆಯ ಪದಾರ್ಥವೇ ಯೋಗ. ಆದ್ದರಿಂದಲೇ ಜೀವಾತ್ಮ ಮತ್ತು ಶಿವನ 'ಯೋಗ' ವಾಗುತ್ತದೆ ("ಚಿತ್ತದ್ವಾರೇಣ ಆತ್ಮೇಶ್ವರ ಸಂಯೋಗೋ ಯೋಗ") ನಾಲ್ಕನೆಯ ಪದಾರ್ಥವಾದ ವಿಧಿ ಬಾಹ್ಯಾಚಾರದ್ಯೋತಕ. ಇದರ ಮೇಲೆ ತಂತ್ರಗಳ ಪ್ರಭಾವ ಸ್ಪಷ್ಟ. ವಿಧಿಯಲ್ಲೂ ಎರಡು ವಿಧ. ವ್ರತ ಮತ್ತು ದ್ವಾರ. ವ್ರತದಲ್ಲಿ ಐದು ವಿಧ; ಭಸ್ಮಸ್ನಾನ, ಭಸ್ಮಶಯನ, ಉಪಹಾರ, ಜಪ ಮತ್ತು ಪ್ರದಕ್ಷಿಣೆ ದುಃಖಾಂತವೇ ಮೋಕ್ಷ. ಇದರಲ್ಲೂ ಎರಡು ಬಗೆ: ಅನಾತ್ಮಕ ಹಾಗೂ ಸಾತ್ಮಕ. ಅನಾತ್ಮಕದಲ್ಲಿ ಬರಿಯ ತ್ರಿವಿಧ ದುಃಖ ನಿವೃತ್ತಿಯಾಗುತ್ತದೆ. ಸಾತ್ಮಕದಲ್ಲಿ ಅದಕ್ಕೆ ಸಿದ್ಧಿಗಳು ದೊರೆಯುತ್ತದೆ.

ಶೈವ ಸಿದ್ಧಾಂತ ಮತ: ಇದು ತಮಿಳುನಾಡಿನ ಶೈವ ಮತ. ಇದರಲ್ಲಿ ಭಕ್ತಿಗೆ ವಿಶೇಷ ಸ್ಥಾನವಿದೆ. ಈ ದರ್ಶನದಲ್ಲಿ ಮೂರು ತತ್ತ್ವಗಳಿವೆ. ಶಿವ, ಶಕ್ತಿ ಮತ್ತು ಬಿಂದು. ಶಿವ ಜಗತ್ತಿನ ಕರ್ತ: ಶಕ್ತಿ ಆತನ ಸಹಾಯಕಿ ಮತ್ತು ಬಿಂದು ಉಪಾದಾನ.

ಶಿವತತ್ತ್ವ: ಶಿವನನ್ನು ಈ ದರ್ಶನದಲ್ಲಿ 'ಪತಿ' ಎಂದು ಕರೆದಿದೆ. ಪರಮ ಐಶ್ವರ್ಯ, ಸ್ವಾತಂತ್ರ್ಯ ಮತ್ತು ಸರ್ವಜ್ಞತ್ವ ಆತನ ಅಸಾಧಾರಣ ಗುಣಗಳು. ಪಂಚ ಮಂತ್ರಗಳ ರೂಪದಲ್ಲಿ ಅವುಗಳನ್ನು ಕಲ್ಪಿಸಲಾಗಿದೆ. ಶಿವನಿಗೆ ಇವುಗಳಂತೆ ಐದು ಕೃತ್ಯಗಳಿವೆ. ಸೃಷ್ಟಿ, ಸ್ಥಿತಿ, ಸಂಹಾರ, ತಿರೋಭಾವ ಹಾಗೂ ಅನುಗ್ರಹ ಕರ್ತ. ಈ ಶಿವ ಎರಡು ಅವಸ್ಥೆಗಳಲ್ಲಿರುತ್ತಾನೆ. ಲಯಾವಸ್ಥೆ ಮತ್ತು ಭೋಗಾವಸ್ಥೆ. ಲಯಾವಸ್ಥೆಯಲ್ಲಿ ಶಕ್ತಿ ಶಿವನೊಳಗಿರುತ್ತದೆ. ಭೋಗಾವಸ್ಥೆಯಲ್ಲಿ ಶಕ್ತಿ ಉನ್ಮೇಷವನ್ನು ಹೊಂದುತ್ತದೆ.

ಪಶು: ವೇದಾಂತದಲ್ಲಿ ಯಾವುದನ್ನು ಜೀವ ಎಂದು ಕರೆಯುತ್ತಾರೋ ಅದನ್ನೇ ಈ ಮತದಲ್ಲಿ ಪಶು ಎಂದು ಕರೆಯುತ್ತಾರೆ. ಇದು ಜ್ಞಾನಶಕ್ತಿ ಮತ್ತು ಕ್ರಿಯಾ ಶಕ್ತಿ

ಸಮನ್ವಿತವಾಗಿರುವುದರಿಂದ 'ಕರ್ತ' ಎಂದು ಕರೆಯಲ್ಪಡುತ್ತದೆ. ಈ ಪಶುವಿನಲ್ಲಿ ಮೂರು ಬಗೆ: ವಿಜ್ಞಾನಾಕಲ, ಪ್ರಲಯಾಕಲ ಮತ್ತು ಶಕಲ. ಇವುಗಳನ್ನು ವಿಮೋಹಿತಗೊಳಿಸುವ ಮಲ ಕೂಡ ಮೂರು ರೀತಿಯದು: ಅಣವ ಮಲ, ಕಾರ್ಮಣ ಮಲ ಮಾಯೀಯ ಮಲ. ಪಶುಗಳನ್ನು ಬಂಧಿಸುವ ಪಾಶ ಕೂಡ ನಾಲ್ಕು ತೆರನಾದುದು. ಮಲ, ಕರ್ಮ, ಮಾಯೆ ಮತ್ತು ರೋಧಶಕ್ತಿ, ಈ ಮತದಲ್ಲಿ ಮಾಯೆ ವೇದಾಂತದಂತೆ ಮಿಥ್ಯೆಯಲ್ಲ. ಇದು ಏಕ ಮತ್ತು ನಿತ್ಯ ಎಂದು ಹೇಳಿದೆ.

ಈ ದರ್ಶನದ ಲಕ್ಷ್ಯ ಪಶುವಿನ ಮಲ ಮತ್ತು ಪಾಶವನ್ನು ನಿರಾಕರಿಸಿ ಅದಕ್ಕೆ ಮೋಕ್ಷ ದೊರಕಿಸಿಕೊಡುವುದು. ಜ್ಞಾನ, ತಪಸ್ಸು ಮೊದಲಾದ ಬಾಹ್ಯ ಸಾಧನೆಗಳು ಈ ಗುರಿಯನ್ನು ಮುಟ್ಟಲು ಸಹಕಾರಿಯಲ್ಲ. ಅವರು ಶಕ್ತಿಪಾತ ಎಂಬ ಸಾಧನಕ್ಕೆ ಹೆಚ್ಚಿನ ಮಹತ್ವ ನೀಡಿದ್ದಾರೆ. 'ಶಕ್ತಿ ಪಾತ' ಎಂದರೆ ಭಗವಂತನ ಅನುಗ್ರಹ ಶಕ್ತಿಯನ್ನು ಪಡೆಯುವುದು. ಬೇರೆ ಮಾತಿನಲ್ಲಿ ಹೇಳುವುದಾದರೆ ಇವರಿಗೆ ಭಗವಂತನ ಕೃಪಾ ಸಾಧ್ಯತೆಯಲ್ಲಿ ಹೆಚ್ಚಿನ ನಂಬಿಕೆ. ಕ್ರಿಯಾ ಸಾಧ್ಯತೆಯಲ್ಲಿ ವಿಶೇಷ ಆಸ್ಥೆಯಿಲ್ಲ. ಶಕ್ತಿ ಪಾತಕ್ಕೆ ದೀಕ್ಷಾತತ್ತ್ವ ಅತ್ಯಗತ್ಯ. ಭಗವತ್ಸ್ವರೂಪಿಯಾದ ಗುರು ದೀಕ್ಷೆಯಿಂದ ಶಿಷ್ಯನನ್ನು ಉದ್ಧಾರಮಾಡುತ್ತಾನೆ. ಅವನನ್ನು ಭವಬಂಧನದಿಂದ ಮುಕ್ತಗೊಳಿಸುತ್ತಾನೆ.

ಬಿಂದುತತ್ತ್ವ: ಶೈವಸಿದ್ಧಾಂತವಾದಿಗಳ 'ಬಿಂದು' ಉಪಾಧನೆಯೆನ್ನುವರು. ಇದರ ಮತ್ತೊಂದು ಹೆಸರು 'ಮಹಾಮಾಯೆ' ಎಂದು. ಜೀದು ಕ್ಷುಬ್ಧವಾದಾಗ ಶುದ್ಧ ದೇಹ, ಇಂದ್ರಿಯಭೋಗ ಈ ಭುವನಗಳ ಉತ್ಪತ್ತಿಯಾಗುತ್ತದೆ. ಬಿಂದು ವಿಕ್ಷೋಭದಿಂದ ಅಧ್ವಗಳು ಉದಿಸುತ್ತವೆ. ಈ ಸಂಬಂಧದಲ್ಲೂ ಅನೇಕ ಮತಗಳಿವೆ. ಮೊದಲನೆಯ ಮತದ ಪ್ರಕಾರ ಬಿಂದು ವಿಕ್ಷುಬ್ಧವಾಗಿ ಒಂದೆಡೆ ಶುದ್ಧ ಅಧ್ವಗಳಿಗೆ ಜನ್ಮ ನೀಡಿದರೆ ಮತ್ತೊಂದೆಡೆ ನಾದವನ್ನು ಸೃಷ್ಟಿಸುತ್ತದೆ. ಈ ನಾದ ಕೂಡ ಹಲವು ಬಗೆಯದು. ಎರಡನೆಯ ಮತದ ಪ್ರಕಾರ ಶುದ್ಧ ಹಾಗೂ ಅಶುದ್ಧ ಈ ಎರಡೂ ಅಧ್ವಗಳ ಕಾರಣ ಬಿಂದುವೇ. ಈ ಮತದವರು ಬಿಂದುವಿಗೆ ಈ ಮೂರು ಅವಸ್ಥೆಗಳಿವೆಯೆಂದು ಹೇಳುತ್ತಾರೆ. 'ಪರಾ' ಇದನ್ನೇ ಮಹಾಮಾಯೆ. ಪರಮಾಯೆ, ಕುಂಡಲಿನಿ ಮೊದಲಾಗಿ ಕರೆಯುತ್ತಾರೆ. ಇದು ಪರಮಕಾರಣ ಮತ್ತು ನಿತ್ಯರೂಪಿ. ಉಳಿದೆರಡು ಅವಸ್ಥೆಗಳೆಂದರೆ ಸೂಕ್ಷ್ಮ ಮತ್ತು ಸ್ಥೂಲ. ಇವು ಕಾರ್ಯರೂಪಿಯಾದ್ದರಿಂದ ಅನಿತ್ಯ. ಬಿಂದುವಿನಲ್ಲಿ ಕ್ಷೋಭೆ ಏಕೆ ಉಂಟಾಗುತ್ತವೆ? ಎಂದು ಕೇಳಬಹುದು. ತಂತ್ರ ಗ್ರಂಥಗಳ ಪ್ರಕಾರ ಬಿಂದುವಿನ ಕ್ಷೋಭೆ ಶಿವನ ಸತ್ವದಿಂದಾಗುತ್ತದೆ.

ಪರಮೇಶ್ವರ ಪಂಚಕೃತ್ಯಕಾರೀ ಎಂದು ಹೇಳಿದೆ. ತನ್ನ ಐದೂ ಕೃತ್ಯಗಳ ಸಂಪಾದನೆಗಾಗಿ ಅವನು ಬಿಂದುಕ್ಷೋಭೆ ಮಾಡಬೇಕಾಗುತ್ತದೆ. ಬಿಂದುಕ್ಷೋಭೆಯಾಗಬೇಕಾದರೆ ಶಿವ ಸಕ್ರಿಯನಾಗಬೇಕಾದದು ಅವಶ್ಯಕ. ಲಯಾವಸ್ಥೆಯಿಂದ ಶಿವ ಶಕ್ತಿಯರು ಕ್ರಿಯಾವಸ್ಥೆಯತ್ತ ಸರಿದಾಗ ಬಿಂದು ಕೂಡ ವಿವಿಧ ಅವಸ್ಥೆಗಳಲ್ಲಿ ವಿಕಾಸ

ಗೊಳ್ಳುತ್ತದೆ. ಈ ಅವಸ್ಥೆಗಳೇ ಕಲೆಗಳನ್ನೆನಿಸಿಕೊಳ್ಳುತ್ತವೆ. ಇವು ಐದು, ನಿವೃತ್ತಿ, ಪ್ರತಿಷ್ಠೆ, ವಿದ್ಯೆ, ಶಾಂತಿ ಮತ್ತು ಶಾಂತ್ಯತೀತ. ಕೊನೆಯದು ಬಿಂದುವಿನ ಲಯಾವಸ್ಥೆ ಯೆಂದು ಹೇಳಲಾಗುತ್ತದೆ. ಉಳಿದ ನಾಲ್ಕು ಅವಸ್ಥೆಗಳಲ್ಲೇ ಯೋಗಾಧಿಷ್ಠಾನಗಳು ಜನಿಸುತ್ತವೆ.

ಬಿಂದುವಿನ ಬಗೆಗೆ ಕೆಲವರ ಅಭಿಪ್ರಾಯ ಇದಕ್ಕೆ ಭಿನ್ನವಾಗಿದೆ. ಇವರು ಪರಮೇಶ್ವರ ಎರಡು ಶಕ್ತಿಗಳನ್ನು ಉಲ್ಲೇಖಿಸುತ್ತಾರೆ. ಸಂವಾಹಿನೀ ಶಕ್ತಿ ಮತ್ತು ಪರಿಗ್ರಹರೂಪಾಶಕ್ತಿ : ಪರಿಗ್ರಹಶಕ್ತಿ ಅಚೇತನ, ಸಂವಾಹಿನೀ ಶಕ್ತಿ ಚೇತನ ಮತ್ತು ನಿರ್ವಿಕಾರ. ಪರಮೇಶ್ವರನ ಪರಿಗ್ರಹ ಶಕ್ತಿಯೇ ಇವರ ಪ್ರಕಾರ ಬಿಂದು ವೆನಿಸಿಕೊಳ್ಳುತ್ತದೆ. ಬಿಂದುವಿನಲ್ಲೂ ಶುದ್ಧ ಹಾಗೆ ಅಶುದ್ಧ ಎಂದೆರಡು ಭೇಧವೆಂದೂ ಹೇಳಲಾಗುತ್ತದೆ. ಅವುಗಳನ್ನು ಕ್ರಮಶಃ ಮಹಾಮಾಯೆ ಮತ್ತು ಮಾಯೆ ಎಂದು ಕರೆದಿದೆ.

ಬಿಂದುವಿನ ಬಗೆಗೆ ಮತ್ತೊಂದು ಮತ ಪ್ರಸಿದ್ಧವಿದೆ. ಸಂವಾಹ್ಯವಾದಿಗಳ ಪ್ರಕಾರ ಶಿವನ ಸಂವಾಹ್ಯನೀ ಶಕ್ತಿಯಲ್ಲಿ ಎರಡು ಬಗೆ. ದೃಗ್ ಶಕ್ತಿ ಮತ್ತು ಕ್ರಿಯಾ ಶಕ್ತಿ ಅಥವಾ ಕುಂಡಲಿನೀ ಶಕ್ತಿ. ಎರಡನೇ ಶಕ್ತಿಯೇ ಬಿಂದು. ಈ ಬಿಂದುವೇ ಶುದ್ಧ ಹಾಗೂ ಅಶುದ್ಧ ಅಧ್ವಗಳ ಕಾರಣ. ಸಂಕ್ಷೇಪವಾಗಿ ಇದೇ ಶೈವ ಸಿದ್ಧಾಂತ ಮತ.

ಕಾಶ್ಮೀರ ಶೈವ ಮತ: ಶುದ್ಧ ಶೈವ ಮತದಲ್ಲಿ ಎರಡು ಭೇದಗಳಾಗಿದ್ದವು. ಉತ್ತರದಲ್ಲಿ ಕಾಶ್ಮೀರಶೈವ ಇಲ್ಲವೆ ಸ್ಪಂದಶಾಸ್ತ್ರ ಅಥವಾ ತ್ರಿಕದರ್ಶನ ಇಲ್ಲವೆ ಪ್ರತ್ಯಭಿಜ್ಞಾನ. ಇದು ಅದ್ವೈತ ಮೂಲ. ಎರಡನೆಯದು ವಿಶಿಷ್ಟಾದ್ವೈತ ಮೂಲ ವಾದ ದಕ್ಷಿಣದ ವೀರಶೈವ. ಪಶು, ಪಾಶು ಮತ್ತು ಪತಿ ಅಥವಾ ಶಿವ, ಶಕ್ತಿ ಮತ್ತು ಅಣು–ಇವುಗಳಿಂದಾಗಿ ಕಾಶ್ಮೀರ ಶೈವಕ್ಕೆ ತ್ರಿಕದರ್ಶನವೆಂದು ಹೆಸರು ಬಂದಿತು. ಐತಿಹ್ಯದ ಪ್ರಕಾರ ಈ ಮತದ ಪ್ರವರ್ತಕನಾದ ವಸುಗುಪ್ತ (9ನೆಯ ಶತಮಾನ) ನಿಗೆ ಸ್ವತಃ ಶಿವ ಕನಸಿನಲ್ಲಿ ಕಾಣಿಸಿಕೊಂಡು ಮಹಾದೇವ ಗಿರಿಯಲ್ಲಿನ ಯಾವುದೇ ಗುಹೆಯಲ್ಲಿ ಬರೆಯಲ್ಪಟ್ಟಿದ್ದ ಶಿವಸೂತ್ರಗಳನ್ನು ಉದ್ಧರಿಸಬೇಕೆಂದು ಹೇಳಿದನಂತೆ. ಅವುಗಳ ಆಧಾರದ ಮೇಲೆ ಆತ ಅನಂತರ ' ಸ್ಪಂದಕಾರಿಕೆ ' ಯನ್ನು ಬರೆದ. ಕಲ್ಲಟ ಮತ್ತು ಸೋಮಾನಂದ ಈತನ ಇಬ್ಬರು ಶಿಷ್ಯರು. ಕಲ್ಲಟ ' ತ್ರಿಕದರ್ಶನ ' ವನ್ನೂ ಸೋಮಾನಂದ ' ಪ್ರತ್ಯಭಿಜ್ಞಾನ ದರ್ಶನವನ್ನು ಬರೆದರು. ಇವರ ಶಿಷ್ಯ ಉತ್ಪಲ. ಈ ಉತ್ಪಲನ ಶಿಷ್ಯ ಅಭಿನವ ಗುಪ್ತ. ಸೈದ್ಧಾಂತಿಕ ದೃಷ್ಟಿಯಿಂದ ಕಲ್ಲಟ ಮತ್ತು ಸೋಮಾನಂದರಲ್ಲಿ ಅಂಥ ಬೇಧವೇನೂ ಇಲ್ಲ. ಪೂರ್ವ ದೇಶಗಳ ಶಾಕ್ತ ಮತ ಗಳೊಡನೆ ಇದಕ್ಕೆ ಘನಿಷ್ಠ ಸಂಬಂಧವಿತ್ತೆಂದೂ ಶಾಕ್ತಮತ ಇದರದೇ ಒಂದು ಶಾಖೆ ಯೆಂದೂ ಡಾ॥ ಧರ್ಮವೀರ ಭಾರತಿ ಅವರು ಅಭಿಪ್ರಾಯಪಟ್ಟಿದ್ದಾರೆ. ಇವರು ಆಗಮದ ಸಿದ್ಧಾಂತಗಳನ್ನೇ ಅದ್ವೈತಾನುಸಾರವಾಗಿ ವ್ಯವಸ್ಥೆಗೊಳಿಸಿದರು. ಸ್ಪಂದ

ಶಾಸ್ತ್ರದ ಪ್ರಕಾರ ಕೇವಲ ಶಿವ ಮಾತ್ರ ಸತ್ಯ. ಆತ ಪೂರ್ಣ ಸ್ವತಂತ್ರ ಹಾಗೂ ಸರ್ವಶಕ್ತ. ಜೀವಮೂಲ ರೂಪದಲ್ಲಿ ಶಿವನೇ. ಅಣು ಮಾಯೆ ಹಾಗೂ ಕರ್ಮ ಈ ಮೂರು ಮಲಾವರಣಗಳಿಂದಾಗಿ ಅದು ತಾನು ಬೇಕೆ ಎಂದುಕೊಳ್ಳುತ್ತದೆ. ಈ ಮಲಗಳ ಮೂಲಕಾರಣ ಈ ಶಬ್ದ ಇಲ್ಲವೆ ನಾದ ಶಿವನ ಶಕ್ತಿಯ ಸ್ತ್ರೀರೂಪ, ಅದನ್ನು ಶಿವನಲ್ಲಿ ಲೀನಗೊಳಿಸುವ ಸಾಧನ ಮಾಯೆ. ಪರಮ ಸಾಕ್ಷಾತ್ಕಾರವನ್ನು 'ಭೈರವ' ಎಂದು ಕರೆಯುತ್ತಾರೆ. ಪ್ರತ್ಯಭಿಜ್ಞಾನದಲ್ಲಿ ಈ ಪರಮ ಸಾಕ್ಷಾತ್ಕಾರಕ್ಕೆ ಒಂದು ಹೊಸ ರೂಪಕೊಟ್ಟಿದೆ. ಲೌಕಿಕ ಜೀವನದಲ್ಲಿ 'ಇವನೇ ಅವನು' ಎನ್ನುವ ಜ್ಞಾನಕ್ಕೆ ಪ್ರತ್ಯಭಿಜ್ಞಾನ ಎನ್ನುತ್ತಾರೆ. ಈಶ್ವರ ಸಾಕ್ಷಾತ್ಕಾರವಾದ ಬಳಿಕ 'ನಾನು ಅದೇ ಈಶ್ವರ 'ಎಂಬ ಅನಿಸಿಕೆಯೆ ಈಶ್ವರ ಪ್ರತ್ಯಭಿಜ್ಞಾ. ಈಶ್ವರ ಚಿತ್, ಆನಂದ್, ಇಚ್ಛೆ, ಜ್ಞಾನ ಮತ್ತು ಕ್ರಿಯೆ–ಈ ಪಂಚಶಕ್ತಿ ಸಮನ್ವಿತ ಎಂದು ಹೇಳಿದೆ. ಅದ್ವೈತ ವಾದದ ಎಲ್ಲ ಸಿದ್ಧಾಂತಗಳನ್ನು ತೆಗೆದುಕೊಂಡಿದ್ದರೂ ಇದರಲ್ಲಿ ಈಶ್ವರ 'ಇಚ್ಛಾ ಸಂಪನ್ನ' ಎಂದೂ ಹೇಳಿದೆ.

ವೀರಶೈವ : ಶಕ್ತಿ ವಿಶಿಷ್ಟಾದ್ವೈತವೆಂದು ವಿಖ್ಯಾತವಾದ ಈ ಮತದ ಪೂರ್ವೇತಿಹಾಸದ ಮೇಲೆ ಇನ್ನು ಸಾಕಷ್ಟು ಬೆಳಕು ಬಿದ್ದಿಲ್ಲವೆನ್ನಬೇಕಾಗುತ್ತದೆ. ರೇಣುಕ, ದಾರುಕ, ಘಂಟಾಕರ್ಣ, ಧೇನುಕರ್ಣ, ಮತ್ತು ವಿಶ್ವಕರ್ಣ ಈ ಪಂಚಾ ಚಾರ್ಯರಿಂದ ಈ ಮತ ಪ್ರಚಾರವಾಯಿತೆಂದು ಕೆಲವರು ಹೇಳಿದರೆ ಮತ್ತೆ ಕೆಲವರು ವೀರಶೈವ ಧರ್ಮ ಅನಾದಿ ಎಂದು ಹೇಳುತ್ತಾರೆ. ಬಸವೇಶ್ವರರಿಂದ ಇದಕ್ಕೆ ವಿಶೇಷ ಚಾಲನೆ ದೊರೆಯಿತು. ಜೀವ, ಬ್ರಹ್ಮರಿಬ್ಬರೂ ಒಂದು ನಿಹಿತ ಶಕ್ತಿ ಸಮನ್ವಿತರು. ಈ ವಿಶಿಷ್ಟತೆಯಿಂದ ಕೂಡಿದ್ದರಿಂದಲೇ ಇದಕ್ಕೆ ಶಕ್ತಿವಿಶಿಷ್ಟಾದ್ವೈತವೆಂದು ಹೆಸರು. ಶಿವನ ಇಚ್ಛೆಯಿಂದ ಸಮನ್ವಿತವಾದ ಈ ಶಕ್ತಿಯ ನಿರ್ಮಾಣಕಾರೀ ರೂಪಕ್ಕೆ 'ವಿಮರ್ಶೆ' ಎಂದು ಹೆಸರು. ಇದೇ ಸಂಸಾರ. ಇಲ್ಲವೆ ಜಗತ್ತನ್ನು ಸೃಷ್ಟಿಸುತ್ತದೆ. ಇಡೀ ಜಗತ್ತಿಗೆ ಮೂಲ ಶಿವ. ಈ ಜಗತ್ತು ಎಲೆ, ಕೊಂಬೆ ಮೊದಲಾದವುಗಳ ರೂಪದಲ್ಲಿದೆ. ಈ ಮತದಲ್ಲಿ ಸಾಧನೆಯಿಂದ ದೊರೆಯುವ ಆನಂದವನ್ನು ಸಮರಸ ಇಲ್ಲವೆ ಲಿಂಗಾಂಗ ಸಾಮರಸ್ಯ ಎಂದು ಕರೆದಿದೆ. ಲಿಂಗ ಮತ್ತು ಅಂಗ ಪರಶಿವನ ಎರಡು ರೂಪಗಳು. ಇವುಗಳನ್ನೇ 'ಸ್ಥಳ' ಗಳೆಂದು ಕರೆಯುತ್ತಾರೆ. ಅವರಲ್ಲೇ ಸಂಸಾರದ ಲಯ ಹಾಗೂ ಗಮನವಿದೆ.

ಕಾಳಾಮುಖ : ಕಾಳಾಮುಖರು ವೀರಶೈವ ಹಾಗೂ ಕಾಶ್ಮೀರ ಶೈವರಿಗಿಂತ ಹಳಬರೆಂದು ಹೇಳಲಾಗುತ್ತದೆ. ಅವರು ಕರ್ನಾಟಕದ ಧಾರ್ಮಿಕ ಜೀವನದಲ್ಲಿ ಅತ್ಯಂತ ಗಣ್ಯಸ್ಥಾನವನ್ನು ಪಡೆದಿದ್ದು ಅನೇಕ ಘಟಿಕಾ ಸ್ಥಾನಗಳನ್ನು ನಡೆಸುತ್ತಿದ್ದರು. ವೀರಶೈವರು ಇದರಿಂದಲೇ 'ಲಿಂಗಧಾರಣೆ' ಯನ್ನು ಸ್ವೀಕರಿಸಿದರೆಂದು ಪ್ರೊ|| ಡಿ. ಎಲ್. ನರಸಿಂಹಾಚಾರ್ಯರು ಅಭಿಪ್ರಾಯಪಟ್ಟಿದ್ದಾರೆ. ಆದರೆ ಶಂಕರ ವಿಜಯ ಮತ್ತು ರಾಮನುಜಾಚಾರ್ಯರ ವಿವರಣೆಯಲ್ಲಿ ಇವರ ಬೀಭತ್ಸ ವರ್ಣನೆಯಿದೆ.

ಬಹುಶಃ ಪಾಶುಪತರೇ ಕಾಳಾಮುಖರೆಂದು ತಪ್ಪು ಕಲ್ಪನೆಯುಂಟಾಗಿರಬೇಕು. ಕಾಳಾಮುಖರೇ ಲಕುಲೀಶರೆಂದು ಶ್ರೀಕಪಟರಾಳ ಕೃಷ್ಣರು ಅಭಿಪ್ರಾಯ ಪಡುತ್ತಾರೆ.

ತಾಂತ್ರಿಕ ದೃಷ್ಟಿಯಿಂದ ಕಾಪಾಲಿಕ ಮತ ಅತ್ಯಂತ ಮಹತ್ವಪೂರ್ಣವಾದುದು. ಅವರಲ್ಲಿ ಈ ಗುಹ್ಯ ಸಾಧನೆಗಳು ವಿಕಾಸದ ಚರಮಾವಸ್ಥೆಯನ್ನು ಮುಟ್ಟಿದ್ದವು. ಶಬರ ತಂತ್ರದಲ್ಲಿ 24 ಕಾಪಾಲಿಕರ ಪಟ್ಟಿ ದೊರೆಯುತ್ತದೆ. (ಆದಿನಾಥ, ಅನಾದಿ ಕಾಲ, ಅತಿಕಾಲ, ಕರಾಲ, ವಿಕರಾಲ, ಮಹಾಕಾಲ, ಕಾಲಭೈರವನಾಥ, ವಜುಕ, ಭೂತನಾಥ, ಶ್ರೀಕಂಠ, ನಾಗಾರ್ಜುನ, ಜಡಭರತ, ಹರಿಶ್ಚಂದ್ರ, ಸತ್ಯನಾಥ, ಮೀನನಾಥ, ಗೋರಕ್ಷ, ಚರ್ಪಟಿ, ಅದ್ವಯ, ವೈರಾಟ್ಯ, ಕಂಥಾಧಾರಿನ್, ಜಾಲಂಧರ ಹಾಗೂ ಮಲಯಾರ್ಜುನ. ಇವರಲ್ಲಿ ಮೊದಲ ಹನ್ನೆರಡು ಆದಿಗುರು ಶಿವನ ಹೆಸರುಗಳು. ಉಳಿದವು ಆತನ ಶಿಷ್ಯರ ಹೆಸರುಗಳು. ಇವರಲ್ಲಿ ಅನೇಕ ಹೆಸರುಗಳು ವಜ್ರಯಾನೀ ಸಿದ್ಧರಲ್ಲೂ, ನಾಥ ಸಿದ್ಧರಲ್ಲೂ ಕಂಡು ಬರುತ್ತವೆ. ಈ ಕಾಪಾಲಿಕರು ಮಾಹೇಶ್ವರೋಪಾಸಕರು, ಕಾಲಾಂತರದಲ್ಲಿ ನಾಥ ಸಂಪ್ರದಾಯದಲ್ಲಿ ಇವರು ಶ್ರೀನಾಥನಿಂದ ಕಳುಹಿಸಲ್ಪಟ್ಟ ವೀರದೂತರೆಂದು ಹೇಳಿದೆ. ಆ ಹೊತ್ತಿಗಾಗಲೇ ವಿಷ್ಣು 24 ಅವತಾರಗಳನ್ನು ಎತ್ತಿದ್ದನಂತೆ. ಹನ್ನೆರಡು ಪ್ರಮುಖ ಹಾಗೂ ಹನ್ನೆರಡು ಗೌಣ. ವಿಷ್ಣು ಕೂರ್ಮನೇ ಮೊದಲಾದ ಜಲಚರಗಳ ಹಾಗೂ ಪಶುಗಳ ಕ್ರೀಡೆಯಾಡಿದಾಗ, ಕೃಷ್ಣನಂಥ ವ್ಯಭಿಚಾರಿಯ ರೂಪ ತಳೆದಾಗ ಶ್ರೀನಾಥ 24 ಮಂದಿ ಕಾಪಾಲಿಕರನ್ನು ಕಳುಹಿಸಿದನಂತೆ. ಆ ಕಾಪಾಲಿಕರು ಈ 24 ಅವತಾರಗಳೊಂದಿಗೆ ತುಮುಲ ಯುದ್ಧ ಮಾಡಿದರಂತೆ. ಅವರ ಕಪಾಲಗಳನ್ನು ಕತ್ತರಿಸಿ ತಮ್ಮ ಕೊರಳಿನಲ್ಲಿ ಧರಿಸಿದರಂತೆ. ಆದ್ದರಿಂದಲೇ ಇವರು ಕಾಪಾಲಿಕರೆನ್ನಿಸಿಕೊಂಡರಂತೆ : ಆದರೆ ಈ ಕಥೆ ವೈಷ್ಣವ ದ್ವೇಷವನ್ನು ಸೂಚಿಸುವ ಗೋರಕ್ಷ ಸಿದ್ಧಾಂತ ಸಂಗ್ರಹದಲ್ಲಿರುವ ಇತ್ತೀಚಿನ ಕಥೆ. ಕಾಪಾಲಿಕರ ಸಾಧನೆ ಈ ಎಲ್ಲ ಸಂಪ್ರದಾಯಗಳ ಸಾಧನೆಗಿಂತ ಅತ್ಯಂತ ಗುಹ್ಯ ಹಾಗೂ ವಿಕರಾಳ. ಇವರು ಕಪಾಲದಲ್ಲಿ ಭೋಜನ ಮಾಡುತ್ತಿದ್ದರು. ಮೈಗೆ ಚಿತಾ ಭಸ್ಮವನ್ನು ಲೇಪಿಸಿಕೊಳ್ಳುತ್ತಿದ್ದರು ; ಭಸ್ಮ, ಭಕ್ಷಣ ಮಾಡುತ್ತಿದ್ದರು. ಗದೆಯನ್ನು ಹಿಡಿದುಕೊಂಡಿರುತ್ತಿದ್ದರು. ಮದ್ಯಪಾತ್ರೆಯನ್ನಿಟ್ಟುಕೊಂಡಿರುತ್ತಿದ್ದರು. ಮತ್ತು ಅದರಲ್ಲೇ ದೇವರಿರುತ್ತಾನೆಂದು ನಂಬಿದ್ದರು. ಇವುಗಳಲ್ಲದೆ ಯಜ್ಞೋಪವೀತ, ಕರ್ಣಕುಂಡಲ ಮೊದಲಾದ ಷಟ್ ಚಿಹ್ನೆಗಳನ್ನು ಇವರು ಧರಿಸುತ್ತಿದ್ದರು. ಇವರು ' ದೀಕ್ಷೆ ' ಯನ್ನು ವ್ರತ ಎಂದು ಕರೆಯುತ್ತಿದ್ದರು. ಇವರು ಸೋಮಮದ್ಯವನ್ನು ಕುಡಿಯುತ್ತಿದ್ದರು. ಇದರಿಂದ ಚಿತ್ತ ಸದಾ ಜಾಗೃತವಾಗಿರುತ್ತಿತ್ತಂತೆ. ಇವರು ಮಾಂಸ (ಕೆಲವು ವೇಳೆ ಶವ) ಭಕ್ಷಣೆ ಮಾಡುತ್ತಿದ್ದರು. ಕಪಾಲೀ ಶಕ್ತಿಯನ್ನು ಆಲಿಂಗಿಸಿಕೊಂಡು ಸ್ಮಶಾನದಲ್ಲಿ ಯೋಗಸಾಧನೆ ಮಾಡುತ್ತಿದ್ದರು. ತಾಂತ್ರಿಕ ಅನುಷ್ಠಾನ ಹಾಗೂ ಭೈರವೀ ಸಾಧನೆ ಮಾಡುತ್ತಿದ್ದರು. ಇವರು ನರಬಲಿಯನ್ನು ಕೊಡುತ್ತಿದ್ದರು. ಶಿವನ ಭೈರವ ರೂಪ ಹಾಗೂ ಅಘೋರ ಮುಖದ ಉಪಾಸನೆ ಮಾಡುತ್ತಿದ್ದರು.

ಶ್ರೀಶೈಲ ಕಾಪಾಲಿಕರ ಕೇಂದ್ರವಾಗಿತ್ತೆಂದು ಭವಭೂತಿ ತನ್ನ 'ಮಾಲತೀ ಮಾಧವ'ದಲ್ಲಿ ಹೇಳುತ್ತಾನೆ. ಅಲ್ಲಿ ಒಬ್ಬ ಯೋಗಿನಿ ಅರಮನೆಯಿಂದ ಮಾಲತಿಯನ್ನು ಕದ್ದೊಯ್ದು ತನ್ನ ಗುರು ಅಘೋರಘಂಟನ ಆಜ್ಞೆಯಂತೆ ಆಕೆಯನ್ನು ಕರಾಳ ಚಾಮುಂಡಿಯ ವಿಗ್ರಹದ ಮುಂದೆ ಬಲಿಕೊಡಲೆತ್ನಿಸುತ್ತಾಳೆ. 'ಹರ್ಷಚರಿತ'ದಲ್ಲಿ ಒಬ್ಬ ಕಾಪಾಲಿಕ ಯತಿ ಭೈರವಾಚಾರ್ಯನ ವರ್ಣನೆಯಿದೆ. ಅವನು ಪುಷ್ಯಭೂತಿ ಮಹಾರಾಜನ ಜೊತೆ ಸ್ಮಶಾನಕ್ಕೆ ಹೋಗಿ 'ಮಹಾಕಾಲ ಹೃದಯ' ಎಂಬ ಮಹಾಮಂತ್ರವನ್ನು ಒಂದು ಕೋಟಿ ಸಾರಿ ಜಪ ಮಾಡಿದ್ದನಂತೆ. ಕೊನೆಗೆ ಕಪ್ಪುವಸ್ತ್ರ ತೊಟ್ಟು, ಕರಿಯ ಮುಸುಕು ಧರಿಸಿ, ಮೈಗೆಲ್ಲ ಕಪ್ಪುಚೂರ್ಣ ಬಳಿದುಕೊಂಡು ಶವದ ಮೇಲೆ ಕುಳಿತು ಕೊಂಡು ಕೃಷ್ಣಚತುರ್ದಶಿಯ ದಿನ ಬೇತಾಳ ಸಾಧನೆ ಮಾಡಿದ್ದನಂತೆ.

ಇವರ ಈ ಭಯಂಕರ ಸಾಧನೆಯಿಂದಾಗಿ ಜನ ಇವರನ್ನು ಕಂಡರೆ ಹೆದರುತ್ತಿದ್ದರು. ಇವರು ಜಾತಿಪಂಥಗಳ ಬಂಧನವನ್ನು ಒಪ್ಪುತ್ತಿರಲಿಲ್ಲ. ಈ ಪಂಥ ಕೂಡ ವೇದಬಾಹ್ಯ ಪಂಥವೆಂದು ಪರಿಗಣಿತವಾಯಿತು. ಇವರ ಸಾಧನೆಯ ಹಿನ್ನೆಲೆಯಲ್ಲಿ ಸೋಮ ಸಿದ್ಧಾಂತದ ತತ್ತ್ವಗಳಿವೆಯೆಂದು ಹೇಳಲಾಗುತ್ತದೆ. ನರಕಪಾಲದಲ್ಲಿ ಕುಡಿಯುವ ಹೆಂಡವನ್ನು ಇವರು 'ಸೋಮ' ಎಂದು ಕರೆಯುತ್ತಿದ್ದರು. 'ಸ+ಉಮ'ದಿಂದ 'ಸೋಮ' ಶಬ್ದ ನಿರ್ಮಿತವಾಗಿದೆ ಎಂದು ಇದಕ್ಕೆ ವ್ಯುತ್ಪತ್ತಿ ನೀಡಲಾಗಿದೆ. ಈ ಸೋಮದಲ್ಲಿ ಶಕ್ತಿಯುಕ್ತ ಶಿವನ ವಾಸದಂತೆ, 'ಪ್ರಬೋಧ ಚಂದ್ರೋದಯದ ಮೂರು ಟೀಕೆಗಳನ್ನು ಉದ್ಧರಿಸುತ್ತ ಟುಚಿ ಇದನ್ನು ಸಮರ್ಥಿಸಿದ್ದಾನೆ. ಇವುಗಳನ್ನು ನೇಪಾಳದ ರಾಜಪುರೋಹಿತ ಹೇಮರಾಜಶರ್ಮ ಅವರು ಆತನಿಗೆ ಕಳುಹಿಸಿದ್ದರು. 'ಪ್ರಬೋಧ ಚಂದ್ರೋದಯ'ದಲ್ಲಿ ಸೋಮ ಸಿದ್ಧಾಂತದ ಪ್ರವೇಶ ಕಾಪಾಲಿಕನ ರೂಪದಲ್ಲಿ ಆಗುತ್ತದೆ. ಈ ಪವಿತ್ರ ಅಮೃತವನ್ನು ಪಾನ ಮಾಡುವುದರಿಂದ ಪಶು, ಪಾಶಗಳ ದಿಚ್ಛೇಧವಾಗಿ ಭೈರವ ಜಾಗೃತನಾಗುತ್ತಾನೆಂದು ಹೇಳಿದೆ. ಈ ಭೈರವ ಭೇಷಜ ರೂಪಿ, ಈ ಸೋಮ ಶಬ್ದಕ್ಕೆ 'ರುಚಿಕರ' ಟೀಕೆಯಲ್ಲಿ 'ಸಹ+ಮಾಯಾ' ಎಂದು ವ್ಯುತ್ಪತ್ತಿ ನೀಡಲಾಗಿದೆ. 'ಪ್ರಕಾಶ' ಟೀಕೆಯ ಪ್ರಕಾರ ಬ್ರಹ್ಮರಂಧ್ರ ಕಾಣುವ ಕಪಾಲಕ್ಕೆ ಬ್ರಹ್ಮಕಪಾಲವೆಂದು ಹೆಸರಂತೆ. ಅದರೊಳಕ್ಕೆ ತತ್ತ್ವಗಳಿಂದ ಕಲ್ಪಿತವಾದ ಚಂದ್ರನಿಂದ ಒಸರುವುದೇ ಸೋಮ ಇಲ್ಲವೆ ಅಮೃತ. ವ್ರತದ ಪಾರಣೆಯ ದಿನ ಅದನ್ನು ಕುಡಿಯಬೇಕು. 'ಚಂದ್ರಿಕಾ' ಎಂಬ ಹೆಸರಿನ ಟೀಕೆಯ ಪ್ರಕಾರ ಕೈಲಾಸದಲ್ಲಿರುವ ಶಿವ ಉಮೆಯೊಡನೆ ಆನಂದ ಪಡೆಯುವಂತೆ ಈಶ್ವರ ವೇಷಧಾರಿಯೂ ರುದ್ರರೂಪಧಾರಿಯೂ ಆಗಿ ಸಾಧಕನನ್ನು ಕಾಂತೆಯೊಡನೆ ಕೈಲಾಸದಲ್ಲಿ ಆನಂದವನ್ನು ಭೋಗಿಸುತ್ತಾನೆ. ಆದ್ದರಿಂದಲೇ ಉಮಾಸಿದ್ಧಾಂತವನ್ನೂ 'ಸೋಮಸಿದ್ಧಾಂತ' ಎಂದು ಕರೆಯಲಾಗಿದೆ. ಆಕುಲ ವೀರತಂತ್ರ, ನ್ಯಾಯದರ್ಶನ ಮೊದಲಾದ ಪರವರ್ತೀ ಗ್ರಂಥಗಳಲ್ಲಿ ಈ ಸೋಮ ಸಿದ್ಧಾಂತದ ಉಲ್ಲೇಖವಿದೆ.

ರಸೇಶ್ವರ ಸಂಪ್ರಾದಾಯ : ಸೋಮ ಸಿದ್ಧಾಂತದಂತೆಯೇ ರಸೇಶ್ವರ ಸಿದ್ಧಾಂತವೂ ಒಂದು ಶೈವ ಸಂಪ್ರದಾಯ. ಈ ಸಂಪ್ರದಾಯದಲ್ಲಿ ಶರೀರ ಸಾಧನೆಗೆ ಮತ್ತು ಅಮರತ್ವ ಪ್ರಾಪ್ತಿಗೆ ವಿಶೇಷ ಮಹತ್ವವಿದೆ. ಇವರ ಪ್ರಕಾರ ಷಟ್ ದರ್ಶನ ಗಳಲ್ಲಿ ಮೃತ್ಯುವಿನ ಬಳಿಕ ಮುಕ್ತಿ ದೊರೆಯುವುದೆಂದು ಹೇಳಿದೆ. ಆದರೆ ಸತ್ತ ಮೇಲೆ ಮುಕ್ತಿ ದೊರೆತರೆಷ್ಟು ? ಬಿಟ್ಟರೆಷ್ಟು ? ಆದ್ದರಿಂದ ನವರಸದ ಮೂಲಕ ಈ ಶರೀರವನ್ನೇ ಅಮರಗೊಳಿಸಲು ಯತ್ನಿಸಬೇಕು. ಈ ನಶ್ವರ ಕಾಯದಿಂದ ಅಮರತ್ವ ಸಾಧನೆಯೆಂತು ? ಎಂದು ಕೇಳಬಹುದು. ಅದಕ್ಕೆ ಉತ್ತರ ಹೀಗಿದೆ : ಆತ್ಮದ ಆರು ಆವರಣಗಳ ಈ ತನು ನಶ್ವರವಾದುದು. ಆದರೆ ಪಾದರಸ ಮತ್ತು ಅಭ್ರಕದ ಮಿಶ್ರಣದಿಂದ ಹರ ಮತ್ತು ಗೌರಿಯಿಂದ ನಿರ್ಮಿತವಾದ ಕಾಯ ಅಮರ ವಾದುದು. ಶಿವ ಸ್ವತಃ ಹೇಳಿದ್ದಾನೆ. ಪಾದರಸ ನನ್ನ ವೀರ್ಯ, ಅಭ್ರಕ ನಿನ್ನ ರಜಸ್ಸು. ಇವೆರಡರ ಸಂಯೋಗದಿಂದ; ಹೇ ಭಗವತೀ, ದಾರಿದ್ರ್ಯ ಹಾಗೂ ಮೃತ್ಯು ಎಂದೆಂದಿಗೂ ನಾಶವಾಗಿ ಬಿಡುತ್ತವೆ.

ರಸೇಶ್ವರ ಸಿದ್ಧಾಂತದ ಪ್ರಕಾರ ಅದೆಷ್ಟೋ ಮಂದಿ ದೇವತೆಗಳು (ಮಹೇಶ), ಶುಕ್ರಾದಿ ದೈತ್ಯರು, ವಾಲಖಿಲ್ಯಾದಿ ಮುನಿಗಳು, ಸೋಮೇಶ್ವರಾದಿ ಸಮ್ರಾಟರು ಮತ್ತು ಗೋವಿಂದ ಭಾಗವತ, ಗೋವಿಂದ ನಾಯಕ, ಕಪಾಲಿ ವ್ಯಾಲಿ, ಮೊದಲಾದ ವರು ಈ ಸಾಧನೆಯಿಂದ ದಿವ್ಯ ಶರೀರವನ್ನು ಪಡೆದರಂತೆ. ಈ ಮತದ ಪ್ರಕಾರ ಸಂಸಾರ ಸಾಗರದಿಂದ ಪಾರು ಮಾಡುವ ರಸವೇ ಪಾರದ (ಪಾದರಸ) ಅದಕ್ಕೆ ಮೂರು ದೆಶೆಗಳಿವೆಯಂತೆ.– ಮೂರ್ಛಿತ, ಮೃತ ಹಾಗೂ ಬದ್ಧ, ಇವು ಪ್ರಾಣದ ದೆಶೆಗಳು ಹೌದು. ಇದರಡೂ ಮೂರ್ಛಿತವಾಗಿದ್ದು ವ್ಯಾಧಿಯನ್ನು ಪರಿಹರಿಸುತ್ತದೆ. ಮೃತ ನಾಗಿ ಬದುಕಿಸುತ್ತವೆ, ಬದ್ಧವಾದರಂತೂ ಅಮರಗೊಳಿಸುತ್ತವೆ.

ರಸ ಪಾದರಸದ ಬೇರೊಂದು ಹೆಸರು. ಏಕೆಂದರೆ ಅದು ಸಾಕ್ಷಾತ್ ಶಿವನ ಶರೀರದ ರಸವಂತೆ (ಮಮದೇಹರಸೋ ಯಸ್ಮಾತ್ ರಸಸ್ತೇನಾಯಮುಚ್ಯತೇ) ಆರ್ದ್ರತೆ ಹಾಗೂ ಗಟ್ಟಿಯಾಗಿರುವ ಮತ್ತು ಹೊಳೆಯುದಿರುವ ಪಾದರಸ ಮೃತಪಾದರಸ ದಂತೆ. ಮೂರ್ಛಿತ ಪಾದರಸದ ಶುದ್ಧಿಯ ಹದಿನೆಂಟು ವಿಧಾನಗಳನ್ನು ಗೋವಿಂದ ಭಾಗವತ ಮತ್ತು ಸರ್ವಜ್ಞ ರಸೇಶ್ವರರು ಹೇಳಿದ್ದಾರೆ ಇವುಗಳಲ್ಲಿ ಪಾದರಸ ಮತ್ತು ವಾಯುವಿನ ಕ್ರಿಯೆ ನಡೆಯುತ್ತದೆ. ಬದ್ಧ ಪಾದರಸ ಪ್ರಾಣದೊಡನೆ ಕೂಡಿದ್ದಾಗ ಉಡ್ಡಯನ ಇಲ್ಲವೆ ಹಾರುವ ಸಿದ್ಧಿ ಲಭಿಸುವುದಂತೆ (ಈ ಸಂಪ್ರಾದಾಯ ಆರಂಭ ಯಾವಾಗ ಆಯಿತು ಎಂಬುದರ ಬಗೆಗೆ ಸ್ಪಷ್ಟ ಉಲ್ಲೇಖಗಳಿಲ್ಲ). ಆಧಿನಾಥನಾದ ಶಿವನೇ ಮೊದಲಿಗೆ ಇದನ್ನು ಉದ್ದೇಶಿಸಿದನಂತೆ. ಆಧಿನಾಥ, ಚಂದ್ರಸೇನ, ನಿತ್ಯಾ ನಂದ, ಗೋರಕ್ಷನಾಥ, ಕಪಾಲಿ, ಭಾಲುಕಿ, ಮಾಂಡವ್ಯ ಮೊದಲಾದ ಯೋಗಿಗಳು ಯೋಗ ಬಲದಿಂದ ಇದನ್ನು ಸ್ಥಾಪಿಸಿದರಂತೆ. ಸರ್ವದರ್ಶನ ಸಂಗ್ರಹದಲ್ಲಿ ಇದರ ಉಲ್ಲೇಖವಿದೆ.

ಗ್ರಂಥಋಣ

1. ಶ್ರೀ ಬಸವೇಶ್ವರರು, ಅಧ್ಯಾಯ 1, ಪುಟ 4 ರಿಂದ 19

2. ಸಿದ್ಧ ಗಂಗಾ ಶ್ರೀ, ಅಧ್ಯಾಯ 180, ಪುಟ 528-539.

3. ಸಿದ್ಧ ಸಾಹಿತ್ಯ–ಎಂ. ಎಸ್. ಕೃಷ್ಣಮೂರ್ತಿ

4. ಕರ್ನಾಟಕದ ಪರಂಪರೆ–ಆರ್. ಆರ್. ದಿವಾಕರ್

5. ಆರ್. ಎನ್. ಬಂಡಾರ್ಕರ್–Vaisnavism, Saivism and other minor religious sects.

6. ಕಪಟರಾಳ್ ಕೃಷ್ಣರಾವ್–ಕರ್ನಾಟಕದ ಲಾಕುಳ ಶೈವರ ಇತಿಹಾಸ.

ಬಾ. ರಾ. ಗೋಪಾಲ

ತಮಿಳು ಸಾಹಿತ್ಯದಲ್ಲಿ ಧರ್ಮಚಿಂತನೆ

ದ್ರಾವಿಡಭಾಷಾವರ್ಗಕ್ಕೆ ಸೇರಿದುದು ತಮಿಳು ಭಾಷೆ. ಸಂಸ್ಕೃತವನ್ನು ಬಿಟ್ಟರೆ ತಮಿಳುಭಾಷೆಯೇ ಭಾರತೀಯಭಾಷೆಗಳಲ್ಲಿ ಅತಿ ಪ್ರಾಚೀನವಾದುದು. ಸಂಸ್ಕೃತವನ್ನು ಯಾವ ಯಾವ ಕಾರಣಗಳಿಗಾಗಿ ಎಷ್ಟುಪ್ರಾಚೀನ ಎಂದು ಭಾವಿಸಲಾಗುತ್ತದೆಯೋ ಅವೇ ಕಾರಣಗಳಿಗಾಗಿ ತಮಿಳನ್ನು ಸಹ ಅಷ್ಟೇ ಪ್ರಾಚೀನವೆಂದು ಪರಿಗಣಿಸಬೇಕು ಎಂದು ವಾದಿಸುವ ಪಂಡಿತರೂ ಇದ್ದಾರೆ.

ತಮಿೞ್ ಎಂಬ ಮಾತು 'ದ್ರವಿಡ' ಶಬ್ದದ ತದ್ಭವವೆಂದು ಕೆಲವರು ಹೇಳುತ್ತಾರೆ. 'ಧೃ'–ಎಂದರೆ ಹೊರದೂಡಿದುದು, ಸಂಸ್ಕೃತದಿಂದ ದೂರ ಮಾಡಿದುದು ಎಂಬ ಧಾತುವಿನಿಂದ ದ್ರವಿಳ–ದ್ರಮಿಡ–ದ್ರವಿಡ ಎಂದು ಪ್ರಯೋಗವಾಗಿದೆ ಎನ್ನುತ್ತಾರೆ. ಸಂಸ್ಕೃತವು ವಡನೊೞಿ, ಎಂದರೆ ಉತ್ತರದ ಭಾಷೆ, ತಮಿಳು ತೆನ್‌ನೊೞಿ, ದಕ್ಷಿಣದ ಭಾಷೆ ಎಂದು ವ್ಯಾಖ್ಯಾನ ಮಾಡಲಾಗಿದೆ. ಇನ್ನೂ ಒಂದು ಅರ್ಥವಿದೆ–'ತಮಿ' ಎಂದರೆ ಪ್ರತ್ಯೇಕ, ಭಿನ್ನ; ತಮಿಳು ಎಂದರೇ ಭಿನ್ನವಾದ ಪ್ರತ್ಯೇಕವಾದ ಸೊಗಡನ್ನುಳ್ಳ ಭಾಷೆ ಎಂಬುದು. ಇವುಗಳಲ್ಲಿ ಸ್ವೀಕಾರಾರ್ಹವಾದುದು ಯಾವುದು ಎಂಬುದರ ಬಗೆಗೆ ಪಂಡಿತರಲ್ಲಿ ಏಕಾಭಿಪ್ರಾಯವಿಲ್ಲ.

ತಮಿಳುಭಾಷೆ ಎಷ್ಟುಪ್ರಾಚೀನ ಎಂಬುದರ ಬಗೆಗೂ ವಿವಾದಗಳಿವೆ. ಇದರ ಮೂಲ ಅಜ್ಞಾತವಾಗಿದೆ. ಎಂದಿನಂತೆ ದಂತಕಥೆಗಳು ಅರ್ಥವಿವರಣೆಗಳನ್ನು ನೀಡುತ್ತವೆ. ಅವುಗಳಂತೆ ತಮಿಳು ಭಾಷೆಯ ರಹಸ್ಯವನ್ನು ಮೊದಲು ಅರಿತವರು ಅಗಸ್ತ್ಯಮುನಿಗಳು. ಇವರ ಹಾಗೂ ಪಾಣಿನಿಗಳ ಸಮಕ್ಷಮದಲ್ಲಿ ಶಿವನು ತನ್ನ ಡಮರುವನ್ನು ಬಾರಿಸಿದಾಗ ಎಡಗಡೆಯಿಂದ ಬಂದ ನಾದ ತಮಿಳು ಮೂಲ, ಬಲಗಡೆಯಿಂದ ಬಂದುದು ಸಂಸ್ಕೃತಮೂಲವಾಗಿ ಪರಿಣಮಿಸಿ ದಕ್ಷಿಣಕ್ಕೆ ಬಂದ ಅಗಸ್ತ್ಯರು ತಾಮ್ರಪರ್ಣಿನದಿಯ ಮೂಲವಾದ ಪೊದಿಯಲ್ ಪರ್ವತದಲ್ಲಿ ತಮಿಳು ವ್ಯಾಕರಣವನ್ನು ರಚಿಸಿದರು. ಇದೇ 'ಅಗತ್ತಿಯಮ್'. ಮೂಲತಃ ಇದರಲ್ಲಿ 12000 ಸೂತ್ರಗಳಿತ್ತೆಂದು ಹೇಳಲಾಗಿದೆ. ಆದರೆ ವಾಸ್ತವಿಕವಾಗಿ ನಮಗೆ ಈಗ ದೊರೆತಿರುವುದೆಲ್ಲ ನಂತರದ ಗ್ರಂಥಗಳಲ್ಲಿ ಕಾಣಿಸಿಕೊಂಡಿರುವ ಇದರ ಭಾಗಗಳು.

ತಮಿಳು ಸಾಹಿತ್ಯದಲ್ಲಿ ಅತಿಪ್ರಾಚೀನವಾದುದನ್ನು ಸಂಘಸಾಹಿತ್ಯವೆಂದು ಗುರುತಿಸುತ್ತಾರೆ. ಇವು ಸಾಹಿತ್ಯಸಂಸ್ಥೆಗಳು. ಇಂತಹವು ಮೂರು ಸಂಘಗಳಿದ್ದುವು. ಈ ಸಂಘಗಳ ಸದಸ್ಯರು ಅಂದಿನ ಸಾಹಿತ್ಯಕೃತಿಗಳನ್ನು ಪರಿಶೀಲಿಸುತ್ತಿದ್ದರು. ಮೊದಲನೆಯ ಸಂಘದಲ್ಲಿ 549 ಸದಸ್ಯರಿದ್ದು 4499 ಗ್ರಂಥಕರ್ತರ ಕೃತಿಗಳು ಇವರ ಒಪ್ಪಿಗೆ ಪಡೆದಿದ್ದುವು. 89 ಪಾಂಡ್ಯ ಅರಸರು ಈ ಮೊದಲ ಸಂಘದ ಆಶ್ರಯದಾತರು. ಇದು 4400 ವರ್ಷಗಳ ಕಾಲ ಅಸ್ತಿತ್ವದಲ್ಲಿತ್ತು. ತಿರುಪುರಮೆರಿತ್ತ (ತ್ರಿಪುರದಹನ ಮಾಡಿದ) ವಿರಿಸೈಕ್ಕಡವುಳ್, ಎಂದರೆ ಶಿವ, ಕುನ್ರವೆರಿಂದ್ದ (ಕ್ರೌಂಚ್‌ಗಿರಿಯನ್ನು ಒಡೆದ) ವೇಲ್‌ಮುರುಗ (ಸುಬ್ರಹ್ಮಣ್ಯ) ಮತ್ತು ಮುರುಂಜಿಯೂರ್ ಮುಡಿನಾಗ ರಾಯರ್ (ಆದಿಶೇಷ) – ಈ ಮೊದಲಸಂಘದ ಪ್ರಮುಖರು. ಅಗಸ್ತ್ಯ ಇದರ ಸ್ಥಾಪಕರಲ್ಲೊಬ್ಬರು. ಇದು ಇದ್ದುದು ಈಗ ಸಮುದ್ರದಲ್ಲಿ ಮುಳುಗಿಹೋಗಿರುವ ಮಧುರೆಯಲ್ಲಿ. ಈಸಂಘಕ್ಕೆ ಇಜೈಯನಾರ್ ಎಂಬ ಹೆಸರಿನ ಕವಿಯ ರೂಪದಲ್ಲಿ ಶಿವನೇ ಬಂದಿದ್ದನೆಂದೂ ಹೇಳಲಾಗಿದೆ. ಎರಡನೆಯ ಸಂಘದ ಕೇಂದ್ರವಾದ ಅಳೈವಾಯ್ (ಕವಾಟಪುರ) ಸಹ ಮುಳುಗಿಹೋಗಿರುವ ಇನ್ನೊಂದು ಪಟ್ಟಣ. ಇದರಲ್ಲಿನ 59ಜನ ಸದಸ್ಯರು 3700 ಗ್ರಂಥಕರ್ತರ ಕೃತಿಗಳನ್ನು ಮಾನ್ಯಮಾಡಿದ್ದರು. 59 ಪಾಂಡ್ಯ ಅರಸರ ಆಶ್ರಯದಲ್ಲಿ 3700 ವರ್ಷಗಳು ಕೆಲಸಮಾಡಿದ ಈ ಸಂಘದ ಅಧ್ಯಕ್ಷರು ಅಗಸ್ತ್ಯರೇ! ಮೊದಲಸಂಘದ ಮಹತ್ತರಕೃತಿಗಳಲ್ಲಿ ಕೆಲವು–ಅಗತ್ತಿಯಮ್, ಪರಿಪಾಟ್ಟು, ಮುದುನಾರೈ, ಮುದುಕರುಹು, ಕಲರಿಯಾವರೈ ಇತ್ಯಾದಿ–ಮಾತ್ರ ಇತರ ಕೃತಿಗಳಲ್ಲಿ ಹೆಸರಿಸಲ್ಪಟ್ಟಿವೆ. ತೊಲ್‌ಕಾಪ್ಪಿಯಮ್, ಇಶೈನುನುಕ್ಕಮ್, ಭೂತಪುರಾಣಮ್, ಕಲಿ, ಕುರುಹು, ವೆಂಡಾಳಿ ಮುಂತಾದವು ಎರಡನೆಯ ಸಂಘದ ಕೃತಿಗಳು. ಇವುಗಳಲ್ಲಿ ತೊಲ್‌ಕಾಪ್ಪಿಯಂ ಮಾತ್ರ ಉಳಿದಿವೆ.

ಮೂರನೆಯಸಂಘ ಉತ್ತರಮಧುರೆಯಲ್ಲಿ ಸ್ಥಾಪಿತವಾಗಿತ್ತು. ನಕ್ಕೀರರ್ ಇದರ ಅಧ್ಯಕ್ಷರು. ಇದರ 49 ಜನ ಸದಸ್ಯರು 449 ಕವಿಗಳ ಕೃತಿಗಳನ್ನು ಪರಿಶೀಲಿಸಿದರು. ಇರೈನಾರ್, ಕಪಿಲರ್, ಶೀತ್ತಲೈ ಶಾತ್ತನಾರ್, ಪಾಂಡ್ಯರ ಅರಸ ಉಗ್ರಪೆರುವಳುದಿ ಮುಂತಾದವರು ಈ ಸಂಘದ ಸದಸ್ಯರಾಗಿದ್ದು. ನೆಡುಂತೊಹೈ, ಕುರುಂತೊಹೈ, ಐಂಗುರುನೂರು, ಪದಿಟ್ರುಪ್ಪತ್ತು, ಪರಿಪಾಡಲ್, ಕೂತ್ತು, ಪೇರ್‌ಇಶೈ, ಶಿಟ್ರಿಶೈ ಇತ್ಯಾದಿಗಳು ಈ ಕಾಲಕ್ಕೆ ಸೇರಿದವುಗಳು.

ಇವು ಪ್ರಾಚೀನ ಸಂಘ ಸಾಹಿತ್ಯವನ್ನು ಕುರಿತು ತಿಳಿದಿರುವ ವಿವರಗಳು. ಆದರೆ ಇವುಗಳ ಐತಿಹಾಸಿಕತೆ ಸಂದೇಹಾಸ್ಪದ. ಕಾಲಮಾನದ ವಿಷಯದಲ್ಲಿಯೂ ತೀವ್ರವಾದ ಭಿನ್ನಾಭಿಪ್ರಾಯಗಳಿವೆ. ಆದರೆ ಸ್ಥೂಲವಾಗಿ ಕ್ರಿ.ಪೂ. 5ನೆಯ ಶತಮಾನ ದಿಂದ ಕ್ರಿ.ಶ. 5ನೆಯ ಶತಮಾನದವರೆಗಿನ ಸಾವಿರವರ್ಷಗಳಲ್ಲಿ ಈ ಸಾಹಿತ್ಯ ರಚನೆ ಯಾಗಿದ್ದಿರಬಹುದೆಂಬುದು ಸ್ವಲ್ಪಮಟ್ಟಿಗೆ ಒಪ್ಪಬಹುದಾದ ಅಭಿಪ್ರಾಯ. ಹಲವಾರು ಗ್ರಂಥಗಳ ಹೆಸರುಗಳನ್ನು ನಂತರದ ಕೃತಿಗಳಲ್ಲಿ ಉಲ್ಲೇಖಿಸಿದೆ. ಕಜಿಲ್

ಗ್ರಂಥದ ಅನುಬಂಧದಲ್ಲಿ ಮೂರನೆಯ ಸಂಘದ 49 ಜನ ಸದಸ್ಯರ ಹೆಸರುಗಳನ್ನು ಅನುಬಂಧವಾಗಿ ಸೇರಿಸಲಾಗಿದೆ. ಜಲಪ್ರಳಯದಿಂದ ಮಧುರೆ, ಕಪಾಲಪುರ ಪಟ್ಟಣಗಳು ನಾಶವಾಗಿ ಮೊದಲೆರಡು ಸಂಘದ ಹೆಚ್ಚುಕಡಿಮೆ ಎಲ್ಲ ಕೃತಿಗಳೂ ಕೊಚ್ಚಿಕೊಂಡುಹೋದುವೆಂದೂ ಹೇಳಿದೆ. ಇವೆಲ್ಲಾ ಒಂದು ದೃಷ್ಟಿಯಲ್ಲಿ ಸಾಂಪ್ರದಾಯಿಕವಾಗಿ ರೂಢಿಯಲ್ಲಿ ಬಂದ ವಿವರಗಳು.

ಅಗತ್ತಿಯಮ್ ಎಂಬುದೊಂದು ಲಕ್ಷಣಗ್ರಂಥ. ಯಾಪ್ಪೆರುಂಗಲಕಾರಿಕೈ ಎಂಬುದು ನಂತರ ಈ ಗ್ರಂಥಕ್ಕೆ ಹುಟ್ಟಿಕೊಂಡ ವ್ಯಾಖ್ಯಾನ. ಇದರಲ್ಲೂ ಇತರ ಗ್ರಂಥಗಳಲ್ಲೂ ಅಗತ್ತಿಯಮ್‌ದಲ್ಲಿನ ಕೆಲವು ಸೂತ್ರಗಳನ್ನು ಹೆಸರಿಸಲಾಗಿದೆ. ತೊಲ್‌ಕಾಪ್ಪಿಯಮ್ ಎಂಬುದೊಂದು ಮೂಲತಃ ವ್ಯಾಕರಣಗ್ರಂಥ ಇದರ ಕರ್ತೃ ಯಾರು ಎಂಬುದು ತಿಳಿಯದೆ, ತೊಲ್‌ಕಾಪ್ಪಿಯರ್ ಎಂದೇ ಅವರನ್ನು ಕರೆದಿದೆ. ಇದು ಲಭ್ಯವಿರುವ ಪ್ರಾಚೀನಗ್ರಂಥ. ಇದರಲ್ಲಿ ವ್ಯಾಕರಣ ಒಂದು ಭಾಗವಾಗಿದ್ದು ಉಳಿದಂತೆ ಆರ್ಥಿಕ ಸಾಮಾಜಿಕ ವಿಷಯಗಳ Econometriecs ನ ವಿವರಗಳನ್ನು ಕಾಣಬಹುದು. ಇದಕ್ಕೂ ಹಿಂದಿನ ತಮಿಳು ಸಾಹಿತ್ಯ ಅನೇಕ ಲೇಖಕರಿಂದ ರಚಿತವಾದ ಕವನಗಳನ್ನೊಳಗೊಂಡಿವೆ.

ಅಗಸ್ತ್ಯರ ಕಾಲದಲ್ಲಿ ತಮಿಳು ಸಾಹಿತ್ಯವನ್ನು-ಮುತ್ತಮಿಪ್-ಇಯಲ್, ಇಶೈ ಮತ್ತು ನಾಟಕ ಎಂಬ ಮೂರು ಭಾಗಗಳಾಗಿ ವಿಂಗಡಿಸಲಾಗಿತ್ತು. ಇಯಲ್ ಎಂಬುದು ಕಾವ್ಯ. ಇಶೈ-ಸಂಗೀತ. ವಂಜಿ, ಕಲಿ, ವೆಣ್, ಆಸಿರಿಯಮ್ ಎಂಬುವು ಆ ಕಾಲದ ಛಂದಸ್ಸುಗಳು. ಅವುಗಳನ್ನು ವಂಜಿಪ್ಪಾ, ಕಲಿಪ್ಪಾ, ವೆಣ್ಪಾ, ಆಸಿರಿಯಪ್ಪಾ ಎಂದು ಕರೆದಿದ್ದು, ಮೊದಲೆರಡು ನಂತರದ ಕಾಲದಲ್ಲಿ ಬಳಕೆಗೆ ಬರಲಿಲ್ಲ. ವೆಣ್ಪಾ, ಆಸಿರಿಯಪ್ಪಾಗಳೂ ಈಗಲೂ ಬಳಕೆಯಲ್ಲಿವೆ. ಕಾವ್ಯ ಶತಮಾನಗಳಲ್ಲಿ ಪ್ರೌಢವಾಗಿ ಬೆಳೆಯಿತು. ಕಳಭ್ರ ಎಂಬ ಜನರು ಸುಮಾರು ಕ್ರಿ. ಶ. 3ರಿಂದ 6ನೆಯ ಶತಮಾನಗಳಲ್ಲಿ ತಮಿಳುನಾಡನ್ನು ಆಕ್ರಮಿಸಿ ತಮಿಳು ಸಂಸ್ಕೃತಿಗೆ ಧಕ್ಕೆ ತಂದರು. ಅವರು ಬಹುಮಟ್ಟಿಗೆ ಅನ್ಯಧರ್ಮೀಯರಾಗಿದ್ದು ಸಂಗೀತ ನಾಟಕಗಳನ್ನು ಸಂಸ್ಕೃತಿಯ ಅಂಗಗಳೆಂದು ಭಾವಿಸದಿದ್ದ ಕಾರಣ, ಆಶ್ರಯ ತಪ್ಪಿ ಈ ಎರಡು ಸಾಹಿತ್ಯ ವಿಭಾಗಗಳು ಕಣ್ಮರೆಯಾದುವು. ಶತಮಾನಗಳನಂತರ ಶೈವಾಚಾರ್ಯರಾದ ತಿರುಜ್ಞಾನಸಂಬಂಧರು ಸಂಗೀತಕ್ಕೆ ಜೀವವಿತ್ತರು ತಮ್ಮ ಹಾಡುಗಳನ್ನು ಸಂಗೀತಕ್ಕೆ ಅಳವಡಿಸಿ ದೇವಾಲಯಗಳಲ್ಲಿ ಅವುಗಳನ್ನು ಹಾಡುವ ಪದ್ಧತಿ ಏರ್ಪಡಿಸಿದುದರಿಂದ ಸಂಗೀತ ಪುನರ್ಜನ್ಮ ಪಡೆದು, 14–15 ನೆಯ ಶತಮಾನಗಳಲ್ಲಿ ಅರುಣಗಿರಿನಾಥರಿಂದಲೂ, 18ನೆಯ ಶತಮಾನದಲ್ಲಿ ಮುತ್ತುತಾಂಡವರ್ ಮುಂತಾದ ಕೃತಿಕಾರರಿಂದಲೂ ವಿಜೃಂಭಿಸಿತು. ಆದರೆ ನಾಟಕ ಬಹುಕಾಲ ಬೆಳೆಯಲೇ ಇಲ್ಲ.

ಸಾಹಿತ್ಯದ ವಸ್ತುದೃಷ್ಟಿಯಿಂದ ಸಂಘ ಕಾವ್ಯವನ್ನು ಅಹಮ್ ಮತ್ತು ಪುರಮ್ ಎಂದು ವಿಂಗಡಿಸಲಾಗಿದೆ. ಈ ವಿಂಗಡಣೆ ನಂತರದ ಕಾಲಕ್ಕೆ ಸ್ವಲ್ಪ ಮಟ್ಟಿಗೆ

ಅನ್ವಯಿಸುತ್ತದೆ. ಆಹವ್ ಎಂಬುದು ಪ್ರೇಮಗೀತೆ, ಶೃಗಾರರಸ ಪ್ರಧಾನವಾದುದು. ಈ ಕೃತಿಗಳಲ್ಲಿನ (ಅಗಪ್ಪೊರುಳ್ ನೂಲ್) ಪ್ರೇಮ ಐದು ಮರು ವಿಂಗಡಣೆಗಳಿಗೊಳಪಟ್ಟಿದೆ—ಪುಣರ್ದಲ್ (ಸಂಭೋಗ ಶೃಂಗಾರ), ಪಿರಿದಲ್ (ವಿಪ್ರಲಂಭ-ಅಗಲಿಕೆ), ಇದುತ್ತಲ್ (ವಿರಹ), ಇರಂಗಲ್ (ಅಳಲನ್ನು ತೋಡಿಕೊಳ್ಳುವುದು), ಮತ್ತು ಊಡಲ್ (ಪ್ರಣಯ). ಇವು ಶೃಂಗಾರದ ಐದು ತಿಣ್ಣೆ, ಎಂದರೆ ಮೆಟ್ಟಿಲುಗಳು. ಈ ಶೃಂಗಾರರಸಗಳಿಗೆ ಹೊಂದಿಕೊಳ್ಳುವಂತೆ ಪ್ರಾಕೃತಿಕ ವರ್ಣನೆಯನ್ನು ಮಾಡುವಾಗ ಕವಿಗಳು ನೆಲವನ್ನು ಕ್ರಮವಾಗಿ ಕುಜ್ಜಿಞ್ಜಿ, ಪಾಲೈ, ಮುಲ್ಲೈ, ನೆಯ್ದಲ್ ಮತ್ತು ಮರುದಮ್ ಎಂದು ವಿಂಗಡಿಸಲಾಗಿದೆ. ಇವು ಬೆಟ್ಟಗುಡ್ಡಗಳ, ಮರುಭೂಮಿಯ, ಅರಣ್ಯದ, ಸಮುದ್ರದ ಮತ್ತು ಹೊಲಗದ್ದೆಗಳುಳ್ಳ ಬಯಲಿನ ಪ್ರದೇಶಗಳು. ಇದು ತಮಿಳು ಸಾಹಿತ್ಯದ ಒಂದು ವೈಶಿಷ್ಟ್ಯ.

ಪುರಮ್ ಜೀವನದ ಬಾಹ್ಯವಾದ ಧರ್ಮಾರ್ಥಗಳಿಗೆ ಸಂಬಂಧಿಸಿದುದು. ಈ ಸಾಹಿತ್ಯ ಸಮಕಾಲೀನ ಸಾಮಾಜಿಕ, ಧಾರ್ಮಿಕ ಸ್ಥಿತಿಗತಿಗಳ ಮೇಲೆ ಬೆಳಕು ಚೆಲ್ಲುವಂತಹುದು. ಸಂಘ ಸಾಹಿತ್ಯದಲ್ಲಿ ಉಪಲಬ್ಧವಿರುವುವೆಲ್ಲ ಬಹುಮಟ್ಟಿಗೆ ಮೂರನೆಯ ಸಂಘದ ಕಾಲದಲ್ಲಿ—ಅವು ಸಹ ಸಂಪೂರ್ಣವಾಗಿ ದೊರೆತಿಲ್ಲ. ನಜ್ಜಿಣೈ, ಕುರುಂದೊಹೈ, ಐಂಗುರುನೂರು, ಕಲಿತ್ತೊಹೈ, ಅಗನಾನೂಱು ಮುಂತಾದವುಗಳೆಲ್ಲ ಆಹವ್ ಸಾಹಿತ್ಯ. ಪರಿಪಾಡಲ್ ಎಂಬುದು 70 ಪದ್ಯಗಳ ಸಂಕಲನ. ಇವುಗಳಲ್ಲಿ 8 ವಿಷ್ಣುವಿನ ಪರವಾಗಿ, 31 ಮುರುಗನನ್ನು ಕುರಿತು ಇವೆ. ಉಳಿದವು ಮಧುರಾ ಪಟ್ಟಣ, ವೈಗೈ ನದಿ ಇತ್ಯಾದಿಗಳ ವರ್ಣನೆಗೆ ಮೀಸಲಾಗಿವೆ. 'ಪದಿನೆಣ್ ಕೀಳ್ ಕಣಕ್ಕು' ಎಂಬುದೊಂದು 18 ಕಿರುಕಾವ್ಯಗಳ ಸಮೂಹ. ಇವುಗಳಲ್ಲಿ ನಾಲಡಿಯಾರ್ ಎಂಬುದು ಚೌಪದಿಯಲ್ಲಿ—ನಾಲ್ಕು ಅಡಿಗಳಲ್ಲಿ—ಇದೆ. ಪಾಂಡ್ಯ ಅರಸನ ಆಸ್ಥಾನದಲ್ಲಿ ಆಶ್ರಯ ಪಡೆದಿದ್ದ 8000 ಜಿನಮುನಿಗಳು ತಮ್ಮ ಸ್ಥಳಗಳಿಗೆ ಹಿಂದಿರುಗುವಾಗ ತಮ್ಮ ವಸತಿ ಸ್ಥಳದಲ್ಲಿ ಒಂದೊಂದು ಬಿಡಿ ಪದ್ಯವನ್ನು ಬರೆದಿಟ್ಟಿದ್ದ ಓಲೆಗರಿಗಳನ್ನು ಬಿಟ್ಟು ಹೋಗಿದ್ದರು. ಅವುಗಳಲ್ಲಿ ಉಳಿದಿರುವುದು 400 ಮಾತ್ರ. ಇವುಗಳನ್ನು ಪದ್ಮನಾರ್ ಎಂಬಾತ ಸಂಕಲಿಸಿದ್ದು ಇವುಗಳಲ್ಲಿ 13 ಅಧಿಕಾರಗಳು ಧರ್ಮಕ್ಕೆ ಸಂಬಂಧಿಸಿದವುಗಳು. ವಿಳಂಬಿ ನಾಗನಾರ್ ಎಂಬ ವೈಷ್ಣವ ಕವಿಯ ಕೃತಿ ನಾನ್ಮಣಿಕ್ಕಡಿಗೈ. ಮಣಿಗಳಂತಹ ನಾಲ್ಕು ಸಾಲನ್ನುಳ್ಳ ಪದ್ಯಗಳಲ್ಲಿ ನಾಣ್ಣುಡಿಗಳ ಮೂಲಕ ಅಮೂಲ್ಯವಾದ ನೀತಿ ಪ್ರತಿಪಾದನೆಯನ್ನು ಮಾಡಿದೆ. ಎಂತಲೇ ನಾಲ್ಕು ರತ್ನಗಳಡಗಿದ ಆಭರಣ. ಮದುರೆಯ ಪೂದನ್ (ಬೂತನ್) ಶೇನ್ದನಾರ್ ಎಂಬಾತ ರಚಿಸಿದ 40 ವೆಣ್ಬಾ ಪದ್ಯಗಳ ಇನಿಯದು ನಾಱ್ಪದು ಸ್ವಾರಸ್ಯಪೂರ್ಣವಾದ ಲೋಕನೀತಿವಾಕ್ಯಗಳನ್ನೊಳಗೊಂಡಿವೆ-ಇದರಂತೆಯೇ ಕಪಿಲರು ರಚಿಸಿದ-ಇನ್ನಾನಾಱ್ಪದು ಮಾನವನ ಹಿತಾಹಿತ ವಿಚಾರಗಳಿಗೆ ಸಂಬಂಧಿಸಿದುದು. ಧರ್ಮಾರ್ಥಗಳಿಗೆ ಸಂಬಂಧಿಸಿದ ಸಾಹಿತ್ಯಗಳಿವು.

ತಮಿಳು ಸಾಹಿತ್ಯದ ಮೊದಲ ಹಂತವನ್ನು ಕುರಿತಂತೆ ಈ ಹಿನ್ನೆಲೆಯನ್ನು ರೂಪಿಸಲಾಗಿದೆ. ಇಲ್ಲಿ 'ಸಾಹಿತ್ಯದಲ್ಲಿ ಧರ್ಮ ಚಿಂತನೆ' ಎಂಬ ಮಾತಿನ ಅರ್ಥವನ್ನೇ ಸ್ವಲ್ಪ ವಿವರಿಸಬೇಕು. ಧರ್ಮ ಎಂಬುದು ಕೇವಲ ಮತೀಯ ವಿಷಯಗಳಿಗೆ ಸಂಬಂಧಿಸಿದ ಮಾತಾಗಿರದೆ, ಜೀವನದ ಮೌಲ್ಯ, ಹಿತಾಹಿತಗಳ ವಿವೇಚನೆ, ಆಚಾರ ವ್ಯವಹಾರಗಳಲ್ಲಿ ಪರಿಶುದ್ಧತೆ ಮುಂತಾದವುಗಳನ್ನೂ ಒಳಗೊಂಡಿರುತ್ತವೆ. ತಮಿಳು ಸಾಹಿತ್ಯದ ಆರಂಭದ ಪುರಮ್ ಸಾಹಿತ್ಯದಲ್ಲಿ ನಾವು ವಿಶೇಷವಾಗಿ ಕಾಣುವುದು ಈ ನೀತಿಗೆ ಸಂಬಂಧಿಸಿದ ಕೃತಿಗಳು. ಮೇಲೆ ಹೇಳಿದಂತೆ, ವಿಷ್ಣುವಿನ, ಮುರುಗನ, ಶಿವನ ವರ್ಣನೆಗಳನ್ನು ಇವುಗಳಲ್ಲಿ ಕಾಣಬಹುದಾದರೂ ಹೆಚ್ಚು ಪ್ರಾಶಸ್ತ್ಯ ನೀಡಿರುವುದು ಸದಾವಳಿ ಎಂಬ ಅರ್ಥದ ಧರ್ಮಕ್ಕೆ. ಭಕ್ತಿಪಂಥ ತಮಿಳುನಾಡಿನಲ್ಲಿ ನಂತರ ಬೆಳೆಯಿತು. ಅದು ಸಮಗ್ರ ದಕ್ಷಿಣ ಭಾರತವನ್ನೇ ಆವರಿಸಿತಲ್ಲದೆ ಉತ್ತರ ಭಾರತಕ್ಕೂ ಹಬ್ಬಿತು. ತಮಿಳು ಸಾಹಿತ್ಯದಲ್ಲಿ, ಈ ಕಾರಣದಿಂದ ಭಕ್ತಿ ಸಾಹಿತ್ಯಕ್ಕೆ ವಿಶಿಷ್ಟ ಸ್ಥಾನವಿದೆ. ಇದು ವಿಪುಲವಾಗಿಯೂ ಇದೆ. ಇವುಗಳನ್ನೆಲ್ಲಾ ಇಲ್ಲಿ ವಿವೇಚಿಸುವುದು ಕಾಲಮಿತಿಯಿಂದ ಅಸಾಧ್ಯವಾದ ವಿಷಯ. ಆದರೆ ದ್ರಾವಿಡ ಭಾಷೆಗಳಲ್ಲಿ ತಮಿಳಿನಲ್ಲಿ ಭಕ್ತಿ ಸಾಹಿತ್ಯಕ್ಕೆ ಲಭಿಸಿದ ಸ್ಥಾನ ಇತರ ಭಾಷೆಗಳಲ್ಲಿ ಕನ್ನಡ, ತೆಲುಗು–ಲಭಿಸಲಿಲ್ಲ. ಬಹುವ್ಯಾಪ್ತಿಯುಳ್ಳ ಈ ಸಾಹಿತ್ಯ ನೆರೆಯ ಕನ್ನಡ, ತೆಲುಗು ಭಾಷಾ ಸಾಹಿತ್ಯಗಳ ಮೇಲೂ ತನ್ನ ಗಾಢವಾದ ಪರಿಣಾಮವನ್ನು ಬೀರಿತು.

ಪುರನಾನೂಱುವಿನಲ್ಲಿ 400 ಕವಿತೆಗಳಿವೆ. ಪುಱಮ್, ಪುಱಪ್ಪಾಟ್ಟು–ಇದರ ಇನ್ನೆರಡು ಹೆಸರುಗಳು. ಹಿಂದಿನ ಚೇರ, ಚೋಳ, ಪಾಂಡ್ಯ ವಂಶದ ಅರಸರ, ಅಧಿಕಾರಿಗಳ, ಕವಿಗಳ ಕಥೆಗಳಿರುವ ಇದರಲ್ಲಿ ಸುಮಾರು ಎರಡುಸಾವಿರ ವರ್ಷಗಳ ಹಿಂದಿನ ತಮಿಳುನಾಡಿನ ಸಮಾಜದ ಚಿತ್ರಣವಿದೆ. ಇದರಲ್ಲಿ ಪ್ರಸಿದ್ಧವಾದದ್ದು ಕಣಿಯನ್ ಪೂಂಗುನ್ರನ

ಯಾದುಂ ಊರೇ ಯಾವರುಂ ಕೇಳೀರ್
ತೀದುಂ ಎನ್ಱುಮ್ ಪಿಯರ್‌ಚರವಾರಾ
ನೋಡಲುವಮ್ ತಣಿತಲುವಮ್ ಅವಟ್ರೇರಣ್ಣ
ಚೌದಲುವಮ್ ಪುದುವದು ಅನ್ರೇವಾಟ್ಟಿಲ್

ಎಂದು ಆರಂಭಿಸುವ ಪದ್ಯ

ಯಾವುದೇ ಊರಾದರೂ ನನ್ನದೇ ಪ್ರಪಂಚವೆಲ್ಲ ನನಗೆ ಸಂಬಂಧಿಸಿದುದು. ಒಳಿತು, ಕೆಡುಕುಗಳು ಇನ್ನೊಬ್ಬರಿಂದಾಗುವುದಲ್ಲ. ಸಾವು ಎಂದೆಂದಿಗೂ ಇದ್ದದ್ದೇ. ಅಸ್ತಿತ್ವ ಮಧುರವೂ ಅಲ್ಲ. ಕಹಿಯೂ ಅಲ್ಲ. ವಿಧಿರೂಪಿಸಿದಂತೆ ಜೀವನ ಸಾಗುತ್ತದೆ. ಮೇಲಿನವರಿಗೆ ಬಾಗುವುದು, ಕೆಳಗಿನವರನ್ನು ಹೀಯಾಳಿಸುವುದೂ ನಾವು ಮಾಡಲಾಗದು, ಮಾಡಬಾರದುದು. ಇದು ಪುರನಾನುಱಿನಲ್ಲಿ ಕಾಣಿಸುವ ನೀತಿ ವಾಕ್ಯ.

ಪತ್ತುಪ್ಪಾಟ್ಟು, ಹೆಸರೇ ಸೂಚಿಸುವಂತೆ ಹತ್ತುಹಾಡುಗಳ, ದೀರ್ಘಕವನಗಳ-ಸಂಕಲನ. ನಕ್ಕೀರಾರ್ ಮತ್ತು ರುದ್ರನ್ ಕಣ್ಣನಾರ್ ಎಂಬಿಬ್ಬರು ಎರಡೆರಡು ಕವನಗಳನ್ನು ರಚಿಸಿದ್ದಾರೆ. ನಕ್ಕೀರಾರರ 'ತಿರುಮುರುಗಾಱ್ಱುಪ್ಪಡೈ'ಯಲ್ಲಿ ಕಾರ್ತಿಕೇಯನ ಅವತಾರವರ್ಣನೆಗಳಿವೆ. 'ಪೆರುಂಬಾಣಾಱ್ಱುಪ್ಪಡೈ ಕಡಿಯಲೂರ್ ಕಣ್ಣನಾರ್‌ರದು. ಕಾಂಚೀ ಪಟ್ಟಣದ ಅಲ್ಲಿನ ಜನರ ವೈಭವ, ಆಚಾರ ವ್ಯವಹಾರಗಳನ್ನು ಇವುಗಳಲ್ಲಿ ಕಾಣಬಹುದು. ಪ್ರಾಚೀನ ತಮಿಳು ಸಾಹಿತ್ಯದಲ್ಲೀ ಅತಿ ಪ್ರಸಿದ್ಧವಾದುದು ಕುಱಳ್. ಶ್ರೀ—ತಿರು—ಎಂಬುದನ್ನು ಸೇರಿಸಿ ತಿರುಕ್ಕುಱಳ್ ಎನಿಸಿದೆ. ಕುಱಳ್ ಎಂಬುದು ಕುಱಳ್ ವೆಣ್ಬಾ ಎಂಬ ಛಂದಸ್ಸಿನ ಹೆಸರು ಇದಕ್ಕೆ ಬಂದಿದೆ. ಅರುಳ್, ಪೊರುಳ್, ಇನ್ಬಮ್,—ಧರ್ಮ, ಅರ್ಥ, ಕಾಮ—ಎಂಬ ಮೂರು ವಿಭಾಗಗಳಿವೆ. ವಿಡು-ಮೋಕ್ಷ-ದ ಪ್ರತಿಪಾದನೆ ಇದರಲ್ಲಿಲ್ಲ. ಆದಕ್ಕೆ ಇದನ್ನು ಮುಪ್ಪಾಲ್-ತ್ರಿವರ್ಗ-ಎಂದು ವರ್ಣಿಸಲಾಗಿದೆ. ಅಱತ್ತುಪ್ಪಾಲ್, ಪೊರುಪ್ಪಾಲ್, ಕಾಮತ್ತುಪ್ಪಾಲ್, 3 ಅಥವಾ 4 ಪಾದಗಳ ಎರಡು ಸಾಲುಗಳ ಕವನಗಳು ಇದರಲ್ಲಿವೆ. ಒಂದೊಂದು ಅಧ್ಯಾಯದಲ್ಲೂ 10 ಪದ್ಯಗಳು 133 ಅಧ್ಯಾಯಗಳ 3 ಭಾಗಗಳಿವೆ. ಮೊದಲ ಭಾಗದಲ್ಲಿ ದೇವಸ್ತುತಿಯನ್ನು ಪರೋಕ್ಷವಾಗಿ ಸುತ್ತು ಬಳಸು ಪದಗಳಲ್ಲಿ ಕಾಣಬಹುದು.

ಈ ಕುಱಳಿನ ಕರ್ತೃ ಯಾರು ? ಆತನ ಕಾಲ ಯಾವುದು ? ಯಾವ ಧರ್ಮಕ್ಕೆ ಸೇರಿದಾತ? ಪರಮಾತ್ಮನನ್ನು ಕುರಿತಂತಹ ಪ್ರಶ್ನೆಗಳು ಸಂದೇಹಗಳು ಇವು. ಜೈನರ ಕುಂದಕುಂದಾಚಾರ್ಯ ಇದರ ಕರ್ತೃ ಎಂದು ಕೆಲವರ ಅಂಬೋಣ. ಶೈವನೆಂದು ಕೆಲರು, ನೇಕಾರನೆಂದು ಹಲರು, ನೇಗಿಲ ಯೋಗಿ ಎಂದು ಇತರರು. ವಳ್ಳುವರು ಎಂಬುವೊಂದು ವರ್ಗ. ಈ ವರ್ಗಕ್ಕೆ ಸೇರಿದಾತ-ತಿರುವಳ್ಳುವರ್, ಎಂಬುದು ಬಹುಮಟ್ಟಿಗೆ ನಂಬಲಾದ ಅಭಿಪ್ರಾಯ. ಇವರು ಅರಸರ ಮುಂದೆ ನಗಾರಿ ಬಾರಿಸುವ ಹುದ್ದೆಯನ್ನು ಹೊಂದಿದ್ದು ಸಾಮಂತರೆನ್ನಬಹುದು. ಸುಮಾರು ಕ್ರಿ.ಶ. 250 ರಿಂದ 350ರವರೆಗಿನ ಕಾಲದಲ್ಲಿದ್ದಾತನೆಂಬುದೊಂದು ಊಹೆ. ಇವು ಹೇಗಿದ್ದರೂ, ತಮಿಳಿನ ಪುರಮ್ ಸಾಹಿತ್ಯದ ಶ್ರೇಷ್ಠ ಕೃತಿ. ವಿಶ್ವದ ಎಲ್ಲ ಭಾಷೆಗಳಿಗೂ ಅನುವಾದಿತವಾಗಿದೆ. ಇದರಲ್ಲಿನ ನೀತಿ, ಜ್ಞಾನ, ವೈರಾಗ್ಯ ಪಾಠಗಳು ಸಪ್ತಸಾಗರಗಳನ್ನೂ ಸಾಸುವೆಯಲ್ಲಿಡಗಿಸಿದಂತಿದೆ.

ಕಡುಗೈತ್ತೊಳೈತ್ತೇೞ್ ಕಡಲೈಪ್ಪುಗಟ್ಟಿ ಕುಱುಗತ್ತಱಿತ್ತ ಕುಱಳ್	ಸಾಸಿವೆಯಷ್ಟರ ಕೊಡದಲ್ಲಿ ಏಳುಕಡಲುಗಳಷ್ಟು ವಿಷಯಗಳನ್ನು ಹೊಗಿಸಿ ಅಡಗಿಸಿದ್ದಂತಹುದು

ಎಂದಿದ್ದಾನೆ ಒಬ್ಬ ವ್ಯಾಖ್ಯಾನಕಾರ.

ಇವರ ಮೊದಲ ಭಾಗ ಅಱತ್ತುಪ್ಪಾಲ್, ಮೊದಲ ಪದ್ಯವೇ ಒಂದು ಆಣಿಮುತ್ತು

ಅಗರ ಮೊದಲೆಲುತ್ತೆಲ್ಲಾಮ್ ಆದಿಬಗವನ್ಮುದತ್ತೇಯುಲಗು ಈ ಭಗವಂತ	ಮೊದಲಕ್ಷರ ಅಕಾರ. ಇದು ಎಲ್ಲಕ್ಕೂ ಆದಿ. ಅಂತೆಯೇ ಈ ಲೋಕಕ್ಕೇ ಆದಿ. ಭಗವನ್–ಕಾರಣ
ಪಿಱವಿಪ್ಪೆರುಙ್ಕಡಲ್ನೀಙ್ದುವರ್ ನೀಂದಾರ್ ಇಱೈವನಡಿ ಶೇಲಾದಾರ್	ಸಂಸಾರವೆಂಬ ಸಾಗರವನ್ನು ದಾಟಿಸುವವನು ಈತ. ಈತನ ಅಡಿಯನ್ನು ಸೇರದಿದ್ದವರು, ಇದನ್ನು ದಾಟಲಾಗದವರು

ಜಗತ್ತಿಗೆ ಮಳೆ ಪ್ರಧಾನ. ಇದಿಲ್ಲದೇ ಜೀವಲೋಕವಿಲ್ಲ. ಮಳೆಯನ್ನು ಕುರಿತಂತೆಯೇ ಹಲವಾರು ಕುಱಳುಗಳಿವೆ. ಇದು ನೋಡಿ:

ಕೆಡುಪ್ಪದೂ ಉಙ್ಗಟ್ಟಾರ್ಕ್ಕು ಚಾರ್ವಾಯ್ ಮಱ್ಱಾಙ್ಗೆಯೆಡುಪ್ಪದೂ ಉಮೆಲ್ಲಾ ಮಳೆ	ಕೆಡಸುವುದು, ಕೆಟ್ಟವರಿಗೆ ನೆರವಾಗಿ ಮತ್ತ ಎತ್ತುವುದೂ, ಎಲ್ಲಾ ಮಳೆಯೇ

ಧರ್ಮಕ್ಕೆ ಹಲವಾರು ವಿವರಣೆಗಳು. ಧರ್ಮ ಎಂಬುದನ್ನು ಹೀಗೆ ಅರ್ಥೈಸಲಾಗಿದೆ.

ಮನತ್ತುಕ್ಕಣ್ ಮಾಶಿಲನ್ ಆದಲ್ ಅನೈತ್ತು ಅದನ್ ಆಕುಲನೀಱಪಿಱ	ಕಲ್ಮಶವಿಲ್ಲದ ಹೃದಯವಿಲ್ಲದ್ದು ನಿಜವಾದ ಧರ್ಮ, ಉಳಿದುವೆಲ್ಲ ಕೇವಲ ಆಡಂಬರ

ಕೆಲವು ಇರಬೇಕಾದ, ಕೆಲವು ಇಲ್ಲದಿರಬೇಕಾದ ಗುಣಗಳು. ಕೆಲವನ್ನು ಇಟ್ಟುಕೊಳ್ಳಬೇಕು. ಇನ್ನು ಕೆಲವನ್ನು ತ್ಯಜಿಸಬೇಕು. ತೊರೆದು ನಡೆಯಬೇಕಾದವುಗಳು

ಅಱುಕ್ಕಾಱವಾವೆಗುಳಿಯಿನ್ನಾ ಚೊನ್ನಾನ್ಗುಂ ಇಱುಕ್ಕಾಇಯನ್ನದಱಮ್	ಹೊಟ್ಟೆಕಿಚ್ಚು, ಆಸೆ, ಸಿಟ್ಟು, ಕಠಿಣ ವಾಕ್ಯಗಳು ಈ ನಾಲ್ಕನ್ನು ತೊರೆದು ನಡೆಯುವುದೇ ಧರ್ಮ.

ಒಳ್ಳೆಯ ಬಾಳಿಗೆ ಧರ್ಮಯುತ ನಡವಳಿಕೆಯ ಜೊತೆಗೆ ಪ್ರೇಮವೂ ಅವಶ್ಯ.

ಅನ್ಬುಮಱನುಮುಡೈತ್ತಾಯಿ ನಿಲ್ವಾಟ್ಕ್ಕೈ ಪಣ್ಬುಂ ಪಯನುಮದು	ಪ್ರೇಮ, ಧರ್ಮ ಇದ್ದರೆ ಮನೆಯ ಬಾಳು ಗುಣ ಫಲಗಳನ್ನುಳ್ಳಂತಹುದಾಗುತ್ತದೆ.

ಹೆಣ್ಣನ್ನು ಕುರಿತು

ಶಿಱೈಗಾಕ್ಕುಂಗಾಪ್ಪು ಎವನ್ ಶೆಯ್ಯುಮ್ಮಗಳಿರ್
ನಿಱೈಗಾಕ್ಕುಂಗಾಪ್ಪೇತಲೈ ಎಂದು ಹೇಳಿದೆ.

ಹೆಣ್ಣಿಗೆ ಮನಃಸ್ಥೈರ್ಯವಿದ್ದರೆ ಅದೊಂದು ವಿಶಿಷ್ಟ ಲಕ್ಷಣ.

ಪ್ರೀತಿ ಎಂಬುದು ಒಂದು ಗುಣ. ತ್ಯಾಗ ಅದರ ಲಕ್ಷಣ.

ಅನ್ಬಿಲಾರೆಲ್ಲಾನ್ ತಮಕ್ಕುರಿಯರ್ ಅನ್ಬುಡೈಯಾರ್
ಎನ್ಬುವಮ್ ಮುರಿಯರ್ ಪಿಱರ್ಕ್ಕು

ಒಲವಿಲ್ಲದವರು ಎಲ್ಲವೂ ತಮಗೇ ಎನ್ನುತ್ತಾರೆ. ಆದರೆ ಒಲವುಳ್ಳವರು ಎಲ್ಲವೂ ಪೆಱರಿಗೆ ಎನ್ನುತ್ತಾರೆ. ಈ ಕುರಳುಗಳೊಂದೊಂದಕ್ಕೂ ಪುರಾಣಗಳಿಂದ ಆಯ್ದ ಉದಾಹರಣೆಗಳನ್ನು ನಂತರ ಕೊಡಲಾಗಿದೆ. ಆ ಪೌರಾಣಿಕ ಕಥೆಗಳ ಹಿನ್ನೆಲೆಯಲ್ಲಿ ಈ ನೀತಿವಾಕ್ಯಗಳು ಹೆಣೆಯಲ್ಪಟ್ಟಿವೆ. ಪ್ರಸ್ತುತ ಈ ಕುರಳಿನ ಹಿನ್ನೆಲೆಯಲ್ಲಿ ದಧೀಚಿಯ ಕಥೆ ಇದೆ. ಇಂದ್ರನಿಗೆ ಶತ್ರುಗಳ ದಮನಕ್ಕಾಗಿ ಸೂಕ್ತವಾದ ಆಯುಧ ಬೇಕಾಗಿತ್ತು. ತನ್ನ ತಪಃಶಕ್ತಿಗಳಿಂದ ಬಲವನ್ನು ಒಟ್ಟುಗೂಡಿಸಿರುವ ದಧೀಚಿ ಮಹರ್ಷಿಯನ್ನು ಪ್ರಾರ್ಥಿಸೆಂದು ಇಂದ್ರನಿಗೆ ಸೂಚಿಸಲಾಯಿತು. ಹಾಗೆ ಪ್ರಾರ್ಥಿಸಲ್ಪ ದಧೀಚಿ, ಅದರಿಂದ ತನ್ನ ಜೀವಕ್ಕೇ ಹಾನಿ ಎಂಬುದನ್ನರಿತಿದ್ದರೂ ಪ್ರೀತಿಯಿಂದುಂಟಾದ ತ್ಯಾಗದಿಂದ ತನ್ನ ಬೆನ್ನೆಲುಬನ್ನೇ ಇಂದ್ರನಿಗಿತ್ತ ಕಥೆಯ ಛಾಯೆ ಇಲ್ಲಿದೆ.

ವಳ್ಳುವರ್ ಹೇಳುತ್ತಾರೆ.

ಇನಿಯವುಳವಾಗ ಇನ್ನಾದಕೂರಲ್
ಕನಿಯಿರುಪ್ಪ ಕಾಯ್ಗವರ್ನ್ದಱ್ಱು

ಒಳ್ಳೆಯ ಮಾತನಾಡುವುದು ಧರ್ಮ. ಹಾಗಿಲ್ಲದೆ ಕಟುನುಡಿ ಆಡುವುದು ಹಣ್ಣು ಬಿಟ್ಟು ಕಸುಗಾಯಿ ತಿಂದಂತೆ. ಮನುಷ್ಯನಿಗೆ ಸಂಯಮ ಅವಶ್ಯಕ. ಯಾವುದನ್ನು ಅಡಗಿಸದಿದ್ದರೂ ನಾಲಗೆಯನ್ನು ಮಾತ್ರ ಅಡಗಿಸಲೇಬೇಕು.

ಯಾ ಕಾವರಾಯಿನು ನಾಕಾಕ್ಕು ಕಾವಾಕ್ಕಾಲ್
ಶೋ ಕಾಪ್ಪರ್ ಶೊಲ್ಲಿಟುಕ್ಕಪ್ಪಟ್ಟು

ಬೆಂಕಿಯಿಂದ ಸುಟ್ಟ ಹುಣ್ಣು ಆರುತ್ತದೆ. ಆದರೆ ನಾಲಗೆ ಸುಟ್ಟುದರ ಕಲೆಯೂ ಆರುವುದಿಲ್ಲ.

ತೀಯಿನಾಲ್ ಚುಟ್ಟಪುಣ್ಣುಳ್ಳಾಱುಗುಮ್
ಆಱಾದೇ ನಾವಿನಾಲ್ ಚುಟ್ಟವದು.

ಮುಖಸ್ತುತಿಮಾಡಿ ಬೆನ್ನಲ್ಲಿ ಹಳಿಯುವುದು ಕೆಲವರ ಸ್ವಭಾವ. ಆದರೆ ಹಿಂದೆ ಹಳಿದು ಎದುರಿಗೆ ಹೊಗಳುವುದು ಅತಿಕೆಟ್ಟ ಸ್ವಭಾವ.

ಅಜಿನಟೀಯಲ್ಲವೈ ಕೈಯ್ದಲಿನ್‌ತೀದೇ
ಪುಜಿನಟೀ ಪ್ಪೊಯ್ತು ನಹೈ
ಪುಜಿಂಗೂರಿ ಪ್ಪೊಯ್ತು ಉಯಿಲ್‌ವಾಲ್ದಲಿಜ್ಜಾದಲ್
ಅಜಿಂಗೂರು ಮಾಕ್ಕನ್ದರುಮ್

ಹೀಗೆಮಾಡಿ ಹೊಟ್ಟೆಹೊರೆಯುವುದಕ್ಕಿಂತ ಸಾಯುವುದು ಮೇಲು

ಇವು ಕೆಲವು ತಿರುಕುಜಳಿನ ಅಣಿಮುತ್ತುಗಳು. ಇಲ್ಲಿ ನಾವು ಕಾಣುವುದು ನೀತಿ ಪಾಠಗಳು. ಆಗ ಈ ನೀತಿಬೋಧೆಗೆ ಪ್ರಾಶಸ್ತ್ಯವಿತ್ತು. ಬಹುಶಃ ಜೈನ-ಬೌದ್ಧಧರ್ಮಗಳ ಪ್ರಭಾವವೂ ಸ್ವಲ್ಪಮಟ್ಟಿಗೆ ಇಲ್ಲಿ ಕಾಣಿಸಿಕೊಳ್ಳಬಹುದು. ಅವೆರಡೂ, ಅದರಲ್ಲಿಯೂ ವಿಶೇಷವಾಗಿ ಬೌದ್ಧಧರ್ಮ, ಪರತತ್ವಕ್ಕಿಂತ ಧರ್ಮಯುತ-ನೀತಿಯುತ-ಬಾಳಿಗೆ ಹೆಚ್ಚಿನ ಒತ್ತುಕೊಟ್ಟಿದ್ದುವು.

5-10ನೆಯ ಶತಮಾನಗಳಲ್ಲಿ ಅಸ್ತಿತ್ವಕ್ಕೆ ಬಂದುವು ಐಪ್ಪೆರುಜ್‌ಕಾಪ್ಪಿಯಂ-ಐದು ಮಹಾಕಾವ್ಯಗಳು. ಇವು ಶಿಲಪ್ಪದಿಕಾರಮ್, ಮಣಿಮೇಖಲೈ, ಜೀವಕ ಚಿಂತಾಮಣಿ, ಕುಂಡಲಕೇಶಿ ಮತ್ತು ವಳಯಾಪತಿ. ಕೊನೆಯ ಎರಡು ಸಂಪೂರ್ಣವಾಗಿ ಲಬ್ಧವಾಗಿಲ್ಲ. ಕೆಲವು ತುಣುಕುಗಳುಮಾತ್ರ ಉಳಿದು ಬಂದಿವೆ. ಇವಲ್ಲದೆ ಐದು 'ಶಿರು' ಕಾವ್ಯಗಳು-ನೀಲಕೇಶಿ, ಚೂಡಾಮಣಿ, ಯಶೋಧರ ಕಾವ್ಯಮ್, ಉದಯಣನ್ ಕತೈ ಮತ್ತು ನಾಗಕುಮಾರಕಾವ್ಯಮ್. ಈ ಕೊನೆಯದು ಉಪಲಬ್ಧವಿಲ್ಲ. ಉದಯನನ ಕಥೆಯನ್ನೇ ಪಡೆದ, ಬಹುಮಟ್ಟಿಗೆ ಗಂಗರ ದುರ್ವಿನೀತನ ಬೃಹತ್ಕಥೆಯನ್ನು ಆಧರಿಸಿದುದೆನ್ನಲಾದ 'ಪೆರುಂಗತೈ' ಸಹ ಈ ಸಾಲಿಗೆ ಸೇರುತ್ತದೆ.

ಶಿಲಪ್ಪದಿಕಾರಮ್‌ನ ಕರ್ತೃ ಇಳಂಗೋಅಡಿಗಳ್, ನೂಪುರದ ಕತೆಇದು. ಚೋಳ, ಪಾಂಡ್ಯ, ಚೇರ ಅರಸರ ರಾಜಧಾನಿಗಳಾದ ಪುಹಾರ್ (ಕಾವೇರಿ ಪಟ್ಟಿಣಮ್), ಮಧುರೈ ಮತ್ತು ವಂಜಿಗಳಲ್ಲಿ ಈ ಕಥೆ ಆರಂಭವಾಗಿ ಮುಗಿಯುತ್ತದೆ. ಕಥೆಯ ವಿವರಗಳು ಇಲ್ಲಿ ಅನವಶ್ಯಕ. ಆದರೆ ಅದರಲ್ಲಿ ನಾಯಕಿಯಾದ ಕನ್ನಗಿ ದೈವತ್ವಕ್ಕೇರಿಸಲ್ಪಡುತ್ತಾಳೆ, ಮಾರಿ, ಸೆಲ್ಲಿ, ದ್ರೌಪದಿ ಮುಂತಾದ ದೇವತೆಗಳೂ ಕಾಣಿಸಿಕೊಂಡು ಕನ್ನಗಿ ಎಂಬ ಹೊಸ ಉಪಾಸನಾಪಂಥವೇ ಆರಂಭವಾಗುತ್ತದೆ. ಚೇರವಂಶದ ಅರಸನಾದ ಶೆಂಗುಟ್ಟುವನ್ ಉತ್ತರದಿಂದ ಒಂದು ಶಿಲೆಯನ್ನು ತರಿಸಿ ಕನ್ನಗಿಯ ವಿಗ್ರಹವನ್ನು ಕೊರೆಸಿ ಪ್ರತಿಷ್ಠಿಸುತ್ತಾನೆ. ನಂತರ ಸಿಂಹಳದ ಅರಸನಾದ ಗಜಬಾಹು ಈ ಪಂಥವನ್ನು ತನ್ನ ದೇಶದಲ್ಲಿ ಪ್ರಚುರಗೊಳಿಸುತ್ತಾನೆ. ಈಗ ಕನ್ನಗಿ ಎಂಬ ಹೆಸರು ಅಷ್ಟು ಪ್ರಚಾರದಲ್ಲಿರದೆ ಕೇರಳದಲ್ಲಿ ಇದನ್ನು ಭಗವತಿ ಎಂದೂ ಸಿಂಹಳದಲ್ಲಿ ಪತ್ತಿನೀ ಎಂದೂ ಕರೆಯುತ್ತಾರೆ. ಇತ್ತೀಚೆಗೆ ಮಧುರೈ ಮತ್ತು

ಕೇರಳರಾಜ್ಯದ ನಡುವಣ ಸ್ಥಳದಲ್ಲಿ ಕನ್ನಗಿಯದೆನ್ನಲಾದ ದೇವಾಲಯ ಕಂಡು ಬಂದಿದ್ದು ಅದರಲ್ಲಿ ಸ್ತ್ರೀ ದೇವತೆಯ ಪೂಜಾವಿಗ್ರಹವಾಗಿರುವುದು ಗಮನಾರ್ಹ.

ಶಿಲಪ್ಪದಿಕಾರದಲ್ಲಿ ವ್ಯಕ್ತವಾಗಿರುವುದು, ಧರ್ಮಕ್ಕೆ ಸಂಬಂಧಿಸಿದಂತೆ, ಮೂರು ಅಂಶಗಳು. ಮೊದಲನೆಯದು ಪಾತಿವ್ರತ್ಯದ ಹಿರಿಮೆ. ಎರಡನೆಯದು

ಅರಸಿಯಲ್ ಪಳೈತೋರ್ಕ್ಕು ಅದಂ ಕೂಱ್ರು ಆವದುಮ್

ಧರ್ಮಮಾರ್ಗವನ್ನನುಸರಿಸಿ ನ್ಯಾಯ ಪರಿಪಾಲನೆ ಮಾಡದಿದ್ದವರಿಗೆ ಧರ್ಮವೇ ಯಮನಾಗಿ ಮೃತ್ಯುವಾಗುತ್ತದೆ ಎಂಬುದು. ಮೂರನೆಯದು ಕರ್ಮಸಿದ್ಧಾಂತದ ಛಾಯೆ

ಉಳ್ವಿನೈ ಉರುತ್ತು ವಂದು ಊಟ್ಟುಮ್

ನಿನ್ನದೇ ಕರ್ಮ ಹೇಗಾದರೂ ನಿನ್ನನ್ನು ಆವರಿಸಿಬಿಡುತ್ತದೆ. ಈ ಕೃತಿಯ ಇನ್ನೊಂದು ವಿಶೇಷವೆಂದರೆ ಮುತ್ತಮಿೞಿನ ಲಕ್ಷಣಗಳಾದ ಇಶೈ, ಇಯಲ್ ಮತ್ತು ನಾಟಕ ಈ ಮೂರನ್ನು ಈ ಕೃತಿಯಲ್ಲಿ ಕಾಣಬಹುದು.

ಮಣಿಮೇಖಲೈ ಕಾವ್ಯದ ಕರ್ತೃ ಶೀತ್ತಲೈಶಾತ್ತನಾರ್. ಶಿಲಪ್ಪದಿಕಾರಮ್‌ನ ಮುಂದಿನ ಕಥೆ ಇದರಲ್ಲಿದೆ. ನಾಯಕಿಯಾದ ಮಣಿಮೇಖಲೈ ಎಲ್ಲ ಸಮಯಗಳ ತತ್ವಗಳನ್ನು ಅರಿತು ಅಂತಿಮವಾಗಿ ಸನ್ಯಾಸಿನಿಯಾಗುತ್ತಾಳೆ. ಇದರಲ್ಲಿ ಕಥೆಗಿಂತ ಬೌದ್ಧತತ್ವಗಳ ಪ್ರಚಾರಕ್ಕೇ ಹೆಚ್ಚು ಪ್ರಾಶಸ್ತ್ಯ ದೊರೆತಿದೆ. ಇಲ್ಲಿನ ಒಂದು ಅಂಶ ಗಮನಾರ್ಹ. ಕ್ಷಾಮದ ಪರಿಸ್ಥಿತಿಗಳಲ್ಲಿ, ಪ್ರವಾಹದ ಪರಿಣಾಮವಾಗಿ ಪ್ರಜೆಗಳಲ್ಲಿ ಆಹಾರಕ್ಕೆ ಹಾಹಾಕಾರವಾದಾಗ ಅರಸನದೋ, ಸನ್ಯಾಸಿಯದೋ—ಪ್ರಜಾಸೇವೆ ಮಾಡುವುದು ಆದ್ಯ ಕರ್ತವ್ಯ ಎಂಬುದನ್ನು ತೋರಿಸಲೆಂಬಂತೆ ಕಥಾನಾಯಕಿಗೆ ಅಕ್ಷಯ ಪಾತ್ರೆಯಂತಹುದೊಂದು ಸಿಕ್ಕು, ಆಕೆ ಆಹಾರ ದುರ್ಲಭವಾಗಿದ್ದ ಕ್ಷಾಮ ಪೀಡಿತ, ಪ್ರವಾಹ ಪೀಡಿತ ಪ್ರದೇಶಗಳಿಗೆ ಹೋಗಿ ತನ್ನ ಅಕ್ಷಯ ಪಾತ್ರೆಯ ನೆರವಿನಿಂದ ಪ್ರಜೆಗಳ ಹಸಿವನ್ನು ನೀಗಿಸುತ್ತಾಳೆ. ಇದು ಸಾಂಕೇತಿಕ.

ಈ ಸಾಹಿತ್ಯ ನೈತಿಕ ಮೌಲ್ಯಗಳನ್ನು ಎತ್ತಿ ಹೇಳಿತು. ಇಲ್ಲಿ ಪರತತ್ವದ, ದೇವರ, ಮತದ ಪ್ರಸ್ತಾಪಬರುವುದಿಲ್ಲ. ಧಾರ್ಮಿಕ ಜೀವನಕ್ಕೆ ಅನುಸರಿಸಬೇಕಾದ ಮಾರ್ಗಗಳ ಬೋಧನೆ ಇದೆ. ಆದರೆ ಕೇವಲ ನೈತಿಕ ಮೌಲ್ಯಗಳಿಗೆ ಒತ್ತುಕೊಟ್ಟು, ಅದಕ್ಕೆ ಅವಶ್ಯವಾಗಿದ್ದ ತಾತ್ವಿಕ ನೆಲಗಟ್ಟು ಇಲ್ಲವಾದಾಗ, ನೈತಿಕ ಪಾಠಗಳನ್ನು ಪ್ರಚಾರಮಾಡುವವರೇ ಅನುಸರಿಸದಿದ್ದಾಗ, ಸಾಮಾಜಿಕ ಅಸಹನೆ ತಲೆ ಎತ್ತಿತು. ಒಂದು ವಿಧದಲ್ಲಿ ಇದರ ಪರಿಣಾಮವಾಗಿ ಎನ್ನುವಂತೆ ಭಕ್ತಿಪಂಥದ ಆರಂಭ ಈಗ ಆಯಿತು. ಜೈನ ಧರ್ಮಕ್ಕೆ ಸಂಬಂಧಿಸಿದುದು. ತೋಲಮೊಳಿ ದೇವರ ಚೂಳಾ ಮಣಿಯು ಚಿಂತಾಮಣಿಯನ್ನೇ ಬಹಳ ಮಟ್ಟಿಗೆ ಅನುಸರಿಸಿದೆ.

5–6ನೆಯ ಶತಮಾನಗಳಲ್ಲಿ ತಮಿಳುನಾಡಿನಲ್ಲಿ ಭಕ್ತಿಯ ಅಲೆ ಉಕ್ಕಿ ಹರಿಯಿತು. ಇದನ್ನು ಶೈವನಾಯನ್‌ಮಾರರ ವೈಷ್ಣವ ಆಳ್ವಾರರ ಕಾಲವೆಂದು ವರ್ಣಿಸಲಾಗಿದೆ. ಶೈವಭಕ್ತರು ಶಿವನನ್ನು ಕುರಿತು ಹಾಡಿದರು. ಅವರಲ್ಲಿ ಭಕ್ತಿ ಪಾರಮ್ಯ, ಪರವಶತೆ ಕಾಣುತ್ತೇವೆ. ಇವರಲ್ಲಿ ಪ್ರಸಿದ್ಧರು ತಿರುಜ್ಞಾನ ಸಂಬಂಧರ್, ತಿರುನಾವುಕ್ಕರಸರೆನಿಸಿದ ಅಪ್ಪರ್, ಸುಂದರರ್ ಮತ್ತು ಮಾಣಿಕ್ಯವಾಚಕರು. ಇವರು ಹಾಡಿದ ಪದ್ಯಗಳನ್ನು ತೇವಾರಮ್ ಎಂದು ಕರೆಯಲಾಗಿದೆ. ತೇ + ಆರಂ ಎಂದರೆ ದೇವರಿಗೆ ಮುಡಿಸಲಾಗುವ ಸ್ತೋತ್ರಮಾಲೆ. ತೇ + ವಾರಮ್ ಎಂದೂ ಇದನ್ನು ಬಿಡಿಸಿ, ದೈವಸಂಬಂಧವಾದ ಭಕ್ತಿಪ್ರಧಾನವಾದ ಹಾಡುಗಳು ಎಂದೂ ಇದಕ್ಕೆ ಅರ್ಥ ನೀಡಿವೆ. ತಮಿಳಿನಲ್ಲಿ ಖ್ಯಾತವಾದ ಒಂದು ಹೇಳಿಕೆ ಇದೆ ಅದರಂತೆ

ವೇದಗಳು ಹಸು; ಆಗಮಗಳು ಹಾಲು; ತೇವಾರಗಳು ಕರಗಿಸಿದ ಬೆಣ್ಣೆ, ಮೆಯ್ಕಂಡಾರರ ಕೃತಿ ಈ ಈ ತುಪ್ಪದ ಉತ್ಕೃಷ್ಟವಾದ ವಾಸನೆ ಎಂದಿದೆ.

ಇದು ತೇವಾರಗಳಿಗೆ ನೀಡಿದ ಸ್ಥಾನವೂ ಹೌದು.

ತಿರಜ್ಞಾನಸಂಬಂಧರು ಪಲ್ಲವ ಅರಸ ಮಹೇಂದ್ರವರ್ಮನ ಕಾಲದವರು. ಜನಿಸಿದುದು ಶೀರ್ಕಾಟಿಯಲ್ಲಿ, ತಂದೆ ಶಿವಪಾರಹೃದಯರ್, ತಾಯಿ ಭಗವತಿಅಮ್ಮೈಲ. ಮಗುವಿಗೆ ಮೂರುವರ್ಷಗಳು ತುಂಬಿದ್ದಾಗ ಒಮ್ಮೆ ಅವರು ತಂದೆಯ ಜೊತೆಯಲ್ಲಿ ತಟಾಕಕ್ಕೆ ಹೋಗಿ, ಅಲ್ಲಿ ತಂದೆ ಸ್ನಾನಮಾಡಲು ನೀರಿನಲ್ಲಿ ಮುಳುಗಿದಾಗ ತಂದೆಯನ್ನು ಕಾಣದೆ ಅಳತೊಡಗಿದರು. ಆಗ ಸ್ವತಃ ಪಾರ್ವತಿದೇವಿಯೇ ಸ್ವರ್ಣಬಟ್ಟಲಿನಲ್ಲಿ ಹಾಲನ್ನು ತಂದು ಮಗುವಿಗೆ ಕುಡಿಸಿದಳು. ಅದು ಜ್ಞಾನಕ್ಷೀರವಾಯಿತು. ಬಳಿಕ ತಂದೆಯೊಡನೆ ಶೈವಕ್ಷೇತ್ರಗಳನ್ನು ಸಂದರ್ಶಿಸಿ ಅಲ್ಲಲ್ಲಿ ಶಿವನನ್ನು ಕುರಿತು ಹಾಡಿದರು. ಇವರೊಂದಿಗೆ ನೀಲಕಂಠರು ತಮ್ಮ ಯಾಳ್ ಪಾಣವನ್ನು ನುಡಿಸುತ್ತಿದ್ದರು. ಇವರ ತೇವಾರಗಳು ಉತ್ಕೃಷ್ಟ ಸಂಗೀತ ರಚನೆಗಳೂ ಆದುವು. ಆ ದೃಷ್ಟಿಯಿಂದಲೂ ಈ ತೇವಾರಗಳಿಗೆ ವಿಶೇಷ ಸ್ಥಾನವಿದೆ.

ತಂಜಾವೂರು ಸಮೀಪದ ತಿರುಮಳಪಾಡಿಯ ಈಶನನ್ನು ಕುರಿತು ಸ್ವರ್ಣ ದೇಹವುಳ್ಳವನೇ, ಹುಲಿದೊಗಲನ್ನು ನಡುವಿಗೆ ಬಿಗಿದು ಮಿಂಚಿನಂತಹ ಕೆಂಜೆಡೆಯ ಮೇಲಿನ ಕೊನ್ನೈ ಹೂವಿನ ಅಲಂಕಾರವುಳ್ಳವನೇ, ಶಾಶ್ವತನೇ, ಅನರ್ಘ್ಯರತ್ನವೇ, ಮಳಪಾಡಿಯ ಮಾಣಿಕ್ಯವೇ ಆಳಾಗಿರುವ ನಾನು ನಿನ್ನನ್ನಲ್ಲದೇ ಬೇರಾರನ್ನು ತಾನೇ ನೆನೆಯಲಿ ಎಂದು ಸ್ತುತಿಸಿದ್ದಾರೆ.

ಪೊನ್ನಾರ್‌ಮೇನಿಯನೇ ಪುಲಿತ್ತೋಲೈಯರೈಕ್ಕ ಚೈದು
ಮಿನ್ನಾರ್‌ಶೆಜ್ಜಡೈಮೇಲ್ ಮಿಸಿರ್‌ಕೊನ್ನೈಅಯಣಿನ್ದವನೇ
ಮನ್ನೇಮಾಮಣಿಯೇ ಮಳಪಾಡಿಯುಳ್ ಮಾಣಿಕ್ಕಮೇ
ಅನ್ನೇಯುನ್ನೈಯಲ್ಲಾಲಿನಿಯಾರೈನಿನೈಕ್ಕೇನೇ

ಇವರ ಇನ್ನೊಂದು ಹಾಡು ಹೀಗಿದೆ:

> ಪುಲಸ್ಸೈನ್ದುಮ್ ಪೊಱಿಕಲಙ್ಗಿ ನೆಱಿಮಯಙ್ಗಿ
> ಅಱಿವಟಿನ್ದಿ ಟ್ಟೈಮೇಲುನ್ದಿ ಅಲಮನ್ದಪೋತಿಗವಞ್ಚಿಲೆನ್ನರುಳ್
> ಚೆಯ್ವಾನಮರುಙ್ಕೊಯಿಲ್ ವಲಮ್‌ವನ್ದ ಮಡವಾರ್ಕ ನಡಮಾಡ
> ಮುಟವದಿರ ಮೞೈಯೆನ್ನಞ್ಚಿ
> ಚಿಲಮನ್ದಿಯುಲಮನ್ದುಮರಮೇಱಿ ಮುಗಿಲ್ಪಾರ್ಕ್ಕುನ್ತಿರುವಯ್ಯಾರೇ

ತಿರುವಯ್ಯಾರಿನ ದೇಗುಲದಲ್ಲಿ ಸ್ತ್ರೀಯರು ನರ್ತಿಸಲು ಮದ್ದಳೆಯ ರವ ಕೇಳುತ್ತದೆ. ಮಳೆಗೆ ಹೆದರಿದ ಮಂಗಗಳು ಓಡಿ ಮರವೇರಿ ಮುಗಿಲತ್ತ ನೋಡುತ್ತವೆ. ಅಂತಿಮ ಕಾಲದಲ್ಲಿ ಪಂಚೇಂದ್ರಿಯಗಳು ಶಕ್ತಿಗುಂದಿ ಮುಂದಿನ ದಾರಿ ಕಾಣದೆ ಅರಿವು ಕಡಿಮೆಯಾಗಿ ಪ್ರಯಾಸದ ಉಸಿರಾಟವನ್ನು ಶ್ಲೇಷ್ಮ ಅವರೋಧಿಸಿದಾಗ ತಿರುವಯ್ಯಾರಿನಲ್ಲಿರುವ ಪರಶಿವನು ಅಂಜಬೇಡಿ ಎನ್ನುವನು ಎಂಬುದು ಈ ಹಾಡಿನ ಸಾರಾಂಶ.

ಸಂಬಂಧರ ಹಿರಿಯ ಸಮಕಾಲೀನರು ಅಪ್ಪರ್. ತಿರುವಾಮೂರಿನಲ್ಲಿ ಹುಟ್ಟಿದ ಇವರ ಮೊದಲ ಹೆಸರು ಮರುನೀಕೆಯಾರ್ (ಮರುಳನ್ನು ನೀಗಿದವನು) ಎಂದು. ಬಾಲ್ಯದಲ್ಲೇ ತಂದೆತಾಯಿಗಳನ್ನು ಕಳೆದುಕೊಂಡ ಇವರಿಗೆ ತಿಲಕವತಿ ಎಂಬ ಹಿರಿಯ ಸೋದರಿ ಇದ್ದಳು. ಕಿರಿಯ ವಯಸ್ಸಿನಲ್ಲಿ ಜೈನಧರ್ಮಾಸಕ್ತನಾಗಿದ್ದ ಈತನನ್ನು ರಕ್ಷಿಸಬೇಕೆಂದು ಸೋದರಿ ಶಿವನಲ್ಲಿ ಮೊರೆಯಿಟ್ಟಳು. ತಾಳಲಸಹ್ಯವಾದ ಹೊಟ್ಟೆ ನೋವು ಇವರನ್ನು ಪುಲಿಯೂರಿನ ಶಿವನಲ್ಲಿ ಮೊರೆಹೋಗುವಂತೆ ಮಾಡಿತು. ಪುನಃ ಶೈವದೀಕ್ಷೆ ತಾಳಿದ; ಜೈನರು ಕಿರುಕುಳ ಕೊಟ್ಟರು. ಆದರೂ ಈತ ಮಣಿಯಲಿಲ್ಲ. ಪಲ್ಲವ ಅರಸ ಇಮ್ಮಡಿ ಮಹೇಂದ್ರವರ್ಮನು ಇವನ ನಿಷ್ಠೆಗೆ ಮನಸೋತು ಸ್ವತಃ ಶೈವನಾದನೆನ್ನುತ್ತದೆ ಕತೆ. ಈತ ರಚಿಸಿದ ಹಾಡುಗಳು ತಾಂಡಕಗಳೆಂದು ಪ್ರಸಿದ್ಧವಾಗಿವೆ. ಜ್ಞಾನಸಂಬಂಧರೊಡಗೂಡಿ ಇವರೂ ಹಲವಾರು ಕ್ಷೇತ್ರಗಳನ್ನು ದರ್ಶಿಸಿದರು. ತಮಗಿಂತ ಹಿರಿಯರಾದ ಕಾರಣ ಸಂಬಂಧರು ಇವರನ್ನು ಅಪ್ಪರ್ ಎಂದು ಕರೆದರು. ಅದೇ ಹೆಸರು ನಂತರ ಸ್ಥಿರವಾಯಿತು. ಈತನ ಮಾತುಗಳು ಮಧುರ, ಮಾತುಗಳ ಅರಸ–ನಾವುಕ್ಕ ಅರಸರ್–ಎಂಬ ಕಾರಣದಿಂದ ತಿರುನಾವುಕ್ಕರಸರೆಂಬುದೂ ಇವರ ಸಾರ್ಥಕ ನಾಮ.

ದೇವರನ್ನು ಹೊರತುಪಡಿಸಿ ಬೇರಾರಿಗೂ ಅಂಜುವುದಿಲ್ಲ, ಎಂಬುದು ಇವರ ನೀತಿ,

> ನಾಮಾರ್ಕ್ಕುಂ ಕುಡಿಯಲ್ಲೋ ನಮನೈ ಅಂಜೋ
> ನರಕತ್ತಿಲಿಡಪ್ಪಡೋ ನಡವೈಯಿಲ್ಲೋ
> ಏಮಾಪ್ಪೋಮ್ ಪಿಣಿಯರಿಯೋ ಪಣಿವೋಮಲ್ಲೋಮ್
> ಇನ್ಬಮೇ ಎನ್ನಾಳುನ್ತುನ್ಬಮೇ ಇಲ್ಲೈ

ನಾವು ಯಾರಿಗೂ ಒಕ್ಕಲಿಲ್ಲ, ಯಮನಿಗೇ ಅಂಜುವುದಿಲ್ಲ. ನರಕದಲ್ಲಿ ದುಃಖಿಸುವುದಿಲ್ಲ. ಚಂಚಲರಾಗುವುದಿಲ್ಲ. ನಮಗೆ ಆಧಿವ್ಯಾಧಿಗಳಿಲ್ಲ. ನಾವು ದೈನ್ಯತೋರಿಸಬೇಕಾಗಿಲ್ಲ. ಎಂದಿಗೂ ಸಂತೋಷವೇ, ನೋವೆಂಬುದೇ ಇಲ್ಲ.

ತಾಮಾರ್ಕ್ಕುಂ ಕುಡಿಯಿಲ್ಲಾ ತನ್ನೈಯಾನ
ಚಂಕರನರ್ಚ್ಚಙ್ಗವೆಣ್ ಕುಳೈಯೋರ್‌ಕಾತಿರ್
ಕೋಮಾರ್ಕ್ಕೇ ನಾಮೆನ್ನು ಮಿಾಳಾವಾಳಾಯ್
ಕೊಯ್ಮಲರ್ಚ್ಚೇವಡಿಯಿಣೈಯೇ ಕುಱುಕಿನೋಮೇ

ಯಾರ ಅಧೀನದಲ್ಲೂ ಇಲ್ಲದ ಶಂಖದ ಉಂಗುರವನ್ನು ಕಿವಿಯಲ್ಲಿ ಧರಿಸಿದ ಶಿವ ಪರಮಾತ್ಮನಿಗೆ ನಾವು ಅನವರತ ಆಳಾಗಿರುತ್ತೇವೆ. ಆತನ ಕೆಂಪಾದ ಪಾದಕಮಲಗಳಲ್ಲಿ ಆಶ್ರಯ ಪಡೆದಿರುತ್ತೇವೆ.

ಮಹೇಂದ್ರವರ್ಮ ಈತನಿಗೆ ನೀಡಿದ ಶಿಕ್ಷೆಗಳಲ್ಲಿ ಸುಣ್ಣದಗೂಡಿನಲ್ಲಿಟ್ಟು ಸುಡುವುದೂ ಒಂದಾಗಿತ್ತಂತೆ. ಆದರೆ ಶಿವನನ್ನು ನಂಬಿದ ಈತನಿಗೆ ಆಗಿನ ಅನುಭವ ತಂಪಾದುದಾಗಿತ್ತು.

ಮಾಶಿಲ್ ವೀಣೈಯುಮ್ ಮಾಲೈ ಮತಿಯುಮ್
ವೀಶು ತೆನ್ಱಲುಮ್ ವೀಙ್ಗಿಳ ವೇನಿಲುಮ್
ಮೂಶುವಣ್ಡಱೈಪೊಯ್ಗೈ ಯುಮ್ ಪೋನ್ಱದೇ
ಈಶನೆನ್ದೆಲ್ ಯಿಣೈಯಡಿನೀಟಲೇ

ಶಿವನ ಪಾದದ ನೆರಳು ದೋಷರಹಿತವಾದ ವೀಣೆಯ ಇಂಚರದಂತೆ, ಸಂಜೆಯ ತಿಂಗಳಿನಂತೆ, ಬೀಸುವ ತೆಂಗಾಳಿಯಂತೆ, ಪರಿಮಳಿಸುವ ಶರತ್ಕಾಲದಂತೆ, ದುಂಬಿಗಳು ಮುತ್ತುವ ತಾವರೆಯ ಕೊಳದಂತೆ ತಂಪಾಗಿತ್ತು ಎಂದಿದ್ದಾರೆ.

ಶಿವಪಂಚಾಕ್ಷರಿ ಈತನ ಸಮಸ್ತವೂ ಆಗಿತ್ತು. ಎಲ್ಲ ಜ್ಞಾನ, ವಿದ್ಯೆ, ಅರಿತ ಕಸುಬು ನಾಲಗೆ ಸ್ತುತಿಸುವ ಪದ, ಸನ್ಮಾರ್ಗವನ್ನು ತೋರುವುದು ಎಲ್ಲವೂ ನಮಶ್ಶಿವಾಯವೇ:

ನಮಶ್ಶಿವಾಯವೇ ಜ್ಞಾನಮುಂ ಕಲ್ವಿಯುಮ್
ನಮಶ್ಶಿವಾಯವೇ ನಾನಱಿ ವಿಚ್ಚೈ ಯುಮ್
ನಮಶ್ಶಿವಾಯವೇ ನಾನವಿನ್ನೇತ್ತುಮೇ
ನಮಶ್ಶಿವಾಯವೇ ನನ್ನೆಱಿ ಕಾಟ್ಟುಮೇ

ಈ ಶಿವ ಇರುವುದೆಲ್ಲಿ?

ವಾನರ್‌ಕಾಣ್ ವಾನವರ್ಕ್ಕು ಮೇಲಾನಾನ್‌ಕಾಣ್
ವಡಮೊಟ್ಟಿಯುನ್ತೈನ್‌ತಮಿೞುಮಱೈಕಣಾನ್ಗುಮ್
ಆನವಾನ್ಕಾಣಾನ್ಸೈನ್ತು ಮಾಟಿನಾನ್ಕಣ್ಣೈಯನ್ಕಾಣ್
ಕೈಯಿಲನಲೇನ್ತಿಯಾಡುಮ್

ಕಾನವನ್‌ಕಾಣ್ ಕಾನವನುಕ್ಕುರುಳ್ಳಿಯ್ದಾನ್ ಕಾಣ್
ಕರುತವಾರಿತಯುತ್ತು ಕಮಲತ್ತೂೞಿವ್
ತೇನವನ್‌ಕಾಣ್‌ಶೆನ್ನಡೈಯಾ ಶೆಲ್ವನ್ನಾನ್‌ಕಾಣ್
ಶಿವನವನ್‌ಕಾಣ್ ಶಿವಪುರತ್ತಿನ್ ಶೆಲ್ವನ್ ತಾನೇ

ಆತನಿರುವುದು ಕೈಲಾಸದಲ್ಲಿ. ಎಲ್ಲ ದೇವತೆಗಳಿಗಿಂತ ಮಿಗಿಲಾದವನು. ಸಂಸ್ಕೃತ–ತಮಿಳುಗಳೆರಡೂ ಆತನೇ ; ಆತನೇ ನಾಲ್ಕು ವೇದಗಳು. ಹಾಲಿನಲ್ಲಿ ಮಿಾಯುವವನು, ಎಲ್ಲರಿಗೂ ಒಡೆಯ. ಬೆಂಕಿಯನ್ನು ಹಿಡಿದು ನಾಟ್ಯವಾಡಿದ ಬೇಡ. ಬೇಡರವನನ್ನು ಅನುಗ್ರಹಿಸಿದಾತ. ನೆನೆಯುವವರ ಹೃದಯ ಕಮಲದಲ್ಲಿ ಒಸರುವ ಮಕರಂದ. ನಮಗೆ ಸಿಗಲು ಕಷ್ಟವಾದ ಪ್ರಿಯಾಸ್ಪದವಾದ ವಸ್ತು. ಆತನೇ ಶಿವಪುರದಲ್ಲಿ ವಾಸಿಸುವ ಪ್ರಿಯವಾದ ವಸ್ತು.

ಇಂತಹ ಶಿವನನ್ನು ಕಾಣುವುದು ಹೇಗೆ ?

ವಿಱಕಿತ್ತೀಯಿನಿನ್ ಪಾಲಿಪ್ಪದು ನೆಯ್ಪೋಲ್
ಮಱೈಯ ನಿನ್ನುವನ್ ಮಾಮಣಿ ಜ್ಯೋತಿಯಾನ್
ಉಱವುಕೋಲ್ನಟ್ಟುಣರ್ವ್ವು ಕಯಿಱ್ಱಿನಾಲ್
ಮುಱುಕ ವಾಙ್ಗಿ ಕಡೈಯ ನಿನ್ ನಿಱ್ಕುಮೇ

ಪರಂಜ್ಯೋತಿಯು, ಕಟ್ಟಿಗೆಯಲ್ಲಿರುವ ಬೆಂಕಿಯಂತೆ, ಹಾಲಿನಲ್ಲಿರುವ ತುಪ್ಪದಂತೆ, ಒಳಗೇ ಮರೆಯಾಗಿರುತ್ತದೆ. ಪ್ರೇಮ ಎಂಬ ಕಡೆಗೋಲನ್ನು ಬುದ್ಧಿ ಎಂಬ ಹಗ್ಗದಿಂದ ಸುತ್ತಿ ಕಡೆದರೆ ಆಗ ಆತ ಕಾಣಿಸುತ್ತಾನೆ.

ಈ ನಾಯನಾರರಲ್ಲಿ ಕಾಣಿಸುವುದು ಜಾತ್ಯಾತೀತವಾದ ಭಾವನೆ. ಶಿವಭಕ್ತ ಎಂಬುದು ಮುಖ್ಯವೇ ಹೊರತು ಆತನು ಯಾವ ಜಾತಿಗೆ, ಯಾವ ಸಾಮಾಜಿಕ ಸ್ತರಕ್ಕೆ ಸೇರಿದವನೆಂಬುದಲ್ಲ. ಶಂಖನಿಧಿ, ಪದ್ಮ ನಿಧಿಗಳನ್ನು ತಂದು ಭೂಲೋಕ, ಸ್ವರ್ಲೋಕಗಳನ್ನಾಳುವವರಾದರೂ ಅವರು ಮಹಾದೇವನ ಏಕಾಂತ ಭಕ್ತರಲ್ಲದಿದ್ದರೆ ನಾವು ಅವರ ಸೌಭಾಗ್ಯಗಳನ್ನು ಲಕ್ಷಿಸುವುದಿಲ್ಲ. ದೇಹ ಕುಗ್ಗಿ, ವ್ರಣಗಳಿಂದ ಕೂಡಿ, ವ್ಯಾಧಿಯಿಂದಿದ್ದು, ಪಶುಗಳ ಚರ್ಮ ಸುಲಿದು ಮಾಂಸ ತಿಂದು ಜೀವಿಸುವ ಹೊಲೆಯರಾದರೂ ಅವರು ಗಂಗೆಯನ್ನು ಜಡೆಯಲ್ಲಿ ಧರಿಸಿದ ಶಿವಪರಮಾತ್ಮನಿಗೆ ಭಕ್ತರಾಗಿದ್ದರೆ ಅವರನ್ನೂ ನಾವು ನಮಿಸುವ ದೇವರೆಂದು ತಿಳಿಯಿರಿ ಎಂದು ಒಂದು ಹಾಡಲ್ಲಿ ಹೇಳಿದೆ.

ಶಂಕನಿದಿ ಪದ್ಮನಿದಿ ಯಿರಣ್ಡುನ್ತನ್ದು
ತರಣಿಯೊಳ್ವಾನಾಳತ್ತರುವರೇನುವಮ್
ಮಙ್ಕುವಾರವರ್ ಶೆಲ್ವಮತಿಪ್ಪೋಮಲ್ಲೋಂ
ಮಾದೇವರ್ಕ್ಕೇಕಾನ್ತರಲ್ಲಾರಾಗಿಲ್

ಅಂಗಮೆಲ್ಲಾ ಕುಜ್ಜೈನ್ದ ಮಿಕು ತೊಮಿನೋಯರಾ
ಯಾವುರಿತ್ತು ತಿನ್ದುಟಿಲುಮ್ ಪುಲೈಯರೇನುಮ್
ಗಂಗೈವಾರ್ ಜಡೈಕ್ಕರನ್ದಾರ್ಕ್ಕನ್ಬರಾಗಿಲ್ ಅವರ್
ಕಣ್ಣೀರ್ ನಾಮ್ ವಣ ಜ್ಞೂಮ್ ಕಡವುಳಾರೇ

ಸುಪ್ರಸಿದ್ಧರಾದ ನಾಲ್ವರು ನಾಯನ್ಮಾರುಗಳಲ್ಲಿ ಸುಂದರರ್ ಮೂರನೆಯವರು. ಕೈಲಾಸದಲ್ಲಿ ಶಿವನ ಸೇವೆ (ಪುಷ್ಪಕೈಂಕರ್ಯ) ಮಾಡಿಕೊಂಡಿದ್ದು, ಅಲ್ಲಿ ಮೋಹ ಕ್ಕೊಳಗಾಗಿ, ಭೂಲೋಕದಲ್ಲಿ ಜನ್ಮವೆತ್ತಬೇಕಾಗಿ ಬಂದಿತೆಂಬುದು ಇವರನ್ನು ಕುರಿತ ಕಥೆ. ತಿರುವಾಯೂರಿನಲ್ಲಿ ಆದಿಶೈವ ಕುಲದಲ್ಲಿ ಜನಿಸಿ, ನರಸಿಂಗಮುನಿಯಾರ್ ಎಂಬ ನಾಯಕನೊಬ್ಬನಿಂದ ಬೆಳೆಸಲ್ಪಟ್ಟ. ಮದುವೆಯ ಸಮಯದಲ್ಲಿ ಶಿವನ ಕೃಪೆ ಯಿಂದ ಮೋಹಕಳಚಿ ಶಿವಭಕ್ತನಾಗಿ ಶಿವನನ್ನು ಪಾಮಾಲೈ–ಪದ್ಯಮಾಲೆ–ಗಳಿಂದ ಅರ್ಚಿಸಿದ. ಆ ಬಳಿಕ ಹಿಂದೆ ಮೋಹಿಸಿದ್ದ ಇಬ್ಬರು ಚೇಟಿಯರನ್ನೂ ಮದುವೆಯಾದ– ಇತ್ಯಾದಿ ಈತನನ್ನು ಕುರಿತ ಕಥೆ. ಅದು ಹೇಗಿದ್ದರೂ, ಶಿವಭಕ್ತರ ನಾಮ ಸಂಕೀರ್ತನ ಮಾಡಿದ ಖ್ಯಾತಿ ಈತನದು. ಈತನು ರಚಿಸಿದ ತಿರುತ್ತೊಂಡರ್‌ತ್ತೊನ್ಯೆ, ತದ ನಂತರದ ಕಾಲದಲ್ಲಿ ಶೇಕ್ಕಿಟಾರ್ ಕವಿಯ ಪೆರಿಯ ಪುರಾಣಕ್ಕೆ ಮೂಲಪ್ರೇರಣೆ ಯಾಯಿತು.

ಆರಂಭದ ಪದ್ಯದಲ್ಲಿಯೇ ಸುಂದರರು ಶಿವಭಕ್ತರು ಕೆಲವರ ಪಟ್ಟಿಮಾಡಿದ್ದಾರೆ. ಅವರೆಲ್ಲರಿಗೂ ತಾನು ಭೃತ್ಯ ಎಂದು ಹೇಳಿಕೊಂಡಿದ್ದಾರೆ.

ತಿಲ್ಲೈವಾಟಿನ್ದಣರ್ ತಮ್ಮಡಿಯಾ ರ್ಕ್ಕುಮ್ ಅಡಿಯೇನ್
ತಿರುನೀಲಕಣ್ಣ ಕ್ಕೋಯವನಾರ್ಕ್ಕಡಿಯೇನ್
ಇಲ್ಲೈಯೇ ಯೆನ್ನಾದ ಇಯಟ್ಪಗೈಕ್ಕು ಮಡಿಯೇನ್
ಇಳೈಯಾನ್ಗುಡಿತಿರುಮಾಜನಡಿಯಾರ್ಕ್ಕು ಮಡಿಯೇನ್
ವೆಲ್ಲುಮಾಮಿಗವಲ್ಲ ಮೆಯ್ಪೊರುಳ್ಕಡಿಯೇನ್
ವಿರಿಪ್ಪೊಟಿಲ್ ಶೂಟ್ ಕುನ್ಟೈಯಾರ್ ವಿಜ್ಞನ್ಮಿಣ್ಣರ್ಕ್ಕಡಿಯೇನ್
ಅಲ್ಲಮೆನ್ ಮೊಲ್ಲೆಯನ್ಮಾರಮರ್ನೀತಿ ಕ್ಕಡಿಯೇನ್
ಆರೂರನಾರೂರಿನಮ್ಮಾನುಕ್ಕಾಳೇ

ದಾಸರಾದ ಚಿದಂಬರದೀಕ್ಷಿತರಿಗೆ, ಕುಂಬಾರನೀಲಕಂಠರಿಗೆ, ಇಲ್ಲವೆನ್ನದೆ ಇದ್ದುದನ್ನೆಲ್ಲಾ ಕೊಡುವ ಇಯರ್ಪಗೈ ನಾಯನಾರಿಗೆ, ಭಕ್ತರಾದ ಇಳೆಯಾನ್ಗುಡಿ ಮಾರನಾಯ ನಾರಿಗೆ, ಮೆಯ್ಪೊರುಳ್ ನಾಯನಾರಿಗೆ, ಅಮರನೀತಿ ನಾಯನಾರಿಗೆ–ಇವರಿಗೆಲ್ಲಾ ನಾನು ಅಡಿಯಾಳು, ಆರೂರಿನ ಸಂಬಿಯಾದ ನಾನು ಆರೂರಿನ ತಂದೆಗೇ ಭೃತ್ಯ.

ಸುಂದರರು ಚಿತ್ರಿಸಿರುವ 63 ಶಿವದಾಸರೆಲ್ಲರೂ ಶಿವನಲ್ಲಿ ಅನನ್ಯಭಕ್ತಿಯುಳ್ಳ ವರು. ಶಿವನಿಗಾಗಿ ಏನನ್ನೂ ತ್ಯಾಗಮಾಡಲು ಸಿದ್ಧರಾದವರು. ಶಿವನು ಹೂಡಿದ

ತೀಕ್ಷ್ಣ ಪರೀಕ್ಷೆಯಲ್ಲಿ ಉತ್ತೀರ್ಣರಾದವರು. ಎಲ್ಲ ವಿಧದ ಜಾತಿಗಳಿಗೂ ಸೇರಿದವರು. ಒಬ್ಬ ಭಕ್ತ ತನ್ನ ಪತ್ನಿಯನ್ನೇ ನೀಡಬೇಕಾಯಿತು. ಬೇಡರ ಕಣ್ಣಪ್ಪ ತನ್ನ ಕಣ್ಣುಗಳನ್ನೇ ಕಿತ್ತುಕೊಟ್ಟ. ಚಂಡೇಶ್ವರ ಶಿವಾಭಿಷೇಕಕ್ಕಾಗಿ ಹಾಲನ್ನು ಧಾರೆ ಎರೆಯುತ್ತಿದ್ದ ಹಸುಗಳನ್ನು ತಡೆಯಲು ಬಂದ ತಂದೆಯ ಕಾಲುಗಳನ್ನೇ ಕಡಿದುಹಾಕಿದ. ಯುದ್ಧದಲ್ಲಿ ಸೋಲಿಸಲಾಗದ ಶತ್ರು ಶಿವಭಕ್ತನಂತೆ ಬಂದು ಉಪದೇಶ ಮಾಡುವ ಸೋಗಿನಿಂದ ವೀರನ ತಲೆಕಡಿದ. ಆಗ ಶಿವಭಕ್ತ, ವಿಭೂತಿ ಧರಿಸಿದ್ದಾನೆ, ಅವನ ಮೇಲೆ ಸೇಡು ತೀರಿಸಬೇಡ, 'ದತ್ತಾ ನವರ್' ಎಂದು ತಡೆದು ಆ ಶತ್ರು ತನ್ನ ರಾಜ್ಯದ ಮೇರೆಯವರೆವಿಗೂ ಕ್ಷೇಮದಿಂದ ಒಯ್ಯುವ ಭರವಸೆ ನೀಡಿದಾತ.

ಮಾಣಿಕ್ಯವಾಚಕರೂ ಶೈವ ಸಮಯಾಚಾರ್ಯರೇ. ಆದರೂ ಇವರಿಗೂ ಇತರ ಮೂವರಿಗೂ ವ್ಯತ್ಯಾಸವಿದೆ. ಆ ಮೂವರೂ ಭಾವಪರವಶರು, ಉದ್ರಿಕ್ತರು. ಅವರ ಭಕ್ತಿ ಭಾವಪರವಶತೆಯಿಂದ ಮೂಡಿಬಂದದ್ದು. ಆದರೆ ಮಾಣಿಕ್ಯವಾಚಕರಲ್ಲಿ ನಾವು ಕಾಣುವುದು ಬೌದ್ಧಿಕ ಮಟ್ಟವನ್ನು. ಒಂದು ವಿಧದಲ್ಲಿ ವಿಶ್ವ ವ್ಯವಸ್ಥೆಯನ್ನು ವೈಜ್ಞಾನಿಕವಾಗಿ ವಿಶ್ಲೇಷಿಸುವ ಯತ್ನ. ಎಂತಲೇ ಇವರ ಹಾಡುಗಳನ್ನು 'ತಿರುಮೊರೈ'ನ ಭಾಗವಾಗಿ ಪರಿಗಣಿಸುವುದಿಲ್ಲ. ಈ ಎಲ್ಲರ ಗುರಿಯೂ ಒಂದೇ—ದೈವ ಸಾಕ್ಷಾತ್ಕಾರ. ಆದರೆ ಇತರರದು 'ಅನ್ಬು'; ಮಾಣಿಕ್ಯವಾಚಕರದು 'ಅಱಿವು'

ಇವರ ತಿರುವಾಚಕದಲ್ಲಿ ಜಾನಪದ ಗೀತೆಗಳಲ್ಲಿನ ಸಂಕೇತಗಳನ್ನು ಬಳಸಿದೆ. ದೇವರನ್ನು ಕುರಿತು ಭಯ, ಕಾತುರತೆ, ಆಶೆ, ಸಂತೋಷ—ಕೊನೆಗೆ ದಿವ್ಯಾನುಭವದಲ್ಲಿನ ಅಮಿತಾನಂದವನ್ನು ಇವುಗಳಲ್ಲಿ ಕಾಣಬಹುದು. ಶಿವನಿಗೆ ಸಂಪೂರ್ಣವಾಗಿ ಸಮರ್ಪಿಸಿಕೊಂಡ ಇವರ ವಾಚಕಗಳಲ್ಲಿ ಲೌಕಿಕ ವಿಷಯಗಳನ್ನು ಕಡೆಗಣಿಸಲಾಗಿದೆ. ಇವುಗಳಲ್ಲಿ ಗೇಯತೆ ಹೆಚ್ಚಾಗಿಲ್ಲ. ಆದರೆ ಶೈವಸಿದ್ಧಾಂತ ಇವರಲ್ಲಿ ಪಕ್ವಗೊಂಡಿದೆ.

ಶಿವಭಕ್ತರ ವೃಂದ ರಾಜಿಸುವ ಕಮಲಗಳ ಗುಂಪಿನಂತೆ, ಪರಿಪಕ್ವ ಮತಿಯಿಂದ ನಿನ್ನ ಪಾದ ಕಮಲ ಸೇರಿದ್ದಾರೆ. ಆದರೆ ನಾನು ಪಾಪಿ, ಜ್ಞಾನ-ವಿದ್ಯಾ ಶೂನ್ಯ, ನಿನ್ನ ಭೃತ್ಯ, ನಿನ್ನಲ್ಲಿ ಶರಣಾಗಿದ್ದೇನೆ ಎನ್ನುತ್ತಾರೆ.

ಚೆಱುಕ್ಕಮಲತ್ತಿರಳ್ ಅಸನಿನ್ ಶೇವಡಿ ಶೇರ್ನ್ದವ್ಮೈನ್ದ
ಪಱುತ್ತಮಗತ್ತಡಿಯರ್ ಉಡನ್ ಪೋಯಿನರ್ ಯಾನ್ ಪಾವಿಯೇನ್
ಪುಱುಕ್ಕುಣುಡೈ ಪ್ಪುನ್ ಕುರಮ್ ಪೈಪ್ಪೊಲ್ಲಾ ಕ್ಕಯ್ವಿ ಞಾನಮಿಲ್ಲಾ
ಅಱುಕ್ಕು ಮನತ್ತಡಿಯೇನ್ ಉಡೈಯಾಯ್ ಉನ್ ಆಡೇ ಕ್ಕಲಮೇ

ಶಿವನು ಎಲ್ಲವನ್ನು ಸೃಷ್ಟಿಸಿದವನನ್ನು ಸೃಷ್ಟಿಸುವ ಪುರಾತನ. ಸೃಷ್ಟಿಸಿದವುಗಳನ್ನು ರಕ್ಷಿಸಿದವನನ್ನು ರಕ್ಷಿಸುವ ದೇವರು. ಲಯಿಸುವವನನ್ನು ಲಯಿಸುವವ. ಚಿಂತನೆಯಿಲ್ಲದೆ ಚಿಂತಿಸಿ ಜೀವಿಗಳ ನಾಶವನ್ನು ತಿಳಿದವನು.

ಪಡೈಪ್ಪೋರ್ ಪಡೈಕ್ಕುಮ್ ಪಳೈಯೋನ್
ಪಡೈತ್ತವೈ ಕಾಪ್ಪೋರ್ ಕಾಕ್ಕುಂ ಕಡವುಳ್
ಕಾಪ್ಪವೈ ಕರಪ್ಪೋನ್ ಕರಪ್ಪವೈ ಕರುತಾ
ಕ್ಕರುತ್ತದ್ದೆ ಕಡವುಳಿತ್ತಕುಮ್

ಅಷ್ಟೇ ಅಲ್ಲ!

ತಿರುತ್ತಕುಮತಿಯಿಲ್ಲಿಣ್ಮೈ ವೈತ್ತೋನ್
ತಿಣ್ದಿಜತ್ತಿಯಿನ್ ವೆಮ್ಮೈ ಶೆಯ್ದೋನ್
ಪೊಯ್ ತೀಜ್ ವಾಸಿಜ್ ಕಲಪ್ಪುವೈತ್ತೋನ್
ಮೇತಕು ಕಾಲಿ ನೂಕ್ಕಕ್ಕಡೋನ್
ನಿಬಿಜಿಗಟ್ ನೀರಿಲ್ ಇನ್ಸುವೈ ನಿಗಟ್ಸ್ನೋನ್
ವೆಳಿಪ್ಪಡ ಮಣ್ಣಲಿಣ್ಮೈವೈತ್ತೋನ್

ಚಂದ್ರನಲ್ಲಿ ತಂಪನ್ನು ಶಕ್ತಿಯುತವಾದ ಬೆಂಕಿಯಲ್ಲಿ ಉಷ್ಣವನ್ನು, ನಿರ್ಮಲವಾದ ಆಕಾಶದಲ್ಲಿ ವ್ಯಾಪಕತ್ವವನ್ನು, ಬಲಶಾಲಿಯಾದ ಗಾಳಿಯಲ್ಲಿ ಅದರ ಶಕ್ತಿಯನ್ನು, ನೆರಳಿನಲ್ಲಿ ಪ್ರಕಾಶಿಸುವ ನೀರಿನಲ್ಲಿ ತಂಪನ್ನುಂಟು ಮಾಡಿದವನು, ವಿಸ್ತಾರವಾದ ಭೂಮಿಗೆ ಅದರ ಭಾರವನ್ನು ಇತ್ತವನು.

ತಮಿಳು ಸಾಹಿತ್ಯದಲ್ಲಿ ಭಕ್ತಿಪಾರವಶ್ಯವನ್ನು ಶ್ರೀವೈಷ್ಣವ ಆಳ್ವಾರುಗಳು ಹಾಡಿದ ಪ್ರಬಂಧಗಳಲ್ಲಿಯೂ ಕಾಣಬಹುದು. ಆಳ್ವಾರ್ ಎಂದರೆ ಭಗವದ್ಭಕ್ತಿಯಲ್ಲಿ ಮುಳುಗಿದವರು ಎಂದರ್ಥ. ತರ್ಕ–ವಾದಗಳ ವ್ಯಾಪ್ತಿಗೆ ಎಟುಕಲಾರದ ದೈವ ಶುದ್ಧಾಂತಃಕರಣದ ತುಂಬು ಹೃದಯದ ಅನುರಕ್ತಿಗೆ ಎಟಕುತ್ತಾನೆ. ಪ್ರಾಪಂಚಿಕ ವಸ್ತುಗಳಲ್ಲಿ ಒಲವಿಲ್ಲದೆ, ದೇವರಲ್ಲಿ ನಿಶ್ಶೇಷವಾದ ಜ್ಞಾನ ಮತ್ತು ಕರ್ಮಗಳಿಂದ ನಿಸ್ತೇಜವಾಗದ, ಕಾಯಾ ವಾಚಾ ಮನಸಾ ಅತ್ಯುಚ್ಚಗುರಿಯಾಗಿ ವ್ಯಿದೋರುವ ಭಕ್ತಿ ಪರಮಭಕ್ತಿ ಎನಿಸಿಕೊಳ್ಳುತ್ತದೆ. ಚಿಂತನೆ, ವೇದನೆ ಮತ್ತು ಕ್ರಿಯೆಗಳು ದೈವ ಸಾಕ್ಷಾತ್ಕಾರದ ಹೆಬ್ಬಯಕೆಗೆ ಒಟ್ಟುಗೂಡಿದ ಒಂದು ಪ್ರಕ್ರಿಯೆ. ಇದರ ಜೊತೆಗೆ ಆತ್ಮ ನಿವೇದನೆ, ಆತ್ಮಸಮರ್ಪಣೆ ಮುಖ್ಯ.

ಅನುಭಾವ ಎಂಬುದು ಭಕ್ತಿಯ ಪರಾಕಾಷ್ಠೆ, ಸಾಕ್ಷಾತ್ಕಾರದ ಹರ್ಷೋನ್ಮಾದ. ಇದು ಪ್ರಜ್ಞೆಯನ್ನು ತಿಳಿಗೊಳಿಸುತ್ತದೆ, ಉದ್ವೇಗವನ್ನು ಉಜ್ವಲಗೊಳಿತ್ತದೆ. ಸಂಕಲ್ಪವನ್ನು ಚೇತನಗೊಳಿಸುತ್ತದೆ. ಈ ಭಾವಾನುಭವ ಗೀತರೂಪದಲ್ಲಿ ಹೊಮ್ಮುತ್ತದೆ.

ಆಳ್ವಾರರು ಹನ್ನೆರಡು ಮಂದಿ. ಅವರಲ್ಲಿ ಮೂವರು ಬ್ರಾಹ್ಮಣರು, ಒಬ್ಬ ಕ್ಷತ್ರಿಯ, ಒಬ್ಬ ಚತುರ್ಥ (ತಿರುಮಂಗೈ), ಒಬ್ಬ ವೆಳ್ಳಾಳ (ನಮ್ಮಾಳ್ವಾರ್) ಒಬ್ಬ ಪಂಚಮ (ತಿರುಪ್ಪಾಣ್) ಒಬ್ಬ ಸ್ತ್ರೀ, ಇನ್ನುಳಿದ ನಾಲ್ವರ ಕುಲ–ಜಾತಿಗಳ

ವಿವರಗಳು ತಿಳಿಯುದು. ಈ ಆಳ್ವಾರರ ಕಾಲ ಸುಮಾರು 6 ರಿಂದ 10 ನೆಯ ಶತಮಾನಗಳು. ಇವರು ಹಾಡಿದ ಪಾಶುರಗಳನ್ನೆಲ್ಲಾ ಒಟ್ಟುಗೂಡಿಸಿ ನಾಲ್ಕುಸಾವಿರ (ನಾಲಾಯಿರ) ದಿವ್ಯ ಪ್ರಬಂಧಗಳೆಂದು ಕರೆಯುಲಾಗಿದೆ. ಇವರ ಪಾಶುರಗಳಲ್ಲೂ ನಾಯನ್ಮಾರರ ಹಾಡುಗಳಲ್ಲೂ ಅನೇಕ ಬಾರಿ ಒಂದೇ ದೃಷ್ಟಿಕೋನವನ್ನು ಕಾಣುತ್ತೇವೆ.

ಶಿವನು ಸೃಷ್ಟಿಸಿದವನ, ರಕ್ಷಿಸಿದವನ ಸೃಷ್ಟಿಕರ್ತ, ರಕ್ಷಕ ಎಂದು ಮಾಣಿಕ್ಯ ವಾಚಕರು ಹಾಡಿದುದನ್ನು ನೋಡಿದ್ದೇವೆ. ಭಕ್ತಿಸಾರ ಎನಿಸಿದ ತಿರುಮೊಳಿಶೈ ಆಳ್ವಾರರು ಮೊದಲು ಶಿವಭಕ್ತರಾಗಿ ನಂತರ ವಿಷ್ಣುಭಕ್ತರಾದವರು. ಇವರು

ಇನಿಯುಜಿನ್ದೇನ್ ಈಶಜ್ಞುಂ ನಾನ್ಮುಗಜ್ಞುಂ ದೆಯ್ವವ್
ಇನಿಯುಜಿ ನ್ದೇನ್ ಎವ್ಪೆರುಮಾನ್ ಉನ್ನತ ಇನಿಯುಜಿಂದೇನ್

ಈಶ್ವರನಿಗೂ ಬ್ರಹ್ಮನಿಗೂ ನೀನು (ವಿಷ್ಣು) ದೈವ ಎಂಬುದನ್ನು ಕಂಡುಕೊಂಡೆ ಎಂದಿದ್ದಾರೆ. ಚರಾಚರವಸ್ತುಗಳೆಲ್ಲಾ ಭಗವಂತನಲ್ಲೇ ಉದಿಸಿ ಅವನಲ್ಲೇ ಮುಳುಗುವುದು ಜಗತ್ತೆಲ್ಲಾ ಭಗವಂತನ ಶರೀರ

ತನ್ನುಳೇ ತಿರೈತ್ತೆಟುವ್ ತರಂಗವೆಣ್ತಡಂಗಡಲ್
ತನ್ನುಳೇ ತಿರೈತ್ತಮಿನ್ದು ಅಡಂಗುಗಿನ್ಜ ತನ್ಮೈಪ್ಪೋಲ್
ನಿನ್ನುಳೇ ಪಿಜನ್ದಿಜನ್ದು ನಿಜ್ಪುವವ್ ತಿರಿಬಪುವವ್
ನಿನ್ನುಳೇ ಯಡಂಗುಗಿನ್ಜ ನೀರ್ಮೈನಿನ್ನಣನ್ಜದೇ

ಎಂದು ಹಾಡಿದ್ದಾರೆ.

ನಾವು ಎಷ್ಟು ಮೋಸಗಾರರು? ನಮ್ಮೊಳಗೆ ಭಗವಂತನಿದ್ದಾನೆಂಬುದು ಗೊತ್ತಿದ್ದೂ ಆತನಿಗೇನೂ ತಿಳಿಯುವುದಿಲ್ಲವೆಂಬ ಭಾವನೆಯಿಂದ ನಾವು ಏನೆಲ್ಲಾ ಯೋಚನೆಗಳನ್ನು ಮಾಡುತ್ತೇವೆ. ಇದನ್ನು ತಿಳಿದಾಗ ನನಗೇ ನಗೆಯು ಬರುತ್ತದೆ ಎನ್ನುತ್ತಾರೆ ತೊಂಡರಡಿಪ್ಪೊಡಿ (ವಿಪ್ರನಾರಾಯಣ). ಈತ ಶ್ರೀರಂಗದಲ್ಲಿ ರಂಗನಾಥನಿಗೆ ಪುಷ್ಪಕೈಂಕರ್ಯ ಮಾಡುತ್ತಿದ್ದು ದೇವಾದೇವಿಯ ದಾಸನಾಗಿ ನಂತರ ಎಚ್ಚೆತ್ತ ಭಕ್ತ

ಉಳ್ಳತ್ತೆಯುಜ್ಜೆಯುವ್ ಮಾಲ್ಪೆ ಉಳ್ಳುವಾರ್ ಉಣರ್ವೊನಿಲ್ಲಾ
ಉಳ್ಳತ್ತೇನ್ ನಾನುಂ ತೊಣ್ಡಾಯ್ ತೊಣ್ಡುಕ್ಕೇ ಕೋಲಂ ಪೂಣ್ಡು
ಉಳ್ಳುವಾರುಳ್ಳಿತ್ತೆಲ್ಲಾವ್ ಉಡ ನಿರುನ್ದು ಅರುದಿಯೆನ್ಜು
ವೆಳ್‌ಓಪ್ಪೋಯ್ ಎನ್ನುಳ್ಳೇ ನಾನ್ ವಿಲವಜಿಚ್ಚಿಜಿತ್ತಿಟ್ಟೇನೇ

ಕುಲಶೇಖರರು ಕೇರಳದ ಅರಸರಾಗಿದ್ದವರು. ಶ್ರೀರಂಗನ ಭಕ್ತರಾದವರು. ದೇವರೊಡನೆ ಇವರ ಸಂಬಂಧ ನಿಷ್ಠೆಯಿಂದ ಕೂಡಿದ್ದು. ಇದು ರೋಗಿಗೆ ವೈದ್ಯನಲ್ಲಿದ್ದಂತಹುದು—ದೇಹವನ್ನು ಕೊಯ್ದು ಚುಚ್ಚಿದರೂ ನಾನು ನಿನ್ನ ಕೈಂಕರ್ಯಕ್ಕಾಗಿ ಕಾದಿದ್ದು ನಿನ್ನ ಕೃಪೆಗಾಗಿ ಹಾತೊರೆಯುತ್ತಿರುವೆನು.

ವಾಳಾಲಜಿತ್ತು ಚ್ಚುಡಿನುವ್ ಮರುತ್ತುವನ್ ಪಾಲ್
ಮಾಳಾದ ಕಾದಲ್ ನೋಯಾಳನ್ ಪೋಲ್ ಮಯತ್ತಾಲ್
ಮೀಳಾತ್ತುಯರ್ ತರಿನುವ್ ವಿತ್ತುವಕ್ಕೋಟ್ಟವಮ್ಮಾ ನೀ
ಆಳಾವುನದರುಳೇ ಪಾರ್ಪನಡಿಯೇನೇ ಎಂಬುದು ಇವರ ನಿಷ್ಠೆ

ದೇಹದಲ್ಲಿ ಭ್ರಮೆ, ಮಾನಿನೀಸಂಗ, ಅಶನಾಚ್ಛಾದನ ಭೋಗ–ಇಂತಹ ಆಸೆಗಳುಳ್ಳವರ ಸಹವಾಸ ಬೇಡ. ಅವರನ್ನು ಹುಚ್ಚರೆಂದು ಕಾಣುತ್ತೇನೆ.

ಪೇಯರೇ ಎನಕ್ಕು ಯಾವರುವ್ ಯಾನುವೋರ್
ಪೇಯನೇ ಎವರ್ಕುವ್ ಇದು ಪೇಶಿಯೆನ್
ಆಯನೇ ಅರಙ್ಗಾ ಎನ್ನಟ್ಟೈಕ್ಕೆನ್ಟೇನ್
ಪೇಯ ನಾಯೊಳಿನ್ದೇನ್ ಎಮ್ಬಿರಾನುಕ್ಕೇ

ಅವರೂ ನನ್ನನ್ನು ಹುಚ್ಚನೆಂದು ಭಾವಿಸುತ್ತಾರೆ. ಅದು ನನಗೆ ಗೊತ್ತು. ರಂಗಾ, ಎಂದು ನಿನ್ನನ್ನು ಕರೆಯುತ್ತೇನೆ. ರಕ್ಷಿಸು ಎಂದು ಆಕ್ರಂದಿಸಿದ್ದಾರೆ ಪೆರುಮಾಳ್ ತಿರುಮೋಳಿಯಲ್ಲಿ

ತಿರುಪತಿಯ ವೆಂಕಟಾಚಲನನ್ನು ಅವರು ಬೇಡುವುದೇನು ? ನಾನು ಜಡವಸ್ತುವಾಗಿದ್ದರೂ ಸರಿಯೇ, ನಿರಂತರ ನಿನ್ನ ಸಮೀಪದಲ್ಲಿರಬೇಕು. ಮೀನಾಗಿಯೋ, ವೃಕ್ಷವಾಗಿಯೋ, ಪೊದೆಯಾಗಿಯೋ, ಕೊನೆಗೆ ಗರ್ಭಗೃಹದಲ್ಲಿ ಹೊಸತಿಲಾಗಿಯೋ ಇರುವಂತೆ ಅನುಗ್ರಹಿಸು ಎಂದು

ಶೆಡಿಯಾಯ ವಲ್ವಿನೈಹಳ್ ತೀರ್ಕ್ಕುಮ್ ತಿರುಮಾಲೇ
ನೆಡಿಯಾನೇ ವೇಂಗಡವಾ ನಿನ್ ಕೋಯಿಲಿನ್ವಾಶಿಲಿಲ್
ಅಡಿಯಾರುವ್ ವಾನವರುವ್ ಅರಂಬೆಯಾರುಂ ಕಿಡನ್ದಿಯಙ್ಗುವ್
ಪಡಿಯಾಯ್ ಕಿಡನ್ದು ಉನ್ ಪವಳವಾಯ್ ಕಾಣ್ಬೇನೇ

ಹಾಗೆ ಹೊಸತಿಲಾಗಿದ್ದರೆ ಭಕ್ತಾಂಘ್ರಿಗಳ ರೇಣುವಿನಿಂದ ಪುನೀತನಾಗುವುದಲ್ಲದೆ ಎಂದೆಂದಿಗೂ ನಿನ್ನ ಹವಳದಂತಹ ಬಾಯನ್ನು ನೋಡುತ್ತಿರಬಹುದಲ್ಲ! ತಿರುಪ್ಪಾಣರ್ ಪಂಚಮರು, ಶ್ರೀರಂಗನನ್ನು ಸುತ್ತಿಸುತ್ತಾ ಪಾಣ್ ವಾದ್ಯವನ್ನು ನುಡಿಸುತ್ತಾ ಕಾವೇರಿಯ ಇನ್ನೊಂದು ದಡದಲ್ಲಿ ನಿಂತೇ ಶ್ರೀರಂಗನನ್ನು ಕಲ್ಪಿಸಿಕೊಳ್ಳುತ್ತಿದ್ದವರು. ರಂಗನಾಥನ ಕೃಪೆಯಿಂದ ರಂಗನ ದೇವಾಲಯದ ಗರ್ಭಗೃಹಕ್ಕೆ ಹೋಗುವಂತಾಗಿ ದೇವನ ದಿವ್ಯಮಂಗಳ ವಿಗ್ರಹವನ್ನು ಕಂಡು ಪಾದಾದಿ ಕೇಶಪರ್ಯಂತ ಭಕ್ತಿಪರವಶನಾಗಿ ಸ್ತುತಿಸಿದ. ದೇವನನ್ನು ಅದಿ, ಅಮಲ, ಪಿರಾನ್ ಎಂದೆಲ್ಲಾ ವರ್ಣಿಸಿ ತನ್ನ ಕೈಂಕರ್ಯವನ್ನು ತನಗೇ ದಕ್ಕಿಸಿಕೊಳ್ಳದೆ ತನ್ನ ದಾಸರೆಲ್ಲರಿಗೂ ದಾಸನಾಗಿರಲಿ ಎಂದು ಗುರುತು ಹಿಡಿದ ನಿರ್ಮಲನೇ, ನೀತಿವಾನ್ ಎಂದೆಲ್ಲಾ ಹಾಡಿದ.

ಎನ್ನಮುದಿನೇ ಕಣ್ಣುಕಣ್ಗಳ್ ಮತ್ತೊನ್ರಿನೈ ಕ್ಕಾಣಾವೇ

ನನ್ನವನನ್ನು ಕಂಡ ಕಣ್ಣುಗಳು ಮತ್ತಾವುದನ್ನು ನೋಡುವುದಿಲ್ಲ ಎಂದು ಹೇಳಿ ದೇವರಲ್ಲಿ ಲೀನನಾದ ಈ ಆಳ್ವಾರ್.

ತಿರುಮಂಗೈ ಮೂಲತಃ ಒಬ್ಬ ನಾಯಕ. ಕಳ್ಳನಾದ. ದೈವಕೃಪೆಯಿಂದ ಭಕ್ತನಾದ. ಬದರಿಯಿಂದ ತಿರುಕ್ಕುಕುಂಗುಡಿಯುವರೆವಿಗೂ ಕ್ಷೇತ್ರಗಳನ್ನು ದರ್ಶಿಸಿದ ತಾನು ಮಾಡದ ಕೆಲಸಗಳೇ ಇಲ್ಲ. ಅಂತಿಮವಾಗಿ ನಾರಾಯಣನನ್ನು ಆಶ್ರಯಿಸಿದ.

ನಾಡಿನೇನ್ ನಾಡಿನಾನ್ ಕಂಡುಕೊಂಡೇನ್
ನಾರಾಯಣ ಎನ್ನುಮ್ ನಾಮಮ್

ಇವರಲ್ಲೆಲ್ಲಾ ಜ್ಞಾನಿ ಎನಿಸಿಕೊಳ್ಳುವಾತ ನಮ್ಮಾಳ್ವಾರ್, ತಿರುವಾಯ್ಮೊಳಿ ಇವರ ಕೃತಿಗಳಲ್ಲಿ ಅತಿಪರಿಚಿತವಾದ ಶ್ರೇಷ್ಠವಾದ ಪ್ರಬಂಧ. ನಿರಂತರವಾಗಿ ದೇವರ ಹಿರಿಮೆಯನ್ನು ಅರಿಯುವುದರ ಮೂಲಕ ಸ್ವರೂಪಜ್ಞಾನವೇರ್ಪಡುತ್ತದೆ. ದೇವರು ಮನುಷ್ಯನ ಚಿತ್ತ ಸ್ವಭಾವಕ್ಕನುಗುಣವಾಗಿ ಉಪಾಸನಾವಸ್ತುವನ್ನು ಅನುಗ್ರಹಿಸುತ್ತಾನೆಂಬುದು ಈ ಆಳ್ವಾರರು ಕಂಡುಕೊಂಡ ವಿಷಯ. ದೈವದ ಅನಂತತ್ವವನ್ನು ಆಶ್ಚರ್ಯದಿಂದ ಮೆಚ್ಚುವ ಅನುರಾಗಿಸುವ ಪ್ರಕ್ರಿಯೆಯಿಂದ ಚಿತ್ತದ ಕಾರ್ಯ ನಿರ್ವಹಣಾಶಕ್ತಿ ಮಾರ್ಪಟ್ಟು ಸುಖಾನುಭವದ ಗ್ರಹಣಶಕ್ತಿ ಹೆಚ್ಚುತ್ತದೆ. ಮರ್ತ್ಯ ಲೋಕದಲ್ಲಿಯೇ ದಿವ್ಯದೃಷ್ಟಿಯು ನಿರಂತರ ಸುಖಾನುಭವಸಾಧ್ಯ. ಹೂವಾಗಿ, ಹಕ್ಕಿಯಾಗಿ, ದೇವರ ಕೈಂಕರ್ಯ ಮಾಡಬಹುದಾದ ಅರಿವೂ ಉಂಟಾಗುತ್ತವೆ. ಇವು, ಇಂತಹವು ಈ ಪ್ರಬಂಧದಲ್ಲಿ ಕಾಣಿಸಿಕೊಳ್ಳುವ ವಿಷಯಗಳು, ಎಂತಲೇ ಇದನ್ನು ಭಗವದ್ವಿಷಯ ಎಂದು ಕರೆಯಲಾಗಿದೆ.

ಸಕಲ ವಿಷಯ, ಸಂಗಗಳನ್ನೂ ತ್ಯಜಿಸಿ ನಿಮ್ಮ ಆತ್ಮಗಳನ್ನು ಆತ್ಮನಾಥನಾದ ಸರ್ವೇಶ್ವರನಿಗೆ ಒಪ್ಪಿಸಿ.

ವೀಡುಮಿನ್ ಮುಜ್ಜುವುಮ್ ವೀಡು ಶೆಯ್ದು ಉಮ್ಮುಯಿರ್
ವೀಡುಡ್ಡೆಯಾನಿಡ್ಡೆ ವೀಡು ಶೆಯ್ಮಿನೇ

ಜ್ಞಾನಾನಂದ ಸ್ವಭಾವವುಳ್ಳ ಅಸಂಖ್ಯಾತ ಆತ್ಮರನ್ನು ಸಮಸ್ತಕಲ್ಯಾಣ ಗುಣಗಳನ್ನುಳ್ಳ ಶ್ರೀಮನ್ನಾರಾಯಣನು ತನ್ನ ಆಶ್ರಿತರೆಂದು ಭಾವಿಸಿ ರಕ್ಷಿಸುತ್ತಾನೆ. ಆತನ ಶ್ರೀಪಾದಗಳನ್ನು ಆಶ್ರಯಿಸಿ.

ಎಣ್ಬೆರುಕ್ಕನ್ನಲತ್ತು ಒಣ್ಪೊರು ಶೀಱಿಲ
ವಣ್ಣುಗಪ್ ನಾರಣನ್ ತಿಣ್ಣವಿಲ್ ಶೇರೇ !

ಸುಮಾರು 9ನೆಯ ಶತಮಾನದ ಕವಿ ಕಂಬನ್ ಜನಿಸಿದುದು ತೇರಳಂದೂರಿನಲ್ಲಿ. ಶಡಗೋಪ ಅಂದಾದಿ, ಸರಸ್ವತಿ ಅಂದಾದಿ ಮುಂತಾದ ಕೃತಿಗಳನ್ನು ರಚಿಸಿ

ದ್ದರೂ ಇವರು ಖ್ಯಾತರಾಗಿರುವುದು ಇಂದಿಗೂ ತಮಿಳರ ಮನೆಮಂದಿರಗಳಲ್ಲಿ ಪ್ರವಚಿಸಲ್ಪಡುತ್ತಿರುವ ತಮ್ಮ ರಾಮಾಯಣದಿಂದ ಇವರು ಅಮರರಾಗಿದ್ದಾರೆ. ವಾಲ್ಮೀಕಿಯ ರಾಮಾಯಣವನ್ನೇ ಕಥೆಯಲ್ಲಿ ಅನುಸರಿಸಿದ್ದರೂ, ಚಿತ್ರಣ ಇವರದೇ. ಕಾವ್ಯದಲ್ಲಿ ಎಲ್ಲ ಪಾತ್ರಗಳಿಗೂ ವಿಶಿಷ್ಟ ಗುಣಗಳನ್ನು ರೂಪಿಸಲಾಗಿದೆ. ಇದರಲ್ಲಿ ಕಾಣುವುದು ತಮಿಳು ಸಂಸ್ಕೃತಿ. ಆದರೂ ಧರ್ಮ ಭಕ್ತಿಗಳನ್ನು ನಿರೂಪಿಸುವಾಗ ಹೊಸತನವಿದೆ.

ದಶರಥ ರಾಮನಿಗೆ ಪಟ್ಟಾಭಿಷೇಕ ಮಾಡುವುದಾಗಿ ಪ್ರಕಟಿಸಿದಾಗ ಜನರಲ್ಲಿ ಅತೀವ ಸಂತೋಷವಾಯ್ತು. ಆಗ ಅವರು ತೋರಿದ ಪ್ರತಿಕ್ರಿಯೆ

ಭೂವಲಯಮ್ ಇನ್ನುತನಿ ಅನ್ನುಪೊದು

ಈ ಸಾಮ್ರಾಜ್ಯ ಹಿಂದೆ (ಅನ್ನು) ಹಲವರಿಂದ ಆಳಲ್ಪಟ್ಟದ್ದು. ಏಕಚಕ್ರಾಧಿಪತ್ಯವಾಗಿರಲಿಲ್ಲ. ಈಗ, ಇನ್ನು ಮೇಲೆ ಇದು ರಾಮನದೇ ಸ್ವಂತ (ತನಿ). ಅವನೊಬ್ಬನಿಗೇ ಸೇರಿದುದು ಎಂದು ಇದರ ಅರ್ಥ. ಇದಕ್ಕೆ ಇನ್ನೊಂದು ಅರ್ಥವನ್ನೂ ನೀಡಲಾಗಿದೆ. ಇನ್ನುತನಿ ಎಂಬಲ್ಲಿ ಪದವಿಭಾಗಮಾಡಿ ಅನ್ನುಪೊದು ಎನ್ನುವ ಬದಲಾಗಿ ಭೂವಲಯಮ್ ಎಂಬಲ್ಲಿಗೆ ವಾಕ್ಯವನ್ನು ಒಡೆದು ಇನ್ನುತನಿಅನ್ನು ಎಂದು ಮುಂದಿನಭಾಗವನ್ನು ಕೂಡಿಸಿ,

ಈ ಭೂವಲಯ ಇಂದು ಒಬ್ಬರದೇ ಅಲ್ಲ; ಯಾರೊಬ್ಬರಿಗೇ ಸೇರಿದುದಲ್ಲ, ಪೊದು–ಎಲ್ಲರಿಗೂ ಸೇರಿದುದು. ಒಂದು ವಿಧದಲ್ಲಿ ರಾಮರಾಜ್ಯ ಪ್ರಜಾರಾಜ್ಯವಾಯಿತು ಎಂದೂ ಈ ಮಾತನ್ನು ಅರ್ಥೈಸಲಾಗಿದೆ.

ಆದರೆ ಮರುದಿನ ರಾಮನು ಕೈಕೇಯಿಯ ಅಂತಃಪುರಕ್ಕೆ ದಶರಥನನ್ನು ಅರಿಸಿಕೊಂಡು ಹೋದ. ಅಲ್ಲಿ ಕೈಕೇಯಿ ಅರಸನ ಅಭಿಲಾಷೆಯನ್ನು ತಾನೇ ಪ್ರಕಟಿಸಿದಳು. ರಾಮ ವನವಾಸಕ್ಕೆ ಹೋಗಬೇಕೆಂಬುದು ಅರಸನ ಅಪೇಕ್ಷೆ ಎಂದಳು. ಈ ಸಂದರ್ಭದಲ್ಲಿ ಇದಕ್ಕೆ ರಾಮನ ಪ್ರತಿಕ್ರಿಯೆ ಏನಾಗಿತ್ತು? ಹೇಗೆ ಅದನ್ನು ಮುಖದಲ್ಲಿಯಾದರೂ ವ್ಯಕ್ತಗೊಳಿಸಿದ ಎಂದು ಕವಿ ಪ್ರಶ್ನಿಸಿ

ಇಪ್ಪೊಳುದು ಎಮ್ಮನೋರಾಲ್ ಇಯಂಬುದರ್ಕ್ಕು ಇಳಿದೇ ಯಾದು
ಶೆಪ್ಪರುವ್ ಗುಣತ್ತು ರಾಮನ್ ತಿರುಮುಖ ಚ್ಚೆಲ್ವಿ ನೋಕ್ಕಿಲ್
ಒಪ್ಪದೇ ಮುನ್ಬುಪಿನ್ಬು ಅಪ್ವಾಚಕಮ್ ಉಣತ್ತ್ರುಕ್ಕೇಟ್ಟ
ಅಪ್ಪೊಟುದು ಅಲರ್ನ್ದ ಶೆನ್ದಾಮರೈಯಿನೈ ವಿನ್ವದು ಅಮ್ಮಾ

ರಾಮನ ಪ್ರತಿಕ್ರಿಯೆಯನ್ನು ಹೇಗೆ ತಾನೇ ತಿಳಿಯ ಬಲ್ಲೆವು? ರಾಮನದು ವರ್ಣನಾತೀತವಾದ ಗುಣ. ಮುಖದಲ್ಲಿ ಯಾವಸೂಚನೆಯೂ ಸಿಗಲಿಲ್ಲವೇ ಎಂದರೆ, ಆತನ ಮುಖ ಆ ಮೊದಲು, ಹಾಗೂ ಅನಂತರ ಕಮಲಗಳಂತಿದ್ದುವು. ಆದರೆ

ಆ ಕ್ಷಣ, ತಾಯಿಯ ಬಾಯಿಂದ ವನವಾಸದ ಆಜ್ಞೆಯನ್ನೂ ಕೇಳಿದ ಆ ಕ್ಷಣದಲ್ಲಿ, ಆ ಮುಖಕಮಲ ಸಂಪೂರ್ಣವಾಗಿ ಅರಳಿದಂತಿತ್ತು ಎಂದಿದ್ದಾರೆ.

ಇದು ರಾಮನ ಸಹಜಗುಣ. ಲವಲೇಶವಾದರೂ ಇದರಿಂದ ಕಳಮಳಿಸಲಿಲ್ಲ. ಬಹುಶಃ ರಾಜ್ಯವನ್ನಾಳುವ ಹಿರಿದಾದ ಜವಾಬ್ದಾರಿಯಿಂದ ಮುಕ್ತನಾದೆ ಎಂಬ ಸಂತೋಷವೇ? ಹೇಗೂ ಅವನ ಮುಖಾರವಿಂದ ಇನ್ನಷ್ಟು ಅರಳಿತೇ ಹೊರತು ಕುಗ್ಗಲಿಲ್ಲ.

ಆಂಜನೇಯ ಸೀತೆಯನ್ನು ಲಂಕೆಯಲ್ಲಿ ಕಂಡು ಹಿಂದಿರುಗಿದ. ಎಲ್ಲರಿಗೂ ಆತನು ಕಂಡದ್ದನ್ನೂ ತಿಳಿವ ಆಸೆ, ರಾಮನಿಗೂ. ಆಂಜನೆಯ ಹೇಳುತ್ತಾನೆ.

ವಿರ್ಪ್ಪಿರುಮ್ ತಡಂ ತೋಳ್ ವೀರ ವೀಂಗು ನೀರ್ ಇಲಂಗೈ ವಿರ್ಪ್ಪಿನ್
ನರ್ಪ್ಪೆರುಮ್ ತವತ್ತಳ್ ಆಯ ನಙ್ಗೈಯೈಕ್ಕಂಡೇ ನಲ್ಲೇನ್
ಇರ್ಪ್ಪಿರಪ್ಪು ಎನ್ಪದು ಒನ್ಱುಮ್ ಇಱುಮ್ಪೊಱೈಯ್ ಎನ್ಪದು ಒನ್ಱುಮ್
ಕರ್ಪ್ಪೆನುಮ್ ಪೇರದು ಒನ್ಱುಮ್ ಕಳಿನಡಂ ಪುರಿಯಕ್ಕಂಡೇನ್

ವಿಶಾಲವಾದ ಭುಜಗಳುಳ್ಳ ವೀರನಾದ ರಾಮನೇ ಸಮುದ್ರದಿಂದಾವೃತವಾದ ಲಂಕೆಯ ಮಧ್ಯೆ ನಾನು ಕಂಡುದು ಕೇವಲ ಒಬ್ಬ ತಪಸ್ವಿನಿಯನ್ನಲ್ಲ. ಆದರೆ ದಿವ್ಯಕುಲ ಸಂಜಾತಳಾಗಿ, ಅಪಾರವಾದ ಸಹನೆಯನ್ನುಳ್ಳ ಪತಿವ್ರತಾಶಿರೋಮಣಿಯನ್ನು. ಆ ತಪಸ್ವಿನಿಯಲ್ಲಿ ಈ ಮೂರೂ ಗುಣಗಳೂ ಸೇರಿ ನರ್ತಿಸುತ್ತಿದ್ದಂತಿದ್ದುವು.

12ನೆಯ ಶತಮಾನದ ನಂತರದಲ್ಲಿ ಬಂದ ವಿಲ್ಲಿಪುತ್ತೂರಾರ್ ವಿಲ್ಲಿಪುತ್ತೂರಿನವರು, 4330 ವೃತ್ತಗಳುಳ್ಳ 10 ಅಧ್ಯಾಯಗಳಲ್ಲಿ ಮಹಾಭಾರತವನ್ನು ಅ ಸಮಗ್ರವಾಗಿ ಬರೆದನು ನಂತರ ನಲ್ಲಾಪ್ಪಿಳ್ಳೈ ಎಂಬ ಕವಿ 10000 ಶ್ಲೋಕಗಳನ್ನು ಸೇರಿಸಿ 18 ಅಧ್ಯಾಯಗಳನ್ನು ಮುಗಿಸಿದರು. ವಿಲ್ಲಿಭಾರತಮ್ ಎಂದು ಖ್ಯಾತವಾದ ವಿಲ್ಲಿಪುತ್ತೂರರ ಭಾರತದಲ್ಲಿ ಬರುವ ಕರ್ಣನ ಚಿತ್ರವೊಂದನ್ನು ಇಲ್ಲಿ ಸ್ಮರಿಸಬಯಸುತ್ತೇನೆ.

ರಣರಂಗದಲ್ಲಿ ಎಲ್ಲವನ್ನೂ ತೆತ್ತು ಅಸಹಾಯನಾಗಿ ಕರ್ಣ ನಿಂತಿದ್ದಾನೆ. ರಥ ಕೆಳಗಿಳಿದಿದೆ. ಅಸ್ತ್ರಪ್ರಯೋಗ ಮಾಡಲು ಪರಶುರಾಮನ ಶಾಪ ಅಡ್ಡಬಂದು ಇನ್ನೇನು ಅರ್ಜುನನ ಇನ್ನೊಂದು ಬಾಣ ಇವನನ್ನು ಸಮಾಪ್ತಿಗೊಳಿಸಬೇಕು. ಆಗ ಶ್ರೀಕೃಷ್ಣ ಕರ್ಣನಿಗೆ ಕೃಪೆತೋರುತ್ತಾನೆ. ಭಾರತದಲ್ಲಿ ಕುಂದಿಲ್ಲದ ಗುಣ ಕರ್ಣನದು. ಅವನ ಬಳಿತಾನೇ ಹೋಗುತ್ತಾನೆ. ನಾನು ನಿನ್ನನ್ನು ನೋಡಲು ಬಂದೆ ಎನ್ನುತ್ತಾನೆ. ಇನ್ನೇನಿದೆ ನೋಡಲು ಎಂದು ಕರ್ಣ ಉತ್ತರಿಸಿದಾಗ ನೀನು ನನ್ನನ್ನು ನೋಡಬೇಕು ಎಂದು ಹೇಳಿ ಅವನಿಗೆ ವಿಶ್ವ ರೂಪದರ್ಶನ ನೀಡುತ್ತಾನೆ. ಕರ್ಣ ಧನ್ಯಭಾವದಿಂದಿದ್ದಾಗ, ಏನಾದರೂ ಬೇಡು ಎನ್ನುತ್ತಾನೆ ಕೃಷ್ಣ. ಇನ್ನೇನು ಬೇಡಲಿ, ಇದಕ್ಕಿಂತ ಇನ್ನೇನು ಬೇಕು ಎಂದರೂ ಒತ್ತಾಯಿಸುತ್ತಾನೆ. ಆಗ ಕರ್ಣ ಕೇಳಿಕೊಂಡುದು ಹೀಗೆ

ಇಲ್ಲೈ ಎನ್ನುವರ್ಪ್ಪೊೀಕ್ಕ್ರ್
ಇಲ್ಲೈ ಎನ್ನುಮರಿಯಾ
ಇದಯುಮ್ ವೇಂಡುಮ್

ಭಗವಂತ, ಇನ್ನೇನಾದರೂ ಜನ್ಮತಾಳಿದರೆ, ನನ್ನಲ್ಲಿಲ್ಲ ಕೊಡು ಎಂದವರಿಗೆ ನಾನು ಇಲ್ಲ ಎನ್ನಬಾರದಂತಹ ಹೃದಯು ನನಗೆಕೊಡು.

ಈತನಿಗಿಂತ ಉತ್ತಮ ಪುರುಷ ಬೇರಾರು ?

ಈ ನನ್ನ ಪ್ರಬಂಧವನ್ನು ಪೆರಿಯ ಪುರಾಣವನ್ನು ರಚಿಸಿದ ಶೇಕ್ಕಿಳಾರರ ಈ ಪ್ರಾರ್ಥನೆಯೊಂದಿಗೆ ಮುಗಿಸುತ್ತೇನೆ.

ಉಲಗೆಲಾಮ್ ಉಣರ್ನ್ದೋದರ್ ಕರಿಯುವನ್
ನಿಲವುಲಾವಿಯ ನೀರ್ಮಲಿಮೇಣಿಯನ್
ಅಲಗಿಲ್ ಜೋತಿಯನ್ ಅಂಬಲತ್ತಾಡುವಾನ್
ಮಲರ್ಚಿಲಮ್ಬಡಿ ವಾಟ್ತಿ ವಣಂಗವಾವನ್

ಎಲ್ಲ ಲೋಕಗಳಿಗೂ ತನ್ನ ಸ್ವಭಾವ ತಿಳಿಸಲು ಸಾಧ್ಯವಿಲ್ಲದವನು, ಬಾಲಚಂದ್ರ ಗಂಗೆಯುನ್ನು ಜಡೆಯಲ್ಲಿ ಅಲಂಕರಿಸಿದವನು, ಅಳತೆಯಿಲ್ಲದ ಜೋತಿರ್ಮಯ, ಚಿದಾಕಾಶದಲ್ಲಿ ನರ್ತಿಸುವವನ ಜ್ಞಾನಪ್ರಕಾಶವನ್ನು ಹೊಂದಿ ನೂಪುರವಿರುವ ಶ್ರೀಪಾದಗಳನು ಸ್ತುತಿಸಿ ನಮಿಸುವೆನು.

ಎಂಟನೆಯ ಶತಮಾನದಲ್ಲಿ ಭಾರತವನ್ನೆಲ್ಲ ಆವರಿಸಿದ ಮಹಾಧಾರ್ಮಿಕ ಸುಧಾರಣೆಯು ಪಲ್ಲವರ ಆಸ್ಥಾನದಲ್ಲಿ ಆರಂಭವಾಯಿತು. ಆ ಕಾಲದಲ್ಲಿಯೇ ಪ್ರಸಿದ್ಧವಾದ ಮತ್ತು ಭಾರತದ ಅನೇಕ ಭಾಗಗಳಿಗೆ ಇನ್ನೂ ಅಪರಿಚಿತವಾಗಿರುವ, ಹಾಗೂ ಧಾರ್ಮಿಕ ವಿಚಾರ ಮತ್ತು ಭಕ್ತಿಯ ಉದಾತ್ತ ಅಭಿವ್ಯಕ್ತಿಯ ಗಣಿಯಂತಿರುವ ತಮಿಳು ವೈಷ್ಣವ ಮತ್ತು ಶೈವ ಸಾಹಿತ್ಯವು ಪ್ರಧಾನವಾಗಿ ಬೆಳೆಯಿತು. ದಕ್ಷಿಣ ಭಾರತದಲ್ಲಿ ಶಿವ ಮತ್ತು ವಿಷ್ಣು ಪಂಥಗಳೆರಡೂ ಭಕ್ತಿಯ ರೂಪಗಳಾಗಿವೆ. ವಾಸ್ತವವಾಗಿ, ದಕ್ಷಿಣದ ಧಾರ್ಮಿಕ ಭಾವನೆಯನ್ನು ಇಂದಿಗೂ ಪ್ರಭಾವಯುತವಾಗಿ ಉಳಿಸಿರುವ ಶೈವ-ವೈಷ್ಣವ ಸಂತರೆಲ್ಲ ಪಲ್ಲವ ಪ್ರಭುತ್ವ ಕಾಲದಲ್ಲಿ ಜೀವಿಸಿದ್ದರು. ಅವರಲ್ಲಿ ಕಡೆಯ ಸಂತನೆನಿಸಿದ ಸುಂದರ ಮೂರ್ತಿಯು ಪಲ್ಲವರ ಕಡೆಗಾಲದಲ್ಲಿ ಬದುಕಿದ್ದನು.... ದಕ್ಷಿಣ ಭಾರತದ ಧಾರ್ಮಿಕ ಸಂಪ್ರದಾಯವು ಒಂದು ಕಾಲಕ್ಕೆ ಜೈನರ ಪ್ರಭಾವಕ್ಕೆ ಒಳಗಾಗಿತ್ತೆಂದು ನಂಬಲು ಆಧಾರವಿದ್ದರೂ, ಹಿಂದಿನ ಕಾಲದ ಜೈನ-ಬೌದ್ಧ ಗುರುಗಳು ಕ್ರಮೇಣ ಪ್ರಭಾವಹೀನರಾಗಿದ್ದರೆಂದು ಕಾಂಚಿಗೆ ಭೇಟಿಯಿತ್ತಿದ್ದ ಯುವಾನ್ ಚುವಾಂಗ್‌ನ ಬರಹಗಳಿಂದ ಕಂಡುಬರುತ್ತದೆ.

ಸಿ. ಎಂ. ಮುನಿರಾಮಪ್ಪ ಮತ್ತು
ಬಿ. ಎಚ್. ಸುರೇಶ್

ಸಣ್ಣ ಕೈಗಾರಿಕೆಗಳು, ಸರ್ಕಾರ ಹಾಗೂ ಉದ್ಯಮಿತನ : ಒಂದು ಅವಲೋಕನ

ಪೀಠಿಕೆ

ರಾಷ್ಟ್ರದ ಪ್ರತಿಯೊಬ್ಬ ಪ್ರಜೆಯೂ ಸಹ ಅರ್ಥಪೂರ್ಣ ಹಾಗೂ ಲಾಭದಾಯಕ ವೃತ್ತಿಯಲ್ಲಿ ತೊಡಗಿದಾಗ ಮಾತ್ರ ನಾವು ಅದರ ಸರ್ವತೋಮುಖ ಅಭಿವೃದ್ಧಿಯನ್ನು ನಿರೀಕ್ಷಿಸಬಹುದು. ದೇಶದ ಪ್ರತಿಯೊಬ್ಬ ಪ್ರಜೆಗೂ ಇದರಿಂದ ನಿರೀಕ್ಷಿತ ಅನುಕೂಲವಾಗುತ್ತದೆಂಬುದು ಇಲ್ಲಿಯ ಊಹೆ. ಇಂತಹ ವಾತಾವರಣದ ನಿರ್ಮಾಣದ ಜವಾಬ್ದಾರಿ ಸರಿಸಮನಾಗಿ ಅಲ್ಲಿನ ವ್ಯಕ್ತಿಗಳ ಮತ್ತು ಸರ್ಕಾರದ ಮೇಲಿರುತ್ತದೆ. ವಿವಿಧ ರಂಗಗಳಲ್ಲಿ ಸಮಾನ ಬೆಳವಣಿಗೆ ಇದ್ದರೆ ಮಾತ್ರ ಇಂತಹ ವಾತಾವರಣದ ನಿರ್ಮಾಣ ಸಾಧ್ಯ. ಏಕೆಂದರೆ ಪ್ರತಿಯೊಂದು ಕ್ಷೇತ್ರವೂ ಇತರೆ ಕ್ಷೇತ್ರಗಳಿಗೆ ಪೂರಕವಾಗಿರುವುದೂ ಅಲ್ಲದೆ ಇತರೆ ಕ್ಷೇತ್ರಗಳಿಂದ ಪ್ರೇರಣೆಗೊಂಡಿರುತ್ತದೆ.

ಇದು ವೈಜ್ಞಾನಿಕ ಯುಗ. ನಮಗೆ ತಿಳಿದಂತೆ ವಿಜ್ಞಾನ ಹಾಗೂ ತಂತ್ರಜ್ಞಾನಗಳು ತಮ್ಮ ಹಿರಿಮೆಯನ್ನು ಹಾಗೂ ಪ್ರಾಮುಖ್ಯತೆಯನ್ನು ಪ್ರಪಂಚದ ಎಲ್ಲ ಮೂಲೆಗಳಲ್ಲಿ ಸಾದರಪಡಿಸಿವೆ. ವಿಜ್ಞಾನ ಹಾಗೂ ತಂತ್ರಜ್ಞಾನಗಳು ಪ್ರತಿ ದೇಶದ ಪ್ರತಿಯೊಬ್ಬ ಪ್ರಜೆಯ ಇಂದಿನ ಅವಶ್ಯಕತೆಗಳಲ್ಲೊಂದಾಗಿವೆ. ಇವುಗಳನ್ನು ಹೊರತುಪಡಿಸಿ ಯಾವುದೇ ದೇಶ ಮುಂದುವರಿಯಲು ಸಾಧ್ಯವಿಲ್ಲ. ಆದರೆ ಇವುಗಳ ಬಳಕೆ ಎಲ್ಲ ದೇಶಗಳಲ್ಲಿ ಏಕರೀತಿಯಾಗಿಲ್ಲ ಮತ್ತು ಹಾಗಿರಬೇಕೆಂಬ ನಿಯಮವೂ ಇಲ್ಲ. ಆದ್ದರಿಂದಲೇ ನಾವು ಪ್ರಗತಿಯಲ್ಲಿ ವಿವಿಧ ಹಂತಗಳನ್ನು ತಲುಪಿರುವ ರಾಷ್ಟ್ರಗಳನ್ನು ಕಾಣುತ್ತೇವೆ. ಯಾವುದೇ ರಾಷ್ಟ್ರದಲ್ಲಿ ವಿಜ್ಞಾನದ ಬಳಕೆ ಅಲ್ಲಿನ ಸರ್ಕಾರದ ಧೋರಣೆಗಳು, ಜನಸಂಖ್ಯೆ, ಪ್ರಕೃತಿ ಸಂಪತ್ತು ಮತ್ತು ಜೀವನಮಟ್ಟ

ಇವುಗಳನ್ನವಲಂಬಿಸಿರುತ್ತದೆ. ಆದ್ದರಿಂದ ಜನಸಂಖ್ಯೆ ಕಡಿಮೆ ಇರುವ ದೇಶಗಳಲ್ಲಿ ಬಂಡವಾಳಾಭಿಮುಖ (Capital oriented) ಕೈಗಾರಿಕೆಗಳನ್ನೂ, ಅತಿ ಜನಸಂಖ್ಯಾ ದೇಶಗಳಲ್ಲಿ ಕಾರ್ಮಿಕಾಭಿಮುಖ (Labour oriented) ಕೈಗಾರಿಕೆಗಳನ್ನು ಪ್ರೋತ್ಸಾಹಿಸುವುದರ ಮೂಲಕ ಆಯಾ ದೇಶಗಳ ಪ್ರಕೃತಿ ಸಂಪತ್ತು ಮತ್ತು ಕಾರ್ಮಿಕ ಶಕ್ತಿಯನ್ನು ಸಾರ್ಥಕವಾಗಿ ಬಳಸಬಹುದು.

ಭಾರತದ ಪರಿಸ್ಥಿತಿ

ಭಾರತವು ಅತಿ ಜನಸಂಖ್ಯಾ ಪ್ರಸರಣವಿರುವ ಹಾಗೂ ಪ್ರತಿ ಶತ 70 ಜನರು ವ್ಯವಸಾಯವನ್ನೇ ನಂಬಿರುವ ಪ್ರಗತಿ ಪಥದಲ್ಲಿ ಸಾಗುತ್ತಿರುವ ರಾಷ್ಟ್ರ. ನಾವು ಕೈಗಾರಿಕಾ ಬೆಳವಣಿಗೆಯಲ್ಲಿ ಪ್ರಪಂಚದಲ್ಲಿ 10ನೆಯ ಸ್ಥಾನದಲ್ಲಿರುವೆವಾದರೂ ನಮ್ಮ ಕೈಗಾರಿಕಾ ಬೆಳವಣಿಗೆಯನ್ನು ಅವಲೋಕಿಸಿದಾಗ ಅದು ಸಮರ್ಪಕ ಸ್ಥಿತಿಯಲ್ಲಿದೆ ಎಂದೆನಿಸುವುದಿಲ್ಲ. ಮೊದಲಿನಿಂದಲೂ ಕೆಲವೇ ಜನ ಬಂಡವಾಳ ಶಾಹಿಗಳ ಕೈಯಲ್ಲಿ ನಮ್ಮ ಕೈಗಾರಿಕಾರಂಗ ಸಿಲುಕಿ ತಾನು ಪಡೆಯಬೇಕಾದ ವೇಗವನ್ನು ಪಡೆಯದೆ ನಲುಗಿದೆ. ಅಲ್ಲದೆ ಈ ಕೈಗಾರಿಕೋದ್ಯಮಿಗಳು ಲಾಭಗಳಿಕೆಯ ದೃಷ್ಟಿಯಿಂದ ಬಂಡವಾಳಾಭಿಮುಖ ಕೈಗಾರಿಕೆಗಳನ್ನು ಮಾತ್ರ ಸ್ಥಾಪಿಸುವಲ್ಲಿ ಆಸಕ್ತಿ ಹೊಂದಿದ್ದರು. ಇದರ ಪರಿಣಾಮ ಪ್ರಗತಿಯ ಅಸಮತೋಲನ. ಸರ್ಕಾರದ ಕೈಗಾರಿಕಾ ನೀತಿಯೂ ಸಹ ಸ್ವಲ್ಪಮಟ್ಟಿಗೆ ಇಂತಹ ಅಸಮತೋಲನೆಗೆ ಕಾರಣನೆಂದು ಹೇಳಬಹುದು. ಉತ್ಪಾದನೆಯ ಯಾಂತ್ರೀಕರಣ ಈ ಪರಿಸ್ಥಿತಿಯ ಶಿಶು. ಇದು ನಿರುದ್ಯೋಗವೆಂಬ ಪೆಡಂಭೂತಕ್ಕೆ ದಾರಿ ಮಾಡಿದೆ. ಇದರಿಂದಾಗಿ ಇಂದು ದೇಶದಲ್ಲಿ ನಿರುದ್ಯೋಗ ತಾಂಡವಾಡುತ್ತಿದೆ. ದಿನದಿಂದ ದಿನಕ್ಕೆ ಇದರ ಭೀಕರತೆ ಹೆಚ್ಚುತ್ತಿರುವುದೂ ಅಲ್ಲದೆ ವಿದ್ಯಾವಂತ ಯುವಕರನ್ನು ಅಸಹಾಯಕರನ್ನಾಗಿ ಮಾಡುತ್ತಿದೆ. ಇವುಗಳೆಲ್ಲವುಗಳ ನಿವಾರಣೋಪಾಯಕ್ಕೆ ಇರುವ ಒಂದೇ ದಾರಿಯೆಂದರೆ ಸಣ್ಣ ಪ್ರಮಾಣದ ಉದ್ದಿಮೆಗಳನ್ನು ಪ್ರೋತ್ಸಾಹಿಸುವುದು.

ಸಣ್ಣ ಕೈಗಾರಿಕೆಗಳೇ ಏಕೆ ?

ಹಲವಾರು ಕಾರಣಗಳಿಂದಾಗಿ ರಾಷ್ಟ್ರ ಸಣ್ಣ ಕೈಗಾರಿಕೆಗಳ ಪ್ರಗತಿಯನ್ನು ನಿರೀಕ್ಷಿಸುತ್ತಿದೆ. ಪ್ರಮುಖವಾಗಿ ಈ ಕೆಳಗಿನ ಕಾರಣಗಳನ್ನು ನೀಡಬಹುದು :

ಸಣ್ಣ ಹಾಗೂ ಗುಡಿ ಕೈಗಾರಿಕೆಗಳಿಗೆ ಹೆಚ್ಚಿನ ಬಂಡವಾಳದ ಅವಶ್ಯಕತೆ ಇಲ್ಲದಿರುವುದರಿಂದ ಅವುಗಳನ್ನು ಸುಲಭವಾಗಿ ಸ್ಥಾಪಿಸಬಹುದು. ಇವುಗಳು ಬಹುಪಾಲು ಕಾರ್ಮಿಕಾಭಿಮುಖ ಕಾರ್ಖಾನೆಗಳು. ಇದರಿಂದ ಸ್ಥಳೀಯ ಜನರಿಗೆ ಉದ್ಯೋಗಾವಕಾಶ ಕಲ್ಪಿಸಬಹುದು. ಇವುಗಳನ್ನು ದೂರದ ಹಳ್ಳಿಗಳಲ್ಲಿಯೂ ಸ್ಥಾಪಿಸಬಹುದು ; ಏಕೆಂದರೆ ಇವುಗಳು ಸ್ಥಳೀಯ ಕಚ್ಚಾ ಪದಾರ್ಥಗಳನ್ನೇ

ಉಪಯೋಗಿಸಿಕೊಳ್ಳುತ್ತವೆ ಮತ್ತು ಉತ್ಪಾದನೆ ಹೆಚ್ಚಿಲ್ಲದಿರುವುದರಿಂದ ಸ್ಥಳೀಯ ಮಾರುಕಟ್ಟೆಯಲ್ಲಿಯೇ ಅವುಗಳ ಉತ್ಪನ್ನವನ್ನು ಮಾರಬಹುದಾಗಿದೆ.

ಸಣ್ಣ ಕೈಗಾರಿಕೆಗಳ ಪರಿಸ್ಥಿತಿ

ಇತ್ತೀಚಿನ ವರ್ಷಗಳಲ್ಲಿ ಸರ್ಕಾರವು ಸಣ್ಣ ಕೈಗಾರಿಕಾ ಬೆಳವಣಿಗೆಗೆ ಅತಿ ಹೆಚ್ಚು ಪ್ರಮಾಣದ ಉತ್ತೇಜನವನ್ನು ನೀಡುತ್ತಿದೆ. ಆರನೆಯ ಯೋಜನೆಯಲ್ಲಿ ಇದಕ್ಕಾಗಿ ಮೀಸಲಾಗಿಟ್ಟ ಹಣ ಒಟ್ಟು 6,161 ಕೋಟಿ ರೂ. ಗಳಾಗಿತ್ತು. ಇಂದು ದೇಶದಲ್ಲಿ ಸುಮಾರು 12.75 ಲಕ್ಷ ಸಣ್ಣ ಕೈಗಾರಿಕೆಗಳಿವೆ. ಇವುಗಳ ಉತ್ಪನ್ನವು ವ್ಯವಸ್ಥಿತ ಕೈಗಾರಿಕೆಗಳ ಒಟ್ಟು ಉತ್ಪಾದನೆಯ ಕಾಲು ಭಾಗದಷ್ಟು. 1983–84 ರಲ್ಲಿ ಸಣ್ಣ ಕೈಗಾರಿಕೆಗಳ ಒಟ್ಟು ಉತ್ಪಾದನೆ ರೂ. 30,200 ಕೋಟಿಗಳು (1978–79 ರ ಬೆಲೆಗಳಲ್ಲಿ) ಇಂದು ಸುಮಾರು 85 ಲಕ್ಷಕ್ಕೂ ಹೆಚ್ಚು ಜನ ಕಾರ್ಮಿಕರು ಇವುಗಳಲ್ಲಿ ದುಡಿಯುತ್ತಿದ್ದಾರೆ.

1975 ರಿಂದ 1985 ರ ಹತ್ತು ವರ್ಷಗಳನ್ನು ಸಣ್ಣ ಕೈಗಾರಿಕೆಗಳ ದಶಕ ಎಂದು ಕರೆಯಬಹುದು. ಈ ಹತ್ತು ವರ್ಷಗಳಲ್ಲಿ ದೇಶವು ಹಿಂದೆಂದೂ ಕಾಣದ ಪ್ರಗತಿಯನ್ನು ಸಣ್ಣ ಕೈಗಾರಿಕಾ ರಂಗದಲ್ಲಿ ಸಾಧಿಸಿದೆ. ಇನ್ನು ಮುಂದೂ ಸಹ ಪ್ರಗತಿಯ ವೇಗ ಹೆಚ್ಚಾಗುತ್ತದೆಯೇ ವಿನಹ ಕಡಿಮೆಯಾಗುವ ಯಾವ ಸೂಚನೆಗಳೂ ಇಲ್ಲ. ಇದು ಅತ್ಯಂತ ಸಮಾಧಾನಕರವಾದ ಅಂಶ. ಇಂತಹ ತ್ವರಿತ ಬೆಳವಣಿಗೆಗೆ ಸರ್ಕಾರವು ಉದ್ಯಮಶೀಲ ವ್ಯಕ್ತಿಗಳಿಗೆ ನೀಡುತ್ತಿರುವ ಸರ್ವ ವಿಧದ ಉತ್ತೇಜನವೇ ಕಾರಣ. ಸರ್ಕಾರವು ದೇಶದ ಕೈಗಾರಿಕಾ ಬೆಳವಣಿಗೆಯನ್ನು ಆಧರಿಸಿ ಎಲ್ಲ ಜಿಲ್ಲೆಗಳನ್ನು ಮೂರು ಮುಖ್ಯ ಗುಂಪುಗಳನ್ನಾಗಿ ವಿಂಗಡಿಸಿದೆ :

1. ಕೈಗಾರಿಕೆಯಲ್ಲಿ ಮುಂದುವರೆದ ಜಿಲ್ಲೆಗಳು
2. ಕೈಗಾರಿಕೆಯಲ್ಲಿ ಹಿಂದುಳಿದ ಜಿಲ್ಲೆಗಳು ಹಾಗೂ
3. ಕೈಗಾರಿಕೆಯಲ್ಲಿ ಅತಿ ಹಿಂದುಳಿದ ಜಿಲ್ಲೆಗಳು.

ದೇಶದ ಎಲ್ಲ ಭಾಗಗಳಲ್ಲಿ ಸಮಾನವಾದ ಕೈಗಾರಿಕಾ ಬೆಳವಣಿಗೆಯ ದೃಷ್ಟಿಯಿಂದ ಕೈಗಾರಿಕೆಯಲ್ಲಿ ಹಿಂದುಳಿದ ಮತ್ತು ಅತಿ ಹಿಂದುಳಿದ ಜಿಲ್ಲೆಗಳಲ್ಲಿ ಕೈಗಾರಿಕಾ ಸ್ಥಾಪನೆಗೆ ಸರ್ಕಾರ ಪ್ರಾಮುಖ್ಯತೆ ನೀಡಿದೆ. ಅನೇಕ ಸೌಲಭ್ಯಗಳನ್ನು ಒದಗಿಸಿದೆ. ಸಬ್ಸಿಡಿಯನ್ನು ನೀಡುತ್ತದೆ ಹಾಗೂ ರಿಯಾಯಿತಿದರದಲ್ಲಿ ಸಾಲ ದೊರೆಯುವಂತೆ ಮಾಡಿದೆ. ಈ ಎಲ್ಲ ಸೌಲಭ್ಯಗಳು ವಿವಿಧ ಸಂಸ್ಥೆಗಳಿಂದ ದೊರೆಯುತ್ತವೆ. ಅತಿ ಮುಖ್ಯವಾದ ಸೌಲಭ್ಯಗಳು ಕೆಳಕಂಡಂತೆ ಇವೆ :

1. ಆಸಕ್ತರಿಗೆ ಉದ್ಯಮಿತನದ ತರಬೇತಿ ನೀಡುವುದು

2. ಯೋಜನೆಗಳನ್ನು ಸಿದ್ಧಪಡಿಸುವಲ್ಲಿ ಸಹಾಯ ಮಾಡುವುದು. ಅದರ ಶೇ. 80 ರಷ್ಟು ಅಥವಾ ರೂ. 5000 ದ ವರೆಗೆ ಖರ್ಚನ್ನು ವಹಿಸಿಕೊಳ್ಳುವುದು
3. ಶೇರುಗಳಲ್ಲಿ ಮತ್ತು ಸಾಲಪತ್ರಗಳಲ್ಲಿ ಹಣ ತೊಡಗಿಸುವುದು ಮತ್ತು ಅಗತ್ಯವಾದ ಸಾಲವನ್ನು ರಿಯಾಯಿತಿ ದರದಲ್ಲಿ ನೀಡುವುದು.
4. ಕೈಗಾರಿಕಾ ನೆಲೆಗಳ ನಿರ್ಮಾಣ ಹಾಗೂ ಶೆಡ್ಡುಗಳ ವಿತರಣೆ.
5. ಯಾಂತ್ರಿಕ ಸಲಹೆಗಳನ್ನು ನೀಡುವುದು
6. ಯಂತ್ರ ಸಾಮಗ್ರಿಗಳನ್ನು ನೀಡಿ ಕಂತುಗಳಲ್ಲಿ ಹಣ ಮರುಪಾವತಿಯ ಸೌಲಭ್ಯ
7. ಕಚ್ಚಾಪದಾರ್ಥಗಳ ವಿತರಣೆ
8. ರಫ್ತು ಮಾಡುವುದಕ್ಕೆ ಬೇಕಾದ ನೆರವು ನೀಡುವುದು
9. ತೆರಿಗೆ ರಿಯಾಯಿತಿಗಳು ಇತ್ಯಾದಿ

ಉದ್ಯಮಿತನ

ಕೈಗಾರಿಕೆಗಳು ಬೆಳೆಯ ಬೇಕಾದರೆ ಅವುಗಳನ್ನು ಹುಟ್ಟು ಹಾಕಿ ನಡೆಸ ಬಲ್ಲ ವ್ಯಕ್ತಿಗಳು ಬೇಕು. ಕೈಗಾರಿಕಾ ಸ್ಥಾಪನೆ ಎಲ್ಲರಿಂದಲೂ ಸಾಧ್ಯವಿಲ್ಲ. ಕೆಲವು ವಿಶಿಷ್ಟ ಗುಣಗಳಿರುವ ವ್ಯಕ್ತಿಗಳಿಂದ ಮಾತ್ರ ಸಾಧ್ಯ. ಇಂತಹವರನ್ನು 'ಉದ್ಯಮ ಶೀಲ' ರೆಂದು ಕರೆಯುತ್ತೇವೆ. ಯಾವ ಒಬ್ಬ ವ್ಯಕ್ತಿ ತಯಾರಿಕೆಗೆ ಬೇಕಾದ ಮೂಲ ಸಾಮಗ್ರಿಗಳನ್ನು ವ್ಯವಸ್ಥಿತವಾಗಿ ಸಂಘಟಿಸಿ ಉತ್ಪಾದನೆಯನ್ನು ಮಾಡಬಲ್ಲನೋ ಅವನೇ ನಿಜವಾದ ಉದ್ಯಮಶೀಲ. ಇಂತಹ ವ್ಯಕ್ತಿಗತ ಶಕ್ತಿ ಆತನನ್ನು ಆಲೋಚನೆಗೆ ಈಡು ಮಾಡುತ್ತದೆ. ಇರುವ ಸಂಪನ್ಮೂಲಗಳನ್ನು ಹೇಗೆ ತನ್ನ ಮತ್ತು ಸಮಾಜದ ಬಳಕೆಗೆ ಉಪಯೋಗಿಸಿಕೊಳ್ಳಬಹುದೆಂದು ಮಾರ್ಗದರ್ಶನ ನೀಡುತ್ತದೆ. ಹೊಸ ದಿಕ್ಕಿನತ್ತ ಸಮಾಜವನ್ನು ಕೊಂಡೊಯ್ಯಲು ಹವಣಿಸುತ್ತದೆ ಮತ್ತು ಜಯಶೀಲನನ್ನಾಗಿ ಮಾಡುತ್ತದೆ.

ಪ್ರತಿ ವ್ಯಕ್ತಿಯಲ್ಲಿಯೂ ಸೂಕ್ತ ಪ್ರತಿಭೆಯ ಪ್ರಾತಿನಿಧ್ಯವನ್ನು ನಾವು ಕಾಣಬಹುದು. ಕೆಲವೊಮ್ಮೆ ಕೆಲವರಲ್ಲಿ ಪ್ರತಿಭೆ ಹುಟ್ಟಿನಿಂದ ಬಂದಿರುತ್ತದೆ. ಇದನ್ನು ಸರಿಯಾದ ಮಾರ್ಗದಲ್ಲಿ ಬೆಳೆಸಿದವನಿಗೆ ಜಯವು ಕಟ್ಟಿಟ್ಟ ಬುತ್ತಿ. ಹೊಸ ಉದ್ದಿಮೆಗಳನ್ನು ಸ್ಥಾಪಿಸುವತ್ತ ಈ ಪ್ರತಿಭೆಯನ್ನು ತಿರುಗಿಸಿ ಶ್ರದ್ಧೆಯಿಂದ, ಮುಂದಾಲೋಚನೆಯಿಂದ ಕೆಲಸ ಮಾಡಿದಲ್ಲಿ ಅಂತಹ ವ್ಯಕ್ತಿ ಪ್ರಗತಿಶೀಲ ಕೈಗಾರಿಕೋದ್ಯಮಿಯಾಗುತ್ತಾನೆ. ಹಲವರಿಗೆ ಜೀವನೋಪಾಯದ ಮಾರ್ಗ ತೋರುತ್ತಾನೆ.

ಹಿಂದಿನ ಕಾಲದಲ್ಲಿ ಕೆಲವು ಮನೆತನಗಳಲ್ಲಿ ಉದ್ಯಮಿತನವು ಹುಟ್ಟಿನಿಂದಲೇ ಬರುತ್ತಿತ್ತು ಮತ್ತು ಎಲ್ಲರೂ ಉದ್ಯಮಿಗಳಾಗಲು ಸಾಧ್ಯವಿಲ್ಲ ಎಂದು ತಿಳಿಯಲಾಗಿತ್ತು.

ಆಗ ಕೈಗಾರಿಕೆಗಳನ್ನು ಸ್ಥಾಪಿಸುವುದು ಸುಲಭದ ಮಾತಾಗಿರಲಿಲ್ಲ. ಆದರೆ ಈಗ ವಾತಾವರಣ ಬದಲಾಗಿದೆ. ಬಂಡವಾಳವನ್ನು ಹೂಡುವುದಾಗಲಿ, ಕಾರ್ಮಿಕರ ಅಭಾವವಾಗಲಿ ಅಥವಾ ಮಾರುಕಟ್ಟೆಯ ತೊಂದರೆಯಾಗಲಿ ಮುಖ್ಯ ವಿಷಯಗಳಲ್ಲ. ಈ ತೊಂದರೆಗಳನ್ನು ಬಗೆಹರಿಸಿ ಕೈಗಾರಿಕಾ ಪ್ರಗತಿಯನ್ನು ಸಾಧಿಸಲು ಅನೇಕ ನಿವಾರಣೋಪಾಯಗಳಿವೆ. ಆದ್ದರಿಂದ ಯಾರು ಬೇಕಾದರೂ ಸರಿಯಾದ ತರಬೇತಿ ಹೊಂದಿದರೆ ಉದ್ಯಮಿಗಳಾಗಬಹುದು. ಇದು ಬಹಳ ಮಟ್ಟಿಗೆ ನಿಜವೂ ಹೌದು. ಆದ್ದರಿಂದಲೇ ಸರ್ಕಾರವು ಉದ್ಯಮಿತನವನ್ನು ಬೆಳೆಸಲು ಸಾಕಷ್ಟು ಶಕ್ತಿಯನ್ನು ವ್ಯಯಿಸುತ್ತಿದೆ.

ರಾಜ್ಯ ಸರ್ಕಾರ ಮತ್ತು ಉದ್ಯಮಿತನ

ರಾಜ್ಯ ಸರ್ಕಾರವು ಈ ಕೆಳಗಿನ ಸಂಸ್ಥೆಗಳ ಮೂಲಕ ಜನರಲ್ಲಿ ಉದ್ಯಮಿತನದ ತರಬೇತಿಯನ್ನು ನೀಡುತ್ತದೆ.

1. ರಾಜ್ಯ ಹಣಕಾಸು ಸಂಸ್ಥೆ
2. ಜಿಲ್ಲಾ ಕೈಗಾರಿಕಾ ಕೇಂದ್ರಗಳು
3. ವಾಣಿಜ್ಯ ಬ್ಯಾಂಕುಗಳು ಮತ್ತು
4. ಇತರೆ ಸಂಸ್ಥೆಗಳು

ರಾಜ್ಯ ಹಣಕಾಸು ಸಂಸ್ಥೆ ಕೈಗಾರಿಕೆಗಳಿಗೆ ದೀರ್ಘಾವಧಿ ಮತ್ತು ಮಧ್ಯಮಾವಧಿ ಸಾಲಗಳನ್ನು ನೀಡುವ ಸಲುವಾಗಿ ಪ್ರಾರಂಭವಾದುದು. ವಾಣಿಜ್ಯ ಬ್ಯಾಂಕುಗಳೂ ಸಹ ಅಲ್ಪಾವಧಿ ಸಾಲವನ್ನು ನೀಡುವ ಉದ್ದೇಶದಿಂದ ಪ್ರಾರಂಭವಾದವು. ಆದರೆ ಇತ್ತೀಚೆಗೆ ಇವೆರಡೂ ಸಹ ಜನರಿಗೆ ಉದ್ಯಮಿತನದ ತರಪೇತನ್ನು ನೀಡುತ್ತಿವೆ. ತರಬೇತಿಯ ಅವಧಿಯಲ್ಲಿ ಫಲಾನುಭವಿಗಳಿಗೆ ಕೈಗಾರಿಕೋದ್ಯಮದ ಬಗ್ಗೆ ಮಾಹಿತಿಯನ್ನು ನೀಡುತ್ತವೆ. ರಾಷ್ಟ್ರೀಕೃತ ವಾಣಿಜ್ಯ ಬ್ಯಾಂಕುಗಳಲ್ಲಿ ಮೊದಲನೆ ಸ್ಥಾನದಲ್ಲಿರುವ ಭಾರತೀಯ ಸ್ಟೇಟ್ ಬ್ಯಾಂಕ್ 83-84ನೇ ಸಾಲಿನಲ್ಲಿ ಒಟ್ಟು 95 ಕಮ್ಮಟಗಳನ್ನು ನಡೆಸಿದೆ. ಇದರಲ್ಲಿ 2200 ಫಲಾನುಭವಿಗಳು ಭಾಗವಹಿಸಿದ್ದರು. ಇದರಲ್ಲಿ ಭಾಗವಹಿಸಿದವರಲ್ಲಿ ಶೇ. 39 ರಷ್ಟು ಜನರು ಈಗಾಗಲೇ ತಮ್ಮ ಸ್ವಂತ ಯೋಜನೆಗಳನ್ನು ಕೈಗೆತ್ತಿಕೊಂಡಿದ್ದಾರೆ. ಇಂತಹ ಕಮ್ಮಟಗಳನ್ನು ದೇಶದ ವಿವಿಧ ಭಾಗಗಳಲ್ಲಿ ನಡೆಸಲಾಗುತ್ತದೆ.

ಈ ಕಮ್ಮಟಗಳಲ್ಲಿ ಭಾಗವಹಿಸುವವರಿಗೆ ಆಯಾ ಪ್ರದೇಶದ ಹವಾಮಾನ, ವ್ಯವಸಾಯೋತ್ಪನ್ನಗಳು, ಕಚ್ಚಾ ಪದಾರ್ಥಗಳು, ಮಾರುಕಟ್ಟೆಗಳು, ವಿವಿಧ ಪದಾರ್ಥಗಳಿಗಿರುವ ಬೇಡಿಕೆ ಮತ್ತು ತಯಾರಿಕೆ, ಕೈಗಾರಿಕಾ ಅವಕಾಶಗಳ ಬಗ್ಗೆ ಹೆಚ್ಚಿನ ತಿಳುವಳಿಕೆಯನ್ನು ನೀಡಲಾಗುತ್ತದೆ ಅಲ್ಲದೆ ಕೈಗಾರಿಕೆಗಳನ್ನು ಸ್ಥಾಪಿಸುವ ಬಗೆ,

ಎದುರಿಸಬೇಕಾದ ತೊಂದರೆಗಳು ಮತ್ತು ನಿವಾರಣೋಪಾಯಗಳು, ಸರ್ಕಾರದ ವಿವಿಧ ಸಂಸ್ಥೆಗಳಿಂದ ದೊರೆಯಬಹುದಾದ ಸಹಾಯ, ಸಾಲವನ್ನು ಯಾವ ಯಾವ ಮೂಲಗಳಿಂದ ಎಷ್ಟು ಪಡೆಯಬೇಕು, ಕಾರ್ಖಾನೆಯ ಆಡಳಿತವನ್ನು ಹೇಗೆ ನಡೆಸಬೇಕು ಎಂಬುದರ ಬಗ್ಗೆಯೂ ಸಹ ಮಾಹಿತಿಯನ್ನು ಒದಗಿಸುತ್ತವೆ. ಯೋಜನೆಯ ಅಂದಾಜು ಪಟ್ಟಿಯನ್ನು ತಯಾರಿಸಲು ನೆರವಾಗುತ್ತವೆ.

ರಾಜ್ಯದ ಎಲ್ಲ ಜಿಲ್ಲೆಗಳಲ್ಲಿ ಜಿಲ್ಲಾ ಕೈಗಾರಿಕಾ ಕೇಂದ್ರಗಳಿವೆ. ಈ ಕೇಂದ್ರಗಳು ಆಯಾ ಜಿಲ್ಲೆಯ ಎಲ್ಲ ಕೈಗಾರಿಕೆಗಳ ಅಂಕಿ ಅಂಶಗಳನ್ನು ದಾಖಲು ಮಾಡಿಕೊಳ್ಳುತ್ತವೆ. ಅಲ್ಲದೆ ಯಾವ ಕೈಗಾರಿಕೆಗಳಿಗೆ ಸೂಕ್ತ ಅವಕಾಶಗಳಿವೆ ಎಂಬುದನ್ನು ಅಭ್ಯಸಿಸಿ ಅವುಗಳ ಸ್ಥಾಪನೆಗೆ ಉತ್ತೇಜಿಸುತ್ತವೆ. ಪ್ರಸ್ತುತ, ರಾಜ್ಯದಲ್ಲಿ ಈ ಕೇಂದ್ರಗಳು ರಾಜ್ಯ ಹಣಕಾಸು ಸಂಸ್ಥೆ, ವಾಣಿಜ್ಯ ಬ್ಯಾಂಕುಗಳು ಮತ್ತು ಟೆಕ್‌ಸಾಕ್ (Tecsok) ಸಂಸ್ಥೆಗಳ ಸಹಯೋಗದಲ್ಲಿ ಉದ್ಯಮಶೀಲತಾ ಕಾರ್ಯಾಗಾರಗಳನ್ನು ನಡೆಸುತ್ತವೆ. ಇವುಗಳನ್ನು ಪ್ರತಿ ಜಿಲ್ಲಾ ಹಾಗೂ ತಾಲ್ಲೂಕು ಮಟ್ಟದಲ್ಲಿ ನಡೆಸಲಾಗುತ್ತದೆ. ಈ ಕಾರ್ಯಾಗಾರಗಳ ಅವಧಿ 3 ದಿನಗಳಿಂದ 45 ದಿನಗಳವರೆಗೆ ಇರುತ್ತದೆ. ಇದರಲ್ಲಿ ಭಾಗವಹಿಸುವವರಿಗೆ ಕೈಗಾರಿಕಾ ಸ್ಥಾಪನೆಯ ಬಗ್ಗೆ ತಿಳುವಳಿಕೆ ನೀಡಲಾಗುತ್ತದೆ. ಕೈಗಾರಿಕೆಗಳನ್ನು ಸ್ಥಾಪಿಸಲಿಚ್ಛಿಸುವವರು ಜಿಲ್ಲಾ ಕೈಗಾರಿಕಾ ಕೇಂದ್ರಗಳ ಶಿಫಾರಸಿನೊಂದಿಗೆ ಸಾಲಕ್ಕೆ ಅರ್ಜಿ ಸಲ್ಲಿಸಬೇಕಾಗುತ್ತದೆ. ಕಾರ್ಯಾಗಾರದಲ್ಲಿ ಭಾವಹಿಸಿದ್ದವರಿಗೆ ಕೈಗಾರಿಕಾ ಶೆಡ್ಡುಗಳ ವಿತರಣೆಯಲ್ಲಿ ಆದ್ಯತೆ ನೀಡಲಾಗುತ್ತದೆ.

ಮೇಲೆ ತಿಳಿಸಿರುವ ಸಂಸ್ಥೆಗಳಲ್ಲದೆ ಈ ಕೆಳಗಿನ ಸಂಸ್ಥೆಗಳು ರಾಷ್ಟ್ರಮಟ್ಟದಲ್ಲಿ ಕೈಗಾರಿಕಾಭಿವೃದ್ಧಿ ಕೆಲಸಗಳನ್ನು ಮಾಡುತ್ತಿವೆ.

1. ಭಾರತದ ಕೈಗಾರಿಕಾಭಿವೃದ್ಧಿ ನಿಗಮ
2. ಕೇಂದ್ರ ಹೆಣ್ಣುಮಕ್ಕಳ ತರಬೇತಿ ಸಂಸ್ಥೆ
3. ಸಣ್ಣ ಕೈಗಾರಿಕಾಭಿವೃದ್ಧಿ ಸಂಸ್ಥೆಗಳು

ಕೇಂದ್ರ ಸರ್ಕಾರವು ಉದ್ಯಮಿತನದ ಅಭಿವೃದ್ಧಿಗೆಂದು ಮಂಡಳಿಯೊಂದನ್ನು ರಚಿಸಿದೆ. ಈ ಮಂಡಳಿಯು ಸಣ್ಣ ಕೈಗಾರಿಕಾಭಿವೃದ್ಧಿಯ ರೂಪುರೇಷೆಗಳನ್ನು ಸಿದ್ಧಪಡಿಸುತ್ತದೆ ಮತ್ತು ಸಣ್ಣ ಕೈಗಾರಿಕಾ ನೀತಿಯನ್ನು ರೂಪಿಸುತ್ತದೆ.

ವ್ಯಾಧಿಗ್ರಸ್ತ ಕೈಗಾರಿಕೆಗಳು

ದೇಶದಲ್ಲಿ ಕೈಗಾರಿಕಾ ಬೆಳವಣಿಗೆಯ ಜೊತೆಯಲ್ಲಿಯೇ ವ್ಯಾಧಿಗ್ರಸ್ತ ಕೈಗಾರಿಕೆಗಳ ಸಂಖ್ಯೆಯೂ ಹೆಚ್ಚುತ್ತಿದೆ. ವ್ಯಾಧಿಗ್ರಸ್ತ ಕೈಗಾರಿಕೆಗಳ ಸಂಖ್ಯೆ 1983 ಜೂನ್ ಕೊನೆಯ ವೇಳೆಗೆ 64,388ರಷ್ಟಿತ್ತು ಕೆಳಗಿನ ಪಟ್ಟಿ ವ್ಯಾಧಿಗ್ರಸ್ತ ಕೈಗಾರಿಕೆಗಳ ಇಂದಿನ ಪರಿಸ್ಥಿತಿಯನ್ನು ಸೂಚಿಸುತ್ತದೆ.

ಪಟ್ಟಿ–1

ವ್ಯಾಧಿಗ್ರಸ್ತ ಕೈಗಾರಿಕೆಗಳು ವರ್ಷದ ಕೊನೆಯಲ್ಲಿ	ದೊಡ್ಡ ಕೈಗಾರಿಕೆಗಳು	ಮಧ್ಯಮ ಕೈಗಾರಿಕೆಗಳು	ಸಣ್ಣ ಕೈಗಾರಿಕೆಗಳು	ಒಟ್ಟು
ಡಿಶಂಬರ್ 1979	378	1013	20,975	22,366
ಡಿಶಂಬರ್ 1980	409	992	23,149	24,550
ಡಿಶಂಬರ್ 1981	422	994	25,342	26,758
ಡಿಶಂಬರ್ 1982	444	1,178	58,551	60,173

ಮೂಲ : ಇಂಡಿಯಾ 1984, ಭಾರತ ಸರ್ಕಾರ, ಪಟ್ಟಿ 19.9 ಪುಟ 382

ಮೇಲಿನ ಪಟ್ಟಿಯಿಂದ ವ್ಯಾಧಿಗ್ರಸ್ತ ಕೈಗಾರಿಕೆಗಳ ಸಂಖ್ಯೆಯ ತೀವ್ರತೆಯನ್ನು ಅರಿಯಬಹುದಾಗಿದೆ. ವ್ಯಾಧಿಗ್ರಸ್ತ ಕೈಗಾರಿಕೆಗಳಲ್ಲಿ ಸಣ್ಣ ಕೈಗಾರಿಕೆಗಳದ್ದೇ ಸಿಂಹ ಪಾಲು. ದೊಡ್ಡ ಕೈಗಾರಿಕೆಗಳು ಮತ್ತು ಮಧ್ಯಮ ಕೈಗಾರಿಕೆಗಳಿಗೆ ಹೋಲಿಸಿದರೆ ಸಣ್ಣ ಕೈಗಾರಿಕೆಗಳಲ್ಲಿ ವ್ಯಾಧಿ ಹೆಚ್ಚಾಗಿದೆ ಮತ್ತು ವರ್ಷದಿಂದ ವರ್ಷಕ್ಕೆ ಅವುಗಳ ಸಂಖ್ಯೆ ನಾಗಾ ಲೋಟದಲ್ಲಿ ಏರುತ್ತಿದೆ. 1979ರ ಸಂಖ್ಯೆಗೆ ಹೋಲಿಸಿದಾಗ 1982ರ ಡಿಶಂಬರ್‌ನಲ್ಲಿ ವ್ಯಾಧಿಗ್ರಸ್ತ ದೊಡ್ಡ ಕೈಗಾರಿಕೆಗಳ ಸಂಖ್ಯೆ 66 ರಷ್ಟು ಹೆಚ್ಚಿದೆ (117.46%), ಮಧ್ಯಮ ಕೈಗಾರಿಕೆಗಳ ಸಂಖ್ಯೆ ಇಳಿಮುಖವಾಗಿ ಮತ್ತೆ ಏರಿದೆ. ಆದರೆ ಸಣ್ಣಕೈಗಾರಿಕೆಗಳ ಸಂಖ್ಯೆ ಸುಮಾರು ಮೂರು ಪಟ್ಟು (579.14%) ಏರಿದೆ.

ಅಸ್ಸಾಮ್ ರಾಜ್ಯವನ್ನು ಬಿಟ್ಟರೆ ವ್ಯಾಧಿಗ್ರಸ್ತ ಕೈಗಾರಿಕೆಗಳು ಶೇಕಡಾವಾರು ಹೆಚ್ಚಿರುವುದು ಕರ್ನಾಟಕದಲ್ಲೇ. ಅಸ್ಸಾಮಿನಲ್ಲಿ 4152 ಸಣ್ಣಕೈಗಾರಿಕೆಗಳಿಗೆ 1595 ವ್ಯಾಧಿಗ್ರಸ್ತವಾಗಿವೆ (ಶೇ 38.42). ಕರ್ನಾಟಕದಲ್ಲಿ 20174 ಸಣ್ಣಕೈಗಾರಿಕೆಗಳಿಗೆ 2449 ವ್ಯಾಧಿಗ್ರಸ್ತವಾಗಿವೆ (ಶೇ 12.14). ಇಡೀ ರಾಷ್ಟ್ರದ ವ್ಯಾಪ್ತಿಯಲ್ಲಿ ವ್ಯಾಧಿಗ್ರಸ್ತ ಕೈಗಾರಿಕೆಗಳು ಸರಾಸರಿ ಶೇ 5 ರಷ್ಟಿವೆ.

ವ್ಯಾಧಿಗ್ರಸ್ತ ಕೈಗಾರಿಕೆಗಳು ಹಾಗೂ ಉದ್ಯಮಿತನ

ಯಾವುದೇ ರಾಜ್ಯದ ಕೈಗಾರಿಕಾ ಬೆಳವಣಿಗೆಯನ್ನು ಬರಿಯ ಸಂಖ್ಯೆಯಿಂದ ಅಳೆಯುವುದಿಲ್ಲ, ಅವುಗಳಲ್ಲಿ ಎಷ್ಟು ಕೈಗಾರಿಕೆಗಳು ಲಾಭದಾಯಕವಾಗಿ ಕಾರ್ಯ ನಿರ್ವಹಿಸುತ್ತಿವೆ ಎಂಬುದು ಮುಖ್ಯವಾದ ವಿಷಯ. ಈ ಹಿಂದೆ ತಿಳಿಸಿರುವಂತೆ ಕರ್ನಾಟಕದಲ್ಲಿ ಶೇ 12.14 ರಷ್ಟು ಕೈಗಾರಿಕೆಗಳು ವ್ಯಾಧಿಗ್ರಸ್ತ. ಇದಕ್ಕೆ ಅನೇಕ ಕಾರಣಗಳಿರಬಹುದು. ಆದರೆ ಎಲ್ಲದಕ್ಕಿಂತ ಮುಖ್ಯವಾಗಿ ಶಕ್ತ ಉದ್ಯಮಿತನದ ಕೊರತೆಯು ಪ್ರಬಲವಾದ ಕಾರಣವಾಗಿದೆ. ಏಕೆಂದರೆ, ಒಂದು ಕೈಗಾರಿಕೆಯ

ಏಳುಬೀಳುಗಳು ಅದರ ಮೂಲ ಸೂತ್ರಧಾರನಾದ ಉದ್ಯಮಿಯ ಕೈಯ್ಯಲ್ಲಿಯೇ ಇರುತ್ತದೆ. ಸಮರ್ಥನಾದ ಉದ್ಯಮಿ ಕಾಲಕಾಲಕ್ಕೆ ಸರಿಯಾದ ನಿರ್ಣಯಗಳನ್ನು ತೆಗೆದುಕೊಳ್ಳುತ್ತ ಎಂತಹ ಕಷ್ಟಕಾಲದಲ್ಲಿಯೂ ವ್ಯವಹಾರವನ್ನು ಲಾಭದಾಯಕವಾಗಿ ನಡೆಸಿಕೊಂಡು ಹೋಗುತ್ತಾನೆ. ಅದೇ ಅನುಭವವಿಲ್ಲದ, ಮುಂದಾಲೋಚನೆಯಿಲ್ಲದ, ಸರಿಯಾದ ತರಬೇತಿಯಿಲ್ಲದ ವ್ಯಕ್ತಿಯಿಂದ ಸಕಾಲಿಕ ನಿರ್ಣಯಗಳನ್ನು ತೆಗೆದುಕೊಳ್ಳಲಾಗುವುದಿಲ್ಲ. ಇದರಿಂದ ಉದ್ದಿಮೆ ನಡೆಸುವುದು ಅನೇಕ ಸಂದರ್ಭಗಳಲ್ಲಿ ಕಷ್ಟವಾಗುತ್ತದೆ. ಆದ್ದರಿಂದ ಉದ್ದಿಮೆಗಳನ್ನು ನಡೆಸಲು ಉದ್ಯಮತನವಿರುವ ವ್ಯಕ್ತಿಗಳು ಬೇಕು. ಇಂತಹ ಶಕ್ತಿ ಸಾಮಾನ್ಯವಾಗಿ ಎಲ್ಲರಲ್ಲಿಯೂ ಅಡಕವಾಗಿರುತ್ತದೆ. ಅದನ್ನು ಸರಿಯಾದ ತರಬೇತಿಯಿಂದ ಪ್ರಚೋದಿಸಿ, ಆಸಕ್ತರನ್ನು ಉದ್ದಿಮೆದಾರರನ್ನಾಗಿ ಮಾಡಬಹುದಾಗಿದೆ. ಇದೇ ಪ್ರಯತ್ನವನ್ನು ರಾಜ್ಯಸರ್ಕಾರಗಳು ಮಾಡುತ್ತಿರುವ ಬಗ್ಗೆ ಈಗಾಗಲೆ ತಿಳಿಸಿದೆ.

ರಾಜ್ಯ ಸರ್ಕಾರವೇನೊ ಈ ದಿಶೆಯಲ್ಲಿ ತನ್ನ ಪ್ರಯತ್ನ ನಡೆಸಿದೆ. ಆದರೆ ಅದು ಜನರಲ್ಲಿ ಉದ್ಯಮಿತನವನ್ನು ಬೆಳೆಸಲು ವಿಫಲವಾಗಿದೆ ಎಂದೇ ಹೇಳಬಹುದಾಗಿದೆ. ರಾಜ್ಯದಲ್ಲಿ ಉದ್ಯಮಿತನದ ತರಬೇತಿಗೆಂದು ಪ್ರತ್ಯೇಕ ಸಂಸ್ಥೆಯಿಲ್ಲ. ಇದರ ಜವಾಬ್ದಾರಿಯನ್ನು ರಾಜ್ಯ ಹಣಕಾಸು ಸಂಸ್ಥೆ, ವಾಣಿಜ್ಯ ಬ್ಯಾಂಕುಗಳು ಮತ್ತು ಟೆಕ್‌ಸಾಕ್ (TECSOK) ಸಂಸ್ಥೆಗಳು ನಿರ್ವಹಿಸುತ್ತಿವೆ. ಇವುಗಳೋ ಕಮ್ಮಟಗಳನ್ನು ಪ್ರತ್ಯೇಕವಾಗಿ ನಡೆಸುತ್ತಿಲ್ಲ. ಎಲ್ಲ ಸಂಸ್ಥೆಗಳೂ ಜಿಲ್ಲಾ ಕೈಗಾರಿಕಾ ಕೇಂದ್ರದ ಮೂಲಕ ಉದ್ಯಮಿತನದ ತರಬೇತಿಯನ್ನು ನೀಡುತ್ತಿವೆ. ಇನ್ನು ಜಿಲ್ಲಾ ಕೈಗಾರಿಕಾ ಕೇಂದ್ರಗಳಿಗೋ ಹಲವಾರು ಜವಾಬ್ದಾರಿಗಳು. ಇರುವ ಜವಾಬ್ದಾರಿಯನ್ನೇ ಸರಿಯಾಗಿ ನಿರ್ವಹಿಸಲಾಗದ ಇವುಗಳು ಜೊತೆಗೆ ತರಬೇತಿಯ ಕೆಲಸವನ್ನು ಎಷ್ಟರ ಮಟ್ಟಿಗೆ ನಡೆಸುತ್ತಿವೆ ಎಂದು ಊಹಿಸಿಕೊಳ್ಳಬಹುದು. ಇಂತಹ ತರಬೇತಿಗೆಂದು ಒಬ್ಬ ವ್ಯಕ್ತಿಯನ್ನು ನೇಮಕಮಾಡಿ ಎರಡು ಅಥವಾ ಮೂರು ಜಿಲ್ಲೆಗಳ ಜವಾಬ್ದಾರಿಯನ್ನು ಹೊರಿಸಲಾಗಿದೆ. ಇನ್ನು ತರಬೇತಿಯ ಬಗ್ಗೆ ಹೇಳಬೇಕೆಂದರೆ ಇವುಗಳ ಅವಧಿ 3 ದಿನಗಳಿಂದ ಹಿಡಿದು 45 ದಿನಗಳವರೆಗೆ ಇರುತ್ತದೆ. ಅಂದರೆ ಕೆಲವು ಕಮ್ಮಟಗಳು 3 ದಿನಗಳಿಗೆ ಮುಗಿಯುತ್ತವೆ, ಕೆಲವು ವಾರದ ಕಮ್ಮಟಗಳು, ಅತೀ ಹೆಚ್ಚಿನ ಅವಧಿಯ ಕಮ್ಮಟಗಳೆಂದರೆ 45 ದಿನಗಳದ್ದು.

ಕೇವಲ ಮೂರು ದಿನಗಳಲ್ಲಿ ಮುಗಿಯುವ ಕಮ್ಮಟಗಳಲ್ಲಿ ಯಾವ ಮಟ್ಟದ ತರಬೇತಿ ಸಾಧ್ಯ ಎಂದು ಸರ್ಕಾರವಾಗಲೀ, ಸಂಸ್ಥೆಗಳಾಗಲೀ ಯೋಚಿಸಿದಂತೆ ಕಾಣುವುದಿಲ್ಲ. ಕಮ್ಮಟಗಳ ಅವಧಿ 45 ದಿನಗಳಾದರೂ, ಬರಿಯ 45 ದಿನಗಳಲ್ಲಿ ಫಲಾನುಭವಿಗಳನ್ನು ಉದ್ಯಮಶೀಲರನ್ನಾಗಿ ಮಾಡುತ್ತೇವೆ ಎನ್ನುವುದು ಎಷ್ಟು ಹಗುರವಾದ ವಿಷಯ ಎನ್ನುವುದನ್ನು ಸಂಬಂಧಪಟ್ಟವರು ಯೋಚಿಸಬೇಕು. ಇನ್ನು ತರಬೇತಿ ನೀಡುವವರು ಅನೇಕ ವೇಳೆ ಉದ್ಯಮಿಗಳಾಗಿರುವುದಿಲ್ಲ ಅಥವಾ ಅವರಲ್ಲಿ

ಉದ್ಯಮಗಳ ಬಗ್ಗೆ ಮಾಹಿತಿಯೂ ಇರುವುದಿಲ್ಲ ಅಥವಾ ಉದ್ಯಮಶೀಲತೆಯ ಬಗ್ಗೆ ಹೆಚ್ಚಿನ ಜ್ಞಾನವೂ ಇರುವುದಿಲ್ಲ. ಬರಿಯ ದೊಡ್ಡ ದೊಡ್ಡ ಭಾಷಣಗಳ ಮೂಲಕ ಜನರನ್ನು ಉದ್ಯಮಶೀಲರನ್ನಾಗಿ ಮಾಡಬಹುದಾಗಿದ್ದಿದ್ದರೆ ಇಂದು ದೇಶದಲ್ಲಿ ಎಲ್ಲರೂ ಉದ್ದಿಮೆದಾರರಾಗಿರುತ್ತಿದ್ದರೇನೊ.

ಇಂತಹ ಕಮ್ಮಟಗಳಲ್ಲಿ ಭಾಗವಹಿಸಿದ ಹಲವರಿಗೆ ಬಹುಪಾಲು ಸ್ವತಂತ್ರವಾಗಿ ಯೋಚಿಸಲು ಆಗುವುದಿಲ್ಲ. ಇಂತಹವರಿಗೆ ಎಲ್ಲ ಸೌಲಭ್ಯಗಳನ್ನು ಒದಗಿಸಿದಾಗಲೂ ಸಹ ಉದ್ದಿಮೆಯನ್ನು ಲಾಭದಾಯಕವಾಗಿ ನಡೆಸುವ ಶಕ್ತಿಯಿರುವುದಿಲ್ಲ. ಇದೇ ಕಾರಣಗಳಿಂದಾಗಿ ಕೆಲವೊಮ್ಮೆ ಕೈಗಾರಿಕೆಗಳು ವ್ಯಾಧಿಗ್ರಸ್ತವಾಗುತ್ತವೆ.

ಕೆಲವು ನಿವಾರಣೋಪಾಯಗಳು

ಪರಿಸ್ಥಿತಿಯನ್ನು ಹೀಗೆಯೆ ಮುಂದುವರಿಯಲು ಬಿಟ್ಟರೆ ಪರಿಣಾಮ ಭೀಕರವಾಗಿ ಪರಿಣಮಿಸಬಹುದು. ಆದ್ದರಿಂದ ಸರ್ಕಾರ ಈ ಬಗ್ಗೆ ಮರು ಆಲೋಚನೆ ಮಾಡುವುದು ಅವಶ್ಯವಾಗಿದೆ. ಅದು ಈಗ ಉದ್ಯಮಿತನದ ತರಬೇತಿಗೆ ಅನುಸರಿಸುತ್ತಿರುವ ತಂತ್ರವನ್ನು ಬದಲಿಸಬೇಕಾಗಿದೆ.

ಮೊದಲನೆಯದಾಗಿ ಇಂತಹ ಕಾರ್ಯಾಗಾರಗಳನ್ನು ನಡೆಸುವ ಜವಾಬ್ದಾರಿಯನ್ನು ಒಂದೇ ಸಂಸ್ಥೆಗೆ ವಹಿಸಿಕೊಡುವುದು ಉತ್ತಮ. ಇದು ಅಂತಹ ಸಂಸ್ಥೆಯು ಪರಿಣತಿಯನ್ನು ಗಳಿಸಲು ಸಹ ಸಹಾಯಕವಾಗುತ್ತದೆ. ಈ ಸಂಸ್ಥೆ ರಾಜ್ಯದ ಇತರೆಡೆಗಳಲ್ಲಿ ತನ್ನ ಶಾಖೆಗಳನ್ನು ತೆರೆದು ತರಬೇತಿಯ ಕಾರ್ಯಾಗಾರಗಳನ್ನು ನಡೆಸಬಹುದು. ಇದಕ್ಕಿಂತ ಒಳ್ಳೆಯ ಮಾರ್ಗವೆಂದರೆ ರಾಜ್ಯ ಸರ್ಕಾರವು ಹೊಸದಾಗಿ ಒಂದು 'ಉದ್ಯಮಿತನ ವಿಶ್ವವಿದ್ಯಾಲಯ'ವನ್ನೆ ತೆರೆಯಬಹುದು. ಇದು ರಾಜ್ಯದ ಪ್ರಮುಖ ಕೇಂದ್ರಗಳಲ್ಲಿ ಕಾಲೇಜುಗಳನ್ನು ತೆರೆದು ಅನುಭವಿಕ ವಿದ್ವಾಂಸರಿಂದ ವಿಚಾರ ಸರಣಿಗಳ ಮೂಲಕವೂ (Theoritical) ಹಾಗೂ ಕಾರ್ಯೋದ್ಯುಕ್ತವಾಗಿಯೂ (Practical) ತರಬೇತಿಯನ್ನು ನೀಡಲು ಅನುಕೂಲ ಮಾಡಿಕೊಡಬಹುದು. ಇದು ಸ್ವಲ್ಪ ಖರ್ಚಿನ ಸಲಹೆಯಾದರೂ ಬಹಳ ಉತ್ತಮ ರೀತಿಯ ಪರಿಣಾಮವನ್ನು ಕಂಡುಕೊಳ್ಳಬಹುದು.

ಎರಡನೆಯದಾಗಿ ತರಬೇತಿಯ ಅವಧಿಯನ್ನು ವಿಸ್ತರಿಸಬೇಕಾದುದು. ತರಬೇತಿಯ ಅವಧಿಯನ್ನು ಕನಿಷ್ಟ 6 ತಿಂಗಳುಗಳಿಗೆ ನಿಗದಿಪಡಿಸಿ ಅನುಭವಿಗಳಿಂದ ತರಬೇತಿ ಕಾರ್ಯಾಗಾರಗಳನ್ನು ನಡೆಸಬೇಕು.

ಮೂರನೆಯದಾಗಿ ಈಗಿನ ತರಬೇತಿಗಳಲ್ಲಿ ಪ್ರತ್ಯಕ್ಷ ಅನುಭವ ತರಿಸುವಂತಹ ಕ್ರಮಗಳಿಲ್ಲ. ಇದರಿಂದ ಫಲಾನುಭವಿಗಳಲ್ಲಿ ಅನುಭವದ ಕೊರತೆಯನ್ನು ಕಾಣುತ್ತೇವೆ. ಆದ್ದರಿಂದ ಅವರನ್ನು ವಿವಿಧ ಕಾರ್ಖಾನೆಗಳಿಗೆ ಕರೆದುಕೊಂಡು ಹೋಗಿ ಪ್ರತ್ಯಕ್ಷವಾಗಿ

ಅಲ್ಲಿನ ಕಾರ್ಯವನ್ನು ವಿವರಿಸುವ ಮೂಲಕ ಅವರಿಗೆ ಹೆಚ್ಚಿನ ತಿಳುವಳಿಕೆ ನೀಡಬೇಕು.

ನಂತರ ತರಬೇತಿಯ ಕೊನೆಯಲ್ಲಿ ಅವರ ಗ್ರಹಿಕೆಗಳನ್ನು ಪರೀಕ್ಷಿಸಿ ಸಮರ್ಥನ ಪತ್ರಗಳನ್ನು ನೀಡಬೇಕು ಮತ್ತು ಸಮರ್ಥ ವ್ಯಕ್ತಿಗಳಿಗೆ ಮಾತ್ರ ಎಲ್ಲರೀತಿಯ ನೆರವು ನೀಡುವುದರ ಮೂಲಕ ಆರೋಗ್ಯಕರವಾದ ಕೈಗಾರಿಕಾ ಪ್ರಗತಿಯನ್ನು ನಿರೀಕ್ಷಿಸಬಹುದಾಗಿದೆ.

ಪುರುಷೋತ್ತಮ ಬಿಳಿಮಲೆ

ಲಿಂಗರಾಜನ ಹುಕುಂನಾಮೆ—ಒಂದು ಅಧ್ಯಯನ

1—ಪ್ರವೇಶ

1.1 : ಇತಿಹಾಸ ಮತ್ತು ನಾಮೆಗಳು :

ಒಂದು ದೇಶದ ಚರಿತ್ರೆಯನ್ನು ಬರೆಯುವಲ್ಲಿನ ದೃಷ್ಟಿಕೋನದಲ್ಲಿ ಈಗ ಸಾಕಷ್ಟು ಬದಲಾವಣೆಗಳಾಗಿವೆ. ಉತ್ಪಾದನೆ ಮತ್ತು ವಿತರಣೆಯ ವ್ಯವಸ್ಥೆಗನುಗುಣವಾಗಿ ರೂಪುಗೊಳ್ಳುವ ಸಮಾಜ ವ್ಯವಸ್ಥೆಯನ್ನು ಅದೇ ಹಿನ್ನೆಲೆಯಲ್ಲಿ ಗುರುತಿಸುವ ಶಿಸ್ತೊಂದು ಈಚೆಗೆ ರೂಢಿಗೆ ಬರುತ್ತಿದೆ. ಭಾರತ ದೇಶದ ಇತಿಹಾಸವನ್ನು ಬರೆಯುವ ಉತ್ಸಾಹಿಗಳು, ಪ್ರಭುತ್ವ ಮತ್ತು ದಾಸ್ಯತ್ವದ ಎರಡೂ ಮುಖಗಳ ಕಡೆಗೆ ದೃಷ್ಟಿ ಹಾಯಿಸುತ್ತಿದ್ದಾರೆ. ಹೀಗೆ ಮಾಡುವುದೂ ಕೂಡಾ ಅನಿವಾರ್ಯವಾಗಿದೆ. ಏಕೆಂದರೆ ಭಾರತವನ್ನಾಳಿಕೊಂಡು ಬಂದ ಯಾವುದೇ ರಾಜಮನೆತನಗಳಿಗೆ ಇಂಡಿಯದ ಸಾಮ್ರಾಜ್ಯವೇ ಉತ್ಪಾದನಾಸಾಧನವಾಗಿಬಿಟ್ಟಿತ್ತು. ಸಾಮ್ರಾಜ್ಯದ ಬಗೆಗಣ ಸ್ವಾರ್ಥಮನೋಭಾವ ಮತ್ತು ಆ ಮೂಲಕ ಹುಟ್ಟಿಕೊಳ್ಳುವ ವರ್ಗಪ್ರತಿಷ್ಠೆ ಅದಿಲ್ಲದವರ ಮೇಲೆ ಅಧಿಕಾರ ನಡೆಸುವಲ್ಲಿ ಕೃತಾರ್ಥವಾಗುತ್ತದೆ. ರಾಜನಮಟ್ಟಿಗೆ ಇಡಿಯ ರಾಜ್ಯ ಖಾಸಗೀ ಆಸ್ತಿಯಾಗುತ್ತದೆ. ದುಡಿಯದೇ ಬದುಕುವುದನ್ನು ಅಭ್ಯಾಸಮಾಡಿಕೊಂಡ ರಾಜನು ಅದೇ ಸಂದರ್ಭದಲ್ಲಿ ಆ ಬಗೆಯ ಆಸ್ತಿ ಇಲ್ಲದವರು ಎಲ್ಲಿ ಹೇಗೆ ಎಂಥ ವಾತಾವರಣದಲ್ಲಿ ಬದುಕಬೇಕು, ಎಷ್ಟು ದುಡಿಯಬೇಕು, ದುಡಿಮೆಗೆ ಸರಿಯಾಗಿ ಅವರಿಗೆ ಎಷ್ಟು ಕೂಲಿ ಕೊಡಬಹುದು….ಎಂಬಿತ್ಯಾದಿ ಅಂಶಗಳನ್ನು ನಿರ್ಧರಿಸುತ್ತಾನೆ. ಆಳುವ ವರ್ಗ ಇಡೀ ಸಮೂಹದ ಸಂಸ್ಕೃತಿಯ ಬಗೆಗೆ ನಿರ್ಣಾಯಕಮಾತುಗಳನ್ನಾಡುತ್ತದೆ. ಇದನ್ನು ಸರಳಗೊಳಿಸಿ ಹೇಳುವುದಾದರೆ ಉತ್ಪಾದನಾ ಸಾಧನಗಳ ಒಡೆಯರಾದವರಿಗೆ ಅಪ್ಪಣೆಮಾಡುವ ಹಕ್ಕು ಮತ್ತು ದುಡಿಯುವವರಿಗೆ ಅಪ್ಪಣೆಗಳನ್ನು ಪಾಲಿಸಬೇಕಾದ ಒತ್ತಡ–ಎರಡೂ ಏಕಕಾಲಕ್ಕೆ ಸೃಷ್ಟಿಯಾಗುತ್ತದೆ. ಈ ದ್ವೈತ ಸಿದ್ಧಾಂತವನ್ನು ನಾವು ಮರೆಯಲಾಗುವುದಿಲ್ಲ.

18ನೇ ಶತಮಾನದ ಉತ್ತರಾರ್ಧದಲ್ಲಿ ಭಾರತದಲ್ಲಿ ನಡೆದ ರಾಜಕೀಯ ಬೆಳವಣಿಗೆಯನ್ನು ಅವಲೋಕಿಸಿದರೆ ನಮಗಿದು ಸ್ಪಷ್ಟವಾಗುತ್ತದೆ. ಬ್ರಿಟಿಷರ ಆಗಮನದಿಂದ ಭಾರತದಾದ್ಯಂತ ಉತ್ಪಾದನಾ ಸಾಧನಗಳೂ, ವಿಧಾನಗಳೂ ಉತ್ತಮಗೊಂಡವು. ಸಂಪತ್ತಿನ ಸಂಚಯನ, ವ್ಯಾಪಾರ ಯಂತ್ರಪರಿಶ್ರಮ, ಶ್ರೀಮಂತಿಕೆಯಿಂದಾಗುವ ಲೌಕಿಕ ಲಾಭ ಮೊದಲಾದುವುಗಳ ಬಗೆಗೆ ಜನರು ಹೊಸದಾಗಿ ಯೋಚನೆ ಮಾಡತೊಡಗಿದರು. ಅದುವರೆಗೂ ಸಾಂಪ್ರದಾಯಿಕ ಉತ್ಪಾದನಾ ವಿಧಾನಗಳಿಗಿಂತ ಬೇರೆಯಾದ ರೀತಿಯೊಂದನ್ನು ಅನ್ವೇಷಿಸಿಕೊಳ್ಳುವ ಅಗತ್ಯ ಆಳುವ ವರ್ಗಕ್ಕಿತ್ತು. ಆಗ ಹೆಚ್ಚು ನಿಷ್ಠುರವಾಗಿ ನಡಕೊಳ್ಳುವ ರಾಜರುಗಳು ತಮ್ಮ ಹೆಸರನಲ್ಲಿ 'ನಾಮೆ' ಗಳನ್ನು ಬರೆಸಿದ್ದಾರೆ.

'ನಾಮೆ' ಪದಕ್ಕಿರುವ ಅರ್ಥ ಕೂಡಾ ರಾಜಾಜ್ಞೆಯ ಕಠೋರತೆಯನ್ನೇ ಮೂಲ ಬಂಡವಾಳವಾಗಿ ಉಳ್ಳದ್ದು. ಕಿಟ್ಟೆಲ್ ಕೋಶದಲ್ಲಿ 'ನಾಮೆ' ಗೆ 'A deed' ಎಂಬರ್ಥವಿದೆ (ಕಿಟ್ಟೆಲ್. 1975 ; ಪು ; 907). 'Deed' ಪದವು 'A legal transaction, especially involving the transference of property, the written evidence of it, signed, sealed and delivered' (Kirkpatrick, 1983, 325) ಎಂಬ ಅರ್ಥವುಳ್ಳದಾಗಿದೆ. ರಾಜಾಜ್ಞೆಯ ಕಟ್ಟುನಿಟ್ಟುಗಳು ಪ್ರಜೆಗಳ ಮೇಲೆ ಗಹನವಾದ ಪರಿಣಾಮ ಬೀರುವ ಉದ್ದೇಶವನ್ನು ಹೊಂದಿರುತ್ತವೆ. ಒಂದರ್ಥದಲ್ಲಿ ಅವು ಶಾಸನಗಳೇ ಆಗಿವೆ. ಬ್ರಿಟಿಷರ ವಿರುದ್ಧ ತಾವು ಬಲಗೊಳ್ಳಬೇಕಾದ ಅಗತ್ಯವನ್ನು ಇಂಡಿಯಾದ ಸಣ್ಣಪುಟ್ಟ ಅರಸುಗಳು ಕೂಡಾ ಆ ಕಾಲಕ್ಕೆ ಮನಗಂಡಂತಿದೆ. ಆಳುವ ವರ್ಗದ ಪೈಪೋಟಿಯ ನೇರ ಪರಿಣಾಮವನ್ನು ಎದುರಿಸಲು ಪ್ರಜಾವರ್ಗ ಸಿದ್ಧವಾಗಿರಬೇಕಾಗಿತ್ತು. ರಾಜನ ದಾಖಲೆ ಅಥವಾ ಹೇಳಿಕೆ ಎಂಬರ್ಥದಲ್ಲಿ ಬಖೈರು–ಕೈಫಿಯತ್ತು ಎಂಬ ಪದಗಳೂ ಕನ್ನಡದಲ್ಲಿ ಬಳಕೆಯಲ್ಲಿವೆ. ಕೊಡಗಿನಲ್ಲಿಯೇ ದೊಡ್ಡ ವೀರರಾಜೇಂದ್ರನು ತನ್ನ ವಂಶದ ಇತಿಹಾಸವನ್ನು 'ರಾಜೇಂದ್ರನಾಮೆ' ಯೆಂಬ ಹೆಸರಿನಿಂದ ಬರೆಸಿದ್ದಾನೆ. ಈ ಬಗ್ಗೆ ಬರೆದ ಡಿ. ಎಸ್. ಕೃಷ್ಣಯ್ಯನವರು 'ನಾಮೆಯನ್ನು ಬರೆಯುವವನು ಒಬ್ಬ ರಾಜನ ಅಂಕಿತದಲ್ಲಿದ್ದು ಬರೆಯುತ್ತಾ ಅವನ ವಂಶಕ್ಕೆ ಅವಮಾನಕರವಾದ ಘಟನೆಗಳೇನಾದರೂ ನಡೆದಿದ್ದರೆ ಅಂಥವನ್ನು ಕೈಬಿಡುವುದು ಸಹಜವಾಗಿಯೇ ಇದೆ. ಇದಕ್ಕೆ ರಾಜೇಂದ್ರನಾಮೆಯಲ್ಲಿಯೇ ಉದಾಹರಣೆ ಸಿಗುತ್ತದೆ" ಎಂದು ಹೇಳಿದ್ದಾರೆ (ಕೃಷ್ಣಯ್ಯ, 1974 ; ಪು. 353) ಇದು ಕೂಡ ಆಳುವ ವರ್ಗದ ಮನೋಧರ್ಮವನ್ನೇ ಸೂಚಿಸುತ್ತವೆ. ಇತಿಹಾಸದ ದಾಖಲೆಯಲ್ಲಿ ಕೂಡಾ ಅದು ತನ್ನನ್ನು ತಾನು ರಕ್ಷಿಸಿಕೊಳ್ಳುತ್ತದೆ. ಇದು ಪ್ರಭುತ್ವವು ತನ್ನೊಳಗಿನ ದೌರ್ಬಲ್ಯಗಳನ್ನು ಮುಚ್ಚಿಟ್ಟುಕೊಳ್ಳುವ ತಂತ್ರ ಕೂಡಾ ಹೌದು.

18, 19ನೇ ಶತಮಾನಗಳಲ್ಲಿ ಬರೆಸಲಾದ ಇಂಥ ರಾಜಾಜ್ಞೆಗಳು ಗದ್ಯದಲ್ಲಿಯೇ

ಇರುವುದು ಗಮನಾರ್ಹ. ಏಕೆಂದರೆ ಆಳುವ ವರ್ಗ ತಾನು ಆಶಿಸುವ ಸಮಾಜ ನಿರ್ಮಾಣಕ್ಕಾಗಿ ಭಾಷೆಯನ್ನು ಬಳಸತೊಡಗಿದಾಗ ಭಾಷೆ ತನ್ನ ರಮ್ಯತೆಯನ್ನು ಬಿಟ್ಟುಕೊಡಲೇಬೇಕಾಗುತ್ತದೆ. ಭಾವುಕತೆಯು ಲೇಶಾಂಶವನ್ನಾದರೂ ಭಾಷೆ ಒಳಗೊಳ್ಳುವುದಿಲ್ಲ. 'ಬಖೈರು', 'ನಾಮೆ' ಮತ್ತು 'ವಿವರ' ಗಳೆಲ್ಲವೂ ಆ ಕಾಲದಲ್ಲಿ ಸಿದ್ಧವಾಗುತ್ತಿದ್ದ ಗದ್ಯಕ್ಕೆ ಒಳ್ಳೆಯ ಉದಾಹರಣೆಗಳಾಗುತ್ತವೆ. ಇಂಗ್ಲಿಷರು ಸಾಂಸ್ಕೃತಿಕವಾಗಿ ಈ ದೇಶದ ಮೇಲೆ ಬೀರಿದ ಪರಿಣಾಮವಾಗಿ 'ಗದ್ಯ' ಕಾಣಿಸಿಕೊಂಡಿದೆ. ಅಂದರೆ ದೇಶೀಯ ಅರಸರಿಗೆ ಗದ್ಯದ ಬಳಕೆ ಅನಿವಾರ್ಯವಾಗಿತ್ತು ಎಂದೇ ಅರ್ಥ.

1.2 : ಲಿಂಗರಾಜನ ಹುಕುಂನಾಮೆಯ ಐತಿಹಾಸಿಕ ಹಿನ್ನೆಲೆ :

ಕೊಡಗಿನ ಚರಿತ್ರೆಯಲ್ಲಿ ಇಬ್ಬರು ಲಿಂಗರಾಜೇಂದ್ರರು ಕಾಣಿಸಿಕೊಳ್ಳುತ್ತಾರೆ. ಮೊದಲನೆ ಲಿಂಗರಾಜೇಂದ್ರನು 1775 ರಲ್ಲಿ ಪಟ್ಟಕ್ಕೆಬಂದು 1780ರಲ್ಲಿ ತೀರಿಕೊಂಡ (ಕೃಷ್ಣಯ್ಯ : 1974, ಪು. 143). ಇವನಾನಂತರ ಪಟ್ಟವೇರಿದ ವೀರರಾಜೇಂದ್ರನ ಕಾಲದಲ್ಲಿ ಕೊಡಗು ಸಂಸ್ಥಾನ ಮಹತ್ತರವಾದ ಬದಲಾವಣೆಗಳನ್ನು ಕಂಡಿತು. ಅದರಲ್ಲಿ ಮುಖ್ಯವಾದದ್ದೆಂದರೆ ಇಡಿಯ ಸಂಸ್ಥಾನ ಕೆಲಕಾಲದವರೆಗೆ ಹೈದರ್ ಮತ್ತು ಟಿಪ್ಪುವಿನ ಕೈಸೇರಿದ್ದು. ಅದಮ್ಯ ಉತ್ಸಾಹಿಯಾಗಿದ್ದ ವೀರರಾಜೇಂದ್ರನು ಕಳಕೊಂಡ ರಾಜ್ಯವನ್ನು ಮತ್ತೆ ಪಡೆಯುವಲ್ಲಿ ಯಶಸ್ವಿಯಾಗಿದ್ದ. ಜೊತೆಗೆ ಬ್ರಿಟಿಷರೊಡನೆ ಸ್ನೇಹ ಮಾಡಿಕೊಂಡು ತುಳುನಾಡಿಗೆ ಸೇರಿಹೋಗಿದ್ದ ಅಮರಸುಳ್ಯ ಸೀಮೆಯನ್ನು ಕೊಡಗಿಗೆ ಸೇರಿಸಿಕೊಂಡು ತನ್ನ ಹೆಸರಿನಲ್ಲಿ ವೀರಾಜೇಂದ್ರಪೇಟೆಯನ್ನು ನಿರ್ಮಾಣಮಾಡಿದ. ಇಷ್ಟಿದ್ದರೂ ಇಡಿಯ ಸಂಸ್ಥಾನ ಸಾಂಸ್ಕೃತಿಕವಾಗಿ ಅಧಃಪತನವಾಗುತ್ತಿರುವುದನ್ನು ಈತನಿಗೆ ಸಿಲ್ಲಿಸಲಾಗಲಿಲ್ಲ. ಬ್ರಿಟಿಷರ ಸ್ನೇಹಾಚಾರವೇ ಇವನಿಗೆ ಉರುಳಾಗಿಬಿಡುವ ಹೆದರಿಕೆಯಿತ್ತು. ತನ್ನನ್ನು ತಾನು ಬಲಿಷ್ಠವಾಗಿ ಬೆಳೆಸಿಕೊಳ್ಳಲಾಗದೆ, ಬ್ರಿಟಿಷರಿಗೆ ಶರಣಾಗಿ ಬದುಕಲಾಗದೆ, ವೀರರಾಜೇಂದ್ರ ಒದ್ದಾಡಿದಂತಿದೆ. ಆತನ ಕೊನೆದಿನಗಳ ಬಗ್ಗೆ ಹೀಗೆ ಹೇಳಲಾಗಿದೆ—"Raja lived ages of anguish from the days of the death of his beloved wife on the 17th May 1807. to the date of his own disease, the 9th June 1809. (ಕೃಷ್ಣಯ್ಯ: 1974, ಪು. 376). ಈ ಅಸ್ಥಿರತೆ ಮತ್ತು ಗೊಂದಲಗಳ ಮಧ್ಯೆ ಪಟ್ಟವೇರಲು ಯತ್ನಿಸಿದ ಇವನ ತಮ್ಮ ಲಿಂಗರಾಜೇಂದ್ರನು ಆರಂಭದಲ್ಲಿ ವಿಫಲನಾದರೂ ಮತ್ತೆ 1811 ರಲ್ಲಿ ಪಟ್ಟವೇರಿದನು.

ವೀರರಾಜೇಂದ್ರನು ತೀರಿಕೊಂಡ ಅನಂತರ 1811 ರ ವರೆಗೆ ಅಂದರೆ ಎರಡು ವರ್ಷಗಳ ಕಾಲ ರಾಜಕೀಯವಾಗಿ ಅಸ್ಥಿರತೆ ಇದ್ದುದನ್ನು ಗಮನಿಸಬೇಕು. ಜೊತೆಗೆ ಬ್ರಿಟಿಷರ ಪ್ರವೇಶದ ಹೆದರಿಕೆಯೂ ಇತ್ತು. ಈ ಸ್ಥಿತಿಯಲ್ಲಿ ಲಿಂಗರಾಜೇಂದ್ರನಿಗೆ

ಪಟ್ಟವನ್ನು, ಸಂಸ್ಥಾನವನ್ನು ಭದ್ರಗೊಳಿಸಿಕೊಳ್ಳಬೇಕಾಗಿತ್ತು. ಅದಕ್ಕಾಗಿ ತನ್ನ ಹೆಸರಿನಲ್ಲಿಯೇ 'ಲಿಂಗರಾಜೇಂದ್ರನ ಹುಕುಂ ನಾಮೆ' ಯನ್ನು ಬರೆಸಿ, ತನ್ನ ಸಂಸ್ಥಾನದ ಪಾರುಪತ್ಯಗಾರರಿಗೆ ಮತ್ತು ಶ್ಯಾನುಭೋಗರಿಗೆ ಕಳುಹಿಸಿಕೊಟ್ಟಿದ್ದಾನೆ. ಇದರಲ್ಲಿನ ಒಟ್ಟು 54 ಅಪ್ಪಣೆಗಳಲ್ಲಿ ತನ್ನ ಸಂಸ್ಥಾನವನ್ನು ಉತ್ತಮಗೊಳಿಸಬೇಕೆಂದು ರಾಜ ಮಾಡಿದ ಯೋಜನೆ ಮತ್ತು ಯೋಚನೆಗಳನ್ನು ನಾವು ಕಾಣಬಹುದು. ಆ ಕಾಲದ ಪ್ರಭುತ್ವದ ಮನೋಧರ್ಮ ಮತ್ತು ಅದು ಇಡೀ ಸಂಸ್ಕೃತಿಯನ್ನು ನಿಯಂತ್ರಿಸುವುದರ ಮೂಲಕ ಉಳಿದು ಬೆಳೆಯಬಯಸುವುದನ್ನು ಈ ಅಪ್ಪಣೆಗಳು ಸೊಗಸಾಗಿ ವ್ಯಾಖ್ಯಾನಿಸುತ್ತವೆ. ಜೊತೆಗೆ ಇವು ಅಮೂಲ್ಯವಾದ ಕೆಲವು ವಿವರಗಳನ್ನು ನೀಡುವುದರಿಂದಾಗಿ ಐತಿಹಾಸಿಕ ದಾಖಲೆಗಳಾಗುತ್ತವೆ.

ಲಿಂಗರಾಜೇಂದ್ರನು ಈ ನಾಮೆಯನ್ನು ಬರೆಸಿದ ಕಾಲವನ್ನು ಸ್ಪಷ್ಟವಾಗಿ ಉಲ್ಲೇಖಿಸಿದ್ದಾನೆ. ಆ ಪ್ರಕಾರ "ಶ್ರೀ ವಿಜಯಾಭ್ಯುದಯ್ಯ ಕಲಿ ಸಂದ 4913ನೇ ಪ್ರಜೋತ್ಪನ್ನ ಸಂವತ್ಸರದ ಚೈತ್ರ ಶುದ್ಧ 1 ರಲ್ಲು" ಎಂದಿದೆ. ಶ್ರೀ ಡಿ. ಎಸ್. ಕೃಷ್ಣಯ್ಯನವರು ತಮ್ಮ ಗ್ರಂಥದಲ್ಲಿ ಉದ್ಧರಿಸಿದ ಭಾಗದಲ್ಲಿ 'ಕಲಿಸಂದ 4918ನೇ' ಎಂದಿದೆ (ಕೃಷ್ಣಯ್ಯ: 1974, ಪು. 390). ಈ ಎರಡೂ ಅವತರಣಿಕೆಯಲ್ಲಿ 'ಪ್ರಜೋತ್ಪಾತ್ಯಾ, ಸಂವತ್ಸರದ ಚೈತ್ರ ಶು 1 ರಲ್ಲು" ಎಂಬುದು ಸಮಾನವಾಗಿದ್ದು ಅದು ಕ್ರಿ.ಶ. 1811 ಕ್ಕೆ ಸರಿಹೊಂದುತ್ತದೆ. ಲಿಂಗರಾಜೇಂದ್ರನು ಪಟ್ಟಕ್ಕೆ ಬಂದುದೂ ಕೂಡಾ 1811 ರಲ್ಲಿ. ಪಟ್ಟಕ್ಕೆ ಬಂದ ತಕ್ಷಣ ತನ್ನ ಸಂಸ್ಥಾನವನ್ನು ಭದ್ರಪಡಿಸಿಕೊಳ್ಳುವ ಉತ್ಸಾಹದಲ್ಲಿ ಆತ ಈ ನಾಮೆಯನ್ನು ಬರೆಸಿರಬೇಕು. ನಾಮೆಯಲ್ಲಿ ಉಲ್ಲೇಖಿತವಾದ ಪ್ರಕಾರ ಇದನ್ನು 1811 ರ ಮಾರ್ಚ್, 22 ರಂದು ಬರೆಸಲಾಗಿದೆ.

2. ಅಭ್ಯಾಸ

2.1 : ಭೌತಿಕ ವಿಷಯಗಳು

2. 1. 1 : ಮನುಷ್ಯರ ಬಗ್ಗೆ: ಲಿಂಗರಾಜನ ಹುಕುಂ ನಾಮೆಯ ಉದ್ದೇಶ ಯಾವುದೇ ಜಾತಿ, ಪಂಗಡ ಅಥವಾ ಜನಾಂಗದ ವಿವರಣೆ ಕೊಡುವುದಲ್ಲ, ಬದಲಾಗಿ ಬೇರೆ ಬೇರೆ ಜಾತಿಯ, ವೃತ್ತಿಯ, ಪಂಗಡದ ಜನರು ರಾಜನಿಗೆ ನಿಷ್ಠರಾಗಿರಬೇಕೆಂದು ಅದು ಹೇಳುತ್ತದೆ. ರಾಜನ ಬೊಕ್ಕಸಕ್ಕೆ ವಿವಿಧ ಜಾತಿಯ ಜನರು ನೀಡಬೇಕಾದ ತೆರಿಗೆಗಳ ಬಗ್ಗೆ ಅದು ನಿಸ್ಪೃಷ್ಟವಾದ ವಿವರಗಳನ್ನು ನೀಡುತ್ತದೆ. 25 ನೇ ಅಪ್ಪಣೆಯಲ್ಲಿ "ಜಾತಿಗಟ್ಲೆ ಕುಳಗಳಿಂದ ಎತ್ತುವಳಿ ಮಾಡುವ ಹಣವಿನ ವಿವರ" ಎಂಬಲ್ಲಿ ಈ ಕೆಳಗಿನ 19 ಜಾತಿಯ ಹೆಸರನ್ನು ಹೇಳಲಾಗಿದೆ.

ಕುರುಬ	ಕಣಿಯ
ಕುಂಬಾರ	ದಾಸ
ಉಪ್ಪಾರ	ಗವುರ್ರಿಗ
ಅಗಸ	ಮೇದರ
ಆಯಿರಿ (ಬಡಗಿ, ಕಮ್ಮಾರ)	ಬಡಗ ಹೊಲೆಯ
ಅಕ್ಕಸಾಲೆ–ಪಾಂಚಾಲ	ಗಂಬಟ್ಟಿ ಹೊಲೆಯ
ದೇವಾಂಗ–ಜೇಡ	ಮಾದಿಗ
ಕೊತ್ತೇರ	ಮಲೆಯ
ಕಟ್ಟಿಗ	ಮಾರಿಹೊಲೆಯ
ವಡ್ಡ	

ಇವೆಲ್ಲವೂ ಸಾಮಾಜಿಕವಾಗಿ ಹಿಂದುಳಿದ ಜಾತಿಗಳು. ಖಾಸಗಿ ಆಸ್ತಿಯ ಹಕ್ಕು ಇವರಿಗಿಲ್ಲ. ಬದುಕುವುದಕ್ಕೆ ಬೇಕಾಗಿ ಕೊಡಗಿನಲ್ಲಿ ಆಗ ಬಹುಸಂಖ್ಯಾಕರಾಗುತ್ತಿದ್ದ ಕೊಡವರ ತೋಟಗಳಲ್ಲಿ ಕೂಲಿಯಾಳುಗಳಾಗಿರುತ್ತಿದ್ದರು. ಅಸ್ಪೃಶ್ಯರಾಗಿರುವವರು ಜೀತಕ್ಕೆ ದುಡಿಯುತ್ತಿದ್ದರು. ಲಿಂಗರಾಜೇಂದ್ರನು ತನ್ನ ಶ್ರೀಮಂತಿಕೆಯನ್ನು ಹೆಚ್ಚಿಸಿಕೊಳ್ಳುವಾಗ ಈ ಜಾತಿಗಳವರಿಗೆ ಸಾಮಾಜಿಕ ನ್ಯಾಯ ಒದಗಿಸಿಕೊಡದೆ, ಪ್ರತ್ಯೇಕವಾಗಿಯೇ ತೆರಿಗೆ ವಿಧಿಸುವುದರತ್ತ ಮನಸ್ಸು ಹರಿಸಿದ್ದಾನೆ. ಈ ಕಾರ್ಯವನ್ನು ಲಿಂಗರಾಜೇಂದ್ರ ಎಲ್ಲಿಡೆಯೂ ತೋರಿಸಿಲ್ಲ. ಆತ ಕೊಡಗಿನಲ್ಲಿ ಭೂ ಮಾಲಿಕರಾಗಿದ್ದ ಕೊಡವರ ಬಗ್ಗೆ ವಿಶೇಷ ವಿಶ್ವಾಸ ಇಟ್ಟಂತಿದೆ. 25ನೇ ಅಪ್ಪಣೆಯಲ್ಲಿಯೇ "ಕೊಡವರು, ಅಂಮಗಳು, ಮುಕ್ಕಾಟಿಗಳು, ಹೆಗ್ಗಡೆಗಳು ಈ ನಾಲ್ಕು ಜಾತಿ ವಿಸಹಾ" ಎಂಬ ಪ್ರಯೋಗವಿದೆ. ಇವರಲ್ಲಿ 'ಕೊಡವರು' ಅರಸನ ಸಂಸ್ಥಾನದ ಪ್ರಧಾನ ನಿವಾಸಿಗಳು, ಮುಖ್ಯವಾಗಿ ಜಮೀನ್ದಾರರು. ಈ ಜಮೀನ್ದಾರಿ ವರ್ಗದ ಸ್ನೇಹದಿಂದ ಮಾತ್ರ 'ರಾಜತ್ವ' ಉಳಿಯಬಹುದಾಗಿತ್ತು. ಜಾತಿಯಲ್ಲಿ ಲಿಂಗಾಯತನಾಗಿದ್ದ ಲಿಂಗರಾಜೇಂದ್ರನ ಮಟ್ಟಿಗೆ ಸ್ನೇಹಕ್ಕೆ ಇಲ್ಲಿ ಜಾತಿ ಅಡ್ಡಬಂದಿಲ್ಲ. ಇಲ್ಲಿನ ವರ್ಗಗುಣವನ್ನು ನಾವು ಗಮನಿಸಿದರೆ, ಅಚ್ಚರಿಗೂ ಕಾರಣವಿಲ್ಲ. 23ನೇ ಅಪ್ಪಣೆಯಲ್ಲಿ ಲಿಂಗರಾಜನು ಕೊಡವರ ಬಗೆಗೆ ವಿಶೇಷ ಆಸಕ್ತಿವಹಿಸಿದ್ದನ್ನು ನಾವು ಕಾಣಬಹುದು.

ರಾಜನು 'ಅಂಮ' ಕೊಡವರಿಗೂ ವಿನಾಯಿತಿ ನೀಡಿದ್ದಾನೆ. ಈ ಅಂಮ ಕೊಡವರು ಮೂಲತಃ ದೇವತಾ ಕಾರ್ಯಗಳನ್ನು ನಿರ್ವಹಿಸುತ್ತಿದ್ದ ಪುರೋಹಿತ ವೃತ್ತಿಯವರೆಂದು ಹೇಳಲಾಗಿದೆ. (ಶಂಕರನಾರಾಯಣಭಟ್ಟ: 1978, 429) ಎಂ.ಎನ್. ಶ್ರೀನಿವಾಸರ ಪ್ರಕಾರ "ಅಮ್ಮ ಕೊಡವರ ಮೂಲ ಪುರುಷನು ವೈನಾಡಿನ ತಾಯಿಕಾಟ್ ತಂಬಿರಾನ್ ಎಂಬೊಬ್ಬ ಬ್ರಾಹ್ಮಣನ ಮಗಳಿಗೆ, ಒಬ್ಬ ಕೊಡಗನಿಗೆ ಹುಟ್ಟಿದ್ದನೆಂದೂ, ಆತನು ತನ್ನ ತಾಯಿಯ ಪದ್ಧತಿಗಳನ್ನು ಅನುಸರಿಕೊಂಡು ಬಂದುದ

ರಿಂದ ಅಮ್ಮಕೊಡವನೆಂದು ಕರೆಯಲ್ಪಟ್ಟ" (Shreenivasa M.N; 1952). ರಿಕ್ಟರನ ಅಭಿಪ್ರಾಯ ಕೂಡ ಇದೇ ಆಗಿದೆ (Richter, 1984). ಪ್ರಕೃತ ಜನಿವಾರ ಧಾರಣೆ ಮಾಡುತ್ತಿರುವ ಇವರು 17ನೇ ಶತಮಾನದಲ್ಲೊಮ್ಮೆ ಜನಿವಾರಧಾರಣೆ ಮಾಡುವುದನ್ನು ಬಿಟ್ಟಿದ್ದರೆಂದೂ ನಂಬಲಾಗಿದೆ. ಡಿ.ಎನ್. ಕೃಷ್ಣಯ್ಯನವರ ಪ್ರಕಾರ "1834 ರಲ್ಲಿ ಕೊಡಗು ರಾಜರ ಕರಣಿಕನಾದ ತಿಮ್ಮಪ್ಪಯ್ಯನು ಬಲಮುರಿಯಲ್ಲಿ ಪಾಡಿನಾಲ್ಕು ನಾಡಿನ ಅಮ್ಮಕೊಡಗರಿಗೆ ಯಜ್ಞೋಪವೀತ ಧಾರಣೆ ಮಾಡಿಸಿ ಅವರನ್ನು ಶ್ರೀ ರಾಮ ಚಂದ್ರಾಪುರದ ಮಠದ ಶಿಷ್ಯರನ್ನಾಗಿ ಮಾಡಿದನು" (ಕೃಷ್ಣಯ್ಯ: 1974, 622). ಸಂಖ್ಯಾದೃಷ್ಟಿಯಿಂದ ಇವರು ಕಡಮೆ ಇದ್ದರೂ ಸಾಮಾಜಿಕವಾಗಿ ಉನ್ನತ ಸ್ಥಾನದಲ್ಲಿದ್ದರು. ವರ್ಗನಿಷ್ಠ ಸಮಾಜದ ಮೇಲ್ತುದಿಯ ಜನರು ಯಾವಾಗಲೂ ಧಾರ್ಮಿಕ ವ್ಯಕ್ತಿಗಳನ್ನು ಬಿಟ್ಟುಕೊಡುವುದಿಲ್ಲ. ಹಾಗಾಗಿ ಧರ್ಮ ಮತ್ತು ರಾಜಕೀಯ ಜೊತೆ ಜೊತೆಯಲ್ಲಿ ಸಾಗುತ್ತದೆ. ಧಾರ್ಮಿಕತೆಯ ಸಹಾಯದಿಂದ ಪ್ರಭುತ್ವ ಜನರ ಮೇಲೆ ಹಿಡಿತ ಸಾಧಿಸುತ್ತದೆ. ಆಗಷ್ಟೇ ಪಟ್ಟಕ್ಕೆ ಬಂದ ಲಿಂಗರಾಜನು ಅಮ್ಮಕೊಡವರ ವಿಶ್ವಾಸಗಳಿಸಿಕೊಂಡು ಉಳಿದ 19 ಜಾತಿಯ ಜನರ ಮೇಲೆ ತೆರಿಗೆ ವಿಧಿಸಿದ್ದು, ಆಳುವ ವರ್ಗದ ಸ್ವಹಿತರಕ್ಷಣಾ ಮನೋಭಾವದ ದ್ಯೋತಕವಾಗಿದೆ.

ತೆರಿಗೆಯಿಂದ ವಿನಾಯಿತಿಗಳಿಸಿದ ಇತರ ಜಾತಿಗಳೆಂದರೆ ಮುಕ್ಕಾಟಿಗಳು ಮತ್ತು ಹೆಗ್ಗಡೆಗಳು. ಇವರು ಕೊಡಗಿನಲ್ಲಿ ಅಲ್ಪಸಂಖ್ಯಾತರಾಗಿದ್ದರೂ ಭೂ ಹಿಡುವಳಿದಾರರಾಗಿದ್ದರು. ಆ ಅರಸನು ಇವರೊಂದಿಗೆ ಸ್ನೇಹ ಬೆಳೆಸಿದ್ದ.

ಇಲ್ಲಿ ಇನ್ನೊಂದು ಅಂಶ ಮುಖ್ಯವಾದುದು. ರಾಜನು ತೆರಿಗೆ ವಸೂಲಾತಿಗೆ ಪಟ್ಟಿಮಾಡಿದ ಜಾತಿಗಳೆಲ್ಲವೂ ಕೊಡಗಿಗೆ ಹೊರಗಿನಿಂದ ಬಂದುವು. ಕ್ರಿಸ್ತಶಕದ ಆರಂಭದ ಕಾಲದಿಂದಲೂ ಕೊಡಗಿಗೆ ಬಂದು, ನೆಲೆನಿಂತು, ಕೊಡಗಿನ ವಾತಾವರಣಕ್ಕೆ ಅನುಗುಣವಾದ ಮಾರ್ಪಾಡುಗಳನ್ನು ಮಾಡಿಕೊಂಡು ಈ ಜಾತಿಗಳ ಜನರು ಬದುಕಿದ್ದಾರೆ. ಅಂಥ ಮಾರ್ಪಾಡುಗಳಲ್ಲಿ ಅತಿ ಮುಖ್ಯವಾದುದು ಎಂದರೆ ಅವರೆಲ್ಲ ತಮ್ಮ ಮೂಲ ಕಸುಬುಗಳನ್ನು ಬಿಟ್ಟದ್ದು. ಅರಸನು ಕೊಟ್ಟ ಜಮೀನಿನಲ್ಲಿ ಕೃಷಿ ಕೆಲಸ ಮಾಡುತ್ತ ಇವರೆಲ್ಲ ಅರಸ ನಿಷ್ಠಾವಂತ ಅನುಯಾಯಿಗಳಾಗಿದ್ದರು. ಅಲ್ಪ ಭೂ ಹಿಡುವಳಿಯ ಉತ್ಪತ್ತಿ ಜೀವನೋಪಾಯಕ್ಕೆ ಸಾಕಾಗದಿದ್ದಾಗ ಇವರು ಜಮೀನ್ದಾರರ ತೋಟಗಳಲ್ಲಿ ದಿನಗೂಲಿಗಾಗಿ ದುಡಿಯುತ್ತಿದ್ದರು. 11ನೇ ಅಪ್ಪಣೆಯಲ್ಲಿ ಬಂದಿರುವ ವಿವರಣೆಗಳನ್ನು ನೋಡಬಹುದು. "ನಾಡ ರೈತರ್ರು ಹೊಸ್ತಾಗಿ ಭೂಮಿಯನ್ನು ಕಡಿದು ಮಾಡಿ ಆ ಭೂಮಿಯಲ್ಲಿ ಯಂಟುವರ್ರುಶ ಪರಿಯಂತ್ರ ಆ ರೈತರ್ರು ಬೆಳೆತೆಗೆದು ಕೊಳ್ಳುವಲ್ಲಿ ಆ ಪೈರ್ರಿಗೆ ಕಂದಾಯ ಕಾಣಿಕೆಯನ್ನು ಕೇಳದೆ ಮಾಪಾಗಿ ಬಿಟ್ಟು ಒಂಬತ್ತನೆ ವರುಷದಲ್ಲಿ ಆ ಭೂಮಿಯಲ್ಲಿ ಬೆಳೆವಂತಾ ಪೈರ್ರಿಗೆ ಕಾಲುಗಂದಾಯ ತೆಗೆದುಕೊಳ್ಳುವುದು ಹತ್ತನೆ ವರ್ರುಶಕ್ಕೆ ಅರೆಗಂದಾಯ್ಯ

ಹನ್ನೊಂದನೆ ವರ್ರುಶಕ್ಕೆ ಮುಕ್ಕಾಲುಗಂದಾಯ ಹಂನ್ನೆರಡನೆ ವರುಷಕ್ಕೆ ಪೂರ ಕಂದಾಯ ತ್ತಿಗೆಮ ಕೊಳ್ಳಾತ್ತಬರುವುದು." ರಾಜನ ಈ ಉದಾರತೆ ಒಟ್ಟು ಉತ್ಪಾದನೆಯನ್ನು ಹೆಚ್ಚಿಸಿರಬಹುದು. ಆದರ ಜೊತೆಗೆ ಎಷ್ಟೋ ಕುಟುಂಬಗಳ ಮೂಲ ವೃತ್ತಿಯನ್ನು ಬದಲಾಯಿಸಿಬಿಟ್ಟಿದೆ. ಇಡಿಯ ಸಾಮ್ರಾಜ್ಯವೇ ರಾಜನ ಖಾಸಗೀ ಆಸ್ತಿಯಾಗಿ ಮಾರ್ಪಟ್ಟಾಗ ಜನಾಂಗದಲ್ಲಿನ ಸಾಂಸ್ಕೃತಿಕ ಅಂಶಗಳನ್ನು, ಆಳುವ ವರ್ಗದ ಈ ಆಶೋತ್ತರಗಳಿಗನುಗುಣವಾಗಿ ಸೃಷ್ಟಿಯಾಗುತ್ತಿರುವ ಮಾದರಿಗಳಿವು. ಇದು ಬ್ರಿಟಿಷರ ಆಗಮನದ ಪರೋಕ್ಷ ಪರಿಣಾಮ ಕೂಡ ಆಗಿದೆ.

ನಾಮೆಯಲ್ಲಿ ಉಲ್ಲೇಖಿತವಾದ 19 ಜಾತಿಗಳಲ್ಲಿ ಕುರುಬರು, ಮಲೆಕುಡಿಯರು ಮತ್ತು ಹೊಲೆಯರನ್ನು ಮಾತ್ರ ಕೊಡಗಿನ ಮೂಲನಿವಾಸಿಗಳೆಂದು ಹೇಳಲಾಗಿದೆ. (ಕೃಷ್ಣಯ್ಯ: 1974, 609). ಆದರೆ ಇತರ ಮಾನವಶಾಸ್ತ್ರಜ್ಞರು 'ಎರವ'ರನ್ನೂ ಕೊಡಗಿನ ಮೂಲ ನಿವಾಸಿಗಳೆಂದು ಹೇಳಿದ್ದರೂ ನಾಮೆಯಲ್ಲಿ ಇವರ ಬಗ್ಗೆ ಉಲ್ಲೇಖವಿಲ್ಲ. ಅದಕ್ಕೆ ಕಾರಣವು ತಿಳಿಯದು. ಕುರುಬರಲ್ಲಿ ಜೇನುಕುರುಬ ಮತ್ತು ಬೆಟ್ಟಕುರುಬರೆಂಬ ಪ್ರಭೇದಗಳಿವೆ. ನಾಮೆಯಲ್ಲಿ ಇವರ ಬಗ್ಗೆ ಉಲ್ಲೇಖವಿರದಿದ್ದರೂ 28ನೇ ಅಪ್ಪಣೆಯಲ್ಲಿ ಜೇನು ಕೊಯ್ಯುವುದರ ಬಗ್ಗೆ ವಿವರಗಳಿವೆ—"ಜೇನು ಕುಯ್ಸಿ ಅರಮನೆ ಉಗ್ರಾಣಕ್ಕೆ ಕಳುಹಿಸುವುದು ಯಿ ಮೆಣವಂನ್ನು ತರ್ಸಿ ಅರಮನೆ ಉಗ್ರಾಣಕ್ಕೆ ಕಳಿಸುವುದು". ಈ ವಿವರಗಳು ಬಹುಶಃ ಜೇನು ಕುರುಬರನ್ನು ಗಮನದಲ್ಲಿಟ್ಟು ಕೊಂಡೇ ಬಂದಿವೆ. ಕೊಡಗಿನ ಶ್ರೀಮಂಗಲ ಮತ್ತು ಪೊನ್ನಂಪೇಟೆ ಪರಿಸರದಲ್ಲಿ ವಾಸಿಸುತ್ತಿರುವ ಜೇನುಕುರುಬರು ಕಾಡುಗಳಲ್ಲಿ, ಮರಗಳ ಮೇಲಿನ ಕೊಂಬೆ, ಮರದ ಪೊಟರೆ, ಬಂಡೆಗಳೆಡೆಗಳು, ಮಣ್ಣುಹುತ್ತಗಳಿಂದ ಜೇನು ಸಂಗ್ರಹಿಸುತ್ತಾರೆ. ಈ ಜೇನನ್ನು ಗ್ರಾಮಸ್ಥರಿಗೆ ಮಾರಿ ಹೊಟ್ಟೆಹೊರೆದುಕೊಳ್ಳುತ್ತಿದ್ದರು. ಲಿಂಗರಾಜನ ಕಾಲಕ್ಕೆ ಇವರೆಲ್ಲರೂ ಜೇನಿನ ಜೊತೆಗೆ ಮೇಣವನ್ನು ಕೂಡ ಗ್ರಾಮಸ್ಥರಿಗೆ ಮಾರದೆ, ಅರಮನೆಗೇ ಒಪ್ಪಿಸಬೇಕಾಗಿತ್ತೆಂದು ತೋರುತ್ತದೆ. ಜನರ ವ್ಯವಹಾರವನ್ನೂ ಕೂಡಾ ನಿಯಂತ್ರಿಸುವ ರಾಜನ ಅಪ್ಪಣೆಯ ಬಗ್ಗೆ 28ನೇ ಹುಕುಂನಲ್ಲಿ ಈ ರೀತಿ ಹೇಳಲಾಗಿದೆ "ಯಿದಲ್ಲದೆ ನಾಡರೈತರ ಬಳಿಯಿರುವಂತ ಮೇಣವನ್ನು ಹೊರಗೆ ಮಾರದಂತೆ ತಾಕಿತ್ತು ಮಾಡಿಸಿ ರೈತರಿಂದ ಮೇಣವನ್ನು ತರಿಸಿ ಅರಮನೆ ಉಗ್ರಾಣಕ್ಕೆ ಪಾಟಮಣವಿನ ಕಲ್ಲಿನಲ್ಲಿ ತೂಕಮಾಡ್ಸಿಕೊಟ್ಟಲ್ಲಿ...." ಪ್ರಭುತ್ವ ರೂಢಿಸಿಕೊಳ್ಳುವ ಕೇಂದ್ರೀಕೃತ ಅರ್ಥವ್ಯವಸ್ಥೆಯ ಮಾದರಿಯಿದು. ಒಂದೊಂದು ಜಾತಿಗೂ ವಿಶಿಷ್ಟವಾದ ವೃತ್ತಿಯನ್ನು ಕೂಡಾ ಆಳರಸರು ಲಾಭ ಬರುವ ರೀತಿಯಲ್ಲಿ ದುಡಿಸಿಕೊಂಡಿದ್ದಾರೆ. ಇಲ್ಲಿ ವ್ಯವಹಾರ ನಡೆಯುವುದು ಕೂಡಾ ಅರಸನ ಲಾಭಕ್ಕೆಯೇ ವಿನಾ ಜೇನುಕುರುಬರ ಅನುಭೋಗಕ್ಕಾಗಿಯಲ್ಲ. ಆಕಸ್ಮಿತ್ತಾಗಿ ಜೇನು ಸಿಗದೆ ಇದ್ದರೆ ಕುರುಬರು ಮಾಡಬೇಕಾದ ಕೆಲಸದ ಬಗ್ಗೆ ಇಲ್ಲಿ ಮಾಹಿತಿಗಳಿಲ್ಲ. 18ನೇ ಶತಮಾನದ ರಾಜಕೀಯ ವ್ಯವಸ್ಥೆಯು, ಅದರಲ್ಲೂ ದೇಶೀಯ ಆಳರಸರ ಸಾಮಾಜಿಕ ಪ್ರಜ್ಞೆಯ ವಿಕೃತಿಗೆ ಇವು ಸಾಕ್ಷಿ ನುಡಿಯುತ್ತವೆ.

ಕುರುಬರ ಇನ್ನೊಂದು ಪ್ರಭೇದವಾದ ಬೆಟ್ಟಕುರುಬರ ಬಗ್ಗೆ ನಾಮೆಯಲ್ಲಿ ವಿವರಗಳಿಲ್ಲ. 37ನೇ ಅಪ್ಪಣೆಯಲ್ಲಿ ಕೊಡಗಿನ ನಿವಾಸಿಗಳು ಮಲೆಯಾಳ ದೇಶದೊಡನೆ ವ್ಯವಹಾರ ನಡೆಸ ಬೇಕಾದ ಬಗ್ಗೆ ಮಾತುಗಳಿವೆ. ಇದು ಬಹುಶಃ ಬೆಟ್ಟ ಕುರುಬರ ಬಗೆಗೇನೇ ಇರಬೇಕು. ಏಕೆಂದರೆ 'ಈ ಜನರು ಕೇರಳದೊಡನೆ ಹೆಚ್ಚು ಸಂಪರ್ಕ ಇಟ್ಟುಕೊಂಡಿದ್ದಾರೆ' (ಕೃಷ್ಣಯ್ಯ, 1974, 610). ಬೆತ್ತದಿಂದ ಮಾಡಿದ ಬುಟ್ಟಿ ಚಾಪೆ, ತೊಟ್ಟಿಲು, ತೊಟ್ಟಿಲ ಬಳ್ಳಿ, ಮೊದಲಾದುವುಗಳನ್ನು ಮಾರುವ ಕೆಲಸದಲ್ಲಿ ಇವರು ಮಗ್ನರಾಗಿರುತ್ತಿದ್ದರು. ಕೇರಳಕ್ಕೆ ಹೋಗುವಾಗಲೂ ಇವರು ಸುಂಕ ತೆರಬೇಕಾಗುತ್ತಿತ್ತು.

ಮಲೆಕುಡಿಯರನ್ನು ನಾಮೆಯಲ್ಲಿ 'ಮಲೆಯ' ರೆಂದು ಉಲ್ಲೇಖಿಸಲಾಗಿದೆ. ದಕ್ಷಿಣ ಕನ್ನಡ ಮತ್ತು ಕೊಡಗಿನ ಗಡಿಪ್ರದೇಶದಲ್ಲಿರುವ ಗಾಳಿಬೀಡು, ಕಲ್ಮಕಾರು ಗಳಲ್ಲಿ ಇವರು ವಾಸಿಸುತ್ತಿದ್ದಾರೆ. ಹೊಲೆಯರಲ್ಲಿ ಬಡಗ ಹೊಲೆಯ, ಕೆಂಬಟ್ಟಿ ಹೊಲೆಯ, ಮಾರಿಹೊಲೆಯ ಎಂಬ ಒಳ ಪ್ರಭೇದಗಳನ್ನು ನಾಮೆಯಲ್ಲಿ ಹೇಳ ಲಾಗಿದೆಯಾದರೂ ಅವುಗಳ ವೈಶಿಷ್ಟ್ಯಗಳನ್ನು ದಾಖಲು ಮಾಡಲಾಗಿಲ್ಲ. ಅಂಥ ಉದ್ದೇಶವೂ ಅರಸನಿಗಿರಬೇಕಿತ್ತು ಎಂದು ನಾವು ಭಾವಿಸಬೇಕಿಲ್ಲ.

2.1.2 : ಪ್ರಾಣಿಗಳ ಬಗ್ಗೆ : ಕೊಡಗಿನ ಕಾಡುಗಳಲ್ಲಿ ಹೇರಳವಾಗಿ ಕೆಲವು ಪ್ರಾಣಿಗಳ ಬಗೆಗೆ ನಾಮೆಯಲ್ಲಿ ಉಲ್ಲೇಖಗಳಿವೆ. 36 ನೇ ಅಪ್ಪಣೆಯಲ್ಲಿ ಆನೆ ಗಳನ್ನು ಹಿಡಿಯುವುದರ ಬಗ್ಗೆ ವಿವರಗಳಿವೆ. "...ಅರಮನೆ ಕರದಿಂದಾಗಲೀ ರೈತ ರಾಗಲೀ ಆನೆ ಕಪ್ಪು ತೆಗೆಯಬೇಕಾದ್ರೆ ಕಪ್ಪಿನ ಆಳ ಯೆಳುಮೊಳದ ಮೇಲಿಯು ಯೆಳುವರ್‍ರೆ ಮೊಳಯೆಂಟು ಮೊಳ ಯೆಂಟುವರ್‍ರೆಮೊಳ ಒಂಬತ್ತು ಮೊಳ ಯ ಮರೆ ಯಳು ಮೊಳದ ಮೇಲೆ ವಂಬತ್ತುಮೊಳದ ವಳಗ್ಗೆ ಅಳಯಿರುವಂತ್ತೆ ಕಪ್ಪಗಳ ತ್ತೆಗಿಸುತ್ತ ಬರ್‍ರುವುದು....ಇಲ್ಲಿಯ ವಿವರಗಳು ಖೆಡ್ಡದ ವಿವರಗಳನ್ನೇ ಹೋಲುತ್ತದೆ. 'ಕಪ್ಪು' ಪದಕ್ಕೆ ಆನೆಗಳನ್ನು ಹಿಡಿಯಲು ಮಾಡುವ ದೊಡ್ಡದಾದ ಹೊಂಡ ಎಂಬ ಅರ್ಥವೇ ಪ್ರಚಲಿತವಲ್ಲಿದೆ. ಗೌಡಕನ್ನಡದಲ್ಲಿ ಇದಕ್ಕೆ ಸಂವಾದಿಯಾಗಿ 'ಕಳ್ಪು' ಎಂಬ ಪದವಿದೆ. ತುಳುವಿನಲ್ಲಿ 'ಕಪ್ಪು', 'ಕರ್ಪು' ಎಂಬುದಕ್ಕೆ—"An Arrangement for entrapping wild elephants" ಎಂಬ ಅರ್ಥವೇ ಇದೆ (Bhat, 1967, 57) ಕನ್ನಡದಲ್ಲಿ ಕೂಡಾ 'A hole in the ground, a pit' ಎಂಬ ಅರ್ಥವಿದೆ (ಕಿಟ್ಟೆಲ್, 1894 ; 364). ಕೊಡಗು ಮತ್ತು ಸುಳ್ಯ ಪರಿಸರದಲ್ಲಿ ಇಂಥ ಕಪ್ಪುಗಳನ್ನು ಹಂದಿ ಮತ್ತಿತರ ಪ್ರಾಣಿಗಳನ್ನು ಹಿಡಿಯಲು ಬಳಸುತ್ತಾರೆ.

ನಾಮೆಯಲ್ಲಿ ಆನೆಗಳ ಬಗೆಗೆ ವಿಶೇಷ ಉಲ್ಲೇಖವಿರಲೂ ಕಾರಣವಿದೆ. ಕೊಡಗಿನ ಕಾಡುಗಳಲ್ಲಿ ಆನೆಗಳೇ ಹೆಚ್ಚಿನ ಸಂಖ್ಯೆಯಲ್ಲಿದ್ದುವು. ಕೊಡಗಿನ ಪೂರ್ವದಿಕ್ಕಿಗೆ ಕುಶಾಲನಗರಕ್ಕೆ ತಾಗಿಕೊಂಡಂತೆ, ದಕ್ಷಿಣದ ಕಡೆಗೆ ಭಾಗಮಂಡಲದ ಕಾಡುಗಳಲ್ಲಿ ಆನೆಗಳು ಹಿಂಡುಹಿಂಡಾಗಿ ವಾಸಿಸುತ್ತವೆ. ಕೊಡಗಿನ ಅರಸರಲ್ಲಿ ಅನೇಕರು ಆನೆ

ಬೇಟೆಯಲ್ಲಿಯೇ ನಿಸ್ಸೀಮರಾಗಿದ್ದರು. ಚಿಕವೀರರಾಜೇಂದ್ರನು ಆನೆ ಬೇಟೆಯಲ್ಲಿ ನಿಷ್ಣಾತನಾಗಿರುವುದನ್ನು ಶಾಸನಗಳು ದಾಖಲು ಮಾಡಿವೆ (Ephigraphiae Carnatica : Vol.–I, 1973, 6). 50ನೇ ಅಪ್ಪಣೆಯಲ್ಲಿ ಹುಲಿ ಹೊಡೆದವರಿಗೆ ಮಾಡುವ ಸನ್ಮಾನದ ಬಗೆಗೆ ಮಾಹಿತಿಯಿದೆ. ಹುಲಿ ಕೊಂದವರಿಗೆ 3 ರೂಪಾಯಿಯನ್ನು ಕೊಡುವ ಪದ್ಧತಿ ಜಾರಿಯಲ್ಲಿದ್ದುದರ ಹಿನ್ನೆಲೆಯಲ್ಲಿ ಆಕಾಲಕ್ಕೆ ಹುಲಿಗಳ ಸಂಖ್ಯೆ ಹೆಚ್ಚಿಗೆ ಇತ್ತು ಎಂದು ಊಹಿಸಬಹುದು. ಅದೇ ಅಪ್ಪಣೆಯಲ್ಲಿ "....ಯಿದರಿಂದ ಹುಲಿಗಳು ಯಾವತ್ತು ನಿಗ್ರಾಹಾವಾಗಿ ಹೋಗಿ ಜನಗಳಿಗೆ ಗೋವುಗಳಿಗೆ ಮುಂತ್ತಾದ ಜಿವಾ ಜಾತ್ತಿಗಳಿಗೆ ಜಿವಕ್ಕೂ ಜಿವನಕ್ಕೂ ಹೇರಳ ಉಪಕಾರ ಲಭ್ಯ........ಎಂಬ ಮಾತಿದೆ. ಇಂದು ಪೂರ್ತಿ ನಾಶವಾಗಿರುವ ಹುಲಿಗಳ ಸಂತತಿ ಕೊಡಗಿನ ಕಾಡಿನಲ್ಲಿ ನೂರೈವತ್ತು ವರ್ಷಗಳ ಹಿಂದೆ ಹೇಗಿತ್ತೆಂಬುದಕ್ಕೆ ಈ ಅಪ್ಪಣೆಯಲ್ಲಿನ ಮಾತುಗಳೇ ಸಾಕ್ಷಿ.

2.2 : ಭೌಗೋಳಿಕ ಪರಿಸರ : ಮರಗಿಡಗಳ ಬಗೆಗೆ :

ಪಶ್ಚಿಮ ಘಟ್ಟಗಳ ತಪ್ಪಲಲ್ಲಿ ಪಶ್ಚಿಮದಿಂದ ಪೂರ್ವಕ್ಕೆ ಇಳಿಜಾರಾಗಿರುವ ಕೊಡಗಿನ ಭೂ ಪ್ರದೇಶವಲ್ಲಿ ಅನೇಕ ಜಾತಿಯ ಗಿಡಮರಗಳು ಬೆಳೆಯುತ್ತವೆ. ಸಮುದ್ರಮಟ್ಟದಿಂದ 3,800 ಅಡಿ ಎತ್ತರವಿರುವ ಇಲ್ಲಿನ ಕಾಡುಗಳಿಗೆ ಛಳಿಯ ಹವಾಮಾನ ಲಭ್ಯವಿದೆ. ಈ ವಿಶಿಷ್ಟವಾದ ವಾತಾವರಣದಲ್ಲಿ ಅಮೂಲ್ಯವಾದ ಗಿಡಗಳು, ನಾರು ಬೇರುಗಳು ಇದ್ದಂತೆ ತೋರುತ್ತದೆ. ಸಂಪಾಜೆಯಿಂದ ಈಗಣ ಮಡಕೇರಿ ಪೇಟೆಯವರೆಗೆ ಹಬ್ಬಿರುವ ಸುಮಾರು 15 ಕಿ.ಮಿ. ಉದ್ದದ ಬೆಟ್ಟದ ಸಾಲು, ಉತ್ತರಕ್ಕೆ ಹಾಸನ ಜಿಲ್ಲೆಯ ಮಂಜರಾಬಾದಿನವರೆಗೆ ಮತ್ತು ದಕ್ಷಿಣ ದಿಕ್ಕಿಗೆ ಬಿಸಿಲೆ ಘಟ್ಟದವರೆಗೂ ಚಾಚಿಕೊಂಡಿದೆ. ಪ್ರಶಾಂತವಾದ ಮತ್ತು ರಮ್ಯವಾದ ಕುಮಾರ ಪರ್ವತವು ಸಮುದ್ರಮಟ್ಟದಿಂದ 5,620 ಅಡಿ ಎತ್ತರದಲ್ಲಿದೆ. ಕೋಟೆ ಬೆಟ್ಟಸಾಲು 5,400 ಅಡಿ ಎತ್ತರಕ್ಕೆ ಚಾಚಿಕೊಂಡಿದೆ. ಇದೇ ರೀತಿ ಹೊಸೂರು ಬೆಟ್ಟ, ಬೇಂಗುನಾಡುಬೆಟ್ಟ, ನೂರೊಕ್ಕಲು ಬೆಟ್ಟ, ಪೆರಂಬಾಡಿ ನಾಲ್ಕುನಾಡು ಬೆಟ್ಟ, 'ಏಳುಸಾವಿರ ಸೀಮೆ ಬೆಟ್ಟಗಳೆಲ್ಲ ಕೊಡಗಿನಲ್ಲಿವೆ. ಇವುಗಳಲ್ಲಿರುವ ಅಮೂಲ್ಯವಾದ ಗಿಡಮೂಲಿಕೆಗಳ ಬಗೆಗೆ ಲಿಂಗರಾಜನು ಗಮನ ಹರಿಸಿದ್ದಾನೆ. ಕೊಡಗಿನಲ್ಲಿ ಹರಿಯುವ ಕಾವೇರಿ, ಹಾರಂಗಿ, ಹೇಮಾವತಿ ಮತ್ತು ಬರಪೊಳೆ ನದಿಗಳು ಈ ನಾಡಿನ ಸಸ್ಯ ಸಮೃದ್ಧಿಯನ್ನು ಹೆಚ್ಚಿಸಿವೆ. ಸದಾ ತುಂಬಿ ಹರಿಯುವ ಈ ನದಿಗಳ ದಂಡೆಗಳಲ್ಲಿ ಹೇರಳವಾದ ಕಾಡುತ್ಪತ್ತಿ ಲಭ್ಯವಿದೆ.

ಹುಕುಂ ನಾಮೆಯಲ್ಲಿ ಇಂಥ ಕಾಡುತ್ಪತ್ತಿಗಳನ್ನು ಸಂಗ್ರಹಿಸುವ ಬಗ್ಗೆ ಅಪ್ಪಣೆಗಳಿವೆ. 33ನೇ ಅಪ್ಪಣೆಯಲ್ಲಿ 'ಅರಮನೆ ಉಗ್ರಾಣಕ್ಕೆ ಕಾಲಾವಧಿಗೆ ಬೇಕಾದ ಗಂದಿಗೆ ಸರಕು ಜಮಾಯಿಸುವ ವಿವರ' ಇದೆ. ಇಲ್ಲಿ ಅರಮನೆ ಸೀಮೆಯನ್ನು 3 ಸೀಮೆಗಳಾಗಿ ವಿಭಜಿಸಿಕೊಳ್ಳಲಾಗಿದೆ. ಅದೆಂದರೆ—

1. ಅರಮನೆ ಸೀಮೆ ಮಲೆನಾಡು,
2. ಅಮರ ಸುಳ್ಯ ಸೀಮೆ ಮತ್ತು
3. ಏಳುಸಾವಿರ ಸೀಮೆ.

ಈ ಮೂರು ಸೀಮೆಗಳ ಕಾಡುಗಳಲ್ಲಿ ಬೇರೆ ಬೇರೆ ರೀತಿಯ ವಸ್ತುಗಳು ಸಿಗುತ್ತಿದ್ದುದೇ ಈ ವಿಭಜನೆಗೆ ಕಾರಣ. ಇದರಲ್ಲಿ ಮೊದಲನೆಯದಾದ 'ಅರಮನೆ ಸೀಮೆ ಮಲೆನಾಡು ಪ್ರಾಂತವು' ಕೊಡಗಿನ ಯಾವ್ಯಾವ ಭಾಗವನ್ನು ಆವರಿಸಿಕೊಂಡಿತ್ತೆಂದು ಹೇಳುವುದು ಕಷ್ಟ. ಕ್ಷೇತ್ರ ಕಾರ್ಯದಲ್ಲಿ ನನಗೆ ದೊರಕಿದ ಮಾಹಿತಿಯಂತೆ ಈ ಪ್ರದೇಶವು ಕೊಡಗಿನ ನೈರುತ್ಯ ಮೂಲೆಯಲ್ಲಿರುವ ದಕ್ಷಿಣ ಬ್ರಹ್ಮಗಿರಿಯ ತಪ್ಪಲಲ್ಲಿರುವ ಕಾಡನ್ನು ಒಳಗೊಂಡಿದೆ. ಭೌಗೋಳಿಕವಾಗಿ ಈ ಬ್ರಹ್ಮಗಿರಿಯು ಕೊಡಗನ್ನು ವೈನಾಡಿನಿಂದ ಪ್ರತ್ಯೇಕಿಸಿದೆ. ಬ್ರಹ್ಮಗಿರಿಯು ಇಡಿಯದಾದ ಬೆಟ್ಟ ಸಾಲುಗಳಲ್ಲಿ ಹುಯ್ಯಲೆ ಮಲೆ, ದೇವಸಿ ಬೆಟ್ಟ, ಹನುಮನ ಬೆಟ್ಟ, ಪೆರುಮಾಲೆ ಮಲೆ ಮೊದಲಾದ ಕಾಡುಗಳಿವೆ. ಕ್ರೂರ ಪ್ರಾಣಿಗಳೂ, ದಟ್ಟವಾದ ಕಾಡೂ ಇರುವ ಈ ಪ್ರದೇಶದಿಂದ ಈ ಕೆಳಗಿನ ಕಾಡುತ್ಪತ್ತಿಗಳನ್ನು ಸಂಗ್ರಹಿಸಿ ಅರಮನೆ ಉಗ್ರಾಣಕ್ಕೆ ಒಪ್ಪಿಸಬೇಕಾಗಿತ್ತು.[1]

ಕೊಳವಳಿಕೆ ಬೀಜ	ಕಾರ್ರಿಕಾಯಿ	ಕರಿಜೀರಿಗೆ
ನೆಲ್ಲಿ ಚಟ್ಟು	ಅಳಲೆಕಾಯಿ	ಬಜೆ
ಮರದ ಅರಸಿನ	ಕಸ್ತೂರಿ ಅರಸಿನ	ಗಜ್ಜಗ
ಬಲಮುರಿಕಾಯಿ	ದಿಂಡಾಗರುವೇಣ	ಹಲ್ಲೆಕಾಯಿ
ಕುಳುಮಾವಿನ ಚಕ್ಕೆ	ರಾಸ್ತ್ನ ಗೆಡ್ಡೆ	ಸುಗಂಧಿ ಬೇರು
ಲಾವಂಚ	ಮುಡ್ಡಿವಳ	ನಸುಗುಂನ್ನಿ
ಚಗತ್ತಿ ಬೀಜ	ವಿಷ್ಣು ಗ್ರಂಥಿ	ಹಂಸಪಾದ
ಕಾಯಿನಾಗದಾಳಿ	ಭದ್ರಮುಷ್ಠಿ	ಶತಾವರ್ರಿ ಅಥವಾ ಹಲವು ಮಕ್ಕಳ ಬೇರು
ಕಾಡಮೆಣಸಿನ ಬಳ್ಳಿ ಅಥವಾ ಚರೆ	ಬೆಟ್ಟ ಗುಂಬಳ	ಬೂರುಗವ ಮೇಣ
ಬಡೆಮಾಯಿ ಅಥವಾ ಉಗುರ್ರಿಲೆ ಮೇಲಣ ಮಗಡು	ರೆಂಜದ ಬೀಜ	ಮುತ್ತುಗ
ಯಿ ಹೊಲು	ಕೆಂಪು ಚಿತ್ರಾಮೂಲ	ಬಿಳಿ ಚಿತ್ರಾಮೂಲ
ಅಮೃತ ಬಳ್ಳಿ	ನಾಗದಾಳಿ ಬೀಜ	ಗಲಜಿನ ಬೀಜ
ಕರಿಮ್ಮತ್ತದ ಕಾಯಿ		

ಹೀಗೆ ಇಲ್ಲಿ 37 ವಿಧದ ಮರಗಿಡ ಕಾಯಿ ಬೀಜಗಳ ಹೆಸರಿದೆ. ಆದರೆ ಅಪ್ಪಣೆಯ ಕೊನೆಯಲ್ಲಿ 'ಅಂತು ಬಗೆ ಮೂವತ್ತೊಂಬತ್ತು' ಎಂದು ದಾಖಲು ಮಾಡಲಾಗಿದೆ. 'ಕೆಂಪು ಚಿತ್ರಾಮೂಲ ಮತ್ತು ಬಿಳಿ ಚಿತ್ರಾಮೂಲ ಸಹಾ ಬಗೆಯೆರಡ್ಡು' ಎಂದು ಹೇಳಿದ್ದು ಆದರೊಳಗಿನ ಇನ್ನೆರಡು ಪ್ರಭೇದಗಳನ್ನಾರಗಿಬೇಕು. ಅದು ಹೌದಾದರೆ ಅರಮನೆಸೀಮೆಗೆ ಸೇರಿದ ಕಾಡಿನಿಂದ ಒಟ್ಟು 39 ಬಗೆಯ ಉತ್ಪತ್ತಿಗಳನ್ನು ಸಂಗ್ರಹಿಸಲಾಗುತ್ತಿತ್ತು.

ಅಪ್ಪಣೆಯ ಎರಡನೆಯ ವಿವರ ಅಮರಸುಳ್ಯ ಸೀಮೆಯಿಂದ ಸಂಗ್ರಹಿಸಬೇಕಾಗಿರುವ ಸರಕುಗಳಿಗೆ ಸಂಬಂಧಿಸಿದೆ. ಈ 'ಅಮರ ಸುಳ್ಯಸೀಮೆ'ಯು ಮೂಲತಃ ಕೊಡಗಿಗೆ ಸೇರಿರಲಿಲ್ಲ. ಟಿಪ್ಪುವಿನ ಮರಣಾನಂತರ ಕೊಡಗಿಗೆ, ರಾಜಕೀಯ ಕಾರಣಗಳಿಗಾಗಿ ಸೇರಿ ಹೋದ ಈ ಸೀಮೆಯ ಬಗೆಗೆ ಕ್ರಿ. ಶ. 1804ರಲ್ಲಿ ವೀರರಾಜೇಂದ್ರನು ಬರೆಸಿದ 'ಇಸ್ತಿಹಾರು ನಾಮೆ' ಅಮೂಲ್ಯವಾದ ವಿವರಗಳನ್ನು ನೀಡುತ್ತದೆ. "....ನಮ್ಮ ಅರಮನೆ ಶೀಮೆಗೆ ಕೊಡೆಯಾಲದ ತಾಲೂಕಿನ ಶೀಮೆಯಿಂದಾ ಸೇರಿದ ಸುಬ್ರಮಣ್ಯದ ವಳಿತವಾದ ಕಡಬದ ವಳಿತವಾದ ಬಂಡಾಡಿಮಾಗಣೆ, ಪಂಜ್ಯ ನರಿಮೊಗರು ಬಾರಿ ಬೇಲೂರು ಪುತ್ತೂರು ಅಡೂರು ಸಾವಿರಾರು ಪಟ್ಟ ಮುಂತಾದ ಶೀಮೆ ಮುಖ್ಯಸ್ಥರು ಗೌಡುಗಳು ಪ್ರಜೆಗಳು...." (ಕೃಷ್ಣಯ್ಯ 1974 ; 338). ಮಂಗಳೂರು ತಾಲೂಕಿನಿಂದ ಕೊಡಗಿಗೆ ಸೇರಿಹೋದ ಪ್ರದೇಶಗಳನ್ನು ಇವು ಸೂಚಿಸುತ್ತವೆ. ಇವತ್ತಿನ ಪುತ್ತೂರು ಮತ್ತು ಸುಳ್ಯ ತಾಲೂಕಿನ ಎಲ್ಲ ಪ್ರದೇಶಗಳನ್ನು, ಉಪ್ಪಿನಂಗಡಿ ಮತ್ತು ಬಂಟ್ವಾಳ ತಾಲೂಕಿನ ಕೆಲವು ಪ್ರದೇಶಗಳನ್ನೂ ಇವು ಒಳಗೊಂಡಿವೆ. ಈ ಇಸ್ತಿಹಾರು ನಾಮೆಗೂ ಪೂರ್ವದಲ್ಲಿ ವೀರರಾಜೇಂದ್ರನು ಬರೆಸಿದ ವಕಾಲತ್‌ನಾಮೆಯಲ್ಲಿ ಇದರ ಬಗ್ಗೆ ಇನ್ನಷ್ಟು ವಿವರಗಳಿವೆ. ವಕಾಲತ್‌ನಾಮೆಯಪ್ರಕಾರ ಅಮರು ಸುಳ್ಯಸೀಮೆಯ ವ್ಯಾಪ್ತಿಯಲ್ಲಿ ಈ ಕೆಳಗಿನ ಪ್ರದೇಶಗಳು ಬರುತ್ತವೆ—

ಬೆಳ್ಳಾರೆ ಮಾಗಣೆ (ಇದರಲ್ಲಿ ಒಟ್ಟು 37 ಗ್ರಾಮಗಳು)
ಅಡೂರು ಮಾಗಣೆ (5 ಗ್ರಾಮಗಳ ವ್ಯಾಪ್ತಿ)
ನರಿಮೊಗರು ಮಾಗಣೆ (ಒಂದು ಗ್ರಾಮ ಮಾತ್ರ)
ಪುತ್ತೂರು ಮಾಗಣೆ (35 ಗ್ರಾಮಗಳ ವ್ಯಾಪ್ತಿ)
ಕಡ್ಯ ಮಾಗಣೆ (5 ಗ್ರಾಮಗಳ ವ್ಯಾಪ್ತಿ)
ಬಂಡಾಡಿ ಮಾಗಣೆ (3 ಗ್ರಾಮಗಳ ವ್ಯಾಪ್ತಿ)
ಪಂಜ ಮಾಗಣೆ (10 ಗ್ರಾಮಗಳ ವ್ಯಾಪ್ತಿ)
ಸಾವಿರಾಳ ಪಟ್ಟ ಮಾಗಣೆ (6 ಗ್ರಾಮಗಳ ವ್ಯಾಪ್ತಿ)
ಸುಬ್ರಹ್ಮಣ್ಯ ಮಾಗಣೆ (10 ಗ್ರಾಮಗಳ ವ್ಯಾಪ್ತಿ)

ಹೀಗೆ ಒಟ್ಟು 118 ಗ್ರಾಮಗಳು ಕೊಡಗಿಗೆ ಸೇರಿವೆ.

ಇವುಗಳನ್ನು ಇಷ್ಟು ವಿವರವಾಗಿ ಇಲ್ಲಿ ಕೊಡಲು ಕಾರಣವಿದೆ. ಅವೆಂದರೆ ಇಲ್ಲಿ ಹೇಳಲಾದ 118 ಗ್ರಾಮಗಳೂ ಕೂಡಾ ಕಾಡಿನಿಂದ ಆವೃತ್ತವಾದುವು. ಬೆಟ್ಟಗುಡ್ಡಗಳಿರುವ ಇಲ್ಲಿ ಕೃಷಿಯೋಗ್ಯ ಭೂಮಿಗಿಂತ ಹೆಚ್ಚಾಗಿ ಕಾಡೇ ಬೆಳೆದಿತ್ತು. ಈ ಕಾಡಲ್ಲಿ ಅಪಾರವಾದ ಕಾಡುತ್ಪತ್ತಿಗಳು ಲಭ್ಯವಿದ್ದುವು. ಲಿಂಗರಾಜನು ಇದನ್ನು ಮನಗಂಡು ಇಲ್ಲಿಂದ ಸಂಗ್ರಹಿಸಬೇಕಾದ ವಸ್ತುಗಳ ಬಗೆಗೆ ವಿವರ ನೀಡಿದ್ದಾನೆ. ಆ ಪ್ರಕಾರ ಅಮರ ಸುಳ್ಯ ಸೀಮೆಯ ಕಾಡುಗಳಿಂದ ಈ ಕೆಳಗಿನವುಗಳನ್ನು ಸಂಗ್ರಹಿಸಬೇಕಾಗಿತ್ತು—

ಈಶ್ವರ ಬೇರು	ವರುಷ ರತ್ನ	ದಾಲಜೇನಿ
ಚಿತ್ರಮೂಲ	ಗೇರುಬೀಜ	ಕಾಸರಕನ ಬೀಜ
ಕಾರಕನ ಚಿಕ್ಕೆ	ಮಂಜಟ್ಟಿ ಬೀಜ	ಮಂಜಟ್ಟಿ ಮರದ ಚಿಕ್ಕೆ
ಪಾತಾಳ ಗರುಡ	ಕಿರು ನೆಲ್ಲಿ	ಹಲ್ಲಿಕಾಯಿ
ಜುಂಮದ ಕಾಯಿ	ಕಾವಟೆ ಮರ	ಪಚ್ಚೆ ತೆನೆ
ಕೇದಗೆ ಬೇರು	ಕೇಪಳೆ ಬೇರು	ಬಿಳಿ ಕೇಪಳ
ಅಗಳ ಶುಂಠಿ	ಪಾತಾಳ ಸೊಪ್ಪು	ಕಹಿಪಡವಳ ಹಂಬು
ಅಂಟುವಾಳ ಕಾಯಿ	ನರುವೊಳು ಕಾಯಿ	

ಹೀಗೆ ಒಟ್ಟು 23 ಬಗೆಯವು. ಇವುಗಳಲ್ಲಿ ಹಲವನ್ನು ಸುಳ್ಯ ಪರಿಸರದಲ್ಲಿನ ಜನರು ವೈದ್ಯಕ್ಕಾಗಿ ಉಪಯೋಗಿಸುತ್ತಾರೆ.[3] ಲಿಂಗರಾಜನು ಅರಮನೆಗಾಗಿ ಇವನ್ನು ಸಂಗ್ರಹಿಸುವಾಗ ಇಂಥ ವೈದ್ಯದ ಉದ್ದೇಶವಿದ್ದಿರಲೂ ಸಾಕು; ಇಲ್ಲವೇ ಬ್ರಿಟಿಷರಿಗೆ ಇದನ್ನೆಲ್ಲ ಮಾರುತ್ತಿದ್ದಿರಲೂಬಹುದು. ಇದ್ಯಾವುದಕ್ಕೂ ನಾಮೆಯಲ್ಲಿ ಆಧಾರಗಳಿಲ್ಲ.

ಮರಗಿಡಗಳ ಬಗೆಗೆ ನಾಮೆಯಲ್ಲಿ ದೊರಕುವ ಮೂರನೇ ವಿವರ ಏಳು ಸಾವಿರ ಸೀಮೆಯ ಸಾಲುಹಳಿಗೆ ಸಂಬಂಧಿಸಿದೆ. ಕೊಡಗಿನ ಉತ್ತರ ಗಡಿಯಿಂದ ಹೊರಟ ಬೆಟ್ಟಸಾಲುಗಳು ದಕ್ಷಿಣದ ಕಾವೇರಿನದಿಗೆ ಮುಟ್ಟುವಲ್ಲಿವರೆಗಣ ಬೆಟ್ಟ ಪ್ರದೇಶವನ್ನು 'ಏಳು ಸಾವಿರ ಸೀಮೆ'ಯೆಂದು ಈಗಲೂ ಕರೆಯಲಾಗುತ್ತಿದೆ. ಇದರಲ್ಲಿ ಮತ್ತೆ ಮಾಲಂಬಿ ಬೆಟ್ಟ ಮತ್ತು ಕಣಗಾಲು ಬೆಟ್ಟಗಳು ತಮ್ಮ ದಟ್ಟತನಕ್ಕೆ ಹೆಸರಾಗಿವೆ. ಪಶ್ಚಿಮ ಘಟ್ಟಗಳಿಂದ ಬೇರೆಯಾಗಿಯೇ ಇರುವ ಈ ಬೆಟ್ಟಗಳು ಸಮುದ್ರ ಮಟ್ಟದಿಂದ ಸುಮಾರು 4,490 ಅಡಿ ಎತ್ತರಕ್ಕೆ ನಿಮಿರಿಕೊಂಡಿವೆ. ಇಲ್ಲಿಂದಲೂ ಅಮೂಲ್ಯವಾದ ಗಿಡಮೂಲಿಕೆಗಳನ್ನು ಸಂಗ್ರಹಿಸಬೇಕೆಂದು ಅಪ್ಪಣೆಯಲ್ಲಿ ಹೇಳಲಾಗಿದೆ. ಆ ಪ್ರಕಾರ ಈ ಕೆಳಗಿನ ಹೆಸರುಗಳನ್ನು ದಾಖಲುಪಡಿಸಲಾಗಿದೆ—

ನೆಲಗುಳದ ಕಾಯಿ	ನೆಲಗುಳದ ಗಿಡ	ನೆಲಾವರ್ರಿಕೆ
ಗೇರುಬೀಜ	ಹಿರಿಮದ್ದಿನ ಬೇರು	ಅಳತೆ ಕಾಯಿ

ಕೈ ಬೇವಿನ ಬೀಜ	ಕೈಬೇವಿನ ಹೂ	ಕೈಬೇವಿನ ಮೇಣ
ಕೈ ಬೇವಿನ ಚಕ್ಕೆ	ಮಂಗರವಳ್ಳಿ	ಮುಂಡುಗಳ್ಳಿ
ಬಿಲ್ವಪತ್ರ ಬೇರು	ನೆಗ್ಗಿಲ ಮುಳ್ಳು	ಕಿರು ನೆಲ್ಲಿ
ತಾವರೆ ಗಡ್ಡೆ	ತಾವರೆ ಬೀಜ	ತಾವರೆ ಹೂ
ದಿಂಡಗದ ಮೇಣ	ನೈದಿಲ ಗಡ್ಡೆ	ಯಕ್ಕದ ಹೂವು
ಯಕ್ಕದ ಚಕ್ಕೆ	ಯಕ್ಕದ ಬೇರು	ನೆಲ ತೆಂಗು
ಅಂಟುವಳ ಕಾಯಿ	ಹಾಲು ಮೆಕ್ಕೆ	

ಹೀಗೆ ಒಟ್ಟು 27 ಹೆಸರುಗಳಿವೆ. ಇವುಗಳೆಲ್ಲದರ ಪ್ರಯೋಜನವೇನಿತ್ತೆಂದು ನಿಖರವಾಗಿ ಹೇಳುವುದು ಕಷ್ಟ. ಪಾಶ್ಚಾತ್ಯ ದೇಶದ ವ್ಯಾಪಾರಿಗಳು ಇದನ್ನು ಸಂಗ್ರಹಿಸುತ್ತಿದ್ದಿರಬಹುದು. ಜನರು ಖಾಸಗಿಯಾಗಿ ಇಂಥವನ್ನು ಮಾರಿ ದುಡ್ಡು ಮಾಡುವಂತಿರಲಿಲ್ಲ.

ಇಡೀ ಹುಕುಂನಾಮೆಯನ್ನು ಪರಿಶೀಲಿಸಿದಾಗ ಇನ್ನೂ ಕೆಲವು ಗಿಡ, ಮರ, ಕಾಯಿ, ಹಣ್ಣುಗಳ ವಿವರಗಳು ಬೇರೆ ಬೇರೆ ಕಾರಣಗಳಿಂದ ಬಂದಿರುವುದನ್ನು ಗಮನಿಸಬಹುದು. ಅವುಗಳನ್ನು ಒಟ್ಟು ಸೇರಿಸಿದರೆ ಈ ಕೆಳಗಿನ ಹೆಸರುಗಳು ಲಭ್ಯವಿದೆ—

ಬತ್ತ	(3ನೇ ಅಪ್ಪಣೆ)
ಗಂಧ	(3ನೇ ಅಪ್ಪಣೆ)
ಏಲಕ್ಕಿ	(3ನೇ ಅಪ್ಪಣೆ)
ಪಣಪುಳಿ ಕಾಯಿ	(7ನೇ ಅಪ್ಪಣೆ)
ಬಾಳೆ	(26ನೇ ಅಪ್ಪಣೆ)
ಮೆಣಸು	(”)
ಹೊಗೆ	(”)
ಪಪ್ಪಾಯಿ	(”)
ವೀಳ್ಯ	(”)
ಹಲಸು	(”)
ಶುಂಠಿ	(”)
ನಿಂಬೆ	(”)
ಕಂಚಿ	(”)
ದೊಡ್ಡ ಹುಳಿ	(”)
ಕಿತ್ತಳೆ	(”)
ಬೇವು	(”)

ಚಿತ್ರ (27ನೇ ಅಪ್ಪಣೆ)
ಗಂಧ (41ನೇ ಅಪ್ಪಣೆ)

ಮೇಲಿನ ಗಿಡಗಳಲ್ಲಿ ಹಲವನ್ನು ತೋಟಗಳಲ್ಲಿ ಬೆಳೆಸಬಹುದೆಂದೂ ನಾಮೆಯಲ್ಲಿ ತಿಳಿಸಲಾಗಿದೆ. ಮನೆ ಹಿತ್ತಲಿನಲ್ಲಿ ಬೆಳೆಸಬಹುದಾದ ಉಪಯುಕ್ತ ಗಿಡಗಳ 26ನೇ ಅಪ್ಪಣೆಯಲ್ಲಿ ವಿವರ ಸಿಗುತ್ತದೆ. ಅವುಗಳೆಂದರೆ—

ಬದನೆಕಾಯಿ	ಹಾಗಲಕಾಯಿ	ಕುಂಬಳಕಾಯಿ
ಹೀರೇಕಾಯಿ	ಹರುವೆ	ತೊಂಡೆಕಾಯಿ
ಬಿಳಿ ಸೌತೆ	ಹಾಲುಸೆರೆ ಬೀಜ	ಬೂದಿಕುಂಬಳ
ಕೊತ್ತಂಬರಿ		

ಇವೆಲ್ಲವುಗಳ ಜೊತೆಗೆ ಆರಾಧನಾ ಸಂದರ್ಭದಲ್ಲಿ ಉಪಯೋಗಿಸುವ ಬಿಲ್ವಪತ್ರೆಯ ಉಲ್ಲೇಖ 32ನೇ ಅಪ್ಪಣೆಯಲ್ಲಿ ಬಂದಿದೆ. ಗಂಧದ ಮರದ ಬಗ್ಗೆ ಬರೆಯುವಾಗ ದೊಡ್ಡದಾದ ಮೇಲೆ ಮಾತ್ರ ಅವುಗಳನ್ನು ಕಡಿಸಬೇಕೆಂದು ಅಪ್ಪಣೆ ಮಾಡಲಾಗಿದೆ (41ನೇ ಅಪ್ಪಣೆ). ಈಗಿನಂತೆ ಆಗಲೂ ಗಂಧದ ಮರ ಸರಕಾರದ ಆಸ್ತಿಯಾಗಿತ್ತು.

ಹೀಗೆ ನಾಮೆಯಲ್ಲಿ ಅರಣ್ಯದ ಬಗೆಗೆ ವಿವರಗಳು ಸಿಗುತ್ತವೆ. ಇಲ್ಲಿನ ಎಲ್ಲ ಉತ್ಪತ್ತಿಗಳ ಮೇಲೂ ರಾಜನು ಸಾರ್ವಭೌಮತ್ವವನ್ನು ಸ್ಥಾಪಿಸಿದ್ದನು.[3]

2.3 : ಧಾರ್ಮಿಕ ಸ್ಥಿತಿಗತಿ :

2.3.1 : ಧರ್ಮಶಾಸ್ತ್ರ ಗ್ರಂಥಗಳ ಬಗೆಗೆ : ಹುಕುಂ ನಾಮೆಯ ಮೂಲೋದ್ದೇಶ ಆಡಳಿತವನ್ನು ಬಲಪಡಿಸುವುದಾಗಿತ್ತೇ ವಿನಾ ಧಾರ್ಮಿಕ ವಿಚಾರಗಳನ್ನು ಚರ್ಚಿಸುವುದಾಗಿರಲಿಲ್ಲ. ಆದರೆ ಪ್ರಾಸಂಗಿಕವಾಗಿ ಅಲ್ಲಲ್ಲಿ ಧಾರ್ಮಿಕ ವಿಚಾರಗಳ ಬಗೆಗೆ, ಶಾಸ್ತ್ರಗ್ರಂಥಗಳ ಬಗೆಗೆ ಉಲ್ಲೇಖವಿದೆ. ಕಾನೂನು ಪಾಲನೆಗೋಸ್ಕರ ಜನರಲ್ಲಿ ಶ್ರದ್ಧೆ ಮೂಡಿಸಲು ಸಹಕಾರಿಯಾಗುವಂತೆ ಅಲ್ಲಲ್ಲಿ 'ಇಹಪರ'ದ ನಂಬಿಕೆಗಳನ್ನು ತರಲಾಗಿದೆ. ಎರಡನೇ ಅಪ್ಪಣೆಯ ಕೊನೆಯಲ್ಲಿ ಬಂದಿರುವ ಮಾತುಗಳು,–"....ಯಿದಕ್ಕೆ ಸೊಲ್ಪ ಹೆಚ್ಚು ಕಡಮೆ ನಡೆದಂತ್ತಾ ವರ‍್ರು ಯಿಹಪರಯರಡಕ್ಕೂ ಕೆಟ್ಟವರಾದರ‍್ರು ಯಂಬುದಾಗಿ ಧರ್ಮಶಾಸ್ತ್ರದಲ್ಲಿ ಹೇಳುತ್ತದೆ. ಈ ಮಾತುಗಳು ಕನ್ನಡ ಶಾಸನಗಳ ಕೊನೆಯಲ್ಲಿ ಬರುವ ಫಲಶ್ರುತಿಯನ್ನೇ ಹೋಲುತ್ತವೆ.

ಮೂರನೆಯ ಅಪ್ಪಣೆಯಲ್ಲಿ ಜನೋಪಯೋಗಕ್ಕಾಗಿ ರಾಜನೇ ಧರ್ಮಶಾಸ್ತ್ರಗಳನ್ನು ಮೀರಿ ನಡೆವುದಾಗಿ ಘೋಷಿಸಿಕೊಂಡಿದ್ದಾನೆ–"ರಾಜನೀತಿ ಧರ್ಮಶಾಸ್ತ್ರದಲ್ಲಿ ಹೇಳುತ್ತದೆ, ರೈತರ‍್ರು ಭೂಮಿಯಿಂದಾ ಪೈರು ಬೆಳೆದರೆ ಆರಕ್ಕೆ ವಂದು ಅರಮನೆಗೆ

ತೆಗೆದುಕೊಳ್ಳತಕ್ಕದ್ದು ಉಳಿದ ಐದುಭಾಗ ರೈತನಿಗೆ ಬಿಟ್ಟು ಸಲ್ಲಬೇಕು ಎಂಬುದಾಗಿ ಯೀಗ ಮಹಾದೇವ ಬುಧಿ ಕೊಟ್ಟದ್ದರಿಂದ ನಂಮ ರೈತರ್ರು ಸುಕದಲ್ಲಿಯಿದ್ದುಕೊಂಡು ನಮಗೆ ಶ್ರೇಯಸ್ಸ ಜಯ ಶುಭ ಹಾರೈಸುವಲ್ಲಿ ಯಂಬುದಾಗಿ ನಂಮ ರೈತರ್ರು ಹತ್ತು ಬೆಳೆದರ್ರೆ ವಂದು ಅರಮನೆಗೆ ತ್ತೆಗೆದುಕೊಂಡು ವಂಬತ್ತು ರೈಹಿತರ್ರಿಗೆ ಬಿಟ್ಟುಕೊಡುತಾಯಿದೆ". ಪ್ರಜಾಜನರನ್ನು ಒಲಿಸಿಕೊಳ್ಳುವ ರಾಜತಾಂತ್ರಿಕ ನೈಪುಣ್ಯದ ಮಾದರಿಯಿದು. ಸಮಾಜದ ಮೇಲೆ ರಚನೆಯಲ್ಲಿ ಪ್ರಭಾವಶಾಲಿಯಾಗಿರುವ ಧರ್ಮವನ್ನು ಇಲ್ಲಿ ಆರ್ಥಿಕ ಮೂಲರಚನೆಯನ್ನು ಬಲಪಡಿಸುವುದಕ್ಕಾಗಿ ಬಳಸಿಕೊಳ್ಳಲಾಗಿದೆ. 'ಧರ್ಮಶಾಸ್ತ್ರ', 'ಮಹಾದೇವ' ಮೊದಲಾದುವುಗಳ ಉಲ್ಲೇಖ ಕೂಡಾ ಉತ್ಪಾದನೆಯನ್ನು ಹೆಚ್ಚಿಸುವುದಕ್ಕೆ ಮತ್ತು ಪ್ರಜಾಜನರನ್ನು ಅಂಕಿತದಲ್ಲಿಟ್ಟುಕೊಳ್ಳಲು ಸಹಕಾರಿಯಾಗಿದೆ.

2.3.2 : ದೇವರುಗಳ ಬಗೆಗೆ: ಲಿಂಗರಾಜನು ಮತದಿಂದ ಲಿಂಗಾಯತನಾಗಿದ್ದ. ಆತ ತನ್ನ ಶಿವಭಕ್ತಿಯನ್ನು ಇತರರ ಮೇಲೆ ಕೂಡಾ ಹೊರಿಸಲು ಸನ್ನಾಹ ಮಾಡಿದ್ದಕ್ಕೆ ಮೂರನೆಯ ಮತ್ತು ಮೂವತ್ತೆರಡನೆಯ ಅಪ್ಪಣೆಗಳು ಸಾಕ್ಷಿ ಹೇಳುತ್ತವೆ. ಮೂರನೆಯ ಅಪ್ಪಣೆಯಲ್ಲಿ "...ನಂಮ ನಿಂದನೆ ಮಾಡಿ ಅಪಕಾರ ಯೋಚಿಸುವಂತಾ ರೈಹಿತರ್ರಿಗೆ ಶ್ರೀ ರುದ್ರನೆ ಶೀಕ್ಷೆ ನೀಡಲಿ....ಎಂಬ ಮಾತಿದೆ. ಇಲ್ಲಿ ಶ್ರೀ ರುದ್ರನಿಗೆ ಬಿದ್ದಿರುವ ಒತ್ತು ಲಿಂಗರಾಜನ ಲಿಂಗಾಯತ ನಿಷ್ಠೆಯನ್ನೇ ಸಾಬೀತು ಪಡಿಸುತ್ತದೆ. 32ನೆಯ ಅಪ್ಪಣೆಯಲ್ಲಿ—"....ನಾಡಿನಲು ಯಿರುವಂತಾ ಶಿವಲಯಗಳಲ್ಲಿ ಶ್ರಾವಣ ಮಾಸ ವಂದುತ್ತಿಂಗಳು ಮಾಗ ಮಾಸ ವಂದು ತ್ತಿಂಗಳು ದಿನಚರ್ರಿ ಬಿಲ್ವಪತ್ರೆ ಸಮರ್ಪಣೆಯಂನ್ನು ಮಾಡುವಂತ್ರೆ..." ಅಪ್ಪಣೆ ಮಾಡಲಾಗಿದೆ. ಇಲ್ಲಿ ಶಿವಾಲಯಗಳಿಗೇ ಒತ್ತು ಬಿದ್ದಿದೆ. ಶಿವರಾತ್ರಿಯ ದಿನ 'ಹಗಲು ನಾಲ್ಕು ಜಾವ ಮತ್ತು ರಾತ್ರಿ ನಾಲ್ಕು ಜಾವ ರುದ್ರಾಭಿಷೇಕ ಮಾಡಿ ಬಿಲ್ವಪತ್ರೆ ಪೂಜೆ ಮಾಡುವಂತೆ' ಒತ್ತಾಯಿಸಲಾಗಿದೆ. ಪ್ರಜಾಜನರ ಧಾರ್ಮಿಕ ನಿಷ್ಠೆಗೆ ಖಚಿತರೂಪುಗೊಡುವ ಆಳುವ ವರ್ಗದ ಸನ್ನಾಹವನ್ನು ಇವು ವಿವರಿಸುತ್ತವೆ. ಬ್ರಿಟಿಷರು ಜನಪ್ರಿಯಗೊಳಿಸುತ್ತಿದ್ದ ಕ್ರಿಶ್ಚಿಯನ್ ಧರ್ಮಕ್ಕೆ ವಿರುದ್ಧವಾಗಿ ಭಾರತದ ತುಂಡರಸರೆಲ್ಲ ತಮ್ಮ ತಮ್ಮ ಮತಗಳಿಗೆ ತೀವ್ರವಾದ ನಿಷ್ಠೆಯನ್ನು ವ್ಯಕ್ತಪಡಿಸುತ್ತಿದ್ದ ಕಾಲವದು. ಪ್ರತಿ ಅಪ್ಪಣೆಯ ಕೊನೆಯಲ್ಲಿ ಬರುವ 'ಶ್ರೀ ವಿ' ಎಂಬ ಅಂಕಿತವು 'ವಿಶ್ವೇಶ್ವರ' ಎಂಬುದಕ್ಕೆ ಸಂಕೇತವಾಗಿದ್ದು ಅದು ಕೊಡಗು ರಾಜರ ಮುದ್ರೆಯೇ ಆಗಿದೆ. ಇದು ಆ ಅರಸರ ಶೈವನಿಷ್ಠೆಗೆ ಉದಾಹರಣೆಯೂ ಹೌದು.

2.4 : ಪದ್ಧತಿಗಳು :

2.4.1 : ಆಹಾರ ಪದ್ಧತಿ : ಜನಪದರ ಆಹಾರ ಪದ್ಧತಿಯ ಬಗೆಗೆ ವಿವರ ನೀಡುವುದು ಹುಕುಂ ನಾಮೆಯ ಉದ್ದೇಶವಲ್ಲ. ಆದರೆ ನಾಮೆಯಲ್ಲಿ ಬಂದಿರುವ

ಕೆಲವು ಉಲ್ಲೇಖಗಳ ಮೇಲಿಂದ ನಾವು ಖಚಿತವಾಗಿ ಕೆಲವು ತೀರ್ಮಾನಗಳನ್ನು ಕೈಗೊಳ್ಳಬಹುದು. ಇಡೀ ನಾಮೆಯಲ್ಲಿ ಆಗಿಂದಾಗ್ಗೆ, ಅಕ್ಕಿ ಮತ್ತು ಭತ್ತದ ಉಲ್ಲೇಖ ಬರುತ್ತದೆ. ಇದರಿಂದ ಈಗಿನಂತೆ ಆಗಲೂ ಸಹಾ ಅಕ್ಕಿಯೇ ಜನರ ಪ್ರಧಾನ ಆಹಾರವಾಗಿತ್ತೆಂದು ಊಹಿಸಬಹುದು.[4] ಆರನೇ ಅಪ್ಪಣೆಯಲ್ಲಿ ಭತ್ತದ ಬದಲಿಗೆ ಅಕ್ಕಿಯನ್ನು ಕೊಳ್ಳುವ ಬಗೆಗೆ ದೀರ್ಘ ವಿವರಗಳಿವೆ.

ತರಕಾರಿಯಾಗಿ ಬದನೆ, ಹಾಗಲಕಾಯಿ, ತೊಂಡೆ, ಬಳ್ಳಿ ಸೌತೆ, ಕುಂಬಳ, ಹಾಲುಸೆರೆ, ಹೀರೆಕಾಯಿ, ಅವರೆಕಾಯಿ, ಬೂದಿಕುಂಬಳ, ಹರಿವೆಗಳನ್ನು ಬಳಸುತ್ತಿದ್ದರು. (26ನೇ ಅಪ್ಪಣೆ) ಬಿಡುವಿನ ಆಹಾರವಾಗಿ ಬಾಳೆಹಣ್ಣನ್ನು ಬಳಸುತ್ತಿದ್ದರು. ನಿಂಬೆಹಣ್ಣನ್ನು ಯಥೇಚ್ಛವಾಗಿ ಬೆಳೆಸಿ ಅದನ್ನು ಉಪ್ಪಿನಕಾಯಿಗೆ ಬಳಸುತ್ತಿದ್ದರು. ಮೆಣಸು, ಪಪ್ಪಾಯಿ, ನುಗ್ಗೆ, ಮತ್ತು ಶುಂಠಿಗಳನ್ನು ಬೆಳೆಸುವಂತೆ ರಾಜ ಜನರನ್ನು ಒತ್ತಾಯಮಾಡುತ್ತಿದ್ದ.

30ನೆಯ ಅಪ್ಪಣೆ ಪ್ರಕಾರ, ದನಕರುಗಳು ಹೇರಳವಾಗಿದ್ದುದರಿಂದ ಜನರು ತುಪ್ಪವನ್ನು ಹೇರಳವಾಗಿ ಬಳಸುತ್ತಿದ್ದರು.

28ನೆಯ ಅಪ್ಪಣೆಯ ಪ್ರಕಾರ, ಕಾಡಲ್ಲಿ ಸಿಗುವ ಜೇನನ್ನು ಸಂಗ್ರಹಿಸಿ ಜನ ತಿನ್ನುತ್ತಿದ್ದರು.

26 ಮತ್ತು 29ನೆಯ ಅಪ್ಪಣೆಯಲ್ಲಿ ವೀಳ್ಯ ಮತ್ತು ಅಡಿಕೆಯ ಬಗೆಗೆ ಉಲ್ಲೇಖವಿದೆ. ಅಂದರೆ ಜನರು ವೀಳ್ಯ ತಿನ್ನುತ್ತಿದ್ದರೆಂದೂ ಊಹಿಸಬಹುದಾಗಿದೆ. 26ನೆಯ ಅಪ್ಪಣೆಯಲ್ಲಿ ಗೆಡ್ಡೆಗೆಣಸುವಿನ ಉಲ್ಲೇಖವಿದ್ದರೂ ಅವುಗಳು ಯಾವ ವಿಧದ್ದೆಂದು ಹೇಳಲು ಆಗದು.

ಇವುಗಳ ಒಟ್ಟು ವಿವರಗಳಲ್ಲಿ ಹೊಸತನವೇನೂ ಇಲ್ಲ.

2.4.2 : ಉಡುಗೆ : ಜನರ ಬಟ್ಟೆ ಬರೆಗಳ ಬಗೆಗೆ ಮಾಹಿತಿ ಲಭ್ಯವಿಲ್ಲ. ಅರಮನೆ ಚಾಕರಿ ಮಾಡುವವನಿಗೆ ಅರಮನೆಯಿಂದ ಉಚಿತವಾಗಿ ಉಡುಗೆಗಳನ್ನು ನೀಡಲಾಗುತ್ತಿತ್ತೆಂದು ಮಾತ್ರ ಊಹಿಸಲು ಅವಕಾಶವಿದೆ. ಅತಿ ಮುಖ್ಯವಾಗಿ ನಮಗೆ ಸಿಗಬೇಕಾಗಿದ್ದ "ದರಬಾರೀ ಡ್ರೆಸ್"ನ ಉಲ್ಲೇಖ ನಾಮೆಯಲ್ಲಿ ಇಲ್ಲದಿರುವುದು ಪ್ರಮುಖವಾದ ಅಂಶವಾಗಿದೆ.

2.4.3 : ತೊಡುಗೆ : ಹತ್ತನೇ ಅಪ್ಪಣೆಯಲ್ಲಿ 'ನಗ' ದ ಉಲ್ಲೇಖವಿದೆ. ಆದರೆ ಅದರ ಸ್ವರೂಪವೇನೆಂದು ತಿಳಿಯದು. 'ನಗ' ಪದವೂ 'ಚಿನ್ನದಿಂದ ಮಾಡಿದ ತೊಡುಗೆ' ಎಂಬರ್ಥವನ್ನೇ ಹೊಂದಿದೆಯಾದರೂ ಅದನ್ನು ದೇಹದ ಯಾವ ಭಾಗದಲ್ಲಿ ಧರಿಸುತ್ತಿದ್ದರೆನ್ನಲು ಆಧಾರಗಳಿಲ್ಲ. ಆಡುನುಡಿಯಲ್ಲಿ ಹೆಚ್ಚಾಗಿ 'ನಗ' ಎಂದರೆ 'ಕೊರಳಿಗೆ ಹಾಕುವ ಸರ' ಎಂದರ್ಥವಿದೆ. ಕಿಟ್ಟೆಲ್ ಕೋಶದಲ್ಲಿ ಇದಕ್ಕೆ "An ornament, an article" ಎಂಬ ಅರ್ಥವನ್ನಷ್ಟೇ ನೀಡಲಾಗಿದೆ (ಕಿಟ್ಟೆಲ್, 1975, 879). ಇದು ಬಿಟ್ಟರೆ ನಾಮೆಯಲ್ಲಿ ಬೇರಾವ ಉಲ್ಲೇಖವೂ ಇಲ್ಲ.

2.4.4 : ವಸತಿ : ಬಹುಸಂಖ್ಯಾಕ ಪ್ರಜಾಜನರ ವಸತಿ ವ್ಯವಸ್ಥೆಯ ಬಗೆಗೆ ನಾಮೆಯಲ್ಲಿ ಚಕಾರವಿಲ್ಲದಿದ್ದರೂ, ಅರಸ ವಾಸಮಾಡುವ ಅರಮನೆಯ ರಕ್ಷಣೆ ಮತ್ತು ಸೇವೆಯ ಬಗೆಗೆ ಕೆಲವು ವಿವರಗಳು ಸಿಗುತ್ತವೆ. 19 ನೆಯ ಅಪ್ಪಣೆಯಲ್ಲಿ, ರಾಜಕಾರ್ಯ ಉದ್ದೇಶದಿಂದ ಅರಮನೆಗೆ ಜನರನ್ನು ಬರಹೇಳಿದರೆ 'ಹಗಲು ರಾತ್ರಿ ಭೇದವಿಲ್ಲದೆ ಕೇಳಿ ಕೇಳಿದ ಜನ ಆಯುಧಪಾಣಿಗಳಾಗಿ ಬರಬೇಕೆಂದು' ಆಜ್ಞೆ ಮಾಡ ಲಾಗಿದೆ. ಜನ ಅರಮನೆ ರಕ್ಷಣೆಗೆ ಧಾವಿಸುವಾಗ ಗ್ರಾಮದ ಜನರಿಗೂ, ಗೌಡರುಗಳಿಗೂ, ಇತರ ಸ್ಥಳೀಯ ಮುಖ್ಯಸ್ಥರಿಗೂ ಸುದ್ದಿಯನ್ನು ಮುಟ್ಟಿಸಬೇಕಾಗಿತ್ತು. ಅವರೆಲ್ಲರನ್ನು ಒಳಗೊಂಡು ಅರಮನೆಗೆ ತಲುಪುವ ಕೆಲಸ ಸುದ್ದಿ ಮುಟ್ಟಿದ 'ಅರುಗಳಿಗೆ' ಒಳ ಗಾಗಿಯೇ ನಡೆಯಬೇಕಿತ್ತು. ಅರಮನೆ ರಕ್ಷಣೆಯ ಬಗೆಗೆ ಅರಸನ ಎಚ್ಚರ ಅಷ್ಟೊಂದು ಖಚಿತವೂ ನಿಷ್ಠುರವೂ ಆಗಿತ್ತು.

10 ನೇ ಅಪ್ಪಣೆಯಲ್ಲಿ 'ಮನೆ' ಗಳ ಉಲ್ಲೇಖವಿದ್ದರೂ ಅದರ ಸ್ವರೂಪದ ಬಗ್ಗೆ ಯಾವುದೇ ವಿವರಗಳಿಲ್ಲ.

2.4.4.1 : ಅರಮನೆ ಸೇವೆ : ಅರಮನೆಯಿಂದ ಕಡಿಮೆ ದರದ ಕಂದಾಯ ದಲ್ಲಿ ಭೂಮಿಯನ್ನು ಪಡೆದ ರೈತರು ಅರಮನೆಗೆ ವಿಶೇಷ ಸೇವೆಯನ್ನು ಸಲ್ಲಿಸಬೇಕಾಗು ತ್ತಿತ್ತು. ಅಥವಾ ಇದನ್ನೇ ಬೇರೆ ರೀತಿಯಲ್ಲಿ ಹೇಳುವುದಾದರೆ, ಜನಸೇವೆಯನ್ನು ಉಚಿತವಾಗಿ ಬಳಸಿಕೊಳ್ಳುವುದಕ್ಕೋಸ್ಕರ ರಾಜನು ಎಷ್ಟೋ ಬಾರಿ ತೆರಿಗೆಯಲ್ಲಿ ಅಲ್ಪಮಟ್ಟಿನ ಉದಾರತೆಯನ್ನೋ ವಿನಾಯತಿಯನ್ನೋ ತೋರುತ್ತಿದ್ದನು. ಇಂಥ ಸಂದರ್ಭದಲ್ಲಿ ಜನರು ಸಲ್ಲಿಸಬೇಕಾದ 'ಅರಮನೆಸೇವೆ' ಈ ಕೆಳಗಿನಂತದ್ದು :

(ಅ) ರಾಜನು ಅಪೇಕ್ಷಿಸಿಪಟ್ಟಾಗ ಎದುರಾಡದೆ ಅವನೊಂದಿಗೆ ಬೇಟೆಗೆ ಹೋಗುವುದು.

(ಆ) ಅರಮನೆಯ ಪಹರೆ, ಉಕ್ಕಡ ಮತ್ತು ಗಡಿಗಳಲ್ಲಿ ಸದಾ ಕಾವಲು ಕಾಯುವುದು. ಅಗತ್ಯಬಿದ್ದರೆ ವೈರಿಗಳೊಡನೆ ಕಾದಾಡಿ ಪ್ರಾಣಾರ್ಪ ಣೆಗೂ ಸಿದ್ಧವಾಗಿರಬೇಕಿತ್ತು. ಹಾಗೆ ಸತ್ತವನನ್ನು 'ಮಹಾವೀರ' ಎಂದು ಹೊಗಳಲಾಗುತ್ತಿತ್ತು.

(ಇ) ಯುದ್ಧದ ಸಮಯದಲ್ಲಿ ಅರಮನೆಯನ್ನು ರಕ್ಷಿಸುವುದು.

(ಈ) ಉಂಬಳಿಯಾಗಿ ಜಮೀನು ದೊರೆತ ರೈತರ ಮನೆಯಲ್ಲಿ ಕನಿಷ್ಠ ಮೂರು ಜನ ದುಡಿಯುವವರಿದ್ದರೆ, ಅವರಲ್ಲಿ ಒಬ್ಬಾತ ತಿಂಗಳೊಂದಕ್ಕೆ 15 ದಿನ ಅರಮನೆಯಲ್ಲಿ ಉಚಿತವಾಗಿ ಕೆಲಸ ಮಾಡಬೇಕು.

(ಉ) ರೈತರು ಅರಮನೆಗೆ ಬಿಟ್ಟಿಸೇವೆ ಮಾಡುವಾಗ, ರೈತರ ಭೂ ಒಡೆತನ ವನ್ನೇ ಮಾನದಂಡವಾಗಿ ಬಳಸಿಕೊಳ್ಳಲಾಗುತ್ತಿತ್ತು. ಎಂಟನೆಯ ಅಪ್ಪಣೆಯ ಪ್ರಕಾರ 'ಒಂದು ಅರ್ರುಕಟ್ಟುವವನು ಒಂದು ದಿನ ಬಿಟ್ಟಿ

ಚಾಕ್ರಿ ಮಾಡಬೇಕು.' ಇಲ್ಲಿ 'ಅರ್ರುಕಟ್ಟುವುದು' ಸಾಗುವಳಿ ಕ್ರಮವನ್ನೇ ಸೂಚಿಸುತ್ತದೆ. 30ನೇ ಅಪ್ಪಣೆಯಲ್ಲಿ ಹೇಳಿರುವಂತೆ '100 ಬಟ್ಟಿ ಬತ್ತ ಸಾಗುವಳಿ ಮಾಡುವವನು ಒಂದು ಅರ್ರು ಕಟ್ಟುವವನಾಗುತ್ತಾನೆ. ಒಂದು ಬಟ್ಟಿ ಬತ್ತ ಎಂದರೆ ಆಧುನಿಕಾರ್ಥದಲ್ಲಿ ಎರಡು ಮುಡಿ ಬತ್ತವಾಗುತ್ತದೆ. ಹಾಗಾಗಿ ಒಟ್ಟಿನಲ್ಲಿ ಸುಮಾರು 200 ಮುಡಿ ಬತ್ತ ಬೆಳೆಸುವಾತನು ಒಂದು 'ಅರ್ರುಕಟ್ಟುವವನು' ಎನ್ನಿಸಿಕೊಳ್ಳುತ್ತಾನೆ.[5] ಒಂದು ಅರ್ರುವಿಗೆ ಒಬ್ಬರಂತೆ ಅರಮನೆಗೆ ಬಿಟ್ಟಿಸೇವೆ ಸಲ್ಲಿಸಬೇಕಾಗಿತ್ತು. ಜಮೀನ್ದಾರರೂ ಅರಸನ ಹಿಡಿತದಿಂದ ಪಾರಾಗುವಂತಿರಲಿಲ್ಲ.

(ಊ) ಅರಮನೆಗೆ ನೇರವಾಗಿ ಸಂಬಂಧಿಸಿದ ಭೂಮಿ ಕೃಷಿ ಮಾಡುವಾಗ ರೈತರು ತಮ್ಮ ಕೆಲಸವನ್ನು ಬಿಟ್ಟು 'ಅರಮನೆ ಕೃಷಿ ಸೇವೆ' ಮಾಡಬೇಕಿತ್ತು. 21ನೇ ಅಪ್ಪಣೆಯಲ್ಲಿ ಹೇಳಲಾದಂತೆ, 200 ಬಟ್ಟಿ ಬತ್ತ ಬೇಸಾಯ ಮಾಡುವ ರೈತನು ಅರಮನೆ ಕೃಷಿಗೆ ಒಂದು ಗಂಡಾಳು ಮತ್ತು ಒಂದು ಹೆಣ್ಣಾಳುವನ್ನು ಉಚಿತವಾಗಿ ಕೆಲಸಕ್ಕೆ ಕಳಿಸಬೇಕಾಗಿತ್ತು. ಭೂಮಿಯ ಅಳತೆಯ ಮಾಪನದಿಂದ ಹೇಳುವುದಾದರೆ ಇದು ಸುಮಾರು ಮೂರು ಎಕರೆ ಜಮೀನಿನ ವ್ಯಾಪ್ತಿಯನ್ನು ಹೊಂದಿದೆ.

ಇದರಲ್ಲಿ ಮತ್ತೆ ಹೆಣ್ಣಾಳುಗಳು ಮೂರು ದಿನದ ಮೊದಲೇ ಅರಮನೆಯ ಕೃಷಿ ಕೆಲಸಕ್ಕೆ ಒದಗಬೇಕು. ಇದಕ್ಕೆ ಯಾವುದೇ ರೀತಿಯ ಸಂಬಳ ಅವರಿಗೆ ದೊರಕುತ್ತಿರಲಿಲ್ಲ. ಆದರೆ ಈ 'ಉಚಿತ ಸೇವೆ' ಯಿಂದ ತಪ್ಪಿಸಿಕೊಳ್ಳುವಂತೆಯೂ ಇರಲಿಲ್ಲ. ಅದನ್ನು ಲಿಂಗರಾಜನು ಕಡ್ಡಾಯವಾಗಿ ಮಾಡಿದ್ದನು. ಕಾನೂನು ಪ್ರಕಾರ ಇದನ್ನು ಮೊದಲು ಆಳವಡಿಸಿ, ಅನಂತರ ಅದಕ್ಕೆ 'ಪ್ರಜೆಗಳ ಸೇವೆ' ಎಂಬ ಹೆಸರನ್ನು ಅಂಟಿಸಲಾಗುತ್ತಿತ್ತು. ಅಗತ್ಯ ಬಿದ್ದರೆ ಎಲೆ ಅಡಿಕೆ ಮತ್ತು ತಲೆಗೆ ಎಣ್ಣೆಯನ್ನು ಒದಗಿಸಲಾಗುತ್ತಿತ್ತು. ಬಸುರಿಯರು, ಬಾಣಂತಿಯರು ಮತ್ತು ರೋಗಗ್ರಸ್ಥರು ಈ ರೀತಿಯ 'ಉಚಿತ ಸೇವೆ' ಯೆಂಬ ಶಿಕ್ಷೆಗೆ ಅರ್ಹರಾಗಿರಲಿಲ್ಲ. ಪ್ರಭುತ್ವ ತನ್ನ ಸ್ವಂತಕ್ಕಾಗಿ 'ದುಡಿಮೆ' ಯನ್ನು 'ಸೇವೆ' ಯನ್ನಾಗಿ ಪರಿವರ್ತಿಸಿಕೊಂಡು, ಬೆಳೆಯುವ ರೀತಿಗೆ ಇದೊಂದು ಮಾದರಿ ಉದಾಹರಣೆ.

47 ನೆಯ ಅಪ್ಪಣೆಯಲ್ಲಿ ಅರಮನೆಯ ರಕ್ಷಣೆಗೆ ಕಾವಲು ನಿಲ್ಲಬೇಕಾದ ಜನಗಳ ಬಗ್ಗೆ ವಿವರಗಳಿವೆ. ಅರಮನೆಯ ಬಾಗಿಲಿನಿಂದ ಬಲಕ್ಕೆ ಮತ್ತು ಎಡಕ್ಕೆ ಒಂದು ಹರದಾರಿ ದೂರದಲ್ಲಿ ಇಬ್ಬರು ಸದಾ ನಿಂತಿರಬೇಕಾಗುತ್ತಿತ್ತು. ಯಾರಾದರೂ ಕಳ್ಳರು, ತುಂಟರು, ಅಥವಾ ಅನುಮಾನಾಸ್ಪದ ವ್ಯಕ್ತಿಗಳು ಸುಳಿದಾಡಿದರೆ ಅವರನ್ನು ತಕ್ಷಣ ಅರಮನೆಗೆ ಒಪ್ಪಿಸಬೇಕಾಗಿತ್ತು. ಇವರಿಗೆ ಯಾವ ವಿಧದ ಭತ್ತ್ಯೆ ದೊರಕುತ್ತಿತ್ತೆಂದು ತಿಳಿಯದು.

2.5 : ಸಾಮಾಜಿಕ ಸಮಾರಂಭಗಳು ಮತ್ತು ಆಚರಣೆಗಳು :

ಹುಟ್ಟು, ಬಾಲ್ಯ, ಮದುವೆ, ಸಾವು ಮೊದಲಾದ ವಿಷಯಗಳ ಬಗೆಗೆ ಮತ್ತು ಅವುಗಳಿಗೆ ಸಂಬಂಧಿಸಿದ ಆಚರಣೆಗಳ ಬಗ್ಗೆ ನಾಮೆಯಲ್ಲಿ ಅಲ್ಪಸ್ವಲ್ಪ ಉಲ್ಲೇಖಗಳಿವೆ. ಅಂಥವುಗಳಲ್ಲಿ ಕೆಲವು ನೇರ ಉಲ್ಲೇಖಗಳು, ಇನ್ನು ಕೆಲವು ಪರೋಕ್ಷ ಉಲ್ಲೇಖಗಳು. ಇವೆಲ್ಲವೂ ರಾಜಸಂಸ್ಥಾನದಲ್ಲಿ ಬಹು ಸಂಖ್ಯಾತರಾಗಿದ್ದ ಕೊಡವ ಜಾತಿಯ ಜನರನ್ನೇ ಕುರಿತಾಗಿವೆ.

23ನೆಯ ಅಪ್ಪಣೆಯ ಪ್ರಕಾರ 'ಕೊಡವ ಜಾತಿಯಲ್ಲಿ ಮದುವೆಯಾಗುವಾಗ ಹೆಣ್ಣು ಇನ್ನೂ ಕನ್ಯೆಯಾಗಿದ್ದರೆ ಮಾತ್ರ ಜಾತಿಕಟ್ಟಳೆ ಮೇರೆಗೆ ಮದುವೆಯಾಗಬಹುದು: ಹೆಣ್ಣು 'ಬಾಳು ತಪ್ಪಿದವಳಾಗಿದ್ದರೆ' ಶೂದ್ರಜಾತಿಯಲ್ಲಿ ನಡೆಯುವಂತೆ 'ಕೂಡಿಸಿಕೊಳ್ಳುವುದು'. ಇಲ್ಲಿ ಕೊಡವ ಜನಾಂಗವನ್ನು ಶೂದ್ರರಿಂದ ಬೇರೆಯಾಗಿಯೇ ಪರಿಗಣಿಸಲಾಗಿದೆ. ಜೊತೆಗೆ ಶೂದ್ರರಲ್ಲಿ 'ಕೂಡಿಕೆ' ಇರುವುದನ್ನೂ ಹೇಳಲಾಗಿದೆ. ಹರಿಜನರಲ್ಲಿ, ಗೌಡರಲ್ಲಿ, ಮಲೆಕುಡಿಯರಲ್ಲಿ ಗಂಡ ಸತ್ತಮೇಲೆ ಹೆಣ್ಣು ವಿಧವೆಯಾಗಿಯೇ ಉಳಿಯಬೇಕಿಲ್ಲ. ಆಕೆ ಬೇರೊಬ್ಬ ಗಂಡಿನೊಂದಿಗೆ 'ಕೂಡಿಕೆ' ಮಾಡಿಕೊಂಡು ಬದುಕಬಹುದು. ಇಂಥ ಕೂಡಿಕೆ ಮಾಡಿಕೊಂಡಾಗ ಅಲ್ಲಿ ಶಾಸ್ತ್ರೋಕ್ತವಾದ ಧಾರಾಕಾರ್ಯಕ್ರಮ ಇರುವುದಿಲ್ಲ. ಬದಲಾಗಿ ಊರಿನ ಹತ್ತಾರು ಜನರೆದುರು ಗಂಡು–ಹೆಣ್ಣು ಇಬ್ಬರೂ ಪರಸ್ಪರ ಕೈ ಹಿಡಿಯುತ್ತಾರೆ ಅಷ್ಟೆ. ಇದಕ್ಕಾಗಿ ಈ ಕ್ರಮವನ್ನು 'ಕೈ ಹಿಡಿಸುವುದು' ಎಂದೂ ಕರೆಯುತ್ತಾರೆ. ಶೂದ್ರರಲ್ಲಿ ಹೆಣ್ಣಿಗೆ ಇರುವ ಮಹತ್ವದ ಸ್ಥಾನವನ್ನೂ ಇದು ವಿವರಿಸಿ ಹೇಳಬಲ್ಲುದು. ನಾಮೆಯಲ್ಲಿ ಇದನ್ನು ನಡತೆಗೆಟ್ಟ ಕೊಡವ ಜಾತಿಯ ಹೆಣ್ಣಿಗೂ ಅನ್ವಯಿಸಲಾಗಿದೆ.

ನಾಮೆ ಸಾಂಸ್ಕೃತಿಕವಾಗಿ ನಮಗೆ ಕೊಡುವ ಅತ್ಯಂತ ಮಹತ್ವದ ವಿಚಾರ ಹಚ್ಚಡಕೆ ಹೆಣ್ಣಿನ ಕುರಿತಾಗಿದೆ. ಈ ಕುರಿತು 23ನೇ ಅಪ್ಪಣೆಯಲ್ಲಿ ಬಂದಿರುವ ವಿವರಗಳು ಇಂತಿವೆ–"ವಬ್ಬ ಗ್ರಹಸ್ಥನ ಮನೆಗೆ ಹೆಣ್ಣು ಹಚ್ಚಡಕೆ ಯಂಬುದಾಗಿ ಸೂಳೆ ಮಡಗಿದ ಹಾಗೆ ಮಡಗಿಕೊಂಡು ಅದರ ಹೊಟ್ಟೆಯಲ್ಲಿ ಮಕ್ಕಳು ಹುಟ್ಟಿದರೆ ಅರಮನೆ ಅಸ್ತಾನಕ್ಕೆ ಬರುವುದಕ್ಕೆ ಅಯೋಗ್ಯ ಅದರ ಮೋರೆ ನೋಡಬಾರದು ಅಂತಾದ್ದು ಇಹಪರಕ್ಕೆ ಅಯೋಗ್ಯವಿದೆ ಗ್ರಹಸ್ತಾರು ಯಿ ಜನರಲ್ಲಿ ಕೂಡಿಕೊಳ್ಳಬಾರದು ಯಿದನರಿತು ಯಿನ್ನುಮುಂದೆ ಹಚ್ಚಡಕೆಯಂತ್ತಾ ಹೆಣ್ಣನ್ನು ವಬ್ಬ ಕೊಡಬಾರದು, ವಬ್ಬ ತರಬಾರದು;" ಇಲ್ಲಿ ಹಚ್ಚಡಿಕೆ ಪದ್ಧತಿಯನ್ನು ಕಟ್ಟುನಿಟ್ಟಾಗಿ ನಿಷೇಧಿಸಲಾಗಿದೆ.

'ಹಚ್ಚಡಕೆ' ಪದದಲ್ಲಿ ಇರುವ 'ಹಚ್ಚಡ'ಕ್ಕೆ ಕೊಡವ ಭಾಷೆಯಲ್ಲಿ ಮತ್ತು ಗೌಡ ಕನ್ನಡದಲ್ಲಿ 'ಹೆಂಗಸರು ಉಡುವ ಸೀರೆ' ಎಂಬ ಅರ್ಥವಿದೆ. ಕಿಟ್ಟೆಲ್ ನಿಘಂಟುವಿನಲ್ಲಿ 'ಪಚ್ಚಡ, A Stout cotton cloth' ಎಂಬ ಅರ್ಥವಿದೆ (ಕಿಟ್ಟೆಲ್, 1975; 1698). ಕೊಡವರ ಆಡುನುಡಿಯಲ್ಲಿರುವ 'ಪಚ್ಚಡೆಪೊಣ್ಣು' ಎಂಬ

ಪ್ರಯೋಗಕ್ಕೆ " ಸೀರೆ ತೆಗೆದುಕೊಂಡ ಹೆಣ್ಣು' ಎಂಬ ಅರ್ಥವಿದೆ. ಹುಕುಂ ನಾಮೆ ಯಲ್ಲಿ ಪ್ರಯೋಗವಾಗಿರುವ 'ಹೆಣ್ಣುಹಚ್ಚಡಕೆ' ಎಂಬುದು ಕೂಡಾ 'ಪಚ್ಚಡೆ ಪೊಣ್ಣು' ಶಬ್ದದ ಅರ್ಥವನ್ನೇ ಹೊಂದಿದೆ. ಇದು ಆ ಕಾಲದಲ್ಲಿ ಜನಪ್ರಿಯವಾಗಿದ್ದ ಸಾಮಾಜಿಕ ಪದ್ಧತಿಯೊಂದನ್ನು ಹೇಳುತ್ತದೆ.

ಜಮೀನ್ದಾರೀ ಪದ್ಧತಿಯಲ್ಲಿ ಜಮೀನ್ದಾರರು ಮದುವೆಯಾದ ಹೆಣ್ಣನ್ನಲ್ಲದೆ ಇತರ ಹೆಂಗಸರನ್ನು ತಮ್ಮ ಸುಖಕ್ಕಾಗಿ ಇಟ್ಟುಕೊಳ್ಳುತ್ತಿದ್ದರು. ರಾಜರುಗಳ ಮಟ್ಟಿಗೆ ಇದು ತೀರ ಸಾಮಾನ್ಯವಾದ ಅಂಶವಾಗಿತ್ತು. ರಾಜನ ಕೈ ಕೆಳಗಿರುವ ಕೆಲವು ಅಧಿಕಾರಿಗಳೂ ರಾಜನ 'ಆದರ್ಶ' ವನ್ನು ಪಾಲಿಸುತ್ತಿದ್ದರು. ಹಾಗೆ ಇಟ್ಟುಕೊಳ್ಳುವ ಹೆಂಗುಸರು ಸಾಮಾಜಿಕವಾಗಿ ಕೆಳಜಾತಿಗೆ ಸೇರಿದವರಾಗಿದ್ದರು. ಮೇಲ್ಜಾತಿಯವರು ಕೆಳಜಾತಿಯ ಹೆಂಗುಸನ್ನು ಮದುವೆಯಾಗದೆ, ಲೈಂಗಿಕ ಸುಖಕ್ಕಾಗಿ ಮಾತ್ರ ಇಟ್ಟುಕೊಳ್ಳುವುದನ್ನು ಜನರೂ ತಾತ್ವಿಕವಾಗಿ ಒಪ್ಪಿಕೊಂಡಿದ್ದರು. ಡಿ. ಎನ್. ಕೃಷ್ಣಯ್ಯ ಅವರು 'ಹೀಗೆ ಕೊಡಗಿನಲ್ಲಿ ಭೂ ಮಾಲೀಕರ ಸುಖಕ್ಕೆ ಅರುವ ಜಾತಿಯ ಹೆಂಗುಸರು' ಒದಗುತ್ತಿದ್ದರು ಎಂದು ಹೇಳಿದ್ದಾರೆ (ಕೃಷ್ಣಯ್ಯ: 1974; 404). ಕ್ಷೇತ್ರ ಕಾರ್ಯದಲ್ಲಿ ನನಗೆ ಸಿಕ್ಕಿದ ಮಾಹಿತಿಗಳ ಪ್ರಕಾರ ಕುರುಬ ಹೆಂಗುಸರು ಮತ್ತು ಮಲೆ ಕುಡಿಯ ಹೆಂಗುಸರೂ ಜಮೀನ್ದಾರರ ಸುಖಕ್ಕೆ ಒದಗಬೇಕಿತ್ತು.[6]

ಕೊಡಗಿನ ಭೂ ಮಾಲೀಕರ ತೋಟಗಳಲ್ಲಿ ಕೆಳಜಾತಿಯ ಹೆಂಗುಸರು ಜೀತಕ್ಕೆ ದುಡಿಯುತ್ತಿದ್ದರು. ಇಂಥವರಲ್ಲಿ ಚಲುವೆಯರಾದ ಕೆಲವು ಹೆಂಗುಸರಿಗೆ ತೋಟದ ಯಜಮಾನರು ನೂಲಿನ ಸೀರೆಯನ್ನು ಉಚಿತವಾಗಿ ಕೊಡುತ್ತಿದ್ದರು. ಆ ಸೀರೆಯನ್ನು ತೆಗೆದುಕೊಂಡ ಹೆಣ್ಣು 'ಪಚ್ಚಡ ಪೊಣ್ಣು' ಎಂದು ಕರೆಸಿಕೊಳ್ಳುತ್ತಿದ್ದಳು. ಈಕೆ ಮುಂದೆ ಯಾವ ವಿಧಿಯೂ ಇಲ್ಲದೆ ಸೀರೆಕೊಟ್ಟವನ ಲೈಂಗಿಕ ಸುಖಕ್ಕೆ ಒದಗಬೇಕಾಗಿತ್ತು. ಕೇವಲ ಒಂದು ನೂಲಿನ ಸೀರೆಕೊಟ್ಟು ಭೂ ಮಾಲೀಕರು ಬಯಸಿದ ಹೆಣ್ಣಿನ ಸಂಗ ಪಡೆಯಬಹುದಾಗಿತ್ತು. ಆ ಕಾಲದ ಸಾಮಾಜಿಕ ರಚನೆಯಲ್ಲಿ ಯಾವ ಹೆಣ್ಣಾದರೂ ಇದನ್ನು ಅನಿವಾರ್ಯವಾಗಿ ಒಪ್ಪಿಕೊಳ್ಳಬೇಕಾಗಿತ್ತು. ಪ್ರತಿಭಟನೆಗೆ ಬೇಕಾದ ಆರ್ಥಿಕ ಚಿಂತನಾಕ್ರಮವೊಂದು ಶ್ರಮಿಕವರ್ಗದಲ್ಲಿ ಇನ್ನೂ ರೂಪುಗೊಂಡಿರಲಿಲ್ಲ.

ಸಾಮಾಜಿಕವಾಗಿ 'ಪಚ್ಚಡ ಪೊಣ್ಣು'ವಿಗೆ ಯಾವುದೇ ವಿಧದ ರಕ್ಷಣೆ ಇರಲಿಲ್ಲ. ಸೀರೆ ಕೊಟ್ಟಾತನು ಆಕೆಯನ್ನು ಬೇಕಾದಾಗ ಬಯಸಿ ಬೇಡವಾದಾಗ ಬಿಟ್ಟುಬಿಡಬಹುದಾಗಿತ್ತು. ಹಾಗೆ ಬಿಟ್ಟಾಗ ಆ ಹೆಂಗಸು ತನ್ನ ಮಕ್ಕಳೊಂದಿಗೆ ಅನಾಥೆಯಾಗುತ್ತಿದ್ದಳು. ಜೀವನಾಧಾರವಿಲ್ಲದ ಹೆಂಗುಸು ಮತ್ತು ಮಕ್ಕಳು ಅಲ್ಲಿ ಇಲ್ಲಿ ಸುತ್ತಾಡಿ ಹೊಟ್ಟೆ ಹೊರೆದುಕೊಳ್ಳಬೇಕಾಗಿತ್ತು. ರಾಜನ ದೃಷ್ಟಿಯಿಂದ ಇವರೆಲ್ಲರೂ ರಾಜ್ಯವ್ಯವಸ್ಥೆಗೆ ಬಾಧಕರೇ ಆಗಿರುತ್ತಿದ್ದರು. ಇದನ್ನು ರಾಜನು ಚೆನ್ನಾಗಿ ಅರ್ಥ ಮಾಡಿಕೊಂಡಿದ್ದ. 'ಹೆಣ್ಣು ಹಚ್ಚಡಿಕೆ'ಯ ಹೆಸರಿನಲ್ಲಿ ಬಹಿರಂಗವಾಗಿ ನಡೆಯುವ

ಸೂಳೆಗಾರಿಕೆಯನ್ನು ನಿಲ್ಲಿಸಲು ರಾಜನು ಯೋಚನೆ ಮಾಡಿದ್ದಾನೆ. ಅಪ್ಪಣೆಯಲ್ಲಿ 'ಸೂಳೆ ಮಡರಿದ ಹಾಗೆ' ಎಂಬ ಪ್ರಯೋಗವಿರುವುದನ್ನು ಗಮನಿಸಿದರೆ, ರಾಜನು ಇದರ ಬಗ್ಗೆ ತೀರಾ ಜುಗುಪ್ಸೆ ಹೊಂದಿದ್ದ ಎಂದು ಹೇಳಬಹುದು. ಮದುವೆಯೂದವರಿಗೂ ಬಹಿರಂಗ ವ್ಯಭಿಚಾರ ನಡೆಸಲು ಅವಕಾಶ ನೀಡುವ ಈ ಸಂಪ್ರದಾಯವನ್ನು ರಾಜನು ನಿಷೇಧಿಸಿದ್ದಲ್ಲದೆ ಅಲ್ಲಿ ಹುಟ್ಟುವ ಮಕ್ಕಳು ರಾಜಾಸ್ಥಾನವನ್ನು ಪ್ರವೇಶಿಸದಂತೆ ಕಟ್ಟಪ್ಪಣೆಮಾಡಿದ್ದಾನೆ. 1811ರ ವರೆಗೆ ಪ್ರಚಲಿತವಾಗಿದ್ದ ಈ ಸಂಪ್ರದಾಯ ಈ ನಾಮೆಯ ಅನಂತರ ನಿಧಾನವಾಗಿ ಕಡಿಮೆಯಾಗಿರುವಂತಿದೆ.[7]

2.6: ಕೌಟುಂಬಿಕ ವಿವರಗಳು

ಕುಟುಂಬದ ಆಸ್ತಿಯ ಉತ್ತರಾಧಿಕಾರದ ಬಗ್ಗೆ ನಾಮೆಯಲ್ಲಿ ಕೆಲವು ಮಾಹಿತಿಗಳಿವೆಯೇ ವಿನಾ ಕೌಟುಂಬಿಕ ರಕ್ತಸಂಬಂಧಿಗಳ ಬಗೆಗೆ ಇಲ್ಲ. 39ನೆಯ ಅಪ್ಪಣೆಯಲ್ಲಿ ಇಂಥ ವಿವರಗಳಿವೆ.

ಆಸ್ತಿ ಹಕ್ಕನ್ನು ಅನುಭವಿಸುತ್ತಿರುವ ಯಾವನಾದರೂ ರೈತನು ಆಕಸ್ಮಿಕವಾಗಿ ಮೃತನಾದರೆ, ಮೃತನ ಆಸ್ತಿ ಯಾರಿಗೆ ಸೇರಬೇಕೆಂಬ ಬಗ್ಗೆ ನಾಮೆಯಲ್ಲಿ ಸ್ಪಷ್ಟವಾದ ವಿವರಗಳಿವೆ. ಮೃತನ ಆಸ್ತಿಯನ್ನು ತಕ್ಷಣ ನೋಡಿಕೊಳ್ಳಬೇಕಾದವರು ಮೃತನ ಅಣ್ಣತಮ್ಮಂದಿರು. ಈ ಮೃತನಿಗೆ ಗಂಡುಮಕ್ಕಳಿದ್ದು ಅವರು ಅಪ್ರಾಪ್ತ ವಯಸ್ಕರಾಗಿದ್ದರೆ, ದಾಯಾದಿಗಳು ಆ ಗಂಡುಮಕ್ಕಳು ಪ್ರಬುದ್ಧರಾಗುವವರೆಗೆ ಆಸ್ತಿಯನ್ನು ನೋಡಿಕೊಳ್ಳಬೇಕು. ಗಂಡು ಸಂತತಿ ಇಲ್ಲದೆ ಹೆಣ್ಣುಮಕ್ಕಳು ಮಾತ್ರ ಇದ್ದಲ್ಲಿ ಸಹಾ ಇದೇ ಕ್ರಮವನ್ನು ಅನುಸರಿಸಲಾಗುತ್ತಿತ್ತು. ಗಂಡು–ಹೆಣ್ಣೆಂಬ ಭೇದ ಇಲ್ಲಿ ಇಲ್ಲದೇ ಇರುವಲ್ಲಿ ಹೆಣ್ಣಿಗಿರುವ ಆಸ್ತಿಹಕ್ಕನ್ನು ಕೂಡಾ ಗಮನಿಸಬಹುದು.

ಮೃತನಿಗೆ ಆಪ್ತೇಷ್ಟರು ಯಾರೂ ಇರದಿದ್ದಲ್ಲಿ ಆತನ ಮಕ್ಕಳ ರಕ್ಷಣೆಯ ಭಾರವನ್ನು ಊರಿನ ಗೌಡ ನೋಡಿಕೊಳ್ಳಬೇಕು. ಇಲ್ಲಿ 'ಗೌಡ' ಎಂದರೆ 'ಊರಿನ ಮುಖ್ಯಸ್ಥ' ಎಂದೇ ಅರ್ಥ; ಅದು ಸ್ಥಾನ ಸೂಚಕವೇ ವಿನಾ ಜಾತಿಸೂಚಕವಲ್ಲ.[8] ನಾಮೆಯಲ್ಲಿ ಉಲ್ಲೇಖಿಸಿದ ಪ್ರಕಾರ 'ಮಕ್ಕಳು ಮರಿಯಿದ್ದವರ ಆಸ್ತಿಯನ್ನು ಯಾವ ಕಾರಣಕ್ಕೂ ಅರಮನೆಯ ಚರಾದಾಯಕ್ಕೆ ದಾಖಲು ಮಾಡಕೂಡದು'

ಎಷ್ಟೋ ಬಾರಿ ಬರಿಯ ಅಪ್ಪಣೆಗಳು ರಾಜನ ಉದ್ದೇಶವನ್ನು ಸಾಧಿಸಲಾರವು. ಅದಕ್ಕೆ ಕ್ರಿಯಾಶೀಲ ಅಧಿಕಾರಿಗಳ ಅಗತ್ಯವಿದೆ. ಅದಕ್ಕಾಗಿ ರಾಜನು ಮೃತನಾದ ವ್ಯಕ್ತಿಯ ಆಸ್ತಿ ವಿವರಗಳನ್ನು ಶ್ಯಾನುಭೋಗನು ದಾಖಲು ಮಾಡಿಕೊಳ್ಳಬೇಕೆಂದು ಸೂಚಿಸಿದ್ದಾನೆ. ಮೃತನ ಮಕ್ಕಳು ಪ್ರಾಪ್ತ ವಯಸ್ಕರಾಗುವವರೆಗೆ ಆ ಲೆಕ್ಕವನ್ನು ಶ್ಯಾನುಭೋಗ ಜತನದಿಂದ ಕಾಯ್ದಿಟ್ಟುಕೊಂಡು ಅನಂತರ ಮೃತನ ಮಕ್ಕಳ ಕೈಗೆ ಒಪ್ಪಿಸಬೇಕಾಗಿತ್ತು. ಇಂಥ ಕಡೆಗಳಲ್ಲಿ ಅರಮನೆಯು ಜನರ ಕಷ್ಟಗಳಿಗೆ ಒದಗುತ್ತಿರುವುದು ಗಮನಾರ್ಹ.

42ನೇ ಅಪ್ಪಣೆಯಲ್ಲಿ ಕೊಡಗಿನ ಜನರ ಆತಿಥ್ಯದ ಬಗೆಗೆ ವಿವರಗಳಿವೆ. ಊಟದ ಹೊತ್ತಿಗೆ ಊರಿಗಾಗಲೀ ಮನೆಗಾಗಲೀ ಬಂದ ಅತಿಥಿಗಳಿಗೆ ಒಂದು ಹೊತ್ತಿನ ಅನ್ನವನ್ನು ನೀಡಲೇಬೇಕೆಂದು ಅರಸನು ಅಪ್ಪಣೆ ಮಾಡಿದ್ದಾನೆ. 48ನೇ ಅಪ್ಪಣೆಯಲ್ಲಿ ಇಂಥ ಸತ್ಕಾರದ ಬಗೆಗೆ ಇನ್ನಷ್ಟು ವಿವರಗಳಿವೆ. ಇಂದಿಗೂ ಕೊಡಗಿನ ಜನರು ಆತಿಥ್ಯದಲ್ಲಿ ನಿಸ್ಸೀಮರಾಗಿರುವುದನ್ನು ನಾವು ಕಾಣಬಹುದು. ಆಳರಸರ ಕಾಲದಲ್ಲಿಯೇ ಇದ್ದ ಸಂಪ್ರದಾಯವದು.

2.7: ಆಡಳಿತ

ಆಡಳಿತ ಬಗೆಗಳ ವಿವರಗಳು ನಾಮೆಯ ಮುಖ್ಯಭಾಗವನ್ನು ಆಕ್ರಮಿಸಿಕೊಂಡಿವೆ. ಇದು ಅತ್ಯಂತ ಸಹಜವಾದುದ್ದು. ಏಕೆಂದರೆ ಹುಕುಂ ನಾಮೆಯ ಉದ್ದೇಶವೇ ಆಡಳಿತ ಯಂತ್ರವನ್ನು ಚುರುಕುಗೊಳಿಸುವುದಾಗಿತ್ತು ಮತ್ತು ಆಡಳಿತಕ್ಕೊಂದು ಖಚಿತ ರೂಪವನ್ನು ಕೊಡುವುದಾಗಿತ್ತು. ಅರಮನೆಯಲ್ಲಿ ಕೆಲಸ ನಿರ್ವಹಿಸುತ್ತಿದ್ದ ದಿವಾನರ ಕಛೇರಿಯಲ್ಲಿ ಬರೆಸಲಾದ ಹುಕುಂನಾಮೆಯನ್ನು ಪಾರುಪತ್ಯಗಾರ, ಶ್ಯಾನುಭೋಗ, ತಕ್ಕ ಮತ್ತು ಗೌಡರಿಗೆ ಕಳುಹಿಸಿಕೊಡಲಾಗಿತ್ತು. ಎಲ್ಲರೂ ಈ ನಾಮೆಯನ್ನು ದಿನಂಪ್ರತಿ ಓದಬೇಕೆಂದು ಅಲ್ಲಿ ಸೂಚಿಸಲಾಗಿದೆ. ಪಾರುಪತ್ಯಗಾರ, ಶ್ಯಾನುಭೋಗ, ತಕ್ಕ ಮತ್ತು ಗೌಡರು ಆಡಳಿತದ ವಿವಿಧ ಹಂತಗಳನ್ನು ಸೂಚಿಸುತ್ತಾರೆ. ಈ ವ್ಯವಸ್ಥೆಯ ಮೇಲ್ತುದಿಯಲ್ಲಿ ರಾಜನಿದ್ದರೆ ಕೆಳತುದಿಯಲ್ಲಿ ಗೌಡನಿರುತ್ತಾನೆ. ಅದನ್ನು ಹೀಗೆ ತೋರಿಸಬಹುದು :—

ಅರಸು
|
ದಿವಾನ
|
ಅಮೀಲ
|
ಪಾರುಪತ್ಯಗಾರ
|
ತಕ್ಕ
|
ಗೌಡ
|
ಬುದ್ಧಿವಂತ

ಹೀಗೆ ಅಧಿಕಾರ ವಿಕೇಂದ್ರೀಕರಣ ಹೊಂದಿದಂತೆ ಭಾಸವಾದರೂ ಎಲ್ಲ ಅಧಿಕಾರಿಗಳೂ ಅರಸನ ಅನುವರ್ತಿಗಳಾಗಿಯೇ ನಡೆಯಬೇಕಾಗಿತ್ತು.

ಮೇಲೆ ಹೇಳಿದ ಅಧಿಕಾರಿಗಳಲ್ಲಿ ಪಾರುಪತ್ಯಗಾರ ಮತ್ತು ಅಮೀಲರು ಒಟ್ಟು 12 ಗಂಟೆಗಳ ಕಾಲ ಪ್ರತಿದಿನ ಕೆಲಸ ಮಾಡಬೇಕಾಗಿತ್ತು. ಮೊದಲನೆಯ ಅಪ್ಪಣೆಯಲ್ಲಿ ಸೂಚಿಸಲಾದಂತೆ ಅವರು ಕೆಲಸ ಮಾಡಬೇಕಾದ ಸಮಯ ಈ ಕೆಳಗಿನಂತೆ ಇದೆ—

ಬೆಳಗ್ಗೆ 5.30 ರಿಂದ 10 ಗಂಟೆವರೆಗೆ ಒಟ್ಟು 10 ಗಳಿಗೆ ಕೆಲಸ. ಮಧ್ಯಾಹ್ನ ಒಂದು ಗಂಟೆಯಿಂದ ಸಂಜೆ 5.30ರ ವರೆಗೆ ಒಟ್ಟು 10 ಗಳಿಗೆ ಕೆಲಸ. ರಾತ್ರಿ ಆರರಿಂದ ಒಂಬತ್ತರವರೆಗೆ ಒಟ್ಟು 7½ ಗಳಿಗೆ ಕೆಲಸ.

ಹೀಗೆ ಒಟ್ಟು 12 ಗಂಟೆಗಳು ಅಥವಾ 27½ ಗಳಿಗೆ ಕೆಲಸವನ್ನು ಪಾರುಪತ್ಯಗಾರ ಮತ್ತು ಅಮೀಲರು ಮಾಡಬೇಕಾಗಿತ್ತು. ಎಲ್ಲ ಹಣಕಾಸಿನ ವ್ಯವಹಾರಗಳೂ ಇದೇ 27½ ಗಳಿಗೆಯ ಸಮಯದ ಒಳಗೇ ನಡೆಯಬೇಕೆಂದು 22ನೇ ಅಪ್ಪಣೆಯಲ್ಲಿಯೂ ಹೇಳಲಾಗಿದೆ. ತಕ್ಕರು ಮತ್ತು ಗೌಡರು ಗ್ರಾಮಗಳಲ್ಲಿದ್ದು, ಅವರು ಪ್ರಜೆಗಳಿಗೆ ಎಲ್ಲ ಸಮಯದಲ್ಲಿಯೂ ಸಿಗಬೇಕಾಗಿದ್ದುದರಿಂದ ಅವರ ಕೆಲಸಗಳಿಗೆ ಸಮಯದ ಮಿತಿ ಇರಲಿಲ್ಲ. ಈ ಎಲ್ಲ ಅಧಿಕಾರಿಗಳ ಕೆಲಸದ ವ್ಯಾಪ್ತಿಯನ್ನು ಈ ಕೆಳಗಿನಂತೆ ಸಂಗ್ರಹಿಸಬಹುದು—

2.7.1: ದಿವಾನ್: ದಿವಾನನ ಕಚೇರಿ ಮಡಿಕೇರಿ ಅರಮನೆಯ ಒಳಗಡೆಗೇ ಇತ್ತು. ರಾಜನಿಗೆ ಈತ ಎಲ್ಲ ಸಂದರ್ಭಗಳಲ್ಲಿಯೂ ಹತ್ತಿರ ಇರಬೇಕಾಗಿತ್ತು. ಅರಮನೆಗೆ ಸಂಬಂಧಿಸಿದ ಎಲ್ಲ ಪತ್ರಗಳೂ ದಿವಾನ ಕಚೇರಿಯಿಂದ ಹೊರಡಬೇಕಾಗಿತ್ತು. ಅರಮನೆಗೆ ಬರುವ ಪತ್ರಗಳೂ ಕೂಡಾ ದಿವಾನ ಕಚೇರಿಗೇ ಬರಬೇಕಾಗಿತ್ತು. ಅರಮನೆಗೆ ಬರುವ ಪತ್ರಗಳಲ್ಲಿ ದಿವಾನರನ್ನು 'ದೇವರು' ಎಂದೇ ಸಂಬೋಧಿಸಲಾಗುತ್ತಿತ್ತು. 31ನೇ ಅಪ್ಪಣೆಯಲ್ಲಿ ತೋರಿಸಲಾದ ಮಾದರಿ ಪತ್ರದಲ್ಲಿ ದಿವಾನರನ್ನು ಮೂರು ಸಲ ದೇವರೆಂದು ಹೇಳಿರುವುದು ಈ ಪದವಿಯ ಪಾವಿತ್ರ್ಯ ಮತ್ತು ಮಹತ್ವವನ್ನು ಸೂಚಿಸುತ್ತದೆ.[9]

2.7.2: ಅಮೀಲ: ದಿವಾನ ಪದವಿಯ ಅನಂತರ ಹೆಚ್ಚು ಅಧಿಕಾರವುಳ್ಳ ಪದವಿಯಿದು. ಅರಸನ ರಾಜ್ಯದ ಪ್ರತಿ ಸೀಮೆಯಲ್ಲಿ ಕೂಡಾ ಅಮೀಲರ ಕಚೇರಿಗಳಿರುತ್ತಿದ್ದುವು. ಈ ಅಮೀಲರುಗಳು ತಮ್ಮ ಮೇಲಧಿಕಾರಿಗಳಾದ ದಿವಾನರನ್ನು ವಿಚಾರಿಸದೆ, ಕೆಳಗಿನ ಅಧಿಕಾರಿಗಳಾದ ಪಾರುಪತ್ಯಗಾರ, ತಕ್ಕ ಮತ್ತು ಗೌಡುಗಳಿಗೆ ಪತ್ರ ಬರೆಯಬಹುದಾಗಿತ್ತು. ಅಮೀಲ ಪದವಿಗೇರಿದವನು ದಿವಾನ್ ಕಚೇರಿಯಲ್ಲಿ ಉದ್ಯೋಗಕ್ಕೆ ಹಾಜರಾಗುವಾಗ ಬರೆದುಕೊಳ್ಳಬೇಕಾದ ರೀತಿಯ ಬಗ್ಗೆ 31ನೇ ಅಪ್ಪಣೆಯಲ್ಲಿ ವಿವರ ಲಭ್ಯವಿದೆ.

"ಸ್ವಾಮಿ ಪಾದಕ್ಕೆ

ಪಾದದ ಗುಲಾಮು ಚಾಕರ ಕಿಗಟನಾಡ ಅಮೀಲ....ಯಿಂತವನೂ ಮಾಡುವ ಬಿನ್ನಹಾ...ದಿವ್ಯಚಿತ್ತದಲ್ಲು ಪರಾಂಬರ್ರಿಶಿ ಮುಂದೆ ಗುಲಾಮುನು ನಡಕೊಂಬ ಬುಧಿಮಾರ್ಗಕ್ಕೆ ಬುದ್ಧಿಗಲಿಶಿ ನಿರ್ರೂಪ ಅಪ್ಪಣೆ ದಯಪಾಲಿಸಬೇಕು......"

ಇಲ್ಲಿಯ ದೈನ್ಯವು ಆಳುವ ವರ್ಗದ ಹಿಡಿತಕ್ಕೆ ಮಾಡಿದ ವ್ಯಾಖ್ಯಾನದಂತಿದೆ. ರಾಜ್ಯವ್ಯವಸ್ಥೆಯ ಅತಿ ಮುಖ್ಯ ಕೆಲಸಗಾರನಾದ ಅಮೀಲನೂ ಕೂಡಾ ದಿವಾನವರ ಮುಂದೆ ತನ್ನನ್ನು 'ಗುಲಾಮು' ನೆಂದೇ ಪ್ರದರ್ಶಿಸಿಕೊಳ್ಳುತ್ತಿದ್ದ. ಇದಕ್ಕೆ ವಿರುದ್ಧವಾಗಿ ಅಮೀಲರು ತನ್ನ ಕೆಳಗಿನ ಅಧಿಕಾರಿಗಳಿಗೆ ಪತ್ರಿಸುವಾಗ ತಮ್ಮ ಅಧಿಕಾರದ ಗತ್ತನ್ನು ತೋರಿಸುತ್ತಿದ್ದರು—

"ಪ್ರಜೋತ್ಪತ್ತ್ಯ ಸಂವತ್ಸರದ ಚಯಿತ್ರ ಶು। ಉ ಶ್ರೀ ಮತು ಲಿಂ॥... ಗ್ರಾಮದ ಗಉಡ ಯಿಂತವನಿಗೆ ಬರಶಿಕಳಿಸಿದ ಕಾರ್ಯ....ಯಿದನ್ನು ತಿಳಿದಿರ್ರುವುದು...." ಇಲ್ಲಿ ಅಮೀಲನ ಗುಲಾಮತ್ತನ ಪೂರ್ತಿ ನಾಶವಾಗಿ ಅಧಿಕಾರಶಾಹಿ ವಿಜೃಂಭಿಸಿದೆ. ಇದರಿಂದಾಗಿಯೇ ಆ ಕಾಲದ ರಾಜ್ಯವ್ಯವಸ್ಥೆಯಲ್ಲಿ ವಿಕೇಂದ್ರೀಕರಣವೇ ನಡೆದಿಲ್ಲ ಎನ್ನಬೇಕಾಗುತ್ತದೆ. ಮೇಲಾಧಿಕಾರಿಗೆ ಗುಲಾಮನಾಗಿ, ಕೈಕೆಳಗಿನ ಅಧಿಕಾರಿಗೆ ಕ್ರೂರವಾದ ಯಜಮಾನನಾಗಿರುವ ಸಂಕೀರ್ಣ ಚಿತ್ರ ಇಲ್ಲಿನದು. ರಾಜನ ಕೈಯಲ್ಲಿ ಅಪಾರ ಅಧಿಕಾರ ಕೇಂದ್ರೀಕರಣ ಹೊಂದಿರುವುದೇ ಇದಕ್ಕೆ ಕಾರಣ.

2. 7. 3 : ಪಾರುಪತ್ಯಗಾರ: ಈ ಪದವು ಮೂಲತಃ ದೇವಸ್ಥಾನವನ್ನು ನೋಡಿಕೊಳ್ಳುತ್ತಿದ್ದ ಬ್ರಾಹ್ಮಣ ವರ್ಗವನ್ನು ಸಂಕೇತಿಸುತ್ತಿತ್ತು. ಅನಂತರ ಆಡಳಿತದ ಒಂದು ಹಂತವಾಗಿ ಮಾರ್ಪಟ್ಟಿದೆ. ರಾಜ್ಯದ ಎಲ್ಲ ಸೀಮೆಗಳಲ್ಲೂ ಪಾರುಪತ್ಯಗಾರನ ಕಚೇರಿಗಳಿದ್ದುವು. ನಾಮೆಯುದ್ದಕ್ಕೂ ಹೇಳಲಾಗಿರುವ ಈತನ ಕೆಲಸಗಳನ್ನು ಈ ಕೆಳಗಿನಂತೆ ಸಂಕ್ಷೇಪಿಸಬಹುದು.

(ಅ) ಆಡಳಿತಕ್ಕೆ ಸಂಬಂಧಿಸಿದ ಹಾಗೆ ಈತ ತನ್ನ ಕೈಕೆಳಗಿನ ಅಧಿಕಾರಿಗಳಾದ ಶ್ಯಾನುಭೋಗ ಗೌಡ, ಮತ್ತು ತಕ್ಕರಿಗೆ ಆಗಿಂದಾಗ್ಗೆ ಪತ್ರ ಬರೆಯುತ್ತಿದ್ದ. ಮೇಲಧಿಕಾರಿಗಳಾದ ಅಮೀಲ ಮತ್ತು ದಿವಾನರಿಗೂ ಪತ್ರ ಬರೆಯಬಹುದಾಗಿತ್ತು. ಗ್ರಾಮದ ಗೌಡುಗಳಿಗೆ ಈತನೇ ಕೆಲಸವನ್ನು ಹೇಳಬಹುದಿತ್ತು. ಇವರ ಬಗೆಗೆ 31ನೇ ಅಪ್ಪಣೆಯಲ್ಲಿ ವಿವರ ಸಿಗುತ್ತದೆ.

(ಆ) ಅಮೀಲ ಮಾಡುವ ಎಲ್ಲಾ ಕೆಲಸಗಳಿಗೂ ಈತ ಸಹಾಯಮಾಡಬೇಕು.

(ಇ) ಜನಕ್ಕೆ ಸ್ವಲ್ಪವೂ ನೋವಾಗದ ಹಾಗೆ ಅರಮನೆಗೆ ಬರುವ ಆದಾಯವನ್ನು ಸಂಗ್ರಹಿಸುವುದು ಇವನ ಕೆಲಸ. ಎರಡನೆಯ ಅಪ್ಪಣೆಯ ಪ್ರಕಾರ ಈ ಆದಾಯ ಸಂಗ್ರಹದ ಕೆಲಸವನ್ನು ಪಾರುಪತ್ಯಗಾರನು ಕಾರ್ತಿಕ ಮಾಸದಲ್ಲಿಯೇ ಮಾಡಬೇಕು.

(ಈ) ರಾಜರನ್ನು ಯಾರಾದರೂ ದೂಷಣೆ ಮಾಡಿದರೆ ಅವರನ್ನು ಹಿಡಿದು ದಂಡಿಸುವ ಕೆಲಸ ಪಾರುಪತ್ಯಗಾರನದ್ದು. ಇಂಥ ಸಂದರ್ಭಗಳಲ್ಲಿ ಪಾರುಪತ್ಯಗಾರನು ನ್ಯಾಯಾಧಿಕಾರಿಯಂತೆ ವರ್ತಿಸಬೇಕು. ತಪ್ಪಿತಸ್ಥರಿಗೆ ಸರಿಯಾದ ರೀತಿಯಲ್ಲಿ ಬುದ್ಧಿ ಹೇಳುವ ಕೆಲಸವೂ ಇವನಿಗೇ. ರಾಜದ್ರೋಹಿಗಳನ್ನು ಮಾತ್ರ ನೇರವಾಗಿ ದಿವಾನ್ ಕಚೇರಿಗೆ ಒಪ್ಪಿಸಿಬಿಡಬೇಕಾಗಿತ್ತು. 16ನೇ ಅಪ್ಪಣೆ ಪ್ರಕಾರ, ಅಗತ್ಯ ಬಿದ್ದರೆ ತಪ್ಪಿತಸ್ಥರ ದವಡೆಗೆ ಐದೇಟು ಹೊಡೆಯುವ ಅಧಿಕಾರ ಕೂಡಾ ಪಾರುಪತ್ಯ ಗಾರನಿಗೆ ಇದೆ. ಹೀಗೆ ಈತ ಸೇನಾಧಿಪತಿಯಂತೆ, ದಂಡನಾಯಕನಂತೆ, ನ್ಯಾಯಾಧೀಶನಂತೆ ಕೆಲಸಮಾಡಬೇಕಾಗುತ್ತಿತ್ತು.

(ಉ) ಅರಮನೆಗೆ ಸಂದಾಯವಾಗಬೇಕಾಗಿರುವ ಬತ್ತವನ್ನು ಗ್ರಾಮ ಗ್ರಾಮದ ಗೌಡುಗಳು ಸಂಗ್ರಹಿಸಿ, ಉಗ್ರಾಣದಲ್ಲಿ ತುಂಬಿಡುತ್ತಿದ್ದರು. ಈ ಉಗ್ರಾಣವನ್ನು ರಕ್ಷಿಸುವ ಜವಾಬ್ದಾರಿ ಗೌಡನದೇ ಆಗಿದ್ದರೂ, ಗೌಡ ಈ ನಿಟ್ಟನಲ್ಲಿ ಸರಿಯಾಗಿ ಕೆಲಸ ನಿರ್ವಹಿಸುವಂತೆ ನೋಡಿಕೊಳ್ಳುವ ಕೆಲಸ ಪಾರುಪತ್ಯಗಾರನ ದಾಗಿತ್ತು. ಐದನೆಯ ಅಪ್ಪಣೆಯ ಪ್ರಕಾರ ಪಾರುಪತ್ಯಗಾರನು ಪ್ರತಿ ತಿಂಗಳಿಗೊಮ್ಮೆ ಉಗ್ರಾಣವನ್ನು ಪರಿಶೀಲಿಸಿ ಇಲಿಹೆಗ್ಗಣಗಳಿಂದ ಅವು ಹಾಳಾಗದಂತೆ ನೋಡಿಕೊಳ್ಳ ಬೇಕಾಗಿತ್ತು.

(ಊ) ಪ್ರಜೆಗಳು ಅಗತ್ಯಬಿದ್ದಾಗ ಅರಮನೆಗೆ ಬತ್ತಕೊಟ್ಟು ಪ್ರತಿಯಾಗಿ ಅಕ್ಕಿಯನ್ನು ಪಡೆಯುವ ಸಂಪ್ರದಾಯ ಲಿಂಗರಾಜನ ಕಾಲದಲ್ಲಿ ಪ್ರಚಲಿತದಲ್ಲಿತ್ತು. ಅದಕ್ಕೆ 2½ ಬಟ್ಟಿ ಬತ್ತಕ್ಕೆ ಒಂದು ಬಟ್ಟಿ ಅಕ್ಕಿ ಕೊಡುವುದೆಂದೂ ಅಧಿಕಾರಿಗಳು ನಿರ್ಣಯಿಸಿದ್ದರು. ಈ ವಿಚಾರಕ್ಕೆ ಸಂಬಂಧಿಸಿದ ಎಲ್ಲ ಕೆಲಸಗಳನ್ನೂ ಪಾರುಪತ್ಯ ಗಾರನೇ ಮಾಡಬೇಕಾಗಿತ್ತು. ಅರಮನೆಗೆ ಇದಕ್ಕೆ ಸಂಬಂಧಿಸಿದ ಲೆಕ್ಕಗಳನ್ನು ಈತನೇ ಒಪ್ಪಿಸಬೇಕಾಗಿತ್ತು. ಇದಕ್ಕೆ ಪಾರುಪತ್ಯಗಾರನು ಗೌಡನ ಸಹಾಯವನ್ನೂ ಪಡೆಯಬಹುದಾಗಿತ್ತು. ಐದು ಮತ್ತು ಆರನೇ ಅಪ್ಪಣೆಗಳಲ್ಲಿ ಇದಕ್ಕೆ ಸಂಬಂಧಿಸಿದ ವಿವರಗಳಿವೆ.

(ಎ) ಕಾಡುತ್ಪತ್ತಿಗಳನ್ನು ಸಂಗ್ರಹಿಸುವ ಹೊಣೆಗಾರಿಕೆ ಕೂಡಾ ಪಾರುಪತ್ಯ ಗಾರನದ್ದೇ ಆಗಿತ್ತು. ಕಾಡಿನಲ್ಲಿ ಮರಗಳು ಫಲಬಿಡುವ ಕಾಲಕ್ಕೆ ಅವುಗಳನ್ನು ಗುರುತಿಸಿ, ಪುಸ್ತಕದಲ್ಲಿ ಬರೆದಿಟ್ಟುಕೊಳ್ಳಬೇಕಾಗಿತ್ತು. ಪ್ರಜಾವರ್ಗದವರು ಸಂಗ್ರಹಿಸಿದ ಕಾಯಿ, ಹಣ್ಣು, ಚಕ್ಕೆಗಳನ್ನು ಅರಮನೆ ಭಂಡಾರಕ್ಕೆ ಕೊಂಡುಕೊಂಡು, ಅದಕ್ಕೆ ಆ ಕಾಲದಲ್ಲಿ ನಿಗದಿಮಾಡಲಾದ ದರದಲ್ಲಿ ಹಣಸಂದಾಯವನ್ನೂ ಪಾರುಪತ್ಯ ಗಾರನೇ ಮಾಡಬೇಕಾಗಿತ್ತು. ಹಣಕಾಸಿನ ಈ ವ್ಯವಹಾರದ ಬಗೆಗೆ ಏಳನೆಯ ಅಪ್ಪಣೆಯಲ್ಲಿ ಪೂರ್ತಿ ವಿವರಗಳಿವೆ.

(ಏ) ರಾಜನ ಆಡಳಿತಕ್ಕೆ ಒಳಪಟ್ಟ ಪ್ರದೇಶಗಳಿಂದ ರೈತರು ತಪ್ಪಿಸಿಕೊಂಡು ಓಡಿಹೋಗುತ್ತಿದ್ದರು. ಆ ಸಂದರ್ಭದಲ್ಲಿ ತಪ್ಪಿಸಿಕೊಂಡವರನ್ನು ಹಿಡಿಯಲು

ಊರಗೌಡ ಯತ್ನಿಸುವಾಗ ಪಾರುಪತ್ಯಗಾರನು ಅವನಿಗೆ ಎಲ್ಲಾ ವಿಧದಲ್ಲಿಯೂ ಸಹಕಾರ ನೀಡಬೇಕು. ಪಾರುಪತ್ಯಗಾರನು ತನ್ನ ಸೀಮೆಗೆಲ್ಲಾ ತಕ್ಷಣ ಸುದ್ದಿಕಳಿಸಿ ಜನರು ಜಾಗೃತರಾಗಿರುವಂತೆ ನೋಡಿಕೊಳ್ಳಬೇಕು. ಮುಖ್ಯದಾರಿಗಳಲ್ಲಿ ನಂಬಿಕಸ್ಥ ಜನರನ್ನಿಟ್ಟು ಓಡಿಹೋಗುವವರನ್ನು ಹಿಡಿಯಲು ಯತ್ನಿಸಬೇಕು. ತಪ್ಪಿಸಿ ಕೊಂಡವರು ಸಿಗದೇ ಹೋದರೆ, ಆ ಬಗ್ಗೆ ದಿವಾನ್ ಕಚೇರಿಗೆ ಖಚಿತವಾದ ವಿವರಗಳನ್ನು ನೀಡುವುದು ಪಾರುಪತ್ಯಗಾರನ ಕೆಲಸವಾಗಿತ್ತು.

(ಐ) ರೈತರು ಊರುಬಿಟ್ಟು ಓಡಿಹೋದರೆ, ಅವರು ಬಿಟ್ಟು ಹೋದ ವಸ್ತುಗಳನ್ನು ನೆರೆಹೊರೆಯವರು ಅಪಹರಿಸಿಬಿಡುವ ಸಾಧ್ಯತೆಗಳಿದ್ದುವು. ಪಾರುಪತ್ಯ ಗಾರನು ಹಾಗಾಗಲು ಬಿಡದೆ, ಅನಾಥವಾಗಿರುವ ವಸ್ತುಗಳನ್ನು ತನ್ನ ವಶಕ್ಕೆ ತೆಗೆದು ಕೊಳ್ಳಬೇಕು. ಅಲ್ಲಿರುವ ಪಂಚಲೋಹದ ವಸ್ತುಗಳನ್ನು, ದನಕರುಗಳನ್ನು ಮತ್ತು ದವಸಧಾನ್ಯಗಳನ್ನು ಲೆಕ್ಕಮಾಡಿ ವಿವರಗಳನ್ನು ದಿವಾನ ಕಚೇರಿಗೆ ಒಪ್ಪಿಸಬೇಕು. 10ನೇ ಅಪ್ಪಣೆಯಲ್ಲಿರುವ ಪ್ರಕಾರ ಅನಾಥವಾಗಿರುವ ದನಕರುಗಳನ್ನು ಪಾರುಪತ್ಯ ಗಾರನೇ ನೋಡಿಕೊಳ್ಳಬಹುದು. ಮುಂದೆ ಹೊಸದಾಗಿ ಕೃಷಿಮಾಡಲು ಬರುವ ರೈತರಿಗೆ ಅರಮನೆಯ ಪರವಾಗಿ ಇವನ್ನು ಒದಗಿಸಿಕೊಡಬೇಕು.

(ಒ) ಅರಮನೆಯಿಂದ ಕರೆಬಂದರೆ 'ನಿಮಿಷ ತಡಮಾಡದೆ ಗ್ರಾಮದ ರೈತರೊಂದಿಗೆ ಅರಮನೆಗೆ ಧಾವಿಸಬೇಕು'. ಅಗತ್ಯಬಿದ್ದರೆ ಅರಮನೆ ರಕ್ಷಣೆಯಲ್ಲೂ ಪಾಲ್ಗೊಳ್ಳಬೇಕು. ಪಾರುಪತ್ಯಗಾರನು ಕತ್ತಿ ದೊಣ್ಣೆ ಹಿಡಿಯಲು ಹಿಂಜರಿಯ ಬಾರದು, ಸಂಕೋಚಪಡಬಾರದು.

(ಓ) 26ನೆಯ ಅಪ್ಪಣೆಯ ಪ್ರಕಾರ ಊರುಗೌಡನು ತನ್ನ ಕೆಲಸದಲ್ಲಿ ಸ್ವಲ್ಪ ತಪ್ಪಿದರೂ ಅವನಿಗೆ ತಿಳಿಸಿ ಹೇಳುವ ಕೆಲಸವನ್ನು ಪಾರುಪತ್ಯಗಾರನು ಮಾಡಬೇಕಿತ್ತು.

ಹೀಗೆ ಪಾರುಪತ್ಯಗಾರನ ಕೆಲಸ ಬಹುಮುಖವಾದುದು. ನಾಡಿನ ರಾಜಕೀಯ, ಸಾಮಾಜಿಕ, ಧಾರ್ಮಿಕ ಮತ್ತು ಸಾಂಸ್ಕೃತಿಕ ಕ್ಷೇತ್ರದಲ್ಲಿ ಈತನದು ಬಹುಮುಖ್ಯ ಪಾತ್ರ. ತನ್ನ ಕರ್ತವ್ಯ ನಿರ್ವಹಣೆಯಲ್ಲಿ ಆತ ಹಿಂದೆ ಬಿದ್ದರೆ ಅರಸನ ಅವಕೃಪೆಗೆ ತುತ್ತಾಗುತ್ತಿದ್ದ. ಎರಡನೆಯ ಅಪ್ಪಣೆಯಲ್ಲಿ ಅದನ್ನು ಸ್ಪಷ್ಟವಾಗಿ ಹೇಳಲಾಗಿದೆ— "ಗೊತ್ತಿಲ್ಲದೆ ಮಾಡಿದರೆ ಕ್ಷಮೆ ಉಂಟು, ಉದ್ದೇಶಪಟ್ಟು ಮಾಡಿದರೆ ಇಹಪರಕ್ಕು ಕೂಡಾ ಕೇಡುಂಟಾಗುವುದು." ಹಾಗೆಂದುಕೊಂಡು ರಾಜನ ಕೃಪೆಗೆ ಒಳಗಾಗ ಬೇಕೆಂದು ಅಗತ್ಯಕ್ಕಿಂತ ಹೆಚ್ಚು ನಿಷ್ಠುರವಾಗಿ ಕೆಲಸಮಾಡಿದರೂ ರಾಜನು ಅಸಮಾಧಾನ ಪಡುತ್ತಿದ್ದ. ರೈತರಿಂದ ಹೆಚ್ಚುಗೆ ಕಂದಾಯ ವಸೂಲಿಮಾಡಿದರೂ ಪಾರುಪತ್ಯಗಾರನನ್ನು ರಾಜ ಕ್ಷಮಿಸುತ್ತಿರಲಿಲ್ಲ.[10]

ಪಾರುಪತ್ಯಗಾರನು ತನ್ನ ಶಿಸ್ತಿಗೆ ತಪ್ಪಿದರೆ ದಿವಾನನಿಂದ ಶಿಕ್ಷೆಗೆ ಒಳಪಡುತ್ತಿದ್ದ. ರೈತರಿಂದ ಕಂದಾಯ ರೂಪದಲ್ಲಿ ಬತ್ತ ವಸೂಲಿಮಾಡಲಾಗದಿದ್ದ ಪಾರುಪತ್ಯಗಾರನು ತಾನೇ ಅಷ್ಟು ಭತ್ತವನ್ನು ಅರಮನೆಗೆ ಒಪ್ಪಿಸಬೇಕಾಗುತ್ತಿತ್ತು. ರಾಜಕೀಯವಾಗಿ

ಅನೇಕ ಕೆಲಸಗಳನ್ನು ಕೂಡಾ ಪಾರುಪತ್ಯಗಾರನು ಅತ್ಯಂತ ಗುಪ್ತವಾಗಿಯೇ ಮಾಡಬೇಕಾಗಿತ್ತು. 17ನೇ ಅಪ್ಪಣೆಯ ಪ್ರಕಾರ 'ಅರಮನೆಯಿಂದ ಬಂದ ಯಾವುದೇ ನಿರೂಪವನ್ನಾದರೂ ಸಹಾ ಪಾರುಪತ್ಯಗಾರನು ಯಾರಿಗೂ ತಿಳಿಯದಂತೆ ರಹಸ್ಯವಾಗಿಯೇ ಓದಬೇಕಾಗಿತ್ತು' ಹಾಗೆ ಓದಿದ ಅನಂತರ ಏಳೂವರೆ ಗಳಿಗೆ ಒಳಗಾಗಿ ಅದಕ್ಕೆ ಉತ್ತರವನ್ನೂ ಕೊಡಬೇಕೆಂದು ಅದೇ ಅಪ್ಪಣೆ ಸೂಚಿಸಿದೆ. ಒಂದು ವೇಳೆ ಉತ್ತರ ಕೊಡಲಾಗದಿದ್ದಲ್ಲಿ ಆ ಪತ್ರದಲ್ಲಿ ಬರೆದ ಕೆಲಸ ಎಷ್ಟು ದಿನಗಳ ಒಳಗಾಗಿ ನಡೆದೀತೆಂದು ತಿಳಿಸಬೇಕಾಗಿತ್ತು. 18ನೇ ಅಪ್ಪಣೆಯ ಪ್ರಕಾರ ಅರಮನೆಯಿಂದ ಹೊರಟ ಪತ್ರ ಪಾರುಪತ್ಯಗಾರನನ್ನು ತಲುಪಿ, ಅದಕ್ಕೆ ಪಾರುಪತ್ಯಗಾರ ಉತ್ತರ ಬರೆದು, ಪುನಹ ಅರಮನೆಗೆ ತಲುಪಲು ಒಟ್ಟು 60 ಗಳಿಗೆ ಸಮಯವನ್ನು ನೀಡಲಾಗುತ್ತಿತ್ತು. ಇದಕ್ಕೆ ತಪ್ಪಿದರೆ ಪಾರುಪತ್ಯಗಾರನು ಶಿಕ್ಷೆಗೆ ಒಳಗಾಗುತ್ತಿದ್ದನು. ಪತ್ರವ್ಯವಹಾರದ ವಿಷಯದಲ್ಲಿ ಪಾರುಪತ್ಯಗಾರನು ಅಗತ್ಯಬಿದ್ದರೆ ಶ್ಯಾನುಭೋಗರ ಸಹಾಯವನ್ನು ಪಡೆಯಬಹುದಿತ್ತು.

2.7.4 : ತಕ್ಕರು : ಹುಕುಂ ನಾಮೆಯನ್ನು ತಕ್ಕರಿಗೆ ಕೂಡಾ ಕಳುಹಿಸಿ ಕೊಡಲಾಗಿದೆಯಾದರೂ ಇಡೀ ನಾಮೆಯಲ್ಲಿ ತಕ್ಕರೇ ನಿರ್ವಹಿಸಬೇಕಾದ ಯಾವುದೇ ಕೆಲಸಗಳ ಬಗೆಗೆ ಉಲ್ಲೇಖವಿಲ್ಲ. ಆತನು ಊರುಗೌಡನೊಂದಿಗೆ ಸಹಕರಿಸಬಹುದೆಂದು ಮಾತ್ರ ಹೇಳಲಾಗಿದೆ. ತಕ್ಕ ಪದವು ಅಧಿಕಾರ ಸೂಚಕ ಪರವಾಗಿದ್ದು, ಅದು ಊರುಗೌಡನ ಅಧಿಕಾರಕ್ಕೆ ಸಮವಾಗಿ ಇದ್ದಂತೆ ತೋರುತ್ತದೆ. ಮದುವೆ, ಸಾವು ಮೊದಲಾದ ಸಾಮಾಜಿಕ ಆಚರಣೆಗಳಲ್ಲಿ ಈತ ಗೌಡನಿಗೆ ಬದಲಾಗಿ ಪಾಲುಗೊಳ್ಳುತ್ತಾನೆ. 20ನೆಯ ಅಪ್ಪಣೆಯ ಪ್ರಕಾರ ತಕ್ಕನು ನ್ಯಾಯ ತೀರ್ಮಾನಗಳಲ್ಲೂ ಮುಖ್ಯಸ್ಥಾನ ವಹಿಸುತ್ತಾನೆ.

2.7.5 : ಶ್ಯಾನುಭೋಗರು : ಶ್ಯಾನುಭೋಗರು ಪಾರುಪತ್ಯಗಾರನೊಂದಿಗೆ ಎಲ್ಲ ಕೆಲಸದಲ್ಲೂ ಸಹಕಾರ ನೀಡಬೇಕು. ಅದರಲ್ಲೂ ಮುಖ್ಯವಾಗಿ ಹಣಕಾಸಿನ ವಿಚಾರದಲ್ಲಿ ಸಹಕರಿಸಬೇಕಾಗುತ್ತಿತ್ತು. ನಾಮೆಯಲ್ಲಿ ರಶೀದಿ, ಹಣ, ಲೆಕ್ಕಗಳ ಉಲ್ಲೇಖ ಬಂದಾಗಲೆಲ್ಲ ಶ್ಯಾನುಭೋಗರ ಉಲ್ಲೇಖವೂ ಬಂದಿರುವುದನ್ನು ಗಮನಿಸಬೇಕು. ಎಲ್ಲ ಕಡೆಯೂ ಬಂದ ಉಲ್ಲೇಖಗಳನ್ನು ಸಂಗ್ರಹಿಸಿದರೆ ಈ ಕೆಳಗಿನ ಕರ್ತವ್ಯಗಳನ್ನು ಶ್ಯಾನುಭೋಗ ನಿರ್ವಹಿಸಬೇಕಾಗಿತ್ತು.

(ಅ) ಕಾರ್ತಿಕ ಮಾಸದಲ್ಲಿ ಹಳ್ಳಿಹಳ್ಳಿಗೆ ಹೋಗಿ ರೈತರು ಬೆಳೆಯುವ ಬೆಳೆಗಳನ್ನು ಪರಿಶೀಲಿಸಿ, ಅವಕ್ಕೆ ಕಂದಾಯ ನಿಗದಿಮಾಡಬೇಕಿತ್ತು. ಈ ಕಂದಾಯದ ವಿವರಗಳನ್ನು ರೈತರಿಗೂ ತಿಳಿಸಬೇಕು.

(ಆ) ಪಾರುಪತ್ಯಗಾರನ ಪತ್ರಲೇಖನಕ್ಕೆ ಸಹಾಯಮಾಡುವುದು.

(ಇ) ಪಾರುಪತ್ಯಗಾರನಿಗೆ ಪತ್ರ ಬಂದರೆ, ಅದನ್ನು ಶ್ಯಾನುಭೋಗನೇ ಓದಿ ನೋಡಿ ವಿಚಾರವನ್ನು ಪಾರುಪತ್ಯಗಾರನಿಗೆ ತಿಳಿಸಬೇಕು.

(ಈ) ಆಗಾಗ್ಗೆ ಹುಕುಂ ನಾಮೆಯನ್ನು ಓದಿಕೊಂಡು ಅದರಲ್ಲಿರುವ ವಿಷಯುಗಳೆಲ್ಲ ಕಾರ್ಯಗತವಾಗುವಂತೆ ಸಂಬಂಧಿಸಿದವರಿಗೆ ಸೂಚನೆ ನೀಡುವುದು ಇವನ ಕೆಲಸ.

ಇಷ್ಟಿದ್ದರೂ ಇವನು ಮುಖ್ಯವಾಗಿ ಪಾರುಪತ್ಯಗಾರನ ಸಹಾಯಕನಂತೆಯೇ ಕೆಲಸಮಾಡಬೇಕಾಗುತ್ತಿತ್ತು.

2.7.6 : ಗೌಡ : ಕೊಡಗಿನ ಆಡಳಿತ ವ್ಯವಸ್ಥೆಯಲ್ಲಿ ಪ್ರಜಾಜನರೊಂದಿಗೆ ಕೆಲಸಮಾಡುತ್ತಿದ್ದವರು ಗೌಡರು. ಲಿಂಗರಾಜನ ಕಾಲಕ್ಕೆ ಗೌಡರೆಂಬ ಜನವರ್ಗವು ಅಮರಸುಳ್ಯ ಸೀಮೆಯಿಂದ ಕೊಡಗಿಗೆ ವಲಸೆ ಬಂದು ಕೃಷಿ ಕೆಲಸವನ್ನು ಮಾಡುತ್ತಾ ಬದುಕುತ್ತಿದ್ದರು.[11] ಇವರು ಗೌಡರೆಂದು ಕರೆಸಿಕೊಳ್ಳುತ್ತಿದ್ದರೂ, ನಾಮೆಯಲ್ಲಿ ಬಂದಿರುವ ಗೌಡ ಪದವು ಇವರನ್ನು ಸೂಚಿಸದೆ, ಪಾರುಪತ್ಯಗಾರನ ನಿಯಂತ್ರಣಕ್ಕೆ ಒಳಪಟ್ಟ ಸ್ಥಾನಸೂಚಕ ಪದವಾಗಿದೆ.

ಗೌಡರಿಗೆ ನೇರಸಂಬಂಧ ಇದ್ದುದು ಜನರೊಡನೆಯೇ ಆಗಿದ್ದುದರಿಂದ ಅವರ ಹೊಣೆಗಾರಿಕೆಯೂ ಗುರುತರವಾದದ್ದಾಗಿತ್ತು. ನಾಮೆಯ ಬಹುಮುಖ್ಯವಾದ ಭಾಗವು ಗೌಡ ನಿರ್ವಹಿಸಬೇಕಾದ ಕೆಲಸಗಳಿಗಾಗಿ ಉಪಯೋಗಿಸಲ್ಪಟ್ಟಿದೆ. ಇವುಗಳನ್ನು ಒಟ್ಟಾರೆಯಾಗಿ ಈ ಕೆಳಗಿನಂತೆ ಸಂಗ್ರಹಿಸಬಹುದು.—

(1) ಗೌಡನು ತನ್ನ ಅಧಿಕಾರವ್ಯಾಪ್ತಿಗೆ ಸೇರಿದ್ದ ಪ್ರದೇಶಗಳಲ್ಲಿ ನಡೆಯುವ ಎಲ್ಲ ಘಟನೆಗಳಿಗೂ ಜವಾಬ್ದಾರನಾಗಿದ್ದ. ಆ ಪ್ರದೇಶಕ್ಕೆ ಯಾರಾದರೂ ರೈತರು ಹೊಸದಾಗಿ ಬಂದರೆ ಅವರಿಗೆ ಆಗತ್ಯವಿರುವಷ್ಟು ಬತ್ತವನ್ನು ದನಕರುಗಳನ್ನೂ ಅರಮನೆಯಿಂದ ಒದಗಿಸಿಕೊಡುವ ಕೆಲಸ ಗೌಡನದ್ದು. ಆ ರೈತನು ಸ್ವಸಾಮರ್ಥ್ಯ ಹೊಂದಿದ ಅನಂತರ ಕೊಟ್ಟದ್ದನ್ನು ಹಿಂದೆ ಸಂಗ್ರಹಿಸಿ, ಅರಮನೆಗೇ ಒಪ್ಪಿಸುವ ಕೆಲಸ ಇವನದ್ದು (11, 12ನೇ ಅಪ್ಪಣೆಯಲ್ಲಿ)

(2) ರೈತರುಗಳು ತಮ್ಮ ಜಮೀನುಗಳನ್ನು ಪರಸ್ಪರ ಬದಲಾಯಿಸಿಕೊಳ್ಳಬೇಕಾದರೆ ಗೌಡನ ಒಪ್ಪಿಗೆಯನ್ನು ಪಡೆಯಬೇಕಾಗುತ್ತಿತ್ತು. ಹಾಗೆ ಎರಡು ಜನರೈತರ ಮಧ್ಯೆ ಬಂದ ತಕರಾರುಗಳನ್ನು ಕೂಡಾ ಗೌಡನೇ ಪರಿಹರಿಸುತ್ತಿದ್ದ. ಈ ಸಂದರ್ಭದಲ್ಲಿ ಗೌಡನಿಗೆ ನೀಡಲಾದ ವಿಶೇಷ ಎಚ್ಚರಿಕೆಯೊಂದು ಇಲ್ಲಿ ಉಲ್ಲೇಖಾರ್ಹ. ಹೊಸದಾಗಿ ಕೃಷಿ ಕೆಲಸ ಆರಂಭಿಸಿದ ರೈತರನ್ನು ಹಳಬರಾದ ರೈತರು ಮೋಸಮಾಡದಂತೆ ನೋಡಿಕೊಳ್ಳುವುದು ಗೌಡನ ಕೆಲಸವಾಗಿತ್ತು. ಇಲ್ಲಿ ಮೋಸವು ಜಮೀನನ್ನು ಬದಲಾಯಿಸಿಕೊಳ್ಳುವ ಸಂದರ್ಭದಲ್ಲಿ ಹಳಬರಾದ ರೈತರಿಂದ ಆಗುತ್ತಿತ್ತು. ಉತ್ತಮ ಫಲ ನೀಡದ ಗದ್ದೆಗಳನ್ನು ಉತ್ತಮ ಫಲನೀಡುವ ಗದ್ದೆಗಳೊಡನೆ ಬದಲಾಯಿಸಿಬಿಡಬಹುದಾಗಿತ್ತು. ಸಾಮಾನ್ಯವಾಗಿ ಹೊಸದಾಗಿ ಬಂದ ರೈತರಿಗೆ ನೆಲದ ಫಲವಂತಿಕೆಯ ಬಗೆಗೆ ಏನೇನೂ ತಿಳಿದಿರದ ಸಂದರ್ಭದಲ್ಲಿ ಅವರನ್ನು ಸುಲಭವಾಗಿ ವಂಚಿಸಿಬಿಡುತ್ತಿದ್ದರು. ಊರಿನ ಗೌಡನಿಗೆ ನೆಲದ ಗುಣ

ತಿಳಿದಿರುವುದರಿಂದ, ಭೂಮಿಯನ್ನು ಬದಲಾಯಿಸಿಕೊಳ್ಳುವಾಗ ಆತ ಮಧ್ಯಸ್ಥಿಗೆ ವಹಿಸಿದರೆ ಯಾರಿಗಾದರೂ ಅನ್ಯಾಯವಾಗಲಾರದು. ಮೇಲಾಗಿ ಹೊಸರೈತರಿಗೆ ಇದರಿಂದ ಲಾಭವೇ ಆಗುತ್ತಿತ್ತು. (13ನೇ ಅಪ್ಪಣೆ)

(3) ಭೂಮಿಗೆ ಸಂಬಂಧಿಸಿದಂತೆ ರೈತರಲ್ಲಿ ತಕರಾರು ಬಂದರೆ ಅವರು ನೇರವಾಗಿ ಗೌಡನಿಗೇ ದೂರುಕೊಡಬೇಕಾಗಿತ್ತು. ಗೌಡನಿಗೂ ನ್ಯಾಯತೀರ್ಮಾನ ಮಾಡುವುದಸಾಧ್ಯವಾದರೆ, ಆತ ಪಾರುಪತ್ಯಗಾರರನ್ನು ಭೇಟಿ ಮಾಡಿ ವಿಷಯವನ್ನು ತಿಳಿಸಿಬಿಡಬೇಕಾಗಿತ್ತು. (13ನೇ ಅಪ್ಪಣೆ)

(4) ರೈತರ ಜಮೀನಿನ ಮಧ್ಯೆ ಗಡಿರೇಖೆಯನ್ನು ಹಾಕುವ ಕೆಲಸವೂ ಗೌಡನದ್ದಾಗಿತ್ತು. (13ನೇ ಅಪ್ಪಣೆ)

(5) ಅರಮನೆಗೆ ಕಂದಾಯರೂಪದಲ್ಲಿ ಸಂದಾಯವಾದ ಭತ್ತವನ್ನು ಉಗ್ರಾಣದಲ್ಲಿ ಹಾಕಿಟ್ಟು ಅವುಗಳನ್ನು ಇಲಿಹೆಗ್ಗಣಗಳಿಂದ, ಕಳ್ಳಕಾಕರಿಂದ ರಕ್ಷಿಸುವ ಹೊಣೆಯನ್ನು ಗೌಡನೇ ಹೊರಬೇಕಾಗಿತ್ತು. (3 ಮತ್ತು 5ನೇ ಅಪ್ಪಣೆ)

(6) ರೈತರಿಗೆ ಅಕ್ಕಿ ಬೇಕಾದಲ್ಲಿ ಅದಕ್ಕೆ ಅರಮನೆ ನಿಗದಿಪಡಿಸಿದ ಪ್ರಮಾಣ ದಲ್ಲಿ ಬತ್ತವನ್ನು ಸಂಗ್ರಹಿಸಿ, ಲೆಕ್ಕ ಬರೆದಿಟ್ಟು, ಅಕ್ಕಿಯನ್ನು ಕೊಡಲಾಗುತ್ತಿತ್ತು. ಈ ಕೆಲಸ ಪಾರುಪತ್ಯಗಾರನದ್ದಾದರೂ ಗೌಡನೂ ಇದಕ್ಕೆ ಶ್ರಮಿಸಬೇಕು. (6ನೇ ಅಪ್ಪಣೆ)

(7) ಅರಮನೆ ಉಗ್ರಾಣದಲ್ಲಿ ಸಂಗ್ರಹಿಸಿಟ್ಟ ಬತ್ತವು ಹಾಗೆ ತುಂಬಕಾಲ ಇದ್ದರೆ ಹಾಳಾಗಿಬಿಡುತ್ತಿತ್ತು. ಆಗ ಅದು ಹಾಳಾಗದಂತೆ ಎಚ್ಚರವಹಿಸಿ ಹಳೆಬತ್ತದ ಬದಲಿಗೆ ಹೊಸಬತ್ತವನ್ನು ತರಿಸಿ ರಕ್ಷಿಸುವ ಕೆಲಸ ಗೌಡನದ್ದು. ಆ ಸಂದರ್ಭದಲ್ಲಿ 'ಹಳೆ ಬತ್ತದಲ್ಲಿ ಒಳ್ಳೆ ಅಕ್ಕಿ ಆಗ್ತದೆ' ಎಂದು ಜನರನ್ನು ಹುರಿದುಂಬಿಸಿ ತನ್ನ ಕೆಲಸವನ್ನು ಮಾಡಿಕೊಳ್ಳಬೇಕಾಗಿತ್ತು. (6ನೇ ಅಪ್ಪಣೆ)

(8) ಕಾಡುತ್ಪತ್ತಿಗಳನ್ನು ಪಾರುಪತ್ಯಗಾರ ಸಂಗ್ರಹಿಸುವಾಗ ಇವನು ಸಹಾಯಮಾಡಬೇಕು. ಮರಕ್ಕೆ ಗುರುತು ಹಾಕುವುದು, ಪುಸ್ತಕದಲ್ಲಿ ದಾಖಲು ಮಾಡಿಕೊಳ್ಳುವುದು ಮತ್ತು ಫಲಗಳನ್ನು ಕೊಯ್ಯಲು ಆಳುಗಳನ್ನು ಒದಗಿಸುವ ಕೆಲಸ ಗೌಡನದ್ದು. ಇಂಥ ಕೂಲಿಗಳಿಗೆ ಭತ್ತದ ರೂಪದಲ್ಲಿ ಕೂಲಿಕೊಡುವುದು, ಅಥವಾ ಹಣದ ರೂಪದಲ್ಲಿ ಕೂಲಿಕೊಡುವುದಾದರೆ ಅರಮನೆಯಿಂದ ಸಂಗ್ರಹಿಸಿ ಕೊಡುವುದು ಕೂಡಾ ಇವನ ಕೆಲಸ. (7ನೇ ಅಪ್ಪಣೆ ಮತ್ತು 28ನೇ ಅಪ್ಪಣೆ)

(9) ಊರಿನಿಂದ ತಪ್ಪಿಸಿಕೊಳ್ಳುವ ರೈತರನ್ನು ಹಿಡಿಯಲು ಪಾರುಪತ್ಯಗಾರ ನಿಗೆ ಸಹಾಯಿಸುವುದು. (9 ಮತ್ತು 10ನೇ ಅಪ್ಪಣೆ)

(10) ಊರಿನಲ್ಲಿರುವ ಚಿಕ್ಕಪುಟ್ಟ ಜಗಳಗಳನ್ನು ತೀರಿಸಲು ಗೌಡನು ನ್ಯಾಯಾಧಿಕಾರಿಯೂ ಆಗಬೇಕಾಗುತ್ತಿತ್ತು. (20ನೇ ಅಪ್ಪಣೆ)

(11) ರೈತರು ಯಾವ್ಯಾವ ಕಾಲದಲ್ಲಿ ಯಾವ್ಯಾವ ಬೆಳೆಗಳನ್ನು ಬೆಳೆಸುತ್ತಾರೆಂಬುದರ ಬಗೆಗೆ ಗೌಡ ಗಮನ ಹರಿಸುತ್ತಾ ಇರಬೇಕು. ಪ್ರತಿ ಸೋಮವಾರ ರೈತರ ಮನೆಗೆ ಭೇಟಿ ನೀಡಬೇಕು. ಕೃಷಿ ಕೆಲಸ ಗೊತ್ತಿಲ್ಲದ ರೈತರನ್ನು ಗಮನಿಸಿ ಅವರಿಗೆ ತಿಳುವಳಿಕೆ ನೀಡಬೇಕು. 'ಚೆನ್ನಾಗಿ ಕೆಲಸ ಮಾಡದೇ ಇರುವವನ ಕರದ್ದು ಬಯ್ದು ವಿವರಾ ಹೇಳಿಕೊಡಬೇಕು'. (20ನೇ ಅಪ್ಪಣೆ)

(12) ಯಾರಾದರೂ ರೈತರು ಖಾಯಿಲೆ ಬಿದ್ದರೆ ಆತನ ಕೃಷಿ ಕೆಲಸ ಮುಂದು ವರಿದುಕೊಂಡು ಹೋಗುವಂತೆ ಗೌಡನೇ ಕೆಲಸಮಾಡಬೇಕು. ಈಗಾಗಲೇ ಕೆಲಸ ಮುಗಿಸಿರುವ, ರೈತರನ್ನು ಕರೆದುಕೊಂಡು ಬಂದು, ಇವನ ಕೆಲಸ ಮುಗಿಯುವ ಹಾಗೆ ಮಾಡಬೇಕು. (26ನೇ ಅಪ್ಪಣೆ)

(13) ಹುತ್ತರಿಯ ಸಂದರ್ಭದಲ್ಲಿ ಅರಮನೆಗೆ ಬೇಕಾದಂಥ ತುಪ್ಪವನ್ನು ಜನ ರಿಂದ ಸಂಗ್ರಹಿಸುವ ಜವಾಬ್ದಾರಿ ಇವನದ್ದೇ ಆಗಿದೆ. (30ನೇ ಅಪ್ಪಣೆ)

(14) ಅರಮನೆಗೆ ಸಂಬಂಧಿಸಿದ ಕೃಷಿ ಭೂಮಿಯಲ್ಲಿ ಕೆಲಸ ಮಾಡಲು ಅಗತ್ಯ ವಿರುವಷ್ಟು ಹೆಣ್ಣಾಳು ಮತ್ತು ಗಂಡಾಳುಗಳನ್ನು ತರುವ ಕೆಲಸ ಹೊಣೆಗಾರಿಕೆ ಗೌಡ ನದ್ದು. (29ನೇ ಅಪ್ಪಣೆ)

(15) ಅರಮನೆ ಚಾಕ್ರಿಗೆ ಜನರನ್ನು ಕರೆತರುವ ಕೆಲಸ ಇವನದೇ. (8ನೇ ಅಪ್ಪಣೆ)

(16) ಪರಸ್ಥಳದ ವ್ಯಾಪಾರಿಗಳು ಊರೊಳಕ್ಕೆ ಬಂದು ವ್ಯವಹಾರ ನಡೆಸದಂತೆ ಎಚ್ಚರಿಕೆ ವಹಿಸಬೇಕು, ಹಾಗೆ ಯಾರಾದರೂ ಬಂದರೆ ಅವರನ್ನು ವ್ಯಾಪಾರ ನಡೆಸ ಲೆಂದು ವೀರರಾಜೇಂದ್ರ ಪೇಟೆ ಮತ್ತು ಸೋಮವಾರ ಪೇಟೆಗಳಿಗೆ ಕಳುಹಿಸಿಕೊಡ ಬೇಕು. (34ನೇ ಅಪ್ಪಣೆ)

(17) ರೈತನೊಬ್ಬ ಆಕಸ್ಮಿಕವಾಗಿ ಮೃತನಾದಾಗ ಆತನಿಗೆ ಅಪ್ರಾಪ್ತ ವಯಸ್ಕ ಮಕ್ಕಳಿದ್ದರೆ, ಆ ಮಕ್ಕಳ ರಕ್ಷಣೆಯನ್ನು ಗೌಡನೇ ಹೊರಬೇಕು. (ಅಪ್ಪಣೆ 39)

ಇವಿಷ್ಟು ಗೌಡ ಮಾಡಲೇಬೇಕಾದ ಕೆಲಸಗಳು. ಇದರೊಂದಿಗೆ ಊರಿನ ಜನ ರೊಂದಿಗೆ ಹೊಕ್ಕು ಬೆರೆತು ಆತ ಮಾಡಬೇಕಾದ ಚಿಕ್ಕಪುಟ್ಟ ಕೆಲಸಗಳು ಹಲವಾವೆ. ಅನೇಕ ಜವಾಬ್ದಾರಿಗಳನ್ನು ಹೊತ್ತ ತೀರಾ ಸಾಮಾನ್ಯ ಅಧಿಕಾರಿ 'ಗೌಡ'.

2.7.7: ಬುದ್ಧಿವಂತ : ಇದು ಗೌಡನಿಗೆ ಸಹಾಯಕವಾಗಿರುವ ಹುದ್ದೆ. ಗೌಡ ಅಪೇಕ್ಷಿಸಿದಾಗಲೆಲ್ಲ ಬುದ್ಧಿವಂತ ಗೌಡನ ಹತ್ತಿರ ಹಾಜರಿದ್ದು, ಗೌಡ ಹೇಳಿದ ಕೆಲಸ ವನ್ನು ಮಾಡಬೇಕಾಗಿತ್ತು. ಸ್ವತಂತ್ರವಾಗಿ ಬುದ್ಧಿವಂತನು ಯಾವುದೇ ಕೆಲಸವನ್ನು ಮಾಡುವಂತಿರಲಿಲ್ಲ. ಗೌಡನಿಗೆ ಸಹಾಯಕನಾಗಿ ಮತ್ತು ಗೌಡನ ಪ್ರತಿನಿಧಿಯಾಗಿ ಯಷ್ಟೇ ಇವನ ಕೆಲಸ.

ಹೀಗೆ ಹುಕುಂನಾಮೆಯಲ್ಲಿ ಆಡಳಿತದ ರೀತಿನೀತಿಗಳ ಬಗೆಗೆ ಅಮೂಲ್ಯವಾದ ವಿವರಗಳು ಲಭ್ಯವಿದೆ.

2.8: ನ್ಯಾಯ ಪರಿಪಾಲನೆ:

ಆಡಳಿತಕ್ಕಿಂತಲೂ ನ್ಯಾಯಪದ್ಧತಿ ಹೆಚ್ಚು ವಿಕೇಂದ್ರೀಕರಣ ಹೊಂದಿದಂತೆ ತೋರುತ್ತದೆ. ಇಲ್ಲಿಯೂ ರಾಜನದ್ದೇ ಪೂರ್ಣಹಿಡಿತವಿದ್ದರೂ, 20ನೇ ಅಪ್ಪಣೆಯಲ್ಲಿ ಸೂಚಿತವಾದಂತೆ ಪ್ರಾದೇಶಿಕ ಮಟ್ಟದಲ್ಲಿಯೂ ನ್ಯಾಯ ತೀರ್ಮಾನಗಳಾಗುತ್ತಿದ್ದುವು.

ಅನ್ಯಾಯಕ್ಕೊಳಗಾದವನು ಮೊದಲು ದೂರು ಕೊಡಬೇಕಾದ್ದು ಗೌಡನಿಗೆ. ಗೌಡನು ನ್ಯಾಯಾನ್ಯಾಯವನ್ನು ಬಹಳ ತಾಳ್ಮೆಯಿಂದ ಮತ್ತು ವಿನಯದಿಂದ ತೀರಿಸಿ ಕೊಟ್ಟು, ಬಂದಂಥವರ ಮನಸ್ಸನ್ನು ಸಂತೋಷಗೊಳಿಸಬೇಕು. ಗೌಡನು ನ್ಯಾಯ ತೀರ್ಮಾನಿಸಲು ಅಸಮರ್ಥನಾದರೆ, ದೂರು ತಕ್ಕನ ಬಳಿಗೂ, ತಕ್ಕನಿಂದಾಗದಿದ್ದರೆ ಪಾರುಪತ್ಯಗಾರನ ಬಳಿಗೂ, ಪಾರುಪತ್ಯಗಾರನಿಂದಾಗದಿದ್ದರೆ ದಿವಾನ್ ಕಚೇರಿಗೂ ಹೋಗುತ್ತದೆ. ದಿವಾನ್ ಕಚೇರಿಯಲ್ಲಾದ ತೀರ್ಮಾನವೇ ಅಂತಿಮವೆಂದು ಎಲ್ಲರೂ ಒಪ್ಪಿಕೊಳ್ಳಬೇಕಾಗಿತ್ತು.

ಇದೇ ಅಪ್ಪಣೆಯಲ್ಲಿ ನ್ಯಾಯ ತೀರ್ಮಾನದ ಸ್ವರೂಪದ ಬಗೆಗೂ ಹೇಳಲಾಗಿದೆ. ದೂರು ಬಂದ ತಕ್ಷಣ ಸಂಬಂಧಿಸಿದ ಅಧಿಕಾರಿ ನ್ಯಾಯಾನ್ಯಾಯ ತಿಳಿದಂಥ ನಾಲ್ವರು ಹಿರಿಯರನ್ನು ಕರೆಯಿಸುತ್ತಾರೆ. ಅವರನ್ನು ಸಾಕ್ಷಿಯಾಗಿಟ್ಟುಕೊಂಡು ಸಮಸ್ಯೆಯ ಚರ್ಚೆ ನಡೆಸಬೇಕು. ಸೇರಿದಂಥ ನಾಲ್ವರಲ್ಲಿ ಇಬ್ಬರು ಆಪಾದಿತನ ಪರವಾಗಿಯೂ, ಮತ್ತಿಬ್ಬರು ದೂರುತಂದವನ ಪರವಾಗಿಯೂ ವಾದಮಾಡಬೇಕು. ಎರಡೂ ಕಡೆಯ ವಾದವಿವಾದಗಳನ್ನು ಆಲಿಸಿದ ಅಧಿಕಾರಿಯು ಆದರ ಮೇಲಿನಿಂದ ತನ್ನ ತೀರ್ಮಾನವನ್ನು ಸಾರಬೇಕು. ಇಲ್ಲಿ ಸೇರಿದ ನಾಲ್ಕು ಜನರೂ ವಕೀಲರ ಕೆಲಸವನ್ನೇ ಮಾಡುತ್ತಾರೆ.

ದಿವಾನ್ ಕಚೇರಿಯಲ್ಲಿ ಸಮಸ್ಯೆಯನ್ನು ಇತ್ಯರ್ಥಪಡಿಸುವಾಗ ಐದು ಜನ ಪಂಚಾಯತಿದಾರರ ಆಗತ್ಯವಿತ್ತು. ಅಪರಾಧಿಗಳು ಪಂಚಾಯತಿ ಕಟ್ಟೆಯಲ್ಲಿ ಯಾವ ಕಾರಣಕ್ಕೂ ಕುಳಿತುಕೊಳ್ಳುವಂತಿರಲಿಲ್ಲ. ಬದಲಾಗಿ ನಿಂತೇ ಇರಬೇಕಾಗಿತ್ತು. ಅಪರಾಧಿಯು ತಪ್ಪಿತಸ್ಥನಲ್ಲವೆಂದು ತೀರ್ಮಾನವಾದ ಬಳಿಕವಷ್ಟೇ ಕುಳಿತುಕೊಳ್ಳಬಹುದಿತ್ತು.

ತಪ್ಪು ಮಾಡಿದವರಿಗೆ ವಿಧಿಸಲಾಗುವ ಶಿಕ್ಷೆಯ ಬಗೆಗೆ ಹುಕುಂನಾಮೆಯಲ್ಲಿ ಅಲ್ಲಲ್ಲಿ ಮಾಹಿತಿಗಳಿವೆ. 20ನೇ ಅಪ್ಪಣೆಯಲ್ಲಿ ಈ ರೀತಿ ಇದೆ. "....ಎರಡೂ ಜನವನ್ನು ಕರಿಸಿ ಯಾವನು ಜಾಸ್ತಿಯಿಂದಾ ಬಯಿದು ಇದ್ದಾನೋ ಅವನಿಗೆ ಬಯಿಸಿಕೊಂಡವನಿಂದಾ ಒಂದಕ್ಕೆ ಎರಡರ ಪ್ರಕಾರ ಬಯಿಸಿಬಿಡುವುದು...." ಹೊಡೆದಾಟವಾಗಿದ್ದರೆ 'ಒಂದಕ್ಕೆ ಎರಡರಂತೆ ಪೆಟ್ಟು ತಿಂದವನು ಪೆಟ್ಟುಕೊಟ್ಟವನಿಗೆ ಪುನಃ ಹೊಡೆಯುವುದು'. ಕಳವು ಮಾಡಿ ಸಿಕ್ಕಿಬಿದ್ದವನು ತಾನು ಕದ್ದ ವಸ್ತುವಿನ ಒಂದೂವರೆ

ಪಟ್ಟು ಬೆಲೆಯನ್ನು ಪಂಚಾಯತಿದಾರರಿಗೆ ಒಪ್ಪಿಸಬೇಕಾಗಿತ್ತು. 16ನೇ ಅಪ್ಪಣೆಯಲ್ಲಿ 'ಬೈದಾಡುವವರನ್ನು ಹಿಡಿದೆಳೆತಂದು ಅವರ ದವಡೆಗೆ ಐದೇಟು ಹೊಡೆದು ಕಚೇರಿಯಿಂದ ಹೊರಗೆ ದೂಡಿಸಿಬಿಡುವುದು' ಎಂಬುದಾಗಿ ಬರೆದಿದೆ.

ಹುಕುಂ ನಾಮೆಯಲ್ಲಿರುವ ಈ ಶಿಕ್ಷಾ ಪದ್ಧತಿಯು ಪರಂಪರಾಗತವಾಗಿ ಬಂದಿದ್ದ ಕ್ರಮಾವಳಿಗಳನ್ನೇ ಆಧರಿಸಿದೆ. ರಾಜದ್ರೋಹಕ್ಕೆ ಕಠಿಣ ಶಿಕ್ಷೆ ವಿಧಿಸುತ್ತಿದ್ದ ಹಾಗೇ ಊರು ಬಿಟ್ಟು ಹೋಗುವ ರೈತರಿಗೂ ಕೂಡಾ ಕಠಿಣ ಶಿಕ್ಷೆಯನ್ನೇ ವಿಧಿಸಲಾಗುತ್ತಿತ್ತು. ಬಹುಷಃ ಕೊಡಗಿನ ರಾಜರು ತಮ್ಮ ರಾಜ್ಯದಿಂದ ರೈತರು ಹೊರಗಡೆ ಹೋಗದಂತೆ ತಡೆಯುವುದರಲ್ಲಿ ಅಗ್ರಮಾನ್ಯರಾಗಿದ್ದಂತೆ ತೋರುತ್ತದೆ.

2·9: ಆರ್ಥಿಕ ವಿಚಾರಗಳು:

2.9.1: ಕಂದಾಯ: ಹುಕುಂ ನಾಮೆಯಲ್ಲಿ ಭೂಕಂದಾಯದ ಬಗ್ಗೆ ಅತ್ಯಂತ ಎಚ್ಚರಿಕೆಯಿಂದ ವಿವರಗಳನ್ನು ಬರೆಯಲಾಗಿದೆ. 3ನೆಯ ಅಪ್ಪಣೆಯಲ್ಲಿ ಕಂದಾಯ ನಿಗದಿ ಮಾಡುವುದರ ಬಗ್ಗೆ 11ನೇ ಅಪ್ಪಣೆಯಲ್ಲಿ ಕಂದಾಯದಲ್ಲಿ ತೋರಿದ ರಿಯಾಯಿತಿಗಳ ಬಗ್ಗೆ ಮಾಹಿತಿಗಳಿವೆ.

ಲಿಂಗರಾಜನ ಕಾಲದಲ್ಲಿ ನೂರುಬಟ್ಟಿ ಬತ್ತ ಬೆಳೆಸುವ ಭೂಮಿಗೆ ಎರಡೂವರೆ ವರಹಾಗಳನ್ನು ಕಂದಾಯವಾಗಿ ವಿಧಿಸಲಾಗುತ್ತಿತ್ತು. ಆದರೆ ಹೊಸದಾಗಿ ಸಾಗುವಳಿ ಮಾಡುವ ಭೂಮಿಯಲ್ಲಿ ಅಷ್ಟೊಂದು ಬೆಳೆ ಬರುತ್ತಿರಲಿಲ್ಲವಾದುದರಿಂದ ಈ ತೆರಿಗೆಯಲ್ಲಿ ರಿಯಾಯಿತಿ ತೋರುತ್ತಿದ್ದರು. ಇದರಿಂದಾಗಿ ಕೃಷಿ ಕೆಲಸಗಳತ್ತ ಹೊಸ ರೈತರನ್ನು ಆಕರ್ಷಿಸುವುದಕ್ಕೂ, ಭತ್ತದ ಉತ್ಪಾದನೆಯಲ್ಲಿ ಹೆಚ್ಚಳವನ್ನು ಸಾಧಿಸುವುದಕ್ಕೂ ಸಾಧ್ಯವಾಗಿರಬಹುದು. ಹನ್ನೊಂದನೇ ಅಪ್ಪಣೆಯ ಪ್ರಕಾರ ರಿಯಾಯಿತಿ ಈ ಕೆಳಗಿನಂತೆ ಇತ್ತು—

ಐದುವರುಷ ಪಾಳುಬಿದ್ದ ಭೂಮಿಯನ್ನು ರೈತರಿಗೆ ಹೊಸದಾಗಿ ಬೇಸಾಯಕ್ಕೆಂದು ಕೊಟ್ಟರೆ—

ಮೊದಲನೇ ವರ್ಷ	—	ಕಾಲುಗಂದಾಯ
ಎರಡನೇ ವರ್ಷ	—	ಅರ್ಧಗಂದಾಯ
ಮೂರನೇ ವರ್ಷ	—	ಮುಕ್ಕಾಲುಗಂದಾಯ
ನಾಲ್ಕನೇ ವರ್ಷ	—	ನಿಜಗಂದಾಯ ಎಂದರೆ, ನೂರು ಬಟ್ಟಿ ಭೂಮಿಗೆ ಎರಡೂವರೆ ವರಹಾ ಕಂದಾಯ

ಹತ್ತರಿಂದ ಹದಿನೈದು ವರುಷ ಪಾಳುಬಿದ್ದ ಭೂಮಿಗೆ—

ಒಂದನೇ ವರ್ಷ	—	ಕಂದಾಯ ಇಲ್ಲ
ಎರಡನೇ ವರ್ಷ	—	ಕಾಲುಗಂದಾಯ

ಮೂರನೇ ವರ್ಷ — ಅರ್ಧಗಂದಾಯ
ನಾಲ್ಕನೇ ವರ್ಷ — ಮುಕ್ಕಾಲುಗಂದಾಯ
ಐದನೇ ವರ್ಷ — ನಿಜಗಂದಾಯ (ಪೂರ್ತಿ ಕಂದಾಯ)

ಹದಿನೈದರಿಂದ ಇಪ್ಪತ್ತೈದು ವರ್ಷ ಪಾಳುಬಿದ್ದ ಭೂಮಿಗೆ —

ಒಂದನೇ ವರ್ಷ — ಕಂದಾಯ ಇಲ್ಲ
ಎರಡನೇ ವರ್ಷ — ಕಂದಾಯ ಇಲ್ಲ
ಮೂರನೇ ವರ್ಷ — ಅರ್ಧಗಂದಾಯ
ನಾಲ್ಕನೇ ವರ್ಷ — ಮುಕ್ಕಾಲುಗಂದಾಯ
ಐದನೇ ವರ್ಷ — ಪೂರ್ತಿ ಕಂದಾಯ

ಇಪ್ಪತ್ತೈದು ವರ್ಷದಿಂದ ಮೂವತ್ತು ವರ್ಷದವರೆಗೆ ಪಾಳುಬಿದ್ದ ಭೂಮಿಗೆ —

ಮೊದಲ ಮೂರು ವರ್ಷ — ಕಂದಾಯ ಇಲ್ಲ
ನಾಲ್ಕನೇ ವರ್ಷ — ಅರ್ಧ ಕಂದಾಯ
ಐದನೇ ವರ್ಷ — ಮುಕ್ಕಾಲು ಕಂದಾಯ
ಆರನೇ ವರ್ಷ — ಪೂರ್ತಿ ಕಂದಾಯ

ಮುವತ್ತೈದರಿಂದ ಐವತ್ತು ವರ್ಷದವರೆಗೆ—

ಮೊದಲ ನಾಲ್ಕು ವರ್ಷ — ಕಂದಾಯ ಇಲ್ಲ
ಐದನೇ ವರ್ಷ — ಅರ್ಧಕಂದಾಯ
ಆರನೇ ವರ್ಷ — ಮುಕ್ಕಾಲು ಕಂದಾಯ
ಏಳನೇ ವರ್ಷ — ಪೂರ್ತಿ ಕಂದಾಯ

ಐವತ್ತಕ್ಕಿಂತ ಹೆಚ್ಚುವರ್ಷ ಪಾಳುಬಿದ್ದ ಭೂಮಿಗೆ —

ಮೊದಲ ಐದುವರುಷ — ಕಂದಾಯ ಇಲ್ಲ
ಆರನೇ ವರುಷ — ಅರೆ ಕಂದಾಯ
ಏಳನೇ ವರುಷ — ಮುಕ್ಕಾಲು ಕಂದಾಯ
ಎಂಟನೇ ವರುಷ — ಪೂರ್ತಿ ಕಂದಾಯ

ಪಾಳುಬಿದ್ದ ಭೂಮಿಗೆ ಕಂದಾಯದಲ್ಲಿ ಈ ರೀತಿಯ ವಿನಾಯಿತಿ ಇದ್ದರೆ, ಗುಡ್ಡೆಯನ್ನು ಕಡಿದು ಹೊಸದಾಗಿ ಭೂಮಿ ಮಾಡಿದ ರೈತರಿಗೆ ಇನ್ನಷ್ಟು ವಿನಾಯಿತಿ ಇತ್ತು. ಅವರು ಗದ್ದೆ ಮಾಡಿದ ಮೊದಲ ಎಂಟುವರ್ಷಗಳವರೆಗೆ ಕಂದಾಯ ಕಟ್ಟಬೇಕಾಗಿರಲಿಲ್ಲ. ಅನಂತರದ ಕಂದಾಯ ವಿವರ ಈ ಕೆಳಗಿನಂತಿದೆ.

ಒಂಬತ್ತನೇ ವರ್ಷ	—	ಕಾಲುಗಂದಾಯ
ಹತ್ತನೇ ವರ್ಷ	—	ಅರ್ಧ ಕಂದಾಯ
ಹನ್ನೊಂದನೇ ವರ್ಷ	—	ಮುಕ್ಕಾಲು ಕಂದಾಯ
ಹನ್ನೆರಡನೇ ವರ್ಷ	—	ಪೂರ್ತಿ ಕಂದಾಯ

ಭತ್ತ ಕೃಷಿ ಮಾಡುತ್ತಿದ್ದ ರೈತರ ಜಮೀನನ್ನು ಲಿಂಗರಾಜನು ಹೊಸದಾಗಿ ಅಳತೆ ಮಾಡಿಸಿದ್ದಾನೆ. ಇಂಥ ಅಳತೆಯು ಕೋಲಿಗೆ ಆತ 'ಲಿಂಗರಾಜೇಂದ್ರನ ಗಜ' ಎಂಬ ಹೊಸ ಹೆಸರನ್ನು ಇಟ್ಟುಕೊಂಡಿದ್ದ. ರಾಜನ ವೈಯಕ್ತಿಕತೆಯು ಛಾಪು ನಾಡಿನ ಕಣಕಣದಲ್ಲೂ ಬಿದ್ದಂತೆ ತೋರುತ್ತದೆ. ಸಾಮ್ರಾಜ್ಯವನ್ನು ರಾಜನು ತನ್ನ ಖಾಸಗೀ ಆಸ್ತಿಯೆಂದೇ ಪರಿಗಣಿಸಿದಾಗ ಈ ವಿಧದ ಬೆಳವಣಿಗೆಗಳು ಸಹಜವಾಗಿ ಕಂಡು ಬರುತ್ತವೆ.[12]

ಮೂರನೆಯ ಅಪ್ಪಣೆಯಲ್ಲಿ ರೈತರು ತಮ್ಮ ಒಟ್ಟು ಉತ್ಪತ್ತಿಯ ಒಂದು ಭಾಗ ವನ್ನು ಅರಮನೆಗೆ ಕೊಟ್ಟರೆ ಸಾಕೆಂದು ಹೇಳಲಾಗಿದೆ. ಜೊತೆಗೆ ಇದು ಧರ್ಮ ಶಾಸ್ತ್ರದಲ್ಲಿ ಹೇಳಿರುವುದಕ್ಕಿಂತ ತುಂಬಾ ಕಡಿಮೆ ಎಂದೂ ರಾಜನು ತಿಳಿಸಿದ್ದಾನೆ. ಇಲ್ಲಿನ ಮಾತುಗಳು 'ಭಟ್ಟಗ್ರಿೀ ಗಳ್ದೆ ಒಡ್ಡಲಿ ಆ ಪತ್ತೊಂದು ವಿಟ್ಟಾರಕರ್' ಎಂಬ ಹಲ್ಮಿಡಿ ಶಾಸನದ ಚರಮ ವಾಕ್ಯವನ್ನು ನೆನಪಿಗೆ ತರಿಸುತ್ತದೆ.

ಪಿತ್ರಾರ್ಜಿತ ಆಸ್ತಿಯಲ್ಲಿ ವಾಸಿಸುತ್ತಿರುವ ರೈತರಿಗೆ ಕೂಡ ಹಿಂದಿನದೇ ರೀತಿಯ ಕಂದಾಯವನ್ನು ವಿಧಿಸಲಾಗುತ್ತಿತ್ತು. ಕಂದಾಯ ತೆರಲು ತಪ್ಪಿದರೆ, ಅರ್ಧ ವರಹಾ ಜುಲ್ಮಾನೆ ಸೇರಿಸಿ ಒಟ್ಟು ಮೂರು ವರಹಗಳನ್ನು ಅಂಥವರಿಂದ ವಸೂಲಿ ಮಾಡ ಲಾಗುತಿತ್ತು. ಉಂಬಳಿ ಸಿಕ್ಕಿದ ಭೂಮಿಯಲ್ಲಿ ವಾಸಿಸುವ ರೈತರು ಕಂದಾಯ ತೆರಬೇಕಾಗಿರಲಿಲ್ಲ. ಬದಲಾಗಿ ಅರಮನೆಗೆ 'ಉಂಬಳಿ ಕಾಣಿಕೆ' ಎಂದು ಹಣವನ್ನು ಕೊಡಬೇಕಾಗಿತ್ತು. ಆದರೆ ಅರಮನೆಗೆ ಅತ್ಯಂತ ಆಪ್ತರಾಗಿದ್ದ ಮಂದಿಗೆ ಮಾತ್ರ ಅರ್ಧವರಹಾ ತೆರಿಗೆ ವಿನಾಯಿತಿ ದೊರೆಯುತ್ತಿತ್ತು. ರಾಜನಿಗೆ ಅತ್ಯಂತ ನಿಷ್ಠೆಯಿಂದ ಇದ್ದವನು ಕಾಲು ವರಹವನ್ನು ಕಾಣಿಕೆಯಾಗಿ ಅರಮನೆಗೆ ಕೊಡಬೇಕಾಗಿತ್ತು. ರಾಜನ ಪ್ರಾಣ ಸ್ನೇಹಿತರಾಗಿರುವವರು ಒಂದು ರೂಪಾಯಿಯನ್ನು ಅರಮನೆಗೆ ಕಾಣಿಕೆಯಾಗಿ ಕೊಟ್ಟರೆ ಸಾಕು. ಹೀಗೆ ಕಂದಾಯದಲ್ಲಿ, ಕಾಣಿಕೆಯಲ್ಲಿ ವಿನಾಯಿತಿ ನೀಡುವ ಮೂಲಕ ರಾಜ ಜನರ ಸಖ್ಯವನ್ನು ಬೆಳೆಸಲು ಯತ್ನಿಸುತ್ತಿದ್ದನು.

ಭೂಕಂದಾಯವನ್ನು ಬತ್ತದ ರೂಪದಲ್ಲಿಯೂ ಸಂಗ್ರಹಿಸಲಾಗುತ್ತಿತ್ತು. ಹಾಗೆ ಸಂಗ್ರಹಿಸಿದ ಬತ್ತವನ್ನು ಪ್ರತಿ ಊರಿನಲ್ಲಿಯೂ ಉಗ್ರಾಣಗಳ ಮೂಲಕ ಸಂರಕ್ಷಿಸಡಲಾಗುತ್ತಿತ್ತು. ಆರನೆಯ ಮತ್ತು 30ನೆಯ ಅಪ್ಪಣೆಯ ಪ್ರಕಾರ 'ಮನೆ ತೆರಿಗೆ' ಮತ್ತು 'ಧೂಳೀ ಬತ್ತ ಕಂದಾಯ'ವನ್ನೂ, ತುಪ್ಪದ ಕಂದಾಯವನ್ನೂ ಜನರಿಂದ ವಸೂಲಿ ಮಾಡಲಾಗುತ್ತಿತ್ತು. ಅದರ ಪ್ರಕಾರ 25 ರಿಂದ 50 ಬಟ್ಟಿ ಬತ್ತ ಬೇಸಾಯ ಮಾಡುವವರು ಮುಕ್ಕಾಲು ಪಾಟಮಣ ಧೂಳೀ ಬತ್ತವನ್ನೂ, 50ರಿಂದ

75 ಬಟ್ಟಿ ಬತ್ತ ಬೇಸಾಯ ಮಾಡುವವರು ಒಂದೂವರೆ ಪಾಟಮಣ ಬತ್ತವನ್ನು ಅರಮನೆಗೆ ನೀಡಬೇಕಾಗಿತ್ತು.[13]

ತುಪ್ಪ ಸಂಗ್ರಹಕ್ಕೂ ಭೂಮಿಯನ್ನೇ ಮಾನದಂಡವನ್ನಾಗಿ ಬಳಸಿಕೊಳ್ಳಲಾಗಿದೆ. ಅದರ ವಿವರ ಈ ಕೆಳಗಿನಂತೆ ಇದೆ—

25 ಬಟ್ಟಿ ಭೂಮಿ ಸಾಗುವಳಿ ಮಾಡುವವರು	—	ಕಾಲು ಪಾಟಮಾನ
50 ,,	—	ಅರ್ಧ ಪಾಟಮಾನ
75 ,,	—	ಮುಕ್ಕಾಲು ಪಾಟಮಾನ
100 ,,	—	ಒಂದು ಪಾಟಮಾನ

ಹೀಗೆ ಮುಂದೆ ಪ್ರತಿ 25 ಬಟ್ಟಿ ಭೂಮಿಗೆ ಕಾಲು ಪಾಟಮಾನ ತುಪ್ಪದಂತೆ, ಅರಮನೆಗೆ ಒಪ್ಪಿಸಬೇಕಾಗಿತ್ತು.

ಬತ್ತ ಬೇಸಾಯ ಮಾಡದೆ, ಬೇರೆ ಬೇರೆ ವೃತ್ತಿಗಳಲ್ಲಿ ತಮ್ಮನ್ನು ತೊಡಗಿಸಿಕೊಂಡಿದ್ದ ಜನವರ್ಗವೂ ಕಂದಾಯ ತೆರಬೇಕಾಗಿತ್ತು. ಈ ವೃತ್ತಿ ತೆರಿಗೆಯ ಬಗೆಗೆ 25ನೇ ಅಪ್ಪಣೆಯಲ್ಲಿ ವಿವರಗಳಿವೆ. ಬೇರೆಬೇರೆ ಜಾತಿಯವರು ತೆರಬೇಕಾದ ಕಂದಾಯ ಇಂತಿದೆ—

1. ಕುಂಬಾರರು (ಪ್ರತಿಯೊಂದು ಕುಳಕ್ಕೆ)—ಚಕ್ರಗಾಣಿಕೆಯಾಗಿ 3 ಕಂಟೀರಾಯಿ ಹಣ, ನಾಮಗಾಣಿಕೆಯಾಗಿ ಅರ್ಧ ಕಂಟೀರಾಯಿ ಹಣ ಮತ್ತು ಇತರ 3 ಕಂಟೀರಾಯಿ ಹಣ, ಹೀಗೆ ಒಟ್ಟು ಆರೂವರೆ ಕಂಟೀರಾಯಿ ಹಣ[14]
2. ಅಗಸರು—3 ಕಂಟೀರಾಯಿ ಹಣವನ್ನು ಉಡಿಗಾಣಿಕೆಯಾಗಿ ಕೊಡಬೇಕು.
3. ಕುರುಬರು—ಒಂದು ಕಂಟೀರಾಯಿ ಹಣ,
4. ಉಪ್ಪಾರರು—ನಾಲ್ಕು ಕಂಟೀರಾಯಿ ಹಣ,
5. ಆಯಿರಿಗಳು—ಕುಲುಮೆಗೆ ವಿಧಿಸಿದ್ದು, 3 ಕಂಟೀರಾಯಿ ಹಣ,
6. ಅಕ್ಕಸಾಲಿಗಳಿಗೆ—ಕಲ್ಲುಗಾಣಿಕೆ ಮೂರು ಕಂಟೀರಾಯಿ ಹಣ,
7. ದೇವಾಂಗದವರಿಗೆ—ಮಗ್ಗಕ್ಕೆ 3 ಕಂಟೀರಾಯಿ ಸೇರಿ ಒಟ್ಟು ಏಳು ಕಂಟೀರಾಯಿ,
8. ಕೊತ್ತೇರರು—ಏಳೂವರೆ ಕಂಟೀರಾಯಿ ಹಣ,
9. ಕಟ್ಟಿಗರು—ಒಂದು ಕಂಟೀರಾಯಿ ಹಣ,
10. ವಡ್ಡರು—ಒಂದು ಕಂಟೀರಾಯಿ ಹಣ,
11. ಕಣಿಯರು—ಒಂದು ಕಂಟೀರಾಯಿ ಹಣ,

12.	ದಾಸರು—ಶನಿವಾರ ಸೇವೆಗೆ	:	ಒಂದು ಕಂಟೆರಾಯಿ
	—ಹರಿಸೇವೆಗೆ	:	ಒಂದು ಕಂಟೆರಾಯಿ
	—ಹೊಸಮನೆ ಪ್ರವೇಶ	:	ಒಂದು ಕಂಟೆರಾಯಿ
	—ಮದುವೆಗೆ	:	ಒಂದು ಕಂಟೆರಾಯಿ
	—ಮಗುಜನನವಾದರೆ	:	ಒಂದು ತಂಗ ಹಣ
	—ಸತ್ತರೆ	:	ಒಂದು ತಂಗ ಹಣ
	—ಋತುಗಾಣಿಕೆ	:	ಒಂದು ಕಂಟೆರಾಯಿ

ಹೀಗೆ ಒಟ್ಟು ಐದು ಕಂಟೆರಾಯಿ ಹಣ ಮತ್ತು ಎರಡು ತಂಗ ಹಣ.

13. ಗೌಳಿಗಳು—ನಾಲ್ಕು ಕಂಟೆರಾಯಿ ಹಣ,
14. ಮೇದರು—ಒಂದು ಕಂಟೆರಾಯಿ ಹಣ,
15. ಬಡಗ ಹೊಲೆಯರು—ಮನೆಗಾಣಿಕೆ : ಒಂದು ತಂಗ ಹಣ
16. ಕೆಂಬಟ್ಟಿ ಹೊಲೆಯರು—ಮನೆಗಾಣಿಕೆ : ಬೆಳಿಹಣ ಒಂದು
17. ಮಾದಿಗರು—ಒಂದು ಕಂಟೆರಾಯಿ ಹಣ,
18. ಮಲೆಕುಡಿಯರು—ಮನೆಗಾಣಿಕೆ : ಒಂದು ಕಂಟೆರಾಯಿ ಹಣ,
19. ಮಾರಿ ಹೊಲೆಯರು—ಮನೆಗಾಣಿಕೆ, ಬೆಳಿಹಣ ಒಂದು.

ಪ್ರತಿ ಜಾತಿಯವರ ಉತ್ಪಾದನಾ ವಿಧಾನಗಳನ್ನು ಅಭ್ಯಸಿಸಿ ಈ ಕಂದಾಯವನ್ನು ವಿಧಿಸಿದ್ದು ನಮಗೆ ಸ್ಪಷ್ಟವಾಗುತ್ತದೆ.

ಕಂದಾಯ ವಸೂಲಾತಿಗೆ ಕೂಡಾ ನಿರ್ದಿಷ್ಟ ದಿನಗಳಿದ್ದುವು. ನಾಲ್ಕನೇ ಅಪ್ಪಣೆಯಲ್ಲಿ ಇದರ ಬಗ್ಗೆ ವಿವರಗಳಿವೆ. ಜ್ಯೇಷ್ಠ, ಆಷಾಢ, ಶ್ರಾವಣ ಮತ್ತು ಭಾದ್ರಪದ ಮಾಸಗಳಲ್ಲಿ ರೈತರು ನಾಟಿ ಕೆಲಸದಲ್ಲಿ ಮಗ್ನರಾಗಿರುವುದರಿಂದ ಆ ಕಾಲದಲ್ಲಿ ಕಂದಾಯ ಎತ್ತುವಂತಿಲ್ಲ. ಆಶ್ವೀಜ, ಕಾರ್ತಿಕ, ಮಾರ್ಗಶಿರ ಮತ್ತು ಪುಷ್ಯ ತಿಂಗಳಿನಲ್ಲಿ ಬೆಳೆ ಬೆಳೆದು ಕಟಾವಿಗೆ ಸಿದ್ಧವಾಗಿರುತ್ತದೆ. ಈ ತಿಂಗಳುಗಳಲ್ಲಿಯೂ ಕಂದಾಯ ಎತ್ತುವಂತಿಲ್ಲ. ಮುಂದೆ ಮಾಘ, ಫಾಲ್ಗುಣ, ಚೈತ್ರ, ವೈಶಾಖಗಳಲ್ಲಿ (ಅಂದರೆ ಫೆಬ್ರವರಿ, ಮಾರ್ಚಿ, ಏಪ್ರಿಲ್, ಮತ್ತು ಮೇ ತಿಂಗಳುಗಳಲ್ಲಿ) ರೈತರಿಂದ ಕಂದಾಯ ವಸೂಲಾತಿ ಮಾಡಬಹುದೆಂದು ನಾಮೆಯಲ್ಲಿ ಹೇಳಲಾಗಿದೆ. ಈ ವಸೂಲಾತಿಯಲ್ಲೂ ಎರಡು ಹಂತಗಳಿವೆ—

1. ಕಾರ್ತಿಕ ಮಾಸದಲ್ಲಿ, ಸಂಬಂಧಿಸಿದ ಅಧಿಕಾರಿಗಳು ಸ್ಥಳಕ್ಕೆ ಭೇಟಿನೀಡಿ, ಬೆಳೆಗಳನ್ನು ಪರಿಶೀಲಿಸಿ, ಕಂದಾಯ ನಿಗದಿಮಾಡಿ ರೈತರಿಗೆ ತಿಳಿಸುವುದು ಮೊದಲನೇ ಹಂತ.

2. ಮಾಘಮಾಸದಿಂದ ವೈಶಾಖದವರೆಗೆ ನಾಲ್ಕು ತಿಂಗಳಿನಲ್ಲಿ, ನಾಲ್ಕು ಕಂತುಗಳಲ್ಲಿ ಕಂದಾಯದ ಹಣ ವಸೂಲು ಮಾಡುವುದು ಎರಡನೇ ಹಂತ.

ಕಂದಾಯ ವಸೂಲಾತಿಯ ನಾಲ್ಕು ಹಂತಗಳನ್ನು ಕೂಡಾ ಒಂದೇ ಕಾಗದದಲ್ಲಿ ಬರೆದು, ವಸೂಲಾತಿ ನಡೆದಂತೆ ಅದರಲ್ಲಿ ಗುರುತು ಹಾಕಿಕೊಳ್ಳುವ ಕೆಲಸ ಶ್ಯಾನುಭೋಗನದ್ದು. ತನ್ನ ಕೈಗುರುತು ಹಾಕಿ ಶ್ಯಾನುಭೋಗ ಇಲ್ಲವೇ ಪಾರುಪತ್ಯಗಾರನು ಈ ಕಾಗದಗಳನ್ನು ರೈತನ ಮನೆಯಲ್ಲಿಯೇ ಇಟ್ಟಿರುತ್ತಿದ್ದ. ಕಂದಾಯ ವಸೂಲಾತಿಯು ಯಾವ ಹಂತದಲ್ಲೂ ಗೊಂದಲವಾಗದಂತೆ ನೋಡಿಕೊಳ್ಳಬೇಕೆಂದು ರಾಜನ ಕಟ್ಟಾಜ್ಞೆಯಾಗಿತ್ತು. ಎಲ್ಲಾ ಕಂದಾಯ ವಸೂಲಾದ ಅನಂತರ ಆ ಬಗ್ಗೆ ರೈತನಿಗೆ ಮರೆಯುವೆ ರಶೀದಿಯನ್ನು ಕೊಡಲಾಗುತಿತ್ತು. (14ನೇ ಅಪ್ಪಣೆ)

2.9.2 : ವ್ಯವಹಾರ : ಜನರು ವ್ಯಾವಹಾರಿಕ ಬದುಕಿನಲ್ಲಿ ಉಪಯೋಗಿಸುವ ಅನೇಕ ವಸ್ತುಗಳ ಬಗೆಗೆ ನಾಮೆಯಲ್ಲಿ ಕೆಲವು ವಿವರಗಳಿವೆ.

ಅಳತೆಗಳ ಸಂದರ್ಭದಲ್ಲಿ ಅರಮನೆಯ ಮುದ್ರೆ ಇರುವ ಕೋಲು ಮತ್ತು ಭಾರದ ಕಲ್ಲನ್ನೇ ವ್ಯಾಪಾರಿಗಳು ಬಳಸತಕ್ಕದ್ದೆಂದು ಹೇಳಲಾಗಿದೆ. 34 ನೇ ಅಪ್ಪಣೆಯ ಪ್ರಕಾರ ಯಾವ ವ್ಯಾಪಾರಿಯೂ ಊರೊಳಗೆ ಬಂದು ವ್ಯವಹಾರ ನಡೆಸ ಕೂಡದು. ಇಡೀ ಸಂಸ್ಥಾನದಲ್ಲಿ ಸೋಮವಾರ ಪೇಟೆ ಮತ್ತು ವೀರರಾಜೇಂದ್ರ ಪೇಟೆಗಳು ವ್ಯವಹಾರದ ಕೇಂದ್ರಗಳಾಗಿದ್ದುವು.

ರೈತರಿಂದ ಏನನ್ನಾದರೂ ಅರಮನೆಗೆ ಖರೀದಿಸುವಾಗ ದಿವಾನ್ ಕಚೇರಿ ನಿರ್ಧರಿಸಿದ ಬೆಲೆಯನ್ನೇ ರೈತರು ಒಪ್ಪಿಕೊಳ್ಳಬೇಕಾಗಿತ್ತು. ಮಾರುಕಟ್ಟೆಯಲ್ಲಿನ ಬೆಲೆಯ ಏರಿಳಿತಗಳು ರಾಜಾಸ್ಥಾನದ ನಿರ್ಣಯವನ್ನೇ ಅವಲಂಬಿಸಿಕೊಂಡಿದ್ದುವು. ಈ ಮಟ್ಟಿಗೆ ಇಡೀ ರಾಜ್ಯದಲ್ಲಿ ಏಕರೂಪದ ನಿಯಮಾವಳಿಗಳೂ ಜಾರಿಯಲ್ಲಿದ್ದುವು. ಉದಾಹರಣೆಗೆ, ಅರಮನೆಗೆ ಬತ್ತ ಬೇಕಾದರೆ, ರೈತರಿಗೆ ಐದುಬಟ್ಟಿ ಬತ್ತಕ್ಕೆ ಒಂದು ಕಾಲು ವರಹಾ ಹಣವನ್ನು ಪ್ರತಿಯಾಗಿ ನೀಡುತ್ತಿದ್ದರು. ಬತ್ತವನ್ನು ಖರೀದಿಸುವಾಗಲೂ ರೈತನ ಒಟ್ಟು ಉತ್ಪಾದನೆಯನ್ನು ಗಮನದಲ್ಲಿಟ್ಟುಕೊಳ್ಳುತ್ತಿದ್ದರು. 100 ಬಟ್ಟಿ ಬತ್ತ ಬೆಳೆಸುವಾತ ಅರಮನೆಗೆ ಐದು ಬಟ್ಟಿ ಬತ್ತವನ್ನು ಮಾರಬಹುದಿತ್ತು. ಅಕ್ಕಿಯಾದರೆ, ಒಂದು ಕಂಟೀರಾಯಿ ಹಣಕ್ಕೆ 8 ರಿಂದ 13 ಸೇರು ದೊರಕುತ್ತಿತ್ತು.

ಏಲಕ್ಕಿಯನ್ನು ರೈತರು ಅರಮನೆಗೆ ತಂದು ಒಪ್ಪಿಸಬೇಕಾಗಿತ್ತು. ಅದಕ್ಕೆ ಅರಮನೆ ನಿಗದಿಮಾಡಿದ ದರ ಈ ಕೆಳಗಿನಂತಿದೆ—

ಉತ್ತಮ ತರದ ಏಲಕ್ಕಿ—ಪಾಟಮಣ ಒಂದಕ್ಕೆ 20 ರೂಪಾಯಿ
ಮಧ್ಯಮ ದರ್ಜೆಯ ಏಲಕ್ಕಿ—ಪಾಟಮಣ ಒಂದಕ್ಕೆ 17 ರೂಪಾಯಿ
ಕನಿಷ್ಠ ದರ್ಜೆಯದ್ದು—ಪಾಟಮಣ ಒಂದಕ್ಕೆ 12–15 ರೂಪಾಯಿ

ಈ ದರಕ್ಕೆ ರೈತನು ಒಪ್ಪದಿದ್ದಲ್ಲಿ ಏಲಕ್ಕಿ ಮಲೆಯ ಮೇಲೆ ಅವನಿಗಿರುವ ಅಧಿಕಾರವನ್ನು ರದ್ದುಪಡಿಸಲಾಗುತ್ತಿತ್ತು.

ಜೇಷ್ಠ ಮಾಸದಲ್ಲಿ ರೈತರು ಕಾಡಿನಿಂದ ಜೇನನ್ನು ಸಂಗ್ರಹಿಸಿ ಅರಮನೆಗೆ ಒಪ್ಪಿಸಬೇಕಾಗಿತ್ತು. ಜೇನಿನ ಮೇಣಕ್ಕೆ ಅರಮನೆ ನಿಗದಿ ಪಡಿಸಿದ ದರ ಇಂತಿದೆ—

ಉತ್ತಮ ದರ್ಜೆಯ ಮೇಣ—ಒಂದು ಪಾಟಮಣ ಕಲ್ಲಿಗೆ 8 ರೂಪಾಯಿ

ರಾಶಿ ಮೇಣಕ್ಕೆ—ಒಂದು ಪಾಟಮಣ ಕಲ್ಲಿಗೆ 7 ರೂಪಾಯಿ

ರಾಜನ ಸಂಸ್ಥಾನದಿಂದ ಅಕ್ಕಿ ಮತ್ತು ಭತ್ತವನ್ನು ಹೊರಗಡೆಗೆ ಸಾಗಿಸಬೇಕಾದರೆ ಅಧಿಕಾರಿಗಳಿಗೆ ಸುಂಕ ತೆರಬೇಕಿತ್ತು. ಸುಂಕ ತೆತ್ತವರಿಗೆ ಅಧಿಕಾರಿಗಳು ರಹದಾರಿ ಪತ್ರವನ್ನು ಕೊಡುತ್ತಿದ್ದರು. ಹೆಂಗಸರು ಮತ್ತು ದನಕರುಗಳಿಗೆ ಹೊರಗಡೆ ಹೋಗಲು ಅನುಮತಿ ಇರಲಿಲ್ಲ. ಅವರಿಗೆ ರಹದಾರಿ ಪತ್ರವನ್ನೂ ನೀಡುತ್ತಿರಲಿಲ್ಲ. 35ನೇ ಅಪ್ಪಣೆಯಲ್ಲಿ ಸಿಗುವ ವಿವರಗಳು ಬೇರೆ ರೀತಿಯವು. ಸುಳ್ಯ ಪರಿಸರದಿಂದ ಕೊಡಗಿಗೆ ಬಂದು ನೆಲಸಿದ ಜನರಲ್ಲಿ ಹಲವರಿಗೆ ಸುಳ್ಯ ಪರಿಸರದಲ್ಲಿ ಒಂದು ಮನೆ ಮತ್ತು ಕೊಡಗಿನಲ್ಲಿ ಒಂದು ಮನೆ—ಹೀಗೆ ಎರಡು ಮನೆಗಳಿದ್ದುವು. ಆದರೆ ಈ ಎರಡು ಮನೆಗಳ ಮಧ್ಯೆ ಜನರು ಸರಾಗವಾಗಿ ಓಡಾಡದಂತೆ ಕಾನೂನು ಮಾಡಲಾಗಿತ್ತು. ಇದಕ್ಕಾಗಿ ಈ ಎರಡೂ ಪ್ರದೇಶಗಳ ಮಧ್ಯಭಾಗದಲ್ಲಿರುವ ತೊಡಿಕಾನದಲ್ಲಿ ಸುಂಕದ ಕಟ್ಟೆಯನ್ನೂ ಮಾಡಲಾಗಿತ್ತು. ಸೌದೆ, ತರಲು ಓಡಾಡುವ ಜನಗಳು ಮತ್ತು ದನಕರುಗಳಿಗೆ ಸುಂಕದಿಂದ ವಿನಾಯತಿಯಿತ್ತು. ಸೌದೆ, ಸೊಪ್ಪು, ತರಿಯುವ ಕತ್ತಿಗಳನ್ನು ಬಿಟ್ಟರೆ ಬೇರೆ ವಿಧದ ಕತ್ತಿಗಳನ್ನು ಕೊಂಡೊಯ್ಯಲು ಸುಂಕದ ಅಧಿಕಾರಿಗಳು ಬಿಡುತ್ತಿರಲಿಲ್ಲ.

ಅರಮನೆಯಿಂದ ಸಾಲ ಪಡೆದರೆ ಅದಕ್ಕೆ ಬಡ್ಡಿಯನ್ನು ಕೊಡಲಾಗುತ್ತಿತ್ತು. ಈ ಬಡ್ಡಿ ದರದ ನಿಷ್ಕರ್ಷೆ ಕೂಡಾ ದಿವಾನಕಚೇರಿಯಲ್ಲಿಯೇ ಆಗುತ್ತಿತ್ತು. 10 ವರಹಾಗಳಿಗೆ, ಒಂದು ತಿಂಗಳ ಅವಧಿಯ ಸಾಲಕ್ಕೆ ಒಂದು ಹಣ ಬಡ್ಡಿಯನ್ನು ನಿಗದಿ ಮಾಡಲಾಗಿತ್ತು. ಧಾನ್ಯವಾದರೆ 100 ಬಟ್ಟಿಗೆ, ಒಂದು ತಿಂಗಳ ಅವಧಿಯಲ್ಲಿ ಒಂದು ಬಟ್ಟಿಯನ್ನು ಬಡ್ಡಿಯಾಗಿ ಕೊಡಬೇಕಾಗಿತ್ತು. ಇವುಗಳನ್ನೆಲ್ಲ ಕಾಗದಗಳಲ್ಲಿ ದಾಖಲು ಮಾಡುತ್ತಿದ್ದರು.

3 – ಸಮಾರೋಪ

ಹೀಗೆ ಹುಕುಂ ನಾಮೆಯು ಲಿಂಗರಾಜೇಂದ್ರನ ಕಾಲದ ಆಡಳಿತಯಂತ್ರದ ಬಗೆಗೆ, ಆ ಕಾಲದ ಸಾಮಾಜಿಕ, ಸಾಂಸ್ಕೃತಿಕ, ಧಾರ್ಮಿಕ, ಆರ್ಥಿಕ ವಿಚಾರಗಳ ಬಗೆಗೆ ಬಹು ಮುಖ್ಯವಾದ ವಿವರಗಳನ್ನು ಒದಗಿಸಿಕೊಡುತ್ತದೆ. ವೀರರಾಜೇಂದ್ರನ ಬದುಕಿನ ಕೊನೆಯ ಕಾಲದಲ್ಲಿ ಶಿಥಿಲವಾಗಿದ್ದ ರಾಜ್ಯವ್ಯವಸ್ಥೆಯನ್ನು ಬಲಪಡಿಸುವುದಕ್ಕೋಸ್ಕರ ಲಿಂಗರಾಜೇಂದ್ರನು ಅತ್ಯಂತ ಕಠಿಣವಾಗಿಯೇ 'ಹುಕುಂ'ಗಳನ್ನು ಜಾರಿಗೆ ತರಬೇಕಾಗಿತ್ತು. ಮೇಲಾಗಿ ದಿನೇ ದಿನೇ ಪ್ರಬಲಿಸುತ್ತಿದ್ದ ಬ್ರಿಟಿಷರ ಭಯವೂ ಅವನಿಗಿತ್ತು. ಇವೆರಡನ್ನೂ ಸರಿಮಾಡಿಕೊಳ್ಳುವ ಪ್ರಯತ್ನದಲ್ಲಿ ಅರಸನು ಇಡಿಯದಾದ

ಸಮೂಹವನ್ನೇ ಖಾಸಗಿ ಆಸ್ತಿಯಾಗಿ ಗಣಿಸಿ, ಅದರ ಬಗೆಗೆ ನಿರ್ಣಾಯಕ ಮಾತುಗಳನ್ನಾಡುತ್ತಾ ಹೋಗಿದ್ದಾನೆ. ಜನರನ್ನು ತನ್ನ ತೆಕ್ಕೆಗೆ ಒಗ್ಗಿಸಿಕೊಳ್ಳುವ ಪ್ರಯತ್ನವನ್ನು ನಾಮೆಯಲ್ಲಿನ ಒಂದೊಂದು ಅಪ್ಪಣೆಯೂ ವಿವರಿಸಿ ಹೇಳುತ್ತದೆ. ಜನರ ದುಡಿಮೆಯನ್ನು 'ಸೇವೆ'ಯೆಂದು ಪರಿಗಣಿಸುವುದು, ಕಂದಾಯವನ್ನು ಏರಿಸಿ, ನಿಷ್ಠರಾಗಿದ್ದವರಿಗೆ ರಿಯಾಯಿತಿ ನೀಡುವುದು, ಭೂಮಿಯನ್ನು ಉಂಬಳಿಕೊಟ್ಟು, 'ಉಂಬಳಿಗಾಣಿಕೆ' ಪಡೆಯುವುದು ರಾಜ ಅನುಸರಿಸಿದ ತಂತ್ರಗಳಲ್ಲಿ ಕೆಲವು. 19ನೇ ಶತಮಾನದ ಪೂರ್ವಾರ್ಧದಲ್ಲಿನ ಈ ಚಿತ್ರ, ಸಮಗ್ರ ಭಾರತದ ಆ ಕಾಲದ ರಾಜಕೀಯ ಸ್ಥಿತಿಯ ಚಿತ್ರಣವೂ ಹೌದು.

ನಾಮೆಯಲ್ಲಿ ಬಳಸಲಾದ ಒರಟಾದ ಗದ್ಯವು ಕೂಡಾ ಪ್ರಭುತ್ವವು ನಿಯಂತ್ರಿಸ ಬಯಸಿದ ಸಂಸ್ಕೃತಿಯ ಅಸಹಾಯಕ ಚಿತ್ರವನ್ನೇ ದಾಖಲುಮಾಡಿದೆ. ರಮ್ಯತ್ವವನ್ನು ಕಳೆಕೊಂಡ ಭಾಷೆಗೂ ಆ ಕಾಲದ ರಾಜಕೀಯ ಸ್ವರೂಪಕ್ಕೂ ಗಾಢ ಸಂಬಂಧವಿದೆ. ವಸ್ತುನಿಷ್ಠವಾದ ಗದ್ಯದ ಉಗಮವು ಸಾಧ್ಯವಾದದ್ದು ವಸ್ತುನಿಷ್ಠವಾದ ರಾಜಾಜ್ಞೆಯ ಗರ್ಭದೊಳಗಿನಿಂದಲೇ ಎಂಬುದನ್ನು ಗಮನಿಸಬೇಕು. ಆಳುವವರ್ಗ ಯಾವ ಮೋಸವು ಇಲ್ಲದೆ ಅಪ್ಪಣೆಗಳನ್ನು ನೇಯುತ್ತಾ ಬರುವಾಗ, ಅಷ್ಟೇ ಖಚಿತವಾಗಿ ಗದ್ಯ ಸೃಷ್ಟಿಯಾಗುತ್ತಾ ಬಂದಿದೆ.

ಅಡಿಟಿಪ್ಪಣಿಗಳು

1. ಈ ಮಲೆಗಳೆಲ್ಲವೂ ಈಗ ಏಲಕ್ಕಿ ಮಲೆಗಳಾಗಿವೆ. ಕಾಡುತ್ಪತ್ತಿಗಳೆಲ್ಲ ನಷ್ಟವಾಗಿ ಭೂಮಾಲಿಕರ ಹಿಡಿತದಲ್ಲಿ ಖಾಸಗೀ ಆಸ್ತಿಗಳಾಗಿ ಕಾಡುಗಳು ತೆಳುವಾಗಿವೆ.

2. ವಿವರಗಳಿಗೆ ನೋಡಿರಿ: ಪುರುಷೋತ್ತಮ, ಬಿ., 1985.

3. ಕೊಡಗಿನಾದ್ಯಂತ ನಿಬಿಡವಾಗಿ ಬೆಳೆದಿರುವ ಬಿದಿರಿನ ಬಗ್ಗೆ ಮತ್ತು ಬಿದಿರಕ್ಕಿಯ ಬಗೆಗೆ ನಾಮೆಯಲ್ಲಿ ಯಾವ ಉಲ್ಲೇಖವೂ ಇಲ್ಲದಿರುವುದು ಆಶ್ಚರ್ಯಕರವಾಗಿದೆ.

4. ಸುಳ್ಯಪರಿಸರದಲ್ಲಿ 1800ರ ಸುಮಾರಿನಲ್ಲಿ ರಾಗಿಯೇ ಪ್ರಧಾನ ಆಹಾರವಾಗಿತ್ತೆಂದು ಊಹಿಸಲು ಅವಕಾಶವಿದೆ. ವಿವರಗಳಿಗೆ ನೋಡಿರಿ: ಪುರುಷೋತ್ತಮ, ಬಿ., 1985 ಪು. 60-80

5. ಸುಮಾರು ಒಂದೂವರೆ ಎಕ್ರೆ ಜಾಗದಲ್ಲಿ ಗದ್ದೆ ಬೇಸಾಯ ಮಾಡುವವನು.

6. 1982–83ರಲ್ಲಿ ನಾನು ಕೊಡಗಿನಲ್ಲಿ ಕ್ಷೇತ್ರಕಾರ್ಯದ ನಿಮಿತ್ತ ಸುತ್ತಾಡಿದಾಗ ಬಲ್ಲ ಮಾವಟಿಯಲ್ಲಿ ದೊರೆತ ಮಾಹಿತಿ. ಶನಿವಾರಸಂತೆಯ ಸುತ್ತುಮುತ್ತಲೂ ಇಂಥ ಮಾಹಿತಿಗಳು ಸಿಕ್ಕಿವೆ.

7. ಕೊಡಗಿನ ಕಾಫಿ ಮತ್ತು ಏಲಕ್ಕಿ ತೋಟಗಳಲ್ಲಿ ದುಡಿಯುತ್ತಿರುವ ಹೆಂಗಸರು ಭೂಮಾಲಕರ ಲೈಂಗಿಕ ಆಕ್ರಮಣಕ್ಕೆ ತುತ್ತಾಗುತ್ತಿರುವುದು ಪೂರ್ತಿಯಾಗಿ ಇಂದಿಗೂ ನಿಂತಿಲ್ಲ. ಆದರೆ ಹಿಂದಿನಂತೆ ಬಹಿರಂಗವಾಗಿ ಇಲ್ಲ.

8. ಗೌಡ ಪದವು 'ಗ್ರಾಮಕೂಟ' ಎಂಬ ಸಂಸ್ಕೃತ ಪದದಿಂದ ಸಿದ್ಧಿಸಿದೆ. (ಸಂ) ಗ್ರಾಮ ಕೂಟ→(ಪ್ರಾಕೃತ) ಗಾಮಊಡ, ಗಾಮಉಡ→(ಕನ್ನಡ) ಗಾಮುಂಡ→ಗಾವುಂಡ→ಗೌಂಡ→ ಗೌಡ. ವಿವರಗಳಿಗೆ ನೋಡಿರಿ : ಪುರುಷೋತ್ತಮ, ಬಿ., 1985, ಪು. 5–15.

9. ವೀರರಾಜನ ಕಾಲದಲ್ಲಿ ಹೊಂಬಾಳೆ ನಾಯಕನು ಪ್ರಧಾನ ದಿವಾನನಾಗಿದ್ದ. ಲಿಂಗ ರಾಜನ ಕಾಲದಲ್ಲಿ ಸೋದೆ ಬಸವಲಿಂಗನು ಮುಖ್ಯ ದಿವಾನನಾಗಿ ಕೆಲಸ ಮಾಡುತ್ತಿದ್ದ. (ಕೃಷ್ಣಯ್ಯ 1974 ; 334-361)

10. ರಾಜನ ಅಪ್ಪಣೆಯ ಹೆಸರಿನಲ್ಲಿ ಪಾರುಪತ್ಯಗಾರರು ತಮ್ಮ ಸ್ವಾರ್ಥಕ್ಕಾಗಿ ಹೆಚ್ಚಿಗೆ ಕಂದಾಯ ವಸೂಲಿ ಮಾಡುತ್ತಿದ್ದರೆಂಬುದೂ ಇಲ್ಲಿ ಧ್ವನಿತವಾದ ವಿಚಾರ.

11. ಕೊಡಗಿಗೆ ಗೌಡರು ವಲಸೆ ಬರಲು ಕಾರಣವೇನೆಂಬುದಕ್ಕೆ ಮತ್ತು ವಲಸೆ ಬಂದ ಕಾಲದ ವಿವರಗಳಿಗೆ ನೋಡಿರಿ : ಪುರುಷೋತ್ತಮ, ಬಿ., 1985 ; 1–60

12. ಲಿಂಗರಾಜೇಂದ್ರನ ಗಜದಲ್ಲಿ ಭೂಮಿಯನ್ನು ಅಳೆಸಿ, ಭೂಮಿಯ ಗುಣಕ್ಕೆ ಅನುಗುಣ ವಾಗಿ ಕಂದಾಯವನ್ನು ನಿಗದಿಪಡಿಸಿ, ಅದನ್ನು ಪುಸ್ತಕಗಳಲ್ಲಿ ದಾಖಲು ಪಡಿಸಲಾಗಿತ್ತು. ಇಂಥ ಪುಸ್ತಕ ಗಳು ಕೈಬರಹದಲ್ಲಿದ್ದು ಅವು 'ಲಿಂಗರಾಜನ ಶಿಸ್ತೆ'ಂದು ಜನಪ್ರಿಯವಾಗಿವೆ. ಮಡಿಕೇರಿಯ ಅರಮನೆ ಯಲ್ಲಿರುವ ವಸ್ತುಸಂಗ್ರಹಾಲಯದಲ್ಲಿ ಇವುಗಳನ್ನು ನಾವು ಕಾಣಬಹುದು.

13. ಒಂದು ಪಾಟಮಣವೆಂದರೆ 14½ ಕಿಲೋ ತೂಕವಾಗುತ್ತದೆ. ಮಂಗಳೂರು ವಿಶ್ವ ವಿದ್ಯಾನಿಲಯದ ಕನ್ನಡ ವಿಭಾಗದ ವಸ್ತುಸಂಗ್ರಹಾಲಯದಲ್ಲಿ ಪಾಟಮಣದ ಕಲ್ಲಿದೆ.

14. ಮೈಸೂರಿನ ಕಂಠೀರವನರಸನು ತನ್ನ ಹೆಸರಿನಲ್ಲಿ 'ಕಂಠೀರಾಯಿ ಹಣ'ವನ್ನು ಮುದ್ರಿಸಿ ದ್ದಾನೆ. ವಿವರಗಳಿಗೆ ನೋಡಿರಿ : ಶ್ರೀಕಂಠಶಾಸ್ತ್ರಿ, 1960 ; ಪು. 350–51.

ಗ್ರಂಥಋಣ

1. ಕುಶಾಲಪ್ಪಗೌಡ, ಕೆ. ಮತ್ತು ಚಿನ್ನಪ್ಪಗೌಡ, ಕೆ. "ದಕ್ಷಿಣ ಕನ್ನಡ ಜಿಲ್ಲೆಯ ಕೈಫಿಯತ್ತು ಗಳು", ಉಜಿರೆ : ಶ್ರೀ ಧರ್ಮಸ್ಥಳ ಮಂಜುನಾಥೇಶ್ವರ ಪುಸ್ತಕ ಪ್ರಕಾಶನ ಮಾಲೆ ; 1983.

2. ಕೃಷ್ಣಯ್ಯ, ಡಿ. ಎನ್. "ಕೊಡಗಿನ ಇತಿಹಾಸ", ಮೈಸೂರು : ಪ್ರಸಾರಾಂಗ, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು ; 1974.

3. ಪುರುಷೋತ್ತಮ, ಬಿ. "ಸುಳ್ಯ ಪರಿಸರದ ಗೌಡ ಜನಾಂಗ—ಒಂದು ಸಾಂಸ್ಕೃತಿಕ ಅಧ್ಯಯನ", ಮಂಗಳಗಂಗೋತ್ರಿ (ಮಂಗಳೂರು ವಿಶ್ವವಿದ್ಯಾನಿಲಯಕ್ಕೆ ಒಪ್ಪಿಸಿದ ಪಿಎಚ್.ಡಿ. ನಿಬಂಧ—ಅಪ್ರಕಟಿತ) : 1985.

4. ಶಂಕರನಾರಾಯಣ ಭಟ್ಟ, ಕೆ. ಎದುರ್ಕಳ ; "ಶ್ರೀ ಕಾವೇರಿ ವೈಭವ", ಭಾಗಮಂಡಲ : ಶ್ರೀ ರಾಮಕೃಷ್ಣ ಪ್ರಕಾಶನ ; 1978.

5. ಶರ್ಮ, ತಿ.ತಾ ; "ಚರಿತ್ರಿಕ ದಾಖಲೆಗಳು", ಬೆಂಗಳೂರು : ಕನ್ನಡ ಸಾಹಿತ್ಯ ಪರಿಷತ್ತು, 1971.

6. Bhat P. Mariappa (Ed)., "Tulu-English Dictionary", Madras : University of Madras ; 1967.

7. Kiskapatrick E.M. (Ed)., "Chambers 20th Century Dictionary", New Delhi : A.P.P. Limited., 1983.

8. Kittel., "Kannada English Dictionary", Madras : University of Madras., 1973.

9. Richter G., "Gazetteer of Coorg", Delhi : B. R. Publishing Corporation : 1984.

10. Satyan Sri B. N., "Mysore State Gazetteer-Coorg district", Bangalore : The director of Printing Stationary and Publications ; 1965.

11. Srinivasa M.N., "Religion and Society among the Coorgs of South India", Bombay : Media Promoters and Publishers, 1952.

ಲಿಂಗರಾಜೇಂದ್ರ ಪಟ್ಟಕ್ಕೆ ಬಂದನಂತರ ಆಡಳಿತ ಸಂಬಂಧವಾಗಿ ಇವನು ಹೊರಡಿಸಿದ ಹುಕುಂ ನಾಮೆಯಲ್ಲಿರುವ 52 ಆಜ್ಞೆಗಳು ಒಬ್ಬ ತಜ್ಞ ಆಡಳಿತಗಾರನ ಬುದ್ಧಿವಂತಿಕೆಯನ್ನು ಪ್ರದರ್ಶಿಸುತ್ತವೆ. ಅರಮನೆಯ ಕೇಂದ್ರ ಕಚೇರಿಯ ನೌಕರರಿಗೆ, ನಾಡುಗಳ ಅಧಿಕಾರಿಗಳಿಗೆ, ಶಾನುಭೋಗರಿಗೆ, ಕಂದಾಯ ವಸೂಲಿ ಸಂಬಂಧ ಮುಂತಾಗಿ ಇವನು ನೀಡಿದ ಸೂಚನೆಗಳು ಮನನೀಯವಾಗಿವೆ. ಭೂಮಿಯ ಉತ್ಪನ್ನದ ಹತ್ತನೆಯ ಒಂದಂಶವನ್ನಷ್ಟೇ ಇವನು ಕಂದಾಯವಾಗಿ ಸಂಗ್ರಹಿಸುತ್ತಿದ್ದ. ಕಂದಾಯವನ್ನು ವರ್ಷಕ್ಕೆ ನಾಲ್ಕು ಕಂತುಗಳಲ್ಲಿ ಸಲ್ಲಿಸಲು ಅವಕಾಶವಿತ್ತಲ್ಲದೆ ಕಂದಾಯ ಸಂದ ಬಗ್ಗೆ ರಶೀತಿ ನೀಡಬೇಕೆಂದು ಅಧಿಕಾರಿಗಳಿಗೆ ಕಟ್ಟಪ್ಪಣೆ ನೀಡಿದ್ದ. ಈ ಹುಕುಂಗಳಲ್ಲಿ ನ್ಯಾಯ ತೀರ್ಮಾನ, ಜಾತಿಕಟ್ಟಳೆಗಳ ರಕ್ಷಣೆ, ವ್ಯಾಪಾರ ವ್ಯವಹಾರಗಳಿಗೆ ಸಂಬಂಧಿಸಿದ ಸೂಚನೆಗಳೂ ಇವೆ.

ಕರ್ನಾಟಕ: ಕನ್ನಡ ವಿಷಯ ವಿಶ್ವಕೋಶ, ಪು. ೧೨೯೦

ಎಚ್. ಎಂ. ನಾಗರಾಜರಾವ್

ಕರ್ನಾಟಕದ ಪ್ರಾಕೃತ ಶಾಸನಗಳು*

"ಯಾವುದೇ ಪ್ರದೇಶದ ಭಾಷೆ, ಸಾಹಿತ್ಯ, ಸಂಸ್ಕೃತಿ, ಇತಿಹಾಸಗಳ ಅಧ್ಯಯನಕ್ಕೆ ಶಾಸನಗಳು ಅಮೂಲ್ಯ ಆಕರಗಳು."[1] ಭಾರತೀಯರಿಗೆ ಇತಿಹಾಸವೇ ಇಲ್ಲವೆಂಬ ಕೆಲವು ವಿದೇಶೀ ವಿದ್ವಾಂಸರ ಟೀಕೆಯನ್ನು ಹುಸಿಗೊಳಿಸುವಲ್ಲಿ ಪ್ರಧಾನ ಪಾತ್ರ ವಹಿಸಿದ್ದು ಶಾಸನಗಳೇ. "ಸುದೈವದಿಂದ ನಮ್ಮ ನಾಡಿನ ಶಾಸನ ಸಂಪತ್ತು ಹೇರಳವಾಗಿದೆ."[2] ನಮ್ಮ ದೇಶದ ಅತಿ ಪ್ರಾಚೀನ ಶಾಸನಗಳೆಲ್ಲ ಪ್ರಾಕೃತ ಭಾಷೆಯಲ್ಲಿ ರಚಿತವಾದವು. ಗುಪ್ತರ ಕಾಲದವರೆಗೂ ಭಾರತದ ಎಲ್ಲ ಸ್ಥಳಗಳಲ್ಲೂ ಶಾಸನಗಳಿಗೆ ಬಹುಮಟ್ಟಿಗೆ ಪ್ರಾಕೃತ ಭಾಷೆಯನ್ನು ಬಳಸಿರುವುದನ್ನು ಕಾಣುತ್ತೇವೆ.

ಕರ್ನಾಟಕದಲ್ಲಿ ಕ್ರಿ.ಪೂ. ಮೂರನೆಯ ಶತಮಾನದಿಂದ ಸುಮಾರು ಕ್ರಿ.ಶ. ನಾಲ್ಕನೆಯ ಶತಮಾನದ ಆದಿಯವರೆಗೆ ಪ್ರಾಕೃತವು ಶಾಸನ ಭಾಷೆಯಾಗಿ ಬಳಕೆಯಾಗಿರುವುದು ಕಂಡುಬರುತ್ತದೆ. "ಇದರಿಂದ ಕನ್ನಡ ಭಾಷೆಯ ಪ್ರಾರಂಭ ಕಾಲದಲ್ಲಿ ಪ್ರಾಕೃತವು ಮಹತ್ತ್ವದ ಪರಿಣಾಮ ಬೀರಿರಬೇಕೆಂಬ ಭಾವನೆ ಸಹಜ."[3] ಆದರೆ ಲಭ್ಯ ಶಾಸನಸಾಮಗ್ರಿ ಅತ್ಯಲ್ಪ ಪ್ರಮಾಣದ್ದಾಗಿರುವುದರಿಂದ ಈ ಕುರಿತು ನಿರ್ಣಯಿಸುವುದು ಕಷ್ಟವೇ.

"ಒಟ್ಟು ಭಾರತೀಯ ಶಾಸನ ಪ್ರಪಂಚಕ್ಕೆ ಅಶೋಕನ ಶಾಸನಗಳು ಉಗಮವಾರುವಂತೆ ಕರ್ನಾಟಕ ಶಾಸನವಾಹಿನಿಗೂ ಅವು ಮೂಲಸ್ರೋತವಾಗಿವೆ."[4] ಅಶೋಕನ ಶಾಸನಗಳ ಭಾಷೆ ಪ್ರಾಕೃತ ಮತ್ತು ಲಿಪಿ ಬ್ರಾಹ್ಮೀ. "....ರೂಪ ಮತ್ತು ಶೈಲಿ ಹಾಗೂ ಉದಾರವೂ ಶಾಶ್ವತವೂ ಆದ ಉಪದೇಶಗಳ ಸಲುವಾಗಿ ಸಾಹಿತ್ಯದ ನೆಲೆಗೇರಲು ಅರ್ಹ"ವಾಗಿರುವ ಈ ಶಾಸನಗಳು "ಉದಾರವಾದ ರಾಜನೊಬ್ಬನ ಆಶ್ರಯದಲ್ಲಿರುವ ಕಾವ್ಯಜೀವಿ ಶುಷ್ಕಪಂಡಿತ ಸ್ತುತಿಪಾಠಕನ ಒಳ್ಳೆ ಒಕ್ಕಣೆಯ ಉದ್ಗಾರಗಳಲ್ಲ."[5] ಶಾಂತಿ ಸಹಕಾರಗಳ ಸಂದೇಶವನ್ನು ಸಾರುವ ಅಶೋಕನ

---

* ಮೈಸೂರು ವಿಶ್ವವಿದ್ಯಾನಿಲಯದ ಜೈನಾಲಜಿ ವಿಭಾಗದವರು 1986 ಮಾರ್ಚ್‌ನಲ್ಲಿ ನಡೆಸಿದ ವಿಚಾರಗೋಷ್ಠಿಯಲ್ಲಿ ಮಂಡಿಸಲಾದ ಪ್ರಬಂಧ.

ಶಾಸನಗಳು ಪ್ರಪಂಚದ ಇತಿಹಾಸದಲ್ಲಿಯೇ ವಿಶಿಷ್ಟ ಸ್ಥಾನ ಪಡೆದಿವೆ. "ಕೆಲವು ಲೇಖಗಳ ರೂಪ, ಅವುಗಳ ಶೈಲಿ ಮತ್ತು ಅವುಗಳಲ್ಲಿಯ ಮಾನವೀಯ ವಿಚಾರ ಇವೆಲ್ಲ ಚಿರಂತನ ಬೆಲೆಯುಳ್ಳ ವಾಙ್ಮಯವೇ ಸರಿ."[6]

ಕರ್ನಾಟಕದಲ್ಲಿ ಅಶೋಕನ ಶಾಸನಗಳು ಚಿತ್ರದುರ್ಗ ಜಿಲ್ಲೆಯ ಬ್ರಹ್ಮಗಿರಿ, ಸಿದ್ದಾಪುರ ಹಾಗೂ ಜಟಂಗ ರಾಮೇಶ್ವರಗಳಲ್ಲಿ ಮತ್ತು ರಾಯಚೂರು ಜಿಲ್ಲೆಯ ಮಸ್ಕಿ, ಪಾಲ್ಕಿಗುಂಡು ಹಾಗೂ ಗವಿಮಠಗಳಲ್ಲಿ ಲಭ್ಯವಾಗಿವೆ. ಇತ್ತೀಚಿನ ವರ್ಷಗಳಲ್ಲಿ ಬಳ್ಳಾರಿ ಜಿಲ್ಲೆಯ ನಿಟ್ಟೂರು ಮತ್ತು ಉದೆಗೊಳ್ಳಂ ಎಂಬ ಸ್ಥಳಗಳಲ್ಲಿ ತಲಾ ಎರಡು ಶಾಸನಗಳು ದೊರೆತಿರುವುದು ಗಮನಾರ್ಹ; ಮಾತ್ರವಲ್ಲ, ಆ ಭಾಗದಲ್ಲಿ ಸರ್ವೇಕ್ಷಣ ಕಾರ್ಯ ಇನ್ನೂ ಸಮಗ್ರವಾಗಿ ನಡೆಯಬೇಕಾದ ಆವಶ್ಯಕತೆಯನ್ನು ಇದು ಎತ್ತಿ ತೋರಿಸುತ್ತದೆ.

ಕಳೆದ ಶತಮಾನದ ಮೂರನೆಯ ದಶಕದಲ್ಲಿಯೇ ಬ್ರಾಹ್ಮೀ ಶಾಸನಗಳನ್ನು ಓದಿ ಅವುಗಳ ಸಾರವನ್ನು ಅರಿಯುವುದು ಸಾಧ್ಯವಾದರೂ ಇವೆಲ್ಲವನ್ನು ಬರೆಯಿಸಿದ ದೇವಾನಾಂಪ್ರಿಯ ಪ್ರಿಯದರ್ಶಿ ಯಾರೆನ್ನುವುದು ಹಲವು ದಶಕಗಳ ಕಾಲ ನಿಗೂಢವಾಗಿಯೇ ಉಳಿಯಿತು. 1915ರಲ್ಲಿ ಮಸ್ಕಿ ಶಾಸನ ಅನ್ವೇಷಿತವಾಗಿ ಪಾಠ ಪ್ರಕಟವಾದಾಗ ಅದರಲ್ಲಿಯ 'ದೇವಾನಾಂಪಿಯಸ ಅಸೋಕಸ' ಎಂಬ ಭಾಗ ಈ ಒಗಟನ್ನು ಬಿಡಿಸಿಕೊಟ್ಟಿತು. ಮೌರ್ಯ ಸಾಮ್ರಾಟ ಅಶೋಕನೇ ಈ ಶಾಸನಗಳ ಕರ್ತೃವೆಂದು ತಿಳಿದುಬಂದಿತು. ಮುಂದೆ 1954ರಲ್ಲಿ ಮಧ್ಯ ಪ್ರದೇಶದ ಗುಜರ್ರಾ ಎಂಬಲ್ಲಿ ದೊರೆತ ಶಾಸನದಲ್ಲಿಯೂ ಅಶೋಕನ ಉಲ್ಲೇಖವಿದ್ದಿತು. ಇತ್ತೀಚೆಗೆ ನಿಟ್ಟೂರು ಮತ್ತು ಉದೆಗೊಳ್ಳಂಗಳಲ್ಲಿ ಅನ್ವೇಷಿತವಾದ ನಾಲ್ಕು ಶಾಸನಗಳಲ್ಲಿ ಮೂರರಲ್ಲಂತೂ ಅಶೋಕನ ಹೆಸರಿದೆ. ನಾಲ್ಕನೆಯ ಶಾಸನ ಸವೆದುಹೋಗಿದೆ; ಪ್ರಾಯಶಃ ಅದರಲ್ಲಿಯೂ ಅಶೋಕನ ಹೆಸರಿದ್ದಿರಬಹುದು. ಒಂದು ವೇಳೆ ಇದನ್ನು ಬಿಟ್ಟರೂ ಅಶೋಕನ ಹೆಸರಿರುವ ಐದು ಶಾಸನಗಳಲ್ಲಿ ನಾಲ್ಕು ಕರ್ನಾಟಕದಲ್ಲಿಯೇ ಇರುವುದು ಒಂದು ವಿಶೇಷ.

ಕಳಿಂಗದ ಯುದ್ಧದಲ್ಲಿ ಜಯ ಸಾಧಿಸಿದರೂ ಅಶೋಕನ ಮನಸ್ಸಿನಲ್ಲಿ ಮಹಾ ಕ್ರಾಂತಿಯೊಂದು ಘಟಿಸಿ ಆತನಲ್ಲಿ ಪರಿವರ್ತನೆಯನ್ನುಂಟುಮಾಡಿತು. ಆತನ ಆಧ್ಯಾತ್ಮಿಕ ಬದುಕಿನ ಸೌಧದ ಕೆಸರುಗಲ್ಲು ಈ ಯುದ್ಧ. ಶಾಂತಿಯ ಸಂದೇಶವನ್ನು ಬಲಿಷ್ಠ ಹಾಗೂ ಜಯಶಾಲಿ ಅರಸನೊಬ್ಬ ಸಾರುವುದಕ್ಕೂ ಕವಿಯೊಬ್ಬ ಕನಸು ಕಂಡು ಹಾಡುವುದಕ್ಕೂ ಅಥವಾ ಧಾರ್ಮಿಕ ಮುಖಂಡನೊಬ್ಬ ಉಪದೇಶಿಸುವುದಕ್ಕೂ ಇರುವ ವ್ಯತ್ಯಾಸವನ್ನು ನಾವು ಗಮನಿಸಬೇಕು. ಇಂದು ಹಾಗೆ ಹಾಡುವ ಕವಿಗಳು ಅಥವಾ ಉಪದೇಶಿಸುವ ಮುಖಂಡರೇನೋ ಇದ್ದಾರೆ; ಆದರೆ ಅಶೋಕನಂಥ ಆಡಳಿತಗಾರರೇ ಇಲ್ಲ ! ಅಶೋಕ ತನ್ನನ್ನೇ ಉದಾಹರಣೆಯಾಗಿರಿಸಿಕೊಳ್ಳುತ್ತ, ಧರ್ಮಮಾರ್ಗದಲ್ಲಿ ಕ್ರಮಿಸಬೇಕಾದ ದೂರವನ್ನು ಅರಿತುಕೊಳ್ಳುತ್ತ, ಜೀವನದ

ಮೌಲ್ಯಗಳನ್ನು ತನ್ನ ಪ್ರಜೆಗಳಿಗೆ ನೇರವಾಗಿ ಸರಳವಾಗಿ ತಿಳಿಸಿದ; ಮಾನವ ಕುಲಕ್ಕೊಂದು ನೀತಿಸಂಹಿತೆಯನ್ನು ರೂಪಿಸಿದ. "ಯುದ್ಧದ ರಾದ್ಧಾಂತದಲ್ಲೇ ಇನ್ನೂ ತೊಡಗಿರುವ ನಮಗೆ ಪ್ರಾಯಶಃ ಅಶೋಕನ ಆ ಮಾತುಗಳು ತುಂಬ ಅರ್ಥವತ್ತಾಗಿವೆ. ಅಶೋಕ ಬದಲಾಯಿಸಿದ. ಆದರೆ ಮಾನವೀಯ ಚೇತನ ಮಾತ್ರ ಕಳೆದ ಎರಡು ಸಾವಿರ ವರ್ಷಗಳ ಅಂತರದಲ್ಲಿ ಇನ್ನೂ ಅಧಃಪಾತಾಳಕ್ಕಿಳಿದಿದೆ."[7]

ಒಂದೆಡೆ ಅಶೋಕನೇ 'ಕಿಯಚು ಧಮ್ಮೇತಿ'—ಧರ್ಮ ಎಂದರೇನು ?—ಎಂದು ತನ್ನನ್ನೇ ಪ್ರಶ್ನಿಸಿಕೊಳ್ಳುತ್ತ 'ಅಪಾಸಿನವೆ, ಬಹುಕಯಾನೆ, ದಯಾ, ದಾನೆ, ಸಚೆ, ಶೋಚಯೆ'—ಪಾಪಭೀರುತೆ, ಸತ್ಕಾರ್ಯ, ಕಾರುಣ್ಯ, ಔದಾರ್ಯ, ಸತ್ಯ ಹಾಗೂ ಪರಿಶುದ್ಧ ನಡೆ—ಎಂಬ ಉತ್ತರವನ್ನು ಕಂಡುಕೊಂಡಿದ್ದಾನೆ. ಇಂಥ ಧರ್ಮ 'ಹಿದಲೋಕಿಕ-ಪಾಲಲೋಕಿಕ'—ಇಹಪರಗಳೆರಡಕ್ಕೂ ಸಲ್ಲುವುದೆನ್ನುವುದು ಆತನ ನಿಲುವು. ಅಶೋಕ ಯಾವುದೇ ಹೊಸ ಧರ್ಮವನ್ನು ನಿರೂಪಿಸಲಿಲ್ಲ; ಎಲ್ಲ ಮತಗಳನ್ನೂ ಸಮಾನ ಗೌರವದಿಂದ ಕಂಡ—'ದೇವಾನಾಂಪಿಯೆ ಪಿಯದಸಿ ರಾಜಾ ಸವ ಪಾಸಂಡಾನಿ ಪೂಜಯತಿ.'[8] ಆತನ ಶಾಸನಗಳೆಲ್ಲ ನಿಜಕ್ಕೂ ಧರ್ಮಲಿಪಿಗಳೇ.

ಬ್ರಹ್ಮಗಿರಿಯ ಶಾಸನ ಪಾಠದ ಈ ಭಾಗವನ್ನು ನೋಡಿ: "ದೇವಾನಾಂಪ್ರಿಯನು ಹೇಳುವನು: ತಾಯಿತಂದೆಯರಿಗೆ ಶುಶ್ರೂಷೆ ಮಾಡತಕ್ಕದ್ದು; ಹಾಗೆಯೇ ಗುರುಗಳಿಗೂ—ಪ್ರಜೆಗಳಲ್ಲಿ ದಯೆಯಿಡತಕ್ಕದ್ದು. ಸತ್ಯವನ್ನೇ ಆಡತಕ್ಕದ್ದು; ಇಂತಹ ಧರ್ಮಗುಣಗಳನ್ನೇ ಅವಲಂಬಿಸತಕ್ಕದ್ದು. ಶಿಷ್ಯರು ಗುರುಗಳನ್ನು ಗೌರವಿಸಬೇಕು. ಹಾಗೆಯೇ ಜ್ಞಾತಿಗಳನ್ನೂ. ಇದೇ ಪುರಾಣವಾದ ಪ್ರಕೃತಿ. ಇದು ದೀರ್ಘಾಯುಸ್ಸನ್ನು ಕೊಡುತ್ತದೆ. ಇದನ್ನೇ ಮಾಡತಕ್ಕದ್ದು. ಇದೇ ದೇವಾನಾಂಪ್ರಿಯನ ಧರ್ಮ. ಲಿಪಿಕಾರ ಚಪಡನಿಂದ ಬರೆಯಲ್ಪಟ್ಟದ್ದು."[9] ತೈತ್ತಿರೀಯ ಉಪನಿಷತ್ತಿನಲ್ಲಿ ಹೇಳಿರುವ 'ಮಾತೃದೇವೋ ಭವ ಪಿತೃದೇವೋ ಭವ' ಎಂಬ ಅಭಿಪ್ರಾಯವನ್ನೇ ಅಶೋಕನು ಪುರಾಣವಾದ ಧರ್ಮ ಎಂದು ಹೇಳುತ್ತಿರಬಹುದೆಂದು ನಾ. ಕಸ್ತೂರಿಯವರು ಭಾವಿಸುತ್ತಾರೆ.[10] ಅಶೋಕನ ಶಾಸನಗಳಲ್ಲಿ 'ಜಂಬೂದೀಪ'ದ ಉಲ್ಲೇಖವಿರುವುದೂ ಗಮನಾರ್ಹ.

ವಿವಿಧ ಸ್ಥಳಗಳಲ್ಲಿರುವ ಅಶೋಕನ ಶಾಸನಪಾಠಗಳಿಂದ ಅವು ಅಧಿಕೃತ ದಾಖಲೆಯೊಂದರ ಹಲವು ಪ್ರತಿಗಳೆನ್ನುವುದು ಸ್ಥಿರಪಡುವುದಾದರೂ ಸಣ್ಣಪುಟ್ಟ ಪದ ವ್ಯತ್ಯಾಸಗಳನ್ನು ಹೊರತುಪಡಿಸಿ, ವಾಕ್ಯಗಳಲ್ಲಿಯೇ ಬದಲಾವಣೆಗಳಿರುವುದೇಕೆ ಎಂಬ ಪ್ರಶ್ನೆ ಉದ್ಭವಿಸುತ್ತದೆ. ನಿಟ್ಟೂರು ಮತ್ತು ಉಡೆಗೊಳ್ಳಂನಂಥ ಪರಸ್ಪರ ಅನತಿ ದೂರದಲ್ಲಿರುವ ಗ್ರಾಮಗಳಲ್ಲಿನ ಶಾಸನಪಾಠಗಳಲ್ಲಿಯೂ ಇಂಥ ವ್ಯತ್ಯಾಸಗಳಿರುವುದೇಕೆ ? ಈ ಪ್ರಶ್ನೆಗೆ ಸೂಕ್ತ ಉತ್ತರವಿನ್ನೂ ಸಿಕ್ಕಿಲ್ಲ.

"ಅಶೋಕನ ಶಿಲಾಲೇಖಗಳನ್ನು ನಾವು ಭಾಷಾದೃಷ್ಟಿಯಿಂದ ಅಭ್ಯಾಸ ಮಾಡಿದರೆ ಅದರಲ್ಲಿ ಪಶ್ಚಿಮದೇಶದ ಮತ್ತು ಪೂರ್ವದೇಶದ ಸ್ಪಷ್ಟ ವ್ಯತ್ಯಾಸಗಳು

ಕಂಡುಬರುತ್ತವೆ. ಇದರ ಮೇಲಿಂದ ಒಂದು ಮಾತು ಸ್ಪಷ್ಟವಾಗುತ್ತದೆ. ಪ್ರಾಕೃತ ಭಾಷೆಯಲ್ಲಿ ಒಂದೇ ಕಾಲದಲ್ಲಿಯೂ ಸಹ ಪ್ರಾದೇಶಿಕ ಮತ್ತು ಉಪಭಾಷಿಕ ವ್ಯತ್ಯಾಸಗಳು ಪ್ರಚಲಿತವಾಗಿದ್ದುವು" ಎಂದು ಡಾ|| ಉಪಾಧ್ಯೆಯವರು ಹೇಳುತ್ತಾರೆ.[11] ಅಶೋಕನ ಶಾಸನಗಳ ಪ್ರಾಕೃತ ಭಾಷೆಯನ್ನು ಡಾ|| ಹುಲ್ಷ್ 'ಮಗಧನ್' ಎಂದು ಕರೆದಿದ್ದಾರೆ.[12] ಆದರೆ ಇದು ಮಾಗಧಿ ಅಥವಾ ಅರ್ಧಮಾಗಧಿಯಿಂದ ಭಿನ್ನವಾದುದೆನ್ನಲಾಗಿದೆ.

ಕ್ರಿ.ಶ. 450ರದ್ದೆಂದು ಹೇಳಲಾದ ಹಲ್ಮಿಡಿ ಶಾಸನವೇ ಸದ್ಯಕ್ಕೆ ಉಪಲಬ್ಧವಿರುವ ಪ್ರಾಚೀನತಮ ಕನ್ನಡ ಶಾಸನ. "ಆದರೆ ಕೆಲವರು ವಿದ್ವಾಂಸರು ಇನ್ನೂ ಪ್ರಾಚೀನವಾದ ಪ್ರಾಕೃತ ಮತ್ತು ಸಂಸ್ಕೃತ ಶಾಸನಗಳಿಂದಲೂ ಕೆಲವು ವಿದೇಶಿ ಮೂಲಗಳಿಂದಲೂ ಕನ್ನಡದ ಕೆಲವಾದರೂ ರೂಪಗಳನ್ನು ಪಡೆಯುವುದು ಸಾಧ್ಯವಿದೆಯೆಂದು ಅಭಿಪ್ರಾಯಪಡುತ್ತಾರೆ. ಅಶೋಕನ ಬ್ರಹ್ಮಗಿರಿ ಶಾಸನದಲ್ಲಿ (ಕ್ರಿ.ಪೂ. ಮೂರನೆಯ ಶತಮಾನ) ದೊರೆಯುವ 'ಇಸಿಲ' ಅಂಥ ಒಂದು ಶಬ್ದ. ಇಸಿಲ ಎನ್ನುವುದು ಈಗ ಕನ್ನಡ ಆಡುನುಡಿಯಾಗಿರುವ ಪ್ರದೇಶದೊಳಗೇ ಇದ್ದ ಒಂದು ಸ್ಥಳದ ಹೆಸರು.[13] ಕೆಲವರು ವಿದ್ವಾಂಸರು ಅದು ಚಿತ್ರದುರ್ಗ ಜಿಲ್ಲೆಯಲ್ಲಿರುವ ಸಿದ್ದಾಪುರ ಎಂಬುದಾಗಿ ಹೇಳುತ್ತಾರೆ. ಇಸಿಲ ಶಬ್ದವನ್ನು ಪ್ರಾಕೃತವೆಂದು ಹೇಳಿ ರಿಸಿ ಎಂಬ ಶಬ್ದದಿಂದ ನಿಷ್ಪನ್ನವಾಗಿದೆಯೆಂದು ಹೇಳುವುದು ರೂಢಿ. ಆದರೆ ಈ ನಿಷ್ಪತ್ತಿಯಲ್ಲಿ ಕೆಲವು ತೊಂದರೆಗಳಿವೆ. ಪ್ರೊ. ಡಿ.ಎಲ್. ನರಸಿಂಹಾಚಾರ್ಯರು (ಖಚಿತಕಾಲದ ಪ್ರಾಚೀನ ಕನ್ನಡ ಶಬ್ದ ಎಂಬ ತಮ್ಮ ಅಪ್ರಕಟಿತ ಲೇಖನದಲ್ಲಿ) ತಮಿಳಿನ ಎಯಿಲ್ ಎಂಬ ಶಬ್ದಕ್ಕೆ ಕೋಟೆ ಎಂಬ ಅರ್ಥವಿದ್ದು ಅದರ ಜ್ಞಾತಿ ಶಬ್ದವಾದ ಕನ್ನಡದ ಎಸಿಲ್ ಎಂಬ ಶಬ್ದವೇ ಆರ್ಯೀಕರಣಗೊಂಡು 'ಇಸಿಲ' ಎಂಬ ರೂಪ ತಾಳಿದೆ ಎಂದು ಪ್ರತಿಪಾದಿಸಿದ್ದಾರೆ." ಈ ಅಭಿಪ್ರಾಯ ಅಂಗೀಕೃತವಾದಲ್ಲಿ "ಎಸಿಲ್ ಎನ್ನುವುದು ವಿಶ್ವಾಸಾರ್ಹವಾದ ಮೊದಲ ಕನ್ನಡ ಪದಗಳಲ್ಲಿ ಒಂದೆಂದು ಹೇಳಬಹುದು.''[13a]

ಮೌರ್ಯರ ತರುವಾಯ ಸಾತವಾಹನರು ಕರ್ನಾಟಕದ ಕೆಲಪ್ರದೇಶಗಳನ್ನು ಆಳಿದರು. ಮ್ಯಾಕೆದೋನಿ ಶಾಸನೋಕ್ತ[14] ಸಿರಿಪುಳುಮಾವಿಯನ್ನು ವಾಸಿಠೀಪುತ ಪುಳುಮಾವಿ ಎಂದು ಗುರುತಿಸಲಾಗಿದೆ. ಬನವಾಸಿಯಲ್ಲಿ ಈಚೆಗೆ ಅನ್ವೇಷಿತವಾದ ಶಾಸನವು ಈ ಅರಸನ ಮಹಾದೇವಿಯ ಸ್ಮಾರಕಶಿಲೆ (ಛಾಆಪಥರ=ಛಾಯಾಪ್ರಸ್ತರ) ಎಂದು ತಿಳಿದುಬರುತ್ತದೆ.[15] ಪುಳುಮಾವಿ ದ್ರಾವಿಡ ಮೂಲದ ಶಬ್ದವೆಂದು ಭಾವಿಸಲಾಗಿದೆ.[16]

ಸಾತವಾಹನರ ಸಾಮಂತರಾದ ಚುಟುಕುಲದ ಸಾತಕಣ್ಣಿಗಳು ಬನವಾಸಿ ಪ್ರಾಂತದಲ್ಲಿ ಆಳುತ್ತಿದ್ದರು. ಹಾರೀತಿಪುತವಿಣ್ಹುಕಡ ಚುಟುಕುಲಾನಂದ ಸಾತಕಣ್ಣಿಯ ಮಳವಳ್ಳಿ ಶಾಸನದಿಂದ[17] ಅರಸನು 'ಮಳಪಳಿದೇವರ' ಭೋಗಕ್ಕಾಗಿ ಕೌಂಡಿನ್ಯಗೋತ್ರದ ಕೊಂಡಮಾನನೆಂಬ ಬ್ರಾಹ್ಮಣನಿಗೆ ಸಹಲಾಟವೀ ಎಂಬ ಗ್ರಾಮ

ವನ್ನು ಸರ್ವಪರಿಹಾರವಾಗಿ ಅಭಟಪ್ರವೇಶದ ಹಕ್ಕಿನೊಡನೆ ದಾನ ನೀಡುವಂತೆ ಮಹಾವಲ್ಲಭ ರಜ್ಜುಕನೆಂಬ ತನ್ನ ಅಧಿಕಾರಿಗೆ ಅನುಜ್ಞೆ ಮಾಡಿದನೆಂದು ತಿಳಿದು ಬರುತ್ತದೆ. ಬನವಾಸಿಯ ನಾಗ ಶಿಲ್ಪ ಶಾಸನ ಇದೇ ಅರಸನ ಮಗಳು ಸಿವಖದ ನಾಗಸಿರಿ[18] (ಶಿವಸ್ಕಂದ ನಾಗಶ್ರೀ)ಯು ನಾಗಪ್ರತಿಮೆ, ತಟಾಕ ಹಾಗೂ ವಿಹಾರ ಗಳನ್ನು ದಾನ ನೀಡಿದಳೆಂದು ತಿಳಿಸುತ್ತದೆ. ಈಕೆ ಮಹಾಭೋಜನೊಬ್ಬನ ಪತ್ನಿ ಹಾಗೂ ಶಾಸನದಲ್ಲಿ ಉಕ್ತನಾದ, ಆದರೆ ಹೆಸರು ನಮೂದಿಸಿರದ, ಯುವರಾಜನ ತಾಯಿ. ಸಂಜಯಂತಿ ಎಂದರೆ ಬನವಾಸಿಯ ದಮೋರಕನ ಶಿಷ್ಯನಾದ ನರ್ತಕ ನಾಗಪ್ರತಿಮೆಯನ್ನು ಮಾಡಿದವನು (ಸಂಜಯತಕಸ ಆಚರಿಸಯಸ ದಮೋಕಸ ಸಿಸೇನ ಣಟಕೇನ ನಾಗೊ ಕತೊ).

ಕ್ರಿ.ಶ. 3ನೆಯ ಶತಮಾನದ ಅಂತ್ಯ ಅಥವಾ ಕ್ರಿ.ಶ. 4ನೆಯ ಶತಮಾನದ ಆದಿಯದೆನ್ನಲಾದ ಪಲ್ಲವ ಶಿವಸ್ಕಂದವರ್ಮನ ಹಿರೇಹಡಗಲಿ ತಾಮ್ರಶಾಸನವು[19] ಕರ್ನಾಟಕದಲ್ಲಿನ ಏಕೈಕ ಪ್ರಾಕೃತ ತಾಮ್ರಶಾಸನ. ಅರಸನು ಸಾತಾಹನಿರಟ್ಠ (ಸಾತಾಹನಿರಾಷ್ಟ್ರ)ಕ್ಕೆ ಸೇರಿದ ಗ್ರಾಮವೊಂದನ್ನು ದಾನವಿತ್ತ ಸಂಗತಿ ಈ ತಾಮ್ರ ಶಾಸನದ ವಸ್ತು. ಸಾತಾಹನಿರಟ್ಠಕ್ಕೆ ಈಗಿನ ಬಳ್ಳಾರಿ ಪ್ರದೇಶ ಸೇರಿದ್ದಿತು. ಇದರಿಂದ ಈ ಭಾಗದಲ್ಲಿ ಪಲ್ಲವ ಪ್ರಭುತ್ವವಿದ್ದ ಅಂಶ ಸ್ಥಿರಪಡುತ್ತದೆ. ಮುಂದೆ ಪಲ್ಲವರನ್ನು ಸೋಲಿಸಿದ ಕದಂಬರು ಈ ಪ್ರದೇಶದ ಒಡೆಯರಾದರು.

ಮೇಲೆ ಹೇಳಿದ ಮಳವಳ್ಳಿ ಶಾಸನವಿರುವ ಕಂಬದ ಮೇಲೆಯೇ ಇರುವ ಇನ್ನೊಂದು ಶಾಸನ[20] ಕದಂಬ ಅರಸ ಶಿವಖದವಮ್ಮನ (ಶಿವಸ್ಕನ್ದವರ್ಮ) ಆಳ್ವಿಕೆಯ ಕಾಲಕ್ಕೆ ಸೇರಿದುದು. ವಿಣ್ಹುಕಡ ಚುಟುಕುಲಾನಂದ ಸಾತಕಣ್ಣಿಯು ನೀಡಿದ್ದ ದಾನ ಲುಪ್ತವಾಗಿದ್ದುದನ್ನು ಕದಂಬ ಅರಸನು "ಊರ್ಜಿತಗೊಳಿಸಿ, ಕೊಣ್ಡಮಾನ ಕುಲದ, ಕೌಂಡಿನ್ಯ ಗೋತ್ರಕ್ಕೆ ಸೇರಿದ, ಕೌಶಿಕೀ ಪುತ್ರ ನೆನಿಸಿದ ನಾಗದತ್ತನೆಂಬ ಬ್ರಾಹ್ಮಣನಿಗೆ ಗ್ರಾಮಗಳನ್ನು ಪುನರ್ದತ್ತಿಯಾಗಿ ದಾನ ಮಾಡಿದನೆಂದು ಶಾಸನ ತಿಳಿಸುತ್ತದೆ. ದಾನ ಮಾಡಿದ ಗ್ರಾಮಗಳು–ಸೋಮಪಳ್ಳಿ, ಕೊಜ್ಗಿ ನಗರ, ಮರಿಯಸಾ, ಕರಿಪೆಂಡೊಲ, ಅಪರಮುಚ್ಚುಣ್ಡಿ, ಕುನ್ದಮುಚ್ಚುಣ್ಡಿ, ಕಪ್ಪೆನ್ನಲಾ, ಕುನ್ದತಪುಕಮ್, ವೆಟ್ಟಕ್ಕಿ, ವೇಗೂರಮ್, ಕೊಣತಪುಕಮ್, ಎಕ್ಕದ್ದಾಹಾರಂ ಮತ್ತು ಸಹಲಾ. ಈ ದಾನ ಮಳಪಳ್ಳಿ ದೇವರಿಗೆ ದೇವಭೋಗಕ್ಕಾಗಿ ಎಂದೂ ಹೇಳಿದೆ. ಅರಸನನ್ನು ವೈಜಯಂತೀಪತಿ ಎಂದು ವರ್ಣಿಸಲಾಗಿದೆ.''[21] ಶಿವಖದವಮ್ಮ ಯಾರೆಂಬ ಗುರುತಿಸುವಲ್ಲಿ ವಿದ್ವಾಂಸರಲ್ಲಿ ಭಿನ್ನಾಭಿಪ್ರಾಯಗಳಿವೆ.[22] ದಾನವಿತ್ತ ಗ್ರಾಮಗಳಲ್ಲೊಂದಾದ 'ವೇಗೂರ'ದಲ್ಲಿ 'ಊರ್' ಎಂಬ ಕನ್ನಡ ಆಕೃತಿಮಾ ಇರುವುದು ಸ್ಪಷ್ಟವಾಗಿದೆ. ಕರಿಪೆನ್ದೊಲ ಎಂಬ ಊರ ಹೆಸರಿನಲ್ಲಿರುವ 'ಕರಿ' ಎಂಬುದು ಕನ್ನಡದ ಗುಣವಾಚಕವಾಗಿರುವಂತೆ ಕಾಣುತ್ತದೆ.[23] 'ಮರಿಯಸಾ' ಎಂಬುದು ಕೂಡ ಕನ್ನಡ ಮೂಲದ್ದಾಗಿರಬಹುದು.

ಮಯೂರಶರ್ಮನ ಚಂದ್ರವಳ್ಳಿ ಶಾಸನ ಆತ ಕೆರೆಯೊಂದನ್ನು ಕಟ್ಟಿಸಿದ ವಿಷಯವನ್ನು ದಾಖಲಿಸುತ್ತದೆ; ಆತ ತ್ರೈಕೂಟ, ಆಭೀರ, ಪಲ್ಲವ, ಪಾರಿಯಾತ್ರಿಕ, ಶಕಸ್ಥಾನ, ಸಯಿನ್ದಕ, ಪುಣಾಟ ಹಾಗೂ ಮೋಕರಿಗಳನ್ನು ಜಯಿಸಿದನೆಂದು ಈ ಶಾಸನದಲ್ಲಿ ಹೇಳಿದೆ. ಈ ಶಾಸನವನ್ನು ಸಂಪಾದಿಸಿದ ಡಾ. ಎಂ. ಎಚ್. ಕೃಷ್ಣ [24] ಅವರ ಪಾಠಕ್ಕೂ, ಎಂ. ಗೋವಿಂದ ಪೈ,[25] ಜಯಸ್ವಾಲ್[26], ಡಾ. ಶ್ರೀಕಂಠ ಶಾಸ್ತ್ರೀ,[27] ಡಾ. ಪಿ.ಬಿ. ದೇಸಾಯಿ[28] ಮುಂತಾದವರ ಪಾಠಗಳಿಗೂ ವ್ಯತ್ಯಾಸಗಳಿವೆ. ಈ ವಿದ್ವಾಂಸರಲ್ಲಿ ಯಾರೂ ಶಾಸನದ ಭಾಷೆಯನ್ನು ಕುರಿತು ಶಂಕಿಸಿರಲಿಲ್ಲ. ಡಾ. ಜಿ.ಎಸ್. ಗಾಯಿಯವರ ಅಭಿಪ್ರಾಯ ಹೀಗಿದೆ:

This is a difficult inscription since the published reading is not considered as dependable or satisfactory and since the record is now completely effaced.[29]

ಆದರೆ ಶಾಸನ ಸಂಪೂರ್ಣವಾಗಿ ಸವೆದುಹೋಗಿದೆ ಎಂಬುದು ಈಚಿನ ಕೆಲವು ವಿದ್ವಾಂಸರು ಒಪ್ಪುವುದಿಲ್ಲ. ಬದಲಾಗಿ ಚಂದ್ರವಳ್ಳಿ ಶಾಸನ ಸಂಸ್ಕೃತ ಭಾಷೆಯಲ್ಲಿ ರಚಿತವಾಗಿದೆಯೆಂದು ಪ್ರತಿಪಾದಿಸಿ ಪರಿಷ್ಕೃತ ಪಾಠವನ್ನು ಅವರು ನೀಡಿದ್ದಾರೆ. ಡಾ. ಬಾ.ರಾ. ಗೋಪಾಲ್ ಅವರು

It does not refer to any conquest but the extant portion refers to the strengthening of a tank, construction of something confirming and setting up something. The last line seems to refer to the writer Chama (?) of Kupaṇa, the latter being the place of a name–the present day Koppaḷ in Raichur district ಎಂದು ಅಭಿಪ್ರಾಯಪಡುತ್ತಾರೆ.[30] ಶ್ರೀ ಬಿ.ರಾಜಶೇಖರಪ್ಪನವರು ಚಂದ್ರವಳ್ಳಿ ಶಾಸನದ ಪರಿಷ್ಕೃತ ಪಾಠವನ್ನು ನೀಡಿ ಹೀಗೆ ಅನುವಾದ ಕೊಡುತ್ತಾರೆ: "ಕದಂಬರ ಮಯೂರವರ್ಮನಿಂದ (ಈ) ಕೆರೆಯು ಬಲಪಡಿಸಲ್ಪಟ್ಟಿತು. (ಇದಕ್ಕೆ) ಸುಂದರ ರೂಪವನ್ನು ರಚಿಸಿ ಕಾಡಿನವಾಸದ ನೆಲೆಯನ್ನು ಸ್ಥಾಪಿಸಿ ಕುಪಣಚಮ....[31] ಆದರೆ ಈ ಇಬ್ಬರು ಮಹನೀಯರೂ ಶಾಸನದ ಪಡಿಯಚ್ಚನ್ನು ನೀಡಿಲ್ಲವಾದ ಕಾರಣ ಏನನ್ನೂ ಹೇಳಲಾಗದು.

ರಾಜವಂಶಗಳಿಗೆ ಸಂಬಂಧಿಸಿದ ಖಾಸಗಿ ವ್ಯಕ್ತಿಗಳಿಗೋ ಸಂಘಸಂಸ್ಥೆಗಳಿಗೋ ಸೇರಿದ ಪ್ರಾಕೃತ ಶಾಸನಗಳತ್ತ ಈಗ ಗಮನಹರಿಸಬಹುದು. ವಡಗಾಂ–ಮಾಧವ ಪುರದಲ್ಲಿ ಲಭ್ಯವಾದ ಮತ್ತು ಕ್ರಿ.ಪೂ. 1ನೆಯ ಶತಮಾನಕ್ಕೆ ಸೇರಿದ ಪ್ರಾಕೃತ ಶಾಸನ ಕಾಶ್ಯಪಗೋತ್ರಕ್ಕೆ ಸೇರಿದ ಬ್ರಾಹ್ಮಣನೊಬ್ಬ ವಾಜಪೇಯ ಯಾಗವನ್ನು ಮಾಡಿದ ವಿಷಯವನ್ನು ಉಲ್ಲೇಖಿಸುತ್ತದೆ.[32] ಹಿರೇಮಗಳೂರಿನ ಯೂಪಸ್ತಂಭದ

ಮೇಲಿನ ಶಾಸನ ತುಂಬ ಸವೆದು ಹೋಗಿದ್ದರೂ 'ಅಶ್ವಯೂಪ' ಎಂಬ ಉಲ್ಲೇಖ ಸ್ಪಷ್ಟವಾಗಿದೆ.[33] ಇದು ಸಹ ಸುಮಾರು ಅದೇ ಕಾಲದ್ದು.

ಗುಲ್ಬರ್ಗ ಜಿಲ್ಲೆಯ ಸನ್ನತಿ ಎಂಬಲ್ಲಿ ಈಚಿನ ದಶಕಗಳಲ್ಲಿ ಅನ್ವೇಷಿತವಾದ ಹಲವಾರು ಬ್ರಾಹ್ಮೀ ಶಾಸನಗಳ ಕಾಲ ಕ್ರಿ.ಶ. 1 ರಿಂದ 3 ನೆಯ ಶತಮಾನ. ಹೆಚ್ಚಿನ ಶಾಸನಗಳು ಒಂದೇ ಸಾಲಿನವು. ಬಹುತೇಕ ಶಾಸನಗಳಲ್ಲಿ ಕೆಲವು ಅಕ್ಷರಗಳು ನಷ್ಟವಾಗಿ ಹೋಗಿವೆ. ಒಟ್ಟು ಶಾಸನಗಳು ಸುಮಾರು ನಲವತ್ತಕ್ಕೂ ಹೆಚ್ಚು. ಇವುಗಳಲ್ಲಿ ಕೆಲವನ್ನು ಗುಲ್ಬರ್ಗದ ಸರ್ಕಾರಿ ವಸ್ತು ಸಂಗ್ರಹಾಲಯದಲ್ಲಿ ತಂದಿಡಲಾಗಿದೆ. ಈ ಶಾಸನಗಳು "ಬೌದ್ಧ ಸ್ತೂಪ, ವಿಹಾರ, ಸಂಘಾರಾಮಗಳಿಗೆ ದತ್ತಿದಾನಗಳನ್ನು ಸಲ್ಲಿಸಿದ ಭಕ್ತಭಕ್ತೆಯರ ಉಪಾಸಕ ಉಪಾಸಿಕೆಯರ ನಾಮನಿರ್ದೇಶವನ್ನು ಮಾಡುತ್ತವೆ.[34] ಗಹಪತಿ ಸುಲಸ, ಅಮಚಿ ಯಖನಿಕಾ (ಅಮಾತ್ಯೆ ಯಕ್ಷಣಿಕಾ), ಅಮಚಿ ಸಂಘನಿಕಾ (ಅಮಾತ್ಯೆ ಸಂಘನಿಕಾ), ಭೋಜಕ ಮುಗರಕೊಣ್ಣ, ರಾಜಮಚಸ ಗಗನಕಸ ಭಾರಿಯಾಯ ರಾಜಮಚಿಯ ರಾಮಸಾರಿಯ (ರಾಜಾಮಾತ್ಯ ಗಗನಕನ ಪತ್ನಿ ರಾಜಾಮಾತ್ಯೆ ರಾಮಸಾರಿ), ಮಹಾಸಾಥವಾಹ ಅಗಿಸ, ಸೋಮಘೋಸನಿಕ, ಪುರಿಸದತಾ, ಗಿರಿಜತಣಕ, ಸಿವತಣಕ, ಸೀಹಧರ, ಗೋವಿದಾಸಿ, ಅಹಿಮರಿಕಾ ಮತ್ತು ನಾಗನಿಕಾ ಎಂಬ ಸ್ತ್ರೀಯರು, ಅಕಪಟಲಿಕಾ (ಅಕ್ಷಪಟಲಿಕ) ಎಂಬ ಅಧಿಕಾರಿ–ಹೀಗೆ ಹತ್ತು ಹಲವರ ಹೆಸರುಗಳು ಉಪಲಬ್ಧವಾಗಿವೆ. ಇಲ್ಲಿನ ಶಾಸನಗಳಲ್ಲೊಂದು 'ವಾಸಿಠೀಪುತ ಸಿರಿಸಾತ....'ನನ್ನು ಉಲ್ಲೇಖಿಸುವುದು ಗಮನಾರ್ಹ. 'ಸಂಬಲೀವ ಊರಿವಾಸಿನೋ' ಎಂಬ ಶಾಸನ ಪಾಠ ಭಾಗದ 'ಊರ' ಎಂಬುದು ಕನ್ನಡ ಆಕೃತಿಮಾ ಆಗಿದೆ.[35]

ಗುಲ್ಬರ್ಗ ಜಿಲ್ಲೆಯಲ್ಲಿ ಸನ್ನತಿ ಸಮೀಪದ ಬೆಳವಡಿಗಿ ಎಂಬಲ್ಲಿ ಕಂಡುಬಂದ ಕ್ರಿ.ಶ. 3ನೆಯ ಶತಮಾನಕ್ಕೆ ಸೇರಿದ ಶಿಲ್ಪಸಹಿತ ಶಾಸನಪಾಠ[36] ಹೀಗಿದೆ: 'ಕಲಕಸ ಛಯಪ[ಟ]ಮು'; ಎಂದರೆ ಕಲಕ ಎಂಬಾತನ ಛಾಯಾಪ್ರತಿಮೆ, ಸ್ಮಾರಕ ಮೂರ್ತಿ. ಇದು ನಾಗಾರ್ಜುನಕೊಂಡದ ಕೆಲವು ಶಾಸನಗಳಲ್ಲಿನ 'ಛಾಯಾಕಂಬ'ಗಳನ್ನು ಮತ್ತು ಬನವಾಸಿ ಶಾಸನದ 'ಛಾಅಪಥರ'ವನ್ನು ಹೋಲುತ್ತದೆ. ಕಲಕನಶಿಲ್ಪದ ಜೊತೆಗೆ ಎತ್ತಿನಬಂಡಿ ಹಾಗೂ ಹಾಗೂ ಸ್ತ್ರೀಯರಿಬ್ಬರ ಶಿಲ್ಪಗಳಿವೆ.

ಇತ್ತೀಚೆಗೆ ಬಳ್ಳಾರಿ ಜಿಲ್ಲೆಯ ಹಂಪೆಯಲ್ಲಿ[37] ಧಾರವಾಡ ಜಿಲ್ಲೆಯ ಹಳವಾಸನದಲ್ಲಿ[38] ಹಾಗೂ ಗುಲ್ಬರ್ಗ ಜಿಲ್ಲೆಯ ಹುರುಸುಗುಂಡಿಗೆಯಲ್ಲಿ[39] ಪ್ರಾಕೃತ ಶಾಸನಗಳು ಕಂಡುಬಂದಿರುವ ಬಗ್ಗೆ ವರದಿಯಾಗಿದೆ. ಆದರೆ ಈ ಶಾಸನಗಳಲ್ಲಿ ನಿರೂಪಿತವಾಗಿರುವ ವಿಷಯಗಳ ಬಗ್ಗೆ ತಿಳಿದುಬಂದಿಲ್ಲ; ಶಾಸನ ಪಾಠಗಳು ಲಭ್ಯವಾಗುವವರೆಗೆ ಪ್ರಾಕೃತ ಶಾಸನಗಳ ಒಟ್ಟು ಸಂಖ್ಯೆಯನ್ನೇರಿಸಿಕೊಂಡು ಸಮಾಧಾನ ಕಾಣಬೇಕು, ಅಷ್ಟೆ!

ಕದಂಬರ ಕಾಲದಿಂದಲೇ ಶಾಸನ ಭಾಷೆ ಸಂಸ್ಕೃತ ಮತ್ತು ಅಪರೂಪವಾಗಿ ಕನ್ನಡ ಆದುದನ್ನು ಕಾಣುತ್ತೇವೆ. ಮುಂದಣ ಶತಮಾನಗಳಲ್ಲಿ ಕನ್ನಡ ಶಾಸನಗಳು

ಹೆಚ್ಚಾದರೂ ಸಂಸ್ಕೃತ ಸಹ ಶಾಸನ ಭಾಷೆಯಾಗಿ ಮುಂದುವರಿಯಿತು. ಆದರೆ ಪ್ರಾಕೃತಕ್ಕೆ ಅಂಥ ಅವಕಾಶ ಲಭ್ಯವಾಗಲಿಲ್ಲ.

"ಕನ್ನಡ ದ್ರಾವಿಡ ಭಾಷಾವರ್ಗಕ್ಕೆ ಸೇರಿದ ಭಾಷೆ. ದ್ರಾವಿಡ ಭಾಷಾ ವರ್ಗವು ಇಂಡೊಆರ್ಯನ್ ಭಾಷಾವರ್ಗಕ್ಕಿಂತ ಭಿನ್ನವಾದುದು. ಆದರೆ ದ್ರಾವಿಡ ಭಾಷಾವರ್ಗ ಎಂಬ ಕಲ್ಪನೆ ಬಂದದ್ದೇ ಹೋದ ಶತಮಾನದಲ್ಲಿ. ಅದಕ್ಕಿಂತ ಮುನ್ನ ಕನ್ನಡ, ತೆಲುಗು, ತಮಿಳು ಮುಂತಾದ ಭಾಷೆಗಳು ಸಂಸ್ಕೃತಜನ್ಯವೆಂದು ಭಾವಿಸಿ ಅವುಗಳನ್ನು ಪ್ರಾಕೃತವೆಂದು ಕರೆಯುತ್ತಿದ್ದರು."[40] ಕ್ರಿ.ಶ. 7ನೆಯ ಶತಮಾನದ ಶಾಸನವೊಂದರಲ್ಲಿ ದಾನಭಾಗವನ್ನು 'ಪ್ರಾಕೃತ ಭಾಷೆ'ಯಲ್ಲಿ ಹೇಳುವುದಾಗಿ ತಿಳಿಸಿ ಕನ್ನಡದಲ್ಲಿ ತಿಳಿಸಿದೆ.[41] ಕ್ರಿ. ಶ. 8ನೆಯ ಶತಮಾನದ ಶ್ರವಣಬೆಳಗೊಳದ ಶಾಸನ ವೊಂದು 'ಬಲದೇವಾಚಾರ್ಯರ ಪಾಉಗ್ಗ ಮಣ'ದ ವಿಷಯವನ್ನು ನಿರೂಪಿಸುತ್ತದೆ.[42] ಇಲ್ಲಿನ ಪಾಉಗ್ಗಮಣ ಸಂಸ್ಕೃತದ ಪ್ರಾಯೋಪಗಮನದ (ಪಾಓವಗಮಣ) ಪ್ರಾಕೃತ ರೂಪವೆನ್ನುವುದು ಕೆಲವು ವಿದ್ವಾಂಸರ ಅಭಿಪ್ರಾಯ; ಪ್ರಾಣೋತ್ಕ್ರಮಣದ ಪ್ರಾಕೃತ ರೂಪ ಎನ್ನುವ ಇನ್ನೊಂದು ಅಭಿಪ್ರಾಯವೂ ಇದೆ. ಪಾಉಗ್ಗಮಣ ಸಮಾಧಿ ಮರಣದ ಒಂದು ಪ್ರಭೇದ.

ಕ್ರಿ. ಶ. 1148ರ ಒಂದು ಶಾಸನದಲ್ಲಿ[43] ನಾವು ಈಗ ಪ್ರಾಕೃತವೆಂದು ಕರೆ ಯುವ ಭಾಷೆಯನ್ನೇ ಪ್ರಾಕೃತವೆಂದು ಉಲ್ಲೇಖಿಸಿದೆ. ಉಚ್ಚಂಗಿಯ ಪಾಂಡ್ಯ ಅರಸ ವೀರಪಾಂಡ್ಯದೇವನ ವರ್ಣನೆಯಲ್ಲಿ ಪ್ರಾಕೃತ ಭಾಷೆಯೂ ಸೇರಿದೆ. ಕ್ರಿ.ಶ. 1173ರ ಕುರುಗೋಡಿನ ಶಾಸನದಲ್ಲಿನ ಸ್ವಯಂಭೂದೇವಸ್ತುತಿಪದ್ಯವೊಂದು ಶೌರಸೇನಿ ಪ್ರಾಕೃತದಲ್ಲಿ ರಚಿತವಾಗಿದೆ.[44] ಕರ್ನಾಟಕದ ಅನೇಕ ಶಾಸನಗಳಲ್ಲಿ ಪ್ರಾಕೃತ ಶಬ್ದಗಳ ಪ್ರಯೋಗವನ್ನು ಕಾಣಬಹುದು.

ಕರ್ನಾಟಕದಲ್ಲಿನ ಪ್ರಾಕೃತ ಶಾಸನಗಳ ಸಮೀಕ್ಷೆಯನ್ನು ಇಲ್ಲಿಗೆ ಮುಗಿಸುತ್ತ ಡಾ. ಎ.ಎನ್. ಉಪಾಧ್ಯೆಯವರ ಸುಮಾರು ಅರ್ಧ ಶತಕದಷ್ಟು ಹಿಂದಿನ ಈ ಮಾತು ಗಳನ್ನು ನೆನಪಿಸಿಕೊಳ್ಳಬಹುದು:

It is not unlikely that Prakrits may have influenced Dravidian languages too. So far Kannada is concerned, we have undisputable circumstantial evidence and solid facts which go to show that a novel Kannada mould in Kannada style was cast under the inspiration of Prakrits. It is quite likely that some of the Jain writers who wrote in Kannada were already acquainted with Prakrits especially Jaina 'Sauraseni as we call it today.'[45]

"ಕನ್ನಡ ತಮಿಳು ಮತ್ತು ತೆಲುಗು—ಈ ಭಾಷೆಗಳ ಶಬ್ದಸಮೃದ್ಧಿಯಲ್ಲಿ ಪ್ರಾಕೃತ ಭಾಷೆಗಳ ಸಹಾಯವು ಪೂರಾ ದೊರೆತಿದೆ"[46] ಎನ್ನುವುದನ್ನು ಸಂಪೂರ್ಣವಾಗಿ ಒಪ್ಪಿಕೊಂಡರೂ ಉಪಲಬ್ಧ ಪ್ರಾಕೃತ ಶಾಸನ ಸಾಮಗ್ರಿ ಅತ್ಯಲ್ಪ ಪ್ರಮಾಣದ್ದಾಗಿರುವುದರಿಂದ, ಕನ್ನಡ ಭಾಷೆ ಹಾಗೂ ಸಾಹಿತ್ಯಗಳ ಬೆಳವಣಿಗೆಗೆ ಈ ಶಾಸನಗಳು ನೀಡಿದ ಪ್ರೇರಣೆ, ಬೀರಿದ ಪ್ರಭಾವ ಅಥವಾ ಅದರಲ್ಲಿ ವಹಿಸಿದ ಪಾತ್ರವೇನೆಂಬುದನ್ನು ನಿರ್ಧರಿಸಲು ಸಾಧ್ಯವಾಗುವುದಿಲ್ಲವೆಂಬ ಅಂಶವನ್ನೂ ಒಪ್ಪಿಕೊಳ್ಳಬೇಕಾಗುತ್ತದೆ.

ಅಡಿಟಿಪ್ಪಣಿಗಳು

1. ಎಪಿಗ್ರಾಫಿಯ ಕರ್ನಾಟಿಕ (ಪರಿಷ್ಕೃತ 1972), ಸಂಪುಟ 1, ಪು. 7
2. ಅದೇ.
3. ಎಂ. ಬಿ. ನೇಗಿನಹಾಳ : ಪ್ರಾಚೀನ ಕನ್ನಡ ಶಾಸನಗಳ ಭಾಷಿಕ ಅಧ್ಯಯನ (1982), ಪು. 1
4. ಅದೇ.
5. ಕನ್ನಡ ವಿಶ್ವಕೋಶ, ಸಂಪುಟ 11, ಪು. 420–21
6. ಡಾ. ಎ. ಎನ್. ಉಪಾಧ್ಯೆ : ಪಾಲೀ ಮತ್ತು ಪ್ರಾಕೃತ (1965), ಪು. 23
7. ಕನ್ನಡ ವಿಶ್ವಕೋಶ, ಸಂಪುಟ 11, ಪು. 421
8. ಡಾ. ಶ್ರೀನಿವಾಸರಿತ್ತಿ : ಅಶೋಕನ ಧರ್ಮಶಾಸನಗಳು (1969), ಪು. 26
9. ನಾ. ಕಸ್ತೂರಿ : ಅಶೋಕ (1952), ಪು. 155–56
10. ಅದೇ ; ಅಡಿಟಿಪ್ಪಣಿ
11. ಪಾಲೀ ಮತ್ತು ಪ್ರಾಕೃತ (1965), ಪು. 18.
12. Corpus Inscriptionum Indicarum, Vol. I, Introduction. p. 56 ; ನೋಡಿ ಡಾ. ಪಿ. ಬಿ. ಬಡಿಗೇರ : ಪ್ರಾಕೃತ ಪ್ರಕಾಶ (1982), ಪು. 15–28. ಅಶೋಕನ ಶಾಸನಗಳಲ್ಲಿನ ಪ್ರಾಕೃತದ ಲಕ್ಷಣಗಳನ್ನು ಈ ಕೃತಿಯಲ್ಲಿ ಸಂಗ್ರಹ ರೂಪದಲ್ಲಿ ತಿಳಿಸಿದೆ.
13. ಪ್ರಸಿದ್ಧ ಕ್ಷೇತ್ರ ವಾರಣಾಸಿಯ ಸಮೀಪದಲ್ಲಿರುವ ಇಂದಿನ ಸಾರನಾಥಕ್ಕೆ ಇಸಿನಗರ ಎಂಬ ಹೆಸರಿತ್ತೆಂದು ಭಾರತೀಯ ಸಂಸ್ಕೃತಿಕೋಶದಲ್ಲಿ ತಿಳಿಸಿರುವುದು ಗಮನಾರ್ಹ ; ಸಾರನಾಥವೇ ಇಸಿಲವೆಂದು ಹಿರಿಯ ಸಹೋದ್ಯೋಗಿ ಮಿತ್ರರಾದ ಶ್ರೀ ಎಸ್. ಎಸ್. ಜಾಗೀರ್‌ದಾರ್ ಅವರು ಅಭಿಪ್ರಾಯಪಡುತ್ತಾರೆ. ಈ ಬಗ್ಗೆ ಗಮನ ಸೆಳೆದ ಅವರಿಗೆ ನಾನು ಕೃತಜ್ಞನಾಗಿದ್ದೇನೆ.

13a. ಕರ್ಣಾಟಕದ ಪರಂಪರೆ (1970), ಸಂ. 1, ಪು. 90–91.

14. ಎಪಿಗ್ರಾಫಿಯ ಇಂಡಿಕ, ಸಂ. XIV, ಪು. 152
15. ಮಾನವಿಕ ಕರ್ಣಾಟಕ, ಸಂ. 4, ಸಂಚಿಕೆ 1
16. ರಂ. ಶ್ರೀ. ಮುಗಳಿ : Heritage of Karntaka, ಪು. 45–50

17. ಎಪಿಗ್ರಾಫಿಯ ಕರ್ನಾಟಿಕ (ರೈಸ್ ಆವೃತ್ತಿ), ಸಂ. VII. ಶಿಕಾರಿಪುರ-263. 'ಮಳಪಳಿ' ಎಂಬುದನ್ನು 'ಮಟ್ಟಪಟ್ಟಿ' ಎಂದು ರೈಸ್ ಅವರು ಓದಿ Mattapatti is evidently the original form of Maḷavaḷḷi, the present name of the village ಎಂದು ಹೇಳಿದ್ದಾರೆ (ಪೀಠಿಕೆ, ಪು. 5). ಪಟ್ಟಿ-ಪಳ್ಳಿ ದ್ರಾವಿಡ ಮೂಲದವು.

18. ಈ ಹೆಸರು ಸ್ತ್ರೀಯದೇ ಅಥವಾ ಪುರುಷನದೆ ಎಂಬ ವಿಷಯದಲ್ಲಿ ವಿವಾದವಿದ್ದಿತು. ನೋಡಿ : ಎಚ್. ಆರ್. ರಘುನಾಥ ಭಟ್ : ಕರ್ನಾಟಕ ಶಾಸನ. ಕಲೆ (1977), ಪು. 14.

19. ಎಪಿಗ್ರಾಫಿಯ ಇಂಡಿಕ, ಸಂ. I ಪು. 2–10

20. ಎಪಿಗ್ರಾಫಿಯ ಕರ್ನಾಟಿಕ (ರೈಸ್ ಆವೃತ್ತಿ), ಸಂ. VII. ಶಿಕಾರಿಪುರ-264

21. ಡಾ. ಬಾ. ರಾ. ಗೋಪಾಲ : ಬನವಾಸಿ ಕದಂಬರು (1983), ಪು. 4

22. ಅದೇ. ನೋಡಿ—ಪೀಠಿಕೆ, ಪು. XV–XVIII

23. ಎಂ. ಬಿ. ನೇಗಿನಹಾಳ : ಪ್ರಾಚೀನ ಕನ್ನಡ ಶಾಸನಗಳ ಭಾಷಿಕ ಅಧ್ಯಯನ, ಪು. 2

24. *Mysore Archaeological Report* (*MAR*)–1929, pp. 50–60

25. ಪ್ರಬುದ್ಧ ಕರ್ಣಾಟಕ, ಸಂ. 13, ಸಂಚಿಕೆ 4, ಪು. 1–12

26. (ಉದ್ಧೃತ)—ಕನ್ನಡ ಸಾಹಿತ್ಯ ಪರಿಷತ್ಪತ್ರಿಕೆ, ಸಂಪುಟ 69, ಸಂಚಿಕೆ 2, ಪು. 4

27. ಪುರಾತತ್ತ್ವಶೋಧನೆ (1960), ಪು. 300–01

28. ಕನ್ನಡ ನಾಡಿನ ಶಾಸನಗಳು (1961), ಪು. 47–48

29. Dr. A. V. Narasimha Murthy (Ed) : *Archaeology of Karnataka* (1978), p. 151

30. B. R. Gopal (Ed) : *Corpus of Kadamba Inscriptions* Vol. 1, part I, p. VII.

ಇಲ್ಲಿ ಕೊಟ್ಟಿರುವ ಪಾಠ ಹೀಗಿದೆ :

1. ಕದಮ್ಬಾಣಂ ಮಯೂರವರ್ಮಣಾ [ವಿನಿರ್ಮಿತಂ]
2. ತಟಾಕಂ ದೃಢೀಕೃತಂ ಅಭಿರೂಪಂ ರಚಯಿತ್ವಾ
3. ....ಸ್ಥಾಪಯಿತ್ವಾ ಕುಪಣ ಚಮೇನ ಲಿ...

31. ಕನ್ನಡ ಸಾಹಿತ್ಯ ಪರಿಷತ್ಪತ್ರಿಕೆ, ಸಂಪುಟ 69, ಸಂಚಿಕೆ 2, ಪು. 9–10 ; ಶ್ರೀ ಬಿ. ರಾಜಶೇಖರಪ್ಪ ಅವರು ನೀಡಿರುವ ಪಾಠ ಹೀಗಿದೆ :

1. ಕದಂಬಾಣಂ ಮಯೂರವರ್ಮ್ಮಣಾ
2. ತಟಾಕಂ ದೃಢಂ ಕೃತಂ ಅಭಿರುಪಂ ರ[ಚ]ಯಿತ್ವಾ
3. ವಾನ[ವಾ]ಸಕಂ ಸ್ಥಾಪಯಿತ್ವಾ ಕುಪಣ ಚ [ಮೋ]...

32. ಎಚ್ಚೆಸ್ಕೆ (ಸಂ) : ಅವಲೋಕನ (1985), ಪು. 55

33. *Mysore Archaeological Report* (*MAR*)–1945, pp. 110–21

34. ಕರ್ಣಾಟಕ ಭಾರತಿ, ಸಂಪುಟ 1, ಸಂಚಿಕೆ 1, ಪು. 7. ಸನ್ನತಿಯ ಶಾಸನ ಪಾಠಗಳಿಗೆ ನೋಡಿ—*Annual Report of Indian Epigraphy* (*ARIE*) for 1966–67 No. B. 203–25 ಮತ್ತು 228–33 ; ಹಾಗೂ *ARIE* for 1968–69, No. B. 87–97.

35. ಎಂ. ಬಿ. ನೇಗಿನಹಾಳ : ಪ್ರಾಚೀನ ಕನ್ನಡ ಶಾಸನಗಳ ಭಾಷಿಕ ಅಧ್ಯಯನ, ಪು. 2

36. ಎಪಿಗ್ರಾಫಿಯ ಇಂಡಿಕ, ಸಂಪುಟ XXXVII, No. 22 ಪು. 131

37. ಸಂಯುಕ್ತ ಕರ್ನಾಟಕ (22–2–1976); ಈಚೆಗೆ ಆಕಸ್ಮಿಕವಾಗಿ ಈ ಶಾಸನದ ಫೋಟೊ ನೋಡುವ ಅವಕಾಶ ಸಿಕ್ಕಿತು. ಸ್ಥೂಲವಾಗಿ ಶಾಸನಪಾಠ ಹೀಗಿದೆ :

1. ತರಸ ಪುತಸ
2. [ವಾ]ನಂ

38. ಎಚ್ಚೆಸ್ಕೆ (ಸಂ) : ಅವಲೋಕನ, ಪು. 51

39. ಸಂಯುಕ್ತ ಕರ್ನಾಟಕ (30–11–1975)

40. ಡಾ. ಎಂ. ಚಿದಾನಂದಮೂರ್ತಿ : ಕನ್ನಡ ಶಾಸನಗಳ ಸಾಂಸ್ಕೃತಿಕ ಅಧ್ಯಯನ (1966), ಪು. 94

41. *Karnatak Inscriptions*, Vol. I, 2—ಅತಃಪರಂ ಪ್ರಾಕೃತ ಭಾಷಯಾ ವರ್ಣಾನ್ಯೇತಾನಿ ದತ್ತಾನಿ ಸುಂಕಾನಿ

42. ಎಪಿಗ್ರಾಫಿಯ ಕರ್ನಾಟಕ ಸಂ. II (ಪರಿಷ್ಕೃತ, 1973), ಶಾಸನ ಸಂಖ್ಯೆ–92

43. ಎಪಿಗ್ರಾಫಿಯ ಕರ್ನಾಟಕ, ಸಂ. XI (ರೈಸ್ ಆವೃತ್ತಿ), ದಾವಣಗೆರೆ–41, ಸಾಲು 72–76– । ಪ್ರಾಕೃತ ॥ ಅಯಂಕ ವಿಕಂತ ಕಂಕಡ ಸಕುಂಕಡ ರಿವುಮಂಡಳಿಯದಣುತಣಯದೇವಈ ಣಂದಣ । ರಿವುಮಂಡಳಿಯಕುಳಸೈಳದಳಣ ಸಂಕಂದಣಪಡಿವಂಖ ವಿಂಖವ ಪಂಖವಾ ಯಜ.ತ ಜಯಲಂಭಿ ವಿಂಖಿಂತ ತಿಂಖ ಕದಂಖವಿಂಖಣ ಸಲಂಖರಣಮುಂಖರಿವುಮಂಡಳಿಯ ಸಿಂಖಾನಿಯಂ ಖಣಾಣಸಂಗಪಾಳಂಗ ಸಯುಸಹುಂಗಖಂಗಮುಹಂಗ ಗಿಳಿಯ ರಿವು ಬ. ರಂಗಬಡ. ಂಬಿ.ಯಂ ಚರಿಲಕಲಿ ಸವಿಲೋವಿಕಯುಕ ಸಚ್ಚರಿಲಿಣಿಂತಿಂಸ. ಸಣವಿಂಫಾರಿಲಿ ಎಂಫುಳಿಗವಿಂಫಲಲಿ ರಿವು ಮಂಡಳಿಯ ಮಡಂಫತುಂಫ. ಜಣುಂ. ಲಣಂದ ವಿಣಕಿವಾಣಕೂವಾಹ ರಿಕಯ ಕುಸುವ ಬಾಣ । ವಿಸರುಳಿಕಳಾಂ ಕುರಿದರಿವುಮಂಡಳಿಯ ತುರಯಘೋರಥಂಟ ರಿವು ಮಂಡಳಿಯ ಕುಳ ದಿಶಾಪಂಟ ॥

44. ಎಪಿಗ್ರಾಫಿಯ ಇಂಡಿಕ, ಸಂಪುಟ XIV, ಪು. 270, ಪದ್ಯ 4, ಸ್ರಗ್ಧರಾವೃತ್ತ— ಗೋರಿಪೀಣತ್ಥಣತ್ಥತ್ಥಗಿದಘುಸಿಣ ದಿಣ್ಣಕ್ಕ ವಣ್ಣೊಗ್ಘ ವಚ್ಚೋ ಕಂದಪ್ಪೊದ್ದಪ್ಪೊ ವಿಪ್ಫಾಳಣ ಣಿಲಿ ಣಿವುಣೋ ವಿಚ್ಛುರನ್ತತ್ತಿಅಚ್ಚೋ । ಗಿಬ್ಬಾಣೊಕ್ಕೇರರಕ್ಖೋ ತಿಹುವಣ ಭವಣಾರಂಭ ಸಂಭನ್ತ ಖಂಭೋ ಳಚ್ಚೀಣಾಹಪ್ಪಿಯೋ ಸೋ ಜೆಲಿಇ ಸಇಜಏ ಣಂಮಸಂಭೂ ಸಯಂಭೂ ॥

45. *All India Oriental Conference* (11), 1941, p. 40

46. ಡಾ. ಎ. ಎನ್. ಉಪಾಧ್ಯೆ : ಪಾಲೀ ಮತ್ತು ಪ್ರಾಕೃತ, ಪು. 2.

ಅಶೋಕನ ಶಾಸನಗಳಿಂದಾರಂಭಿಸಿ ಸುಮಾರು ಕ್ರಿ.ಶ. ೪ನೆಯ ಶತಮಾನದ ಮಧ್ಯಭಾಗದವರೆಗೂ ಕರ್ನಾಟಕದಲ್ಲಿ ದೊರೆತಿರುವ ಸಾತವಾಹನ, ಚುಟು, ಕದಂಬ ವಂಶಗಳ ಶಾಸನಗಳು, ಸನ್ನತಿಯ ಶಾಸನಗಳು, ಹಿರೇಹಡಗಲಿಯ ಪಲ್ಲವ ಶಿವಸ್ಕಂದ ವರ್ಮನ ತಾಮ್ರಶಾಸನ ಮೊದಲಾದುವು ಪ್ರಾಕೃತ ಭಾಷೆಯಲ್ಲಿವೆ. ಆದರೆ ಚಂದ್ರ ವಳ್ಳಿಯ ಮಯೂರವರ್ಮನ ಶಾಸನ ಮತ್ತು ತಾಮ್ರಶಾಸನಗಳಲ್ಲಿ ಕಂಡುಬರುವುದು ಗ್ರಂಥಸ್ಥ ಪ್ರಾಕೃತ. ಅಲ್ಲದೆ ಪಲ್ಲವ ತಾಮ್ರಶಾಸನದ ಮುದ್ರೆಯ ಮೇಲಿರುವ ಅಂಕನ ಮತ್ತು ಶಾಸನದ ಕೊನೆಯ ಮಂಗಳವಾಕ್ಯ ಸಂಸ್ಕೃತದಲ್ಲಿರುವುದನ್ನು ಗಮನಿಸಬೇಕು. ಶಾಸನಗಳ ಭಾಷೆಯಲ್ಲಿ ಈ ಹೊತ್ತಿಗೆ ಸಂಸ್ಕೃತದ ಪ್ರಭಾವವಿದ್ದು ಸಂಸ್ಕೃತವೂ ಶಾಸನಗಳಲ್ಲಿ ಕಾಣಲಾರಂಭಿಸಿದುದು ಸ್ಪಷ್ಟ. ಅಲ್ಲಿಂದ ಮುಂದೆ ಶಾಸನ ಗಳಲ್ಲಿ ಪ್ರಾಕೃತದ ಬದಲು ಸಂಸ್ಕೃತದ ಬಳಕೆ ವ್ಯಾಪಕವಾಗಿ ಪಸರಿಸಿತು.

—ಕರ್ನಾಟಕ : ಕನ್ನಡ ವಿಷಯ ವಿಶ್ವಕೋಶ, ಪು. ೧೩೯೦

ಯಮುನಾಬಾಯಿ ಆರ್. ರಾವ್

ಪ್ರಪಂಚದ ಸಂಕ್ಷಿಪ್ತ ಇತಿಹಾಸ

(ಮುಂದುವರೆದುದು)

40. ಹೂಣರು ಮತ್ತು ಪಶ್ಚಿಮ ರೋಂ ಸಾಮ್ರಾಜ್ಯದ ಅಂತ್ಯ.

ದಂಡಯಾತ್ರೆ ನಡೆಸುತ್ತಾ ಬಂದ ಮಂಗೋಲಿಯನ್ ಜನರು ಯೂರೋಪಿನಲ್ಲಿ ಕಾಣಿಸಿಕೊಂಡಿದ್ದು ಮಾನವ ಚರಿತ್ರೆಯಲ್ಲಿ ಒಂದು ಹೊಸ ಘಟ್ಟದ ನಾಂದಿ ಎನ್ನಬಹುದು. ಕ್ರಿ.ಪೂ. ಒಂದನೆಯ ಶತಮಾನದವರೆಗೂ ನಾರ್ಡಿಕ್ ಜನರಿಗೂ ಮಂಗೋಲರಿಗೂ ಅಂತಹ ಸಂಪರ್ಕವೇನೂ ಇರಲಿಲ್ಲ. ಲ್ಯಾಪರೆಂಬ ಮಂಗೋಲ್ ಜನ ಮಾತ್ರ ಉತ್ತರ ಯೂರೋಪಿನ ಅರಣ್ಯ ಪ್ರದೇಶಗಳಿಗೂ ಆಚೆ ಇರುವ ಹಿಮದಿಂದ ಹೆಪ್ಪುಗಟ್ಟಿದ ಪ್ರದೇಶದಲ್ಲಿರುವ ಲ್ಯಾಪ್‌ಲ್ಯಾಂಡಿನಷ್ಟು ಪಶ್ಚಿಮದವರೆಗೂ ಹಾಗೂ ಹೀಗೂ ಅಲೆಯುತ್ತ ಬಂದು ಸೇರಿದ್ದರು. ಆದರೆ ಅವರ ಚರಿತ್ರೆಯಲ್ಲಿ ಇವರದೇನೂ ಅಂತಹ ಪ್ರಮುಖ ಪಾತ್ರವಿರಲಿಲ್ಲ. ಸಹಸ್ರಾರು ವರ್ಷಗಳು ಪಾಶ್ಚಿಮಾತ್ಯ ಪ್ರಪಂಚದಲ್ಲಿ ಆರ್ಯರು, ಸೆಮಿಟಿಕ್ ಜನರು ಮತ್ತು ಅಲ್ಲಿಯ ಮೂಲವಾಸಿಗಳಾದ ಕಂದು ಬಣ್ಣದ ಜನರಲ್ಲಿ ಪರಸ್ಪರವಾಗಿ ಕೌತುಕಪೂರ್ಣ ವ್ಯವಹಾರಗಳು ನಡೆದಿದ್ದುವು. ಆದರೆ (ಒಂದೇ ಒಂದು ಸಲ ಎಥಿಯೋಪಿಯನ್ನರು ಈಜಿಪ್ಟನ್ನು ಗೆದ್ದಿದ್ದನ್ನು ಬಿಟ್ಟರೆ) ದಕ್ಷಿಣದ ಕಪ್ಪು ಜನರಿಂದಾಗಲೀ ದೂರ ಪ್ರಾಚ್ಯದ ಮಂಗೋಲರಿಂದಾಗಲೀ ಈ ಪ್ರಪಂಚಕ್ಕೆ ಯಾವ ವಿಧವಾದ ತಂಟಿ ತಾಕಲಾಟಗಳೂ ಇರಲಿಲ್ಲ.

ಎಂದೂ ಇಲ್ಲದೆ ಈಗ ಈ ಅಲೆಮಾರಿ ಮಂಗೋಲರು ಪಶ್ಚಿಮಕ್ಕೆ ತಿರುಗಲು ಪ್ರಾಯಶಃ ಎರಡು ಮುಖ್ಯಕಾರಣಗಳಿದ್ದುವು. ಒಂದನೆಯದಾಗಿ ಉಚ್ಛ್ರಾಯ ಸ್ಥಿತಿಯಲ್ಲಿದ್ದ ಹಾನ್ ಸಂತತಿಯ ರಾಜರ ಕೆಳಗೆ ಚೀನ ಚಕ್ರಾಧಿಪತ್ಯ ಸಂಘಟಿತವಾಗಿ ಪ್ರಾಬಲ್ಯ ಪಡೆದು ಉತ್ತರಕ್ಕೆ ಹರಡಿತು; ಅದರ ಜನ ಸಂಖ್ಯೆಯೂ ವೃದ್ಧಿಯಾಯಿತು. ಹವಾಗುಣ ಬದಲಾಯಿಸಿದುದು ಮತ್ತೊಂದು ಕಾರಣ ಇರಬೇಕು. ಮಳೆಕಡಿಮೆಯಾಗಿ ಅರಣ್ಯ ಪ್ರದೇಶ ಮತ್ತು ಜೌಗು ಪ್ರದೇಶಗಳು ಇಲ್ಲದಂತಾಗಿರಬಹುದು. ಅಥವಾ ಮಳೆ ಹೆಚ್ಚಾದುದರಿಂದ ಮೊದಲು ಮರಳುಕಾಡಾಗಿದ್ದ ಪ್ರದೇಶಗಳು ಹುಲ್ಲು

ಗಾವಲುಗಳಾಗಿರಬಹುದು. ಬೇರೆಬೇರೆ ಸ್ಥಳಗಳಲ್ಲಿ ಈ ಎರಡೂ ಪ್ರಕ್ರಿಯೆಗಳು ನಡೆಯುತ್ತಿದ್ದು ಹೇಗೋ ಕೊನೆಗೆ ಈಜನ ಪಶ್ಚಿಮಕ್ಕೆ ವಲಸೆಹೋಗಲು ಪ್ರೇರಕ ವಾಗಿರಬಹುದು. ರೋಮ್ ಸಾಮ್ರಾಜ್ಯದ ಆರ್ಥಿಕ ದುಃಸ್ಥಿತಿ, ಆಂತರಿಕ ಗ್ಲಾನಿ, ಮತ್ತು ಜನಸಂಖ್ಯೆಯ ಇಳಿತಗಳು ಮೂರನೆಯ ಕಾರಣ. ರೋಂ ಪ್ರಜಾಪ್ರಭುತ್ವದ ಕಡೆಯದಿನಗಳ ಶ್ರೀಮಂತರು, ಬಳಿಕ ಸೈನ್ಯದ ಬೆಂಬಲದಿಂದ ಚಕ್ರವರ್ತಿಗಳಾಗಿದ್ದವರ ತೆರಿಗೆ ಅಧಿಕಾರಿಗಳು ಈ ಸಾಮ್ರಾಜ್ಯದ ಸತ್ತ್ವವನ್ನು ಪೂರ್ತಿ ಹೀರಿಬಿಟ್ಟಿದ್ದರು. ಹೀಗೆ ಇಲ್ಲಿ ಹೂಣರಿಗೆ ಒತ್ತಡ, ಸಾಧನ, ಅನುಕೂಲಸಂದರ್ಭ ಮೂರೂ ಇದ್ದವು. ಪೂರ್ವದಿಂದ ಒತ್ತಡ, ಪಶ್ಚಿಮದಲ್ಲಿ ಲೊಡ್ಡಾಗಿದ್ದ ಸಮಾಜ ಮತ್ತು ಅಲ್ಲಿಗೆ ಹೋಗಲು ತೆರವಾಗಿದ್ದ ಹಾದಿ.

ಯುರೋಪಿನ ರಷ್ಯದ ಪೂರ್ವಗಡಿಯನ್ನು ಕ್ರಿ.ಶ. ಒಂದನೆ ಶತಮಾನದ ಹೊತ್ತಿಗಾಗಲೇ ಹೂಣರು ಮುಟ್ಟಿದ್ದರು. ಆದರೆ ಸ್ಟೆಪ್ ಹುಲ್ಲುಗಾವಲುಗಳಲ್ಲಿ ಈ ಕುದುರೆ ಸವಾರರದ್ದೇ ಮೇಲುಗೈಯಾಗಿದ್ದು. ಕ್ರಿ. ಶ. ನಾಲ್ಕು ಮತ್ತು ಐದನೆ ಶತಮಾನಗಳಲ್ಲಿ ಕ್ರಿ.ಶ. ಐದನೆಯ ಶತಮಾನ ಹೂಣರ ಶತಮಾನ. ಹಾನೊರಿಯಸ್ಸ ನನ್ನು ತನ್ನ ಅಧೀನಪಡಿಸಿಟ್ಟುಕೊಂಡಿದ್ದ ವ್ಯಾಂಡಲರ ಸ್ಟಿಲಿಚೊ ತನ್ನ ಸೈನ್ಯದಲ್ಲಿ ಹೂಣರ ತಂಡಗಳನ್ನು ಸಂಬಳ ಕೊಟ್ಟು ಇಟ್ಟುಕೊಂಡಿದ್ದನು. ಇಟಲಿಯನ್ನು ಮೊದಲು ಪ್ರವೇಶಿಸಿದ ಹೂಣರು ಇವರೇ. ವ್ಯಾಂಡಲರು ಬಿಟ್ಟು ಹೋದನಂತರ ಖಾಲಿಯಾಗಿದ್ದ ಪ್ಯಾನ್ನೊನಿಯ ಸದ್ಯದಲ್ಲೇ ಇವರದ್ದೇ ಆಯಿತು.

ಕ್ರಿ.ಶ. 5ನೆಯ ಶತಮಾನದ ಎರಡನೆಯ ಪಾದದಲ್ಲಿ (ಶತಮಾನವನ್ನು ನಾಲ್ಕು ಸಮಭಾಗಗಳನ್ನಾಗಿ ಮಾಡಿದರೆ ಬರುವ ಭಾಗಗಳಲ್ಲಿ ಎರಡನೆಯ ಭಾಗ) ಹೂಣರಲ್ಲಿ ಒಬ್ಬ ಮಹಾದಂಡನಾಯಕ ಮುಂದೆ ಬಂದನು. ಇವನೇ ಅಟ್ಟಿಲ, ಇವನ ಶಕ್ತಿ ಸಾಮರ್ಥ್ಯಗಳನ್ನು ಕುರಿತು ಅಸ್ಪಷ್ಟವಾದ ಚಿತ್ರ ನಮಗೆ ಕಾಣಸಿಗುತ್ತದೆ; ಇವನ ಬಗೆಗೆ ಮತ್ತೂ ತಿಳಿಯಬೇಕೆಂದು ಆಸೆ ಹುಟ್ಟಿಸುತ್ತದೆ. ಹೂಣರನ್ನಷ್ಟೇ ಅಲ್ಲದೆ ಕಪ್ಪಕಾಣಿಕೆ ಕೊಡುತ್ತಿದ್ದ ಅನೇಕ ಜರ್ಮನ್ ಕುಲಗಳವರನ್ನೂ, ಇವನು ಆಳು ತ್ತಿದ್ದನು. ರೈನ್‌ನದಿಯಿಂದ ಇವನ ಸಾಮ್ರಾಜ್ಯ ಯುರೋಪಿನ ಮೈದಾನ ಪ್ರದೇಶಗಳನ್ನು ಹಾದು ಮಧ್ಯ ಏಷ್ಯದವರೆಗೆ ಹರಡಿತ್ತು. ಚೀನಕ್ಕೂ ಇವನ ರಾಜ್ಯಕ್ಕೂ ಪರಸ್ಪರ ರಾಯಭಾರ ಸಂಬಂಧವಿತ್ತು. ಡ್ಯಾನ್ಯೂಬ್ ನದಿಯ ಪೂರ್ವಕ್ಕೆ ಹಂಗೆರಿಯ ಮೈದಾನ ಪ್ರದೇಶದಲ್ಲಿ ಇವನ ಮುಖ್ಯ ಠಾಣ್ಯ ಇದ್ದಿತು. ಅಲ್ಲಿಗೆ ಭೇಟಿಕೊಟ್ಟ ಕಾನ್‌ಸ್ಟಾಂಟಿನೋಪಲ್ಲಿನ ನಿಯೋಗಿ ಪ್ರಿಸ್ಕಸ್ ಎಂಬುವನು ಅಟ್ಟಿಲನ ಸಂಸ್ಥಾನದ ಬಗ್ಗೆ ಒಂದು ವರದಿಯನ್ನು ಬರೆದಿಟ್ಟಿದ್ದಾನೆ. ಪ್ರಾಚೀನ ಆರ್ಯರ ಪಾತ್ರವನ್ನೇ ವಹಿಸಿದ್ದ ಈ ಹೂಣರ ಜೀವನಕ್ರಮ ಸಹ ಅವರದ್ದನ್ನೇ ಬಹುಮಟ್ಟಿಗೆ ಹೋಲುತ್ತಿತ್ತು. ಸಾಮಾನ್ಯ ಜನರು ಗುಡಿಸಿಲುಗಳಲ್ಲಿ ಮತ್ತು ಗುಡಾರಗಳಲ್ಲಿರು ತ್ತಿದ್ದರು. ಇವರ ನಾಯಕರು ಮರದ ದಿಮ್ಮಿಗಳಿಂದ ಕಟ್ಟಿದ ಗೋಡೆಗಳುಳ್ಳ ವಿಶಾಲ

ವಾದ ಹಜಾರಗಳಲ್ಲಿ ವಾಸಿಸುತ್ತಿದ್ದರು. ಅಲ್ಲಿ ಭೋಜನ ಕೂಟಗಳು, ಕುಡಿತ ಮತ್ತು ಚಾರಣರಿಂದ ಗಾಯನಗಳು ನಡೆಯುತ್ತಿದ್ದುವು. ಹೋಮರನ ಕಾವ್ಯದ ನಾಯಕರು, ಅಷ್ಟೇಕೆ ಅಲೆಕ್ಸಾಂಡರ್ ಮಹಾಶಯನ ಮ್ಯಾಸಿಡೋನಿಯಾದ ಗೆಳೆಯರಿಗೂ ಅಟ್ಟಿಲನ ಈ "ಪಾಳೆಯ–ರಾಜಧಾನಿ"ಯೇ ಅಂದಿನ ರೋಮನ್ ಚಕ್ರವರ್ತಿಯಾದ, ಆರ್ಕೇಡಿಯಸ್ಸನ ಮಗ ಎರಡನೆ ಥಿಯೋಡೋಸಿಯಸ್ಸನ ಸುಸಂಸ್ಕೃತ ಆದರೆ ಅವನತಿಗಿಳಿಯುತ್ತಿದ್ದ ಆಸ್ಥಾನಕ್ಕಿಂತ ಪ್ರಾಯಶಃ ಸರಿಹೋಗುತ್ತಿತ್ತು ಎನಿಸುತ್ತದೆ.

ಹಿಂದೆ ಇನ್ನೂ ನಾಗರಿಕತೆ ಪಡೆಯದಿದ್ದ ಗ್ರೀಕ್ ತಂಡಗಳು ಈಜಿಯನ್ ನಾಗರಿಕತೆಯಮೇಲೆ ಪ್ರಭಾವ ಬೀರಿದ್ದು ಸರಿಯಷ್ಟೆ. ಅಟ್ಟಿಲನ ಮುಂದಾಳತ್ವದಲ್ಲಿದ್ದ ಅಲೆಮಾರಿ ಹೂಣರಿಂದಲೂ ಮೆಡಿಟರೇನಿಯನ್ ಪ್ರದೇಶದ ಗ್ರೀಕೊ–ರೋಮನ್ ನಾಗರಿಕತೆಯ ಮೇಲೆ ಅದೇ ರೀತಿಯ ಪರಿಣಾಮವಾಗುವುದೆಂಬಂತೆ ಕೆಲಕಾಲ ಕಾಣುತ್ತಿತ್ತು. ಚರಿತ್ರೆಯಲ್ಲಿ ಹಿಂದೆ ಆಗಿ ಹೋದ ದೃಶ್ಯವೊಂದು ಮೊದಲಿಗಿಂತ ವಿಶಾಲವಾದ ರಂಗಸ್ಥಲದಲ್ಲಿ ತಿರುಗಿನಡೆಯುವುದೆಂಬಂತೆ ತೋರಿತು. ಆದರೆ ಹೂಣರಿಗೂ ಅಲೆಮಾರಿ ಜೀವನಕ್ಕೂ ಬಲವಾದ ಗಂಟಿತ್ತು. ಪ್ರಾಚೀನ ಗ್ರೀಕರನ್ನು ನಿಜವಾದ ಅಲೆಮಾರಿ ಜನರೆನ್ನುವುದಕ್ಕಿಂತ ಅಲ್ಲಿಂದಿಲ್ಲಿಗೆ ತಿರುಗುತ್ತಿದ್ದ ದನಸಾಕುತ್ತಿದ್ದ ಒಕ್ಕಲಿಗರೆನ್ನಬಹುದು. ಹೂಣರು ಧಾಳಿಮಾಡಿ ಲೂಟಿ ಹೊಡೆಯುತ್ತಿದ್ದರೇ ವಿನಃ ಎಲ್ಲಿಯೂ ನೆಲೆ ನಿಲ್ಲಲಿಲ್ಲ.

ಕೆಲವು ವರ್ಷಗಳು ಅಟ್ಟಿಲನು ಥಿಯೋಡೋಸಿಯಸ್ಸನನ್ನು ತನ್ನ ಮನಸ್ಸಿಗೆ ಬಂದಂತೆ ಗೋಳು ಗುಟ್ಟಿಸಿದನು. ಅಟ್ಟಿಲನ ಸೈನ್ಯ ಕಾನ್‌ಸ್ಟಾಂಟಿನೋಪಲ್ಲಿನವರೆಗೂ ಬಂದು ಹಾವಳಿಮಾಡಿ ಕೊಳ್ಳೆಹೊಡೆಯಿತು. ಕಡಿಮೆ ಎಂದರೆ ಎಪ್ಪತ್ತು ಪಟ್ಟಣಗಳನ್ನು ಅಟ್ಟಿಲ ಪೂರ್ಣವಾಗಿ ಧ್ವಂಸಮಾಡಿದನೆಂದು ಚರಿತ್ರಕಾರ ಗಿಬ್ಬನ್ ಹೇಳುತ್ತಾನೆ. ಥಿಯೋಡೋಸಿಯಸ್ಸನು ಇವನಿಗೆ ಕಾಣಿಕೆ ತೆತ್ತು ನಗರವನ್ನು ಉಳಿಸಿಕೊಂಡನು. ಅದೇ ಸಮಯದಲ್ಲಿಯೇ ಗೂಢಚಾರರನ್ನು ಕಳುಹಿಸಿ ಅವನನ್ನು ಕೊಲ್ಲಿಸಲು ಯತ್ನಿಸಿದನು. ಕ್ರಿ.ಶ. 451ರಲ್ಲಿ ಅಟ್ಟಿಲನ ಗಮನ ಲ್ಯಾಟಿನ್ ಭಾಷೆಯನ್ನಾಡುತ್ತಿದ್ದ ಪಶ್ಚಿಮ ರೋಮನ್ ಸಾಮ್ರಾಜ್ಯದತ್ತ ತಿರುಗಿ ಅವನು ಗಾಲ್ ಮೇಲೆ ದಂಡೆತ್ತಿ ಹೋದನು. ಉತ್ತರ ಗಾಲ್‌ನಲ್ಲಿದ್ದ ಪ್ರತಿಯೊಂದು ಪಟ್ಟಣವನ್ನೂ ಇವನು ಲೂಟಿಮಾಡಿದನು. ಕೊನೆಗೆ ಫ್ರಾಂಕರು, ವಿಸಿಗಾಥರು ಮತ್ತು ರೋಮನ್ ಸಾಮ್ರಾಜ್ಯದ ದಳಗಳು ಒಂದಾಗಿ ಇವನನ್ನು ಎದುರಿಸಿದರು. ಟ್ರಾಯ್ಸ್ ಎಂಬಲ್ಲಿ ನಡೆದ ವಿಸ್ತಾರವಾದ ಕದನದಲ್ಲಿ ಅಟ್ಟಿಲ ಸೋತುಹೋದನು. ಈ ಕದನದಲ್ಲಿ ಒಂದೂವರೆ ಲಕ್ಷದಿಂದ ಮೂರು ಲಕ್ಷದಷ್ಟು ಜನ ಸತ್ತುಹೋದರೆಂಬ ಅಂದಾಜಿದೆ. ಗಾಲಿನಲ್ಲಿನೋ ಇವನ ಮುನ್ನಡೆ ನಿಂತಿತು. ಆದರೆ ಸೈನ್ಯ ಕಟ್ಟುವುದಕ್ಕೆ ಬೇಕಾದ ಸಾಧನ ಸಂಪತ್ತು ಇವನಲ್ಲಿ ಅಪಾರವಾಗಿದ್ದು ಅದಕ್ಕೇನೂ ಧಕ್ಕೆಯಾಗಲಿಲ್ಲ. ಮಾರನೆಯ ವರ್ಷವೇ ಇವನು ವೆನಿಷಿಯದ ಮಾರ್ಗವಾಗಿ ಇಟಲಿಗೆ

ಬಂದು ಎಕಿಲಿಯ ಮತ್ತು ಪಾಡುವಾ (Aqueileia and Padua) ಪಟ್ಟಣಗಳನ್ನು ಸುಟ್ಟುಹಾಕಿ ಮಿಲಾನನ್ನು ಲೂಟಿಮಾಡಿದನು.

ಉತ್ತರ ಇಟಲಿಯ ಈ ಊರುಗಳಿಂದ ಏಡ್ರಿಯಾಟಿಕ್ ಸಮುದ್ರದ ಉತ್ತರದ ತುದಿಯಲ್ಲಿರುವ ಲಗೂನ್(lagoon) ಗಳಲ್ಲಿರುವ ದ್ವೀಪಗಳಿಗೆ ಜನರು ಓಡಿಹೋದರು. ಹೀಗೆ ವೆನಿಸ್ ನಗರ-ರಾಷ್ಟ್ರ (city state) ದ ಸ್ಥಾಪನೆಯಾಯಿತು. ಮುಂದೆ ಮಧ್ಯ ಯುಗದಲ್ಲಿ ಇದು ಪ್ರಪಂಚದ ಅತ್ಯಂತ ಪ್ರಮುಖ ವಾಣಿಜ್ಯ ಕೇಂದ್ರಗಳಲ್ಲಿ ಒಂದಾಯಿತು.

ಕ್ರಿ.ಶ. 453ರಲ್ಲಿ ಅಟ್ಟಿಲನು ತರುಣಿಯೊಬ್ಬಳನ್ನು ಮದುವೆಯಾಗಿ ಅದರ ಅಂಗವಾಗಿ ನಡೆದ ಔತಣ ಕೂಟದಲ್ಲಿ ಏಕಾಏಕಿ ಮರಣ ಹೊಂದಿದನು. ಇವನ ಸಾವಿನೊಡನೆಯೇ ಲೂಟಿಯೇ ಉದ್ದೇಶವಾಗಿದ್ದ ಇವನ ಒಕ್ಕೂಟ ಚೂರಾಗಿಹೋಯಿತು. ತಮ್ಮ ಸುತ್ತಲೂ ಇದ್ದ ಬಹುಸಂಖ್ಯಾತ ಆರ್ಯನ್ ಭಾಷೆಮನ್ನಾಡುತ್ತಿದ್ದ ಜನರಲ್ಲಿ ಸೇರಿಹೋಗಿ ಹೂಣರು ಈ ಕಾಲದಲ್ಲಿ ಚರಿತ್ರೆಯಲ್ಲಿ ಕಣ್ಮರೆಯಾಗುತ್ತಾರೆ. ಆದರೆ ಹೂಣರ ಈ ಭಾರಿ ಧಾಳಿಗಳಿಂದ ಲ್ಯಾಟಿನ್ ರೋಂ ಸಾಮ್ರಾಜ್ಯಕ್ಕೆ ಕಡೆಗಾಲ ಬಂದಿತು. ಅಟ್ಟಿಲನ ಸಾವಿನ ಬಳಿಕ ರೋಮಿನಲ್ಲಿ ಇಪ್ಪತ್ತು ವರ್ಷಗಳಲ್ಲಿ ಹತ್ತು ಚಕ್ರವರ್ತಿಗಳು ಆಳಿದರು. ಇವರನ್ನು ವ್ಯಾಂಡಲರು ಮತ್ತಿತರ ಸಂಬಳಕ್ಕಿದ್ದ ಸೈನ್ಯ ದಳಗಳು ಪಟ್ಟಕ್ಕೇರಿಸುತ್ತಿದ್ದರು. ಕಾರ್ಥೇಜಿನ ವ್ಯಾಂಡಲರು ಕ್ರಿ.ಶ. 455ರಲ್ಲಿ ರೋಮನ್ನು ಗೆದ್ದು ಕೊಳ್ಳೆ ಹೊಡೆದರು. ಓಡೋಸರ್ ಎಂಬ ರೋಮನೇತರ ದಳಗಳ ಮುಖಂಡನು ರಾಮ್ಯುಲಸ್ ಅಗಸ್ಟುಲಸ್ ಎಂಬ ದೊಡ್ಡ ಹೆಸರಿಟ್ಟುಕೊಂಡು ಚಕ್ರವರ್ತಿಯೆಂದು ಹೇಳಿಕೊಳ್ಳುತ್ತಿದ್ದ ಪುಟ್ಟೊನಿಯದ ವ್ಯಕ್ತಿಯನ್ನು ಕಡೆಗೆ ಕ್ರಿ.ಶ. 476ರಲ್ಲಿ ಒತ್ತರಿಸಿ ಪಶ್ಚಿಮ ಸಾಮ್ರಾಜ್ಯಕ್ಕೆ ಇನ್ನು ಮುಂದೆ ಯಾರೂ ಚಕ್ರವರ್ತಿಯಾಗಿರುವುದಿಲ್ಲವೆಂದು ಕಾನ್‌ಸ್ಟಾಂಟಿನೋಪಲ್ಲಿನ ಆಸ್ಥಾನಕ್ಕೆ ತಿಳಿಸಿಬಿಟ್ಟನು. ಹೀಗೆ ಅಪಮಾನಕರವಾದ ರೀತಿಯಲ್ಲಿ ಲ್ಯಾಟಿನ್ ರೋಮನ್ ಚಕ್ರಾಧಿಪತ್ಯವು ಕೊನೆಗಂಡಿತು. ಕ್ರಿ.ಶ. 493ರಲ್ಲಿ ಗಾಥರ ಥಿಯೊಡೊರಿಕ್ ರೋಮಿನ ರಾಜನಾದನು.

ಪಶ್ಚಿಮ ಮತ್ತು ಮಧ್ಯ ಯುರೋಪಿನ ಅನ್ಯಂತವೂ ರಾಜರು, ಡ್ಯೂಕ್‌ಗಳು ಇಂತಹ ನಾಮಧೇಯಗಳನ್ನಿಟ್ಟು ಕೊಂಡು ರೋಮನೇತರ ಮುಂದಾಳುಗಳು ರಾಜ್ಯಭಾರ ಮಾಡುತ್ತಿದ್ದರು: ಇವರೆಲ್ಲ ಹೆಚ್ಚು ಕಡಿಮೆ ಸ್ವತಂತ್ರರಾಗಿದ್ದರೂ ಚಕ್ರವರ್ತಿಯಲ್ಲಿ ಏನೋ ಒಂದು ವಿಧನಾದ ನಿಷ್ಠೆಯನ್ನಿಟ್ಟುಕೊಂಡಿದ್ದರು. ನೂರಾರು, ಏಕೆ ಸಾವಿರಾರು ಇಂತಹ ಪಾಳೆಯಗಾರರಿದ್ದರು. ಗಾಲ್, ಸ್ಪೇನ್, ಇಟಲಿ ಮತ್ತು ಡೇಷಿಯಗಳಲ್ಲಿ ಇನ್ನೂ ಕೂಡ ಲ್ಯಾಟಿನ್ ಭಾಷೆಯು ಸ್ಥಳೀಯ ಅಪಭ್ರಂಶ ರೂಪದಲ್ಲಿ ಉಳಿದುಕೊಂಡಿತ್ತು. ಆದರೆ ಬ್ರಿಟನ್ನಿನಲ್ಲಿ ಮತ್ತು ರೈನ್ ನದಿಯ ಪೂರ್ವಕ್ಕೆ ಜರ್ಮನ್ ಗುಂಪಿನ ಭಾಷೆಗಳು (ಬೊಹೀಮಿಯದಲ್ಲಿ ಸ್ಲಾವೋನಿಕ್

ಭಾಷೆಯಾದ ಜೆಕ್) ಜನ ಸಾಮಾನ್ಯರ ಭಾಷೆಗಳಾಗಿದ್ದುವು. ಹಿರಿಯ ಪಾದ್ರಿಗಳು ಮತ್ತು ಇತರ ಕೆಲವು ವಿದ್ಯಾವಂತರು ಲ್ಯಾಟಿನನ್ನು ಓದಿ ಬರೆಯಲು ಬಲ್ಲವರಾಗಿದ್ದರು. ಎಲ್ಲಿಯೂ ಜೀವನ ಸುರಕ್ಷಿತವಾಗಿರಲಿಲ್ಲ. ಬಲಿಷ್ಠರಲ್ಲಿ ಮಾತ್ರ ಆಸ್ತಿಯಿರುತ್ತಿತ್ತು. ದುರ್ಗಗಳ ಸಂಖ್ಯೆ ಹೆಚ್ಚಾಯಿತು. ಘಾಟಾಮಾರ್ಗಗಳು ಹಾಳಾಗಿಹೋದವು. ಆರನೇ ಶತಮಾನ ಉದಯವೆಂದರೆ ಸಮಗ್ರ ಪಾಶ್ಚಾತ್ಯ ಪ್ರಪಂಚದಲ್ಲಿ ವಿಚ್ಛಿನ್ನೀಕರಣ ಮತ್ತು ಬೌದ್ಧಿಕ ಅಂಧಕಾರಗಳ ಯುಗ. ಸನ್ಯಾಸಿಗಳು ಮತ್ತು ಕ್ರೈಸ್ತ ಮಿಷನರಿಗಳಿಲ್ಲದಿದ್ದರೆ ಲ್ಯಾಟಿನ್ ವಿದ್ಯೆ ಸಂಪೂರ್ಣವಾಗಿ ನಶಿಸಿಯೇ ಹೋಗುತ್ತಿತ್ತು.

ರೋಮನ್ ಸಾಮ್ರಾಜ್ಯ ಬೆಳೆದು ಕೊಂಡು ಬಂದುದಕ್ಕೆ, ಬಳಿಕ ಹೀಗೆ ಪೂರ್ತಿ ಹಾಳಾಗಿ ಹೋದುದಕ್ಕೆ ಕಾರಣಗಳೇನು ? ಪೌರತ್ವದ ಭಾವನೆ ಈ ರಾಜ್ಯವನ್ನು ಒಂದುಗೂಡಿಸಿದ್ದುದರಿಂದ ಮೊದಲು ರೋಂ ಬೆಳೆಯಿತು. ರೋಂ ಪ್ರಜಾಪ್ರಭುತ್ವ ವಿಸ್ತರಣೆಯ ದಿನಗಳಲ್ಲಿ ಏಕೆ ರೋಂ ಸಾಮ್ರಾಜ್ಯದ ಮೊದಲ ದಿನಗಳಲ್ಲಿ ಕೂಡ ಅದರ ಪೌರತ್ವದ ಮೇಲೆ ಅಭಿಮಾನವಿದ್ದವರು ಅನೇಕರು ಇನ್ನೂ ಇದ್ದರು. ರೋಮಿನ ಪೌರತ್ವ ಪಡೆದಿರುವುದು ಒಂದು ದೊಡ್ಡ ಭಾಗ್ಯವೂ ಹೌದು ಹೊಣೆಗಾರಿಕೆಯೂ ಹೌದು ಎಂದು ಅರಿತಿದ್ದ ಇವರಿಗೆ ರೋಮಿನ ನ್ಯಾಯಾಂಗದ ಆಸರೆಯಲ್ಲಿ ತಮ್ಮ ಹಕ್ಕುಗಳು ಸುಭದ್ರವೆಂಬ ವಿಶ್ವಾಸವೂ ಇದ್ದಿತು, ರೋಮಿನ ಹೆಸರಿನಲ್ಲಿ ಎಂತಹ ತ್ಯಾಗಕ್ಕೂ ಇವರು ಸಿದ್ಧರಾಗಿದ್ದರು. ಈ ಸಾಮ್ರಾಜ್ಯದ ಎಲ್ಲೆಗಳ ಆಚೆಯೂ ಬಹುದೂರದವರೆಗೆ ರೋಮ್ ಎಂದರೆ ನಿಷ್ಪಕ್ಷಪಾತ ಭಾವನೆಯ, ಶ್ರೇಷ್ಠವಾದ ನ್ಯಾಯಬದ್ಧ ವ್ಯವಸ್ಥೆ ಎಂಬ ಖ್ಯಾತಿಹರಡಿತ್ತು. ಆದರೂ ಪ್ಯೂನಿಕ್ ಯುದ್ಧಗಳು ನಡೆಯುತ್ತಿರುವಾಗಲೇ ಐಶ್ವರ್ಯ ಮತ್ತು ಗುಲಾಮಗಿರಿಗಳಿಂದ ಈ ಪೌರತ್ವದ ಅರಿವು ಶಿಥಿಲವಾಗುತಿತ್ತು. ಮುಂದೆ ಪೌರತ್ವ ಹರಡುತ್ತಾ ಹೋಯಿತು, ಪೌರತ್ವದ ಭಾವನೆ ಹರಡಲಿಲ್ಲ.

ಎಷ್ಟೆಂದರೂ ರೋಮ್ ಸಾಮ್ರಾಜ್ಯ ಅಂತಹ ಪರಿಪಕ್ವವಾದ ಸಂಸ್ಥೆಯಾಗಿರಲಿಲ್ಲ. ಪೌರರಿಗೆ ಇದರಿಂದ ಯಾವ ಶಿಕ್ಷಣವೂ ದೊರಕುತ್ತಿರಲಿಲ್ಲ ವೃದ್ಧಿಯಾಗುತ್ತಿದ್ದ ಇದರ ಪೌರವೃಂದ ಸಾಮ್ರಾಜ್ಯವೆಂದರೇನೆಂದು ಅರ್ಥಮಾಡಿಕೊಳ್ಳಬೇಕೆಂಬ ಉದ್ದೇಶವೂ ಆಗ ಇರಲೇ ಇಲ್ಲ. ಸಾಮ್ರಾಜ್ಯದ ಆಗುಹೋಗುಗಳನ್ನು ಕುರಿತು ನಿರ್ಧಾರ ತೆಗೆದುಕೊಳ್ಳುವುದರಲ್ಲಿ ಪೌರರು ಸಹಭಾಗಿಗಳಾಗಬೇಕೆಂಬ ಭಾವನೆಯೂ ಇರಲಿಲ್ಲ. ಪ್ರಜೆಗಳೆಲ್ಲರಿಗೂ ಸಾಮಾನ್ಯವಾದ ಒಂದು ತಿಳಿವಳಿಕೆ ಬರುವುದಕ್ಕೆ ಸಾಧನವಾದ ಶಾಲಾ ವ್ಯವಸ್ಥೆಯಾಗಲೀ ಸಾಮೂಹಿಕವಾಗಿ ಎಲ್ಲರೂ ಕಾರ್ಯ ನಿರ್ವಹಣೆಯಲ್ಲಿ ಪಾಲ್ಗೊಳ್ಳಲು ಸಹಾಯಕವಾಗುವ ವಾರ್ತಾ ಪ್ರಸಾರಣಾ ವ್ಯವಸ್ಥೆಯಾಗಲೀ ಆಗ ಇರಲಿಲ್ಲ. ಮೇರಿಯಸ್ ಮತ್ತು ಸುಲ್ಲರ ಕಾಲದಿಂದೀಚೆಗೆ ಅಧಿಕಾರಕ್ಕಾಗಿ ಸೆಣಸಾಡುತ್ತಿದ್ದ ಮುಂದಾಳುಗಳಿಗೆ ಜನಾಭಿಪ್ರಾಯವನ್ನು ಸೃಷ್ಟಿಸಿ ಸಾಮ್ರಾಜ್ಯದ ಕಾರ್ಯಭಾರಗಳ ಮೇಲೆ ಅದರ ಪ್ರಭಾವವನ್ನು ಉಪಯೋಗಿಸಿಕೊಳ್ಳಬಹುದೆಂಬ

ಯೋಚನೆ ಯಾವಾಗಲೂ ಬರಲಿಲ್ಲ. ಪೌರತ್ವದ ಹುಮ್ಮಸ್ಸಿನ ಭಾವನೆ ಉಪವಾಸ ಬಿದ್ದು ಸತ್ತು ಹೋಯಿತು. ಅದು ಸಾಯುತ್ತಿರುವುದೂ ಯಾರ ಗಮನಕ್ಕೂ ಬರಲಿಲ್ಲ. ಮಾನವ ಸಮಾಜದ ಚಕ್ರಾಧಿಪತ್ಯಗಳು, ಪ್ರಭುತ್ವಗಳು ಮತ್ತೆಲ್ಲಾ ಸಂಸ್ಥೆಗಳೂ ಮೂಲತಃ ಮಾನವನ ಮನಸ್ಸಿನ ವಿಚಾರಶಕ್ತಿ ಮತ್ತು ಸಂಕಲ್ಪ ಶಕ್ತಿಗಳನ್ನು ಅವಲಂಬಿಸಿರುತ್ತವೆ. ಕಡೆಗೆ ರೋಮ್ ಸಾಮ್ರಾಜ್ಯಕ್ಕೆ ಸಂಕಲ್ಪಶಕ್ತಿಯ ಆಧಾರ ಇಲ್ಲದೆ ಹೋಯಿತು. ಸಾಮ್ರಾಜ್ಯವೂ ಕೊನೆಗಂಡಿತು.

ರೋಂ ಸಾಮ್ರಾಜ್ಯದ ಲ್ಯಾಟಿನ್ ಭಾಗ ಐದನೆ ಶತಮಾನದಲ್ಲಿಯೇ ಗತಿಸಿ ಹೋದರೂ ಮುಂದೆ ಅದರ ಪ್ರತಿಷ್ಠೆ ಮತ್ತು ಸಂಪ್ರದಾಯಗಳ ಪ್ರಯೋಜನ ಪಡೆದು ಬೆಳೆಯುವ ಸಂಸ್ಥೆಯೊಂದು ಅದರ ಆವರಣದಲ್ಲೇ ಹುಟ್ಟಿಕೊಂಡಿತ್ತು. ಇದೇ ಕ್ಯಾಥೊಲಿಕ್ ಚರ್ಚಿನ ಲ್ಯಾಟಿನ್ ಶಾಖೆ. ರೋಮ್ ಸಾಮ್ರಾಜ್ಯ ಅಳಿದುಹೋದರೂ ಇದು ಉಳಿದುಕೊಂಡಿತು. ಇದಕ್ಕೆ ಕಾರಣಗಳಿವು: ಮಾನವರ ಮನಸ್ಸು ಮತ್ತು ಸಂಕಲ್ಪಗಳೆರಡಕ್ಕೂ ಇದು ಆಕರ್ಷಕವಾಗಿತ್ತು; ಒಂದು ಸಂಸ್ಥೆಯನ್ನು ಒಡೆದು ಹೋಗದಂತೆ ಇಟ್ಟಿರುವುದರಲ್ಲಿ ಕಾನೂನುಗಳು ಅಥವಾ ಸೈನ್ಯಗಳಿಗಿಂತ ಪ್ರಭಾವಶಾಲಿಗಳಾದ ಪುಸ್ತಕಗಳು, ಶಿಕ್ಷಕರು ಮತ್ತು ಧರ್ಮಪ್ರಚಾರಕರ ಒಂದು ದೊಡ್ಡ ವ್ಯವಸ್ಥೆಯೇ ಇದರಲ್ಲಿತ್ತು. ನಾಲ್ಕು ಮತ್ತು ಐದನೇ ಶತಮಾನಗಳ ಉದ್ದಕ್ಕೂ ಸಾಮ್ರಾಜ್ಯ ನಶಿಸಿ ಹೋಗುತ್ತಿದ್ದಾಗಲೇ ಕ್ರೈಸ್ತ ಧರ್ಮವು ಯೂರೋಪಿನಲ್ಲಿ ಎಲ್ಲ ಕಡೆಯಲ್ಲೂ ಒಡೆತನದೆಡೆಗೆ ಸಾಗುತ್ತಿತ್ತು. ತನ್ನನ್ನು ಗೆದ್ದ ರೋಮನೇತರರನ್ನು ಇದು ಸೋಲಿಸಿತು. ಅಟ್ಟಿಲ ರೋಂ ಮೇಲೆ ದಂಡೆತ್ತಿ ಬರುವ ಸೂಚನೆಗಳಿದ್ದಾಗ ರೋಮಿನ ಪ್ಯಾಟ್ರಿಯಾರ್ಕನು ಅವನನ್ನು ತಡೆದು ತನ್ನ ನೈತಿಕ ಬಲವೊಂದರಿಂದಲೇ ಅವನನ್ನು ಹಿಂದಿರುಗಿಸಿ ಬಿಟ್ಟನು. ಎಂತಹ ಸೈನ್ಯಕ್ಕೂ ಇದು ಸಾಧ್ಯವಾಗುತ್ತಿರಲಿಲ್ಲ.

ರೋಮಿನ ಪೋಪ್ ಅಥವಾ ಪ್ಯಾಟ್ರಿಯಾರ್ಕನು ಕ್ರೈಸ್ತ ಸಭೆಗೆಲ್ಲಾ ತಾನೇ ಮುಖ್ಯಸ್ಥನೆಂದು ಘೋಷಿಸಿಕೊಂಡನು. ಚಕ್ರವರ್ತಿಗಳ ಕಾಲ ಮುಗಿದು ಹೋಗುತ್ತಲೂ ಅವರುಗಳ ಬಿರುದುಗಳನ್ನೂ ಹಕ್ಕುಗಳನ್ನೂ ಸಹ ಈತನೇ ವಹಿಸಿಕೊಂಡನು. ರೋಮಿನ ಚಕ್ರವರ್ತಿಗಳ ಬಿರುದುಗಳಲ್ಲೆಲ್ಲಾ ಅತ್ಯಂತ ಹಳೆಯದಾದ "ಪಾಂಟಿಫೆಕ್ಸ್ ಮ್ಯಾಕ್ಸಿಮುಸ್" ಅಂದರೆ ರೋಮ್ ಪ್ರಭುತ್ವದ ಯಾಜ್ಞಿಕ ಅರ್ಚಕರ ಮುಖ್ಯಸ್ಥ ಎಂಬ ಬಿರುದನ್ನೂ ಇವನೇ ಇಟ್ಟುಕೊಂಡನು.

ಬೈಜಾಂಟೈನ್ ಮತ್ತು ಸಸ್ಸನಿಡ್ ಸಾಮ್ರಾಜ್ಯಗಳು

ರೋಮ್ ಸಾಮ್ರಾಜ್ಯದ, ಗ್ರೀಕ್ ಭಾಷೆಯನ್ನಾಡುತ್ತಿದ್ದ ಪೂರ್ವಾರ್ಧವು ಪಶ್ಚಿಮ ರೋಂ ಸಾಮ್ರಾಜ್ಯಕ್ಕಿಂತ ರಾಜಕೀಯವಾಗಿ ಸ್ಥಿರವಾಗಿ ಉಳಿಯಿತು. ಐದನೇ ಶತಮಾನದಲ್ಲಿ ಮೂಲ ಲ್ಯಾಟಿನ್ ಸಾಮ್ರಾಜ್ಯಕ್ಕೆ ಸಂಪೂರ್ಣ ಅಂತ್ಯವನ್ನು ತಂದ ವಿಪತ್ತುಗಳನ್ನೆಲ್ಲಾ ಇದು ಸಹಿಸಿಕೊಂಡಿತು. ಎರಡನೆ ಥಿಯೋಡೋಸಿಯಸ್

ಚಕ್ರವರ್ತಿಯನ್ನು ಅಟ್ಟಿಲನು ಗೋಳುಹುಯ್ದುಕೊಂಡುದೇ ಅಲ್ಲದೆ ಕೊಳ್ಳೆ ಹೊಡೆಯುತ್ತಾ ಹೆಚ್ಚು ಕಡಿಮೆ ಕಾನ್‌ಸ್ಟಾಂಟಿನೋಪಲ್ಲಿನ ಕೋಟೆ ಗೋಡೆಗಳವರೆಗೆ ಬಂದರೂ ಪಟ್ಟಣ ಹಾಳಾಗದೆ ಇಡಿಯಾಗಿ ಉಳಿಯಿತು. ನ್ಯೂಬಿಯನ್ನರು ನೈಲ್ ನದಿಯ ಮಾರ್ಗವಾಗಿ ಬಂದು ಮೇಲಣ ಈಜಿಪ್ಟನ್ನು ಲೂಟಿ ಮಾಡಿದರೂ ಕೆಳಗಣ ಈಜಿಪ್ಟ್ ಮತ್ತು ಅಲೆಕ್ಸಾಂಡ್ರಿಯಗಳು ತಕ್ಕಮಟ್ಟಿಗೆ ಅನುಕೂಲ ಪರಿಸ್ಥಿತಿಯಲ್ಲೇ ಉಳಿದುಕೊಂಡುವು. ಏಷ್ಯಮೈನರಿನ ಅತ್ಯಧಿಕ ಭಾಗ ಸಸ್ಸನಿಡ್ ಪರ್ಷಿಯನ್ನರನ್ನು ಎದುರಿಸುವುದರಲ್ಲಿ ಯಶಸ್ವಿಯಾಯಿತು.

ಪಶ್ಚಿಮದಲ್ಲಿ ಸಂಪೂರ್ಣ ಅಂಧಕಾರ ಯುಗವೆನಿಸಿದ 6ನೇ ಶತಮಾನದ ಪೂರ್ವದಲ್ಲಿ ಗ್ರೀಕ್ ಪ್ರಭುತ್ವದ ಪುನರುಜ್ಜೀವನವನ್ನು ಕಂಡಿತು. ಒಂದನೆಯ ಜಸ್ಟಿನಿಯನ್ (ಕ್ರಿ.ಶ. 527-565) ಮಹತ್ವಾಕಾಂಕ್ಷಿಯೂ ಉತ್ಸಾಹಿಯೂ ಆಗಿದ್ದನು. ಪೂರ್ವಜೀವನದಲ್ಲಿ ನಟಿಯಾಗಿದ್ದು ಬಳಿಕ ಚಕ್ರವರ್ತಿನಿಯಾಗಿದ್ದ ಇವನ ಪತ್ನಿ ಥಿಯೋಡೋರಾ ಸಹ ಅಷ್ಟೇ ಸಮರ್ಥಳಾಗಿದ್ದಳು. ಜಸ್ಟಿನಿಯನ್ ಉತ್ತರ ಆಫ್ರಿಕವನ್ನು ವ್ಯಾಂಡಲರಿಂದಲೂ ಇಟಲಿಯ ಅಧಿಕ ಭಾಗವನ್ನು ಗಾಥರಿಂದಲೂ ಗೆದ್ದುಕೊಂಡನು. ದಕ್ಷಿಣ ಸ್ಪೇನನ್ನೂ ಇವನು ತಿರುಗಿ ಪಡೆದುಕೊಂಡನು. ಬರಿಯ ಭೂಸೈನ್ಯ ಮತ್ತು ಜಲಸೈನ್ಯಗಳ ಸಾಹಸಗಳಲ್ಲೇ ಇವನ ಉತ್ಸಾಹ ಕೊನೆಗಾಣಲಿಲ್ಲ. ಒಂದು ವಿಶ್ವವಿದ್ಯಾಲಯವನ್ನು ಸ್ಥಾಪಿಸಿದುದಲ್ಲದೆ ಕಾನ್‌ಸ್ಟಾಂಟಿನೋಪಲ್ಲಿನಲ್ಲಿರುವ ಸೆಂಟ್‌ಸೋಫಿಯ ದೇವಾಲಯವನ್ನು ಕಟ್ಟಿಸಿ ರೋಮನ್ ನ್ಯಾಯ ಸೂತ್ರಗಳನ್ನು ಕ್ರೋಢೀಕರಿಸಿದನು. ಆದರೆ ತನ್ನ ವಿಶ್ವವಿದ್ಯಾಲಯಕ್ಕೆ ಯಾವ ಪ್ರತಿಸ್ಪರ್ಧಿಯೂ ಇರಬಾರದೆಂಬ ಉದ್ದೇಶದಿಂದ ಅಥೆನ್ಸಿನಲ್ಲಿ ಪ್ಲೇಟೋವಿನ ಕಾಲದಿಂದ ಅವ್ಯಾಹತವಾಗಿ ನಡೆದುಬಂದಿದ್ದ-ಅಂದರೆ ಸುಮಾರು ಸಾವಿರ ವರ್ಷಗಳಿಂದ ಇದ್ದ ತತ್ತ್ವಶಾಸ್ತ್ರದ ಶಾಲೆಗಳನ್ನು ಮುಚ್ಚಿಸಿ ಬಿಟ್ಟನು.

ಮೂರನೆಯ ಶತಮಾನದಿಂದೀಚೆಗೆ ಪರ್ಷಿಯ ಸಾಮ್ರಾಜ್ಯವು ಬೈಜಾಂಟೈನಿನೊಡನೆ ಒಂದೇ ಸಮನಾಗಿ ಸ್ಪರ್ಧಿಸುತ್ತಲೇ ಇದ್ದಿತು. ಇವೆರಡು ಸಾಮ್ರಾಜ್ಯಗಳಿಂದಾಗಿ ಏಷ್ಯಾಮೈನರ್, ಸಿರಿಯ, ಈಜಿಪ್ಟ್‌ಗಳು ನಿರಂತರವಾದ ಕ್ಷೋಭೆ ಮತ್ತು ಯುದ್ಧದ ಹಾವಳಿಗೊಳಗಾಗಿದ್ದುವು. ಕ್ರಿ.ಶ. ಒಂದನೇ ಶತಮಾನದಲ್ಲಿ ಈ ಪ್ರದೇಶಗಳು ಉನ್ನತ ಮಟ್ಟದ ನಾಗರಿಕತೆಯಿಂದ ಕೂಡಿದ್ದುವು. ಜನರಿಂದ ತುಂಬಿದ್ದು ಸಂಪದ್ಭರಿತವಾಗಿದ್ದುವು. ಆದರೆ ಸೈನ್ಯಗಳ ಅವಿಚ್ಛಿನ್ನ ಚಲನವಲನಗಳು, ಹತ್ಯಾಕಾಂಡಗಳು, ಲೂಟಿ ಮತ್ತು ಯುದ್ಧಕ್ಕಾಗಿ ವಿಧಿಸಿದ ತೆರಿಗೆಗಳು, ಈ ಎಲ್ಲ ಕಾರಣಗಳಿಂದಾಗಿ ಈ ರಾಜ್ಯಗಳು ಕ್ಷೀಣಿಸಿ ಹೋಗಿ ಕಡೆಗೆ ಈ ಪ್ರದೇಶಗಳಲ್ಲಿ ಅಲ್ಲೊಬ್ಬರು ಇಲ್ಲೊಬ್ಬರಂತೆ ಬಡ ರೈತರು ಜೀವಿಸುತ್ತಿದ್ದ ಹಳ್ಳಿಗಾಡು, ಜರ್ಝರಿತವಾಗಿ ಹಾಳಾಗಿ ಹೋಗಿದ್ದ ಪಟ್ಟಣಗಳು ಉಳಿದುಕೊಂಡುವು. ಈ ವಿಷಾದ ಪೂರ್ಣ ಶೋಷಣೆ ಮತ್ತು ಅವ್ಯವಸ್ಥೆಗಳಿಂದ ಕೆಳಗಣ ಈಜಿಪ್ಟಿಗೆ ಬಹುಶಃ ಉಳಿದ

ರಾಜ್ಯಗಳಷ್ಟು ತೊಂದರೆಯಾಗಲಿಲ್ಲ . ಕಾನ್‌ಸ್ಟಾಂಟಿನೋಪಲ್ಲಿಯಂತೆಯೇ ಅಲೆಕ್ಸಾಂಡ್ರಿಯದ ಮೂಲಕವೂ ಪೂರ್ವಪಶ್ಚಿಮಗಳ ನಡುವಿನ ವ್ಯಾಪಾರ ಕ್ರಮೇಣ ಕಡಿಮೆಯಾಗುತ್ತಿದ್ದರೂ ನಡೆಯುತ್ತಿತ್ತು.

ಹೀಗೆ ಕಾದಾಡಿಕೊಂಡು ಕ್ಷೀಣಿಸುತ್ತಿದ್ದ ಈ ಸಾಮ್ರಾಜ್ಯಗಳೆರಡರಲ್ಲೂ ವಿಜ್ಞಾನ ಮತ್ತು ರಾಜ್ಯನೀತಿಗಳು ಅಳಿದುಹೋದಂತೆಯೇ ತೋರುತ್ತಿದ್ದುವು. ತಮ್ಮನ್ನು ತುಳಿದು ಹಾಕುವವರೆಗೂ ಅಥೆನ್ಸಿನ ಕಟ್ಟಕಡೆಯ ತತ್ತ್ವಶಾಸ್ತ್ರಜ್ಞರು ಪೂರ್ವಕಾಲದ ಶ್ರೇಷ್ಠ ಗ್ರಂಥಗಳ ಮೂಲಪಾಠಗಳನ್ನು ಅವುಗಳ ಅರ್ಥ ತಿಳಿಯದಿದ್ದರೂ ಅಗಾಧವಾದ ಪೂಜ್ಯಭಾವನೆಯಿಂದ ಉಳಿಸಿಕೊಂಡು ಬಂದಿದ್ದರು. ಆದರೆ ಈ ಕೃತಿಗಳಲ್ಲಿ ಅಂತರ್ಗತವಾಗಿರುವ ಯಥಾರ್ಥ ನಿರೂಪಣೆ ಮತ್ತು ಅನ್ವೇಷಣೆಗಳ ಸಂಪ್ರದಾಯವನ್ನು ಮುಂದುವರಿಸುವಂತಹ ಧೈರ್ಯವಾಗಿ ಸ್ವತಂತ್ರವಾಗಿ ಆಲೋಚನೆ ಮಾಡುವ ಪರಾಧೀನರಲ್ಲದ ವ್ಯಕ್ತಿಗಳು ಪ್ರಪಂಚದಲ್ಲಿ ಉಳಿದಿರಲಿಲ್ಲ. ಸಾಮಾಜಿಕ ಮತ್ತು ರಾಜಕೀಯ ಅವ್ಯವಸ್ಥೆಗಳು ಇಂತಹ ಜನ ಕಣ್ಮರೆಯಾಗುವುದಕ್ಕೆ ಕಾರಣ ಎನ್ನಬಹುದಾದರೂ ಮಾನವರ ಪ್ರಜ್ಞೆ ಅಂದು ಉದ್ರೇಕಗೊಂಡ ಸ್ಥಿತಿಯಲ್ಲಿದ್ದು ಬರಡಾಗಿ ಹೋಗಿದ್ದಕ್ಕೆ ಮತ್ತೊಂದು ಕಾರಣವೂ ಇತ್ತು. ಪರ್ಷಿಯ ಮತ್ತು ಬೈಜಾಂಟೈನ್‌ಗಳೆರಡರಲ್ಲೂ ಆಗ ಅಸಹಿಷ್ಣುತೆಯ ಯುಗ ನಡೆಯುತ್ತಿತ್ತು. ಈ ಎರಡೂ ಸಾಮ್ರಾಜ್ಯಗಳೂ ಮಾನವ ಪ್ರಜ್ಞೆ ಸ್ವತಂತ್ರವಾಗಿ ವರ್ತಿಸಲು ಅಡ್ಡಿ ತರುವಂತಹ ಹೊಸರೀತಿಯ ಧರ್ಮಪ್ರಧಾನ ಸಾಮ್ರಾಜ್ಯಗಳಾಗಿದ್ದುವು.

ಅತ್ಯಂತ ಪ್ರಾಚೀನ ಸಾಮ್ರಾಜ್ಯಗಳೂ ಯಾವುದಾದರೊಬ್ಬ ದೇವರ ಅಥವಾ ದೈವ ಸ್ವರೂಪಿ ದೊರೆಯ ಆರಾಧನೆಯನ್ನು ಕೇಂದ್ರವನ್ನಾಗಿ ಉಳ್ಳ ಧರ್ಮ ಪ್ರಧಾನ ರಾಜ್ಯಗಳಾಗಿದ್ದುವು ಎನ್ನುವುದು ನಿಜ. ಅಲೆಕ್ಸಾಂಡರನನ್ನು ದೇವರಂತೆಯೇ ಜನ ಕಾಣುತ್ತಿದ್ದರು. ಸೀಸರ್‌ಗಳ ಹೆಸರಿನಲ್ಲಿ ಬಲಿಪೀಠಗಳೂ ದೇವಸ್ಥಾನಗಳೂ ಇರುತ್ತಿದ್ದು ಅಷ್ಟರ ಮಟ್ಟಿಗಾದರೂ ಅವರಿಗೆಲ್ಲಾ ದೇವರ ಸ್ಥಾನವಿತ್ತು. ಅವುಗಳಲ್ಲಿ ಧೂಪ ಉರಿಸುವುದು ರೋಮಿಗೆ ಜನರು ನಿಷ್ಠರಾಗಿದ್ದಾರೆಯೇ ಎಂದು ಪರೀಕ್ಷಿಸುವುದಕ್ಕೆ ಒಂದು ಸಾಧನವಾಗಿತ್ತು. ಆದರೆ ಈ ಹಳೆಯ ಧರ್ಮಗಳು ಮನುಷ್ಯರ ಕ್ರಿಯೆ ಮತ್ತು ವಸ್ತುಸ್ಥಿತಿಗಳನ್ನು ಆಧರಿಸಿದ್ದುವು. ಅವರ ಮನಸ್ಸನ್ನು ಇವು ಆಕ್ರಮಿಸಲು ಹೋಗುತ್ತಿರಲಿಲ್ಲ. ಮನುಷ್ಯನೊಬ್ಬನು ಬಲಿಯನ್ನರ್ಪಿಸಿ ದೇವರಿಗೆ ಕೈಮುಗಿದರೆ ಸಾಕಾಗಿತ್ತು, ಅದನ್ನು ಕುರಿತು ಅವನು ಏನು ಬೇಕಾದರೂ ಯೋಚಿಸುವುದಿರಲಿ ಏನನ್ನು ಹೇಳುವುದಕ್ಕೂ ಅವನಿಗೆ ಸ್ವಾತಂತ್ರ್ಯವಿತ್ತು. ಆದರೆ ಪ್ರಪಂಚದಲ್ಲಿ ಹೊಸದಾಗಿ ಬಂದಿದ್ದ ಧರ್ಮಗಳು ; ಅದರಲ್ಲೂ ಕ್ರೈಸ್ತಧರ್ಮ–ಅಂತರ್ಮುಖಿಗಳಾಗಿದ್ದುವು. ಇವುಗಳನ್ನು ಸುಮ್ಮನೆ ಅನುಸರಿಸಿದರೆ ಸಾಲುತ್ತಿರಲಿಲ್ಲ, ಅರ್ಥ ಮಾಡಿಕೊಂಡು ನಂಬಬೇಕಾಗಿತ್ತು. ಸಹಜವಾಗಿಯೇ ಹೀಗೆ ನಂಬಬೇಕಾಗಿದ್ದ ಸಂಗತಿಗಳ ನಿಖರವಾದ ಅರ್ಥವೇನು ಎಂದು ಭಯಂಕರ ವಿವಾದಗಳು ಉಂಟಾದುವು.

ಈ ಧರ್ಮಗಳು ಆಳವಾದ ನಂಬಿಕೆಯ ಮೇಲೆ ನಿಂತಿದ್ದ ಧರ್ಮಗಳು. ಇಲ್ಲಿಂದ ಮುಂದೆ ಭೂಮಿಯ ಮೇಲೆ "ಧರ್ಮ ಸಮ್ಮತ ನಂಬಿಕೆ" (orthodoxy) ಎಂಬ ಪದವೊಂದು ಕಾಣಿಸಿಕೊಳ್ಳುತ್ತದೆ. ಮತ್ತು ಮಾಡುವ ಕ್ರಿಯೆಗಳಷ್ಟೇ ಅಲ್ಲದೆ ಆಡುವ ಮಾತುಗಳು ವೈಯಕ್ತಿಕ ಆಲೋಚನೆಗಳೂ ಸಹ ಒಂದು ನಿರ್ದಿಷ್ಟವಾದ ಬೋಧನೆಯ ಪರಿಮಿತಿಯಲ್ಲೇ ಇರಬೇಕು ಎಂಬ ಕಠಿಣ ಸಂಕಲ್ಪವನ್ನೂ ಪ್ರಪಂಚ ಕಂಡಿತು. ತಪ್ಪು ಅಭಿಪ್ರಾಯವನ್ನು ಪಡೆದಿರುವುದು, ಅದಕ್ಕಿಂತ ಹೆಚ್ಚಾಗಿ ಅಂತಹ ಅಭಿಪ್ರಾಯವನ್ನು ಮತ್ತೊಬ್ಬರಿಗೆ ತಿಳಿಸುವುದು ಬುದ್ಧಿ ಸರಿಯಿಲ್ಲದವರ ದೋಷಗಳು ಎಂದುಕೊಳ್ಳುವುದರ ಬದಲು ಅವು ಅವರ ಆತ್ಮಗಳನ್ನು ಶಾಶ್ವತ ವಿನಾಶಕ್ಕೆ ಗುರಿಮಾಡುವ ನೈತಿಕ ಅಪರಾಧಗಳೆಂದು ಇನ್ನು ಮುಂದೆ ಎಣಿಸಲು ಆರಂಭಿಸಿದರು.

ಮೂರನೇ ಶತಮಾನದಲ್ಲಿ ಸಸ್ಸನಿಡ್ ವಂಶವನ್ನು ಸ್ಥಾಪಿಸಿದ ಒಂದನೇ ಆರ್ಧಶಿರ್ ಮತ್ತು ನಾಲ್ಕನೆಯ ಶತಮಾನದಲ್ಲಿ ರೋಮ್ ಸಾಮ್ರಾಜ್ಯವನ್ನು ಪುನರ್ರಚಿಸಿದ ಕಾನ್‌ಸ್ಟಂಟೈನ್ ಮಹಾಶಯ ಇವರಿಬ್ಬರೂ ಧರ್ಮಸಂಸ್ಥೆಗಳ ನೆರವನ್ನು ಪಡೆದುಕೊಂಡರು. ಧಾರ್ಮಿಕ ಸಂಸ್ಥೆಗಳು ಮಾನವರ ಸಂಕಲ್ಪ ಶಕ್ತಿಯನ್ನು ನಿಯಂತ್ರಿಸಿ ಉಪಯೋಗಿಸಿಕೊಳ್ಳಬಲ್ಲ ಹೊಸ ಸಾಧನಗಳು ಎಂದು ಇವರು ಕಂಡುಕೊಂಡದ್ದೇ ಇದಕ್ಕೆ ಕಾರಣ. ಈ ಎರಡು ಸಾಮ್ರಾಜ್ಯಗಳಲ್ಲೂ ನಾಲ್ಕನೇ ಶತಮಾನ ಮುಗಿಯುವ ಮೊದಲೇ ಸ್ವತಂತ್ರವಾಗಿ ಮಾತನಾಡುವವರನ್ನೂ ಮತಧರ್ಮಗಳಲ್ಲಿ ಹೊಸ ಅಂಶಗಳನ್ನು ಆಚರಣೆಗೆ ತಂದವರನ್ನೂ ಹಿಂಸಿಸುವುದು ಮೊದಲಾಗಿತ್ತು. ಅರ್ಚಕ ವರ್ಗ ದೇವಸ್ಥಾನಗಳು ಬಲಿಪೀಠದ ಮುಂದೆ ಸದಾ ಉರಿಯುತ್ತಿರುವ ಪವಿತ್ರ ಅಗ್ನಿ ಈ ಎಲ್ಲ ಅಂಶಗಳಿರುತ್ತಿದ್ದ ಪ್ರಾಚೀನ ಪರ್ಷಿಯದ ಜರತೂಷ್ಟ್ರನ ಮತ ಆರ್ಧಶಿರನ ಸರ್ಕಾರದ ಅಧಿಕೃತ ಧರ್ಮವಾಗಲು ತಕ್ಕುದಾಗಿ ಸಿದ್ಧವಾಗಿತ್ತು. ಮೂರನೇ ಶತಮಾನದ ಅಂತ್ಯದ ಮೊದಲೇ ಈ ಮತ ಕ್ರೈಸ್ತರನ್ನು ಹಿಂಸಿಸುತ್ತಿತ್ತು. ಕ್ರಿ.ಶ. 277ರಲ್ಲಿ ಹೊಸ ಧರ್ಮವೊಂದರ ಪ್ರವರ್ತಕನಾದ ಮಾನಿ ಎಂಬುವನನ್ನು ಶಿಲುಬೆಗೇರಿಸಿ ಚರ್ಮ ಸುಲಿಸಲಾಯಿತು. ಇವನ ಅನುಯಾಯಿಗಳನ್ನು ಮಾನಿಕಯನರೆನ್ನುತ್ತಾರೆ. ಕಾನ್‌ಸ್ಟಾಂಟನೋಪಲ್ಲಿನಲ್ಲಿ ಕ್ರೈಸ್ತ ಸಂಪ್ರದಾಯ ವಿರುದ್ಧ ಅಭಿಪ್ರಾಯಗಳನ್ನು ಹುಡುಕಿ ಹುಡುಕಿ ಶಿಕ್ಷಿಸುತ್ತಿದ್ದರು. ಕ್ರೈಸ್ತ ಧರ್ಮವು ಮಾನಿಕಿಯನ್ ಧರ್ಮದ ಭಾವನೆಗಳಿಂದ ಕಲುಷಿತವಾಗುತ್ತಿತ್ತು. ಅದಕ್ಕಾಗಿ ಆ ಧರ್ಮವನ್ನು ಅತ್ಯಂತ ಕ್ರೂರವಾದ ರೀತಿಯಲ್ಲಿ ಎದುರಿಸುತ್ತಿದ್ದರು. ಕ್ರೈಸ್ತ ಭಾವನೆಗಳ ಜರತೂಷ್ಟ್ರನ ಮತವನ್ನು ಅಶುದ್ಧಗೊಳಿಸುತ್ತಿದ್ದುವು. ಮಾನವ ಮನೋಭಾವನೆಗಳಲ್ಲದರ ಮೇಲೂ ಸಂಶಯ ಬಂದು ಹೋಯಿತು. ವಿಜ್ಞಾನಕ್ಕಂತೂ ಈ ಅಸಹನೆಯ ಯುಗದುದ್ದ ಪೂರ್ತಿ ಗ್ರಹಣವೇ ಹಿಡಿದಿತ್ತು. ಏಕೆಂದರೆ ವಿಜ್ಞಾನ ಬೆಳೆಯಬೇಕಾದರೆ ಎಲ್ಲಕ್ಕಿಂತ ಮೊದಲು ಮಾನವನ ಮನಸ್ಸು ನಿರಾತಂಕವಾಗಿ ಸ್ವೇಚ್ಛೆಯಾಗಿ ವರ್ತಿಸಲು ಅವಕಾಶವಿರಬೇಕು.

ಅಂದಿನ ಬೈಜಾಂಟಿಯಮ್ಮಿನ ಜನಜೀವನದ ಅಂಶಗಳೆಂದರೆ ಯುದ್ಧ, ನಿಷ್ಠುರವಾದ ಮತಧರ್ಮ ಮಾನವ ಸಹಜ ದುರ್ಗುಣಗಳು ನಿಜ; ಅಂದಿನ ಜೀವನ ವರ್ಣರಂಜಿತವಾಗಿತ್ತು, ಅದ್ಭುತ ಕಥೆಯನ್ನು ಹೋಲುತ್ತಿತ್ತು. ಆದರೆ ಬಾಳಿನಲ್ಲಿ ಸಿಹಿಯಿರಲಿಲ್ಲ, ಬೆಳಕಿರಲಿಲ್ಲ. ಬೈಜಾಂಟಿಯ ಮತ್ತು ಪರ್ಷಿಯಾಗಳು ಉತ್ತರ ದಿಕ್ಕಿನಿಂದ ಬರುತ್ತಿದ್ದ ಅನಾಗರಿಕರೊಡನೆ ಹೋರಾಡುತ್ತಿಲ್ಲದಿದ್ದಾಗ ತಮ್ಮ ತಮ್ಮಲ್ಲೇ ಕಾದಾಡಿಕೊಂಡು ಏಷ್ಯಾಮೈನರ್ ಸಿರಿಯಗಳನ್ನು ಪಾಳುಗೆಡವಿದವು. ತಮ್ಮ ತಮ್ಮಲ್ಲಿ ಗಾಢವಾದ ಸಂಬಂಧ ಬೆಳೆಸಿಕೊಂಡಿದ್ದರೂ ಈ ಅನಾಗರಿಕರನ್ನು ಹಿಂದಕ್ಕೆ ಓಡಿಸಿ ತಿರುಗಿ ಉಚ್ಛ್ರಾಯಸ್ಥಿತಿಗೇರುವುದು ಈ ರಾಜ್ಯಗಳಿಗೆ ಕಷ್ಟಸಾಧ್ಯವೇ ಆಗಿರುತ್ತಿತ್ತು. ತುರ್ಕಿಯವರು ಅಥವಾ ಟಾರ್ಟರರು ಈ ಪ್ರಭುತ್ವಗಳಲ್ಲಿ ಒಮ್ಮೊಮ್ಮೆ ಒಂದೊಂದರ ಮಿತ್ರರಾಗಿ ಚರಿತ್ರೆಯಲ್ಲಿ ಮೊದಲು ಕಾಣಿಸಿಕೊಳ್ಳುತ್ತಾರೆ. 6ನೆಯ ಶತಮಾನದಲ್ಲಿ ಜಸ್ಟಿನಿಯನ್ ಮತ್ತು ಒಂದನೆಯ ಖುಸ್ರೊ ಮುಖ್ಯ ವೈರಿಗಳಾಗಿದ್ದರು. ಏಳನೆಯ ಶತಮಾನದ ಆದಿಭಾಗದಲ್ಲಿ ಹೆರಾಕ್ಲಿಯಸ್ ಚಕ್ರವರ್ತಿ ಮತ್ತು ಎರಡನೆ ಖುಸ್ರೊ ಎದುರಾಳಿಗಳಾಗಿದ್ದರು.

ಹೆರಾಕ್ಲಿಯಸ್ಸನು ಚಕ್ರವರ್ತಿಯಾದ ಮೇಲೂ (ಕ್ರಿ.ಶ. 610) ಎರಡನೆಯ ಖುಸ್ರೊ ಮೊದಲು ಎಲ್ಲ ಕಡೆಯಲ್ಲಿಯೂ ಜಯಶಾಲಿಯಾಗುತ್ತಲೇ ನಡೆದನು. ಆ್ಯಂಟಿಯೊಕ್, ಡಮಾಸ್ಕಸ್ ಮತ್ತು ಜೆರೊಸಲೆಮ್ ಅವನ ವಶವಾದವು. ಏಷ್ಯಾಮೈನರಿನಲ್ಲಿ ಕಾನ್‌ಸ್ಟಾಂಟಿನೋಪಲ್ಲಿನ ಬತ್ತಿನಲ್ಲೇ ಇದ್ದ ಕ್ಯಾಲ್ಸಿಡೊನ್‌ವರೆಗೂ ಇವನ ಸೈನ್ಯಗಳು ಬಂದಿದ್ದುವು. 619ರಲ್ಲಿ ಇವನು ಈಜಿಪ್ಟನ್ನು ಗೆದ್ದನು. ಆದರೆ ಇಷ್ಟುಹೊತ್ತಿಗೆ ಹೆರಾಕ್ಲಿಯಸ್ಸನು ಇವನ ಮೇಲೆ ಪ್ರತಿಧಾಳಿ ನಡೆಸಿ ಕ್ಯಾಲ್ಸಿಡೊನಿನಲ್ಲಿ ಪರ್ಷಿಯದ ಸೈನ್ಯ ಇನ್ನೂ ಇದ್ದಿತಾದರೂ ನಿನೆವೆಯಲ್ಲಿ ಖುಸ್ರೊವನ್ನು ಪೂರ್ತಿ ಸೋಲಿಸಿಬಿಟ್ಟನು. ಕ್ರಿ.ಶ. 628ರಲ್ಲಿ ಖುಸ್ರೊವನ್ನು ಅವನ ಮಗ ಕವಾಧನು ಪಟ್ಟದಿಂದ ಉರುಳಿಸಿ ಕೊಲೆಮಾಡಿದನು. ಬಳಲಿಹೋಗಿದ್ದ ಈ ಎರಡು ಸಾಮ್ರಾಜ್ಯಗಳ ನಡುವೆ ಒಂದು ವಿಧದ ಅನಿರ್ದಿಷ್ಟ ಶಾಂತಿ ಏರ್ಪಟ್ಟಿತು.

ಇದೇ ಬೈಜಾಂಟಿಯಂ ಮತ್ತು ಪರ್ಷಿಯಗಳ ಕಟ್ಟಕಡೆಯ ಯುದ್ಧ. ಆದರೆ ನಿರರ್ಥಕವಾದ ಬಹುಕಾಲ ಎಳೆದುಕೊಂಡು ಬಂದ ಈ ಹೋರಾಟಕ್ಕೆ ಶಾಶ್ವತವಾದ ಕೊನೆಗಾಣಿಸುವ ಒಂದು ಬಿರುಗಾಳಿ ಮರಳುಕಾಡುಗಳಲ್ಲಿ ಆಗಲೇ ಹುಟ್ಟಿಕೊಂಡಿತ್ತು ಎಂದು ಆಗ ಯಾರಿಗೂ ಕನಸಿನಲ್ಲೂ ಊಹಿಸಲು ಶಕ್ಯವಿರಲಿಲ್ಲ.

ಸಿರಿಯದಲ್ಲಿ ಪರಿಸ್ಥಿತಿಯನ್ನು ವ್ಯವಸ್ಥಿತಗೊಳಿಸುತ್ತಿದ್ದಾಗ ಹೆರಾಕ್ಲಿಯಸ್ಸನಿಗೆ ಒಂದು ಸಂದೇಶ ಬಂದಿತು. ದಮಾಸ್ಕಸ್ಸಿನ ದಕ್ಷಿಣದಲ್ಲಿರುವ ಬೊಸ್ರಾದಲ್ಲಿದ್ದ ಚಕ್ರವರ್ತಿಯ ಪಾಳೆಯವನ್ನು ಸೇರಿದ ಈ ಕಾಗದ ಆಗಿನ್ನೂ ಅಪ್ರಸಿದ್ಧವಾಗಿದ್ದ ಮರಳುಕಾಡಿನ ಸೆಮಿಟಿಕ್ ಭಾಷೆಯಾದ ಅರಬ್ಬೀ ಭಾಷೆಯಲ್ಲಿತ್ತು. ಚಕ್ರವರ್ತಿಯವರೆಗೆ ಈ ಪತ್ರಹೋಗಿದ್ದರೆ ಭಾಷಾಂತರಕಾರರು ಇದನ್ನು ಅವನಿಗೆ ಓದಿಹೇಳಿದ್ದಿರ

ಬೇಕು. "ಭಗವಂತನ ಪ್ರವಾದಿಯಾದ ಮುಹಮ್ಮದ್" ಎಂದು ಕೊಳ್ಳುತ್ತಿದ್ದ ಒಬ್ಬ ವ್ಯಕ್ತಿ ಇದನ್ನು ಕಳುಹಿಸಿದ್ದನು. ಒಬ್ಬನೇ ಆದ ನಿಜವಾದ ದೇವರನ್ನು ಒಪ್ಪಿಕೊಂಡು ಅವನನ್ನು ಸೇವಿಸಬೇಕೆಂದು ಚಕ್ರವರ್ತಿಗೆ ಇದರಲ್ಲಿ ತಿಳಿಸಲಾಗಿತ್ತು. ಇದಕ್ಕೆ ಚಕ್ರವರ್ತಿ ಏನು ಹೇಳಿದನೋ ದಾಖಲೆಯಾಗಿಲ್ಲ.

ಕ್ಟೆಸಿಫಾನಿನಲ್ಲಿದ್ದ ಕವಾಧನಿಗೂ ಇಂಥದೇ ಸಂದೇಶ ಬಂದಿತು. ಕವಾಧನು ರೇಗಿಕೊಂಡು ಆ ಕಾಗದವನ್ನು ಹರಿದುಹಾಕಿ ಅದನ್ನು ತಂದ ಓಲೆಕಾರನನ್ನು ಓಡಿಸಿಬಿಟ್ಟನು.

ಮುಳುಕಾಡಿನಲ್ಲಿದ್ದ ಯಃಕಶ್ಚಿತವಾದ ನಗರವಾದ ಮದೀನಾ ಬೆಡುಯಿನ್ ಮುಖಂಡನಾದ ಈ ಮುಹಮ್ಮದನ ಕಾರ್ಯಕೇಂದ್ರವಾಗಿತ್ತು. "ಏಕಮಾತ್ರನಾದ ನೈಜ ಭಗವಂತ"ನಲ್ಲಿ ನಂಬಿಕೆಯಿಡಬೇಕೆಂಬ ಹೊಸ ಧರ್ಮವನ್ನು ಇವನು ಬೋಧಿಸುತ್ತಿದ್ದನು.

ದೇವರೇ! ಹಾಗೆಯೇ ಆಗಲಿ, ಕವಾಧನ ರಾಜ್ಯವನ್ನು ಹಾಗೆಯೇ ಅವನಿಂದ ನೀನು ಸೀಳಿಹಾಕು ಎಂದು ಮುಹಮ್ಮದ್ ಉದ್ಗಾರವೆತ್ತಿದನು.

ಚೀನದ ಸುಯಿ ಮತ್ತು ತಾಂಗ್ ಸಂತತಿಗಳು

ಐದು, ಆರು, ಏಳು ಮತ್ತು ಎಂಟನೇ ಶತಮಾನಗಳ ಉದ್ದಕ್ಕೂ ಮಂಗೋಲ್ ಜನರು ಪಶ್ಚಿಮಾಭಿಮುಖವಾಗಿ ನಿಧಾನವಾಗಿ ಪಸರಿಸುತ್ತಲೇ ಇದ್ದರು. ಅಟ್ಟಿಲನ ಹೂಣರದಾಳಿಗಳು ಈ ಮುನ್ನಡೆಯ ಪೂರ್ವ ಸೂಚನೆ ಅಷ್ಟೆ. ಈ ಮುನ್ನಡೆಯ ಫಲವಾಗಿ ಕೊನೆಗೆ ಫಿನ್‌ಲಂಡ್, ಎಸ್ತೋನಿಯ ಮತ್ತು ಹಂಗೆರಿಗಳಲ್ಲಿ ನೆಲಸಿದರು. ಟರ್ಕಿಷ್ ಭಾಷೆಗೆ ಸಂಬಂಧವಿರುವ ಭಾಷೆಗಳನ್ನಾಡುವ ಇವರ ಸಂತತಿಯವರು ಆದೇಶಗಳಲ್ಲಿ ಈಗಲೂ ಇದ್ದಾರೆ. ಬಲ್ಗೇರಿಯನ್ನರು ಟರ್ಕಿಷ್ ಬುಡಕಟ್ಟಿನವರಾದರೂ ಅವರು ಆಡುವ ಭಾಷೆ ಆರ್ಯನ್ ಜಾತಿಯದು. ಯೂರೋಪ್, ಪರ್ಷಿಯ ಮತ್ತು ಇಂಡಿಯಗಳ ಆರ್ಯನ್ ಸಂಸ್ಕೃತಿಗಳಮೇಲೆ ಇವರು ಬೀರಿದ ಪ್ರಭಾವ ಅನೇಕ ಶತಮಾನಗಳ ಹಿಂದೆ ಈಜಿಯನ್ ಮತ್ತು ಸೆಮಿಟಿಕ್ ಸಂಸ್ಕೃತಿಗಳ ಮೇಲೆ ಆರ್ಯನ್ನರು ಬೀರಿದ ಪ್ರಭಾವವನ್ನು ನೆನಪಿಗೆ ತರುತ್ತದೆ.

ಮಧ್ಯ ಏಷ್ಯದಲ್ಲಿರುವ, ಈಗ ತುರ್ಕಿಸ್ತಾನವೆಂದು ಕರೆಯುವ ಪ್ರದೇಶದಲ್ಲಿ ತುರುಕ ಜನಾಂಗದವರು ಬೇರೂರಿದ್ದರು. ಪರ್ಷಿಯ ಸರ್ಕಾರವು ಆಗಲೇ ಅನೇಕ ತುರುಕ ಅಧಿಕಾರಿಗಳನ್ನು ಸಿಪಾಯಿಗಳನ್ನೂ ನೇಮಿಸಿಕೊಂಡಿತ್ತು. ಪರ್ಷಿಯದ ಜನತೆಯಲ್ಲಿ ಒಂದು ಗೂಡಿ ಹೋಗಿ ಪಾರ್ಥಿಯನ್ನರು ಇತಿಹಾಸದಿಂದ ಕಣ್ಮರೆಯಾಗಿದ್ದರು. ಮಧ್ಯ ಏಷ್ಯದ ಚರಿತ್ರೆಯಲ್ಲಿ ಇನ್ನು ಮುಂದೆ ಆರ್ಯನ್ ಬುಡಕಟ್ಟಿನ ಅಲೆಮಾರಿ ಜನ ಕಾಣಬರುವುದೇ ಇಲ್ಲ; ಇವರ ಸ್ಥಾನಕ್ಕೆ ಮಂಗೋಲರು ಬಂದರು. ಚೀನದಿಂದ ಕ್ಯಾಸ್ಪಿಯನ್ ಸಮುದ್ರದವರೆಗೆ ತುರುಕರೇ ಒಡೆಯರಾದರು.

ಎರಡನೆ ಶತಮಾನದ ಅಂತ್ಯದಲ್ಲಿ ರೋಂ ಸಾಮ್ರಾಜ್ಯವನ್ನು ನುಚ್ಚು ನೂರಾಗಿಸಿದ ಮಹಾಜಾಡ್ಯವೇ ಚೀನದಲ್ಲಿ ಹಾನ್‌ವಂಶವನ್ನು ಉರುಳಿಸಿತು. ಬಳಿಕ ಚೀನ ಕೆಲಕಾಲ ಒಡಕು ವೈಮನಸ್ಯಗಳಿಂದ ಕೂಡಿತ್ತು. ಅದೇ ಸಮಯದಲ್ಲಿಯೇ ಹೂಣರ ದಂಡಯಾತ್ರೆಗಳನ್ನು ಎದುರಿಸಬೇಕಾಯಿತು. ಆದರೆ ಈ ಕಷ್ಟಗಳಿಂದ ಚೀನವು ಯೂರೋಪಿಗಿಂತಲೂ ಬೇಗ ಉತ್ತಮರೀತಿಯಲ್ಲಿ ಚೇತರಿಸಿಕೊಂಡು ಹೊಸ ಹುರುಪಿನೊಡನೆ ಮೇಲೆದ್ದಿತು. 6ನೇ ಶತಮಾನ ಕಳೆಯುವ ಮೊದಲೇ ಚೀನ ಸುಯಿ ಸಂತತಿಯ ಅಧೀನದಲ್ಲಿ ಪುನಃ ಒಂದುಗೂಡಿತು. ಹೆರಾಕ್ಲಿಯಸ್ಸನ ಕಾಲದಲ್ಲಿ ಟಾಂಗ್ ಸಂತತಿ ಸುಯಿ ಸಂತತಿಯ ಸ್ಥಾನವನ್ನು ಪಡೆದುಕೊಂಡಿತು. ಟಾಂಗ್ ವಂಶದ ಆಳ್ವಿಕೆಯಲ್ಲಿ ಚೀನ ಮತ್ತೊಂದು ಪ್ರಮುಖ ಉಚ್ಛ್ರಾಯ ಕಾಲವನ್ನು ಕಂಡಿತು.

ಕ್ರಿ.ಶ. ಏಳು, ಎಂಟು ಮತ್ತು ಒಂಬತ್ತನೆಯ ಶತಮಾನಗಳಲ್ಲಿ ಚೀನ ಪ್ರಪಂಚದಲ್ಲೆಲ್ಲಾ ಅತ್ಯಂತ ಸುರಕ್ಷಿತ, ಸುಸಂಸ್ಕೃತ ದೇಶವಾಗಿತ್ತು. ಹಾನ್‌ವಂಶದವರು ಉತ್ತರದಲ್ಲಿ ಎಲ್ಲೆಗಳನ್ನು ವಿಸ್ತರಿಸಿದ್ದರು; ಸುಯಿ ಮತ್ತು ಟಾಂಗ್ ಸಂತತಿಯವರು ಅದರ ಸಂಸ್ಕೃತಿಯನ್ನು ದಕ್ಷಿಣಕ್ಕೆ ವಿಸ್ತರಿಸಿದರು. ಚೀನಾ ಇಂದು ಇರುವ ಗಾತ್ರವನ್ನು ಪಡೆಯಲು ಆರಂಭಿಸಿತು. ಮಧ್ಯ ಏಷ್ಯದಲ್ಲಂತೂ ಈಗ ಇರುವುದಕ್ಕಿಂತ ಮತ್ತೂ ದೂರಕ್ಕೆ ಚೀನ ಪಸರಿಸಿತ್ತು. ಇದಕ್ಕೆ ಕಪ್ಪ ತೆರುತ್ತಿದ್ದ ತುರ್ಕಿಯ ಜನರನ್ನು ನೋಡಿದರೆ ಕಟ್ಟಕಡೆಗೆ ಪರ್ಷಿಯ ಮತ್ತು ಕ್ಯಾಸ್ಪಿಯನ್ ಸಮುದ್ರಗಳವರೆಗೆ ಚೀನದ ಅಧಿಕಾರ ಹರಡಿತು.

ಹೀಗೆ ಮೇಲೆದ್ದ ಹೊಸ ಚೀನವು ಹಳೆಯ ಹಾನ್‌ವಂಶದವರ ಚೀನಕ್ಕಿಂತ ತುಂಬ ಭಿನ್ನವಾಗಿತ್ತು. ಈಗ ಹೊಸ, ಶಕ್ತಿಯುತ ಸಾಹಿತ್ಯ ಪಂಥವೊಂದು ಮುಂದೆ ಬಂದಿತು. ಕಾವ್ಯ ಪುನರುಜ್ಜೀವನಗೊಂಡಿತು. ಬೌದ್ಧಧರ್ಮವು ತಾತ್ತ್ವಿಕ ಮತ್ತು ಧಾರ್ಮಿಕ ಕ್ಷೇತ್ರಗಳಲ್ಲಿ ಕ್ರಾಂತಿಯನ್ನುಂಟುಮಾಡಿತ್ತು. ಕಲೆ, ತಾಂತ್ರಿಕ ಕೌಶಲ ಮತ್ತು ಎಲ್ಲ ಬಗೆಯ ಜೀವನ ಸೌಕರ್ಯಗಳಲ್ಲಿ ಭಾರಿ ಮುನ್ನಡೆಯಾಯಿತು. ಜನ ಮೊಟ್ಟಮೊದಲ ಬಾರಿಗೆ ಟೀಯನ್ನು ಉಪಯೋಗಿಸತೊಡಗಿದರು. ಕಾಗದ ತಯಾರಾಯಿತು. ಮರದ ಪಡಿಯಚ್ಚಿನಿಂದ ಮುದ್ರಣವೂ ಆಗಲೇ ಪ್ರಾರಂಭವಾಯಿತು. ಹೀಗೆ ಈ ಶತಮಾನಗಳಲ್ಲಿ ಚೀನದಲ್ಲಿ ಲಕ್ಷಾಂತರ ಜನರು ಸುವ್ಯವಸ್ಥಿತವಾದ ನಯ ನಾಜೂಕಿನ ಹಿತಕರವಾದ ಬಾಳನ್ನು ಬಾಳುತ್ತಿದ್ದರು. ಇದೇ ಕಾಲದಲ್ಲಿ ಶಕ್ತಿ ಕುಂದಿದ್ದ ಯೂರೋಪಿನ ಮತ್ತು ಪಶ್ಚಿಮ ಏಷ್ಯಗಳ ಜನರು ಜೋಪಡಿಗಳಲ್ಲೋ ಕೋಟೆ ಕಟ್ಟಿದ ಸಣ್ಣಸಣ್ಣ ಊರುಗಳಲ್ಲೋ ಭಯಂಕರವಾದ ದರೋಡೆಕಾರರ ದುರ್ಗಗಳಲ್ಲೋ ವಾಸಿಸುತ್ತಿದ್ದರು. ಪಶ್ಚಿಮದ ಜನತೆಯ ಮನಸ್ಸು ಮತ ಧರ್ಮಗಳ ಗೀಳಿನಲ್ಲಿದ್ದು ಕತ್ತಲೆಯಿಂದ ತುಂಬಿದ್ದರೆ ಚೀನದ ಜನತೆ ಧರ್ಮ ಸಹಿಷ್ಣುವಾಗಿದ್ದು ಕುತೂಹಲ ಭರಿತವಾದ ಬಿಚ್ಚು ಮನಸ್ಸಿನಿಂದ ಕೂಡಿತ್ತು.

ತೈತ್ಸುಂಗ್ ಟಾಂಗ್ ವಂಶದ ಮೊದಲ ದೊರೆಗಳಲ್ಲೊಬ್ಬನಾಗಿದ್ದನು. ಕ್ರಿ.ಶ. 627ರಲ್ಲಿ ಅಂದರೆ ಹೆರಾಕ್ಲಿಯಸ್ ನಿನೆವೆಯಲ್ಲಿ ಜಯಗಳಿಸಿದ ವರ್ಷವೇ ಇವನ ಆಳ್ವಿಕೆ ಮೊದಲಾಯಿತು. ಹೆರಾಕ್ಲಿಯಸ್ಸನು ಬಹುಶಃ ತನಗೆ ಪರ್ಷಿಯದ ಹಿಂಭಾಗದಲ್ಲೊಂದು ಮಿತ್ರರಾಷ್ಟ್ರ ಬೇಕಾಗಿದ್ದುದರಿಂದ ಇವನಲ್ಲಿಗೆ ರಾಯಭಾರಿಗಳನ್ನು ಕಳುಹಿಸಿದ್ದನು. ಪರ್ಷಿಯದಿಂದ ತೈತ್ಸುಂಗ್ ಬಳಿಗೆ ಕ್ರೈಸ್ತಮಿಷನರಿಗಳ ಒಂದು ತಂಡ ಬಂದಿತು. (ಕ್ರಿ.ಶ. 635) ತಮ್ಮ ತತ್ವಗಳನ್ನು ತೈತ್ಸುಂಗನೆದುರು ವಿವರಿಸಲು ಅವರಿಗೆ ಅನುಮತಿ ಸಿಕ್ಕಿತು. ಅವರ ಶಾಸ್ತ್ರ ಗ್ರಂಥಗಳ ಚೀನೀ ಭಾಷಾಂತರವನ್ನು ತೈತ್ಸುಂಗ್ ಪರೀಕ್ಷಿಸಿ ವಿಜಾತೀಯವಾದ ಈ ಧರ್ಮ ತನಗೆ ಒಪ್ಪಿಗೆಯಾಯಿತೆಂದು ತಿಳಿಸಿದನು. ಮತ್ತು ಒಂದು ಚರ್ಚು ಮತ್ತು ಒಂದು ಕ್ರೈಸ್ತಮಠವನ್ನು ಸ್ಥಾಪಿಸಲು ಪರವಾನಗಿ ಕೊಟ್ಟನು.

ಇದೇ ಚಕ್ರವರ್ತಿಯ ಬಳಿಗೆ ಮುಹಮ್ಮದನ ದೂತರೂ ಬಂದರು. (ಕ್ರಿ.ಶ.628). ಇವರು ವ್ಯಾಪಾರಿ ಹಡಗೊಂದರ ಮೇಲೆ ಅರೇಬಿಯದಿಂದ ಹೊರಟು ಇಂಡಿಯಾದ ಕರಾವಳಿಯ ಪಕ್ಕದಲ್ಲಿ ಪ್ರಯಾಣಮಾಡಿ ಕ್ಯಾಂಟನ್ನಿನಲ್ಲಿ ಬಂದಿಳಿದರು. ತೈತ್ಸುಂಗ್ ಕವಾಧ್ ಮತ್ತು ಹೆರಾಕ್ಲಿಯಸ್ಸರಂತೆ ವರ್ತಿಸಲಿಲ್ಲ. ಈ ದೂತರು ಹೇಳುವುದನ್ನು ಸೌಜನ್ಯದಿಂದ ಕೇಳಿ ಅವರ ಧಾರ್ಮಿಕ ಭಾವನೆಗಳಲ್ಲಿ ಆಸಕ್ತಿ ತೋರಿಸಿ ಕ್ಯಾಂಟನ್ನಿನಲ್ಲಿ ಒಂದು ಮಸೀದಿಯನ್ನು ಕಟ್ಟಲು ನೆರವನ್ನು ನೀಡಿದನು. ಇಂದಿಗೂ ಈ ಮಸೀದಿ–ಜಗತ್ತಿನಲ್ಲೇ ಅತ್ಯಂತ ಹಳೆಯದು–ಇದೆಯೆಂದು ಹೇಳುತ್ತಾರೆ.

43. ಮುಹಮ್ಮದ್ ಮತ್ತು ಇಸ್ಲಾಂ

ಹವ್ಯಾಸಿ ಚರಿತ್ರಕಾರನೊಬ್ಬನು ಏಳನೇ ಶತಮಾನದ ಪ್ರಾರಂಭದ ಪ್ರಪಂಚವನ್ನು ನೋಡಿ ಭವಿಷ್ಯ ನುಡಿದಿದ್ದರೆ ಕೇವಲ ಕೆಲವೇ ಶತಮಾನಗಳಲ್ಲಿ ಯೂರೋಪ್ ಮತ್ತು ಏಷ್ಯಗಳು ಪೂರ್ಣವಾಗಿ ಮಂಗೋಲರ ಕೈ ಸೇರುವುವೆಂದು ಸಮಂಜಸವಾದ ತೀರ್ಮಾನಕ್ಕೆ ಬರಬಹುದಾಗಿತ್ತು. ಪಶ್ಚಿಮ ಯುರೋಪಿನಲ್ಲಿ ವ್ಯವಸ್ಥೆ ಐಕಮತ್ಯಗಳ ಹೆಸರೇ ಇರಲಿಲ್ಲ. ಬೈಜಾಂಟೈನ್ ಮತ್ತು ಪರ್ಷಿಯ ಚಕ್ರಾಧಿಪತ್ಯಗಳು ಒಂದನ್ನೊಂದು ವಿನಾಶಮಾಡಲು ನಿರ್ಧರಿಸಿದಂತೆ ಕಾಣುತ್ತಿತ್ತು. ಇಂಡಿಯ ಕೂಡ ಒಡೆದು ಹೋಗಿ ಶಕ್ತಿಹೀನವಾಗಿತ್ತು. ಆದೇ, ಚೀನ ಒಂದೇ ಸಮನೆ ವಿಸ್ತಾರ ಹೊಂದುತ್ತಿತ್ತು. ಸಂಪೂರ್ಣ ಯುರೋಪಿನ ಅಂದಿನ ಜನಸಂಖ್ಯೆಗಿಂತ ಪ್ರಾಯಶಃ ಚೀನದ ಜನಸಂಖ್ಯೆ ಹೆಚ್ಚಾಗಿತ್ತು. ಮಧ್ಯಏಷ್ಯದಲ್ಲಿ ಪ್ರಬಲರಾಗುತ್ತಿದ್ದ ಮಂಗೋಲರು ಚೀನದೊಡನೆ ಹೊಂದಿಕೊಳ್ಳಲು ಇಚ್ಛಿಸುತ್ತಿದ್ದಂತೆ ಕಾಣುತ್ತಿತ್ತು. ಹವ್ಯಾಸಿ ಚರಿತ್ರಕಾರನ ಆ ಭವಿಷ್ಯವಾಣಿ ಪೂರ್ತಿ ಅರ್ಥಹೀನವಾದುದೇನಾಗಿರಲಿಲ್ಲ. ಮಂಗೋಲ್ ಅಧಿರಾಜನೊಬ್ಬ ಡ್ಯಾನ್ಯೂಬ್ ನದಿಯಿಂದ ಶಾಂತಸಾಗರದವರೆಗಿನ ಪ್ರದೇಶವನ್ನು ಆಳುವ ಕಾಲವೂ ಮುಂದೆ 13ನೇ ಶತಮಾನದಲ್ಲಿ ಬಂದಿತು. ಸಮಗ್ರ ಬೈಜಾಂಟಿಯಮ್ ಮತ್ತು

ಪರ್ಷಿಯದ ಸಾಮ್ರಾಜ್ಯಗಳು ಈಜಿಪ್ಟ್ ಮತ್ತು ಇಂಡಿಯದ ಅಧಿಕ ಭಾಗವನ್ನು ಆಳುವ ಭಾಗ್ಯ ತುರುಕ ಸಂತತಿಗಳಿಗೆ ಒದಗಿತು.

ಆದರೆ ಈ ಭವಿಷ್ಯವಾದಿ ಬಹುಶಃ ಎರಡು ತಪ್ಪುಗಳನ್ನು ಮಾಡುತ್ತಿದ್ದನು. ಒಂದನೆಯದಾಗಿ ಯುರೋಪಿನ ಲ್ಯಾಟಿನ್ ಭಾಗಕ್ಕೆ ಪುನಶ್ಚೈತನ್ಯ ಪಡೆಯುವ ಶಕ್ತಿ ಅಷ್ಟು ಇದ್ದಿರಬಹುದೆಂದು ಅವನು ಊಹಿಸುತ್ತಿರಲಿಲ್ಲ. ಅರೇಬಿಯದ ಮರಳುಕಾಡುಗಳಲ್ಲಿ ಹುದುಗಿದ್ದ ಶಕ್ತಿ ಅವನ ಗಮನಕ್ಕೆ ಬರುತ್ತಿರಲಿಲ್ಲ. ಅರೇಬಿಯವೆಂದರೆ ಅನಾದಿಕಾಲದಿಂದಲೂ ಇದ್ದಂತೆ ಪರಸ್ಪರ ಕಚ್ಚಾಡುತ್ತಿದ್ದ ಅಲೆಮಾರಿ ಗುಂಪುಗಳ ವಾಸಸ್ಥಾನ ಎನ್ನಿಸುತ್ತಿತ್ತಷ್ಟೆ. ಆಗ ಸಾವಿರ ವರ್ಷಗಳಿಗೂ ಹೆಚ್ಚು ಕಾಲದಿಂದ ಸೆಮಿಟಿಕ್ ಜನರು ಯಾರೂ ಸಾಮ್ರಾಜ್ಯ ಸ್ಥಾಪನೆ ಮಾಡಿರಲಿಲ್ಲ.

ಬಳಿಕ ಇದ್ದಕ್ಕಿದ್ದಂತೆ ಒಂದು ಶತಮಾನ ಕಾಲದ ಮಟ್ಟಿಗೆ ಬೆಡೂಯಿನ್ನರು ವೈಭವದಿಂದ ವಿಜೃಂಭಿಸಿದರು. ಅವರ ಆಡಳಿತ ಮತ್ತು ಭಾಷೆ ಸ್ಪೇನಿನಿಂದ ಚೀನದ ಎಲ್ಲೆಗಳವರೆಗೂ ಹರಡಿತು. ಪ್ರಪಂಚಕ್ಕೆ ಇವರು ಒಂದು ಹೊಸ ಸಂಸ್ಕೃತಿಯನ್ನಿತ್ತರು; ಇಂದಿಗೂ ಪ್ರಪಂಚದಲ್ಲಿ ಜೀವಂತ ಶಕ್ತಿಯಾಗಿ ಉಳಿದಿರುವ ಧರ್ಮವನ್ನು ಸೃಜಿಸಿದರು.

ಈ ಅರಬ್ ಜ್ವಾಲೆಯನ್ನು ಬೆಳಗಿಸಿದ ವ್ಯಕ್ತಿ ಮುಹಮ್ಮದ್. ಮೊದಲು ಮೆಕ್ಕಾ ನಗರದ ಶ್ರೀಮಂತ ವ್ಯಾಪಾರಿಯೊಬ್ಬನ ವಿಧವೆಯ ಚಿಕ್ಕವಯಸ್ಸಿನ ಪತಿಯಾಗಿ ಕಾಣಿಸಿಕೊಳ್ಳುತ್ತಾನೆ. ನಲವತ್ತು ವಯಸ್ಸು ತುಂಬುವವರೆಗೂ ಪ್ರಪಂಚದಲ್ಲಿ ಎತ್ತಿ ಕಾಣುವಂತಹುದೇನನ್ನೂ ಈತ ಮಾಡಲಿಲ್ಲ. ಧರ್ಮ ಸಂಬಂಧ ಚರ್ಚೆಗಳಲ್ಲಿ ಈತನು ಹೆಚ್ಚಾದ ಕುತೂಹಲವನ್ನು ತೋರಿಸುತ್ತಿದ್ದಂತೆ ಕಾಣಿಸುತ್ತದೆ. ಮೆಕ್ಕಾದಲ್ಲಿ ಕ್ರೈಸ್ತ ಮತ್ತು ಯಹೂದ್ಯಧರ್ಮಗಳು ಆಗ ಪ್ರಚಲಿತವಿರಲಿಲ್ಲ. ಅಲ್ಲಿರುವ ಕಾಬಾ ಎಂಬ ಅರೇಬಿಯದಲ್ಲೆಲ್ಲಾ ಪ್ರಖ್ಯಾತಿ ಪಡೆದಿದ್ದ ಕರಿಯ ಕಲ್ಲನ್ನು ಜನ ಮುಖ್ಯವಾಗಿ ಪೂಜಿಸುತ್ತಿದ್ದರು. ಈ ನಗರ ಯಾತ್ರಾಸ್ಥಳವಾಗಿತ್ತು. ಆದರೆ ಅರೇಬಿಯ ದೇಶದಲ್ಲಿ ಅನೇಕ ಯಹೂದ್ಯರಿದ್ದರು: ಅರೇಬಿಯದ ದಕ್ಷಿಣಭಾಗವೆಲ್ಲ ಯಹೂದ್ಯಧರ್ಮವನ್ನೇ ನಂಬುತ್ತಿತ್ತು. ಅಲ್ಲದೆ ಸಿರಿಯದಲ್ಲಿ ಕ್ರೈಸ್ತ ಸಭೆಗಳಿದ್ದುವು.

ಮುಹಮ್ಮದನಿಗೆ ನಾಲ್ವತ್ತು ವರ್ಷ ವಯಸ್ಸಾದಾಗ ಸಾವಿರದಿನ್ನೂರು ವರ್ಷಗಳಿಗೂ ಹಿಂದೆ ಇದ್ದ ಯಹೂದ್ಯ ಪ್ರವಾದಿಗಳಂತೆ ಅವನಲ್ಲಿ ದೈವಜ್ಞರ ಲಕ್ಷಣಗಳು ಕಾಣಿಸಿಕೊಳ್ಳತೊಡಗಿದುವು. ಮೊದಲು ಇವನು ತನ್ನ ಪತ್ನಿಗೆ "ಏಕೈಕ ನೈಜದೇವ" ನನ್ನು ಮತ್ತು ಸುಗುಣ ಮತ್ತು ದುರ್ಗುಣಗಳಿಗೆ ಸಲ್ಲುವ ಬಹುಮಾನ ಮತ್ತು ಶಿಕ್ಷೆಗಳನ್ನು ಕುರಿತು ಮಾತನಾಡಿದನು. ಇವನ ಈ ಭಾವನೆಗಳ ಮೇಲೆ ಯಹೂದ್ಯ ಮತ್ತು ಕ್ರೈಸ್ತ ಭಾವನೆಗಳ ತೀವ್ರ ಪ್ರಭಾವ ಇದ್ದಿತೆಂಬುದರಲ್ಲಿ ಏನೂ ಸಂಶಯವಿಲ್ಲ. ಇವನ ಬಳಿ ಶ್ರದ್ಧಾವಂತರ ಒಂದು ಚಿಕ್ಕ ತಂಡ ಸೇರಿತು. ಇವರು ನಗರದಲ್ಲಿ ಪ್ರಚಲಿತವಿದ್ದ ಮೂರ್ತಿ ಪೂಜೆಯ ವಿರುದ್ಧ ಬೋಧನೆ ಮಾಡಲಾರಂಭಿಸಿದರು. ಅಲ್ಲಿನ ಇತರ ಪೌರರಿಗೆ ಇವನ ಮೇಲೆ ಇದರಿಂದ ತುಂಬಾ ಅಸಹನೆ ಹುಟ್ಟಿತು. ಏಕೆಂದರೆ ಮೆಕ್ಕಾ

ಸುಸ್ಥಿತಿಯಲ್ಲಿದ್ದುದಕ್ಕೆ ಕಾಬಾ ಯಾತ್ರೆಯಿಂದ ಬರುತ್ತಿದ್ದ ವರಮಾನವೇ ಕಾರಣ ವಾಗಿತ್ತು. ಬರಬರುತ್ತಾ ಮಹಮ್ಮದ್ ಇನ್ನೂ ದಿಟ್ಟತನದಿಂದ ಸ್ಪಷ್ಟವಾಗಿ ಉಪ ದೇಶ ಮಾಡಲಾರಂಭಿಸಿದನು. ಧರ್ಮವನ್ನು ಪರಿಪೂರ್ಣಗೊಳಿಸುವ ಕಾರ್ಯಕ್ಕಾಗಿ ದೇವನಿಂದ ನಿಯಮಿತನಾದ ಕಟ್ಟಕಡೆಯ ಪ್ರವಾದಿ ತಾನೆಂದೂ ಅಬ್ರಹಾಮ್ ಮತ್ತು ಯೇಸುಗಳು ತನ್ನ ಪೂರ್ವಗಾಮಿಗಳೆಂದೂ ಇವನು ಘೋಷಿಸಿದನು. ದೇವರ ಸಂಕಲ್ಪ ವನ್ನು ಯಾವ ನ್ಯೂನತೆಯೂ ಇಲ್ಲದಂತೆ ಸಮಗ್ರವಾಗಿ ವ್ಯಕ್ತಗೊಳಿಸಲು ದೇವರಿಂದ ಆಯ್ಕೆಯಾದವನು ತಾನೆಂದೂ ಇವನು ಹೇಳಿದನು.

ದೇವದೂತನೊಬ್ಬನು ತನಗೆ ಹೇಳಿದುವು ಎಂದು ಇವನು ಪದ್ಯಗಳನ್ನು ಪ್ರಸಿದ್ಧ ಪಡಿಸಿದನು. ಸ್ವರ್ಗದ ಮೂಲಕ ದೇವರವರೆಗೆ ತನ್ನನ್ನು ಯಾರೋ ಕರೆದೊಯ್ದಂತೆ, ಅಲ್ಲಿ ದೇವರಿಂದ ತನಗೆ ತನ್ನ ನಿಯೋಗವನ್ನು ಕುರಿತು ಉಪದೇಶವಾದಂತೆ ಇವನಿಗೆ ಆಶ್ಚರ್ಯಕರವಾದ ಒಂದು ಕನಸಾಯಿತು.

ಇವನ ಉಪದೇಶ ಹೆಚ್ಚುಹೆಚ್ಚು ಶಕ್ತಿವತ್ತಾದಂತೆ ಮೆಕ್ಕಾನಿವಾಸಿಗಳ ದ್ವೇಷವೂ ಹೆಚ್ಚಾಯಿತು. ಕಡೆಗೆ ಇವನನ್ನು ಕೊಲ್ಲಲು ಒಂದು ಒಳಸಂಚು ನಡೆಯಿತು. ಆದರೆ ತನ್ನ ಆಪ್ತ ಮಿತ್ರ ಮತ್ತು ಶಿಷ್ಯ ಅಬುಬಕರ್‌ನೊಂದಿಗೆ ಮಹಮ್ಮದ್ ತನ್ನಲ್ಲಿ ವಿಶ್ವಾಸವಿಟ್ಟಿದ್ದ ಮದೀನಾ ನಗರಕ್ಕೆ ತಪ್ಪಿಸಿಕೊಂಡು ಹೋದನು. ಮದೀನಾ ನಗರ ಇವನ ತತ್ತ್ವವನ್ನು ಸ್ವೀಕರಿಸಿತು. ಮೆಕ್ಕಾ–ಮದೀನಾ ನಗರಗಳ ನಡುವೆ ಯುದ್ಧ ನಡೆದು ಕಡೆಗೆ ಒಂದು ಕೌಲಾಯಿತು. ಇದರ ಪ್ರಕಾರ ಮೆಕ್ಕಾ "ಏಕೈಕ ನೈಜ ದೇವ"ನ ಪೂಜೆಯನ್ನೂ ಮಹಮ್ಮದ್ ಆ ದೇವರ ಪ್ರವಾದಿಯೆಂಬುದನ್ನೂ ಒಪ್ಪಿ ಕೊಳ್ಳಬೇಕಾಯಿತು. ಆದರೆ, ಈ ಹೊಸ ಧರ್ಮದ ಅನುಯಾಯಿಗಳು ಮುಂಚೆ ತಾವು ಮಾಡುತ್ತಿದ್ದಂತೆ ಈಗಲೂ ಮೆಕ್ಕಾಯಾತ್ರೆ ಮಾಡಬೇಕು ಎಂದೂ ಈ ಕೌಲಿ ನಲ್ಲಿತ್ತು. ಹೀಗೆ ಮಹಮ್ಮದನು ಮೆಕ್ಕಾಯಾತ್ರೆಗೆ ಏನೂ ಹಾನಿ ಬರದಂತೆ ಏಕೈಕ ನೈಜದೇವನನ್ನೂ ಅಲ್ಲಿಯೇ ಸ್ಥಾಪಿಸಿದನು. ತನ್ನ ದೂತರನ್ನು ಹೆರಾಕ್ಲಿ ಯಸ್, ತೈತ್ಸುಂಗ್ ಮತ್ತು ಕವಾಧರ ಬಳಿಗೆ ಮತ್ತು ಪ್ರಪಂಚದ ಇನ್ನೆಲ್ಲ ಆಸ್ಥಾನ ಗಳಿಗೂ ಕಳುಹಿಸಿದ ಮಾರನೆ ವರ್ಷ ಅಂದರೆ ಕ್ರಿ.ಶ. 629ರಲ್ಲಿ ಇವನು ಮೆಕ್ಕಾ ಪಟ್ಟಣಕ್ಕೆ ಅದರ ಸ್ವಾಮಿಯಾಗಿ ಹಿಂತಿರುಗಿದನು.

ಮುಂದೆ ನಾಲ್ಕುವರ್ಷಗಳ ಕಾಲ ಮಹಮ್ಮದ್ ಅರೇಬಿಯ ದೇಶದಾದ್ಯಂತ ತನ್ನ ಪ್ರಭಾವವನ್ನು ಹರಡಿದನು. ಅವನು ಅರಬ್ಬರಿಗೆ ಬಿಟ್ಟುಹೋದ ಧರ್ಮವಾದ ಇಸ್ಲಾಂನಲ್ಲಿ ಅಗಾಧಶಕ್ತಿ ಮತ್ತು ಸ್ಫೂರ್ತಿಗಳನ್ನು ಕಾಣಬಹುದು. ಇದರ ಒಂದು ಗುಣ ಏಕದೇವತ್ವದಲ್ಲಿ ನಿಷ್ಠುರ ನಂಬಿಕೆ; ದೇವರ ಪಿತೃತ್ವ ಮತ್ತು ಪ್ರಭುತ್ವದಲ್ಲಿ ನಿಷ್ಕಪಟ, ಉತ್ಸಾಹ ಪೂರ್ಣನಂಬಿಕೆ ಮತ್ತು ದೇವತಾ ಶಾಸ್ತ್ರದ ತೊಡಕುಗಳಿಲ್ಲದಿರುವುದು. ಮತ್ತೊಂದು ಮುಖ್ಯಗುಣವೆಂದರೆ ದೇವತಾಮಂದಿರ ಮತ್ತು ಬಲಿಪೀಠ ಅರ್ಚಕರಿಂದ ಈ ಧರ್ಮ ಪೂರ್ತಿ ದೂರವಾದುದಾಗಿದೆ. ಪ್ರವಾದಿಯು

ಉಪದೇಶವನ್ನೇ ಪೂರ್ಣವಾಗಿ ಆಧರಿಸಿರುವ ಈ ಧರ್ಮದಲ್ಲಿ ಎಂದಿಗೂ ರಕ್ತಬಲಿಯ ಕಡೆ ಪುನಃ ಜನರ ಮನಸ್ಸು ತಿರುಗಲು ಸಾಧ್ಯವೇ ಇಲ್ಲ. ಅಷ್ಟೇನೂ ವಿಸ್ತೃತವಲ್ಲದ ಮಕ್ಕಾಯಾತ್ರೆಯ ವಿಧಿಗಳು ಹೇಗಿರಬೇಕೆಂದು ಯಾವ ವಿವಾದಕ್ಕೂ ಆಸ್ಪದವಿಲ್ಲದಂತೆ ಕೊರಾನ್ ತಿಳಿಸುತ್ತದೆ. ಮರಣದ ನಂತರ ತನ್ನನ್ನು ಜನರು ದೇವರಸ್ಥಾನಕ್ಕೆ ಏರಿಸಬಾರದೆಂದು ಮುಹಮ್ಮದ್ ಏನೆಲ್ಲ ಎಚ್ಚರಿಕೆವಹಿಸಬಹುದೋ ಅಷ್ಟನ್ನೂ ವಹಿಸಿದನು. ಇಸ್ಲಾಂ ಮತಾನುಯಾಯಿಗಳು ಯಾರೇ ಆಗಿರಲಿ, ಅವರ ಬಣ್ಣ, ಮೂಲ ಮತ್ತು ಸಮಾಜದಲ್ಲಿನ ಮಟ್ಟ ಏನೇ ಆಗಿರಲಿ ಅವರೆಲ್ಲ ದೇವರೆದುರಿಗೆ ಸಮಾನರು, ಅವರೆಲ್ಲರೂ ಅಣ್ಣತಮ್ಮಂದಿರಂತೆ ಎಂದು ಇಸ್ಲಾಂ ಒತ್ತಿಹೇಳುತ್ತದೆ. ಇದು ಈ ಧರ್ಮಕ್ಕೆ ಬಲವನ್ನು ಕೊಡುವ ಮೂರನೇ ಅಂಶ.

ಈ ಅಂಶಗಳು ಮಾನವ ಸಮಾಜದಲ್ಲಿ ಇಸ್ಲಾಂ ಪ್ರಬಲ ಶಕ್ತಿಯಾಗಲು ಕಾರಣಗಳಾದುವು. ಮುಹಮ್ಮದನಿಗಿಂತಲೂ ಆತನ ಸ್ನೇಹಿತ ಮತ್ತು ಸಹಾಯಕ ಅಬುಬಕರ್ ಇಸ್ಲಾಂ ಸಾಮ್ರಾಜ್ಯದ ನಿಜವಾದ ಸ್ಥಾಪಕ ಎಂದು ಹೇಳಲಾಗಿದೆ. ಯುಕ್ತಿಶಾಲಿಯಾದ ಮುಹಮ್ಮದನು ಇದರ ಮನಸ್ಸು ಮತ್ತು ಕಲ್ಪನಾ ಶಕ್ತಿಗಳನ್ನೊದಗಿಸಿದರೆ ಅಬುಬಕರ್ ಇದಕ್ಕೆ ಕರ್ತವ್ಯಜ್ಞಾನ ಮತ್ತು ಸಂಕಲ್ಪ ಶಕ್ತಿಗಳನ್ನು ಕೊಟ್ಟನು. ಮುಹಮ್ಮದ್ ಸ್ಥೈರ್ಯಗೆಟ್ಟಾಗ ಅಬುಬಕರ್ ಅವನಿಗೆ ಬೆಂಬಲವಾಗಿ ನಿಂತನು. ಮುಹಮ್ಮದ್ ನಿಧನ ಹೊಂದಿದಾಗ ಕಲೀಫ (ಉತ್ತರಾಧಿಕಾರಿ)ಯಾದನು. ಮದೀನಾದಿಂದ ಕ್ರಿ.ಶ. 628ರಲ್ಲಿ ಮುಹಮ್ಮದ್ ಪ್ರಪಂಚದೆಲ್ಲ ರಾಜರಿಗೂ ಪತ್ರ ಬರೆದು ಕಳುಹಿಸಿದ್ದನಷ್ಟೆ. ಅದರ ಪ್ರಕಾರ, 3000 ದಿಂದ 4000 ಜನರಿದ್ದ ಸಣ್ಣ ಅರಬ್ ಸೈನ್ಯಗಳ ನೆರವಿನಿಂದ, ಬೆಟ್ಟಗಳನ್ನೂ ಚಲಿಸಬಲ್ಲ ಶ್ರದ್ಧೆಯಿಂದ ಕೂಡಿದ್ದ ಅಬುಬಕರ್ ಸಮಗ್ರ ಪ್ರಪಂಚವನ್ನೂ ಅಲ್ಲಾನ ಅಡಿಯಾಳನ್ನಾಗಿ ಮಾಡುವ ಕಾರ್ಯದಲ್ಲಿ ನಿಶ್ಚಿಂತ, ಸ್ವಸ್ಥಮನಸ್ಸಿನಲ್ಲಿ ತೊಡಗಿದನು.

44. ಅರಬರ ಉಚ್ಛ್ರಾಯದ ದಿನಗಳು

ಈಗ ಮಾನವ ಕುಲದ ಚರಿತ್ರೆಯಲ್ಲಿಯೇ ಅತ್ಯಂತ ಆಶ್ಚರ್ಯಕರವಾದ ವಿಜಯಯಾತ್ರೆಯ ಕಥೆ ಬರುತ್ತದೆ. ಕ್ರಿ.ಶ. 634ರಲ್ಲಿ ಯಾರ್ಮುಕ್ (ಜೋರ್ಡಾನ್ ನದಿಯ ಉಪನದಿ) ಕಾಳಗದಲ್ಲಿ ಬೈಜಾಂಟೈನ್ ಸೈನ್ಯ ಧ್ವಂಸವಾಯಿತು. ಚಕ್ರವರ್ತಿ ಹೆರಾಕ್ಲಿಯಸ್ಸನು ಜಲೋದರ ರೋಗದಿಂದ ಶಕ್ತಿಗುಂದಿದ್ದನು, ಪರ್ಷಿಯದ ಯುದ್ಧದಿಂದ ಅವನ ಸಾಧನ ಸಂಪತ್ತೆಲ್ಲ ಖರ್ಚಾಗಿಹೋಗಿತ್ತು. ಇವನು ಹೊಸದಾಗಿ ಗೆದ್ದುಕೊಂಡಿದ್ದ ಸಿರಿಯ, ದಮಾಸ್ಕಸ್, ಪಾಮೈರಾ, ಆ್ಯಂಟಿಯೊಕ್, ಜೆರೂಸಲೇಂಗಳೆಲ್ಲ ಏನೂ ಪ್ರತಿಭಟನೆಯಿಲ್ಲದೆಯೇ ಮುಸಲ್ಮಾನರ ಕೈಸೇರಿದುವು. ಜನತೆಯಲ್ಲಿ ಅನೇಕರು ಇಸ್ಲಾಂನ್ನು ಸ್ವೀಕರಿಸಿದರು. ಬಳಿಕ ಮುಸ್ಲಿಮರು ಪೂರ್ವಕ್ಕೆ ತಿರುಗಿದರು. ಪರ್ಷಿಯನ್ನರಲ್ಲಿ ರುಸ್ತುಂ ಎಂಬ ಸಮರ್ಥನಾದ ದಳಪತಿ ಮುಂದೆ ಬಂದನು. ಅವರ

ಬಳಿ ಆನೆಗಳ ದಳವಿದ್ದ ದೊಡ್ಡಸೈನ್ಯವಿತ್ತು. ಕದೆಸ್ಸಿಯ ಎಂಬಲ್ಲಿ ಇವರು ಮೂರುದಿನ ಅರಬ್ಬರೊಡನೆ ಹೋರಾಡಿದರೂ ಕಡೆಗೆ ಇವರೂ ದಿಕ್ಕೆಟ್ಟು ಪಲಾಯನ ಮಾಡ ಬೇಕಾಯಿತು. (ಕ್ರಿ.ಶ. 637)

ಮುಂದೆ ಪರ್ಷಿಯವೆಲ್ಲ ಅರಬ್ಬರ ವಶವಾಯಿತು. ಮುಸ್ಲಿಂ ಸಾಮ್ರಾಜ್ಯ ಪಶ್ಚಿಮ ತುರ್ಕಿಸ್ತಾನ ಒಳಗೂ ಬಹುದೂರ ಹಬ್ಬಿತು ಪೂರ್ವದಿಕ್ಕಿನಲ್ಲಿ ಚೀನೀಯ ರನ್ನು ಸಂಧಿಸುವವರೆಗೆ ಇದು ಮುನ್ನಡೆಯಿತು. ಈ ಹೊಸ ದಾಳಿಕಾರರಿಗೆ ಈಜಿಪ್ಟ್ ಯಾವ ಪ್ರತಿರೋಧವೂ ಇಲ್ಲದೆ ಶರಣಾಯಿತು. ವಿಜಯಿಗಳಾದ ಮುಸ್ಲಿಮರು ಕೊರಾನಿನ ಶ್ರೇಷ್ಠತೆಯಲ್ಲಿನ ದುರಭಿಮಾನದಿಂದ ಅಲೆಕ್ಸಾಂಡ್ರಿಯದ ಲೈಬ್ರೆರಿಯಲ್ಲಿ ಅಸ್ತಿತ್ವದಲ್ಲಿದ್ದ ಪುಸ್ತಕ ನಕಲು ಮಾಡುವ ಕೆಲಸವನ್ನು ಪೂರ್ತಿ ಅಳಿಸಿಹಾಕಿ ದರು. ಈ ವಿಜಯಯಾತ್ರೆಯು ಮಹಾಪೂರ ಆಫ್ರಿಕದ ಉತ್ತರ ತೀರದ ಉದ್ದಕ್ಕೆ ಹರಿದು ಜಿಬ್ರಾಲ್ಟರ್ ಜಲಸಂಧಿ ಮತ್ತು ಸ್ಪೇನನ್ನು ಸೇರಿತು. ಕ್ರಿ. ಶ. 710ರಲ್ಲಿ ಸ್ಪೇನನ್ನು ಇವರು ಗೆದ್ದು ಕ್ರಿ.ಶ. 720ರಲ್ಲಿ ಬೆಟ್ಟಗಳವರೆಗೆ ಮುನ್ನಡೆದರು. ಆದರೆ ಪ್ವಾತಿಯೆ (Portiers) ಕದನದಲ್ಲಿ ಇವರ ಈ ಮುನ್ನಡೆಯು ಅಂತ್ಯವಾಯಿತು. ಅಲ್ಲದೆ ತಿರುಗಿ ಪಿರೆನೀಸ್‌ವರೆಗೆ ಇವರನ್ನು ಹಿಂದಕ್ಕೆ ತಳ್ಳಲಾಯಿತು. ಈಜಿಪ್ಟನ್ನು ಗೆದ್ದಾಗ ಮುಸಲ್ಮಾನರ ವಶಕ್ಕೆ ನೌಕಾ ಪಡೆಸಿಕ್ಕಿತು. ಇವರು ಕಾನ್‌ಸ್ಟಂಟಿ ನೋಪಲ್ಲನ್ನೂ ವಶಮಾಡಿಕೊಂಡು ಬಿಡುವರೆಂಬಂತೆ ಕೆಲಕಾಲ ಕಾಣುತ್ತಿತ್ತು. ಕ್ರಿ.ಶ. 672 ರಿಂದ 718ರ ವರೆಗೆ ತಿರುತಿರುಗಿ ಇವರು ಸಮುದ್ರ ಮಾರ್ಗವಾಗಿ ಈ ಪಟ್ಟಣದ ಮೇಲೇರಿ ಬಂದರೂ ಅದು ಇವರ ದಾಳಿಗಳನ್ನು ತಡೆದುಕೊಂಡಿತು.

ಅರಬ್ಬರಿಗೆ ರಾಜಕೀಯದಲ್ಲಿ ಅನುಭವವಿರಲಿಲ್ಲ. ಅದರ ಬಗೆಗೆ ಇವರಲ್ಲಿ ಒಲವೂ ಇರಲಿಲ್ಲ. ಸ್ಪೇನಿನಿಂದ ಚೀನದವರೆಗೆ ಹರಡಿದ್ದ, ದಮಾಸ್ಕಸ್ ರಾಜಧಾನಿಯಾಗಿದ್ದ, ಈ ವಿಶಾಲ ಸಾಮ್ರಾಜ್ಯ ಬಹು ಬೇಗನೇ ಒಡೆದು ಹೋಗುವುದು ಸಹಜವೇ ಆಗಿತ್ತು. ಮೊದಲಿಂದಲೂ ಸೈದ್ಧಾಂತಿಕ ಭಿನ್ನಾಭಿಪ್ರಾಯಗಳು ಇದರ ಐಕಮತ್ಯವನ್ನು ಸಡಿಲ ಗೊಳಿಸಿದುವು. ರಾಜಕೀಯವಾಗಿ ಇದು ಹೇಗೆ ಭಿನ್ನ ಭಿನ್ನವಾಯಿತು ಎನ್ನುವುದ ಕ್ಕಿಂತಲೂ ಮಾನವ ಪ್ರಜ್ಞೆಯ ಮೇಲೆ ಮತ್ತು ಮಾನವ ಕುಲದ ಭವಿಷ್ಯದ ಮೇಲೆ ಇದರ ಪ್ರಭಾವವೇನು ಎಂಬುದರಲ್ಲಿ ನಾವು ಹೆಚ್ಚು ಆಸಕ್ತರು. ಇದಕ್ಕೆ ಸಾವಿರ ವರ್ಷ ಗಳ ಮೊದಲು ಗ್ರೀಕ್ ಪ್ರಭಾವ ಹರಡಿದ್ದಕ್ಕಿಂತಲೂ ನಾಟಕೀಯವಾಗಿ ತಟಕ್ಕನೆ ಅರಬ್ ಪ್ರಜ್ಞೆ ಪ್ರಪಂಚದ ಮತ್ತೊಂದು ತುದಿಗೆ ಮುಟ್ಟಿತು. ಚೀನದ ಪಶ್ಚಿಮಕ್ಕಿರುವ ಪ್ರಪಂಚವಷ್ಟೂ ಇದರಿಂದ ಬೌದ್ಧಿಕ ಪ್ರಚೋದನೆಗೊಳಗಾಯಿತು. ಭಾರೀ ಪ್ರಮಾಣ ದಲ್ಲಿ ಹಳೆ ಭಾವನೆಗಳು ಕರಗಿ ಹೊಸ ಭಾವನೆಗಳು ಅಭಿವೃದ್ಧಿಯಾದವು.

ಪರ್ಷಿಯದಲ್ಲಿ ಈ ಹೊಸ ಉತ್ತೇಜಿತ ಮಾನವ ಪ್ರಜ್ಞೆ ಮನೀಕಿಯನ್, ಜರತೂಷ್ಟ್ರ ಮತ್ತು ಕ್ರೈಸ್ತ ತತ್ತ್ವಗಳೊಡನೆ ಅಷ್ಟೇ ಅಲ್ಲದೆ ಗ್ರೀಕ್ ಭಾಷೆ ಮತ್ತು ಸಿರಿಯನ್ ಭಾಷಾಂತರಗಳೆರಡರಲ್ಲೂ ಜೋಪಾನವಾಗಿದ್ದ ಗ್ರೀಕ್ ವೈಜ್ಞಾನಿಕ

ಸಾಹಿತ್ಯದೊಡನೆಯೂ ಸಂಪರ್ಕ ಪಡೆಯಿತು. ಈಜಿಪ್ಟಿನಲ್ಲಿಯೂ ಇದು ಗ್ರೀಕ್ ಜ್ಞಾನವನ್ನು ಸಂಧಿಸಿತು. ಎಲ್ಲ ಕಡೆಗಳಲ್ಲೂ ಅದರಲ್ಲೂ ಸ್ಪೇನಿನಲ್ಲಿ ಜೀವಂತವಾಗಿದ್ದ ಯಹೂದಿ ಚಿಂತನೆ ಮತ್ತು ಚರ್ಚೆಗಳ ಒಂದು ಸಂಪ್ರದಾಯ ಇದರ ಗಮನಕ್ಕೆ ಬಂದಿತು. ಮಧ್ಯ ಏಷ್ಯದಲ್ಲಿ ಇದಕ್ಕೆ ಬೌದ್ಧಮತ ಮತ್ತು ಚೀನೀ ನಾಗರಿಕತೆಯ ಪ್ರಾಪಂಚಿಕ ಸಾಧನೆಗಳ ಪರಿಚಯವಾಯಿತು. ಚೀನೀಯರಿಂದ ಕಾಗದ ತಯಾರಿಕೆಯನ್ನು ಪಾಶ್ಚಿಮಾತ್ಯ ಪ್ರಪಂಚ ಕಲಿತುಕೊಂಡಿತು. ಇದರಿಂದ ಮುದ್ರಿತ ಪುಸ್ತಕಗಳ ತಯಾರಿಕೆ ಸಾಧ್ಯವಾಯಿತು. ಕೊಟ್ಟಕೊನೆಗೆ ಭಾರತದ ಗಣಿತಶಾಸ್ತ್ರ ಮತ್ತು ತತ್ತ್ವಶಾಸ್ತ್ರಗಳ ಪರಿಚಯ ಇದಕ್ಕಾಯಿತು.

ಈ ಧರ್ಮದ ಮೊದಲ ದಿನಗಳಲ್ಲಿದ್ದ, ಪುಸ್ತಕಪೆಂದರೆ ಕೊರಾನ್ ಒಂದೇ ಎಂದು ತಿಳಿಯುತ್ತಿದ್ದ ಸ್ವಪ್ರತಿಷ್ಠೆಯ ಅಸಹಿಷ್ಣು ಮನೋಭಾವ ಬಹುಬೇಗನೇ ಕಾಣೆಯಾಯಿತು. ಅರಬ್ ದಂಡನಾಯಕರು ಕಾಲಿಟ್ಟಲ್ಲೆಲ್ಲಾ ಜ್ಞಾನಾರ್ಜನೆ ಬೆಳೆಯಿತು. 8ನೇ ಶತಮಾನದ ಹೊತ್ತಿಗೆ "ಅರಬ್ಬೀಕರಣವಾಗಿದ್ದಲ್ಲೆಲ್ಲಾ ಶಿಕ್ಷಣ ವ್ಯವಸ್ಥೆಯಿತ್ತು. 9ನೇ ಶತಮಾನದಲ್ಲಿ ಸ್ಪೇನಿನ ಕಾರ್ಡೋಬಾ (Cordoba)ದ ಶಾಲೆಗಳ ವಿದ್ವಾಂಸರು ಕೈರೋ, ಬಾಗ್‌ದಾದ್, ಬೊಖಾರ, ಸಮರ್ ಖಂಡಗಳ ವಿದ್ವಾಂಸರೊಡನೆ ಪತ್ರ ವ್ಯವಹಾರ ನಡೆಸುತ್ತಿದ್ದರು. ಯಹೂದಿ ಪ್ರಜ್ಞೆ ಅರಬ್ ಪ್ರಜ್ಞೆಯೊಂದಿಗೆ ಬಹು ಸುಲಭವಾಗಿ ಹೊಂದಿಕೊಂಡಿತು. ಕೆಲ ಕಾಲ ಈ ಎರಡು ಸೆಮಿಟಿಕ್ ಕುಲದವರೂ ಅರಬ್ಬೀ ಭಾಷೆಯನ್ನು ಮಾಧ್ಯಮವನ್ನಾಗಿಟ್ಟುಕೊಂಡು ಒಟ್ಟಾಗಿ ಕೆಲಸ ಮಾಡಿದರು. ರಾಜಕೀಯವಾಗಿ ಅರಬ್ಬರ ರಾಜ್ಯ ಒಡೆದು ಹೋಗಿ ಆ ಜನ ದುರ್ಬಲರಾದ ಮೇಲೂ ಅರಬ್ಬಿ ಭಾಷೆಯನ್ನಾಡುತ್ತಿದ್ದ ಈ ಬೌದ್ಧಿಕ ಸಮಾಜ ಉಳಿದುಕೊಂಡು ಬಂದಿತು. ಹದಿಮೂರನೇ ಶತಮಾನದಲ್ಲಿಯೂ ಸಹ ಇದು ಸಾಕಷ್ಟು ಫಲಪ್ರದವಾಗಿ ಕೆಲಸ ಮಾಡುತ್ತಿತ್ತು.

ಗ್ರೀಕರು ಪ್ರಾರಂಭಿಸಿದ ನಿಜಾಂಶಗಳನ್ನು ಸುವ್ಯವಸ್ಥಿತವಾಗಿ ಸಂಗ್ರಹಿಸಿ ವಿಮರ್ಶೆಗೊಳಗುಮಾಡುವ ಕಾರ್ಯ ಹೀಗೆ ಸೆಮಿಟಿಕ್ ಪ್ರಪಂಚದ ಈ ಆಶ್ಚರ್ಯಕಾರಕ ಪುನರುಜ್ಜೀವನದಿಂದ ಮುಂದುವರೆಯಿತು. ಅರಿಸ್ಟಾಟಲನ ಮತ್ತು ಅಲೆಕ್ಸಾಂಡ್ರಿಯದ ಮ್ಯೂಸಿಯಂನ ಬೀಜ ಆದೆಷ್ಟೋ ಕಾಲ ಕ್ರಿಯಾಶೂನ್ಯವಾಗಿ ಅಲಕ್ಷ್ಯಕ್ಕೊಳಗಾಗಿ ಬಿದ್ದಿದ್ದು ಈಗ ಮೊಳೆತು ಬೆಳೆದು ಫಲಿಸಿತು. ಗಣಿತಶಾಸ್ತ್ರ, ವೈದ್ಯಶಾಸ್ತ್ರ ಮತ್ತು ಭೌತಿಕ ವಿಜ್ಞಾನಗಳಲ್ಲಿ ಭಾರೀ ಮುನ್ನಡೆ ಉಂಟಾಯಿತು. ನಾಜೂಕಿಲ್ಲದ ರೋಮನ್ ಅಂಕೆಗಳ ಸ್ಥಾನವನ್ನು ಈಗಲೂ ನಾವು ಉಪಯೋಗಿಸುತ್ತಿರುವ ಅರಬ್ಬೀ ಅಂಕೆಗಳು ಆಕ್ರಮಿಸಿದುವು. ಸೊನ್ನೆಯ ಸಂಕೇತ ಮೊದಲ ಬಾರಿಗೆ ಬಳಕೆಗೆ ಬಂದಿತು. "ಆಲ್‌ಜೀಬ್ರಾ" ಎಂಬ ಹೆಸರೇ ಅರಬ್ಬಿ ಭಾಷೆಯ ಪದ, ಕೆಮಿಸ್ಟ್ರಿ ಕೂಡ ಅಷ್ಟೆ. ಅಲ್ಗೊಲ್, ಅಲ್ಡೆಬರಾನ್ ಮತ್ತು ಬೂಟೆಸ್ ಇಂತಹ ಕೆಲವು ನಕ್ಷತ್ರಗಳ ಹೆಸರು ಅರಬ್ಬರು ಆಕಾಶ ವಿಜ್ಞಾನದಲ್ಲೂ ಪರಿಣತಿ ಪಡೆದಿದ್ದರೆನ್ನು

ವುದರ ಕುರುಹುಗಳಾಗಿ ನಿಂತಿವೆ. ಫ್ರಾನ್ಸ್, ಇಟಲಿ ಮತ್ತು ಸಮಗ್ರ ಕ್ರೈಸ್ತ ಪ್ರಪಂಚದ ತತ್ತ್ವಶಾಸ್ತ್ರವನ್ನು ಪುನರುಜ್ಜೀವನಗೊಳಿಸುವ ಭಾಗ್ಯ ಮಧ್ಯಯುಗದಲ್ಲಿ ಇವರ ತತ್ತ್ವಶಾಸ್ತ್ರಕ್ಕೆ ಸಂದಿತು.

ಅರಬ್ ಪ್ರಾಯೋಗಿಕ ರಸಾಯನ ಶಾಸ್ತ್ರಜ್ಞರನ್ನು ಆಲ್‌ಕೆಮಿಸ್ಟರೆಂದು ಕರೆಯಲಾಗುತ್ತಿತ್ತು. ಇನ್ನೂ ಅಷ್ಟೇನೂ ಸುಸಂಸ್ಕೃತರಾಗಿಲ್ಲದಿದ್ದ ಇವರು ತಮ್ಮ ಪ್ರಯೋಗ ವಿಧಾನಗಳು ಮತ್ತು ಫಲಿತಾಂಶಗಳನ್ನು ಸಾಧ್ಯವಾದಷ್ಟು ರಹಸ್ಯವಾಗಿಡುತ್ತಿದ್ದರು. ತಾವು ಕಂಡು ಹಿಡಿಯಬಹುದಾದ ವಿಷಯಗಳಿಂದ ತಮಗೆ ತುಂಬಾ ಪ್ರಯೋಜನವಾಗಬಹುದೆಂದೂ ಮಾನವ ಜೀವನದ ಮೇಲೆ ಇವುಗಳಿಂದ ಆಳವಾದ ಪರಿಣಾಮಗಳುಂಟಾಗಬಹುದೆಂದೂ ಅವರು ಮೊದಲಿನಿಂದಲೂ ಗ್ರಹಿಸಿದ್ದರು. ಬಹು ಉಪಯುಕ್ತವಾದ, ಲೋಹ ವಿದ್ಯೆಗೆ ಸಂಬಂಧಿಸಿದ ಮತ್ತು ಇತರ ತಾಂತ್ರಿಕ ವಿಧಾನಗಳನ್ನೂ ಪದಾರ್ಥಗಳನ್ನೂ—ಉದಾಹರಣೆಗೆ ಮಿಶ್ರಲೋಹಗಳು, ವರ್ಣದ್ರವ್ಯಗಳು ಭಟ್ಟಿಯಿಳಿಸುವಿಕೆ, ಮದ್ಯಸಾರ ದ್ರಾವಣಗಳು, ಸುಗಂಧ ದ್ರವ್ಯಗಳು, ಆಪ್ಟಿಕಲ್ ಗಾಜು—ಇವರು ಕಂಡು ಹಿಡಿದರು. ಆದರೆ ಇವರು ಮುಖ್ಯವಾಗಿ ಹುಡುಕುತ್ತಿದ್ದ ಎರಡು ಪದಾರ್ಥಗಳು ಕಡೆಗೂ ಇವರಿಗೆ ಸಿಗಲೇ ಇಲ್ಲ. ಇವುಗಳಲ್ಲೊಂದು "ಸ್ಪರ್ಶ ಶಿಲೆ". ಒಂದು ಲೋಹವನ್ನು ಮತ್ತೊಂದು ಲೋಹವನ್ನಾಗಿ ಪರಿವರ್ತಿಸುವ ಶಕ್ತಿ ಇದಕ್ಕಿದ್ದು ಇದರ ಮೂಲಕ ಚಿನ್ನವನ್ನು ಕೃತಕವಾಗಿ ತಯಾರಿಸಲು ಸಾಧ್ಯವೆಂದು ಅವರು ತಿಳಿದಿದ್ದರು. ಮುದುಕರನ್ನು ಪುನಶ್ಚೇತನಗೊಳಿಸಿ ಜೀವಿತ ಕಾಲವನ್ನು ಅಪರಿಮಿತ ಅವಧಿಯವರೆಗೆ ಮುಂದುವರಿಸುವ ಶಕ್ತಿ ಇರುವುದೆಂದು ಪರಿಗಣಿಸಿದ್ದ ದಿವ್ಯ ಸಂಜೀವಿನಿ ಮತ್ತೊಂದು ಪದಾರ್ಥ. ಈ ಅರಬ್ ಆಲ್‌ಕೆಮಿಸ್ಟರ ಪಟ್ಟುಹಿಡಿದು ತಾಳ್ಮೆಯಿಂದ ಕೆಲಸ ಮಾಡುವ ಪ್ರವೃತ್ತಿ ಕ್ರೈಸ್ತ ಪ್ರಪಂಚಕ್ಕೂ ಹರಡಿತು. ಬೇರೆ ಬೇರೆಡೆಗಳ ಜನರನ್ನೂ ಇವರ ಅನ್ವೇಷಣೆಗಳು ಆಕರ್ಷಿಸಿದುವು. ನಿಧಾನವಾಗಿ ಈ ಆಲ್‌ಕೆಮಿಸ್ಟರಲ್ಲಿ ಪರಸ್ಪರ ಸಂಪರ್ಕ ಮತ್ತು ಸಹಕಾರ ಹೆಚ್ಚಾಯಿತು. ತಮ್ಮ ಭಾವನೆಗಳನ್ನು ಪರಸ್ಪರ ಹೋಲಿಸಿ ವಿನಿಮಯ ಮಾಡಿಕೊಳ್ಳುವುದರಲ್ಲಿ ಲಾಭವಿದೆಯೆಂದು ಇವರು ಕಂಡುಕೊಂಡರು. ಗೋಚರಕ್ಕೆ ಬರದಷ್ಟು ಸೂಕ್ಷ್ಮವಾದ ಬದಲಾವಣೆಗಳು ಒಂದಾಗುತ್ತಲೊಂದು ಆಗುತ್ತಾ ಹೋಗಿ ಕೊಟ್ಟ ಕೊನೆಯಲ್ಲಿ ಆಲ್ಕೆಮಿಸ್ಟ್ ಮೊದಲನೆಯ ಪ್ರಾಯೋಗಿಕ ತತ್ತ್ವಶಾಸ್ತ್ರಜ್ಞನಾದನು.

ಪ್ರಾಚೀನ ಆಲ್ಕೆಮಿಸ್ಟರು ಹುಡುಕಿದ್ದು ಕ್ಷುದ್ರಲೋಹಗಳನ್ನು ಚಿನ್ನವನ್ನಾಗಿ ಪರಿವರ್ತಿಸುವ ಸ್ಪರ್ಶಶಿಲೆ ಮತ್ತು ಅಮೃತತ್ವವನ್ನು ಕೊಡುವ ಸಂಜೀವಿನಿಗಳನ್ನು ಅವರು ಕಂಡು ಹಿಡಿದದ್ದು ಆಧುನಿಕ ಪ್ರಾಯೋಗಿಕ ವಿಜ್ಞಾನ ವಿಧಾನಗಳನ್ನು ಮನುಷ್ಯನಿಗೆ ಪ್ರಪಂಚದ ಮೇಲೆ ಮತ್ತು ತನ್ನ ಭವಿಷ್ಯದ ಮೇಲೆ ಅಪಾರ ಶಕ್ತಿಯನ್ನು ಕೊಡುವ ಆಸೆಯನ್ನು ಇವು ತೋರಿಸುತ್ತಿವೆ.

45. ಲ್ಯಾಟಿನ್ ಕ್ರೈಸ್ತ ಪ್ರಪಂಚದ ಅಭಿವೃದ್ಧಿ

ಕ್ರಿ.ಶ. ಏಳು ಮತ್ತು ಎಂಟನೇ ಶತಮಾನಗಳಲ್ಲಿ ಪ್ರಪಂಚದಲ್ಲಿ ಬಹು ಸ್ವಲ್ಪ ಭಾಗ ಮಾತ್ರ ಆರ್ಯನ್ನರ ಹತೋಟಿಯಲ್ಲಿತ್ತು. ಇದು ಪರಿಶೀಲನಾರ್ಹ ಸಂಗತಿ. ಇದಕ್ಕೆ ಸಾವಿರ ವರ್ಷಗಳ ಹಿಂದೆ ಚೀನಾದ ಪಶ್ಚಿಮಕ್ಕಿದ್ದ ನಾಗರಿಕ ಪ್ರಪಂಚವೆಲ್ಲದರ ಮೇಲೂ ಆರ್ಯನ್ ಭಾಷೆಗಳನ್ನಾಡುತ್ತಿದ್ದ ಕುಲಗಳು ವಿಜಯ ಸಾಧಿಸಿದ್ದುವು. ಈಗ ಹಂಗೆರಿಯವರೆಗೂ ಮಂಗೋಲರು ನುಗ್ಗಿದ್ದರು. ಏಷ್ಯಾ ಮೈನರಿನ ಬೈಜಾಂಟಿಯನ್ ಆಧಿಪತ್ಯಗಳನ್ನು ಬಿಟ್ಟರೆ ಏಷ್ಯದಲ್ಲಿ ಉಳಿದಾವ ಭಾಗವು ಆರ್ಯನ್ನರ ಆಳ್ವಿಕೆಯಲ್ಲಿರಲಿಲ್ಲ. ಆಫ್ರಿಕವೆಲ್ಲ, ಹೆಚ್ಚು ಕಡಿಮೆ ಸ್ಪೇನವೂ ಇವರ ಕೈತಪ್ಪಿತ್ತು. ಆ ಹಿಂದಿನ ಬೃಹತ್ ಗ್ರೀಕ್ ಪ್ರಪಂಚ ಕುಗ್ಗಿಹೋಗಿ ಈಗ ವಾಣಿಜ್ಯ ಕೇಂದ್ರವಾಗಿದ್ದ ಕಾನ್‌ಸ್ಟಂಟಿನೋಪಲ್ಲಿನ ಸುತ್ತಲಿದ್ದ ಕೆಲವು ಸ್ವಾಮ್ಯಗಳಷ್ಟಕ್ಕೆ ಸೀಮಿತವಾಗಿತ್ತು. ರೋಮನ್ ಪ್ರಪಂಚದ ನೆನಪು ಪಶ್ಚಿಮ ಕ್ರೈಸ್ತ ಸಂಘದ ಪಾದ್ರಿಗಳ ಲ್ಯಾಟಿನ್ ಭಾಷೆಯಲ್ಲಿ ಮಾತ್ರ ಜೀವಂತವಾಗಿತ್ತು. ಆರ್ಯನ್ನರ ಈ ಇಳಿತಕ್ಕೆ ಸಂಪೂರ್ಣ ವಿರುದ್ಧವೆಂಬಂತೆ ಸೆಮಿಟಿಕ್ ಪರಂಪರೆ ಸಾವಿರ ವರ್ಷಗಳ ಕಾಲ ಅಡಿಯಾಳುತನ, ಅಜ್ಞಾತವಾಸಗಳನ್ನನುಭವಿಸಿ ಅಂಧಕಾರದಿಂದ ಪುನಃ ಮೇಲೆದ್ದಿತ್ತು.

ಆದರೂ ಔತ್ತರೇಯರ ಜೀವಸತ್ತ್ವ ಬತ್ತಿರಲಿಲ್ಲ. ತಮ್ಮ ಇರುವಿಕೆಯೆಲ್ಲ ಮಧ್ಯ ಮತ್ತು ವಾಯುವ್ಯಯೂರೋಪಿಗೆ ಸೀಮಿತವಾಗಿದ್ದರೂ ತಮ್ಮ ಸಾಮಾಜಿಕ, ರಾಜಕೀಯ ಭಾವನೆಗಳು ತುಂಬ ಗೊಂದಲಕ್ಕೊಳಗಾಗಿದ್ದರೂ ಮೆಲ್ಲಮೆಲ್ಲನೆ ಒಂದೇ ಸಮನೆ ಇವರು ಒಂದು ಹೊಸ ಸಾಮಾಜಿಕ ವ್ಯವಸ್ಥೆಯನ್ನು ಕಟ್ಟುತ್ತಿದ್ದರು. ತಮಗೆ ಗೊತ್ತಿಲ್ಲದಂತೆಯೇ ಹಿಂದೆ ತಾವು ಪಡೆದಿದ್ದ ಪ್ರಾಬಲ್ಯಕ್ಕಿಂತ ಇನ್ನೂ ವ್ಯಾಪಕವಾದ ಪ್ರಾಬಲ್ಯಕ್ಕೆ ತಳಹದಿ ಹಾಕುತ್ತಿದ್ದರು.

ಆರನೇ ಶತಮಾನದ ಪ್ರಾರಂಭದಲ್ಲಿ ಪಶ್ಚಿಮ ಯೂರೋಪಿನಲ್ಲಿ ಕೇಂದ್ರ ಆಡಳಿತವೊಂದೂ ಇರಲಿಲ್ಲವೆಂದು ಈ ಮೊದಲೇ ಹೇಳಿದೆ. ಬೇರೆಯವರಿಗೆ ಏನನ್ನೂ ಬಿಟ್ಟುಕೊಡದೆ ತಮ್ಮ ಕೈಯ್ಯಲ್ಲಾದಷ್ಟೂ ಹಕ್ಕು ಸಾಧಿಸುತ್ತಿದ್ದ ಸ್ಥಳೀಯ ಅಧಿಕಾರಿಗಳ ನೇಕರಲ್ಲಿ ಅಂದಿನ ಆ ಪ್ರಪಂಚ ಹಂಚಿಹೋಗಿತ್ತು. ಈ ತೆರದ ವ್ಯವಸ್ಥೆ ತುಂಬ ಅಸ್ಥಿರವಾಗಿದ್ದು ಹೆಚ್ಚುದಿನ ಬಾಳಲಾರದು. ಈ ಅವ್ಯವಸ್ಥೆಯಲ್ಲಿಯೇ ಸಹಕಾರ, ಸಹಬಾಳ್ವೆಗಳ ವ್ಯವಸ್ಥೆಯೊಂದು ಬೆಳೆಯಿತು. ಇದೇ ಪಾಳೆಗಾರಿಕೆ. ಈ ಪದ್ಧತಿ ಬಿಟ್ಟುಹೋಗಿರುವ ಕುರುಹುಗಳು ಇಂದಿನವರೆಗೂ ಐರೋಪ್ಯ ಜೀವನದಲ್ಲಿ ಉಳಿದುಕೊಂಡು ಬಂದಿವೆ. ದ್ರಾವಣಗಳಲ್ಲಿ ಹರಳುಕಣಗಳ ಸುತ್ತಲೂ ಮತ್ತಷ್ಟು ಹರಳುಕಣಗಳು ಕಲೆಹಾಕಿಕೊಳ್ಳುವಂತೆ ಸಮಾಜದಲ್ಲಿ ಶಕ್ತಿಯ ಸುತ್ತಲೂ ಸಂಘಟನೆ ನಡೆದು ಪಾಳೆಗಾರಿಕೆ ವ್ಯವಸ್ಥೆ ರೂಪುಗೊಂಡಿತು. ಆಗ ಎಲ್ಲಕಡೆಗಳಲ್ಲೂ ಪರಿಸ್ಥಿತಿ ಮಾನವ ಒಂಟಿಯಾಗಿ ಬಾಳಲು ಭಯಪಡುವಂತಿತ್ತು. ಸಹಾಯ ಮತ್ತು ರಕ್ಷಣೆಗಳಿ

ಗಾಗಿ ತಮ್ಮ ಸ್ವಾತಂತ್ರ್ಯದ ಕೆಲಭಾಗವನ್ನು ಬಿಟ್ಟುಕೊಡಲು ಜನರು ಸಿದ್ಧರಿದ್ದರು. ಅಂತಹವರು ಶಕ್ತಿವಂತನೊಬ್ಬನು ತಮ್ಮ ಸ್ವಾಮಿ ಮತ್ತು ರಕ್ಷಕನಾಗಿರಲೆಂದು ಆಶಿಸಿ ಅವನಿಗೆ ತೆರಿಗೆಗಳನ್ನು ಕೊಟ್ಟು ಅವನ ಸೈನ್ಯಕ್ಕೆ ಸೇರಿಕೊಳ್ಳುತ್ತಿದ್ದರು. ಇದರ ಫಲ ವೆಂದರೆ ಅವರ ಸ್ವತ್ತು ಅವರದ್ದಾಗಿ ಉಳಿದುಕೊಳ್ಳುವುದು ನಿಶ್ಚಿತವಾಗುತ್ತಿತ್ತು. ಇವರ ನಾಯಕನು ತನಗಿಂತ ಪ್ರಬಲನಾದ ಮತ್ತೊಬ್ಬ ನಾಯಕನ ಆಳಾಗುತ್ತಿದ್ದನು. ಇದರಿಂದ ಅವನಿಗೆ ಸುಭದ್ರತೆಯಿರುತ್ತಿತ್ತು. ಪಟ್ಟಣಗಳು, ಮಠಗಳು, ಚರ್ಚಿನ ಆಸ್ತಿಗಳು ಎಲ್ಲವೂ ರಕ್ಷಣೆಗಾಗಿ ಇಂತಹ ಏರ್ಪಾಟುಗಳಿಗೊಳಗಾದವು. ಎಷ್ಟೋ ಸಂದರ್ಭಗಳಲ್ಲಿ ಜನ ತಮ್ಮ ನಿಷ್ಠೆಯನ್ನು ಒಪ್ಪಿಕೊಳ್ಳುವ ಮೊದಲೇ ಅದು ತಮಗೆ ಸಲ್ಲಬೇಕೆಂದು ನಾಯಕರೇ ಅವರನ್ನು ಬಲಾತ್ಕರಿಸಿದ್ದರೂ ಇರಬಹುದು. ಈ ರೀತಿಯ ವ್ಯವಸ್ಥೆ ಕೆಳಗಿನಿಂದ ಮೇಲಕ್ಕೆ ಹಬ್ಬಿದಂತೆ ಮೇಲಿನಿಂದ ಕೆಳಕ್ಕೂ ಇಳಿದು ಬಂದಿರ ಬಹುದು. ಹೀಗೆ ಒಂದು ರೀತಿಯ ಗೋಪುರ ರೂಪದ ವ್ಯವಸ್ಥೆ ಬೆಳೆಯಿತು. ಬೇರೆ ಬೇರೆ ಪ್ರದೇಶಗಳಲ್ಲಿ ಇದರ ಸ್ವರೂಪ ತೀರಾ ಭಿನ್ನವಾಗಿತ್ತು. ಮೊದಮೊದಲು ಬೇಕಾದಷ್ಟು ಹಿಂಸಾಕೃತ್ಯಗಳೂ ವೈಯುಕ್ತಿಕ ಕದನಗಳು ನಡೆದರೂ ಕಾನೂನು ಬದ್ಧವಾದ ಹೊಸ ಆಡಳಿತ ಮತ್ತು ಒಂದು ಶಿಸ್ತುಗಳೆಡೆಗೆ ಈ ವ್ಯವಸ್ಥೆ ಒಂದೇ ಸಮನಾಗಿ ಮುನ್ನಡೆಯಿತು. ಈ ಗೋಪುರಗಳು ಬೆಳೆದು ಬೆಳೆದು ಕಡೆಗೆ ಇವುಗಳಲ್ಲಿ ಕೆಲವಕ್ಕೆ ರಾಜ್ಯಗಳ ರೂಪ ಬಂದಿತು. ಆರನೇ ಶತಮಾನದ ಹೊತ್ತಿಗಾಗಲೇ ಈಗ ಫ್ರಾನ್ಸ್ ಮತ್ತು ನೆದರ್‌ಲ್ಯಾಂಡ್ಸ್ ಇರುವಲ್ಲಿ ಕ್ಲೋವಿಸ್ ಎಂಬುವನು ಸ್ಥಾಪಿಸಿ ಆಳುತ್ತಿದ್ದ ಫ್ರಾಂಕರ ರಾಜ್ಯವೊಂದಿತ್ತು. ಬಹು ಬೇಗನೇ ವಿಸಿಗೋಥಿಕ್, ಲೊಂಬಾರ್ಡ್ ಮತ್ತು ಗೋಥಿಕ್ ರಾಜ್ಯಗಳು ಅಸ್ತಿತ್ವಕ್ಕೆ ಬಂದವು.

ಮುಸ್ಲಿಮರು ಪಿರೆನೀಸ್ ಬೆಟ್ಟಗಳನ್ನು ದಾಟಿದಾಗ ಫ್ರಾಂಕರ ಈ ರಾಜ್ಯ ನಿಜಕ್ಕೂ ಚಾರ್ಲ್ಸ್ ಮಾರ್ಟೆಲ್ ಎಂಬುವನ ಹತೋಟಿಯಲ್ಲಿತ್ತು. ಇವನು ಕ್ಲೋವಿಸನ ವಂಶಜನಾದ ಅಪ್ರಯೋಜಕನಾದ ಒಬ್ಬ ರಾಜನ ಅರಮನೆಯ ಮುಖ್ಯಸ್ಥ ಕ್ರಿ. ಶ. 732ರಲ್ಲಿ ಪ್ವಾತಿಯೆಯಲ್ಲಿ ಮುಸಲ್ಮಾನರು ನಿರ್ಣಾಯಕ ರೀತಿಯಲ್ಲಿ ಸೋತು ಹೋಗಿದ್ದು ಚಾರ್ಲ್ಸ್ ಮಾರ್ಟೆಲನಿಂದಲೇ. ಆಲ್ಪ್ಸ್ ಬೆಟ್ಟಗಳ ಉತ್ತರಕ್ಕೆ ಪಿರೆನೀಸಿ ನಿಂದ ಹಂಗೆರಿವರೆಗಿದ್ದ ಯೂರೋಪ್ ಅಷ್ಟಕ್ಕೂ ಇವನೇ ನಿಜವಾದ ಅಧಿಪತಿ ಯಾಗಿದ್ದನು. ಫ್ರೆಂಚ್–ಲ್ಯಾಟಿನ್, ಉಚ್ಚ ಮತ್ತು ನೀಚ ಜರ್ಮನ್ ಭಾಷೆಗಳ ನ್ನಾಡುತ್ತಿದ್ದ ಅಧೀನ ರಾಜರುಗಳ ಸಮೂಹ ಇವನ ಕೈಕೆಳಗಿತ್ತು. ಇವನ ಮಗ ಪೆಪಿನ್ ಕ್ಲೋವಿಸನ ವಂಶೀಕರಲ್ಲಿ ಕಡೆಯವರನ್ನು ಪೂರ್ತಿ ಒತ್ತರಿಸಿ ರಾಜ ಪದವಿ ಮತ್ತು ಹೆಸರುಗಳನ್ನೂ ತಾನೇ ತೆಗೆದುಕೊಂಡನು. ಪೆಪಿನನ ಮೊಮ್ಮಗ ಷಾರ್ಲ್‌ಮೇನ್ ಕ್ರಿ. ಶ. 768ರಲ್ಲಿ ಪಟ್ಟಕ್ಕೆ ಬಂದಾಗ ಅವನ ರಾಜ್ಯ ಎಷ್ಟು ದೊಡ್ಡದಾಗಿತ್ತೆಂದರೆ ಲ್ಯಾಟಿನ್ ಚಕ್ರವರ್ತಿಯೆಂಬ ಪ್ರಾಚೀನ ಅಧಿಕಾರ ಸೂಚಕ ನಾಮವನ್ನು ತಿರುಗಿ ಬಳಕೆಗೆ ತರುವ ಯೋಚನೆ ಮಾಡಲು ಸಾಧ್ಯವಾಯಿತು. ಉತ್ತರ ಇಟಲಿಯನ್ನು ಗೆದ್ದು ಇವನು ರೋಮಿನ ಅಧಿಪತಿಯಾದನು.

ಇಲ್ಲಿ ಮಾಡುತ್ತಿರುವಂತೆ ಯುರೋಪಿನ ಚರಿತ್ರೆಯನ್ನು ಪ್ರಪಂಚ ಚರಿತ್ರೆಯ ವಿಶಾಲ ಪರಿಧಿಯಿಂದ ಸಮೀಪಿಸಿದರೆ ರೋಮನ್ ಸಾಮ್ರಾಜ್ಯವೆಂಬ ಈ ಸಾಂಪ್ರದಾಯಿಕ ಕಲ್ಪನೆ ಅದೆಷ್ಟು ವಿನಾಶಕಾರಿ ಮತ್ತು ನಿರ್ಬಂಧಕಾರಿಯಾದುದೆಂದು ಬರಿಯ ರಾಷ್ಟ್ರೀಯ ಚರಿತ್ರೆಯಲ್ಲಿ ನೋಡುವುದಕ್ಕಿಂತ ಸ್ಪಷ್ಟವಾಗಿ ಅರ್ಥವಾಗುತ್ತದೆ. ಈ ಸರ್ವೋತ್ಕೃಷ್ಟತೆಯ ಭ್ರಾಂತಿಗಾಗಿ ಸಂಕುಚಿತ ಮನೋಭಾವದ ತೀವ್ರ ಹೊಡೆದಾಟ ಸಾವಿರ ವರ್ಷಗಳಿಗೂ ಹೆಚ್ಚು ಕಾಲ ಯುರೋಪಿನ ಶಕ್ತಿಯನ್ನು ವ್ಯಯಮಾಡಿತು. ಆ ಕಾಲದುದ್ದಕ್ಕೂ ಅಳಿಸಿ ಹಾಕಲು ಸಾಧ್ಯವೇ ಆಗದಿದ್ದ ಕೆಲವು ಪರಸ್ಪರ ದ್ವೇಷ ಭಾವನೆಗಳನ್ನು ಗುರುತಿಸಲು ಸಾಧ್ಯವಿದೆ. ಈ ಭಾವನೆಗಳು ವಿಕೃತ ಮನಸ್ಸಿನ ಗೀಳುಗಳಂತೆ ಯುರೋಪಿನ ಪ್ರಜ್ಞೆಯಲ್ಲಿ ಕಾಣಿಸಿಕೊಳ್ಳುತ್ತವೆ. ಸೀಸರನಾಗಬೇಕೆಂಬ ಆಕಾಂಕ್ಷೆ ವಿಜಯಿಗಳಾದೆಲ್ಲ ದೊರೆಗಳ ಮನಸ್ಸಿನಲ್ಲಿಯೂ ಇರುತ್ತಿತ್ತು. ಷಾರ್ಲಮೇನನಿಂದ ಮೂರ್ತಸ್ವರೂಪ ಪಡೆದ ಈ ಆಕಾಂಕ್ಷೆ ಅಂದಿನ ಪ್ರಚೋದಕ ಶಕ್ತಿಗಳಲ್ಲೊಂದಾಗಿತ್ತು. ಷಾರ್ಲಮೇನನ ಸಾಮ್ರಾಜ್ಯವೆಂದರೆ ನಾಗರೀಕತೆಯ ವಿವಿಧ ಹಂತಗಳಲ್ಲಿದ್ದ ಜರ್ಮನ್ ಪಾಳೆಪಟ್ಟುಗಳ ಸಂಕೀರ್ಣವಾಗಿತ್ತು. ರ್ಹೀನ್ ನದಿಯ ಪಶ್ಚಿಮಕ್ಕೆ ಈ ಜರ್ಮನ್ ಜನರಲ್ಲನೇಕರು ವಿವಿಧ ಲ್ಯಾಟಿನ್ ಉಪ ಭಾಷೆಗಳನ್ನಾಡಲು ಕಲಿತಿದ್ದರು. ಕಡೆಗೆ ಇವೆಲ್ಲ ಭಾಷೆಗಳೂ ಬೆಸೆದುಕೊಂಡು ಫ್ರೆಂಚ್ ಭಾಷೆ ಹುಟ್ಟಿತು. ರ್ಹೀನ್ ನದಿಯ ಪೂರ್ವಕ್ಕೆ ವಾಂಶಿಕವಾಗಿ ಸಾದೃಶ್ಯವುಳ್ಳ ಜರ್ಮನ್ ಜನರು ತಮ್ಮ ಜರ್ಮನ್ ಭಾಷೆಯನ್ನು ಬಿಟ್ಟುಕೊಡಲಿಲ್ಲ. ಹೀಗಾಗಿ ಸಂಸ್ಕೃತರಾಗಿಲ್ಲದ ಈ ಎರಡು ತಂಡಗಳ ಮಧ್ಯೆ ಸಂಪರ್ಕ ಕಷ್ಟವಾಯಿತು. ಸುಲಭ ವಾಗಿ ಇವರ ನಡುವೆ ಒಡಕುಂಟಾಯಿತು. ಫ್ರಾಂಕರಲ್ಲಿ ತಂದೆ ಸತ್ತಾಗ ಅವನ ಆಸ್ತಿಯನ್ನು ಮಕ್ಕಳಲ್ಲಿ ಹಂಚುವ ಪದ್ಧತಿಯಿತ್ತು. ಷಾರ್ಲಮೇನನ ಮರಣದ ನಂತರ ಅವನ ಸಾಮ್ರಾಜ್ಯವನ್ನೂ ಸಹಜವಾಗಿಯೇ ಹೀಗೆಯೆ ಅವನ ಮಕ್ಕಳಲ್ಲಿ ಹಂಚ ಲಾಯಿತು. ಇದರಿಂದ ಒಡಕುಂಟಾಗಲು ಇನ್ನೂ ಸುಲಭವಾಯಿತು. ಷಾರ್ಲಮೇನನ ಕಾಲದಿಂದೀಚೆಗೆಯೂ ಆಗೊಬ್ಬ ದೊರೆ ಈಗೊಬ್ಬ ದೊರೆ ಮತ್ತು ಇವರ ಕುಟುಂಬ ಗಳು ಅಂದಿನ ರಾಜರು, ರಾಜಪುತ್ರರು, ಡ್ಯೂಕ್‌ಗಳು ಮತ್ತು ಬಿಷಪ್‌ಗಳ ಮತ್ತು ಯುರೋಪಿನ ನಗರಗಳ ಸ್ವಾಮಿತ್ವಕ್ಕಾಗಿ–(ಈ ಸ್ಥಾನ ಅಂತಹ ಸುಭದ್ರವಾದುದೇನೂ ಆಗಿರುತ್ತಿರಲಿಲ್ಲ)–ಹೊಡೆದಾಡುವುದೂ ಈ ಹೊಡೆದಾಟದಲ್ಲಿ ಕ್ರಮೇಣ ಫ್ರೆಂಚ್ ಮತ್ತು ಜರ್ಮನ್ ಭಾಗಗಳ ನಡುವೆ ವೈರ ಆಳವಾಗುತ್ತಾ ಬರುವುದು ಕಾಣುತ್ತದೆ. ಚಕ್ರವರ್ತಿಯನ್ನು ನೇಮಿಸುವಾಗ ಪ್ರತಿಬಾರಿಯೂ ಔಪಚಾರಿಕವಾಗಿ ಚುನಾವಣೆ ನಡೆಯುತ್ತಿತ್ತು. ಜೀರ್ಣವಾಗಿದ್ದ ಯಾವುದೋ ಸ್ಥಳದಲ್ಲಿದ್ದ ರೋಮ್ ನಗರವನ್ನು ಹೇಗಾದರೂ ಬಡಿದಾಡಿ ವಶಪಡಿಸಿಕೊಂಡು ಅಲ್ಲಿ ಕಿರೀಟಧಾರಣೆ ಮಾಡಿಸಿಕೊಳ್ಳುವುದು ಈ ಚಕ್ರವರ್ತಿಗಳ ಮಹೋನ್ನತ ಆಕಾಂಕ್ಷೆ ಆಗಿರುತ್ತಿತ್ತು.

ಯಾವನಾದರೊಬ್ಬ ಪ್ರಾಪಂಚಿಕ ರಾಜನಿಗಿಂತ ರೋಮಿನ ಪೋಪನೇ ವಾಸ್ತವ

ವಾಗಿ ಚಕ್ರವರ್ತಿಯಾಗಿರಬೇಕೆಂಬ ರೋಮನ್ ಚರ್ಚಿನ ನಿರ್ಧಾರ ಯುರೋಪಿನ ಈ ರಾಜಕೀಯ ಅವ್ಯವಸ್ಥೆಯ ಮುಂದಿನ ಮುಖ್ಯ ಅಂಶ. ಆಗಲೇ ಪೋಪ್ ರೋಮಿನ ಪ್ರಧಾನ ಆಚಾರ್ಯನಾಗಿದ್ದನು. ನಶಿಸಿ ಹೋಗುತ್ತಿದ್ದ ಈ ನಗರ ನಿಜಕ್ಕೂ ಅವನದೇ ಆಗಿತ್ತು. ಅವನ ಬಳಿ ಸೈನ್ಯವಿಲ್ಲದಿದ್ದರೂ ಸಮಗ್ರಲ್ಯಾಟಿನ್ ಪ್ರಪಂಚ ವಷ್ಟರಲ್ಲೂ ಇದ್ದ ಅವನ ಪಾದ್ರಿಗಳು ಒಂದು ಬೃಹತ್ ಪ್ರಚಾರ ಸಂಸ್ಥೆಯಾಗಿದ್ದರು. ಮಾನವರ ಶರೀರಗಳ ಮೇಲೆ ಅವನಿಗೇನೂ ಹತೋಟಿಯಿಲ್ಲದಿದ್ದರೂ ಅವರ ಕಲ್ಪನೆಯ ನರಕ ಸ್ವರ್ಗಗಳ ಕೀಲಿಕೈ ಇವನಲ್ಲಿತ್ತು. ಅವರ ಆತ್ಮಗಳ ಮೇಲೆ ಪೋಪ್ ಬೇಕಾದಷ್ಟು ಪ್ರಭಾವ ಬೀರಲು ಸಾಧ್ಯವಿತ್ತು. ಹೀಗೆ ಮಧ್ಯಯುಗದಾದ್ಯಂತವೂ ರಾಜರೆಲ್ಲರೂ ಮೊದಲು ಒಬ್ಬರೊಬ್ಬರನ್ನು ಸರಿಗಟ್ಟಲು, ಬಳಿಕ ಮೀರಿಸಲು, ಕಡೆಗೆ ಸರ್ವಶ್ರೇಷ್ಠವಾದ ಪದವಿಯನ್ನು ದೊರಕಿಸಲು ತಂತ್ರ ಹೂಡುವುದರಲ್ಲಿ ನಿರತರಾಗಿದ್ದರೆ ರೋಮಿನ ಪೋಪ್ ಕೆಲವೊಮ್ಮೆ ಧೈರ್ಯವಾಗಿ, ಕೆಲವೊಮ್ಮೆ ಕಪಟದಿಂದ, ಕೆಲವೊಮ್ಮೆ ದುರ್ಬಲವಾಗಿ—(ಆ ಕಾಲದ ಪೋಪ್‌ಗಳೆಲ್ಲ ಮುದುಕರೇ ಆಗಿರುತ್ತಿದ್ದರು. ಅವರಲ್ಲಿ ಯಾರೊಬ್ಬರೂ ಸರಾಸರಿ ಎರಡು ವರ್ಷಗಳಿಗಿಂತ ಹೆಚ್ಚಿಗೆ ಆಳಲಿಲ್ಲ)—ತಾನೇ ಕ್ರೈಸ್ತ ಸಮಾಜದ ಅತ್ಯುನ್ನತ ಅಧಿಪತಿಯಾಗಿ ಈ ಎಲ್ಲ ರಾಜರನ್ನೂ ಅಡಿಯಾಳು ಗಳನ್ನಾಗಿ ಮಾಡಿಕೊಳ್ಳಬೇಕೆಂದು ಸಂಚು ಮಾಡುತ್ತಿದ್ದನು.

ಈ ರೀತಿಯ ರಾಜರುಗಳ ವೈರ, ಮತ್ತು ಚಕ್ರವರ್ತಿ ಮತ್ತು ಪೋಪರ ಮಧ್ಯದ ಪೈಪೋಟಿಗೆ ಮಾತ್ರ ಯುರೋಪಿನ ಗೊಂದಲದ ಪರಿಸ್ಥಿತಿ ಸೀಮಿತವಾಗಿರ ಲಿಲ್ಲ: ಇನ್ನೂ ಕೂಡ ಕಾನ್‌ಸ್ಟಂಟಿನೋಪಲ್ಲಿನಲ್ಲಿ ಯುರೋಪೆಲ್ಲ ತನಗೆ ವಿಧೇಯ ವಾಗಿರಬೇಕೆಂದು ಘೋಷಿಸುತ್ತಿದ್ದ ಗ್ರೀಕ್ ಭಾಷೆಯನ್ನಾಡುತ್ತಿದ್ದ ಚಕ್ರವರ್ತಿ ಇದ್ದನು. ಷಾರ್ಲ್‌ಮೇನ್ ಪುನರುಜ್ಜೀವಿತಗೊಳಿಸಿದ್ದು ರೋಮ ಸಾಮ್ರಾಜ್ಯದ ಲ್ಯಾಟಿನ್ ತುದಿಯನ್ನು ಮಾತ್ರ. ಈ ಲ್ಯಾಟಿನ್ ಮತ್ತು ಗ್ರೀಕ್ ಸಾಮ್ರಾಜ್ಯಗಳ ಮಧ್ಯೆ ಸಹಜವಾಗಿಯೇ ಬಹುಬೇಗ ಸ್ಪರ್ಧೆ ಹುಟ್ಟಿಕೊಂಡಿತು. ಇದಕ್ಕಿಂತ ಇನ್ನೂ ಬೇಗ ಗ್ರೀಕ್ ಕ್ರೈಸ್ತ ಮತಕ್ಕೂ ಲ್ಯಾಟಿನ್ ಕ್ರೈಸ್ತ ಮತಕ್ಕೂ ಮೇಲಾಟ ಎದ್ದಿತು. ರೋಮಿನ ಪೋಪ್ ತಾನೇ ಕ್ರಿಸ್ತನ ಪ್ರಮುಖ ಅಪಾಸ್ತಲ್ ಆದ ಪೀಟರನ ಉತ್ತರಾಧಿಕಾರಿಯೆಂದೂ ಕ್ರೈಸ್ತ ಸಂಘಗಳು ಎಲ್ಲೇ ಇರಲಿ ಅವೆಲ್ಲಕ್ಕೂ ತಾನೇ ಪ್ರಮುಖನೆಂದೂ ಹಕ್ಕು ಸಾಧಿಸಹೊರಟನು. ಕಾನ್‌ಸ್ಟಂಟಿನೋಪಲ್ಲಿನ ಚಕ್ರವರ್ತಿ ಯಾಗಲೀ ಪ್ಯಾಟ್ರಿಯಾರ್ಕನಾಗಲೀ ಈ ಹಕ್ಕನ್ನು ಒಪ್ಪಿಕೊಳ್ಳಲು ಸಿದ್ಧರಿರ ಲಿಲ್ಲ. ಪವಿತ್ರತ್ರಯ (holy trinity) ತತ್ತ್ವದಲ್ಲಿ ಒಂದು ಸೂಕ್ಷ್ಮವಾದ ಸೈದ್ಧಾಂತಿಕ ವಿವಾದದಿಂದಾಗಿ ಭಿನ್ನಾಭಿಪ್ರಾಯಗಳ ದೀರ್ಘಸರಣಿಯುಂಟಾಗಿ ಅಖೈರಾಗಿ ಕ್ರಿ.ಶ. 1054ರಲ್ಲಿ ಇವೆರಡರ ಸಂಬಂಧ ಪೂರ್ತಿ ಮುರಿದು ಹೋಯಿತು. ಆಗಿನಿಂದ ಲ್ಯಾಟಿನ್‌ಮತ್ತು ಗ್ರೀಕ್ ಕ್ರೈಸ್ತ ಸಂಘಗಳು ಒಂದರಿಂದೊಂದು ಪ್ರತ್ಯೇಕ ವಾಗಿ ಉಳಿದುಕೊಂಡು ಬಂದು ಯಾವ ಮುಚ್ಚುಮರೆಯೂ ಇಲ್ಲದೆ ಒಂದರ

ಮೇಲೊಂದು ದ್ವೇಷ ಸಾಧಿಸುತ್ತಿದ್ದುವು. ಮಧ್ಯಯುಗದಲ್ಲಿ ಲ್ಯಾಟಿನ್ ಕ್ರೈಸ್ತ ಪ್ರಪಂಚವನ್ನು ಕ್ಷೀಣಗೊಳಿಸಿದ ಹಲವಾರು ಘರ್ಷಣೆಗಳಲ್ಲಿ ಇದನ್ನೂ ಸೇರಿಸಬೇಕು.

ಹೀಗೆ ಒಡೆದುಹೋಗಿದ್ದ ಈ ಕ್ರೈಸ್ತಪ್ರಪಂಚ ಮೂರು ಶತ್ರು ಗುಂಪುಗಳಿಂದ ಪೆಟ್ಟುತಿನ್ನಬೇಕಾಯಿತು. ಬಾಲ್ಟಿಕ್ ಮತ್ತು ಉತ್ತರ ಸಮುದ್ರದ ಬಳಿ ಇದ್ದ ನಾರ್ತ್‌ಮೆನ್ ಎಂದು ಕರೆಸಿಕೊಳ್ಳುತ್ತಿದ್ದ ಔತ್ತರೇಯಗುಂಪಿನ ಜನ ಬಹು ನಿಧಾನವಾಗಿ ಮನಸ್ಸಿಲ್ಲದ ಮನಸ್ಸಿನಿಂದ ಕ್ರೈಸ್ತರಾದರು. ಸಮುದ್ರಗಳ್ಳರಾಗಿದ್ದ ಇವರು ಕ್ರೈಸ್ತರು ಜೀವಿಸುತ್ತಿದ್ದ ತೀರಪ್ರದೇಶಗಳ ಮೇಲೆ ಸ್ಪೇನಿನವರೆಗೂ ದಾಳಿಮಾಡುತ್ತಿದ್ದರು. ರಷ್ಯದ ನದಿಗಳ ಮೂಲಕ ಒಳನಾಡಿನ ಬಂಜರು ಪ್ರದೇಶಗಳವರೆಗೆ ನುಗ್ಗಿ ತಮ್ಮ ನೌಕಾ ಚಟುವಟಿಕೆಗಳನ್ನು ಅಲ್ಲಿಂದ ದಕ್ಷಿಣಕ್ಕೆ ಹರಿಯುವ ನದಿಗಳಿಗೆ ವಿಸ್ತರಿಸಿ ಕ್ಯಾಸ್ಪಿಯನ್ ಮತ್ತು ಕಪ್ಪು ಸಮುದ್ರಗಳ ಮೇಲೂ ಸಮುದ್ರ ಕಳ್ಳತನ ನಡೆಸುತ್ತಿದ್ದರು. ರಷ್ಯದಲ್ಲಿ ಇವರು ಪಾಳೆಯಪಟ್ಟುಗಳನ್ನು ಸ್ಥಾಪಿಸಿದರು. ರಷ್ಯನ್ನರೆಂದು ಮೊದಲ ಬಾರಿಗೆ ಕರೆಸಿಕೊಂಡವರು ಇವರೇ. ಈ ನಾರ್ತ್‌ಮೆನ್-ರಷ್ಯನರು ಕಾನ್‌ಸ್ಟಾಂಟಿನೋಪಲ್ಲನ್ನು ವಶಪಡಿಸಿಕೊಳ್ಳುವುದು ದೂರವಿರಲಿಲ್ಲ. 9ನೇ ಶತಮಾನದ ಪ್ರಥಮ ಭಾಗದಲ್ಲಿ ಇಂಗ್ಲೆಂಡ್ ಕ್ರೈಸ್ತಧರ್ಮವನ್ನವಲಂಬಿಸಿದರೂ ಜರ್ಮನ್ ದೇಶವಾಗಿತ್ತು. ಷಾರ್ಲಮೇನನ ಶಿಷ್ಯ ಮತ್ತು ಆಶ್ರಿತನಾಗಿದ್ದ ಎಗ್‌ಬರ್ಟ್ ಎಂಬುವನು ಇದರ ರಾಜನಾಗಿದ್ದನು. ಅವನ ಉತ್ತರಾಧಿಕಾರಿ ಆಲ್ಫ್ರೆಡ್ ಮಹಾಶಯನಿಂದ ಅರ್ಧದಷ್ಟು ರಾಜ್ಯವನ್ನು ಈ ಔತ್ತರೇಯ ಜನ ನಾರ್ತ್‌ಮೆನ್ನರು ಕಿತ್ತುಕೊಂಡರು. ಕೊನೆಗೆ ಕೆನ್ಯೂಟ್‌ದೊರೆಯ ನೇತೃತ್ವದಲ್ಲಿ ಇಂಗ್ಲೆಂಡಷ್ಟನ್ನೂ ಸ್ವಾಧೀನಪಡಿಸಿಕೊಂಡರು. ಕ್ರಿ.ಶ. 912ರಲ್ಲಿ ರೋಲ್ಫ್ ದಿ ಗ್ಯಾಂಗರ್‌ನ ನಾಯಕತ್ವದಲ್ಲಿ ಮತ್ತೊಂದು ತಂಡ ಉತ್ತರ ಫ್ರಾನ್ಸನ್ನುಗೆದ್ದಿತು. ಇದೇ ಮುಂದೆ ನಾರ್ಮಂಡಿಯಾಯಿತು.

ಕೆನ್ಯೂಟ್ ದೊರೆ ಆಳುತ್ತಿದ್ದುದು ಇಂಗ್ಲೆಂಡೊಂದನ್ನೇ ಅಲ್ಲ. ನಾರ್ವೆ, ಡೆನ್ಮಾರ್ಕ್‌ಗಳೂ ಅವನದಾಗಿದ್ದುವು. ಆದರೆ ಈ ಪುಟ್ಟದಾದ ಸಾಮ್ರಾಜ್ಯ ಅವನು ತೀರಿಕೊಳ್ಳುತ್ತಲೂ ಒಡೆದು ಹೋಯಿತು. ಈ ರಾಜಕೀಯ ದೌರ್ಬಲ್ಯಕ್ಕೆ ಅಸಂಸ್ಕೃತ ಜನರಲ್ಲಿದ್ದ, ರಾಜನ ಮಕ್ಕಳೆಲ್ಲರಿಗೂ ರಾಜ್ಯವನ್ನು ಹಂಚುವ ಪದ್ಧತಿಯೇ ಕಾರಣ. ಈ ಔತ್ತರೇಯ ಜನರ ಈ ಅಲ್ಪಕಾಲದ ಒಗ್ಗಟ್ಟು ತಾಳಿಕೊಂಡು ಬಂದಿದ್ದರೆ ಏನಾಗುತ್ತಿತ್ತು ಎಂದು ಕಲ್ಪಿಸಿಕೊಳ್ಳುವುದು ಸ್ವಾರಸ್ಯಕರ ವಿಷಯ. ಈ ಕುಲದ ಜನರಿಗೆ ಆಶ್ಚರ್ಯಕರ ಧೈರ್ಯ ಮತ್ತು ಶಕ್ತಿಗಳಿದ್ದುವು. ಇವರು ಐಸ್‌ಲ್ಯಾಂಡ್ ಮತ್ತು ಗ್ರೀನ್‌ಲ್ಯಾಂಡ್‌ಗಳವರೆಗೆ ತಮ್ಮ ಗ್ಯಾಲಿಗಳಲ್ಲಿ ಪ್ರಯಾಣ ಬೆಳಸಿದ್ದರು. ಅಮೇರಿಕದ ನೆಲದ ಮೇಲೆ ಮೊದಲು ಕಾಲಿಟ್ಟ ಯೂರೋಪಿಯನ್ನರು ಇವರೇ. ಮುಂದೆ ನಾರ್ಮನ್ ಸಾಹಸಗಾರರು ಸಿಸಿಲಿಯನ್ನು ಮುಸಲ್ಮಾನರಿಂದ ವಶಪಡಿಸಿಕೊಂಡು ರೋಮನ್ನು ಕೊಳ್ಳೆಹೊಡೆದರು. ಸಮುದ್ರಯಾನದಲ್ಲಿ ಪರಿಣತಿ ಇದ್ದ, ಅಮೇರಿಕದಿಂದ ರಷ್ಯದವರೆಗೆ ಹರಡಿದ ಬೃಹತ್ತಾದ ಔತ್ತರೇಯ ಸಾಮ್ರಾಜ್ಯವೊಂದು ಕೆನ್ಯೂಟನ ರಾಜ್ಯದಿಂದ ಹುಟ್ಟಿ ಬೆಳೆಯಬಹುದಾಗಿತ್ತೆಂದು ಊಹಿಸಿಕೊಂಡರೆ ಮನಸ್ಸು ಬೆರಗಾಗುತ್ತದೆ.

ಜರ್ಮನರ ಮತ್ತು ಲ್ಯಾಟಿನೀಕರಣವಾದ ಯೂರೋಪಿಯನ್ನರ ಪೂರ್ವಕ್ಕೆ ಸ್ಲಾವ್ ಕುಲದವರ ಮತ್ತು ತುರುಕ ಜನರ ಗುಂಪುಗಳಿದ್ದುವು. ಇವರಲ್ಲಿ ಮುಖ್ಯರಾದ ಮಾಗ್ಯಾರರು ಅಥವಾ ಹಂಗೇರಿಯನ್ನರು ಎಂಟು ಮತ್ತು ಒಂಬತ್ತನೇ ಶತಮಾನಗಳುದ್ದಕ್ಕೂ ಪಶ್ಚಿಮಕ್ಕೆ ಬರುತ್ತಲೇ ಇದ್ದರು. ಸ್ವಲ್ಪಕಾಲ ಷಾರ್ಲಮೇನನು ಇವರನ್ನು ತಡೆಹಿಡಿದನು. ಆದರೆ ಅವನು ಮರಣ ಹೊಂದಿದಮೇಲೆ ಈಗಿನ ಹಂಗೇರಿಯಲ್ಲಿ ಇವರು ವಾಸಿಸತೊಡಗಿದರು. ತಮಗೆ ಸಂಬಂಧಿಸಿದ ಇದಕ್ಕೆ ಮುಂಚೆ ಇದ್ದ ಹೂಣರಂತೆ ಇವರೂ ಸಹ ಪ್ರತಿಬೇಸಿಗೆಯೂ ಯೂರೋಪಿನ ನೆಲಸುನಾಡುಗಳ ಮೇಲೆ ದಾಳಿಮಾಡುತ್ತಿದ್ದರು. ಕ್ರಿ. ಶ. 938 ರಲ್ಲಿ ಜರ್ಮನಿಯ ಮೂಲಕ ಫ್ರಾನ್ಸಿನೊಳಗೆ ನುಗ್ಗಿ ಆಲ್ಪ್ಸನ್ನು ದಾಟಿ ಉತ್ತರ ಇಟಲಿಗೆ ಹೋಗಿ ಎಲ್ಲ ಕಡೆಯೂ ಬೆಂಕಿಹಚ್ಚಿ ಲೂಟಿಮಾಡಿ ಹಾಳುಮಾಡಿ ತಿರುಗಿ ತಮ್ಮ ನಾಡಿಗೆ ಬಂದರು.

ಕಡೆಯದಾಗಿ ಈ ಎಲ್ಲರ ಜೊತೆಗೆ ರೋಮನ್ ಸಾಮ್ರಾಜ್ಯದ ಅವಶೇಷಗಳ ಮೇಲೆ ದಕ್ಷಿಣದಿಂದ ಸಾರಸೆನ್ನರು ಮೇಲಿಂದ ಮೇಲೆ ಪೆಟ್ಟುಕೊಡುತ್ತಿದ್ದರು. ಇವರಿಗೆ ಸಮುದ್ರದ ಮೇಲೆ ಒಳ್ಳೆಯ ಹತೋಟಿಯಿತ್ತು. ಜಲಯುದ್ಧಗಳಲ್ಲಿ ಇವರನ್ನು ಎದುರಿಸಬಲ್ಲ ಎದುರಾಳಿಗಳೆಂದರೆ ಔತ್ತರೇಯರು—ರಷ್ಯದಔತ್ತರೇಯರು, ಪಾಶ್ಚಿಮಾತ್ಯ ಔತ್ತರೇಯರು.

ಷಾರ್ಲಮೇನ್ ಮತ್ತು ಅವನ ಬಳಿಕ ಬಂದ ಇತರ ಮಹದಾಕಾಂಕ್ಷೆಯುಳ್ಳ ವ್ಯಕ್ತಿಗಳು ತಮಗಿಂತಲೂ ಕಸುವುಳ್ಳ ಆಕ್ರಮಣಕಾರಿ ಪ್ರವೃತ್ತಿಯುಳ್ಳ ಜನರಿಂದ ಸುತ್ತುಗಟ್ಟಲ್ಪಟ್ಟಿದ್ದರು. ತಮ್ಮ ಮೇಲೆ ಪ್ರಭಾವ ಬೀರುತ್ತಿದ್ದ ಶಕ್ತಿಗಳನ್ನು ಅರ್ಥಮಾಡಿಕೊಳ್ಳುವ ಶಕ್ತಿ ಇವರಿಗೆ ಇರಲಿಲ್ಲ. ತಾವು ಎದುರಿಸಲೇಬೇಕಾಗಿದ್ದ ಅಪಾಯಗಳು ಅವರ ಬುದ್ಧಿಗೆ ಆಳತೆಮೀರಿದುದಾಗಿದ್ದುವು. ಇಂತಹವರು ಪಶ್ಚಿಮರೋಮನ್ ಸಾಮ್ರಾಜ್ಯವನ್ನು ಪವಿತ್ರರೋಮನ್ ಸಾಮ್ರಾಜ್ಯವೆಂಬ ಹೆಸರಿನಲ್ಲಿ ಪುನರುಜ್ಜೀವಿತಗೊಳಿಸಬೇಕೆಂದು ತೊಡಗಿದರು. ಪಶ್ಚಿಮ ಯೂರೋಪಿನ ರಾಜಕೀಯ ಜೀವನದಲ್ಲಿ ಷಾರ್ಲಮೇನನಿಂದೀಚೆಗೆ ಈ ಗೀಳು ಕಾಣಬರುತ್ತದೆ. ಪೂರ್ವದಲ್ಲಿ ರೋಮನ್ ಪ್ರಭುತ್ವದ ಗ್ರೀಕ್ ಭಾಗ ಕುಗ್ಗುತ್ತಾ ನಶಿಸುತ್ತಾ ಹೋಗಿ ಕಡೆಗೆ ನೀತಿಭ್ರಷ್ಟವಾದ ವಾಣಿಜ್ಯನಗರ ಕಾನ್‌ಸ್ಟಂಟಿನೋಪಲ್ ಮತ್ತು ಅದರ ಸುತ್ತಲಿನ ಕೆಲವು ಮೈಲಿ ವಿಸ್ತೀರ್ಣದ ಪ್ರದೇಶಬಿಟ್ಟರೆ ಮತ್ತೇನೂ ಉಳಿಯಲಿಲ್ಲ. ರಾಜಕೀಯ ದೃಷ್ಟಿಯಿಂದ ಯೂರೋಪ್ ಷಾರ್ಲಮೇನನಿಂದೀಚೆಗೆ ಸಾವಿರವರ್ಷಗಳ ಕಾಲ ಸಂಪ್ರದಾಯಬದ್ಧವಾಗಿ ಉಳಿದು ಅಲ್ಲಿ ಯಾವ ರಚನಾತ್ಮಕ ಚಟುವಟಿಕೆಗಳೂ ನಡೆಯಲಿಲ್ಲ.

ಯೂರೋಪಿನ ಚರಿತ್ರೆಯಲ್ಲಿ ಷಾರ್ಲಮೇನನ ಹೆಸರು ತುಂಬಾ ದೊಡ್ಡದಾಗಿಯೇ ಕಾಣಿಸಿಕೊಂಡರೂ ಅವನ ವ್ಯಕ್ತಿತ್ವ ತುಂಬಾ ಮಸಕು ಮಸಕಾಗಿ ತೋರಿಬರುತ್ತದೆ. ಅವನಿಗೆ ಓದುಬರಹ ಬರುತ್ತಿರಲಿಲ್ಲವಾದರೂ ವಿದ್ಯೆಯೆಂದರೆ ತುಂಬ ಗೌರವವಿತ್ತು. ಊಟದ ಸಮಯದಲ್ಲಿ ಏನನ್ನಾದರೂ ಓದಿಸಿ ಕೇಳಲು ಅವನು ಇಷ್ಟಪಡುತ್ತಿದ್ದನು.

ದೇವತಾಶಾಸ್ತ್ರ ವಿಷಯವಾದ ಚರ್ಚೆಯೆಂದರೂ ಅಷ್ಟೆ. ಅವನ ಚಳಿಗಾಲದ ವಾಸ ಸ್ಥಾನವಾದ ಏಕ್ಸ್ ಲ ಷಾಪೆಲ್ (Aix-la-Chappele) ಅಥವಾ ಮಾಯೊನ್ಸ್ (Mayence) ನಲ್ಲಿ ಅನೇಕ ವಿದ್ವಾಂಸರನ್ನು ಕಲೆ ಹಾಕಿ ಅವರೊಡನೆ ಸಂಭಾಷಿಸಿ ಎಷ್ಟೋ ವಿಷಯಗಳನ್ನು ತಿಳಿದುಕೊಂಡನು. ಬೇಸಿಗೆಯಲ್ಲಿ ಸ್ಪೇನಿನ ಸಾರಸೆನ್ನರು ಸ್ಲಾವ್ ಮತ್ತು ವ್ಯಾಗ್ಯಾರರು, ಸ್ಯಾಕ್ಸನ್ನರು, ಇನ್ನೂ ಕ್ರೈಸ್ತರಾಗದಿದ್ದ ಜರ್ಮನ್ ಕುಲದ ಜನರಮೇಲೆ ಯುದ್ಧ ಮಾಡುತ್ತಿದ್ದನು. ರಾಮ್ಯುಲಸ್ ಅಗಸ್ಟಸ್‌ನ ಉತ್ತರಾಧಿಕಾರಿಯಾಗಿ ಸೀಸರ್ ಎನಿಸಿಕೊಳ್ಳಬೇಕೆಂಬ ಯೋಚನೆ ಇವನಿಗೆ ಉತ್ತರ ಇಟಲಿಯನ್ನು ವಶಪಡಿಸಿಕೊಳ್ಳುವ ಮುಂಚೆ ಬಂದಿತೋ ಅಥವಾ ಇದನ್ನು ಕಾನ್‌ಸ್ಟಂಟಿನೋಪಲ್ಲಿನ ಸಹಾಯದಿಂದ ಲ್ಯಾಟಿನ್ ಚರ್ಚನ್ನು ಬಿಡುಗಡೆ ಮಾಡಬೇಕೆಂದು ಕಾತರನಾಗಿದ್ದ ಪೋಪ್ ಮೂರನೆಯ ಲಿಯೋ ಸೂಚಿಸಿದನೋ ಖಚಿತವಾಗಿ ಗೊತ್ತಿಲ್ಲ.

ತನ್ನಿಂದಲೇ ಭಾವೀ ಚಕ್ರವರ್ತಿಗೆ ಕಿರೀಟಧಾರಣೆಯಾಯಿತೆಂದು ತೋರಿಸಲು ಪೋಪನೂ ಅಲ್ಲವೆಂದು ತೋರಿಸಲು ಷಾರ್ಲ್‌ಮೇನನೂ ವಿಚಿತ್ರರೀತಿಯಲ್ಲಿ ಪ್ರಯತ್ನ ಮಾಡಿದರು. ಕಡೆಗೆ ಕ್ರಿ.ಶ. 800ರಲ್ಲಿ ಕ್ರಿಸ್‌ಮಸ್ ಹಬ್ಬದದಿನ ಸೆಂಟ್‌ಪೀಟರ್ ಚರ್ಚಿನಲ್ಲಿ ದಂಡನಾಯಕನಾಗಿ ಇಟಲಿಗೆ ಬಂದಿದ್ದ ಈ ಅಭ್ಯಾಗತನಿಗೆ ಪೋಪ್ ಹಠಾತ್ತನೆ ಕಿರೀಟಧಾರಣೆ ಮಾಡಿಯೇಬಿಟ್ಟನು. ಕಿರೀಟವೊಂದನ್ನು ಹೊರತೆಗೆದು ಷಾರ್ಲ್‌ಮೇನನ ತಲೆಯ ಮೇಲಿಟ್ಟು ಅವನು ಸೀಸರನೆಂದೂ ಅಗಸ್ಟಸ್ ಎಂದೂ ಘೋಷಿಸಿದನು. ಜನರಿಂದ ಹರ್ಷೋದ್ಗಾರವಾಯಿತು. ಕಿರೀಟಧಾರಣೆ ಆದ ರೀತಿ ಷಾರ್ಲ್‌ಮೇನನಿಗೆ ಸ್ವಲ್ಪವೂ ಇಷ್ಟವಾಗಲಿಲ್ಲ. ಇದು ಒಂದು ಸೋಲೆಂಬ ಭಾವನೆ ಅವನ ಮನಸ್ಸಿನಲ್ಲಿ ಕೊರೆಯುತ್ತಿತ್ತು. ಪೋಪನು ಕಿರೀಟಧಾರಣೆ ಮಾಡಲು ಅವಕಾಶ ಕೊಡಕೂಡದೆಂದೂ ಕಿರೀಟವನ್ನು ತಾನೇ ಕೈಗಳಲ್ಲಿ ಕಸಿದುಕೊಂಡು ತಲೆಯ ಮೇಲಿಟ್ಟುಕೊಳ್ಳಬೇಕೆಂದೂ ತನ್ನ ಮಗನಿಗೆ ಷಾರ್ಲ್‌ಮೇನ್ ಬಹು ಎಚ್ಚರಿಕೆಯಿಂದ ತಿಳಿಯಹೇಳಿದ್ದನು. ಹೀಗೆ ಈ ಚಕ್ರವರ್ತಿ ಪದವಿಯ ಪುನರುಜ್ಜೀವನ ಮೊದಲಾಗುವಾಗಲೇ ಪೋಪ್ ಮತ್ತು ಚಕ್ರವರ್ತಿಗಳ ಮಧ್ಯೆ ಈ ಯುಗದುದ್ದಕ್ಕೂ ಅಗ್ರಪೂಜೆಗಾಗಿ ನಡೆದ ಮೇಲಾಟ ಮೊದಲಾದುದನ್ನು ನೋಡುತ್ತೇವೆ. ಆದರೆ ಷಾರ್ಲ್‌ಮೇನನ ಮಗ 'ಧರ್ಮಿಷ್ಠ ಲೂಯಿ' (Louis The Pious) ತಂದೆಯ ಬೋಧನೆಯನ್ನು ಕಡೆಗಣಿಸಿ ಪೋಪನಿಗೆ ಸಂಪೂರ್ಣ ವಿಧೇಯನಾಗಿ ನಡೆದುಕೊಂಡನು.

ಲೂಯಿಯ ನಿಧನದ ನಂತರ ಷಾರ್ಲ್‌ಮೇನನ ಸಾಮ್ರಾಜ್ಯ ಒಡೆದು ಹೋಯಿತು. ಫ್ರೆಂಚ್ ಭಾಷೆಯನ್ನಾಡುತ್ತಿದ್ದ ಫ್ರಾಂಕರು ಮತ್ತು ಜರ್ಮನ್ ಆಡುತ್ತಿದ್ದ ಫ್ರಾಂಕರ ನಡುವಿನ ಬಿರುಕು ಆಳವಾಯಿತು. ಹೆನ್ರಿ ದಿ ಫೌಲರ್ ಎಂಬುವನ ಮಗನಾದ ಆಟ್ಟೊ ಮುಂದಿನ ಚಕ್ರವರ್ತಿ. ಇವನು ಸ್ಯಾಕ್ಸನ್ ಕುಲದವನು. ಕ್ರಿ. ಶ. 919 ರಲ್ಲಿ ಜರ್ಮನ್‌ರಾಜರು ಮತ್ತು ಮಠಾಧಿಪತಿಗಳೆಲ್ಲ ಸೇರಿ ಇವನನ್ನು ಜರ್ಮನಿಯ ರಾಜನನ್ನಾಗಿ ಚುನಾಯಿಸಿದ್ದರು. ರೋಮಿನಮೇಲೆ ಬಂದು ಎರಗಿದ ಆಟ್ಟೊ ಕ್ರಿ.ಶ.

962ರಲ್ಲಿ ಅಲ್ಲಿ ಚಕ್ರವರ್ತಿಯೆಂದು ಅಭಿಷಿಕ್ತನಾದನು. ಹನ್ನೊಂದನೇ ಶತಮಾನದ ಮೊದಲ ಭಾಗದಲ್ಲಿ ಈ ಸ್ಯಾಕ್ಸನ್ ಮನೆತನ ಅಂತ್ಯವಾಗಿ ಇತರ ಜರ್ಮನ್ ದೊರೆಗಳಿಗೆ ಎಡೆಕೊಟ್ಟಿತು. ಷಾರ್ಲಮೇನನಿಂದ ಮೊದಲಾದ ಕಾರ್ಲೊವಿಂಗಿಯನ್ ಮನೆತನ ಕೊನೆಯಾದಮೇಲೆ ಫ್ರೆಂಚ್ ಭಾಷೆಯ ಪ್ರಭೇದಗಳನ್ನಾಡುತ್ತಿದ್ದ ಪಶ್ಚಿಮದಲ್ಲಿದ್ದ ಊಳಿಗಮಾನ್ಯ ಪದ್ಧತಿಯ ರಾಜರು ಮತ್ತು ಶ್ರೀಮಂತರುಗಳು ಯಾರೂ ಈ ಜರ್ಮನ್ ಚಕ್ರವರ್ತಿಗಳ ಅಂಕೆಗೆ ಬೀಳಲಿಲ್ಲ. ಬ್ರಿಟನಿನ್ನ ಯಾವಭಾಗವೂ ಯಾವಾಗಲೂ ಈ ಪವಿತ್ರ ರೋಮನ್ ಸಾಮ್ರಾಜ್ಯಕ್ಕೆ ಸೇರಲಿಲ್ಲ. ನಾರ್ಮಂಡಿಯ ಡ್ಯೂಕ್, ಫ್ರಾನ್ಸಿನ ರಾಜ ಮತ್ತಿತರ ಅಷ್ಟೇನೂ ಮುಖ್ಯರಲ್ಲದ ದೊರೆಗಳೂ ಇದರ ಹೊರಗೇ ಉಳಿದಿದ್ದರು.

ಕ್ರಿ.ಶ. 987ರಲ್ಲಿ ಫ್ರಾನ್ಸ್‌ರಾಜ್ಯವು ಕಾರ್ಲೊವಿಂಗಿಯನ್ ದೊರೆಗಳ ಕೈತಪ್ಪಿ ಹ್ಯೂ ಕಾಪೆಟ್ಟನ (Hugh Capet) ಕೈಸೇರಿತು. ಇವನ ವಂಶದವರು 18ನೇ ಶತಮಾನದವರೆಗೂ ಆಳುತ್ತಿದ್ದರು. ಇವನ ಕಾಲದಲ್ಲಿ ಪ್ಯಾರಿಸ್ ಸುತ್ತಲಿನ ಚಿಕ್ಕ ಪ್ರದೇಶವಷ್ಟೇ ಇವರ ವಶದಲ್ಲಿತ್ತು.

ಕ್ರಿ.ಶ. 1066ರಲ್ಲಿ ಇಂಗ್ಲೆಂಡ್ ಹೆಚ್ಚುಕಡಿಮೆ ಏಕಕಾಲದಲ್ಲಿಯೇ ನಾರ್ವೆಯ ನಾರ್ತ್‌ಮೆನ್ ಮತ್ತು ನಾರ್ಮಂಡಿಯ ಲ್ಯಾಟಿನ್ ಪ್ರಭಾವಕ್ಕೊಳಗಾಗಿದ್ದ ನಾರ್ತ್‌ಮೆನ್ನರ ದಂಡಯಾತ್ರೆಗಳಿಗೆ ಒಳಗಾಯಿತು. ನಾರ್ವೆಯ ರಾಜನಾದ ಹೆರಾಲ್ಡ್ ಹರ್‌ಡ್ರಾಡನನ್ನು ಇಂಗ್ಲೆಂಡಿನದೊರೆ ಹೆರಾಲ್ಡ್ ಸ್ಟಾಮ್‌ಫರ್ಡ್‌ಬ್ರಿಡ್ಜ್ ಕದನದಲ್ಲಿ ಸೋಲಿಸಿದನು. ಆದರೆ ಹೇಸ್ಟಿಂಗ್ಸ್ ಕದನದಲ್ಲಿ ನಾರ್ಮಂಡಿಯ ಡ್ಯೂಕನಿಂದ ಸೋತುಹೋದನು. ಇಂಗ್ಲೆಂಡ್ ನಾರ್ಮನ್ನರ ವಶವಾಗಿ ಸ್ಕ್ಯಾಂಡಿನೇವಿಯನ್, ರಷ್ಯನ್ ಮತ್ತು ಟ್ಯುಟಾನಿಕ್ ರಾಜಕೀಯದಿಂದ ಬೇರೆಯಾಯಿತು; ಫ್ರೆಂಚ್‌ರೊಡನೆ ನಿಕಟ ಸಂಪರ್ಕ ಮತ್ತು ಘರ್ಷಣೆಗಳಿಗೊಳಗಾಯಿತು. ಮುಂದಿನ ನಾಲ್ಕು ಶತಮಾನಗಳು ಫ್ರೆಂಚ್ ಊಳಿಗ ಮಾನ್ಯದೊರೆಗಳ ಬಡಿದಾಟಗಳಲ್ಲಿ ಇಂಗ್ಲಿಷರು ಸಿಕ್ಕಿಹಾಕಿಕೊಂಡು ಫ್ರಾನ್ಸಿನ ರಣಕ್ಷೇತ್ರಗಳಲ್ಲಿ ಮಡಿದರು.

46. ಕ್ರೂಸೇಡುಗಳು ಮತ್ತು ಪೋಪನ ಪ್ರಾಬಲ್ಯದ ಯುಗ

ಕಲೀಫನಾಗಿದ್ದ ಹರೂನ್-ಅಲ್-ರಷೀದ್ ನೊಡನೆ—ಅಂದರೆ ಅರೇಬಿಯನ್ ನೈಟ್ಸ್ ಖ್ಯಾತಿಯ ಹರೂನ್-ಅಲ್-ರಷೀದ್—ಷಾರ್ಲಮೇನನು ಪತ್ರವ್ಯವಹಾರ ನಡೆಸುತ್ತಿದ್ದನೆಂಬುದು ಕುತೂಹಲಕಾರಿ ಸಂಗತಿ. ಈಗ ದಮಾಸ್ಕಸ್ಸಿನ ಬದಲು ಬಾಗದಾದ್ ನಗರ ಮುಸ್ಲಿಮರ ರಾಜಧಾನಿಯಾಗಿತ್ತು. ಬಾಗ್‌ದಾದಿನಿಂದ ಷಾರ್ಲಮೇನನಿಗೆ ಹರೂನ್-ಅಲ್-ರಷೀದ್ ಸೊಗಸಾದ ಒಂದು ಬಿಡಾರ, ಒಂದು ನೀರ್ಗಡಿಯಾರ, ಒಂದು ಆನೆ ಮತ್ತು ಕ್ರಿಸ್ತನ ಸಮಾಧಿ ಗುಹೆಯ ಬೀಗದ ಕೈಗಳನ್ನು ಉಡುಗೊರೆಯಾಗಿ ರಾಯಭಾರಿಗಳೊಡನೆ ಕಳುಹಿಸಿದ್ದನೆಂದು ದಾಖಲೆ

ಯಾಗಿದೆ. ಜೆರೂಸಲೆಮ್ಮಿನ ಕ್ರಿಶ್ಚಿಯನ್ನರ ಸರಿಯಾದ ರಕ್ಷಕರು ಯಾರು ಎಂದು ಬೈಜಾಂಟೈನ್ ಸಾಮ್ರಾಜ್ಯ ಮತ್ತು ಹೊಸದಾದ ಈ ಪವಿತ್ರ ರೋಮನ್ ಸಾಮ್ರಾಜ್ಯಗಳ ಮಧ್ಯೆ ಜಗಳ ಹುಟ್ಟಿಸಲು ತುಂಬಾ ಬುದ್ಧಿವಂತಿಕೆಯಿಂದ ನಿಯೋಜಿಸಿದುದಾಗಿತ್ತು ಈ ಕೊನೆಯ ಉಡುಗೊರೆ.

ಮತ್ತೊಂದು ಅಂಶವನ್ನು ಈ ಉಡುಗೊರೆಗಳು ನೆನಪಿಗೆ ತರುತ್ತವೆ. ಕ್ರಿ.ಶ. ಒಂಬತ್ತನೆಯ ಶತಮಾನದಲ್ಲಿ ಯೂರೋಪ್ ಇನ್ನೂ ಯುದ್ಧ, ಸುಲಿಗೆ, ಲೂಟಿಗಳ ಗೊಂದಲದಲ್ಲಿ ತೊಳಲುತ್ತಿದ್ದಾಗ ಈಜಿಪ್ಟ್ ಮೆಸಪೊಟೇಮಿಯಗಳಲ್ಲಿ ಯೂರೋಪಿನಲ್ಲೆಲ್ಲೂ ಇರದಿದ್ದಷ್ಟು ನಾಗರಿಕತೆಯುಳ್ಳ ದೊಡ್ಡದಾದ ಅರಬ್ ಸಾಮ್ರಾಜ್ಯವೊಂದು ಉಚ್ಛ್ರಾಯ ಸ್ಥಿತಿಯಲ್ಲಿತ್ತು. ಅಲ್ಲಿ ಸಾಹಿತ್ಯ ವಿಜ್ಞಾನಗಳು ಜೀವಂತವಾಗಿದ್ದವು. ಕಲೆಗಳು ಪ್ರವರ್ಧಮಾನಕ್ಕೆ ಬರುತ್ತಿದ್ದವು. ಮಾನವನ ಮನಸ್ಸು ಮೂಢನಂಬಿಕೆ ಮತ್ತು ಭಯಗಳ ಹಿಡಿತವಿಲ್ಲದೆ ಮುನ್ನಡೆಯಬಹುದಾಗಿತ್ತು. ಸಾರಸೆನ್ನರ ಪ್ರಭುತ್ವಗಳು ರಾಜಕೀಯವಾಗಿ ಅಸ್ತವ್ಯಸ್ತವಾಗುತ್ತಿದ್ದ ಸ್ಪೇನ್ ಮತ್ತು ಉತ್ತರ ಆಫ್ರಿಕಗಳಲ್ಲೂ ಕೂಡ ಬೌದ್ಧಿಕ ಜೀವನ ಚೈತನ್ಯಯುತವಾಗಿತ್ತು. ಯೂರೋಪ್ ಅಂಧಕಾರದಲ್ಲಿದ್ದ ಈ ಶತಮಾನಗಳಲ್ಲಿ ಈ ಅರಬರು ಮತ್ತು ಯಹೂದ್ಯರು ಅರಿಸ್ಟಾಟಲನ ಬರಹಗಳನ್ನು ಓದಿ ಚರ್ಚಿಸುತ್ತಿದ್ದರು. ಅಲಕ್ಷ್ಯಕ್ಕೊಳಗಾಗಿದ್ದ ವಿಜ್ಞಾನ ಮತ್ತು ತತ್ವಶಾಸ್ತ್ರಗಳ ಬೀಜಗಳನ್ನು ಇವರು ಸಂರಕ್ಷಿಸಿದರು.

ಕಲೀಫನ ರಾಜ್ಯಗಳ ಈಶಾನ್ಯಕ್ಕೆ ಹಲವು ತುರ್ಕಿ ಕುಲಗಳವರು ವಾಸಿಸುತ್ತಿದ್ದರು. ಇವರನ್ನು ಇಸ್ಲಾಂ ಧರ್ಮಕ್ಕೆ ಮತಾಂತರಿಸಲಾಗಿತ್ತು. ದಕ್ಷಿಣದಲ್ಲಿದ್ದ ಬೌದ್ಧಿಕ ಚಟುವಟಿಕೆಯಿಂದ ಕೂಡಿದ್ದ ಅರಬರು ಪರ್ಶಿಯನರಂತಲ್ಲದೆ ಇವರು ತಮ್ಮ ಧರ್ಮವನ್ನು ಸರಳವಾಗಿ ಆದರೆ ತೀವ್ರವಾಗಿ ಆಚರಿಸುತ್ತಿದ್ದರು. 10ನೇ ಶತಮಾನದಲ್ಲಿ ತುರ್ಕಿ ಕುಲದವರ ಶಕ್ತಿ ಮತ್ತು ಕಸುವು ಹೆಚ್ಚುತ್ತಿತ್ತು. ಅದೇ ಅರಬ್ ಪ್ರಭುತ್ವದಲ್ಲಿ ಒಡಕು ಹುಟ್ಟಿ ಅದು ನಶಿಸಿ ಹೋಗುತ್ತಿತ್ತು. ಕಲೀಫರ ಸಾಮ್ರಾಜ್ಯ ಮತ್ತು ಈ ತುರುಕರ ನಡುವಿನ ಸಂಬಂಧ ಇದಕ್ಕೆ 14 ಶತಮಾನಗಳ ಹಿಂದೆ ಕೊನೆಯ ಬೇಬಿಲಾನ್ ಚಕ್ರಾಧಿಪತ್ಯಕ್ಕೂ ಮೀಡರಿಗೂ ಇದ್ದ ಸಂಬಂಧದಂತೆ ಆಯಿತು. ಹನ್ನೊಂದನೆಯ ಶತಮಾನದಲ್ಲಿ ತುರುಕ ಕುಲಗಳಲ್ಲಿ ಒಂದು ಗುಂಪಿನವರಾದ ಸೆಲ್ಜುಕ್ ತುರುಕರು ಮೆಸಪೊಟೇಮಿಯದ ಒಳಗೆ ನುಗ್ಗಿ ಕಲೀಫನನ್ನು ತಮ್ಮ ಅಧಿಪತಿಯೆಂದು ಒಪ್ಪಿಕೊಂಡರು. ಆದರೆ ಅವನು ನಿಜಕ್ಕೂ ಅವರ ಬಂದಿ ಮತ್ತು ಕೈಗೊಂಬೆಯಾದನು. ಈ ತುರುಕರು ಆರ್ಮೀನಿಯವನ್ನು ಗೆದ್ದುಕೊಂಡರು. ಬಳಿಕ ಏಷ್ಯಾ ಮೈನರಿನಲ್ಲಿ ಬೈಜಾಂಟೈನ್ ಪ್ರಭುತ್ವದ ಅವಶೇಷಗಳ ಮೇಲೆ ಬಿದ್ದರು. ಕ್ರಿ.ಶ. 1071ರಲ್ಲಿ ಮೆಲಾಸ್‌ಗಿರ್ಡ್ ಕದನದಲ್ಲಿ ಬೈಜಾಂಟೈನ್ ಸೈನ್ಯ ಪೂರ್ತಿ ನುಚ್ಚುನೂರಾಯಿತು. ತುರುಕರು ಮುನ್ನುಗ್ಗಿದರು. ಏಷ್ಯದಲ್ಲಿ ಬೈಜಾಂ

ಟೈನ್ ಆಳ್ವಿಕೆಯ ಒಂದು ಕುರುಹೂ ಉಳಿಯಲಿಲ್ಲ. ಕಾನ್‌ಸ್ಟಂಟಿನೋಪಲ್ಲಿನ ಒತ್ತಿಗಿದ್ದ ನಿಸಿಯದುರ್ಗವನ್ನು ವಶಪಡಿಸಿಕೊಂಡು ಆ ಪಟ್ಟಣವನ್ನು ಕೈಗೆ ತೆಗೆದುಕೊಳ್ಳಲು ತುರುಕರು ಸಿದ್ಧತೆ ನಡೆಸಿದರು.

ಬೈಜಾಂಟಿಯುಮ್ಮಿನ ಚಕ್ರವರ್ತಿ ಏಳನೆಯ ಮೈಕೇಲ್ ಭಯದಿಂದ ದಿಕ್ಕೆಟ್ಟನು. ಅಷ್ಟು ಹೊತ್ತಿಗಾಗಲೇ ದುರಾಜೊವನ್ನು ವಶಪಡಿಸಿಕೊಂಡಿದ್ದ ನಾರ್ಮನ್ ಆಕ್ರಮಣಕಾರರ ತಂಡ ಮತ್ತು ಡ್ಯಾನ್ಯೂಬ್ ನದಿಯ ಮೇಲಿನಿಂದ ದಾಳಿಮಾಡುತ್ತಿದ್ದ 'ಪೆಟನೆಗ್' ರೆಂಬ ಕ್ರೂರರಾದ ತುರುಕ ಜನರೊಡನೆ ಇವನು ಯುದ್ಧದಲ್ಲಿ ತೊಡಗಿದ್ದನು. ಈ ವಿಷಮಾವಸ್ಥೆಯಲ್ಲಿ ಇವನು ಎಲ್ಲಂದರೆ ಅಲ್ಲಿ ಸಹಾಯವನ್ನು ಯಾಚಿಸಿದನು. ಹೀಗೆ ಸಹಾಯ ಕೇಳುವಾಗ ಲ್ಯಾಟಿನ್ ಕ್ರೈಸ್ತ ಸಂಘದ ಮುಖ್ಯಸ್ಥ ರೋಮಿನ ಪೋಪ್ ಎಂದು ಅವನಲ್ಲಿ ಸಹಾಯ ಕೇಳಿದನೇ ಹೊರತು ಪಶ್ಚಿಮ ರೋಮನ್ ಚಕ್ರವರ್ತಿಯಲ್ಲಿ ಕೇಳಲಿಲ್ಲ ಎಂಬುದು ಗಮನಾರ್ಹ. ಇವನು ಪೋಪ್ ಏಳನೆಯ ಗ್ರೆಗರಿಗೆ ಪತ್ರ ಬರೆದನು. ಇವನ ಉತ್ತರಾಧಿಕಾರಿಯಾದ ಅಲೆಕ್ಸಿಯಸ್ ಕೊಮೆನ್ನಸ್ ಇನ್ನೂ ತುರ್ತಿನಿಂದ ಎರಡನೆ ಅರ್ಬನ್‌ನಿಗೆ ಬರೆದನು.

ಲ್ಯಾಟಿನ್ ಮತ್ತು ಗ್ರೀಕ್ ಕ್ರೈಸ್ತ ಸಂಘಗಳ ಮಧ್ಯದ ಸಂಬಂಧ ಮುರಿದು ಹೋಗಿ ಇನ್ನೂ ಕಾಲು ಶತಮಾನವೂ ಕಳೆದಿರಲಿಲ್ಲ. ಆ ವಿವಾದ ಇನ್ನೂ ಎಲ್ಲರ ಮನಸ್ಸಿನಲ್ಲೂ ಜೀವಂತವಾಗಿಯೇ ಇತ್ತು. ಬೈಜಾಂಟಿಯುಮ್ಮಿಗೆ ಬಂದ ಈ ವಿಪತ್ತು ತಮ್ಮನ್ನು ವಿರೋಧಿಸುತ್ತಿದ್ದ ಗ್ರೀಕರ ಮೇಲೆ ಪುನಃ ಲ್ಯಾಟಿನ್ ಕ್ರೈಸ್ತ ಸಂಘದ ಆಧಿಪತ್ಯವನ್ನು ವಿಧಿಸಲು ಒದಗಿದ ಉನ್ನತ ಸದವಕಾಶ ಎಂದು ಪೋಪರಿಗೆನ್ನಿಸಿರಬೇಕು. ಅಷ್ಟೇ ಅಲ್ಲದೆ ಕ್ರೈಸ್ತ ಪ್ರಪಂಚವನ್ನು ಬಹುವಾಗಿ ಬಾಧಿಸುತ್ತಿದ್ದ ಮತ್ತೆರಡು ಸಮಸ್ಯೆಗಳನ್ನು ಪರಿಹರಿಸಲು ಈ ಸಂಗತಿ ಅವಕಾಶಮಾಡಿಕೊಟ್ಟಿತು. ಈ ಸಮಸ್ಯೆಗಳಲ್ಲಿ ಮೊದಲನೆಯದು ಸಮಾಜ ಜೀವನವನ್ನು ಹದಗೆಡಿಸುತ್ತಿದ್ದ ಖಾಸಗಿ ಕದನಗಳು, ಎರಡನೆಯದು ಲೋಜರ್ಮನ್ನರು ಮತ್ತು ಕ್ರೈಸ್ತರಾಗಿದ್ದ ಔತ್ತರೇಯ ಜನರಲ್ಲಿ ಅದರಲ್ಲೂ ಫ್ರಾಂಕರು, ನಾರ್ಮನರಲ್ಲಿ ಅಸಾಧ್ಯವಾಗಿ ತುಂಬಿತುಳುಕುತ್ತಿದ್ದ ರಣೋತ್ಸಾಹ ಮತ್ತು ಶಕ್ತಿ. ಜೆರೂಸಲೆಮ್ಮನ್ನು ವಶಪಡಿಸಿಕೊಂಡಿದ್ದ ತುರುಕರ ಮೇಲೆ ಒಂದು ಧರ್ಮಯುದ್ಧ ಕ್ರೂಸೇಡ್–ಶಿಲುಬೆಯ ಯುದ್ಧವನ್ನು ಬೋಧಿಸಲಾಯಿತು. ಮತ್ತು ಕ್ರೈಸ್ತರಲ್ಲಿಯೇ ಪರಸ್ಪರ ನಡೆಯುತ್ತಿದ್ದ ಎಲ್ಲ ಒಳಯುದ್ಧಗಳಿಗೂ ವಿರಾಮವನ್ನು ಘೋಷಿಸಲಾಯಿತು (ಕ್ರಿ.ಶ. 1095). ಈ ಯುದ್ಧದ ಘೋಷಿತ ಉದ್ದೇಶ ಕ್ರಿಸ್ತನ ಸಮಾಧಿಯನ್ನು ಕ್ರೈಸ್ತೇತರರಿಂದ ತಿರುಗಿ ಪಡೆದುಕೊಳ್ಳುವುದು. ಸಂನ್ಯಾಸಿ ಪೀಟರ್ ಎಂದು ಹೆಸರಾಗಿದ್ದ ಒಬ್ಬ ಮನುಷ್ಯ ಫ್ರಾನ್ಸ್ ಮತ್ತು ಜರ್ಮನಿಗಳಾದ್ಯಂತ ಜನಪ್ರಿಯ ರೀತಿಯಲ್ಲಿ ವಿಶಾಲ ಜನತೆಯೆಲ್ಲ ಭಾಗವಹಿಸುವಂತೆ ಪ್ರಚಾರನಡೆಸಿದನು. ಇವನು ಒರಟಾದ ಪೋಷಾಕನ್ನು ಧರಿಸಿ ಬರಿಗಾಲಿನಲ್ಲಿ ಕತ್ತೆಯ ಮೇಲೆ ಏರಿಕೊಂಡು ದೊಡ್ಡದಾದ ಒಂದು ಶಿಲುಬೆಯನ್ನು ಹೊತ್ತುಕೊಂಡು

ಜನರ ಗುಂಪುಗಳಿಗೆ ರಸ್ತೆಗಳಲ್ಲಿ ಚರ್ಚುಗಳಲ್ಲಿ ಮತ್ತು ವ್ಯಾಪಾರ ಸ್ಥಳಗಳಲ್ಲಿ ಆವೇಶ ಪೂರಿತನಾಗಿ ಭಾಷಣಮಾಡುತ್ತಿದ್ದನು. ಕ್ರೈಸ್ತ ಯಾತ್ರಿಕರಿಗೆ ತುರುಕರು ಕೊಡುತ್ತಿದ್ದ ಹಿಂಸೆಗಳನ್ನು ಖಂಡಿಸಿ ಕ್ರಿಸ್ತನ ಪವಿತ್ರ ಸಮಾಧಿ ಕ್ರೈಸ್ತರಲ್ಲದೆ ಬೇರೆಯವರ ವಶದಲ್ಲಿರುವುದು ನಾಚಿಕೆಗೇಡೆಂದು ದೂಷಿಸುತ್ತಿದ್ದನು. ಶತಮಾನಗಳಿಂದ ನಡೆಯುತ್ತಿದ್ದ ಕ್ರೈಸ್ತಮತ ಬೋಧನೆಯ ಫಲ ಈ ಪ್ರಚಾರಕಾರ್ಯದ ಪ್ರತಿಕ್ರಿಯೆಯಲ್ಲಿ ಕಾಣಿಸಿಕೊಂಡಿತು. ಪಾಶ್ಚಿಮಾತ್ಯ ಪ್ರಪಂಚದ ಉದ್ದಕ್ಕೂ ಉತ್ಸಾಹದ ದೊಡ್ಡ ಅಲೆಯೆದ್ದು ಕ್ರೈಸ್ತಧರ್ಮ ಸಾಮಾನ್ಯ ಜನತೆಯ ಮಟ್ಟವನ್ನು ತಲುಪಿತು.

ಹೀಗೆ ಒಂದೇ ಒಂದು ಭಾವನೆಗೆ ಸಂಬಂಧಿಸಿದಂತೆ ಜನಸಾಮಾನ್ಯರು ವಿಶಾಲ ವ್ಯಾಪ್ತಿಯ ಪ್ರದೇಶಗಳಲ್ಲಿ ಮೇಲೆದ್ದುದು ನಮ್ಮ ಮಾನವಕುಲದ ಚರಿತ್ರೆಯಲ್ಲಿಯೇ ಹೊಸದು. ರೋಮನ್ ಸಾಮ್ರಾಜ್ಯದಲ್ಲಿ, ಇಂಡಿಯಾದಲ್ಲಿ, ಚೀನದಲ್ಲಿ, ಎಲ್ಲಿಯೂ ಇದಕ್ಕೆ ಸಮಾನವಾದುದು ಏನೂ ನಡೆಯಲಿಲ್ಲ. ಬೇಬಿಲೋನಿಯದ ಬಂಧನದಿಂದ ಬಿಡುಗಡೆಯಾದ ಮೇಲೆ ಯಹೂದ್ಯರಲ್ಲಿ ಈ ರೀತಿಯ ಚಳುವಳಿಗಳು ನಡೆದಿದ್ದುವು. ಅನಂತರ ಈ ರೀತಿಯ ಸಾಮೂಹಿಕ ಭಾವನೆಗಳಿಗೆ ಎಡೆಕೊಡುವ ಪ್ರವೃತ್ತಿಯನ್ನು ಇಸ್ಲಾಂನಲ್ಲಿ ಕಾಣಬಹುದಾಗಿತ್ತು. ಮತಪ್ರಚಾರವೂ ಒಂದು ಅಂಗವಾಗಿದ್ದ ಧರ್ಮಗಳು ಬೆಳೆಯುತ್ತಿದ್ದಾಗ ಮಾನವ ಜೀವನದಲ್ಲಿ ಬಂದು ಸೇರಿಕೊಂಡಿದ್ದ ಒಂದು ಹೊಸ ಮನೋಭಾವಕ್ಕೂ ಈ ರೀತಿಯ ಚಳುವಳಿಗಳಿಗೂ ಖಂಡಿತ ಸಂಬಂಧವಿದೆ. ಹೀಬ್ರೂ ಪ್ರವಾದಿಗಳು, ಯೇಸು ಮತ್ತು ಆತನ ಶಿಷ್ಯರು, ಮಾಸಿ, ಮುಹಮ್ಮದ್ ಇವರೆಲ್ಲರೂ ಮನುಷ್ಯರ ವೈಯಕ್ತಿಕ ಆತ್ಮಗಳನ್ನು ಪ್ರಚೋದಿಸುತ್ತಿದ್ದರು. ಅವರೆಲ್ಲರೂ ಮನುಷ್ಯನ ವೈಯಕ್ತಿಕ ಆತ್ಮಸಾಕ್ಷಿಯನ್ನು ದೇವರೊಡನೆ ಮುಖಾಮುಖಿಯಾಗಿರುವಂತೆ ಮಾಡಿದರು. ಅದಕ್ಕೆ ಮುಂಚಿನ ಧರ್ಮಗಳಲ್ಲಿರುತ್ತಿದ್ದ ಅಂಶಗಳೆಂದರೆ ಅಂಧಶ್ರದ್ಧೆಯಿಂದ ಪೂಜಿಸುತ್ತಿದ್ದ ತತ್ತ್ವ ಮತ್ತು ವಸ್ತುಗಳು, ಮತ್ತು ವಿಜ್ಞಾನದ ಒಂದು ಮಿಥ್ಯಾರೂಪ. ಆ ಧರ್ಮಗಳು ಮಾನವನ ಆತ್ಮಸಾಕ್ಷಿಗೆ ಸಂಬಂಧಿಸಿದುವಾಗಿರಲಿಲ್ಲ. ಈ ಪ್ರಾಚೀನ ಧರ್ಮಗಳು, ದೇವಾಲಯಗಳು, ದೀಕ್ಷೆ ಪಡೆದ ಪೂಜಾರಿಗಳು ಮತ್ತು ನಿಗೂಢವಾದ ಯಜ್ಞಗಳ ಮೇಲೆ ನಿಂತಿದ್ದು ಸಾಮಾನ್ಯ ಮನುಷ್ಯನು ಭಯದಿಂದ ತಮ್ಮ ಗುಲಾಮನಾಗಿರುವಂತೆ ಮಾಡುತ್ತಿದ್ದುವು. ಈ ಹೊಸ ಧರ್ಮಗಳು ಅವನು ಒಬ್ಬ ಮನುಷ್ಯನಾಗುವಂತೆ ಮಾಡಿದುವು.

ಈ ಮೊದಲನೆಯ ಕ್ರೂಸೇಡಿನ ಪ್ರಚಾರ ಯುರೋಪಿನ ಚರಿತ್ರೆಯಲ್ಲಿ ಸಾಮಾನ್ಯ ಜನತೆಯನ್ನು ಮೊದಲಬಾರಿಗೆ ಕಲಕಿತು. ಆಧುನಿಕ ಪ್ರಜಾಪ್ರಭುತ್ವದ ಹುಟ್ಟು ಎಂದು ಇದನ್ನು ಹೆಸರಿಸಲು ಆಗುವುದಿಲ್ಲವಾದರೂ ಖಂಡಿತವಾಗಿಯೂ ಆ ಸಮಯದಲ್ಲಿ ಆಧುನಿಕ ಪ್ರಜಾಪ್ರಭುತ್ವತತ್ತ್ವ ಕಾಣಿಸಿಕೊಂಡಿತು. ತಿರುಗಿ ಶೀಘ್ರದಲ್ಲಿಯೇ ಈ ಮನೋಭಾವ ತಿರುಗಿ ತಲೆಯೆತ್ತಿ ಮನಸ್ಸನ್ನು ತೀವ್ರವಾಗಿ ಕಲಕುವ ಸಾಮಾಜಿಕ ಮತ್ತು ಧಾರ್ಮಿಕ ಪ್ರಶ್ನೆಗಳನ್ನು ಮೇಲಕ್ಕೆ ಎಬ್ಬಿಸಿತು.

ಪ್ರಜಾಪ್ರಭುತ್ವದ ಈ ಮೊದಲ ಮೊಳೆತ ಅತ್ಯಂತ ದಾರುಣವಾಗಿ ಮನ ಕರಗಿಸುವ ರೀತಿಯಲ್ಲಿ ಕೊನೆಯಾಯಿತೆಂದು ಒಪ್ಪಿಕೊಳ್ಳಬೇಕು. ಗಮನಾರ್ಹ ಸಂಖ್ಯೆಗಳಲ್ಲಿ ಜನಸಾಮಾನ್ಯರು — ಇವರನ್ನು ಸೈನ್ಯಗಳೆನ್ನುವುದಕ್ಕಿಂತ ಜನರ ತಂಡಗಳು ಎನ್ನಬೇಕು—ಫ್ರಾನ್ಸ್ ರ್ಹೈನ್‌ಲ್ಯಾಂಡ್ ಮತ್ತು ಮಧ್ಯಯೂರೋಪುಗಳಿಂದ ಸರಿಯಾದ ಉಪಕರಣಗಳು ಮತ್ತು ಮುಖಂಡರುಗಳಿಗಾಗಿ ದಾರಿಕಾಯದೆ ಪವಿತ್ರ ಸಮಾಧಿಯನ್ನು ಬಿಡಿಸಿಕೊಳ್ಳಲು ಹೊರಟರು. ಇದೇ ಜನತಾಕ್ರೂಸೇಡು. ಎರಡು ದೊಡ್ಡ ಇಂತಹ ಗುಂಪುಗಳು ಎಲ್ಲಿ ಹೋಗಬೇಕೆಂಬ ಅರಿವಿಲ್ಲದೆ ಹಾಗೂ ಹೀಗೂ ಹಂಗೆರಿಗೆ ನುಗ್ಗಿ ಅದೇ ತಾನೇ ಕ್ರೈಸ್ತರಾಗಿ ಧರ್ಮಾಂತರಿತರಾಗಿದ್ದ ಮ್ಯಾಗ್ಯಾರರನ್ನು ಕ್ರೈಸ್ತೇತರರೆಂದು ತಪ್ಪು ತಿಳಿದು ಹಿಂಸಾಕೃತ್ಯಗಳನ್ನು ನಡೆಸಿ ತಾವೂ ಸಾಮೂಹಿಕ ಹತ್ಯೆಗೊಳಗಾದರು. ಇಂತಹುದೇ ಭ್ರಾಂತಮನಸ್ಸಿನ ಮೂರನೆ ಗುಂಪು ರೈನ್‌ಲ್ಯಾಂಡಿನಲ್ಲಿ ಯಹೂದ್ಯರನ್ನು ಭಾರೀ ಪ್ರಮಾಣದಲ್ಲಿ ಕೊಂದು ಹಾಕಿ ಪೂರ್ವಕ್ಕೆ ಹೋಯಿತು. ಇವರೂ ಕೂಡ ಹಂಗೆರಿಯಲ್ಲಿ ಹತರಾದರು. ಇನ್ನೂ ಎರಡು ಭಾರೀ ಗುಂಪುಗಳು ಖುದ್ದಾಗಿ ಸಂನ್ಯಾಸಿ ಪೀಟರನ ಮುಂದಾಳುತನದಲ್ಲಿ ಕಾನ್‌ಸ್ಟಂಟಿನೋಪಲ್ಲನ್ನು ಸೇರಿ ಬಾಸ್ಫರಸ್ಸನ್ನು ದಾಟಿದರು. ಸೆಲ್‌ಝುಕ್ ತುರುಕರಿಂದ ಇವರು ಅನುಭವಿಸಿದ ಸೋಲನ್ನು ಸೋಲು ಎನ್ನುವಂತಿಲ್ಲ, ಕಗ್ಗೊಲೆ ಎನ್ನಬೇಕು. ಯೂರೋಪಿನ ಜನತೆಯು ಮೊಟ್ಟಮೊದಲ ಚಳುವಳಿ ಅಲ್ಲಿನ ಜನತೆ ಮಾನವರಂತೆ ನಡೆಸಿದ ಚಳುವಳಿ–ಹೀಗೆ ಮೊದಲಾಗಿ ಕೊನೆಯಾಯಿತು.

ಇದರ ಮುಂದಿನ ವರ್ಷ (1097) ನಿಜವಾಗಿಯೂ ಯುದ್ಧ ಮಾಡಬಲ್ಲ ದಳಗಳು ಬಾಸ್ಫರಸ್ಸನ್ನು ದಾಟಿದುವು. ಇದರ ಮುಖಂಡತ್ವ ಮತ್ತು ಚೇತನ ಮುಖ್ಯವಾಗಿ ನಾರ್ಮನ್ನರದಾಗಿತ್ತು. ಇವರು ನಿಸಿಯದ ಮೇಲೆ ದಾಳಿಮಾಡಿ ಇದಕ್ಕೆ ಹದಿನಾಲ್ಕು ಶತಮಾನಗಳ ಮೊದಲು ಅಲೆಕ್ಸಾಂಡರ್ ಹೋಗಿದ್ದ ಮಾರ್ಗವನ್ನೇ ಹೆಚ್ಚು ಕಡಿಮೆ ಅನುಸರಿಸಿ ಮುನ್ನಡೆದು ಆ್ಯಂಟಿಯೋಕನ್ನು ಮುಟ್ಟಿದರು. ಆ್ಯಂಟಿಯೋಕಿನ ಮುತ್ತಿಗೆಯಲ್ಲಿ ಒಂದು ವರ್ಷ ಕಳೆಯಿತು. ಜೂನ್ 1099ರಲ್ಲಿ ಇವರು ಜೆರೂಸಲೆಮ್ಮನ್ನು ಮುತ್ತಿದರು. ಒಂದು ತಿಂಗಳಿನ ನಂತರ ಕೋಟೆಯೊಳಗೆ ನುಗ್ಗಲು ಸಾಧ್ಯವಾಯಿತು. ಭಯಂಕರ ಹತ್ಯಾಕಾಂಡ ನಡೆಯಿತು. ಕುದುರೆ ಸವಾರರ ಮೇಲೆ ಬೀದಿಗಳಲ್ಲಿ ನಿಂತಿದ್ದ ರಕ್ತ ಸಿಡಿಯುತ್ತಿತ್ತು. ಜುಲೈ ಹದಿನೈದನೇ ತಾರೀಖು ರಾತ್ರಿ ಯಾಗುವ ಹೊತ್ತಿಗೆ ಕ್ರೂಸೇಡರುಗಳು ಪವಿತ್ರ ಸಮಾಧಿಯ ಚರ್ಚಿನೊಳಗೆ ಹೊಡೆದಾಡಿಕೊಂಡು ಪ್ರವೇಶಿಸಿ ಅಲ್ಲಿ ವಿರೋಧಿಗಳನ್ನು ಪೂರ್ತಿ ನೆಲಸಮ ಮಾಡಿದರು. ರಕ್ತದ ಕಲೆಗಳಿಂದಕೂಡಿ ಆಯಾಸಗೊಂಡಿದ್ದ ಇವರು ಆನಂದಾತಿಶಯದಿಂದ ಬಿಕ್ಕಳಿಸುತ್ತಾ ಅಲ್ಲಿ ಮೊಣಕಾಲೂರಿ ಪ್ರಾರ್ಥನೆ ಮಾಡಿದರು.

ಅದೇ ಕ್ಷಣದಲ್ಲಿಯೇ ಲ್ಯಾಟಿನ್ ಮತ್ತು ಗ್ರೀಕರ ವೈರ ತಿರುಗಿ ಕಾಣಿಸಿ ಕೊಂಡಿತು. ಕ್ರೂಸೇಡರುಗಳು ಲ್ಯಾಟಿನ್ ಕ್ರೈಸ್ತ ಸಂಘದ ಅನುಯಾಯಿ

ಗಳಾಗಿದ್ದರು. ಜೆರೂಸಲೆಮ್ಮಿನ ಗ್ರೀಕ್ ಪ್ಯಾಟ್ರಿಯಾರ್ಕನ ಪರಿಸ್ಥಿತಿ ಈ ವಿಜಯ ಲ್ಯಾಟಿನ್ನರ ಕೈಕೆಳಗೆ ತುರುಕರ ಕೈಕೆಳಗೆ ಇದ್ದುದಕ್ಕಿಂತಲೂ ಕಷ್ಟಕರವಾಯಿತು. ಬೈಜಾಂಟೈನರು ಮತ್ತು ತುರುಕರ ಮಧ್ಯೆ ಸಿಕ್ಕಿಬಿದ್ದ ಕ್ರೂಸೇಡರುಗಳು ಅವರಿಬ್ಬರೊಡನೆಯೂ ಹೋರಾಡಬೇಕಾಯಿತು. ಏಷ್ಯಾಮೈನರಿನ ಅಧಿಕ ಭಾಗವನ್ನು ಬೈಜಾಂಟೈನ್ ಚಕ್ರಾಧಿಪತ್ಯ ತಿರುಗಿ ವಶಪಡಿಸಿಕೊಂಡಿತು. ಲ್ಯಾಟಿನ್ ರಾಜರು ತುರುಕರು ಮತ್ತು ಗ್ರೀಕರ ನಡುವೆ ಅವರ ಹೋರಾಟಗಳಿಗೆ ತಡೆಹಾಕುವ 'ಬಫರ್' ಆದರು. ಜೆರೂಸಲೆಮ್ ಮತ್ತು ಕೆಲವು ಸಣ್ಣ ಪಾಳೆಯ ಪಟ್ಟುಗಳು ಇವರ ವಶದಲ್ಲಿದ್ದುವು. ಇವುಗಳಲ್ಲಿ ಸಿರಿಯದ ಎಡೆಸ್ಸಾ ಒಂದು ಪ್ರಮುಖ ಪಾಳೆಯ ಪಟ್ಟಾಗಿತ್ತು. ಇವುಗಳ ಮೇಲೂ ಇವರ ಹಿಡಿತ ಹಾಗೋ ಹೀಗೋ ಎನ್ನುವಂತಿತ್ತು. ಕ್ರಿ.ಶ. 1144ರಲ್ಲಿ ಎಡೆಸ್ಸಾ ಮುಸ್ಲಿಮರ ಕೈಗೆ ಹೋಯಿತು. ಇದರ ಫಲವಾಗಿ ಅಂತಹ ಪರಿಣಾಮವೇನನ್ನೂ ಮಾಡದ ಎರಡನೇ ಕ್ರೂಸೇಡ್ ನಡೆಯಿತು. ಇದರಿಂದ ಎಡೆಸ್ಸವನ್ನು ತಿರುಗಿ ವಶಪಡಿಸಿಕೊಳ್ಳಲಾಗದಿದ್ದರೂ ಆ್ಯಂಟಿಯೋಕ್ ಪಟ್ಟಣವೂ ಎಡೆಸ್ಸದ ಹಾದಿ ಹಿಡಿಯುವುದನ್ನು ತಪ್ಪಿಸಿದಂತಾಯಿತು.

ಕ್ರಿ.ಶ. 1169ರಲ್ಲಿ ಸಲಾದಿನ್ ಎಂಬ ಕುರ್ದ್ ಸಾಹಸಿಯ ಕೈಕೆಳಗೆ ಇಸ್ಲಾಮಿನ ಬಲಗಳು ಪುನಃ ಒಟ್ಟುಗೂಡಿದುವು. ಸಲಾದಿನ್ ಈಜಿಪ್ಟನ್ನು ವಶಪಡಿಸಿಕೊಂಡಿದ್ದನು. ಇವನೂ ಕ್ರೈಸ್ತರ ಮೇಲೆ ಪವಿತ್ರ ಯುದ್ಧವನ್ನು ಘೋಷಿಸಿ 1187ರಲ್ಲಿ ಜೆರೂಸಲೆಮ್ಮನ್ನು ಪುನಃ ಸ್ವಾಧೀನ ಪಡಿಸಿಕೊಂಡು ಮೂರನೆ ಕ್ರೂಸೇಡಿಗೆ ಕಾರಣನಾದನು. ಈ ಕ್ರೂಸೇಡಿನಿಂದ ಜೆರೂಸಲೆಂ ತಿರುಗಿ ಸಿಗಲಿಲ್ಲ. ನಾಲ್ಕನೇ ಕ್ರೂಸೇಡಿನಲ್ಲಿ (1202-1204) ಲ್ಯಾಟಿನ್ ಕ್ರೈಸ್ತ ಸಂಘ ರಾಜಾರೋಷವಾಗಿಯೇ ಗ್ರೀಕ್ ಸಾಮ್ರಾಜ್ಯದ ಎದುರು ತಿರುಗಿ ಬಿದ್ದಿತು. ತೋರಿಕೆಗೆ ಕೂಡ ಇವರು ತುರುಕರನ್ನು ಎದುರಿಸಲಿಲ್ಲ. ವೆನಿಸಿನಿಂದ ಹೊರಟ ಈ ಕ್ರೂಸೇಡು 1204ರಲ್ಲಿ ಕಾನ್‌ಸ್ಟಂಟಿನೋಪಲ್ಲಿನ ಮೇಲೆ ದಾಳಿಮಾಡಿತು. ಏಳ್ಗೆ ಪಡೆಯುತ್ತಿದ್ದ ದೊಡ್ಡ ವಾಣಿಜ್ಯಕೇಂದ್ರ ವೆನಿಸ್ ಈ ಸಾಹಸದ ಮುಂದಾಳುವಾಗಿತ್ತು. ಬೈಜಾಂಟೈನ್ ಸಾಮ್ರಾಜ್ಯದ ಸಮುದ್ರತೀರದ ನಗರಗಳು ಮತ್ತು ದ್ವೀಪಗಳಲ್ಲಿ ಅನೇಕವನ್ನು ವೆನಿಷಿಯನ್ನರು ವಶಪಡಿಸಿಕೊಂಡರು. ಕಾನ್‌ಸ್ಟಂಟಿನೋಪಲ್ಲಿನಲ್ಲಿ ಲ್ಯಾಟಿನ್ ಚಕ್ರವರ್ತಿಯೊಬ್ಬನನ್ನು (ಫ್ಲಾಂಡರ್ಸಿನ ಬಾಲ್ಡ್‌ವಿನ್) ಕುಳ್ಳಿರಿಸಲಾಯಿತು. ಲ್ಯಾಟಿನ್ ಮತ್ತು ಗ್ರೀಕ್ ಕ್ರೈಸ್ತ ಸಂಘಗಳು ತಿರುಗಿ ಒಂದಾದುವೆಂದೂ ಘೋಷಿಸಲಾಯಿತು. ಲ್ಯಾಟಿನ್ ಚಕ್ರವರ್ತಿಗಳು ಕಾನ್‌ಸ್ಟಂಟಿನೋಪಲ್ಲಿನಲ್ಲಿ 1204ರಿಂದ 1261ರವರೆಗೆ ಆಳಿದರು. 1261ರಲ್ಲಿ ಗ್ರೀಕ್ ಪ್ರಪಂಚ ಈ ರೋಮನ್ ಹಿಡಿತವನ್ನು ಕೊಡವಿಕೊಂಡು ಸ್ವತಂತ್ರವಾಯಿತು.

ಹನ್ನೊಂದನೇ ಶತಮಾನ ಸೆಲ್‌ಝುಕ್ ತುರುಕರ ಮತ್ತು 10ನೇ ಶತಮಾನವ ಔತ್ತರೇಯರ ಉಚ್ಛ್ರಾಯದ ಕಾಲವಾಗಿದ್ದಂತೆ 12ನೇ ಶತಮಾನ ಮತ್ತು 13ನೇ

ಶತಮಾನದ ಮೊದಲ ಭಾಗ ಪೋಪಿನ ಅಭ್ಯುದಯದ ಕಾಲವಾಗಿತ್ತು. ಪೋಪನ ಆಳ್ವಿಕೆಯಲ್ಲಿ ಕ್ರೈಸ್ತ ಸಮಾಜ ಅದಕ್ಕೆ ಮುಂಚೆ ಅಥವಾ ಆದಾದ ಬಳಿಕ ಇನ್ನಾವಾಗಲೂ ಇಲ್ಲದಷ್ಟು ಐಕಮತ್ಯ ಪಡೆದು ಏಕೀಕೃತ ಕ್ರೈಸ್ತ ಸಮಾಜ ಸಾಧಿಸಬಹುದಾದ ಸಂಗತಿಯೆಂಬಂತೆ ಎನ್ನಿಸಿತು.

ಆ ಶತಮಾನಗಳಲ್ಲಿ ಯೂರೋಪಿನ ವಿಶಾಲ ಪ್ರದೇಶಗಳ ಜನತೆಯಲ್ಲಿ ಸರಳವಾದ ಕ್ರಿಶ್ಚಿಯನ್ ಧರ್ಮ ಶ್ರದ್ಧೆ ನಿಜವಾಗಿಯೂ ನೆಲಸಿತ್ತು. ಅಷ್ಟುಹೊತ್ತಿಗಾಗಲೇ ರೋಮ್ ಕೆಲವು ಅಪಮಾನಕರ, ಅಂಧಕಾರಮಯ ಕಾಲಗಳನ್ನು ಕಂಡಿತ್ತು. 10ನೆಯ ಶತಮಾನದಲ್ಲಿದ್ದ ಹನ್ನೊಂದನೆಯ ಜಾನ್ ಮತ್ತು ಹನ್ನೆರಡನೆಯ ಜಾನರ ಜೀವನಗಳನ್ನು ಮನ್ನಿಸುವ ಲೇಖಕರು ಯಾರೂ ಕಾಣಬರುವುದಿಲ್ಲ. ಅವರಿಬ್ಬರೂ ಹೇಯವ್ಯಕ್ತಿಗಳಾಗಿದ್ದರು; ಆದರೆ ಲ್ಯಾಟಿನ್ ಕ್ರೈಸ್ತ ಸಂಘದ ಹೃದಯ ಮತ್ತು ಶರೀರಗಳು ಶ್ರದ್ಧಾಭರಿತವಾಗಿ ಸರಳವಾಗಿ ಉಳಿದುಕೊಂಡಿದ್ದವು. ಸಾಮಾನ್ಯ ಪಾದ್ರಿಗಳು ಮತ್ತು ಸಂನ್ಯಾಸಿ ಸಂನ್ಯಾಸಿನಿಯರಲ್ಲಿ ಹೆಚ್ಚಿನವರು ಆದರ್ಶವಾದ ಶ್ರದ್ಧಾಯುತ ಜೀವನ ನಡೆಸುತ್ತಿದ್ದರು. ಚರ್ಚಿನ ಶಕ್ತಿ ಇಂತಹ ವ್ಯಕ್ತಿಗಳ ಜೀವನಗಳು ಬೆಳೆಸಿದ ಜನವಿಶ್ವಾಸದ ಸಂಪತ್ತಿನಮೇಲೆ ನಿಂತಿತ್ತು. ಪೋಪ್ ಗ್ರೆಗರಿಮಹಾಶಯ (ಅಂದರೆ ಒಂದನೆ ಗ್ರೆಗರಿ ಕ್ರಿ.ಶ. 590–604), ಮೂರನೆ ಲಿಯೋ (ಕ್ರಿ.ಶ. 795–816) ಇವರು ಅದುವರೆಗೆ ಆಗಿಹೋದ ಶ್ರೇಷ್ಠ ಪೋಪ್‌ಗಳಲ್ಲಿಬ್ಬರು. ಸೀಸರ್ ಆಗು ಎಂದು ಷಾರ್ಲಮೇನನನ್ನು ಆಹ್ವಾನಿಸಿ ತಾನೇ ಅವನಿಚ್ಛೆಗೆ ವಿರೋಧವಾಗಿ ಕಿರೀಟವನ್ನಿಟ್ಟವನು ಮೂರನೇ ಲಿಯೋ. ಹನ್ನೊಂದನೇ ಶತಮಾನದ ಕೊನೆಗೆ ಹಿಲ್ಡೆಬ್ರಾಂಡ್ ಎಂಬ ಉತ್ಕೃಷ್ಟ ರಾಜ್ಯನೀತಿಜ್ಞನು ಕ್ರೈಸ್ತಪುರೋಹಿತ ವರ್ಗದಲ್ಲಿ ಮುಂದೆ ಬಂದು ತನ್ನ ಜೀವನದ ಕೊನೆಗೆ ಪೋಪ್ ಆದನು. ಇವನೇ ಏಳನೇ ಗ್ರೆಗರಿ (1073–1085). ಇವನ ಮುಂದೆ ಒಬ್ಬಪೋಪ್ ಆಗಿಹೋದಮೇಲೆ ಬಂದವನೇ ಮೊದಲನೇ ಕ್ರೂಸೇಡನ್ನು ಹೊರಡಿಸಿದ ಎರಡನೇ ಅರ್ಬನ್ (1087–1099). ಇಲ್ಲಿಂದ ಪೋಪನ ಉನ್ನತಿಯ ದಿನಗಳು ಮೊದಲಾದುವು. ಈ ಇಬ್ಬರು ಪೋಪ್‌ಗಳೇ ಈ ಯುಗದ ಸ್ಥಾಪಕರು. ಈ ಯುಗದಲ್ಲಿ ಪೋಪ್‌ಗಳು ಚಕ್ರವರ್ತಿಗಳ ಮೇಲೆಯೇ ದರ್ಬಾರು ಮಾಡುತ್ತಿದ್ದರು. ಬಲ್ಗೇರಿಯದಿಂದ ಐರ್‌ಲೆಂಡ್, ನಾರ್ವೆಯಿಂದ ಸಿಸಿಲಿ ಮತ್ತು ಜೆರೂಸಲಂವರೆಗೆ ಪೋಪ್ ಪರಮೋಚ್ಚವ್ಯಕ್ತಿಯಾಗಿದ್ದನು. ಏಳನೇ ಗ್ರೆಗರಿಯು ನಾಲ್ಕನೇ ಹೆನ್ರಿ ಚಕ್ರವರ್ತಿ ಪ್ರಾಯಶ್ಚಿತ್ತಕ್ಕಾಗಿ ತನ್ನ ಬಳಿಗೆ ಕಾನೊಸಾ(Canossa)ಗೆ ಬಂದು ತಾನಿದ್ದ ದುರ್ಗದ ಅಂಗಳದಲ್ಲಿ ಹಿಮದಲ್ಲಿ ಬರಿಕಾಲಿನಮೇಲೆ ಒರಟುಬಟ್ಟೆ ಧರಿಸಿ ಮೂರುದಿನ ಮತ್ತು ಮೂರು ರಾತ್ರಿಗಳು ಕ್ಷಮಾದಾನಕ್ಕಾಗಿ ಕಾಯುವಂತೆ ಮಾಡಿದನು. 1176ರಲ್ಲಿ ವೆನಿಸಿನಲ್ಲಿ ಫ್ರೆಡರಿಕ್‌ಚಕ್ರವರ್ತಿಯು (Frederic of Barbarossa) ಪೋಪ್ ಮೂರನೇ ಅಲೆಕ್ಸಾಂಡರನೆದುರು ಮೊಣಕಾಲೂರಿ ಅವನಿಗೆ ವಿಧೇಯತೆಯ ವಚನವನ್ನು ಕೊಟ್ಟನು.

ಹನ್ನೊಂದನೇ ಶತಮಾನದ ಮೊದಲಿನಲ್ಲಿ ಕ್ರೈಸ್ತಸಂಘದ ಹಿರಿದಾದ ಶಕ್ತಿ ಮನುಷ್ಯರ ಅಂತಃಪ್ರಜ್ಞೆ ಮತ್ತು ಸಂಕಲ್ಪಶಕ್ತಿಗಳಲ್ಲಿತ್ತು. ತನ್ನಶಕ್ತಿಯು ಅಸ್ತಿಭಾರವಾದ ನೈತಿಕಪ್ರತಿಷ್ಠೆಯನ್ನು ಅದು ಉಳಿಸಿಕೊಳ್ಳಲಿಲ್ಲ. 14ನೇ ಶತಮಾನದ ಮೊದಲ ದಶಕಗಳಲ್ಲಿ ಪೋಪ್‌ನ ಶಕ್ತಿ ಉಳಿದಿರಲಿಲ್ಲವೆಂದು ಕಂಡುಬಂದಿತು–ಕ್ರೈಸ್ತ ಸಂಘದ ಕೋರಿಕೆಗಳನ್ನು ಮನ್ನಿಸಿ ಅದರ ಇಷ್ಟಗಳನ್ನು ಜನತೆ ನಡೆಸಿಕೊಡುವುದು ನಿಂತುಹೋಗಿತ್ತು. ಕ್ರೈಸ್ತ ಪ್ರಪಂಚದ ಸಾಮಾನ್ಯ ಜನತೆ ಕ್ರೈಸ್ತ ಸಂಘದಲ್ಲಿಟ್ಟಿದ್ದ ಮುಗ್ಧ ವಿಶ್ವಾಸವನ್ನು ನಾಶಮಾಡಿದ ಅಂಶಗಳೇನು?

ಕ್ರೈಸ್ತ ಸಂಘದಲ್ಲಿ ಐಶ್ವರ್ಯ ಕಲೆಹಾಕಿಕೊಂಡಿದ್ದೇ ನಿಸ್ಸಂಶಯವಾಗಿಯೂ ಈ ಇಳಿಮೆಗೆ ಕಾರಣವಾದ ಮೊದಲ ಅಂಶ, ಉದ್ದಕ್ಕೂ ನಡೆದುಕೊಂಡೇ ಬರುತ್ತಿದ್ದ ಕ್ರೈಸ್ತಸಂಘಕ್ಕೆ ಮಕ್ಕಳಿಲ್ಲದೆ ಸಾಯುವವರು ತಮ್ಮ ಭೂಮಿಕಾಣಿಗಳನ್ನು ಬಿಟ್ಟು ಹೋಗುವ ಪದ್ಧತಿಯಿತ್ತು; ಪಾಪಮಾಡಿ ಪ್ರಾಯಶ್ಚಿತ್ತ ಮಾಡಿಕೊಳ್ಳುವವರಿಗೂ ಹೀಗೆ ಮಾಡಬೇಕೆಂದು ಬೋಧಿಸುತ್ತಿದ್ದರು. ಇದರಿಂದಾಗಿ ಅನೇಕ ಐರೋಪ್ಯ ದೇಶಗಳಲ್ಲಿ ಒಟ್ಟು ಭೂಮಿಯ ¼ ಭಾಗವೇ ಕ್ರೈಸ್ತ ಸಂಘದ್ದಾಗಿ ಹೋಯಿತು. ಐಶ್ವರ್ಯದಾಹ ಆಸ್ತಿ ಸಿಕ್ಕಿದಷ್ಟೂ ಹೆಚ್ಚುತ್ತಲೇಹೋಗುತ್ತದೆ. 13ನೇ ಶತಮಾನದಲ್ಲಾಗಲೇ ಎಲ್ಲಕಡೆಗಳಲ್ಲೂ ಜನರು "ಪಾದ್ರಿಗಳು ಒಳ್ಳೆಮನುಷ್ಯರಲ್ಲ, ಯಾವಾಗಲೂ ದುಡ್ಡು ಮತ್ತು ಆಸ್ತಿಗಳಿಗಾಗಿ ಹುಡುಕಾಡುತ್ತಿರುತ್ತಾರೆ" ಎಂದು ಹೇಳುತ್ತಿದ್ದರು.

ದೊರೆಗಳು ಮತ್ತು ಶ್ರೀಮಂತರಿಗೆ ಹೀಗೆ ಆಸ್ತಿ ಪರಭಾರೆಯಾಗುವುದು ಇಷ್ಟವಾಗಲಿಲ್ಲ. ತಮಗೆ ಸೇರಿದ ಭೂಮಿಯು ಸೈನ್ಯಗಳ ಮೂಲಕ ಬೆಂಬಲಕೊಡುವ ಕ್ರೈಸ್ತಮಠಗಳು, ಸಂನ್ಯಾಸಿ ಸಂನ್ಯಾಸಿನಿಯರ ಆಸರೆಯಾದುದನ್ನು ಇವರು ನೋಡಬೇಕಾಯಿತು. ಈ ಭೂಮಿಕಾಣಿಗಳು ನಿಜವಾಗಿಯೂ ಪರದೇಶೀಯರ ಕೈಯಲ್ಲಿದ್ದಂತೆ ಆಯಿತು. ಏಳನೆಯ ಗ್ರೆಗರಿಗೂ ಮುಂಚೆಯೇ ಬಿಷಪ್ಪುಗಳನ್ನು ನೇಮಿಸಬೇಕಾದವರು ಯಾರು ಎಂದು ಅಧಿಕಾರ ವಿನಿಯೋಗದ ಹಕ್ಕಿನ ಸಂಬಂಧದಲ್ಲಿ ರಾಜರಿಗೂ ಪೋಪನಿಗೂ ಘರ್ಷಣೆ ನಡೆದಿತ್ತು. ಈ ಅಧಿಕಾರ ರಾಜನ ಕೈಯಲ್ಲಿಲ್ಲದೆ ಪೋಪನ ಕೈಯಲ್ಲಿದ್ದರೆ ಬಳಿಕ ರಾಜನಿಗೆ ತನ್ನ ಪ್ರಜೆಗಳ ಆತ್ಮಪ್ರಜ್ಞೆಯ ಮೇಲಿನ ದಷ್ಟೇ ಅಲ್ಲದೆ ಗಮನಾರ್ಹ ಪ್ರಮಾಣದಲ್ಲಿ ರಾಜ್ಯದ ಭಾಗಗಳ ಮೇಲೂ ಹತೋಟಿ ತಪ್ಪಿಹೋಗುತ್ತಿತ್ತು. ಏಕೆಂದರೆ ಪಾದ್ರಿಗಳು ಕಂದಾಯದಿಂದ ವಿನಾಯಿತಿಪಡೆದುಕೊಳ್ಳುತ್ತಿದ್ದರು. ಅವರು ತೆರಿಗೆ ಕೊಡುತ್ತಿದ್ದುದು ರೋಮಿಗೆ. ಇಷ್ಟೇ ಅಲ್ಲ, ಶ್ರೀಸಾಮಾನ್ಯ ದೊರೆಗೆ ಕೊಡುತ್ತಿದ್ದ ತೆರಿಗೆಗಳಲ್ಲದೆ ಅವನ ಆಸ್ತಿಯಮೇಲೆ ಹತ್ತನೇ ಒಂದುಭಾಗ ತೆರಿಗೆ ವಿಧಿಸುವ ಹಕ್ಕು ತನಗಿದೆಯೆಂದು ಕ್ರೈಸ್ತಸಂಘ ಹೇಳುತ್ತಿತ್ತು.

ಲ್ಯಾಟಿನ್ ಕ್ರೈಸ್ತಪ್ರಪಂಚದ ಪ್ರತಿಯೊಂದು ದೇಶದ ಚರಿತ್ರೆಯಲ್ಲೂ 11ನೇ ಶತಮಾನದಲ್ಲಿ ಇಂತಹುದೇ ಯುಗವನ್ನು ಕಾಣುತ್ತೇವೆ. ದೊರೆ ಮತ್ತು ಪೋಪರಲ್ಲಿ ಬಿಷಪ್ಪರ ನೇಮಕದ ಬಗ್ಗೆ ಹೋರಾಟದ ಯುಗ. ಸಾಮಾನ್ಯವಾಗಿ ಎಲ್ಲ ಕಡೆಯೂ

ಪೋಪನಿಗೆ ವಿಜಯವಾಯಿತೆಂದು ಚರಿತ್ರೆ ಹೇಳುತ್ತದೆ. ರಾಜನಿಗೆ ಬಹಿಷ್ಕಾರ ಹಾಕುವುದು, ಅವನ ಪ್ರಜೆಗಳು ಅವನಿಗೆ ವಿಧೇಯರಾಗಿರಬೇಕೆಂಬ ನಿರ್ಬಂಧದಿಂದ ಅವರನ್ನು ಬಿಡುಗಡೆ ಮಾಡುವುದು ಮತ್ತು ರಾಜನ ಉತ್ತರಾಧಿಕಾರಿಯನ್ನು ಒಪ್ಪಿಕೊಳ್ಳುವುದು ಈ ಎಲ್ಲ ಹಕ್ಕು ತನಗಿದೆಯೆಂದು ಪೋಪ್ ವಾದಿಸುತ್ತಿದ್ದನು. ಇಡೀ ರಾಷ್ಟ್ರವೊಂದನ್ನು "ಸಾಮೂಹಿಕ ಬಹಿಷ್ಕಾರ" (Interdict) ಕ್ಕೊಳಗುಮಾಡುವ ಹಕ್ಕನ್ನೂ ಸಾಧಿಸುತ್ತಿದ್ದನು. ಆಗ ದೀಕ್ಷಾಸ್ನಾನ, ಸ್ಥಿರೀಕರಣ ಸಂಸ್ಕಾರ ಮತ್ತು ಪ್ರಾಯಶ್ಚಿತ್ತ ಸಂಸ್ಕಾರಗಳನ್ನು ಬಿಟ್ಟರೆ ಮತ್ತೆ ಯಾವ ಧಾರ್ಮಿಕ ವಿಧಿಯೂ ನಡೆಯುತ್ತಿರಲಿಲ್ಲ. ಪಾದ್ರಿಗಳು ಸಾಮಾನ್ಯಪೂಜೆ ಮತ್ತು ಪ್ರಾರ್ಥನೆಗಳನ್ನೂ ನಡೆಸಿಕೊಡುವಂತಿರಲಿಲ್ಲ. ಮದುವೆಗಳು, ಶವಸಂಸ್ಕಾರಗಳು ಸಹ ನಡೆಯುತ್ತಿರಲಿಲ್ಲ. ಈ ಎರಡು ಶಸ್ತ್ರಗಳಿಂದ ಅತ್ಯಂತ ಅವಿಧೇಯರಾದ ದೊರೆಗಳನ್ನು ನಿಗ್ರಹಿಸಲು, ತುಂಬಾ ಅಸಮಾಧಾನ ಹೊಂದಿದ ಜನರನ್ನು ಬೆದರಿಸಲು ಪೋಪನಿಗೆ ಸಾಧ್ಯವಿತ್ತು. ಇವು ಬಹುದೊಡ್ಡ ಅಧಿಕಾರಗಳು. ಇಂತಹ ಅಧಿಕಾರಗಳನ್ನು ಅಸಾಧಾರಣ ಸಂದರ್ಭಗಳಲ್ಲಿ ಮಾತ್ರ ಉಪಯೋಗಿಸಬೇಕು. ಬರಬರುತ್ತಾ ಪೋಪ್ ಈ ಅಧಿಕಾರಗಳನ್ನು ಪದೇಪದೇ ಉಪಯೋಗಿಸಿದುದರಿಂದ ಅವುಗಳ ಪರಿಣಾಮ ಹಳಸಲಾಗಿ ಹೋಯಿತು. ಮೂವತ್ತು ವರ್ಷಗಳ ಅವಧಿಯಲ್ಲಿ ಹನ್ನೆರಡನೇ ಶತಮಾನದ ಕಡೆಯಭಾಗದಲ್ಲಿ ಸ್ಕಾಟ್ಲೆಂಡ್, ಫ್ರಾನ್ಸ್ ಮತ್ತು ಇಂಗ್ಲೆಂಡ್ ಒಂದಾಗುತ್ತಲೊಂದು ಸಾಮೂಹಿಕ ಬಹಿಷ್ಕಾರಕ್ಕೊಳಗಾದುದನ್ನು ನೋಡುತ್ತೇವೆ. ಕ್ರೂಸೇಡುಗಳಿಗೆ ಹೊರಡುವ ಹುಮ್ಮಸ್ಸು ಜನತೆಯಲ್ಲಿ ಪೂರ್ತಿ ಆರಿಹೋಗುವವರೆಗೂ ಪೋಪ್‌ಗಳು ತಮ್ಮನ್ನು ಉಲ್ಲಂಘಿಸಿ ನಡೆದ ರಾಜರ ಮೇಲೆ ಕ್ರೂಸೇಡ್ ಎಬ್ಬಿಸಿ ಹೊರಡಿಸುವ ಚಪಲವನ್ನು ತಡೆಯಲಾರದೇ ಹೋದರು.

ಲ್ಯಾಟಿನ್ ಕ್ರೈಸ್ತ ಸಂಘವು ಸುಮ್ಮನೆ ರಾಜರ ಜೊತೆ ಮಾತ್ರ ಕಾದಾಡಿ ಜನಸಾಮಾನ್ಯರ ಮನಸ್ಸಿನ ಮೇಲಿನ ತನ್ನ ಹಿಡಿತವನ್ನು ಹಾಗೇ ಇಟ್ಟುಕೊಂಡಿರಬೇಕೆಂದು ಎಚ್ಚರಿಕೆಯಿಂದ ನಡೆದುಕೊಂಡಿದ್ದರೆ ಬಹುಶಃ ಇಡೀ ಕ್ರೈಸ್ತಪ್ರಪಂಚದ ಮೇಲೆ ಶಾಶ್ವತ ಆಧಿಪತ್ಯ ಸಾಧಿಸಬಹುದಾಗಿತ್ತು. ಆದರೆ ಪೋಪನ ಉನ್ನತ ಆಕಾಂಕ್ಷೆಗಳು ಸಾಮಾನ್ಯಪಾದ್ರಿಗಳ ನಡೆವಳಿಕೆಯಲ್ಲಿ ದುರಹಂಕಾರದ ರೂಪದಲ್ಲಿ ಪ್ರತಿಬಿಂಬಿತವಾಗುತ್ತಿದ್ದುವು. ಹನ್ನೊಂದನೇ ಶತಮಾನಕ್ಕೆ ಮುಂಚೆ ರೋಮನ್ ಪಾದ್ರಿಗಳು ಮದುವೆ ಮಾಡಿಕೊಳ್ಳಬಹುದಾಗಿತ್ತು. ತಮ್ಮ ಸುತ್ತಲಿನ ಜನರೊಡನೆ ಅವರಿಗೆ ನಿಕಟ ಸಂಬಂಧವಿರುತ್ತಿತ್ತು. ನಿಜಕ್ಕೂ ಅವರು ಜನತೆಯ ಒಂದು ಭಾಗವಾಗಿರುತ್ತಿದ್ದರು. ಏಳನೆಯ ಗ್ರೆಗರಿ ಅವರಿಗೆ ಬ್ರಹ್ಮಚರ್ಯವನ್ನು ವಿಧಿಸಿದನು. ಅವರನ್ನು ರೋಮಿಗೆ ಇನ್ನೂ ಗಾಢವಾಗಿ ಬಂಧಿಸುವ ಸಲುವಾಗಿ ಜನರೊಂದಿಗೆ ಅವರು ನಿಕಟ ಸಂಪರ್ಕದಿಂದಿರುವುದನ್ನು ತಪ್ಪಿಸಿದನು. ಆದರೆ ಇದರಿಂದ ನಿಜವಾಗಿ ಆದದ್ದು ಏನೆಂದರೆ ಕ್ರೈಸ್ತಸಂಘ ಮತ್ತು ಜನಸಾಮಾನ್ಯರ ನಡುವೆ ಒಂದು ಕಂಧರ ತೆರೆದುಕೊಂಡಿತು. ಚರ್ಚಿಗೆ ತನ್ನದೇ ಆದ ನ್ಯಾಯಾಲಯಗಳಿದ್ದುವು. ಈ ನ್ಯಾಯಾಲಯ

ಗಳಿಗಾಗಿ ಪಾದ್ರಿಗಳಿಗೆ ಸಂಬಂಧಿಸಿದ ವಿಚಾರಣೆಗಳಷ್ಟೇ ಅಲ್ಲದೆ ಸಂನ್ಯಾಸಿಗಳು, ವಿದ್ಯಾರ್ಥಿಗಳು, ಕ್ರೂಸೇಡರುಗಳು, ವಿಧವೆಯರು, ತಾಯಿ ತಂದೆಗಳಿಲ್ಲದ ಮಕ್ಕಳು ಮತ್ತು ಅನಾಥರುಗಳಿಗೆ ಸಂಬಂಧಿಸಿದ ವಿಚಾರಣೆಗಳನ್ನೂ ಕಾದಿರಿಸಲಾಗಿತ್ತು. ಉಯಿಲುಗಳು, ಮದುವೆಗಳು, ಆಣೆಯಿಟ್ಟು ಕೊಳ್ಳುವಿಕೆ, ಮಾಟ, ಪಾಷಂಡವಾದ ಮತ್ತು ಪವಿತ್ರ ವಸ್ತುಗಳ ದೂಷಣೆಗೆ ಸಂಬಂಧಿಸಿದ ವಿಚಾರಣೆಗಳನ್ನು ಈ ನ್ಯಾಯ ಸ್ಥಾನಗಳಿಗೇ ತರಬೇಕಾಗಿತ್ತು. ಸಾಮಾನ್ಯ ಪ್ರಜೆಗೂ ಪಾದ್ರಿಗೂ ವೈಮನಸ್ಯ ಉಂಟಾದರೆ ಆ ಪ್ರಜೆ ಕ್ರೈಸ್ತ ಸಂಘದ ನ್ಯಾಯಾಲಯಕ್ಕೇ ಹೋಗಬೇಕಿತ್ತು. ಯುದ್ಧ ಮತ್ತು ಶಾಂತಿಗಳ ಹೊಣೆಯೂ ಸಾಮಾನ್ಯ ಪ್ರಜೆಯ ಮೇಲೆ ಬೀಳುತ್ತಿತ್ತೇ ಹೊರತು ಪಾದ್ರಿ ಯಾವಕಾಲದಲ್ಲೂ ಸ್ವತಂತ್ರನಾಗಿಯೇ ಇರುತ್ತಿದ್ದನು. ಕ್ರೈಸ್ತ ಪ್ರಪಂಚದಲ್ಲಿ ಪಾದ್ರಿಗಳ ಮೇಲೆ ದ್ವೇಷ ಮತ್ತು ಹೊಟ್ಟೆಕಿಚ್ಚು ಬೆಳೆದುದರಲ್ಲಿ ಏನೂ ಆಶ್ಚರ್ಯವಿಲ್ಲ.

ತನ್ನ ಶಕ್ತಿ ಇದ್ದಿದ್ದು ಜನ ಸಾಮಾನ್ಯರ ಆತ್ಮಪ್ರಜ್ಞೆಗಳಲ್ಲಿ ಎಂದು ರೋಮ್ ಯಾವಾಗಲೂ ಅರ್ಥಮಾಡಿಕೊಳ್ಳಲಿಲ್ಲ. ತನಗೆ ಸಹಾಯಕವಾಗಿರಬೇಕಾಗಿದ್ದ ಧಾರ್ಮಿಕ ಉತ್ಸಾಹವನ್ನು ಎದುರಿಸಿ ಹೋರಾಡಿ ಸೈದ್ಧಾಂತಿಕವಾದ ಸಂಪ್ರದಾಯ ಬದ್ಧತೆಯನ್ನು ಜನರ ನಿಷ್ಕಪಟವಾದ ಶಂಕೆ ಮತ್ತು ವಿರೋಧಾಭಿಪ್ರಾಯಗಳ ಮೇಲೆ ಹೇರಿತು. ಬರಿಯ ನೈತಿಕ ಅಭಿಪ್ರಾಯಗಳಲ್ಲಿ ಕ್ರೈಸ್ತಸಂಘ ಕೈಹಾಕಿದಾಗ ಸಾಮಾನ್ಯಪ್ರಜೆ ಅದನ್ನು ಒಪ್ಪಿಕೊಳ್ಳುತ್ತಿದ್ದನು. ಸೈದ್ಧಾಂತಿಕ ಅಂಶಗಳಲ್ಲಿ ಕೈಹಾಕಿದಾಗ ಅವನು ಅದರೊಡನೆ ಸೇರುತ್ತಿರಲಿಲ್ಲ. ದಕ್ಷಿಣ ಫ್ರಾನ್ಸಿನಲ್ಲಿ ವಾಲ್ಡೋ ಮಾನವನು ತನ್ನಸಂಬಿಕೆ ಮತ್ತು ನಡವಳಿಕೆಗಳೆರಡರಲ್ಲೂ ಯೇಸುವಿನ ಸರಳತೆಗೆ ಹಿಂದಿರುಗಬೇಕೆಂದು ಉಪದೇಶಿಸಿದಾಗ ಮೂರನೆಯ ಇನ್ನೊಸೆಂಟ್ ವಾಲ್ಡೋವಿನ ಹಿಂಬಾಲಕರಾದ ವಾಲ್ಡೇಸರ ಮೇಲೆ ಕ್ರೂಸೇಡನ್ನೆಬ್ಬಿಸಿ ಅವರನ್ನು ಬೆಂಕಿ, ಖಡ್ಗ, ಅತ್ಯಾಚಾರ, ಮತ್ತು ಅತ್ಯಂತ ಭೀಕರವಾದ ಹಿಂಸಾಕೃತ್ಯಗಳಿಂದ ಸದೆಬಡಿಯಲು ಅವಕಾಶಮಾಡಿಕೊಟ್ಟನು. ಮುಂದೆ ಅಸಿಸಿಯ ಸಂತ ಫ್ರಾನ್ಸಿಸ್ (ಕ್ರಿ.ಶ. 1181–1226) ಕ್ರಿಸ್ತನನ್ನು ಅನುಸರಿಸಿ ಬಡತನ ಸೇವೆಗಳನ್ನು ಆದರ್ಶವನ್ನಾಗಿ ಇಟ್ಟು ಕೊಂಡು ಜೀವಿಸಬೇಕೆಂದು ಬೋಧಿಸಿದಾಗ ಅವನ ಅನುಯಾಯಿಗಳಾದ ಫ್ರಾನ್ಸಿಸ್ಸನ್ನ ರನ್ನು ಹಿಂಸಿಸಿ ಚಾವಟಿಯಿಂದ ಹೊಡೆಯಿಸಿ, ಬಂಧಿಸಿ ಚದುರಿಸಲಾಯಿತು. ಕ್ರಿ.ಶ. 1318ರಲ್ಲಿ ನಾಲ್ವರನ್ನು ಮಾರ್ಸೇಲ್ಸಿನಲ್ಲಿ ಜೀವಂತಸುಡಲಾಯಿತು. ಅದೇ ಸಂತ ಡಾಮಿನಿಕ್ (ಕ್ರಿ.ಶ. 1170–1221) ಸ್ಥಾಪಿಸಿದ ಉಗ್ರಸಂಪ್ರದಾಯ ಸಮ್ಮತವಾದ ಡಾಮಿನಿಕನ್ ಪಂಗಡಕ್ಕೆ ಮೂರನೆಯ ಇನ್ನೊಸೆಂಟ್ ಬಲವಾದ ಬೆಂಬಲ ಕೊಟ್ಟನು. ಈ ಪಂಗಡದ ಸಹಾಯದಿಂದ ಸಂಪ್ರದಾಯ ಬಾಹಿರತೆಯನ್ನು ಹುಡುಕಿ ಹಿಡಿಯುವುದಕ್ಕೆ ಮತ್ತು ಸ್ವತಂತ್ರ ಚಿಂತನೆಯನ್ನು ಪೀಡಿಸುವುದಕ್ಕೆ "ಇನ್‌ಕ್ವಿಸಿಷನ್" (Inquisition) ಎಂಬ ಮಠೀಯ ನ್ಯಾಯಸ್ಥಾನವನ್ನು ಸ್ಥಾಪಿಸಿದನು.

ಹೀಗೆ ಕ್ರೈಸ್ತ ಸಂಘವು ತನ್ನ ವರ್ತಿಯಿಂದ ಹಕ್ಕು ಬಾಧ್ಯತೆಗಳು, ಅನ್ಯಾಯಕರವಾದ ವಿಶೇಷಾಧಿಕಾರಗಳು, ಅಸಂಬದ್ಧವಾದ ಅಸಹಿಷ್ಣುತೆಗಳಿಂದ ತನ್ನ ಶಕ್ತಿಯೆಲ್ಲಕ್ಕೂ ಮೂಲವಾಗಿದ್ದ ಸಾಮಾನ್ಯ ಮನುಷ್ಯನಲ್ಲಿದ್ದ ಸ್ವತಂತ್ರವಾದ ಧರ್ಮಶ್ರದ್ಧೆಯನ್ನು ನಾಶಮಾಡಿತು. ಇದರ ಅವನತಿಯ ಕಥೆಯನ್ನು ಪರಿಶೀಲಿಸಿದರೆ ಹೊರಗಿನಿಂದ ಯಾವ ಗಮನಾರ್ಹ ಶತ್ರುವೂ ಕಾಣಬರುವುದಿಲ್ಲ. ಇದು ಒಂದೇ ಸಮನೆ ಒಳಗಿನಿಂದ ಕೊಳೆತು ಕೊಂಡು ಬರುವುದು ಕಾಣುತ್ತದೆ.

47. ಅವಿಧೇಯರಾದ ರಾಜರು ಮತ್ತು ಕ್ರೈಸ್ತಪ್ರಪಂಚದ ಮಹಾಛಿದ್ರ

ಪೋಪನನ್ನು ಚುನಾಯಿಸುತ್ತಿದ್ದ ಮಾರ್ಗವೇ ಸಮಗ್ರ ಕ್ರೈಸ್ತಪ್ರಪಂಚದ ಮುಖಂಡತ್ವವನ್ನು ಗಳಿಸಿಕೊಳ್ಳಬೇಕೆಂದು ಹೋರಾಡುತ್ತಿದ್ದ ರೋಮನ್ ಕ್ರೈಸ್ತ ಸಂಘದ ದೊಡ್ಡ ದೌರ್ಬಲ್ಯವಾಗಿತ್ತು.

ಪೋಪ್‌ಪದವಿಯು ನಿಜವಾಗಿಯೂ ತನ್ನ ಮಹದಾಕಾಂಕ್ಷೆಯನ್ನು ಸಾಧಿಸಿ ಕ್ರೈಸ್ತಪ್ರಪಂಚದಲ್ಲೆಲ್ಲಾ ಒಂದೇ ಆಳ್ವಿಕೆ ಮತ್ತು ಒಂದೆ ಶಾಂತಿಯನ್ನು ಸ್ಥಾಪಿಸಬೇಕಾಗಿದ್ದಲ್ಲಿ ಅದಕ್ಕೆ ಒಂದು ಬಲವಾದ ನಿಶ್ಚಲವಾದ ಯಾವ ಸಮಯದಲ್ಲಿಯೂ ನಿಲ್ಲದೆ ಒಂದೇಸಮನೆ ನಡೆದುಕೊಂಡು ಬರುವ ಮಾರ್ಗದರ್ಶಕಶಕ್ತಿ ಇರಬೇಕಾದ್ದು ಅತ್ಯಂತ ಅವಶ್ಯಕವಾಗಿತ್ತು. ಆಗ ಪೋಪ್‌ನ ಆಳ್ವಿಕೆಗೆ ಒಳ್ಳೆಯ ಅನುಕೂಲ ಸಂದರ್ಭಗಳಿದ್ದುವು. ಈ ಅಧಿಕಾರ ಭದ್ರವಾಗಲು ಎಲ್ಲಕ್ಕಿಂತ ಮುಂಚೆ ಬೇಕಾದ ಅಂಶಗಳು ಇವು: ಈ ಪದವಿಯನ್ನು ವಹಿಸಿಕೊಂಡವರು ಉತ್ತಮಪ್ರಾಯದವರಾಗಿದ್ದು ಸಮರ್ಥ ವ್ಯಕ್ತಿಗಳಾಗಿರಬೇಕಾಗಿತ್ತು; ಇವರಲ್ಲಿ ಪ್ರತಿಯೊಬ್ಬನಿಗೂ ಮುಂದಿನ ಪೋಪನಾಗಿ ನೇಮಿತನಾದ ಉತ್ತರಾಧಿಕಾರಿಯಿದ್ದು ಅವನೊಡನೆ ಕ್ರೈಸ್ತ ಸಂಘದ ಕಾರ್ಯನೀತಿಯನ್ನು ಚರ್ಚಿಸಲು ಅವಕಾಶವಿರಬೇಕಾಗಿತ್ತು; ಪೋಪನ ಚುನಾವಣೆಯ ನಿಯಮಗಳು ಮತ್ತು ಕಾರ್ಯವಿಧಾನಗಳು ಸ್ಪಷ್ಟವೂ, ನಿರ್ದಿಷ್ಟವೂ, ಟೀಕೆಗೆ ಒಳಗಾಗದೆ ಇರುವಂತಹವೂ ಆಗಿರಬೇಕಾಗಿತ್ತು. ದುರದುಷ್ಟವಶಾತ್ ಪರಿಸ್ಥಿತಿ ಹೀಗಿರಲೇ ಇಲ್ಲ. ಈ ಚುನಾವಣೆಯಲ್ಲಿ ಯಾರು ಯಾರು ಮತದಾನ ಮಾಡಬಹುದು ಎಂಬುದು ಕೂಡ ಸ್ಪಷ್ಟವಾಗಿರಲಿಲ್ಲ. ಹಾಗೆಯೇ ಇದರಲ್ಲಿ ಬೈಜಾಂಟೈನ್ ಚಕ್ರವರ್ತಿ ಮತ್ತು ಪವಿತ್ರ ರೋಮನ್ ಚಕ್ರವರ್ತಿಗಳಲ್ಲಿ ಯಾರದ್ದಾದರೂ ಮಾತು ನಡೆಯಬೇಕೇ ಎಂಬುದೂ ಸ್ಪಷ್ಟವಾಗಿರಲಿಲ್ಲ. ಅತ್ಯಂತದಕ್ಷ ರಾಜನೀತಿಜ್ಞನಾಗಿದ್ದ ಪೋಪ್ ಹಿಲ್ಡೆಬ್ರಾಂಡ್ (ಏಳನೇ ಗ್ರೆಗರಿ, ಕ್ರಿ. ಶ. 1073–1085) ಈ ಚುನಾವಣೆ ಕ್ರಮಬದ್ಧವಾಗಲು ಎಷ್ಟೋ ಕೆಲಸ ಮಾಡಿದನು. ಚುನಾವಣೆಯಲ್ಲಿ ಮತ ಹಾಕುವ ಹಕ್ಕನ್ನು ಕಾರ್ಡಿನಲ್‌ಗಳಿಗೆ ಮಾತ್ರ ಸೀಮಿತಮಾಡಿದನು. ಕ್ರೈಸ್ತಸಂಘವೇ ಚಕ್ರವರ್ತಿಗೆ ನೀಡಿದ ಒಪ್ಪಿಗೆಯಹಕ್ಕು ಎಂಬಷ್ಟಕ್ಕೆ ಇದರಲ್ಲಿ ಚಕ್ರವರ್ತಿಯ ಪಾಲು ಇಳಿಯಿತು. ಆದರೆ ಉತ್ತರಾಧಿಕಾರಿಯನ್ನು ಮೊದಲೇ

ನೇಮಿಸಿಟ್ಟುಕೊಳ್ಳುವುದಕ್ಕೆ ಈ ನಿಯಮಗಳಲ್ಲಿ ಅವಕಾಶ ಕಲ್ಪಿಸಿಕೊಡಲಿಲ್ಲ. ಕಾರ್ಡಿನಲ್ಲುಗಳ ವಿವಾದಗಳಿಂದಾಗಿ ಪೋಪನ ಸ್ಥಾನ ಖಾಲಿಬಿದ್ದಿರಲು ಇದರಿಂದ ಸಾಧ್ಯವಾಯಿತು. ಕೆಲವು ಸಂದರ್ಭಗಳಲ್ಲಿ ವರ್ಷವೋ ಅದಕ್ಕಿಂತ ಹೆಚ್ಚಿನಕಾಲವೋ ಹಾಗಾದದ್ದೂ ಉಂಟು.

ಹೀಗೆ ಈ ಕಾರ್ಯವಿಧಾನ ನಿಖರವಾಗಿಲ್ಲದುದರ ಪರಿಣಾಮಗಳನ್ನು ಹದಿನಾರನೇ ಶತಮಾನದವರೆಗಿನ ಪೋಪ್ ಪದವಿಯ ಚರಿತ್ರೆಯಲ್ಲಿ ಕಾಣಬಹುದು. ಬಹು ಮೊದಲಿನಿಂದಲೇ ಈ ಚುನಾವಣೆಗಳು ವಿವಾದಪೂರಿತವಾಗಿ ಇಬ್ಬರು ಅಥವಾ ಇನ್ನೂ ಹೆಚ್ಚು ಮಂದಿ ತಾವೇ ಪೋಪ್ ಎಂದು ಹೇಳಿಕೊಳ್ಳುತ್ತಿದ್ದರು. ಹಾಗಾದಾಗ ಚಕ್ರವರ್ತಿಯ ಬಳಿಗೋ ಮತ್ತೆ ಯಾರಾದರೂ ಕ್ರೈಸ್ತಸಂಘದವರಲ್ಲದ ಹೊರಗಿನ ಮಧ್ಯಸ್ಥಗಾರರ ಹತ್ತಿರವೋ ಈ ವಿವಾದವನ್ನು ಪರಿಹರಿಸಿಕೊಳ್ಳಲು ಕ್ರೈಸ್ತಸಂಘ ಹೋಗಬೇಕಾದ ಅಪಮಾನಕರ ಪ್ರಸಂಗ ಬಂದೊದಗುತ್ತಿತ್ತು. ಹೆಸರಾಂತ ಪೋಪ್‌ಗಳೆಲ್ಲರ ಜೀವನಗಳೂ ಮುಂದೇನು ಎಂಬ ಪ್ರಶ್ನಾರ್ಥಕ ಚಿಹ್ನೆಯಲ್ಲಿಯೇ ಮುಗಿಯುತ್ತಿದ್ದವು. ಅವರ ಮರಣದ ಬಳಿಕ ಕ್ರೈಸ್ತಸಂಘ ಮುಖ್ಯಸ್ಥನಿಲ್ಲದೆ ಉಳಿದುಕೊಂಡು ತಲೆಕತ್ತರಿಸಿ ಹಾಕಿದ ಮೈಯ್ಯಂತೆ ಅಪ್ರಯೋಜಕವಾಗಬಹುದಾಗಿತ್ತು. ಇಲ್ಲವೇ ಆಸ್ಥಾನಕ್ಕೆ ಅವನ ಹಳೆಯ ಪ್ರತಿಸ್ಪರ್ಧಿ ಬರಬಹುದಾಗಿತ್ತು. ಈ ಪ್ರತಿಸ್ಪರ್ಧಿ ಹಿಂದಿನ ಪೋಪನ ಸಾಧನೆಗಳನ್ನು ಅಲ್ಲಗಳೆಯಲು, ಅವುಗಳನ್ನು ಅಳಿಸಿಹಾಕಲು ಉತ್ಸುಕನಾಗಿರುತ್ತಿದ್ದನು. ಅದೂ ಅಲ್ಲದಿದ್ದರೆ ಸಾವನ್ನೆದುರು ನೋಡುತ್ತಿದ್ದ ಶಕ್ತಿಗುಂದಿದ ಮುಪ್ಪಿನ ಮುದುಕನೊಬ್ಬ ಪೋಪ್ ಆಗುವ ಸಂಭವವಿತ್ತು.

ಪೋಪ್ ಪದವಿಯ ವ್ಯವಸ್ಥೆಯ ಈ ವಿಶಿಷ್ಟ ದೌರ್ಬಲ್ಯ ಸಹಜವಾಗಿಯೇ ವಿವಿಧ ಜರ್ಮನ್‌ದೊರೆಗಳು, ಫ್ರಾನ್ಸಿನರಾಜ, ಇಂಗ್ಲೆಂಡಿನಲ್ಲಿ ಆಳುತ್ತಿದ್ದ ನಾರ್ಮನ್ ಮತ್ತು ಫ್ರೆಂಚ್ ದೊರೆಗಳು ಅಲ್ಲಿ ಕೈಹಾಕುವಂತೆ ಮಾಡಿತು. ಇವರೆಲ್ಲರೂ ಪೋಪನ ಆಯ್ಕೆಯಲ್ಲಿ ತಮ್ಮ ಪ್ರಭಾವ ಬೀರಿ ತಮಗೆ ಅನುಕೂಲವಾದಂತಹ ಪೋಪ್ ರೋಮಿನ ಲ್ಯಾಟೆರನ್ ಅರಮನೆಯಲ್ಲಿ ನೆಲಸಬೇಕೆಂದು ಆಶಿಸುವಂತೆ ಮಾಡಿತು. ಯುರೋಪಿನ ಕಾರ್ಯಕಲಾಪಗಳಲ್ಲಿ ಪೋಪನ ಪಾತ್ರ ಮುಖ್ಯವೂ ಪ್ರಬಲವೂ ಆಗುತ್ತಾ ಹೋದಂತೆ ರೋಮಿನ ವ್ಯವಹಾರಗಳಲ್ಲಿ ರಾಜರ ಹಸ್ತಕ್ಷೇಪವೂ ತೀವ್ರವಾಗುತ್ತಾ ಹೋಯಿತು. ಈ ಪರಿಸ್ಥಿತಿಯಲ್ಲಿ ಪೋಪ್‌ಗಳಲ್ಲಿ ಅನೇಕರು ದುರ್ಬಲರೂ ನಿಷ್ಪ್ರಯೋಜಕರೂ ಆದುದರಲ್ಲಿ ಅಂತಹ ಆಶ್ಚರ್ಯವೇನಿಲ್ಲ. ಸೋಜಿಗದ ಸಂಗತಿಯೆಂದರೆ ಅದರಲ್ಲಿ ಕೂಡ ಸಾಕಷ್ಟು ಜನ ಸಮರ್ಥರೂ ಧೈರ್ಯವಂತರೂ ಇದ್ದಿದ್ದು.

ಪ್ರಧಾನವಾದ ಈ ಯುಗದಲ್ಲಿ ಆಗಿಹೋದ ಪೋಪ್‌ಗಳಲ್ಲಿ ಬಹು ಚೈತನ್ಯವಂತನೂ ಆಸಕ್ತಿ ಕೆರಳಿಸುವಂತಹವನೂ ಆಗಿದ್ದವನು ಮೂರನೆಯ ಇನ್ನೊಸೆಂಟ್ (1198–1216). ಮೂವತ್ತೆಂಟು ವರ್ಷ ತುಂಬುವಷ್ಟರಲ್ಲಿ ಪೋಪ್ ಆದುದು ಇವನ ಅದೃಷ್ಟ. ಇವನು ಮತ್ತು ಇವನ ಉತ್ತರಾಧಿಕಾರಿಗಳು ಇವನಿಗಿಂತ

ಕುತೂಹಲಕರ ವ್ಯಕ್ತಿ ಎರಡನೆಯ ಫ್ರೆಡರಿಕ್ ಚಕ್ರವರ್ತಿಯ ಪ್ರತಿಸ್ಪರ್ಧಿಗಳಾಗ ಬೇಕಾಯಿತು. ಈ ಚಕ್ರವರ್ತಿಯನ್ನು (Stupor Mundi) ಅಂದರೆ 'ಪ್ರಪಂಚದ ಆಶ್ಚರ್ಯ' ಎಂದು ಕರೆಯುತ್ತಿದ್ದರು. ಈ ದೊರೆಗೂ ರೋಮಿಗೂ ಆದ ಹೋರಾಟ ಚರಿತ್ರೆಯ ತಿರುವುಗಳಲ್ಲೊಂದು. ಕಡೆಗೆ ರೋಮ್ ಇವನನ್ನು ಸೋಲಿಸಿ ಅವನ ವಂಶವನ್ನು ಇಲ್ಲದಂತೆ ಮಾಡಿತು. ಆದರೆ ಅವನಿಂದ ಕ್ರೈಸ್ತಸಂಘ ಮತ್ತು ಪೋಪ್‌ಗಳ ಪ್ರತಿಷ್ಠೆಗೆ ಆಳವಾದ ಗಾಯಗಳಾಗಿ ಈ ಗಾಯಗಳು ವ್ರಣಗಳಾಗಿ ಕಡೆಗೆ ಸಂಘದ ನಾಶಕ್ಕೆ ಕಾರಣವಾದುವು.

ಫ್ರೆಡರಿಕ್ ಚಕ್ರವರ್ತಿ ಆರನೆಯ ಹೆನ್ರಿಯ ಮಗ. ಇವನ ತಾಯಿ ಸಿಸಿಲಿಯ ನಾರ್ಮನ್ ರಾಜನಾದ ಒಂದನೇ ರೋಜರನ ಮಗಳು. ಕ್ರಿ.ಶ. 1198ರಲ್ಲಿ ಇವನಿಗೆ ನಾಲ್ಕುವರ್ಷಗಳಾಗಿದ್ದಾಗ ರಾಜ್ಯ ಇವನದ್ದಾಯಿತು. ಮೂರನೆಯ ಇನ್ನೊಸೆಂಟ್ ಇವನ ಪೋಷಕನೆಂದು ನೇಮಿತನಾದನು. ಸಿಸಿಲಿಯನ್ನು ನಾರ್ಮನ್ನರು ಜಯಿಸಿ ಬಹಳ ದಿನಗಳಾಗಿರಲಿಲ್ಲ. ಅಲ್ಲಿಯ ಆಸ್ಥಾನದಲ್ಲಿ ಅರ್ಧಕ್ಕರ್ಧ ಜನ ಪೌರ್ವಾತ್ಯರಿದ್ದು ಅದು ಉನ್ನತ ವ್ಯಾಸಂಗ ಪಡೆದ ಅರಬ್ಬರಿಂದ ತುಂಬಿತ್ತು. ಚಿಕ್ಕವಯಸ್ಸಿನ ರಾಜನ ವಿದ್ಯಾಭ್ಯಾಸದಲ್ಲಿ ಇವರಲ್ಲಿ ಕೆಲವರು ಪಾಲ್ಗೊಂಡರು. ಅವರು ತಮ್ಮ ದೃಷ್ಟಿಕೋನ ವನ್ನು ರಾಜನಿಗೆ ಸ್ಪಷ್ಟಪಡಿಸಿ ಕೊಡಲು ಸಹಜವಾಗಿಯೇ ಶ್ರಮಿಸಿರಬೇಕು. ಕ್ರೈಸ್ತ ಮತದ ಬಗೆಗೆ ಮುಸ್ಲಿಮರ ಅಭಿಪ್ರಾಯ, ಇಸ್ಲಾಂ ಬಗೆಗೆ ಕ್ರೈಸ್ತರ ದೃಷ್ಟಿ ಎರಡೂ ದೊರೆಗೆ ತಿಳಿದು ಬಂದಿತು. ಈ ಇಬ್ಬಗೆಯ ಬೋಧನೆಯ ದುಷ್ಪರಿಣಾಮವೆಂದರೆ ಮತ ಧರ್ಮಗಳೆಲ್ಲ ಬರಿಯ ಠಕ್ಕು ಎಂಬ ದೃಷ್ಟಿ: ಆಗಿನ ಶ್ರದ್ಧೆ ನಂಬಿಕೆಗಳ ಯುಗದಲ್ಲಿ ಬಹು ಅಪರೂಪವಾದ ದೃಷ್ಟಿ. ಈ ತನ್ನ ಅಭಿಪ್ರಾಯವನ್ನು ಕುರಿತು ಅವನು ಯಾವ ಹಿಡಿತಡೆಯೂ ಇಲ್ಲದೆ ಮಾತಾಡುತ್ತಿದ್ದನು. ಈ ಮತದೂಷಣೆ ಮತ್ತು ಪಾಷಂಡ ವಾದದ ಮಾತುಗಳು ದಾಖಲೆಗಳಲ್ಲಿವೆ.

ಈ ತರುಣ ದೊಡ್ಡವನಾಗುತ್ತಾ ಹೋದಂತೆ ಇವನಿಗೂ ಇವನ ಪಾಲಕನಿಗೂ ಘರ್ಷಣೆ ಮೊದಲಾಯಿತು. ಮೂರನೇ ಇನ್ನೊಸೆಂಟ್ ತನ್ನ ಸಾಕುಮಗನಿಂದ ಬಹಳಷ್ಟು ನಿರೀಕ್ಷಿಸಿದವನು. ಚಕ್ರವರ್ತಿಯಾಗಿ ಪಟ್ಟಕ್ಕೇರುವ ಸಮಯ ಬಂದಾಗ ಫ್ರೆಡರಿಕನಿಗೆ ಪೋಪ್ ಕೆಲವು ಷರತ್ತುಗಳನ್ನು ಹಾಕಿದನು; ಜರ್ಮನಿಯಲ್ಲಿ ಧರ್ಮ ದ್ರೋಹವನ್ನು ಬಲವಾಗಿ ಮಟ್ಟಹಾಕಬೇಕು, ಸಿಸಿಲಿ ಮತ್ತು ಇಟಲಿಗಳ ದೊರೆತನ ವಿದ್ದರೆ ಬಲದಲ್ಲಿ ತನ್ನನ್ನು ಮೀರಿಸುವುದರಿಂದ ಅವುಗಳನ್ನು ಬಿಟ್ಟುಕೊಡಬೇಕು, ಜರ್ಮನಿಯ ಪಾದ್ರಿಗಳನ್ನು ತೆರಿಗೆಗಳಿಂದ ಪೂರ್ತಿ ವಿಮುಕ್ತರನ್ನಾಗಿ ಮಾಡಬೇಕು. ಇವೇ ಈ ಷರತ್ತುಗಳು. ಫ್ರೆಡರಿಕ್ ಈ ಷರತ್ತುಗಳಿಗೆ ಒಪ್ಪಿಕೊಂಡನು; ಅವುಗಳನ್ನು ನಡೆಸುವ ಉದ್ದೇಶವೇನೂ ಅವನಿಗಿರಲಿಲ್ಲ. ಆಗಲೇ ಪೋಪ್ ಫ್ರೆಂಚ್‌ದೊರೆ ತನ್ನ ಪ್ರಜೆಗಳ ಮೇಲೆ ಯುದ್ಧ–ವಾಲ್ಡೆನ್ಸರ ಮೇಲೆ ನಡೆದ ಕ್ರೂರ ರಕ್ತಮಯ ಕ್ರೂಸೇಡು–ಮಾಡುವಂತೆ ಮಾಡಿದ್ದನು. ಜರ್ಮನಿಯಲ್ಲಿಯೂ ಫ್ರೆಡರಿಕ್ ಹೀಗೆಯೇ

ಮಾಡಲಿ ಎಂದು ಪೋಪನ ಆಸೆಯಾಗಿತ್ತು. ಪೋಪನ ದ್ವೇಷವನ್ನು ಗಳಿಸಿದ ಸರಳ ಮನಸ್ಸಿನ ಆ ಧರ್ಮನಿಷ್ಠರಿಗಿಂತ ಫ್ರೆಡರಿಕನೇ ಹೆಚ್ಚಿನ ಪಾಷಂಡಿಯಾಗಿದ್ದುದರಿಂದ ಇವನಿಗೆ ಕ್ರೂಸೇಡ್ ಪ್ರವೃತ್ತಿಯಿರಲೇ ಇಲ್ಲ. ಮುಂದೆ ಮುಸಲ್ಮಾನರ ಮೇಲೆ ಕ್ರೂಸೇಡ್ ನಡೆಸಿ ಜೆರೂಸಲೆಮ್ಮನ್ನು ಪುನಃ ಗಳಿಸಬೇಕೆಂದು ಪೋಪ್ ಇವನನ್ನು ಒತ್ತಾಯ ಪಡಿಸಿದಾಗಲೂ ಇವನು ಅಷ್ಟೇ ಬೇಗ ಮಾತುಕೊಟ್ಟು ಅಷ್ಟೇ ನಿಧಾನ ವಾಗಿ ಅದನ್ನು ನಡೆಸುವುದಕ್ಕೆ ಮನಸ್ಸುಕೊಟ್ಟನು.

ಚಕ್ರವರ್ತಿಯ ಸ್ಥಾನ ಭದ್ರವಾಗುತ್ತಲೂ ಇವನು ಜರ್ಮನಿಗಿಂತ ತನಗೆ ಪ್ರಿಯವಾಗಿದ್ದ ಸಿಸಿಲಿಯಲ್ಲಿಯೇ ನಿಂತು ಬಿಟ್ಟನು ಮತ್ತು ಮೂರನೇ ಇನ್ನೊಸೆಂಟನಿಗೆ ಕೊಟ್ಟ ವಚನಗಳು ಯಾವುದನ್ನೂ ಪಾಲಿಸಲು ಹೋಗಲಿಲ್ಲ. ಇನ್ನೊಸೆಂಟ್ ಕ್ರಿ.ಶ. 1216ರಲ್ಲಿ ತನ್ನ ಆಕಾಂಕ್ಷೆಗಳೇನೂ ಫಲಿಸದೆ ಮರಣ ಹೊಂದಿದನು.

ಇನ್ನೊಸೆಂಟನ ಅನಂತರ ಬಂದ ಮೂರನೆಯ ಹಾನೊರಿಯಸ್ಸನಿಗೂ ಫ್ರೆಡರಿಕ ನನ್ನು ಏನೂ ಮಾಡಲಾಗಲಿಲ್ಲ. ಕ್ರಿ.ಶ. 1227ರಲ್ಲಿ ಪೋಪನಾದ 9ನೇ ಗ್ರೆಗರಿ ಎಷ್ಟೇ ತೊಂದರೆಯಾಗಲಿ ಈ ಮನುಷ್ಯನೊಡನೆ ಲೆಕ್ಕಾಚಾರಗಳನ್ನು ತೀರಿಸಲೇಬೇಕೆಂದು ನಿರ್ಧರಿಸಿದಂತೆ ಕಾಣುತ್ತದೆ. ಫ್ರೆಡರಿಕನಿಗೆ ಇವನು ಬಹಿಷ್ಕಾರ ಹಾಕಿದನು. ಧಾರ್ಮಿಕ ವಿಧಿಗಳೆಲ್ಲವನ್ನೂ ಅವನಿಗೆ ತಪ್ಪಿಸಲಾಯಿತು. ಅರ್ಧಕ್ಕರ್ಧ ಅರಬ್ ಪ್ರಭಾವವಿದ್ದ ಸಿಸಿಲಿಯ ಅರಮನೆಯಲ್ಲಿ ಫ್ರೆಡರಿಕನಿಗೆ ಇದರಿಂದ ಏನೂ ತೊಂದರೆಯಾಗಲಿಲ್ಲ. ಪೋಪ್ ಚಕ್ರವರ್ತಿಗೆ ಒಂದು ಬಹಿರಂಗ ಪತ್ರ ಬರೆದನು. ಇದರಲ್ಲಿ ಫ್ರೆಡರಿಕನ ದುಷ್ಕೃಟಿಗಳು (ಇವುಗಳ ವಿಷಯದಲ್ಲಿ ಚರ್ಚೆಗೆ ಅವಕಾಶವೇ ಇರಲಿಲ್ಲ)—ಅವನ ಧರ್ಮದೂಷಣೆಯ ಮಾತುಗಳು ಮತ್ತು ಒಟ್ಟಿನಲ್ಲಿ ಅವನ ಅಯೋಗ್ಯ ನಡತೆಗಳನ್ನು ಪಟ್ಟಿಮಾಡ ಲಾಗಿತ್ತು. ಈ ಪತ್ರಕ್ಕೆ ಉತ್ತರವಾಗಿ ಫ್ರೆಡರಿಕ್ ಅತೀವ ದಕ್ಷತೆಯಿಂದ ಒಂದು ಪತ್ರ ವನ್ನು ತಯಾರಿಸಿದನು. ಈ ಪತ್ರವನ್ನು ಯುರೋಪಿನ ಎಲ್ಲ ದೊರೆಗಳನ್ನು ಉದ್ದೇಶಿಸಿ ಬರೆಯಲಾಗಿತ್ತು. ಪೋಪ್ ಮತ್ತು ರಾಜರ ನಡುವಿನ ವಿವಾದಾಂಶಗಳ ಬಗ್ಗೆ ಇದು ಮೊಟ್ಟಮೊದಲ ಸ್ಪಷ್ಟಹೇಳಿಕೆಯಾಗಿತ್ತು. ಪೋಪ್‌ಗಳಲ್ಲಿ ಕಂಡು ಬರುತ್ತಿದ್ದ ಯೂರೋಪಿನ ನಿರಂಕುಶ ಸ್ವಾಮಿಯಾಗಬೇಕೆಂಬ ಮಹದಾಕಾಂಕ್ಷೆಯ ಮೇಲೆ ಇವನು ಬಲವಾದ ಪೆಟ್ಟುಕೊಟ್ಟನು. ಈ ರೀತಿಯ ಪ್ರಭುತ್ವ ಹರಣಕ್ಕೆದುರಾಗಿ ರಾಜ ರೆಲ್ಲರೂ ಒಟ್ಟುಗೂಡಬೇಕೆಂದು ಸೂಚಿಸಿದನು. ಕ್ರೈಸ್ತ ಸಂಘದ ಐಶ್ವರ್ಯದ ಕಡೆ ಉದ್ದೇಶ ಪೂರ್ವಕವಾಗಿಯೇ ದೊರೆಗಳ ಗಮನವನ್ನು ತಿರುಗಿಸಿದನು.

ಈ ಹಾನಿಕಾರಕ ಅಸ್ತ್ರಪ್ರಯೋಗ ಮಾಡಿದ ಬಳಿಕ ಹನ್ನೆರಡು ವರ್ಷಗಳ ಹಿಂದೆ ತಾನು ಕೊಟ್ಟಿದ್ದ ಭಾಷೆಯನ್ನು ಸಲ್ಲಿಸಲು ಫ್ರೆಡರಿಕ್ ಕ್ರೂಸೇಡಿಗೆ ಹೋಗಲು ನಿರ್ಧರಿ ಸಿದನು. ಇದೇ ಆರನೆಯ ಕ್ರೂಸೇಡು (ಕ್ರಿ.ಶ. 1228) ಕ್ರೂಸೇಡು ಎಂದು ಇದನ್ನು ಪರಿಶೀಲಿಸಿದರೆ ನಗು ಬರುತ್ತದೆ. ಎರಡನೇ ಫ್ರೆಡರಿಕ್ ಈಜಿಪ್ಟಿಗೆ ಹೋಗಿ ಅಲ್ಲಿ ಸುಲ್ತಾನನನ್ನು ಕಂಡು ಚರ್ಚೆ ನಡೆಸಿದನು. ಸಿದ್ಧಾಂತಗಳಲ್ಲಿ ನಂಬಿಕೆಯಿಲ್ಲದಿದ್ದ ಈ

ಇಬ್ಬರು ಮಹಾಶಯರು ಹಿತಕರವಾಗಿ ಮಾತುಕತೆಯಾಡಿಕೊಂಡು ಇಬ್ಬರಿಗೂ ಪರಸ್ಪರ ಅನುಕೂಲವಾಗುವಂತೆ ವ್ಯಾವಹಾರಿಕ ಒಪ್ಪಂದ ಮಾಡಿಕೊಂಡು ಜೆರೂಸಲೆಂ ಫ್ರೆಡರಿಕನ ಕೈಗೆ ಬರಬೇಕೆಂದು ಒಪ್ಪಿಕೊಂಡರು. ಇದೊಂದು ಹೊಸ ಮಾದರಿ ಕ್ರೂಸೇಡು—ಖಾಸಗಿ ಒಪ್ಪಂದದಿಂದ ಆದ ಕ್ರೂಸೇಡು, ವಿಜಯಿಗಳ ಮೇಲೆ ರಕ್ತದ ಸಿಡಿತ, ಆನಂದೋದ್ರೇಕದಿಂದ ಅಳುವುದು, ಇದೆಲ್ಲ ಅಲ್ಲಿರಲಿಲ್ಲ. ಈ ಆಶ್ಚರ್ಯಕಾರಕ ಕ್ರೂಸೇಡ್‌ಕಾರ ಬಹಿಷ್ಕೃತ ವ್ಯಕ್ತಿಯಾಗಿದ್ದುದರಿಂದ ಅವನು ಜೆರೂಸಲೆಮ್ಮಿನ ದೊರೆಯಿಂದ ಶುದ್ಧ ವ್ಯಾವಹಾರಿಕ ಕಿರೀಟ ಧಾರಣೆಯಲ್ಲೇ ತೃಪ್ತನಾಗಬೇಕಾಯಿತು. ದೇವಪೀಠದಿಂದ ಕಿರೀಟವನ್ನು ಇವನು ತಾನೇ ತೆಗೆದುಕೊಂಡು ಇಟ್ಟುಕೊಳ್ಳಬೇಕಾಯಿತು. ಏಕೆಂದರೆ ಎಲ್ಲ ಪಾದ್ರಿಗಳೂ ಇವನನ್ನು ದೂರವಿಟ್ಟಿರಬೇಕಾಗಿತ್ತು. ಬಳಿಕ ಇವನು ಇಟಲಿಗೆ ಹಿಂದಿರುಗಿ ತನ್ನ ಪ್ರದೇಶಗಳನ್ನು ಆಕ್ರಮಿಸಿದ ಪೋಪನ ಸೈನ್ಯಗಳನ್ನು ಅವರ ಸ್ಥಳಗಳಿಗೆ ಹಿಂದಕ್ಕೆ ಓಡಿಸಿ ಪೋಪ್ ತನ್ನನ್ನು ಬಹಿಷ್ಕಾರದಿಂದ ವಿಮುಕ್ತಮಾಡುವಂತೆ ನಿರ್ಬಂಧಕ್ಕೊಳಗುಮಾಡಿದನು. ಹದಿಮೂರನೇ ಶತಮಾನದಲ್ಲಿ ರಾಜನೊಬ್ಬ ಪೋಪನೊಡನೆ ಈ ರೀತಿ ನಡೆದುಕೊಳ್ಳಲು ಸಾಧ್ಯವಿತ್ತು. ಆ ರಾಜನ ಮೇಲೆ ಸೇಡು ತೀರಿಸಿಕೊಳ್ಳಲು ಸಾಮಾನ್ಯ ಜನತೆಯ ರೋಷದ ಬಿರುಗಾಳಿ ಏಳುವಂತಿರಲಿಲ್ಲ. ಆ ದಿನಗಳು ಕಳೆದು ಹೋಗಿದ್ದುವು.

ಕ್ರಿ. ಶ. 1239ರಲ್ಲಿ ಒಂಬತ್ತನೆಯ ಗ್ರೆಗರಿ ಫ್ರೆಡರಿಕನೊಡನೆ ತನ್ನ ಕಾದಾಟವನ್ನು ತಿರುಗಿ ಪ್ರಾರಂಭಿಸಿ ಎರಡನೇ ಸಲ ಅವನಿಗೆ ಬಹಿಷ್ಕಾರ ಹಾಕಿದನು. ತಿರುಗಿ ಬಹಿರಂಗ ದೂಷಣೆಯ ಮೂಲಕ ಜಗಳ ಪ್ರಾರಂಭವಾಯಿತು. ಇಂತಹ ಕಾದಾಟದಲ್ಲಿ ಪೋಪ್ ಪ್ರಭುತ್ವ ಒಂದು ಸಲ ಚೆನ್ನಾಗಿ ಪೆಟ್ಟು ತಿಂದಿತ್ತು. ಒಂಬತ್ತನೇ ಗ್ರೆಗರಿ ಸತ್ತ ಮೇಲೆ ಈ ವಿವಾದ ತಿರುಗಿ ಮೇಲೆದ್ದಿತು. ನಾಲ್ಕನೇ ಇನ್ನೊಸೆಂಟ್ ಪೋಪ್ ಆದನು. ಎಂದೆಂದಿಗೂ ಮರೆಯಲಾಗದ ಆಘಾತಕಾರಿ ಪತ್ರವನ್ನು ಫ್ರೆಡರಿಕ್ ಚರ್ಚಿನ ವಿರುದ್ಧವಾಗಿ ಬರೆದನು. ಪಾದ್ರಿಗಳ ಅಹಂಕಾರ ಮತ್ತು ಅಧರ್ಮವನ್ನು ಹಳಿದು ಆ ಕಾಲದ ದುರವಸ್ಥೆಗಳಿಗೆಲ್ಲಾ ಅವರ ಅಹಂಕಾರ ಮತ್ತು ಐಶ್ವರ್ಯಗಳೇ ಕಾರಣಗಳೆಂದು ತಿಳಿಸಿ ಕ್ರೈಸ್ತ ಸಂಘದ ಆಸ್ತಿಯನ್ನೆಲ್ಲಾ ಸಾರ್ವತ್ರಿಕವಾಗಿ ಮುಟ್ಟುಗೋಲು ಹಾಕಿಕೊಳ್ಳಬೇಕೆಂದು ತನ್ನ ಜೊತೆಗಾರರಾದ ರಾಜರುಗಳಿಗೆ ಸಲಹೆ ಮಾಡಿದನು. ಆಗಿನಿಂದ ಮುಂದೆ ಎಂದೆಂದಿಗೂ ಯುರೋಪಿನ ರಾಜರ ಭಾವನೆಗಳಲ್ಲಿ ಈ ಸಲಹೆ ಗಟ್ಟಿಯಾಗಿ ನೆಲಸಿತು.

ಅವನ ಕಡೆಗಾಲದ ವಿಷಯವಾಗಿ ಇಲ್ಲಿ ಏನನ್ನೂ ಹೇಳುವುದಿಲ್ಲ. ಅವನ ಸಮಗ್ರ ಜೀವನದಿಂದ ಸಿಗುವ ನೈತಿಕ, ಮಾನಸಿಕ ಚಿತ್ರದಷ್ಟು ಈ ಕಡೆಗಾಲದ ಘಟನೆಗಳು ಅರ್ಥಪೂರ್ಣವಲ್ಲ. ಸಿಸಿಲಿಯ ಅವನ ಆಸ್ಥಾನದ ಜೀವನದ ಅಂಶಗಳನ್ನು ಒಟ್ಟುಗೂಡಿಸಿಕೊಳ್ಳಲು ಸಾಧ್ಯವಿದೆ. ಅವನು ಬಹಳ ಸುಖಕರ ಜೀವನ ನಡೆಸುತ್ತಿದ್ದು ಸುಂದರ ವಸ್ತುಗಳನ್ನು ಇಷ್ಟಪಡುತ್ತಿದ್ದನು. ಅವನು ಸ್ವೇಚ್ಛಾಚಾರಿಯಾಗಿದ್ದನೆಂದು

ಹೇಳುತ್ತಾರೆ. ಆದರೆ ಇವನಲ್ಲಿ ಅತ್ಯಂತ ಫಲಪ್ರದ ಕುತೂಹಲ ಮತ್ತು ಸಂಶೋಧಕ ಪ್ರವೃತ್ತಿಗಳಿದ್ದುವು. ಯಹೂದಿ, ಮುಸ್ಲಿಮ್ ಮತ್ತು ಕ್ರೈಸ್ತ ತಾತ್ವಿಕರನ್ನು ಇವನು ಕಲೆ ಹಾಕಿದ್ದನು. ಸಾರಸೆನ್ನರ ಪ್ರಭಾವದಿಂದ ಇಟಲಿಯ ಪ್ರಜ್ಞೆ ಫಲವತ್ತಾಗುವಂತೆ ಮಾಡಿದನು. ಕ್ರೈಸ್ತ ವಿದ್ಯಾರ್ಥಿಗಳಿಗೆ ಅರಬ್ಬಿ ಸಂಖ್ಯೆಗಳು ಮತ್ತು ಬೀಜ ಗಣಿತಗಳು ಮೊದಲು ತಿಳಿಯ ಬಂದಿದ್ದು ಇವನಿಂದಲೇ. ಅರಿಸ್ಟಾಟಲನ ಬರೆವಣಿಗೆಗಳ ಕೆಲವು ಭಾಗಗಳನ್ನೂ ಅದರ ಮೇಲೆ ಕಾರ್ಡೋಬಾದ ಮಹಾನ್ ಅರಬ್ ತತ್ತ್ವ ಜ್ಞಾನಿ ಅವೆರೊ ಬರೆದ ವ್ಯಾಖ್ಯಾನಗಳನ್ನೂ ಭಾಷಾಂತರಿಸಿದ ಮೈಕೇಲ್ ಸ್ಕಾಟ್ ಇವನ ಆಸ್ಥಾನದ ತತ್ತ್ವಜ್ಞಾನಿಗಳಲ್ಲೊಬ್ಬ. ಕ್ರಿ.ಶ. 1224ರಲ್ಲಿ ಫ್ರೆಡರಿಕ್ ನೇಪಲ್ಸ್ ವಿಶ್ವವಿದ್ಯಾಲಯವನ್ನು ಸ್ಥಾಪಿಸಿದನು. ಸಾಲೆರ್ನೊವಿನ ಪ್ರಖ್ಯಾತ ವೈದ್ಯಶಾಲೆಯನ್ನು ವಿಸ್ತರಿಸಿ ಅಭಿವೃದ್ಧಿ ಮಾಡಿದನು. ಒಂದು ಮೃಗಶಾಲೆಯನ್ನೂ ಸ್ಥಾಪಿಸಿದನು. "ಗಿಡುಗ ಬೇಟೆ"ಯ (Hawking) ವಿಷಯವಾಗಿ ಇವನದೊಂದು ಗ್ರಂಥವಿದೆ. ಇದನ್ನು ನೋಡಿದರೆ ಹಕ್ಕಿಗಳ ಪ್ರವೃತ್ತಿಗಳನ್ನು ಇವನು ತುಂಬ ಚೆನ್ನಾಗಿ ಅಭ್ಯಸಿಸಿದ್ದನೆಂದು ತಿಳಿಯುತ್ತದೆ. ಇಟ್ಯಾಲಿಯನ್ ಭಾಷೆಯಲ್ಲಿ ಮೊದಲು ಕವನ ಬರೆದವರಲ್ಲಿ ಇವನೂ ಒಬ್ಬ. ಇಟ್ಯಾಲಿಯನ್ ಕವಿತೆ ಹುಟ್ಟಿದ್ದು ನಿಜವಾಗಿ ಇವನ ಆಸ್ಥಾನದಲ್ಲಿ. ಶಕ್ತರಾದ ಲೇಖಕರೊಬ್ಬರು ಇವನನ್ನು "ಆಧುನಿಕರಲ್ಲಿ ಮೊದಲಿಗ"ನೆಂದು ಕರೆದಿದ್ದಾರೆ. ಈ ಹೇಳಿಕೆ ಇವನ ಬೌದ್ಧಿಕ ವ್ಯಕ್ತಿತ್ವದ ಪೂರ್ವಗ್ರಹರಹಿತ ವಿಚಾರ ಸ್ವಾತಂತ್ರ್ಯವನ್ನು ಚೆನ್ನಾಗಿ ಸ್ಪಷ್ಟಪಡಿಸುತ್ತದೆ.

ಪೋಪ್ ಪದವಿಗೆ ಆಧಾರವಾಗಿದ್ದ ಜೀವಂತಶಕ್ತಿಗಳು ನಶಿಸುತ್ತಾ ಇದ್ದುದಕ್ಕೆ ಇನ್ನೂ ಬಲವಾದ ಸೂಚನೆ ಪ್ರಬಲರಾಗುತ್ತಿದ್ದ ಫ್ರೆಂಚ್ ರಾಜರೊಂದಿಗೆ ಅಷ್ಟರಲ್ಲೇ ಪೋಪ್‌ಗಳು ಘರ್ಷಿಸಿದಾಗ ಚೆನ್ನಾಗಿ ಕಾಣಿಸಿಕೊಂಡಿತು. ಎರಡನೇ ಫ್ರೆಡರಿಕನ ಜೀವಮಾನದಲ್ಲಿ ಜರ್ಮನಿ ಒಡೆದು ಹೋಯಿತು. ಅದುವರೆಗೆ ಹೋಹೆನ್‌ಸ್ಟಾಫೆನ್ ಚಕ್ರವರ್ತಿಗಳು ನಿರ್ವಹಿಸುತ್ತಿದ್ದ ಪೋಪ್‌ನ ರಕ್ಷಕ, ಬೆಂಬಲಿಗ, ಮತ್ತು ಪ್ರತಿದ್ವಂದ್ವಿಗಳ ಪಾತ್ರ ಫ್ರೆಂಚ್ ದೊರೆಗೆ ಬಂತು. ಹಲವಾರು ಪೋಪ್‌ಗಳು ಫ್ರೆಂಚ್ ದೊರೆಗಳಿಗೆ ಬೆಂಬಲಕೊಡುವುದನ್ನು ತಮ್ಮ ಕಾರ್ಯನೀತಿಯನ್ನಾಗಿ ಮಾಡಿಕೊಂಡರು. ರೋಮಿನ ಉತ್ತೇಜನ ಮತ್ತು ಒಪ್ಪಿಗೆಗಳಿಂದ ಫ್ರೆಂಚ್‌ರಾಜರನ್ನು ಸಿಸಿಲಿ ಮತ್ತು ನೇಪಲ್ಸ್‌ಗಳಲ್ಲಿ ಸ್ಥಾಪಿಸಲಾಯಿತು. ಷಾರ್ಲಮೇನನ ಸಾಮ್ರಾಜ್ಯವನ್ನು ಪುನಃ ಸ್ಥಾಪಿಸಿ ಆಳಬಹುದು ಎಂಬ ಸಾಧ್ಯತೆ ಫ್ರೆಂಚ್‌ದೊರೆಗಳಿಗೆ ಕಾಣಿಸಿಕೊಂಡಿತು. ಕಡೆಯ ಹೋಹೆನ್‌ಸ್ಟಾಫೆನ್ ಆದ ಎರಡನೇ ಫ್ರೆಡರಿಕನ ಮರಣಾನಂತರ ಜರ್ಮನಿಯಲ್ಲಿ ಉತ್ತರಾಧಿಕಾರಿಯಿಲ್ಲದೆ ರಾಜನಿಲ್ಲದ ಕಾಲಕಳೆದು ಹಾಪ್ಸ್‌ಬರ್ಗಿನ ರುಡಾಲ್ಫ್ ಮೊದಲನೆ ಹಾಪ್ಸ್‌ಬರ್ಗ್ ಚಕ್ರವರ್ತಿಯಾಗಿ ಆರಿಸಿ ಬರುತ್ತಲೂ (ಕ್ರಿ.ಶ. 1273) ರೋಮಿನ ಕಾರ್ಯನೀತಿ ತಿರುಗಿ ಅನಿಶ್ಚಿತವಾಗಿ ಪ್ರತಿಯೊಬ್ಬ ಪೋಪಿನ ಮನಸ್ಸನ್ನು ಅವಲಂಬಿಸಿ ಫ್ರಾನ್ಸ್ ಮತ್ತು ಜರ್ಮನಿಗಳ ನಡುವೆ ಉಯ್ಯಾಲೆ ಆಡಲು

ಮೊದಲಾಯಿತು. ಕ್ರಿ.ಶ. 1261ರಲ್ಲಿ ಪೂರ್ವದಿಕ್ಕಿನಲ್ಲಿ ಗ್ರೀಕರು ಕಾನ್‌ಸ್ಟಂಟಿನೋಪಲ್ಲನ್ನು ಲ್ಯಾಟಿನ್ ಚಕ್ರವರ್ತಿಗಳಿಂದ ಪುನರ್ವಶ ಪಡಿಸಿಕೊಂಡರು. ಈ ಗ್ರೀಕ್ ಸಂತತಿಯ ಸ್ಥಾಪಕ ಮೈಕೇಲ್ ಪಾಲಿಯೋ ಲೋಗಸ್, ಅಂದರೆ ಎಂಟನೇ ಮೈಕೇಲ್, ಪೋಪ್‌ನೊಡನೆ ರಾಜಿಯಾಗಲು ತಾತ್ಕಾಲಿಕವಾಗಿ ಅಷ್ಟು ಕಾರ್ಯ ಸಾಧ್ಯವಲ್ಲದ ಪ್ರಯತ್ನಗಳನ್ನು ನಡೆಸಿ ಕಡೆಗೆ ರೋಮಿನ ಪ್ರಭುಭೋಜನ ಸಂಸ್ಕಾರವನ್ನು ಪೂರ್ತಿಯಾಗಿ ತೊರೆದು ಬಿಟ್ಟನು. ಇದರೊಂದಿಗೆ ಮತ್ತು ಏಷ್ಯದ ಲ್ಯಾಟಿನ್ ರಾಜ್ಯಗಳ ಅವನತಿಗಳೊಂದಿಗೆ ಪೂರ್ವದಿಕ್ಕಿನಲ್ಲಿ ಪೋಪ್‌ಗಳ ಪ್ರಾಬಲ್ಯ ಕೊನೆಯಾಯಿತು.

ಕ್ರಿ.ಶ. 1294 ರಲ್ಲಿ ಬಾನಿಫೇಸ್ ಪೋಪನಾದನು. ಇಟಲಿಯವನಾದ ಇವನಲ್ಲಿ ಫ್ರೆಂಚರ ಮೇಲೆ ದ್ವೇಷವೂ, ರೋಮ್ ಮಹತ್ಸಂಪ್ರದಾಯವುಳ್ಳ ದೈವ ನಿಯಮಿತ ಸಂಸ್ಥೆಯೆಂಬ ಭಾವನೆಗಳೂ ತುಂಬಿದ್ದುವು. ಕೆಲಕಾಲ ಇವನು ಅತ್ಯಂತ ದರ್ಪದಿಂದ ನಡೆದುಕೊಂಡು ಕ್ರಿ.ಶ. 1300ರಲ್ಲಿ ಒಂದು ಉತ್ಸವ ನಡೆಸಿದನು. ಇದಕ್ಕೆ ಅಪಾರ ಸಂಖ್ಯೆಯಲ್ಲಿ ಯಾಂತ್ರಿಕರು ರೋಮಿಗೆ ಬಂದು ಸೇರಿದರು. “ಪೋಪ್‌ನ ಖಜಾನೆಗೆ ಅದೆಷ್ಟು ಹಣ ಬಂತೆಂದರೆ ಸೇಂಟ್ ಪೀಟರನ ಸಮಾಧಿಯ ಬಳಿ ಜನರು ಇಡುತ್ತಿದ್ದ ಕಾಣಿಕೆಗಳನ್ನು ಇಬ್ಬರು ಕುಂಟೆಗಳಿಂದ ಎಳೆದು ಎಳೆದು ಸಂಗ್ರಹಿಸಬೇಕಾಯಿತು.”* ಆದರೆ ಈ ಉತ್ಸವ ತಂದ ವಿಜಯೀ ಭಾವನೆ ಭ್ರಾಂತಿಕಾರಕವಾಗಿತ್ತು. ಕ್ರಿ.ಶ. 1302ರಲ್ಲಿ ಬಾನಿಫೇಸ್ ಮತ್ತು ಫ್ರೆಂಚ್ ದೊರೆಗಳಲ್ಲಿ ವಿವಾದ ಹುಟ್ಟಿತು. ಆ ದೊರೆಯ ಮೇಲೆ ಬಹಿಷ್ಕಾರ ಘೋಷಿಸಬೇಕೆಂದಿರುವಷ್ಟರಲ್ಲೇ ಪೋಪನೇ ಅನಾಗ್ನಿಯ ತನ್ನ ಪುರಾತನ ಅರಮನೆಯಲ್ಲಿ ಗಿಲಾಮ್ ದ ನೊಗಾರೆತ್ (Guillame da Nogaret) ನಿಂದ ಇದಕ್ಕಿದ್ದಂತೆ ಬಂಧಿತನಾದನು. ಫ್ರೆಂಚ್ ರಾಜನ ಕಾರ್ಯಭಾರಿಯಾದ ಇವನು ಪೋಪ್‌ನ ಅರಮನೆಯೊಳಗೆ ಬಲಾತ್ಕಾರದಿಂದ ನುಗ್ಗಿ ಮಲಗುವ ಮನೆಯಲ್ಲಿ ಭಯದಿಂದ ಶಿಲುಬೆ ಹಿಡಿದು ಮಲಗಿದ್ದ ಪೋಪನ ಹತ್ತಿರ ಹೋಗಿ ಅವನನ್ನು ಬೆದರಿಸಿ ಬೈಗಳ ಸುರಿಮಳೆ ಸುರಿಸಿದನು. ಒಂದೆರಡು ದಿನಗಳಾದ ಮೇಲೆ ಊರಿನ ಜನರು ಪೋಪನನ್ನು ಬಂಧನದಿಂದ ಬಿಡಿಸಿದರು. ಪೋಪ್ ರೋಮಿಗೆ ಹಿಂದಿರುಗಿದನು. ಅಲ್ಲಿ ತಿರುಗಿ ಅವನನ್ನು ಹಿಡಿದು ಆರ್ಸಿನಿವಂಶದ ಜನರು ಬಂಧಿಯನ್ನಾಗಿ ಮಾಡಿದರು. ಆಘಾತದಿಂದ ನಿರಾಶನಾದ ಪೋಪ್ ಕೆಲವು ವಾರಗಳಿಯುವಷ್ಟರಲ್ಲೇ ಅವರ ಕೈಕೆಳಗೆ ಬಂದಿಯಾಗಿಯೇ ತೀರಿಕೊಂಡನು.

ಪೋಪ್ ಮೊದಲ ಸಲ ಒಟಾಟಕ್ಕೆ ಒಳಗಾದಾಗ ಅನಾಗ್ನಿಯ ಜನರು ಅಸಮಾಧಾನ ಪಟ್ಟು ಕೆರಳಿ ನೊಗಾರೆತನ ಮೇಲೆ ಬಿದ್ದು 'ಬಾನಿಫೇಸನನ್ನು ಬಿಡಿಸಿದರು. ಆದರೆ ಅನಾಗ್ನಿ ಪೋಪನ ಹುಟ್ಟೂರು. ಕ್ರೈಸ್ತ ಪ್ರಪಂಚದ ಮುಖ್ಯಸ್ಥನನ್ನು ಈ ರೀತಿ ಒರಟಾಗಿ ನಡೆಸಿಕೊಂಡ ಫ್ರೆಂಚ್ ದೊರೆಗೆ ಇದರಲ್ಲಿ ಅವನ ಪ್ರಜೆಗಳ ಪೂರ್ಣ

---

* ಜೆ.ಎಚ್. ರಾಬಿನ್‌ಸನ್.

ಸಮ್ಮತಿ ಇದ್ದಿತೆಂಬುದು ಇಲ್ಲಿ ಮುಖ್ಯವಾಗಿ ಗಮನಿಸಬೇಕಾದ ಸಂಗತಿ; ಫ್ರಾನ್ಸಿನ ಮೂರೂ ವರ್ಗಗಳ (ಶ್ರೀಮಂತರು, ಕ್ರೈಸ್ತ ಸಂಘದವರು, ಮತ್ತು ಸಾಮಾನ್ಯರು) ಒಂದು ಸಭೆಯನ್ನು ಕರೆದು ಅವರೆಲ್ಲರ ಒಪ್ಪಿಗೆ ಪಡೆದು ಬಳಿಕವೇ ಈ ರೀತಿ ಕಟ್ಟ ಕಡೆಯ ಹೆಜ್ಜೆಯನ್ನು ಫ್ರಾನ್ಸಿನ ದೊರೆ ಇಟ್ಟದ್ದು. ಹೀಗೆ ತಮ್ಮ ಉತ್ತಮೋತ್ತಮ ಗುರುವನ್ನು ಇಷ್ಟ ಬಂದಂತೆ ನಡೆಸಿಕೊಂಡಾಗಲೂ ಇಟಲಿ, ಜರ್ಮನಿ, ಇಂಗ್ಲೆಂಡ್ ಎಲ್ಲಿಯೂ ಸಾಮಾನ್ಯವಾಗಿ ಸ್ವಲ್ಪ ಕೂಡ ಅಸಮಾಧಾನ ತೋರಿ ಬರಲಿಲ್ಲ. ಕ್ರೈಸ್ತತ್ವದ ಭಾವನೆ ಅದೆಷ್ಟು ನಶಿಸಿ ಹೋಗಿತ್ತೆಂದರೆ ಮಾನವರ ಮೇಲೆ ಅದರ ಶಕ್ತಿ ಏನೇನೂ ಉಳಿದಿರಲಿಲ್ಲ.

ಹದಿನಾಲ್ಕನೆಯ ಶತಮಾನದುದ್ದಕ್ಕೂ ಪೋಪ್ ಪದವಿ ತನ್ನ ನೈತಿಕ ಪ್ರಭಾವ ವನ್ನು ಪುನಃ ಸಂಪಾದಿಸಿಕೊಳ್ಳಲು ಏನೂ ಪ್ರಯತ್ನ ಮಾಡಲಿಲ್ಲ. ಬಾನಿಫೇಸನ ನಂತರ ಪೋಪ್ ಆಗಿ ಚುನಾಯಿತನಾದ ಐದನೆಯ ಕ್ಲೆಮೆಂಟ್ ಫ್ರಾನ್ಸಿನವನು. ಇದು ಫ್ರಾನ್ಸಿನ ರಾಜ ಫಿಲಿಪ್ಪನ ಆಯ್ಕೆ. ಈ ಪೋಪ್ ರೋಮಿಗೆ ಬರಲೇ ಇಲ್ಲ. ಅವಿನ್ಯನ್ ಪಟ್ಟಣದಲ್ಲಿ ತನ್ನ ಆಸ್ಥಾನವನ್ನು ಸ್ಥಾಪಿಸಿದನು. ಈ ಪ್ರದೇಶ ಫ್ರೆಂಚ್ ಪ್ರದೇಶದಿಂದ ಸುತ್ತುವರಿಯಲ್ಪಟ್ಟಿದ್ದರೂ ಪೋಪನ ಸ್ವಾಧೀನದಲ್ಲಿದ್ದ ಆಸ್ತಿ. ಇವನ ಉತ್ತರಾಧಿಕಾರಿಗಳು ಕ್ರಿ.ಶ. 1377ರವರೆಗೆ ಇಲ್ಲಿಯೇ ಉಳಿದರು. ಕ್ರಿ.ಶ. 1377ರಲ್ಲಿ ಪೋಪ್ ಹನ್ನೊಂದನೇ ಗ್ರೆಗರಿ ರೋಮಿನ ವ್ಯಾಟಿಕನ್ ಅರಮನೆಗೆ ಹಿಂದಿರುಗಿದನು. ಆದರೆ ಇದಕ್ಕೆ ಕ್ರೈಸ್ತ ಸಂಘದ ಎಲ್ಲರದ್ದು ಬೆಂಬಲವಿರಲಿಲ್ಲ. ಕಾರ್ಡಿನಲ್‌ಗಳಲ್ಲಿ ಬಹುಮಂದಿ ಫ್ರೆಂಚ್‌ಮೂಲದವರಾಗಿದ್ದು ಅವರ ಅಭ್ಯಾಸಗಳು, ಸಂಬಂಧಗಳು ಎಲ್ಲಕ್ಕೂ ಅವಿನ್ಯನ್ ಪಟ್ಟಣದಲ್ಲಿ ಬಲವಾದ ಬೇರುಗಳಿದ್ದುವು. ಕ್ರಿ.ಶ. 1378ರಲ್ಲಿ ಹನ್ನೊಂದನೇ ಗ್ರೆಗರಿ ಸ್ವರ್ಗಸ್ಥನಾಗಿ ಇಟಲಿಯ ಆರನೇ ಅರ್ಬನ್ ಆರಿಸಲ್ಪಡುತ್ತಲೂ ಅದನ್ನು ಒಪ್ಪದಿದ್ದ ಈ ಕಾರ್ಡಿನಲ್ಲುಗಳು ಆ ಚುನಾವಣೆ ಕ್ರಮಬದ್ಧವಲ್ಲವೆಂದು ಘೋಷಿಸಿ ಏಳನೇ ಕ್ಲೆಮೆಂಟ್ ಎಂಬಾತನನ್ನು ಮತ್ತೊಬ್ಬ ಪೋಪನನ್ನಾಗಿ ಆರಿಸಿದರು. ಇವನೇ ಪ್ರತಿ ಪೋಪ್. ಈ ಒಡೆತವನ್ನು "ಮಹಾ ವಿಭೇದ" ಎಂದು ಕರೆಯು ತ್ತಾರೆ. ಪೋಪ್‌ಗಳು ಫ್ರಾನ್ಸಿನಲ್ಲಿ ಉಳಿದು ಕೊಂಡರು. ಫ್ರಾನ್ಸಿನ ವಿರೋಧಿ ಗಳಾದ ಅಧಿಪತಿಗಳೆಲ್ಲರೂ– ಚಕ್ರವರ್ತಿ, ಇಂಗ್ಲೆಂಡ್, ಹಂಗೆರಿ, ಪೋಲೆಂಡ್ ಮತ್ತು ಉತ್ತರ ಯೂರೋಪಿನ ರಾಜರು– ಇವರಿಗೆ ವಿಧೇಯರಾಗಿದ್ದರು. ಪ್ರತಿಪೋಪ್‌ಗಳು ಅವಿನ್ಯನ್ನಿನಲ್ಲಿರುತ್ತಿದ್ದು ಇವರಿಗೆ ಫ್ರಾನ್ಸಿನ ರಾಜ, ಅವನ ಮಿತ್ರ ಸ್ಕಾಟ್ಲೆಂಡಿನರಾಜ ಸ್ಪೇನ್, ಪೋರ್ಚುಗಲ್ ಮತ್ತು ವಿವಿಧ ಜರ್ಮನ್ ದೊರೆಗಳು ಬೆಂಬಲಿಗರಾಗಿರು ತ್ತಿದ್ದರು. ಪ್ರತಿಯೊಬ್ಬ ಪೋಪನೂ ತನ್ನ ಎದುರಾಳಿ ಪೋಪನ ಅನುಯಾಯಿಗಳಿಗೆ ಬಹಿಷ್ಕಾರ ಹಾಕಿ ಶಾಪವಿಡುತ್ತಿದ್ದನು.

ಬಹುಬೇಗನೇ ಯೂರೋಪಿನಾದ್ಯಂತವೂ ಜನರು ಧಾರ್ಮಿಕ ವಿಷಯಗಳಲ್ಲಿ ತಮ್ಮಷ್ಟಕ್ಕೆ ತಾವೇ ಚಿಂತನೆ ಮಾಡತೊಡಗಿದ್ದರಲ್ಲಿ ಏನೂ ಆಶ್ಚರ್ಯವಿಲ್ಲಅಲ್ಲವೇ ?

ಕ್ರೈಸ್ತ ಪ್ರಪಂಚದಲ್ಲಿ ಆಗ ಅನೇಕ ನೂತನ ಪ್ರಭಾವಗಳು ಉದ್ಭವವಾಗುತ್ತಿದ್ದವು. ಕ್ರೈಸ್ತ ಸಂಘದ ವಿವೇಚನೆಗೆ ಅನುಗುಣವಾಗಿ ಇವು ಅದಕ್ಕೆ ಆಧಾರವಾಗಿರಬಹುದಾಗಿತ್ತು. ಅಥವಾ ಅದಕ್ಕೆ ವಿನಾಶಕರವಾಗಿ ಪರಿಣಮಿಸಬಹುದಾಗಿತ್ತು. ಫ್ರಾನ್ಸಿಸ್ಕನ್ನರು ಮತ್ತು ಡಾಮಿನಿಕನ್ನರು ಹೀಗೇ ಹುಟ್ಟಿಕೊಂಡಿದ್ದು ಎಂದು ಹಿಂದಿನ ಅಧ್ಯಾಯದಲ್ಲಿ ನೋಡಿದ್ದೇವೆ. ಫ್ರಾನ್ಸಿಸ್ಕನ್ನರ ಸಂದರ್ಭದಲ್ಲಿ ಮೊದಲು ಸ್ವಲ್ಪ ಹಿಂಸಾಚಾರ ನಡೆಸಿದರೂ ಈ ಎರಡೂ ಗುಂಪುಗಳನ್ನೂ ಕ್ರೈಸ್ತ ಸಂಘ ತನ್ನಲ್ಲಿ ವಿಲೀನಗೊಳಿಸಿ ಉಪಯೋಗಿಸಿಕೊಂಡಿತು. ಆದರೆ ಉಳಿದ ಇಂತಹ ಗುಂಪುಗಳು ಇವುಗಳಿಗಿಂತ ಸ್ಪಷ್ಟವಾಗಿಯೇ ಕ್ರೈಸ್ತ ಸಂಘಕ್ಕೆ ಅವಿಧೇಯವೂ ಅದನ್ನು ಟೀಕಿಸುವಂತಹುವೂ ಆಗಿದ್ದುವು. ಒಂದೂವರೆ ಶತಮಾನಗಳ ನಂತರ ವೈಕ್ಲಿಫ್ ಈ ರಂಗವನ್ನು ಪ್ರವೇಶಿಸಿದನು (ಕ್ರಿ.ಶ. 1320–84). ಇವನು ಆಕ್ಸ್‌ಫರ್ಡಿನ ಡಾಕ್ಟರೇಟ್ ಪಡೆದ ವಿದ್ವಾಂಸ. ತನ್ನ ಜೀವನದ ಬಹುಭಾಗ ಕಳೆದಮೇಲೆ ಇವನು ಪಾದ್ರಿಗಳ ಭ್ರಷ್ಟಾಚಾರಗಳು ಮತ್ತು ಕ್ರೈಸ್ತಸಂಘದ ಬುದ್ಧಿಗೇಡಿತನಗಳನ್ನು ಕುರಿತು ಯಾವ ಮುಚ್ಚು ಮರೆಯೂ ಇಲ್ಲದಂತೆ ಆಕ್ಷೇಪಣೆಗಳ ಸರಣಿಯನ್ನೇ ಹೊರಡಿಸಿದನು. ಬಡತನದಲ್ಲಿದ್ದ ಅನೇಕ ಪಾದ್ರಿಗಳನ್ನು ತನ್ನ ಅಭಿಪ್ರಾಯಗಳನ್ನು ಇಂಗ್ಲೆಂಡಿನಾದ್ಯಂತ ಹರಡುವುದಕ್ಕಾಗಿ ಸಂಘಟಿಸಿದನು. ಇವರಿಗೆ ವೈಕ್ಲಿಫೈಟ್‌ಗಳೆಂದು ಹೆಸರಾಯಿತು. ಜನರು ತಾವೇ ಕ್ರೈಸ್ತಸಂಘವನ್ನೂ ತನನ್ನೂ ಪರೀಕ್ಷಿಸಿ ತೀರ್ಪು ಕೊಡಲಿ ಎಂದು ಬೈಬಲ್ಲನ್ನು ಇಂಗ್ಲಿಷಿಗೆ ಭಾಷಾಂತರ ಮಾಡಿದನು. ಸಂತ ಫ್ರಾನ್ಸಿಸ್ ಮತ್ತು ಸಂತ ಡಾಮಿನಿಕ್ ಇವರು ಇವನಷ್ಟು ವಿದ್ವತ್ತುಳ್ಳವರೂ ಸಮರ್ಥರೂ ಆಗಿರಲಿಲ್ಲ. ಉನ್ನತ ಸ್ಥಾನಗಳಲ್ಲಿದ್ದವರ ಬೆಂಬಲ ಇವನಿಗಿತ್ತು. ಜನತೆಯಲ್ಲಿ ಭಾರೀ ಸಂಖ್ಯೆಯಲ್ಲಿ ಅನುಯಾಯಿಗಳಿದ್ದರು. ರೋಮ್ ಇವನ ಮೇಲೆ ರೋಷಗೊಂಡು ಇವನನ್ನು ಬಂಧಿಸಬೇಕೆಂದು ಆಜ್ಞೆ ಹೊರಡಿಸಿದರೂ ವೈಕ್ಲಿಫ್ ಸ್ವತಂತ್ರನಾಗಿಯೇ ಕಡೆಯುಸಿರೆಳೆದನು. ಆದರೆ ಕ್ಯಾಥೋಲಿಕ್ ಕ್ರೈಸ್ತಸಂಘವನ್ನು ವಿನಾಶದೆಡೆಗೆ ಒಯ್ಯುತ್ತಿದ್ದ ಪುರಾತನ ಕಾಳಚೇತನ ಈತನ ಅವಶೇಷಗಳನ್ನು ಸಮಾಧಿಯಲ್ಲಿ ಉಳಿಯಗೊಡಿಸಲಿಲ್ಲ. ಕ್ರಿ.ಶ.1415ರಲ್ಲಿ ನಡೆದ ಕಾನ್‌ಸ್ಟನ್ಸ್ ನಗರದ ಸಭೆಯ ನಿರ್ಣಯದಂತೆ ಇವನ ಪಾರ್ಥಿವ ಅವಶೇಷಗಳನ್ನು ಅಗೆದು ಹೊರತೆಗೆದು ಸುಡಬೇಕೆಂದು ಆಜ್ಞೆಯಾಯಿತು. ಪೋಪ್ ಮಾರ್ಟಿನ್ನನ ಆದೇಶಾನುಸಾರ ಬಿಷಪ್ ಫ್ಲೆಮಿಂಗನು ಕ್ರಿ.ಶ. 1428ರಲ್ಲಿ ಈ ಆಜ್ಞೆಯನ್ನು ಪಾಲಿಸಿದನು. ಈ ಅಪವಿತ್ರಕರ ಕಾರ್ಯ ಯಾವನೋ ಒಂಟಿಯಾದ ಮತಾಂಧನ ಕೆಲಸವಾಗಿರಲಿಲ್ಲ; ಕ್ರೈಸ್ತಸಂಘದ ಅಧಿಕೃತ ಕೃತ್ಯವಾಗಿತ್ತು.

(ಮುಂದುವರೆಯುತ್ತದೆ.)

ಪುಸ್ತಕ ವಿಮರ್ಶೆ

ಕೃತಿ: ಮೆಕೆಂಜಿ ಕೈಫಿಯತ್ತುಗಳು, ಲೇ: ಪುರುಷೋತ್ತಮ ಬಿಳಿಮಲೆ, ಪುಟಗಳು: VIII+104 (1985) ಬೆಲೆ: ರೂ. 10–00

ಭಾರತೀಯರಿಗೆ ತಮ್ಮ ದೇಶದ ಇತಿಹಾಸದ ಪ್ರಾಚೀನತೆ ಮತ್ತು ಸಂಸ್ಕೃತಿಯ ಶ್ರೀಮಂತಿಕೆ ಪರಿಚಯವಾದದ್ದೇ ಪಾಶ್ಚಾತ್ಯರಿಂದ ಎನ್ನುವುದೊಂದು ಐತಿಹಾಸಿಕ ಸತ್ಯ. ಬ್ರಿಟಿಷರ ಆಡಳಿತಕಾಲದಲ್ಲಿ ಕೆಲವು ಐರೋಪ್ಯ ಅಧಿಕಾರಿಗಳು ಹಾಗೂ ಮತ ಪ್ರಸಾರಕ್ಕೆಂದು ಬಂದ ಪಾದ್ರಿ ಪುರೋಹಿತರು ಇಲ್ಲಿನ ಜನಜೀವನದಲ್ಲಿ ಆಸಕ್ತಿ ವಹಿಸಿದರು; ಇಲ್ಲಿನ ಭಾಷೆ, ಸಾಹಿತ್ಯ, ಆಚಾರವಿಚಾರ, ಇತಿಹಾಸ, ಸಂಸ್ಕೃತಿ ಹಾಗೂ ಪುರಾತತ್ತ್ವ ಕ್ಷೇತ್ರಗಳಲ್ಲಿ ದುಡಿದು, ಮೂಲ ಆಕರಗಳನ್ನು ಸಂಗ್ರಹಿಸಿ, ಹೆಚ್ಚಿನ ಸಂಶೋಧನೆಗೆ ಬುನಾದಿ ಹಾಕಿದರು. ತರುವಾಯ ಬಂದ ದೇಶೀಯ ಹಾಗೂ ವಿದೇಶಿ ವಿದ್ವಾಂಸರನೇಕರು ಈ ಕ್ಷೇತ್ರಗಳಲ್ಲಿ ಹೆಚ್ಚಿನ ಕೆಲಸಮಾಡಲು ಇದರಿಂದ ಅನುಕೂಲವಾಯಿತು.

"ಕರ್ನಲ್ ಮೆಕೆಂಜಿಯೂ ಭಾರತಕ್ಕೆ ಕಡಲಾಚೆಯಿಂದ ಬಂದು, ದುಡಿದವನು. ಹಿಂದಿನ ಕವಿಕೃತಿಗಳನ್ನು, ನಾಣ್ಯಗಳನ್ನು, ಶಿಲಾಶಾಸನಗಳನ್ನು ಮತ್ತು ಕೈಫಿಯತ್ತುಗಳನ್ನು ಸಂಗ್ರಹಿಸಿ ರಕ್ಷಿಸಿದ ಇವನಿಗೆ ದಕ್ಷಿಣ ಭಾರತದ ಚರಿತ್ರೆಯಲ್ಲಿ ವಿಶಿಷ್ಟವಾದ ಸ್ಥಾನವೊಂದು ಲಭ್ಯವಾಗುತ್ತದೆ." ದಕ್ಷಿಣ ಭಾರತವಿಡೀ ಈತನ ಕಾರ್ಯಕ್ಷೇತ್ರವಾದರೂ ಕರ್ನಾಟಕದ ಬಗ್ಗೆ ಈತ ಮಾಡಿದ ಕೆಲಸ ಅನುಪಮವಾದುದು. ಡಾ|| ಪುರುಷೋತ್ತಮ ಬಿಳಿಮಲೆ ಅವರ 'ಮೆಕೆಂಜಿ ಕೈಫಿಯತ್ತುಗಳು' ಎಂಬ ಗ್ರಂಥ ಪ್ರಧಾನವಾಗಿ ಮೆಕೆಂಜಿಯ ಜೀವನ ಮತ್ತು ಸಾಧನೆಗಳನ್ನು ಪರಿಚಯಿಸುತ್ತದೆ. ಈ ಮೊದಲು ಪ್ರಕಟವಾದ, ಮೆಕೆಂಜಿ ಕೈಫಿಯತ್ತುಗಳನ್ನು ಕುರಿತು ಪ್ರೊ. ಕೆ. ಕುಶಾಲಪ್ಪಗೌಡ ಮತ್ತು ಕೆ. ಚಿನ್ನಪ್ಪಗೌಡರು ರಚಿಸಿದ ಗ್ರಂಥಕ್ಕೆ ಪೂರಕವಾಗಿದೆ ಈ ಕೃತಿ. ತಮ್ಮ ಗ್ರಂಥದ ವ್ಯಾಪ್ತಿ ಏನೆಂಬುದನ್ನು ಲೇಖಕರು ತಮ್ಮ 'ಪ್ರಸ್ತಾವನೆ'ಯಲ್ಲೇ ತಿಳಿಸುತ್ತಾರೆ: 'ಮೆಕೆಂಜಿಯ ಸಾಧನೆಯನ್ನು ಪರಿಚಯಿಸುವುದಷ್ಟೇ ನನ್ನ ಉದ್ದೇಶ. ವೃತ್ತಿಯಿಂದ ಇಂಜಿನಿಯರ್ ಆದ ಅವನ ಆಸಕ್ತಿ ಮತ್ತು ಸಾಧನೆಗಳು ಕನ್ನಡಿಗರಿಗೆ ತಿಳಿದಿರಬೇಕೆಂಬ ಆಸೆ ನನಗಿದೆ."

ಡಾ|| ಪುರುಷೋತ್ತಮ ಬಿಳಿಮಲೆ ತಮ್ಮ ಕೃತಿಯನ್ನು ಎರಡು ಪ್ರಧಾನ ಭಾಗಗಳಾಗಿ ವಿಂಗಡಿಸಿಕೊಂಡಿದ್ದಾರೆ. ಮೊದಲ ಭಾಗದಲ್ಲಿ ಮೆಕೆಂಜಿ ಜೀವನ, ಆತನ ಸಂಗ್ರಹಕಾರ್ಯ ಹಾಗೂ ಸಹಾಯಕರು, 'ಮೆಕೆಂಜಿ ಸಂಗ್ರಹ'ದ ಚರಿತ್ರೆ ಮತ್ತು

ಮೈಸೂರಿನ ಇತಿಹಾಸ ಮತ್ತು 'ಮೆಕೆಂಜಿ ಸಂಗ್ರಹ'ಗಳನ್ನು ಕುರಿತು ವಿವರಿಸಲಾಗಿದೆ. ಮೆಕೆಂಜಿಯ ಬಗ್ಗೆ ಲಭ್ಯವಿರುವ ಎಲ್ಲ ಮಾಹಿತಿಗಳನ್ನೂ ಲೇಖಕರು ಸಂಗ್ರಹಿಸಿ ಆತನ ವೃತ್ತಿ ಜೀವನದ ಪರಿಚಯ ಮಾಡಿಕೊಡುತ್ತಾರೆ. ಮೆಕೆಂಜಿ ತನ್ನ ಸಂಗ್ರಹಕ್ಕೆ ಒಟ್ಟು ಸುಮಾರು ಹವಿನೈದು ಸಾವಿರ ಪೌಂಡುಗಳನ್ನು ವ್ಯಯಿಸಿರಬೇಕೆಂದು ಅಂದಾಜು ಮಾಡಿದೆ; ತನ್ನ ಒಟ್ಟು ಸಂಪಾದನೆಯ ಶೇ. ಹತ್ತರಷ್ಟು ತನ್ನ ಕೆಲಸದಲ್ಲಿ ತುಂಬ ನೆರವಾದ ಕಾವಲಿ ಲಕ್ಷ್ಮಯ್ಯನಿಗೆ ಸಲ್ಲಬೇಕೆಂದು ಮೆಕೆಂಜಿ ಉಯಿಲು ಬರೆದಿದ್ದ. ಇವುಗಳಿಂದ ಆತನ ಕಾರ್ಯಶ್ರದ್ಧೆ ಮಾತ್ರವಲ್ಲ, ಉನ್ನತ ವ್ಯಕ್ತಿತ್ವ, ತನ್ನ ಸಹಾಯಕನ ಬಗ್ಗೆ ಇದ್ದ ವಿಶ್ವಾಸ, ಕೃತಜ್ಞತೆ ಎದ್ದು ಕಾಣುತ್ತವೆ. ತಪಸ್ಸಿನಂಥ ದುಡಿಮೆ, ಸಹಾಯಕರಾದ ಪಂಡಿತರನ್ನು ನಡೆಸಿಕೊಳ್ಳುತ್ತಿದ್ದ ರೀತಿಗಳಿಂದ ಮೆಕೆಂಜಿಗೆ 'ಒಂದು ದೊಡ್ಡ ಸಂಸ್ಥೆ ನಿರ್ವಹಿಸಬಹುದಾದ ಕೆಲಸವನ್ನು' ಸಾಧಿಸಲು ಸಾಧ್ಯವಾದುದು ಮೆಕೆಂಜಿ ಸಂಗ್ರಹದ ಒಂದು ದೊಡ್ಡ ಪಾಲು ಇಂಗ್ಲೆಂಡನ್ನು ಸೇರಿತು. ಆದರೂ "ಇಲಿ ಹೆಗ್ಗಣಗಳು ತಿಂದೂ ಸುಮಾರು 8000 ಪ್ರತಿಗಳು ಇಂದಿಗೂ ಮೆಕೆಂಜಿ ಸಂಗ್ರಹದಲ್ಲಿ ಉಳಿದುಕೊಂಡಿವೆ. ಶಾಸನಗಳ ಮತ್ತು ಇತರ ದಾಖಲೆಗಳ ಸಂಗ್ರಹಗಳ ಸಂಖ್ಯೆ ಸುಮಾರು ಹತ್ತುಸಾವಿರಕ್ಕೂ ಹೆಚ್ಚಿನೆ." ಇದರಿಂದ ಮೆಕೆಂಜಿ ಮಾಡಿದ ಕೆಲಸದ ಪ್ರಮಾಣದ ಅರಿವುಂಟಾಗಬಹುದು.

ಮೊದಲ ಭಾಗದಲ್ಲಿಯೆ ಕೈಫಿಯತ್ತುಗಳನ್ನು ಕುರಿತು ವಿವರಿಸಲಾಗಿದೆ. ಕೈಫಿಯತ್ತು ಎಂಬ ಶಬ್ದಕ್ಕೆ ಹಲವು ಅರ್ಥಗಳಿದ್ದರೂ ಮೆಕೆಂಜಿ 'ವಿವರಗಳನ್ನೊಳಗೊಂಡ ದಾಖಲೆ' ಎಂಬ ಅರ್ಥದಲ್ಲಿ ಕೈಫಿಯತ್ತನ್ನು ಬಳಸಿಕೊಂಡಿದ್ದಾನೆ. ಕೈಫಿಯತ್ತಿಗೂ ಬಖೈರು, ನಾಮೆ, ವಿವರ ಹಾಗೂ ಗೆಜೆಟಿಯರುಗಳಿಗೂ ಇರುವ ಸೂಕ್ಷ್ಮ ವ್ಯತ್ಯಾಸಗಳನ್ನು ಲೇಖಕರು ಸರಿಯಾಗಿಯೇ ಗುರುತಿಸಿದ್ದಾರೆ. ಮೆಕೆಂಜಿಯು ಕೈಫಿಯತ್ತುಗಳನ್ನು ಬರೆಸಿದುದರ ಉದ್ದೇಶವನ್ನು ಆತನ ಪತ್ರವೊಂದರ ಈ ಸಾಲುಗಳಲ್ಲಿ ಕಾಣಬಹುದು: "....ಹಿಂದೂ ಜನರ ಬದುಕಿನ ಮೇಲೆ ಬಹಳಷ್ಟು ಬೆಳಕು ಬೀರಬಲ್ಲ ಅನೇಕ ಶಿಲಾಶಾಸನಗಳನ್ನೂ ಮತ್ತು ತಾಮ್ರಶಾಸನಗಳನ್ನೂ ನಾನು ಈಚೆಗೆ ಸಂಗ್ರಹಿಸಿದೆ. ಇದರ ಜೊತೆಯಲ್ಲಿಯೇ ಮೂರುಸಾವಿರಕ್ಕೂ ಮಿಕ್ಕು ಬರಹಗಳನ್ನು ಸಂಗ್ರಹಿಸಿದೆ....ಇಲ್ಲಿಯವರೆಗೆ ಈ ಕ್ಷೇತ್ರದಲ್ಲಿ ಯಾರೂ ಇಂಥ ಕೆಲಸ ಮಾಡಲಿಲ್ಲ ಮತ್ತು ಯಾರೂ ಇಂಥ ಕೆಲಸಗಳನ್ನು ಗಮನಿಸಲಿಲ್ಲ....ಇವೆಲ್ಲಾ ಈ ನಾಡಿನ ಜನರು ಬದುಕಿದ ರೀತಿಯನ್ನೂ ಮುಖ್ಯವಾಗಿ ತೋರಿಸುತ್ತಿವೆ."

ಕ್ಷೇತ್ರಕಾರ್ಯ ಮಾಡದೆ ನಡೆಸಿದ ಸಂಶೋಧನೆ ಅಸಮಗ್ರವೆನ್ನಿಸುತ್ತದೆ. "ಹಳ್ಳಿಹಳ್ಳಿಗಳಲ್ಲಿ ಸುತ್ತಾಡಿ, ಆ ಹಳ್ಳಿಗಳ ಬಗೆಗಿನ ವಿಚಾರ ಸಂಗ್ರಹಣೆಯ ಕೆಲಸದಿಂದ ಮಾತ್ರ ನಮ್ಮ ಹಳ್ಳಿಗಳ ಬಗ್ಗೆ ಸಮಗ್ರ ಅರಿವು ಮೂಡಲು ಸಾಧ್ಯ" ಎಂಬ ಮಾತಿನ ಹಿಂದಿನ ಲೇಖಕರ ಕಳಕಳಿಯನ್ನು ಸಂಶೋಧನ ವಿದ್ಯಾರ್ಥಿಗಳು ಗ್ರಹಿಸಬೇಕು. ಮೆಕೆಂಜಿಯಂಥ ಮಹಾನುಭಾವರ ಬದುಕು ಮತ್ತು ಸಾಧನೆ ನಮಗೆ ಸ್ಫೂರ್ತಿಯಾಗ

ಬೇಕು ; ನಾಡಿನ ಇತಿಹಾಸ, ಭೌಗೋಳಿಕ ಪರಿಚಯ, ಧರ್ಮ, ಜಾನಪದ, ಸಾಹಿತ್ಯ, ಸ್ಥಳಪುರಾಣ, ಬೆಳೆ, ಜಾತಿರಿವಾಜುಗಳು ಇತ್ಯಾದಿ ಹತ್ತು ಹಲವು ವಿಷಯಗಳಲ್ಲಿ ಸಂಶೋಧನೆ ನಡೆಸುವವರಿಗೆ 'ಮೆಕೆಂಜಿ ಸಂಗ್ರಹ' ಮಾದರಿಯಾಗುತ್ತದೆ. ಹಾಗೆಂದು ಅದರಲ್ಲಿ ದೋಷ ಇಲ್ಲವೆಂದಲ್ಲ. ಸತ್ಯ ಮತ್ತು ಮಿಥ್ಯೆ, ಕಲ್ಪನೆ ಮತ್ತು ವಾಸ್ತವ, ದಂತಕಥೆ ಮತ್ತು ಇತಿಹಾಸ ಅದರಲ್ಲಿ ಬೆರೆತಿರುವುದು ನಿಜವೇ. ಏನೂ ಇಲ್ಲದಿದ್ದಾಗ, ಆತ ಸಿಕ್ಕದ್ದನ್ನೆಲ್ಲ ಸಂಗ್ರಹಿಸಿದ ಎನ್ನುವುದನ್ನೂ ನಾವು ಮನಗಾಣಬೇಕು. ಆಕರಗಳ ಸಂಗ್ರಹವಿದ್ದಲ್ಲಿ ವಸ್ತುನಿಷ್ಠ ವಿಶ್ಲೇಷಣೆ, ಸಂಶೋಧನೆ ಸಾಧ್ಯವಾಗುತ್ತದೆ.

ಎರಡನೆಯ ಭಾಗ ಅಥವಾ ಅಧ್ಯಾಯ ಹೆಚ್ಚು ವಿಸ್ತೃತವಾದುದು. ದಕ್ಷಿಣ ಕನ್ನಡ ಜಿಲ್ಲೆಗೆ ಸಂಬಂಧಿಸಿದ ಆರು ಕೈಫಿಯತ್ತುಗಳನ್ನು—ಚೌಟರ ಕೈಫಿಯತ್ತು, ಕಾರ್ಕಳವನ್ನು ಆಳಿದವರು, ಅಜಿಲರ ಕೈಫಿಯತ್ತು, ಕಡಬಾ ಸಂಸ್ಥಾನದ ಕೈಫಿಯತ್ತು, ಜಮಲಾಬಾದ್ ಕೋಟೆಯ ಕೈಫಿಯತ್ತು ಹಾಗೂ ಕುಂದಾಪೂರ ಕೈಫಿಯತ್ತು—ಆರಿಸಿಕೊಂಡ ಲೇಖಕರು ಈ ಪ್ರದೇಶದ ಇತಿಹಾಸ, ಆಡಳಿತ ಪದ್ಧತಿ, ಆರ್ಥಿಕ ವಿಚಾರ, ಸಾಮಾಜಿಕ ಸಂಗತಿಗಳು, ನಂಬಿಕೆ ಮತ್ತು ಆಚರಣೆಗಳು, ಧಾರ್ಮಿಕ ಪರಿಸ್ಥಿತಿ, ಕುಟುಂಬ ವಿಚಾರಗಳು ಮುಂತಾದವನ್ನು ಕುರಿತು ವಿವೇಚಿಸಿದ್ದಾರೆ. ಸಮಕಾಲೀನ ಶಾಸನಾಧಾರಗಳನ್ನು ಪರಿಶೀಲಿಸಿರುವುದು ಮೆಚ್ಚುಗೆಗೆ ಪಾತ್ರವಾಗುತ್ತದೆ. ಇತಿಹಾಸದ ಅಭ್ಯಾಸಿಗೆ ಈ ಅಧ್ಯಾಯ ಹೆಚ್ಚು ಉಪಯುಕ್ತವೆನ್ನಿಸುತ್ತದೆ. ಆದರೆ ಕೇವಲ ದಕ್ಷಿಣ ಕನ್ನಡ ಜಿಲ್ಲೆಯ ಆರು ಕೈಫಿಯತ್ತುಗಳನ್ನಷ್ಟೇ ಆರಿಸಿಕೊಂಡಿರುವುದರಿಂದ ಕೃತಿಯ ಶೀರ್ಷಿಕೆಯ ವ್ಯಾಪ್ತಿ ಸಂಕುಚಿತಗೊಂಡಿದೆ.

ಲೇಖಕರು ತಮ್ಮ ಅಧ್ಯಯನಕ್ಕೆ ಬಳಸಿಕೊಂಡ ಕೈಫಿಯತ್ತುಗಳಲ್ಲಿರುವ ವಿದೇಶೀ ಪದಗಳು, ವ್ಯಕ್ತಿನಾಮಗಳು, ಸ್ಥಳನಾಮಗಳು ಹಾಗೂ ಬಿರುದುಗಳನ್ನು ಅನುಬಂಧದಲ್ಲಿ ಅಕಾರಾದಿಯಾಗಿ ಜೋಡಿಸಿಕೊಟ್ಟಿದ್ದಾರೆ. ಆದರೆ ಬಿರುದುಗಳ ಪಟ್ಟಿಯಲ್ಲಿ ಸೂಚಿಸಿರುವ ತ್ಯಾಗಿ, ಕೀರ್ತಿವಂತ, ದೇವತಾಭಕ್ತಿಪರ, ಸತ್ಪಾತ್ರದಾನಿ ಇತ್ಯಾದಿ ವಾಸ್ತವವಾಗಿ ಬಿರುದುಗಳಲ್ಲ ; ತವುಳವ ಕುಲಸ್ಥಾಪನಾಚಾರ್ಯ, ತಟ್ಟೆ ಪೊಂಬುಚ ಪುರವರಾಧೀಶ್ವರ ಮುಂತಾದವಷ್ಟೇ ಬಿರುದುಗಳು.

ಕೃತಿಯ ರಕ್ಷಾಪುಟ ತುಂಬ ಸುಂದರವಾಗಿದೆ, ಲ್ಯಾಮಿನೇಶನ್ ಇದ್ದರೆ ಇನ್ನೂ ಭರ್ಜರಿಯಾಗಿ ಕಾಣುತ್ತಿತ್ತೇನೋ ! ಹಿಂಪುಟದಲ್ಲಿ ರೇಖಾಚಿತ್ರದ ಕೆಳಗೆ 'ಮೆಕೆಂಝಿ' ಎಂದಿದ್ದರೂ ಕೃತಿಯುದ್ದಕ್ಕೂ 'ಮೆಕೆಂಜಿ' ಎಂಬ ರೂಪವನ್ನೇ ಬಳಸಿಕೊಳ್ಳಲಾಗಿದೆ. ಒಳಪುಟಗಳಲ್ಲಿನ ಮುದ್ರಣದೋಷಗಳ ಬಗೆಗ ಹೆಚ್ಚು ಗಮನ ನೀಡಬೇಕಿತ್ತು. ಜಿ. ವರದರಾಜರಾವ್ ಅವರು ಜಿ. ವರದರಾಯ (ಪು. 35) ರಾಗಿದ್ದಾರೆ; desciples (ಪು. 6), thease (ಪು. 26) ಮುಂತಾದ ಮುದ್ರಣದೋಷಗಳೂ ನುಸುಳಿವೆ. ಮುಖ್ಯವಾಗಿ ಇಸವಿಗಳನ್ನು ನಮೂದಿಸುವಾಗ—1783ಕ್ಕೆ 1883 (ಪು. 2) ಹಾಗೂ 1793 (ಪು. 3), 1788ಕ್ಕೆ 1888 (ಪು. 64)—ತಪ್ಪಾಗ

ಬಾರದಿತ್ತು. ಹೈದರ-ಹಯಿದರ, ಪೊನ್ನೆಚಾರು-ಪನ್ನೆಚಾರು ಎಂಬ ರೂಪಗಳು ಕಾಣಸಿಗುತ್ತವೆ. "ಸುಮಾರು 8ನೇ ಶತಮಾನದಿಂದಲೂ ಉಪ್ಪಿನಂಗಡಿ ತಾಲೂಕಿನ ಮುಖ್ಯ ಪಟ್ಟಣವಾಗಿ" (ಪು. 66) ಎಂಬ ವಾಕ್ಯಭಾಗದ ಅನ್ವಯ ಸರಿಯಾಗುವುದಿಲ್ಲ. ಪ್ರಾಮುಖ್ಯತೆ, ಪ್ರಾಧಾನ್ಯತೆ, ವೈವಿಧ್ಯತೆ ಇತ್ಯಾದಿ ಶಬ್ದಗಳಲ್ಲಿನ 'ತೆ' ಇಲ್ಲದಿದ್ದರೂ ಅರ್ಥಕ್ಕೆ ಬಾಧಕವಾಗುವುದಿಲ್ಲ. 'ಪ್ರಾಚ್ಯ' (ಪು. 13) ಎಂಬುದಕ್ಕಿಂತ 'ಪುರಾತತ್ತ್ವ' ಹೆಚ್ಚು ಸೂಕ್ತವಾದ ಶಬ್ದ. ಇವೆಲ್ಲ ತೀರ ಗೌಣವಾದ ಹಾಗೂ ಸರಿಪಡಿಸಬಹುದಾದ ದೋಷಗಳು. ಇವೇನು ಕೃತಿಯ ಯೋಗ್ಯತೆ-ಉಪಯುಕ್ತತೆಗಳನ್ನು ಕುಂದಿಸುವುದಿಲ್ಲ. ಮುಂದಿನ ಆವೃತ್ತಿಯಲ್ಲಿ ಈ ಸಣ್ಣಪುಟ್ಟ ದೋಷಗಳ ನಿವಾರಣೆಯಾಗುತ್ತದೆಂಬ ನಂಬಿಕೆ-ಭರವಸೆ ಹೊಂದಬಹುದು. ಲೇಖಕರ ನಿರೂಪಣೆ ನೇರ ಹಾಗೂ ಸರಳ.

ಒಟ್ಟಿನಲ್ಲಿ ಮೆಕೆಂಜಿ 'ಕೈಫಿಯತ್ತುಗಳು' ಒಂದು ಸ್ವಾಗತಾರ್ಹ ಸೇರ್ಪಡೆ. ಲೇಖಕ ಪುರುಷೋತ್ತಮ ಬಿಳಿಮಲೆ ಅವರು ಪ್ರಕಾಶಕರೂ ಆಗಿ ಎರಡು ರೀತಿಯಲ್ಲಿ ಶ್ರಮವಹಿಸಿದ್ದಾರೆ. ಅವರ ಪ್ರಯತ್ನಕ್ಕೆ ಯಶ ದೊರೆಯಲಿ ಮತ್ತು ಮೆಕೆಂಜಿ ಕೈಫಿಯತ್ತುಗಳನ್ನು ಕುರಿತ ಬೃಹದ್ಗ್ರಂಥವೊಂದು ಅವರಿಂದ ಬರಲಿ ಎನ್ನುವುದು ನಮ್ಮ ಹಾರೈಕೆ.

ಎಚ್. ಎಂ. ನಾಗರಾಜರಾವ್

ಸಂಪಾದಕೀಯ

ಈ ಸಂಚಿಕೆಯೊಂದಿಗೆ ಮಾನವಿಕ ಕರ್ಣಾಟಕ ಹದಿನಾರುವರ್ಷ ತುಂಬಿದ 'ಷೋಡಶಿ' ಯಾಗಿದೆ. ಈ ಪ್ರೌಢಾವಸ್ಥೆಯಲ್ಲಿ ಇದು ಮಾನವಿಕ ಶಾಸ್ತ್ರಗಳ ವಿವಿಧ ಮುಖಗಳಿಗೆ ಸಂಬಂಧಿಸಿದ ಹಲವು ರೀತಿಯ ಸಂಶೋಧನಾತ್ಮಕ ಲೇಖನಗಳನ್ನು ಓದುಗರಿಗೆ ನೀಡುತ್ತಾ ಬಂದಿದ್ದು ತನ್ನ ಉಪಯುಕ್ತತೆಯನ್ನು ಸಾಧಿಸಿಕೊಂಡು ಬಂದಿದೆ.

ಅಷ್ಟೇ ಅಲ್ಲ. ಕನ್ನಡದಲ್ಲಿ ಬರೆಯಲು ಸಂಶೋಧಕರಿಗೆ ಹೆಚ್ಚಿನ ಪ್ರೋತ್ಸಾಹ ನೀಡುವ ದೃಷ್ಟಿಯಿಂದ ಪ್ರೌಢ ವಿದ್ವತ್ಪೂರ್ಣ ಲೇಖನಗಳೊಂದಿಗೆ ಇದೀಗ ತಾನೆ ಸಂಶೋಧನಾರಂಗಕ್ಕೆ ಕಾಲಿಡುತ್ತಿರುವ ಹಲವಾರು ಕಿರಿಯ ಸಂಶೋಧಕರಿಗೂ ಅಗತ್ಯ ವಾದ ಲೇಖನ ಪ್ರಕಟಣೆಗೆ ಅವಕಾಶ ನೀಡುತ್ತಾ ಬಂದಿದೆ. ಇಂಥ ಪ್ರೋತ್ಸಾಹ ನೀಡಿಕೆ ಯೋಜನೆಯನ್ನು ಕೈಗೊಂಡಾಗ ಲೇಖನಗಳ ಗುಣಮಟ್ಟ ಸ್ವಲ್ಪಮಟ್ಟಿಗೆ ಕಡಿಮೆಯಾಗುವುದು ಸ್ವಾಭಾವಿಕವೇ, ಆದರೂ ಹೊಸಪೀಳಿಗೆಯ ಲೇಖಕರಿಗೆ ಕನ್ನಡ ದಲ್ಲಿ ಬರೆಯಲು ಅವಕಾಶವೊದಗಿಸಿಕೊಡುವ ದೃಷ್ಟಿಯಿಂದ ಅಂಥ ಲೇಖನಗಳನ್ನು ನಾವು ಪ್ರಕಟಣೆಗೆ ಸ್ವೀಕರಿಸುವುದು ಅನಿವಾರ್ಯ; ಈ ನೀತಿಯನ್ನು ಕೈಬಿಟ್ಟದ್ದೇ ಆದರೆ 'ಮಾನವಿಕ ಕರ್ಣಾಟಕ' ದ ಧ್ಯೇಯೋದ್ದೇಶಗಳನ್ನೇ ಕೈಬಿಟ್ಟಂತೆ ಆದೀತು. ಈ ದೃಷ್ಟಿಕೋನದಿಂದ ವಾಚಕರು ಈ ನಿಯತಕಾಲಿಕದಲ್ಲಿರಬಹುದಾದ ಹಲವು ದೋಷಗಳನ್ನು 'ಹಂಸಕ್ಷೀರನ್ಯಾಯ' ದನ್ವಯ ಸ್ವೀಕರಿಸಬೇಕಾಗಿ ವಿನಂತಿ.

'ಮಾನವಿಕ ಕರ್ಣಾಟಕದ 16ನೆಯ ಸಂಪುಟದ ಬಗ್ಗೆ ಒಂದುಮಾತು. ಈ ಸಂಪುಟದ ನಾಲ್ಕು ಸಂಚಿಕೆಗಳು ಸಕಾಲಕ್ಕೆ ಓದುಗರ ಕೈಸೇರಲಿಲ್ಲ. ಕಾರಣ ಹಲವಾರು; ಅವುಗಳ ಪ್ರಸ್ತಾಪ ಇಲ್ಲಿ ಅಪ್ರಸ್ತುತ. ಆದರೆ ತಡವಾದರೂ ತನ್ನ ವೈವಿಧ್ಯ ಮತ್ತು ಸೌಂದರ್ಯವನ್ನು ಉಳಿಸಿಕೊಂಡು ಬಂದಿರುವುದೇ ಅಲ್ಲದೆ ತನ್ನ ಲೇಖಕರ ಪರಿಧಿಯನ್ನು ವಿಸ್ತರಿಸಿಕೊಂಡಿದೆ. ಕರ್ನಾಟಕದ, ದಕ್ಷಿಣ ಭಾರತದ, ಏಕೆ ದೂರದ ಕಲ್ಕತ್ತೆಯಿಂದಲೂ ಈ ಸಂಪುಟದ ಲೇಖಕರು ತಮ್ಮ ಲೇಖನಗಳನ್ನು ಪ್ರಕಟಣೆಗೆ ಕಳಿಸುತ್ತಿದ್ದಾರೆ. ಭಾಷಾಶಾಸ್ತ್ರ, ಇತಿಹಾಸ, ಕಲೆ, ತೌಲನಿಕ ಕಾವ್ಯ ಅಧ್ಯಯನ, ಅರ್ಥಶಾಸ್ತ್ರ, ವಾಣಿಜ್ಯ, ಶಿಕ್ಷಣ, ಶಾಸನಶಾಸ್ತ್ರ, ಮಾನವಶಾಸ್ತ್ರ, ರಾಜನೀತಿ, ತತ್ವಶಾಸ್ತ್ರ, ಕೈಗಾರಿಕೆ–ಹೀಗೆ ಹಲವಾರು ಕ್ಷೇತ್ರಗಳಿಗೆ ಸಂಬಂಧಿಸಿದ ಲೇಖನಗಳೇ ಅಲ್ಲದೆ, ಮಹಾನ್ ವ್ಯಕ್ತಿಗಳ ಜೀವನಸಾಧನೆಗಳನ್ನು ಪರಿಚಯಿಸುವ ಹಲವು ರೀತಿಯ ಲೇಖನಗಳನ್ನು ವಾಚಕರಿಗೆ ನೀಡುತ್ತಿದೆ.

ಈ ಸಂಪಾದಕವರ್ಗ ಸಂಪಾದನಾಕಾರ್ಯ ವಹಿಸಿಕೊಂಡಂದಿನಿಂದ ಇತಿಹಾಸ ಕ್ಷೇತ್ರದ ಉತ್ತಮ ಗ್ರಂಥಗಳಲ್ಲೊಂದೆನಿದ ಎಚ್. ಜಿ. ವೆಲ್ಸರ 'Short History of the World' ಎಂಬ ಗ್ರಂಥದ ಕನ್ನಡಾನುವಾದವನ್ನು ಅನುಕ್ರಮವಾಗಿ ಪ್ರಕಟಿಸುತ್ತ ಬಂದಿರುವುದು ಸರಿಯಷ್ಟೆ. ಈ. ಸಂಪುಟದೊಂದಿಗೆ ಅದರ ಮೂರನೆಯ ಎರಡರಷ್ಟನ್ನು ಪ್ರಕಟಿಸಲಾಗಿದೆ. ಇನ್ನು 5–6 ಸಂಚಿಕೆಗಳಲ್ಲಿ ಅದು ಮುಕ್ತಾಯ ಗೊಳ್ಳಬಹುದು.

ಕನ್ನಡದಲ್ಲಿ ಸಂಶೋಧನಾ ಲೇಖನಗಳು ಸಿಕ್ಕುವುದಿಲ್ಲ. ಆದುದರಿಂದ ಇಂಥ ಸಂಶೋಧನಾ ನಿಯತಕಾಲಿಕೆಗಳನ್ನು ಪ್ರಕಟಿಸುವುದು ಕಷ್ಟ ಸಾಧ್ಯ ಎಂಬ ಅಭಿಮತ ಇತ್ತೀಚಿನವರೆಗೂ ಇತ್ತಷ್ಟೆ. ಆದರೆ ಈ ಮೂರು ವರ್ಷಗಳಿಂದ ನಮ್ಮ ಅನುಭವ ಬೇರೆಯೇ ಆಗಿದೆ. ಸಂಪುಟಗಳು ಕ್ಲುಪ್ತ ಕಾಲಕ್ಕೆ ಪ್ರಕಟಗೊಂಡದ್ದೇ ಆದರೆ ಲೇಖನಗಳ ಅಭಾವವೇನೂ ಕಂಡುಬರುವುದಿಲ್ಲ. ಈ ಮೂರು ವರ್ಷಗಳಿಂದ ಪ್ರತಿ ಸಂಪುಟದಲ್ಲಿ ಸುಮಾರು 450–500 ಪುಟಗಳಷ್ಟು ವಿಷಯ ನೀಡಲು ಸಂಪಾದಕ ವರ್ಗಕ್ಕೆ ಏನೇನೂ ಕಷ್ಟವಾಗಿಲ್ಲ.

ಸಂಪಾದಕವರ್ಗ 'ಮಾನವಿಕ ಕರ್ಣಾಟಕ'ದ ಗುಣಮಟ್ಟವನ್ನು ಇನ್ನೂ ಸುಧಾರಿಸಬೇಕೆಂದು ಆಶಯಿಸುತ್ತದೆ. ಅದರ ಸಾಫಲ್ಯಕ್ಕೆ ಲೇಖಕ–ವಾಚಕ ಸಮೂಹ ಹೆಚ್ಚಿನ ನೆರವು ನೀಡುತ್ತದೆಂದು ನಾವು ನಂಬಿದ್ದೇವೆ.

ಬಿ. ಕೆ. ಗುರುರಾಜರಾವ್
ಸಂಪಾದಕ

ಕೆ.ಸಂ. ೨೮೨೦೧—ಎಂಯುಪಿಎಂ—೩೨೫ ಪ್ರತಿಗಳು—೨೭–೬–೮೭

ಮೈಸೂರು ವಿಶ್ವವಿದ್ಯಾನಿಲಯದ ತ್ರೈಮಾಸಿಕಗಳು

★ ಪ್ರಬುದ್ಧ ಕರ್ಣಾಟಕ

★ ಮಾನವಿಕ ಕರ್ಣಾಟಕ

★ ವಿಜ್ಞಾನ ಕರ್ಣಾಟಕ

ವಾರ್ಷಿಕ ಚಂದಾ

(ಪ್ರತಿಯೊಂದಕ್ಕೂ ಅಂಚೆ ವೆಚ್ಚ ಸೇರಿ)

ವಿದ್ಯಾರ್ಥಿಗಳಿಗೆ	....	ಐದು ರೂಪಾಯಿ
ಇತರರಿಗೆ	....	ಹತ್ತು ರೂಪಾಯಿ
ಸಂಸ್ಥೆಗಳಿಗೆ	....	ಹದಿನೈದು ರೂಪಾಯಿ

(ಆಜೀವ ಸದಸ್ಯತ್ವ : ನೂರು ರೂಪಾಯಿಗಳು)

(ಪ್ರತಿಯೊಂದಕ್ಕೂ)

ಡೈರೆಕ್ಟರ್

'ಪ್ರಸಾರಾಂಗ'

ಮಾನಸಗಂಗೋತ್ರಿ, ಮೈಸೂರು–೫೭೦ ೦೦೬